ಕರ್ನಾಟಕ ಸರ್ಕಾರ


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣರ ಹಳೆಯ ನಾಟಕಗಳು

ಸಂಪಾದಕರು

ಡಾ. ಜಯಶ್ರೀ ದಂಡೆ   ಡಾ. ವೀರಣ್ಣ ದಂಡೆ



ಕನ್ನಡ ಅಧ್ಯಯನ ಸಂಸ್ಥೆ,

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬.

ಶರಣರ ಹಳೆಯ ನಾಟಕಗಳು

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ
(ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ
ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ ಯೋಜನೆ)

ಶರಣರ ಹಳೆಯ ನಾಟಕಗಳು

ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು
ಡಾ. ಜಯಶ್ರೀ ದಂಡೆ, ಡಾ. ವೀರಣ್ಣ ದಂಡೆ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರ್ಗಿ – ೫೮೫ ೧೦೬

Sharanara Haleya Natakagalu
Chief Investigators & Ed. : **Dr. Jayashree Dande, Dr. Veeranna Dande,**
Institute of Kannada Studies, Gulbarga University, Gulbarga-585 106.
Funded by : Goverment of Karnataka.

First Impression : 2012
Pages : XL + 472
Paper used : 80 GSM Maplitho
Price : Rs. 500=00
Cover Design by : **Dr. Akash D.**, Artist, Gulbarga.

ಶರಣರ ಹಳೆಯ ನಾಟಕಗಳು
ಪ್ರಧಾನ ಸಂಶೋಧಕರು ಮತ್ತು ಸಂಪಾದಕರು:
ಡಾ। ಜಯಶ್ರೀ ದಂಡೆ, ಡಾ। ವೀರಣ್ಣ ದಂಡೆ,
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

ಪ್ರಕಾಶಕರು : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಪುಟಗಳು : XL + ೪೭೨

ಪ್ರಥಮ ಮುದ್ರಣ : ೨೦೧೨

ಬಳಸಿದ ಕಾಗದ : ೮೦ ಜಿಎಸ್ಎಂ ಮ್ಯಾಪ್ಲಿಥೊ ಕಾಗದ

ಬೆಲೆ : ರೂ. ೫೦೦=೦೦

ಮುಖಪುಟ ವಿನ್ಯಾಸ : **ಡಾ। ಆಕಾಶ ಡಿ.,** ಕಲಾವಿದರು, ಕಲಬುರ್ಗಿ

ಕೃತಿ ದೊರೆಯುವ ಸ್ಥಳ : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ

ಮುದ್ರಕರು :
ಪ್ರಿಂಟ್ ಪಾರ್ಕ್
೧೪೯೬/೪, ೩ ಕ್ರಾಸ್, ಮರಿಯಪ್ಪನಪಾಳ್ಯ
ಶ್ರೀರಾಮಪುರಂ ಪೋಸ್ಟ, ಬೆಂಗಳೂರು – ೨೧.
ದೂ.ವಾ. ೦೮೦ – ೨೩೪೨ ೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬಿ. ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ. ಕೆ. ಖಂಡೋಬಾ — ಡಾ. ಡಿ. ಬಿ. ನಾಯಕ
ಡಾ. ವ್ಹಿ. ಜಿ. ಪೂಜಾರ — ಡಾ. ಬಸವರಾಜ ಸಬರದ
ಡಾ. ವೀರಣ್ಣ ದಂಡೆ — ಡಾ. ಬಿ.ಎಸ್.ಪೋಲಿಸ ಪಾಟೀಲ
ಡಾ. ಎಚ್. ಟಿ. ಪೋತೆ — ಡಾ. ಎಸ್. ಎಂ. ಹಿರೇಮಠ
ಡಾ. ಜಯಶ್ರೀ ದಂಡೆ

4

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ವಿಧಾನಸೌಧ
ಬೆಂಗಳೂರು–560 001
ದಿ: 02.11.2011

ಕರ್ನಾಟಕ ಸರ್ಕಾರ

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮುಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಭುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ ಲೇಖಕರೂ ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ"** (ಬಸವಾದಿ **ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ, ಅದೂ ಗ್ರಾಮಾಂತರ ಪ್ರದೇಶದಲ್ಲಿ, ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು- 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕದ ರಾಜ್ಯಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಅಡಿಯಲ್ಲಿ, ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ

"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (**ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ**) ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು, ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ, ಅದೂ ಗ್ರಾಮಾಂತರ ಪ್ರದೇಶದಲ್ಲಿ, ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುತ್ತೇನೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
☎ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡವು ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯುಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ೭ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ

ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ, ಅದೂ ಗ್ರಾಮಾಂತರ ಪ್ರದೇಶದಲ್ಲಿ, ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುವೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಈ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ. ಎಸ್.ಎಲ್.ಹಿರೇಮಠ ಅವರನ್ನು ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಈ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ, ಕೇಳುವ ಸೂರಿಗಳೆ

ಜಂಗಮ ಜನಾರ್ಧನರು' ಎನ್ನುತ್ತಾರೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ
12 ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)**. ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ, ಅದೂ ಗ್ರಾಮಾಂತರ ಪ್ರದೇಶದಲ್ಲಿ, ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆಗಿರುವ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ

ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಎಂಬ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ, ಅದೂ ಗ್ರಾಮಾಂತರ ಪ್ರದೇಶದಲ್ಲಿ, ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ. ಜಯಶ್ರೀ ದಂಡೆ ಹಾಗೂ ಡಾ. ವೀರಣ್ಣ ದಂಡೆ ಅವರನ್ನು ಅಭಿನಂದಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಶೋಧಕರ ನುಡಿ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ನಾಡಿನ ತುಂಬ ಕನ್ನಡದ ಕೆಲಸಗಳು ಮೈತುಂಬಿ ನಡೆಯಬೇಕೆಂಬ ಕರ್ನಾಟಕ ಸರ್ಕಾರದ ಅತ್ಯಂತ ಉತ್ಸಾಹದಾಯಕ ಮತ್ತು ಸಮಯೋಚಿತ ಅಪರೂಪದ ನಿರ್ಧಾರ ಒಂದು ಐತಿಹಾಸಿಕ ದಾಖಲೆಯಾಗಿ ಉಳಿಯುವಂತಹದು. ಕನ್ನಡಕ್ಕೆ ಇದೊಂದು ಅಪರೂಪದ ಅವಕಾಶವೆಂದೇ ಹೇಳಬೇಕು. ಇದರಿಂದ ಕನ್ನಡದ ಸುವರ್ಣ ಯುಗವೊಂದು ಪ್ರಾರಂಭವಾದಂತಾಗಿದೆ. ಇಂತಹ ಒಂದು ಶುಭಾರಂಭವನ್ನು ಪ್ರಾರಂಭಿಸಲು ಕಾರಣರಾದವರು ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಸಂದರ್ಭವನ್ನು ಬಳಸಿಕೊಂಡು, ಕೇಂದ್ರ ಸರ್ಕಾರದಿಂದ ಧನಸಹಾಯ ದೊರೆಯುವ ಮುಂಚೆಯೇ ಕರ್ನಾಟಕ ಸರ್ಕಾರದ ಆದ್ಯಕರ್ತವ್ಯವೆಂದು ಭಾವಿಸಿ, ಮಾನ್ಯ ಶ್ರೀ ಯಡಿಯೂರಪ್ಪ ಅವರು ಕರ್ನಾಟಕದ ೧೧ ವಿಶ್ವವಿದ್ಯಾಲಯಗಳಿಗೆ, ಕನ್ನಡದ ಚಟುವಟಿಕೆಗಳ ಅಭಿವೃದ್ಧಿಗಾಗಿ ತಲಾ ೨ ಕೋಟಿ ರೂಪಾಯಿಗಳನ್ನು ಧನಸಹಾಯವಾಗಿ ಕೊಡುವುದಾಗಿ ಘೋಷಿಸಿದರು. ಮತ್ತು ಕೂಡಲೇ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದರು. ಆ ಫಲವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಳೀಯವಾಗಿ ಮಹತ್ವಪಡೆದ ಅನೇಕ ಸಂಗತಿಗಳ ಬಗ್ಗೆ ಸಂಶೋಧನೆಗಳು ನಡೆಯಬೇಕೆಂಬ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿತು.

ಅಂತಹದರಲ್ಲಿ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಮೌಖಿಕ ಮಾಹಿತಿ ಮತ್ತು ಸಾಹಿತ್ಯ ಇವುಗಳ ಸಂಗ್ರಹ ಮತ್ತು ದಾಖಲೀಕರಣ ಅತ್ಯಂತ ಮಹತ್ವದ ಯೋಜನೆಯಾಗಿದೆ. ಹೈದ್ರಾಬಾದ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕದ ತುಂಬ, ಮತ್ತು ನೆರೆಯ ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಶರಣರ ಸ್ಮಾರಕಗಳಿವೆ. ಶರಣರ ಸ್ಮಾರಕಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರದಲ್ಲಿವೆ. ಅವುಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವ ಮಹತ್ವದ ಯೋಜನೆ ನಮ್ಮದು.

"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ"(ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಯೋಜನೆಯಡಿ ಹೊರಬರುತ್ತಿರುವ **'ಶರಣರ ಹಳೆಯ ನಾಟಕಗಳು'** ಎಂಬ ಈ ಸಂಪುಟವು ಶರಣರ ಬಗೆಗೆ ಗ್ರಾಮಾಂತರ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ, ೧೯೦೧ ರಿಂದ ೧೯೨೪ರ ಅವಧಿಯಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿದ ನಾಟಕಗಳ ಸಂಗ್ರಹವಾಗಿದೆ. ಈ ಎಲ್ಲ ನಾಟಕಗಳು ಅಭಿಜಾತ ಪರಂಪರೆಗೆ ಸೇರಿದ ನಾಟಕಗಳಲ್ಲ. ಬದಲಾಗಿ ಗ್ರಾಮಾಂತರ ಪ್ರದೇಶದ ಪ್ರತಿಭಾವಂತರು, ಗ್ರಾಮಾಂತರ ಪ್ರದೇಶದ ಸಾಮಾನ್ಯರಿಗಾಗಿ ಬರೆದ, ಗ್ರಾಮಾಂತರ ಪ್ರದೇಶದಲ್ಲಿಯೆ ಪ್ರಯೋಗಗೊಂಡ ನಾಟಕಗಳಾಗಿವೆ. ಕೆಲವೊಮ್ಮೆ ಇಲ್ಲಿಯ ನಾಟಗಳಗನ್ನು ನಾಟಕ ಕಂಪನಿಗಳು ಪ್ರಯೋಗಿಸಿದ್ದೂ ಉಂಟು. ಹೀಗಾಗಿ ಬಯಲಾಟ ಮತ್ತು ಸಾಹಿತ್ಯಕ (ಅಭಿಜಾತ) ನಾಟಕಗಳು ಇವುಗಳ ನಡುವಿನ ಸ್ಥಾನವನ್ನು ಈ ನಾಟಕಗಳಿಗೆ ಕೊಡಬಹುದಾಗಿದೆ. ಏನಿದ್ದರೂ ಇವುಗಳ ಉದ್ದೇಶ ಕನ್ನಡ ಭಾಷೆಯನ್ನು ಉಳಿಸುವುದು ಮತ್ತು ಶರಣರ ತತ್ತ್ವಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹರಡುವುದು ಆಗಿದೆ. ಹೀಗೆಂದು ಕೆಲ ಜನ ನಾಟಕಕಾರರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಈ ನಾಟಕಗಳ ಮಹತ್ವವನ್ನು ಸಾರಿ ಹೇಳುತ್ತದೆ.

ಇದರಿಂದ ಗ್ರಾಮಾಂತರ ಪ್ರದೇಶದಲ್ಲಿ ಶರಣರ ಚರಿತ್ರೆಗಳು ಹೇಗೆ ಉಳಿದುಕೊಂಡು ಬಂದಿವೆ ಎಂಬುದರ ಒಂದು ಚಿತ್ರ ನಮಗೆ ಎದ್ದುಕಾಣುತ್ತದೆ. ಪುರಾಣಕಾರರು ಸೃಷ್ಟಿಸಿದ ಶರಣ ಜಗತ್ತು ಒಂದಾದರೆ, ಹೀಗೆ ಗ್ರಾಮಾಂತರ ಪ್ರದೇಶದಲ್ಲಿ ಮೌಖಿಕ ಸಾಹಿತ್ಯ ಮತ್ತು ಇಂತಹ ಸಾಮಾನ್ಯ ನಾಟಕಗಳ ಪರಂಪರೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ ಶರಣರ ಚಿತ್ರ ಇನ್ನೊಂದು ಕಡೆ ಕಾಣುತ್ತದೆ. ಈ ಎಲ್ಲ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಿದರೆ ಶರಣರ ಬಗೆಗೆ ಒಂದು ಸಂಪೂರ್ಣ ಚಿತ್ರ ಕಂಡುಕೊಳ್ಳಲು ಸಹಾಯವಾಗುತ್ತದೆಂದು ಭಾವಿಸಲಾಗಿದೆ.

ಕನ್ನಡದ ಬಗ್ಗೆ ವಿಶಾಲವಾದ ಹೃದವಂತಿಕೆಯನ್ನು ಮೆರೆದ ಕರ್ನಾಟಕ ಸರ್ಕಾರಕ್ಕೆ ಮೊದಲು ನಮ್ಮ ನಮನಗಳು ಸಲ್ಲುತ್ತವೆ. ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯಡಿಯೂರಪ್ಪ ಅವರು, ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಡಿ. ವ್ಹಿ. ಸದಾನಂದಗೌಡ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಗೋವಿಂದ ಕಾರ್ಜೋಳ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜ ಹಾಗೂ ಆಯುಕ್ತರಾದ ಡಾ। ಮನು ಬಳಿಗಾರ ಅವರೂ ಅಭಿನಂದನೆಗೆ ಅರ್ಹರಾಗಿದ್ದಾರೆ.

ನಮ್ಮ ಕುಲಪತಿಗಳಾದ ಮಾನ್ಯ ಪ್ರೊ. ಈ. ಟಿ. ಪುಟ್ಟಯ್ಯನವರು ತುಂಬಾ ಆಸಕ್ತಿ ವಹಿಸಿ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯ ಕೆಲಸಗಳು ಚುರುಕಿನಿಂದ ನಡೆಯಲು ಕಾರಣರಾಗಿದ್ದಾರೆ. ಮಾನ್ಯ ಕುಲಸಚಿವರಾದ ಡಾ। ಎಸ್.ಎಲ್. ಹಿರೇಮಠ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಅದಕ್ಕಾಗಿ ನಾವು ಈ ಮಹನೀಯರುಗಳಿಗೆ ಆಭಾರಿಯಾಗಿದ್ದೇವೆ. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿಗಳನ್ನೂ ಅಧ್ಯಕ್ಷರಾದ ಡಾ। ನಾಗಾಬಾಯಿ ಬುಳ್ಳಾ ಅವರನ್ನೂ ಈ ಸಂದರ್ಭದಲ್ಲಿ ನೆನೆಸುತ್ತೇವೆ.

ಸಂಪುಟದ ಕೆಲಸ ಇಷ್ಟೊಂದು ಸಮೃದ್ಧವಾಗಿ ಆಗಲು ಕಾರಣರಾದವರು ಶ್ರೀ ಆನಂದ ಸಿದ್ದಾಮಣಿ, ಅನಿಲ ತೆಗ್ಗಿನಮನಿ, ಸಾಹೇಬಗೌಡ ಸಿಂದಗಿ, ಡಾ। ವೀರಯ್ಯಸ್ವಾಮಿ, ಕು. ಸವಿತಾ ಶಿವಲಿಂಗಪ್ಪ. ಶರಣರ ಕುರಿತು ಅಧ್ಯಯನ ಮಾಡುವವರಿಗೆ ಈ ಸಂಪುಟ ಸಹಾಯವಾದರೆ ನಮಗೆ ಅದೇ ಅತ್ಯಂತ ಸಂತೋಷದ ಸಂಗತಿಯಾಗುತ್ತದೆ. 17

ಈ ಸಂಪುಟವನ್ನು ಅತ್ಯಂತ ಸುಂದರವಾಗಿ ಮುದ್ರಿಸಿದ ಪ್ರಿಂಟ್‌ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ.ಬಿ.ಪಾಟೀಲ ಮತ್ತು ಅವರ ಸಿಬ್ಬಂದಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಡಾ। ಜಯಶ್ರೀ ದಂಡೆ
ಡಾ। ವೀರಣ್ಣ ದಂಡೆ

18

ಪ್ರಸ್ತಾವನೆ

ಈ ಸಂಪುಟದಲ್ಲಿ ಒಟ್ಟಿಗೆ ಐದು ನಾಟಕಗಳಿವೆ. ಇವೆಲ್ಲ ಶರಣರ ಬಗ್ಗೆ ಸೃಷ್ಟಿಗೊಂಡ ನಾಟಕಗಳು. ಇವುಗಳ ಕಾಲ ಸರಿಸುಮಾರಾಗಿ ೧೯೦೧ ರಿಂದ ೧೯೨೫ ಆಗಿರಬಹುದಾಗಿದೆ. ಹೀಗಾಗಿ ಕನ್ನಡದಲ್ಲಿ ಹೊಸಗನ್ನಡದ ಗಾಳಿ ಬೀಸುವ ಸಂದರ್ಭದಲ್ಲಿ ಹುಟ್ಟಿದ ಪ್ರಾರಂಭದ ನಾಟಕಗಳು ಇವಾಗಿರುವುದರಿಂದ ಇವನ್ನು ಹಳೆಯ ನಾಟಕಗಳು ಎಂದು ಕರೆಯಲಾಗಿದೆ. ಈ ೫ ನಾಟಕಗಳಲ್ಲಿ ಮೂರು ನಾಟಕಗಳು ಬಸವಣ್ಣನವರಿಗೆ ಸಂಬಂಧಿಸಿದ ನಾಟಕಗಳಾಗಿವೆ. ಇನ್ನುಳಿದ ಎರಡು ನಾಟಕಗಳೆಂದರೆ ಒಂದು ಘಟ್ಟಿವಾಳಯ್ಯ, ಇನ್ನೊಂದು ಸಿದ್ಧರಾಮ.

ನಮಗೆ ದೊರೆತ ಹಸ್ತಪ್ರತಿಗಳಲ್ಲಿ ಲಭ್ಯವಾಗುವ ಮಾಹಿತಿಗಳ ಪ್ರಕಾರ ಘಟ್ಟಿವಾಳಯ್ಯನ ನಾಟಕವೇ ಮೊದಲು ಸೃಷ್ಟಿಗೊಂಡದ್ದು. ಇದರ ಕಾಲ ೧೯೦೧. ಸಿದ್ಧರಾಮನ ನಾಟಕದ ಪ್ರತಿ ಮಾಡಿದ ಕಾಲ ೧೯೨೪. ಬಸವಣ್ಣನವರ ಮೂರು ನಾಟಕಗಳಲ್ಲಿ ಒಂದು ನಾಟಕದ ಕಾಲ ೧೯೧೯. (ಪ್ರಕಟವಾದುದು ೧೯೧೧). ಉಳಿದೆರಡು ನಾಟಕಗಳ ಕಾಲ ಮತ್ತು ಉಳಿದ ವಿವರಗಳು ತಿಳಿದುಬರುವುದಿಲ್ಲ. ಘಟ್ಟಿವಾಳಯ್ಯನ ನಾಟಕ ಹುಟ್ಟಿದ ೧೯೦೧ ರಿಂದ ಸಿದ್ಧರಾಮನ ನಾಟಕ ಪ್ರತಿ ಮಾಡಿದ ೧೯೨೪ರ ವರೆಗಿನ ಕಾಲಾವಧಿಯಲ್ಲಿಯೇ ಬಸವಣ್ಣನವರ ನಾಟಕಗಳು ಹುಟ್ಟಿದಂತೆ ತೋರುತ್ತವೆ.

ಲಿಂಗಸೂರಿನ ಅಮರಶಾಸ್ತ್ರಿ ಹಿರೇಮಠ ಬರೆದ 'ಬಸವೇಶ್ವರ' ನಾಟಕ ಹುಟ್ಟಿದ್ದು ಹೈದ್ರಾಬಾದ ಕರ್ನಾಟಕದ ಭಾಗದಲ್ಲಿ. ಒಂದು ಬಿಜಾಪೂರ ಜಿಲ್ಲೆಗೆ ಸೇರಿದ್ದು (ಘಟ್ಟಿವಾಳಯ್ಯ), ಉಳಿದವುಗಳ ವಿವರಗಳು ನಮಗೆ ಸರಿಯಾಗಿ ತಿಳಿದುಬರುವುದಿಲ್ಲ.

ಕನ್ನಡದ ಪ್ರಚಾರವಾಗಬೇಕು, ಹಾಗೆಯೇ ಶರಣರ ಚರಿತ್ರೆಗಳು ಸಾಮಾನ್ಯರಿಗೆ ಗೊತ್ತಾಗಬೇಕು ಎಂಬ ಘನವಾದ ಉದ್ದೇಶ ಈ ಎಲ್ಲ ನಾಟಕಗಳ ಸೃಷ್ಟಿಯ ಹಿಂದೆ ಇದೆ. ಮುಂದಿನವರ ಅಭ್ಯಾಸಕ್ಕೆ ಅನುಕೂಲವಾಗುತ್ತದೆಂಬ ಉದ್ದೇಶದಿಂದ ಈ ಐದು ನಾಟಕಗಳನ್ನು ಸಂಪಾದಿಸಿ ಒಂದು ಸಂಪುಟದಲ್ಲಿ ಇಲ್ಲಿ ಕೊಡಲಾಗುತ್ತಿದೆ. ಈ ಎಲ್ಲ ನಾಟಕಗಳ ಪ್ರತಿಗಳು ದೊರೆತುದು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ.

ಬಳಸಿಕೊಂಡ ನಾಟಕಗಳು :

೧. **ಘಟ್ಟಿವಾಳಯ್ಯ** : ಕಾಲ: ೧೯೦೧, ಕೃತಿಕಾರ : ಸಿದ್ದಪ್ಪ ಕಡಿ,
ಊರು – ಅರಸನಾಳ, ತಾ. ಮುದ್ದೇಬಿಹಾಳ, ಜಿ. ಬಿಜಾಪೂರ

೨. **ಬಸವೇಶ್ವರ** : ಕಾಲ– ೧೯೦೯, ಕೃತಿಕಾರ– **ಅಮರಶಾಸ್ತ್ರಿ ಹಿರೇಮಠ**
ಊರು – ಲಿಂಗಸೂರು, ತಾ. ಲಿಂಗಸೂರು, ಜಿಲ್ಲಾ– ರಾಯಚೂರು

೩. **ಶ್ರೀ ಬಸವೇಶ್ವರ** : ಕಾಲ – (?)

೪. **ಭಕ್ತಿ ಭಂಡಾರಿ ಬಸವಣ್ಣ** : ಕಾಲ (?)

೫. **ಸಿದ್ಧರಾಮ** : ಕ್ರಿ.ಶ. ೧೯೨೪, (ಪ್ರತಿ ಮಾಡಿದ ಕಾಲ)

೧. ಘಟ್ಟಿವಾಳಯ್ಯ

'ಘಟ್ಟಿವಾಳಯ್ಯ' ಎಂಬ ಈ ನಾಟಕದ ಹೆಸರು 'ಘಟ್ಟಿವಾಳಯ್ಯನ ಕಥೆ' ಅಥವಾ 'ಲೋಕಾಚರಿಸುವ ನಾಟಕ' ಎಂದು ಕೊಡಲಾಗಿದೆ. ಇದನ್ನು ಬರೆದವರು ಸಿದ್ದಪ್ಪಾ ಕಡಿ, ಅರಸನಾಳ. ಈ ಊರು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಿಂದ ಐದಾರು ಕಿ.ಮೀ. ದೂರದಲ್ಲಿ ಅಗ್ನೇಯ ದಿಕ್ಕಿನಲ್ಲಿದೆ. ಈತನು ಈ ನಾಟಕವನ್ನು ಬರೆದದ್ದು 'ಶಕ ೧೮೨೩, ಪ್ಲವನಾಮ ಸಂವತ್ಸರೆ, ಮಿತಿ ಅಧಿಕ ಶ್ರಾವಣ ಶುದ್ಧ ೭, ಮಂಗಳವಾರ ದಿವಸ ಮುಗಿದಿದ್ದು' ಎಂದು ಉಲ್ಲೇಖಿಸಲಾಗಿದೆ. ಅಂದರೆ ಈ ನಾಟಕ ಬರೆದದ್ದು ಕ್ರಿ.ಶ. ೧೯೦೧ ರ ಶ್ರಾವಣಮಾಸದಲ್ಲಿ ಎಂದಾಗುತ್ತದೆ.

ಇದನ್ನು ಪ್ರತಿಮಾಡಿದವರು ಮುದ್ದೇಬಿಹಾಳ ತಾಲೂಕಿನ ಗಂಗೂರ ಎಂಬ ಗ್ರಾಮದ ಸಂಗನಬಸಯ್ಯಾ ತಂದೆ ಸಂಗಯ್ಯಾ ಮಠದ ಎನ್ನುವವರು. ಈ ಕೃತಿ ಪ್ರತಿಮಾಡಲು ಪ್ರಾರಂಭಿಸಿದ್ದು, ೨೭ನೇ ಸಪ್ಟೆಂಬರ್ ೧೯೦೧ ರಂದು, ಮುಗಿಸಿದ್ದು ೯ನೇ ಅಕ್ಟೋಬರ್ ೧೯೦೧ ರಂದು. ಅಂದರೆ ನಾಟಕ ಹುಟ್ಟಿದ ವರ್ಷವೇ ಬಹುಶಃ ಒಂದು ತಿಂಗಳ ಅಂತರದಲ್ಲಿ ಇದನ್ನು ಪ್ರತಿ ಮಾಡಲಾಗಿದೆ.

ಈ ನಾಟಕಕ್ಕೆ ಕಥೆಯನ್ನು ಪುರಾಣ ಕೃತಿಗಳಿಂದ ಪಡೆದುದಲ್ಲದೆ, 'ಸ್ವಕಲ್ಪನೆಯಿಂದಾ ಕೇಳುಕಿಯ ಬಲದಿಂದಲು ಚಮತ್ಕಾರಭಾವವುಳ್ಳ ಘಟ್ಟಿವಾಳಯ್ಯನ ಕಥೆ' ಬರೆಯಲಾಗಿದೆ ಎನ್ನುತ್ತಾನೆ. ಹೀಗಾಗಿ ಈ ಕಥೆ ಪುರಾಣ ಕಾವ್ಯಗಳಲ್ಲಿ ಇದ್ದಂತೆಯೇ ಇರದೆ, ತಮ್ಮ ಕಲ್ಪನೆಯನ್ನು ಬೆರಿಸಿ, ಮತ್ತು ಮೌಖಿಕ ಪರಂಪರೆಯ ಮೂಲಕ ಹರಿದುಬಂದ ಕಥಾ ಸೆರಗನ್ನೂ ಅನುಸರಿಸಿ ಈ ಕಥೆಯನ್ನು ಬರೆಯಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

೧೯೦೧ ರಲ್ಲಿ ಹುಟ್ಟಿದ ಈ ನಾಟಕ ಬಹುಶಃ ಶರಣರಿಗೆ ಸಂಬಂಧಿಸಿದಂತೆ

ಈಗ ಸಧ್ಯಕ್ಕೆ ದೊರಕಿದ ಅತ್ಯಂತ ಹಳೆಯ ನಾಟಕವೆಂದು ತೋರುತ್ತದೆ. ಈ ಸಂಪುಟದಲ್ಲಿ ಸೇರಿಸಿಕೊಂಡ ಉಳಿದ ನಾಟಕಗಳು ಇದರ ನಂತರ ಹುಟ್ಟಿದವು. ೧೯೦೧ ರಿಂದ ೧೯೨೪ನೇ ವರ್ಷಗಳ ಒಳಗಾಗಿ ಸೃಷ್ಟಿಗೊಂಡವು. ಹೀಗಾಗಿ ಹೊಸಗನ್ನಡದ ಕಾಲ ಸರಿಯಾಗಿ ಪ್ರಾರಂಭವಾಗುವಾಗ ಹುಟ್ಟಿದ ನಾಟಕಗಳು ಎಂಬ ಮಹತ್ವ ಇವುಗಳಿಗೆ ಇದೆ.

ಘಟ್ಟಿವಾಳಯ್ಯನ ನಾಟಕದ ವಿಶೇಷತೆ ಎಂದರೆ, ಇಲ್ಲಿ ಸಂಸ್ಕೃತ ಶ್ಲೋಕಗಳನ್ನೂ ಬಳಸಿಕೊಳ್ಳಲಾಗಿದೆ ಮತ್ತು ಮೌಖಿಕ ಪರಂಪರೆಯ ಸ್ಪರ್ಶವನ್ನೂ ಇಟ್ಟುಕೊಳ್ಳಲಾಗಿದೆ. ಇಲ್ಲಿಯ ಅನೇಕ ಮಾತುಗಳ ಕೊನೆಗೆ ಬಯಲಾಟಗಳ ಮಾತುಗಳಲ್ಲಿ ಕಾಣುವ ರೀತಿಯಲ್ಲಿ ಕೆಲ ಮಾತಿನ ತುಣುಕುಗಳನ್ನು ಹಾಕಲಾಗಿದೆ. 'ಏನು ಕಾರಣ ತಡದಿ ತರುಣಿಮಣಿ', 'ಎನ್ನಲ್ಲಿ ಇದ್ದ ಅಪರಾಧವೇನು ಸುಂದರಾ ಕುರುಣಮಂದಿರಾ', 'ಮಾರಮನ್ಮಥ ನಾಟದೊಳ್ ಸೇರುವ ನಡಿ ಕಾಮಿನಿ ಕಲಹಂಸಗಾಮಿನಿ', 'ಇದು ತಿಳಿದು ನೋಡು ಕಾಂತೆ ಗುಣವಂತೆ', 'ತ್ವರಿತದಿಂದೆ ಪೋಗೋಣ ನಡಿ ಸುಂದರಾ ಕರುಣಾ ಮಂದಿರಾ', 'ಸತಿ ಶಿರೋಮಣಿಯೇ ಪರುಷದ ಖಣಿಯೇ', 'ಸತಿಯೇ ಕಮಲ ಮುಖಿಯೆ'- ಈ ಬಗೆಯ ಸಂಭಾಷಣೆಯ ತುಣುಕುಗಳು ಸಾಕಷ್ಟು ಬರುತ್ತವೆ. ಇಂತಹ ಮಾತಿನ ತುಣುಕುಗಳು ಸಾಮಾನ್ಯವಾಗಿ ಕಾಣುವುದು ಬಯಲಾಟಗಳಲ್ಲಿ. ಇದನ್ನು ಗಮನಿಸಿದರೆ, ನವೋದಯದ ಪ್ರಾರಂಭದ ಕಾಲಕ್ಕೆ ಹುಟ್ಟಿದ ಈ ನಾಟಕದ ಉದ್ದೇಶ ಗ್ರಾಮೀಣ ಜನರನ್ನು ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ನಾಟಕಕಾರರ ಕಲ್ಪನೆಯಂತೆ ಘಟ್ಟಿವಾಳಯ್ಯನನ್ನು ಒಬ್ಬ ಅರಸನನ್ನಾಗಿ ಚಿತ್ರಿಸಲಾಗಿದೆ. ಅವನಲ್ಲಿಗೆ ಬರುವ ಒಬ್ಬ ಮುನಿಯು ಅರಸನಿಗಾಗಿ ಒಬ್ಬ ಹೆಂಡತಿಯನ್ನು ಹುಡುಕಿ ತರುವುದಾಗಿ ಹೇಳುತ್ತಾನೆ. ಘಟ್ಟಿವಾಳಯ್ಯ ಪ್ರಾರಂಭದಲ್ಲಿಯೇ ಸಂಸಾರದಲ್ಲಿ ನಿರಾಸಕ್ತಿ ಹೊಂದಿದವನಾಗಿ ಕಾಣುತ್ತಾನೆ. ಆದರೆ ಮುನಿಯ ಒತ್ತಾಯಕ್ಕೆ ಮಣಿದು, ಹೆಣ್ಣನ್ನು ಹುಡುಕಿ ತರಲು ಹೇಳುತ್ತಾನೆ. ಹೆಣ್ಣು ಹುಡುಕಿ ತಂದ ನಂತರ ಸಂಸಾರದ ಹೇಯ ಸ್ವರೂಪದ ಬಗ್ಗೆ ಘಟ್ಟಿವಾಳಯ್ಯ ಸುದೀರ್ಘವಾಗಿ ವಿವರಿಸುತ್ತಾನೆ. ಆದರೆ ಮೊದಲು ಹೆಣ್ಣನ್ನು ತರಲು ಹೇಳಿ ಈಗ ಬೇಡವೆನ್ನುವುದು ತರವಲ್ಲ ಎಂಬ ಮುನಿಯ ಒತ್ತಾಯಕ್ಕೆ ಮಣಿದು, ಆಕೆಯನ್ನು ಹೆಂಡತಿಯೆಂದು ಸ್ವೀಕರಿಸುತ್ತಾನೆ.

ಮುಂದೆ ಕಥೆ ಸಾಂಪ್ರದಾಯಿಕವಾಗಿ ವೀರಶೈವ ಕಾವ್ಯಗಳು ಒರೆಯುವಂತೆ ನಡೆಯುತ್ತದೆ. ಘಟ್ಟಿವಾಳಯ್ಯನ ಹೆಂಡತಿಯನ್ನು ಹುಡುಕಿಕೊಂಡು ಅವಳ ಪ್ರಿಯಕರ ಬರುವುದು, ಘಟ್ಟಿವಾಳಯ್ಯನಿಗೆ ಮೋಸಮಾಡಿ ಆಕೆ ಪ್ರಿಯಕರನೊಂದಿಗೆ

ಹೊರಡುವುದು, ಮತ್ತೆ ತವರು ಮನೆಯ ಪ್ರಿಯಕರನೊಬ್ಬ ಎದುರಾಗುವುದು. ಕೊನೆಗೆ ಘಟ್ಟಿವಾಳಯ್ಯ ಆ ಸ್ತ್ರೀಯನ್ನು ಸೀಳಿ ಆ ಇಬ್ಬರೂ ಪುರುಷರಿಗೆ ಒಂದೊಂದು ತುಣುಕನ್ನು ಒಪ್ಪಿಸುವವರೆಗೆ ನಾಟಕ ಬೆಳೆಯುತ್ತದೆ.

ಸಂಸ್ಕೃತದ ಶ್ಲೋಕಗಳನ್ನು ತುಸು ಹೆಚ್ಚಿಗೆ ಎಂಬಂತೆ ಬಳಸಲಾಗಿದೆ. ಕನ್ನಡದಲ್ಲಿರುವ ಪದಗಳು ಸೊಗಸಾಗಿವೆ. ಗ್ರಾಮೀಣರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕಥೆ ಬರೆದುದರಿಂದ ಬಯಲಾಟದ ಶೈಲಿಯ ಮಾತುಗಾರಿಕೆ ಇಲ್ಲಿದೆ. ಈ ನಾಟಕದ ಮಹತ್ವ ವಿರುವುದು ಇದು ಹುಟ್ಟಿದ ಕಾಲದಿಂದ. ಕನ್ನಡದ ಪ್ರಚಾರ ಮತ್ತು ಶಿವಶರಣರ ತತ್ತ್ವಗಳ ಪ್ರಚಾರ ಇವುಗಳ ಉದ್ದೇಶವನ್ನು ಹೊಂದಿದೆ. ಹೀಗಾಗಿ ಈ ನಾಟಕ ಒಂದು ಮಹತ್ವದ ದಾಖಲೆ ಎನಿಸುತ್ತದೆ.

೨. ಬಸವೇಶ್ವರ ನಾಟಕ :

೨೨ 'ಬಸವೇಶ್ವರ' ಎಂಬ ನಾಟಕವನ್ನು ಬರೆದವರು ಅಮರಶಾಸ್ತ್ರಿ ಹಿರೇಮಠ ಲಿಂಗಸೂರು. ಶರಣರಿಗೆ ಸಂಬಂಧಿಸಿದಂತೆ ಹೈದ್ರಾಬಾದ ಕರ್ನಾಟಕದಲ್ಲಿ ಹುಟ್ಟಿದ ಮೊದಲ ನಾಟಕ ಇದು. 'ಶ್ರೀ ಶಾಲಿವಾಹನ ಶಕ ೧೮೫೯, ಪಿಂಗಳನಾಮ ಸಂವತ್ಸರೇ ಮಾರ್ಗೇಶ್ವರ ಮಾಸ, ಶುಕ್ಲಪಕ್ಷಾ ತ್ರಯೋದಸಿ ಸೌಮ್ಯವಾರದಿವಸ ಶ್ರೀ ಬಸವೇಶ್ವರ ಆಖ್ಯಾನ ಕಥಾ ಬರಿಯುವದಕ್ಕೆ ಶುಭವಸ್ತು' ಎಂದು ಉಲ್ಲೇಖವಿದೆ. ಇದರಿಂದ ಈ ನಾಟಕ ಪ್ರತಿಮಾಡಿದ ಕಾಲ ೧೯೧೭ ಎಂದಾಗುತ್ತದೆ. ಇದನ್ನು ಪ್ರತಿ ಮಾಡಿದವನು ರಟ್ಕಲ್ಲಿನ ಮಠಪತಿ ರುದ್ರಯ್ಯನವರು. ಈ ಸಂಪುಟದಲ್ಲಿರುವ ಸಿದ್ಧರಾಮ ನಾಟಕದ ಪ್ರತಿಕಾರನೂ ಇವನೇ ಆಗಿದ್ದಾನೆ. ಆದರೆ ಈ ನಾಟಕ ಮುದ್ರಣಗೊಂಡ ಅಪೂರ್ಣ ಪ್ರತಿಯೊಂದು ನಾಗನೂರು ರುದ್ರಾಕ್ಷಿಮಠದ ಲಿಂಗಾಯತ ಗ್ರಂಥಾಲಯದಲ್ಲಿ ಇದೆ ಎಂಬ ಸಮಾಚಾರ ತಿಳಿದು, ಅಲ್ಲಿಗೆ ಸಂಪರ್ಕಿಸಲಾಗಿ, ಸ್ನೇಹಿತರಾದ ಪ್ರಕಾಶ ಗಿರಿಮಲ್ಲಣ್ಣನವರ ಅವರು ಆ ಅಪೂರ್ಣಪ್ರತಿಯನ್ನು ಝರಾಕ್ಸ್ ಮಾಡಿಸಿ ಕಳಿಸಿದರು. ಆ ಪ್ರಕಾರ ೧೯೧೧ ರಲ್ಲಿ ಈ ನಾಟಕ ಪ್ರಕಟಗೊಂಡಿದೆ. ಆದರೆ ಇದಕ್ಕಿಂತ ಒಂದೆರಡು ವರುಷ ಮುಂಚೆ ಈ ನಾಟಕ ರಚನೆಯಾಗಿ ಕೆಲವು ಕಡೆ ಪ್ರಯೋಗಗೊಂಡ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತವೆ. ಈ ನಾಟಕ ಬರೆದುದು ೧೯೦೯ ನೇ ಇಸ್ವಿ ಇದನ್ನು ಬೈಲಹೊಂಗಲ, ಗೋಕಾಕ, ಕೊಣ್ಣೂರ, ಅಥಣಿ, ರಬಕವಿ, ಮುಧೋಳ, ಹಲಗಲಿ, ಬಾಗಲಕೋಟ, ವಿಜಾಪೂರ, ಗದಗ, ಧಾರವಾಡ, ಹುಬ್ಬಳ್ಳಿ, ಬೆಳಗಾಂವ ಮುಂತಾದ ಕಡೆಗಳಲ್ಲಿ ಪ್ರಯೋಗಿಸಲಾಗಿದೆ. ಅತ್ಯಂತ ಯಶಸ್ವಿಯಾಗಿ ಪ್ರಯೋಗಗೊಂಡ ಈ ನಾಟಕವನ್ನು ಅನೇಕ ಮಠದ ಸ್ವಾಮಿಗಳ ಒತ್ತಾಯದ

ಮೇರೆಗೆ ೧೯೧೧ರ ಡಿಸೆಂಬರ್ ತಿಂಗಳಲ್ಲಿ ಪ್ರಕಟಪಡಿಸಲಾಗಿದೆ. ಹೀಗಾಗಿ ಈ ನಾಟಕಕ್ಕೆ ಮುದ್ರಣದ ದೃಷ್ಟಿಯಿಂದ ಐತಿಹಾಸಿಕ ಮಹತ್ವವಿದೆ. ಇಲ್ಲಿಯವರೆಗೆ ನಮಗೆ ಲಭ್ಯವಾಗುವ ಮಾಹಿತಿಗಳ ಪ್ರಕಾರ ಶರಣರಿಗೆ ಸಂಬಂಧಿಸಿದ ಇಂತಹ ನಾಟಕಗಳ ಪ್ರಕಟನೆಯಲ್ಲಿ ಇದು ಅತ್ಯಂತ ಹಳೆಯದು ಎಂದು ಹೇಳಬಹುದಾಗಿದೆ.

'ಬಸವ ಪುರಾಣ' ದ ಕಥೆಯನ್ನೇ ಈ ನಾಟಕಕ್ಕೆ ಅನುಸರಿಸಲಾಗಿದೆ. ಅದರಂತೆ ಬಸವೇಶ್ವರನ ಹುಟ್ಟಿನ ಸಮಾಚಾರವನ್ನು ಕೈಲಾಸದಿಂದಲೇ ಪ್ರಾರಂಭಿಸಲಾಗಿದೆ. ಶಿವನ ಅಪ್ಪಣೆಯ ಮೇರೆಗೆ ನಂದಿಯೇ ಬಸವಣ್ಣನಾಗಿ, ಅಲ್ಲಿಯ ಗಣಂಗಳೆಲ್ಲ ಶಿವಶರಣರಾಗಿ ಭೂಮಿಗೆ ಅವತರಿಸಬೇಕೆಂದು ಶಿವನ ಆದೇಶವಾಗುತ್ತದೆ. ಎರಡನೇ ಅಂಕದಲ್ಲಿ ಮಾದಲಾಂಬಿಕೆ ಗರ್ಭಿಣಿಯಾದ ಸಂಗತಿಯಿಂದ ಮೊದಲ್ಗೊಂಡು, ಬಾಲ್ಯದಲ್ಲಿ ಬಸವಣ್ಣನವರು ಮುಂಜಿವೆಯನ್ನು ಧಿಕ್ಕರಿಸುವ, ಸಂಗಮನಾಥನಲ್ಲಿ ನೆಲಸುವ, ಬಲದೇವನು ಮಗಳನ್ನು ಕೊಟ್ಟು ಮದುವೆಮಾಡುವ, ನಂತರ ಬಲದೇವನು ಸ್ವರ್ಗಸ್ಥನಾಗುವ, ಬಿಜ್ಜಳನು ಬಸವಣ್ಣನವರನ್ನು ಮಂತ್ರಿಯನ್ನಾಗಿಸುವ ಯೋಚನೆಯಿಂದ ಕಲ್ಯಾಣಕ್ಕೆ ಕರೆಸುವ ವಿಷಯಗಳು ಕೂಡಿವೆ.

ಮೂರನೇ ಅಂಕದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಪತ್ರವನ್ನು ಓದಿ ಸಂಪತ್ತನ್ನು ದೊರಕಿಸಿಕೊಡುವ, ಬಿಜ್ಜಳನು ಬಸವಣ್ಣನವರಿಗೆ ಮಂತ್ರಿ ಪದವಿಯನ್ನು ಕೊಡುವ, ನಂತರ ವಿಟಜಂಗಮರ ಸಂಗತಿ, ಮುಗ್ಧಸಂಗಯ್ಯನ ಪ್ರಸಂಗ ಇವುಗಳನ್ನು ವಿವರವಾಗಿ ಚಿತ್ರಿಸಲಾಗಿದೆ. ನಾಲ್ಕನೇ ಅಂಕದಲ್ಲಿ ಕಿನ್ನರಿ ಬ್ರಹ್ಮಯ್ಯನ ವಿಷಯ ತುಂಬಾ ವಿಸ್ತಾರವಾಗಿ ಬಂದಿದೆ. ಐದನೇ ಅಂಕ ಬಿಜ್ಜಳ ಮತ್ತು ಬಸವಾದಿ ಶರಣರ ನಡುವಿನ ಬಿರುಕು ಹೆಚ್ಚಾಗಿ, ಬಿಜ್ಜಳನ ಅಂತ್ಯವನ್ನು ಚಿತ್ರಿಸುವ ದೃಶ್ಯಗಳಿಂದ ಕೂಡಿದೆ. ಕೊನೆಯಲ್ಲಿ ಬಸವಣ್ಣನವರು ಸಂಗಮನಾಥನಲ್ಲಿ ಐಕ್ಯವಾಗುವ ದೃಶ್ಯದೊಂದಿಗೆ ನಾಟಕ ಮುಗಿಯುತ್ತದೆ.

೩. **ಶ್ರೀ ಬಸವೇಶ್ವರ** : ಈ ನಾಟಕದ ಕರ್ತೃವಿನ ಬಗ್ಗೆ ಯಾವ ಮಾಹಿತಿಗಳೂ ಲಭ್ಯವಿಲ್ಲ. ಇದರ ಭಾಷೆ ನೋಡಿದರೆ ಮತ್ತೆ ಇದು ೧೯೦೧-೧೯೨೫ರ ಅವಧಿಯಲ್ಲಿ ಸೃಷ್ಟಿಗೊಂಡಂತೆ ತೋರುತ್ತದೆ.

ಪರಶಿವನ ಒಡ್ಡೋಲಗದೊಂದಿಗೆ ಪ್ರಾರಂಭವಾಗುವ **'ಶ್ರೀ ಬಸವೇಶ್ವರ'** ನಾಟಕವು, ಮರ್ತ್ಯದ ಉದ್ಧಾರದ ಚಿಂತನೆಯೊಂದಿಗೆ ಪ್ರಾರಂಭವಾಗುತ್ತದೆ. ನಾರದ ಲೋಕಸಂಚಾರ ಮಾಡಿ ಭೂಲೋಕದ ವರದಿಯನ್ನು ಶಿವನಿಗೆ ಒಪ್ಪಿಸುತ್ತಾನೆ. ಶಿವನ ಪೂಜೆಗೆ ಆಗಿರುವ ಅಡ್ಡಿಯನ್ನು, ಶಿವದೇವಾಲಯಗಳನ್ನು ಶಿಲೆಗಳಿಂದ

ಮುಚ್ಚಲ್ಪಟ್ಟಿರುವ ದುರವಸ್ಥೆಯನ್ನು, ಅಷ್ಟಾವರಣಗಳ ಆಚರಣೆ ಇಲ್ಲದಿರುವುದನ್ನು ಹೇಳಿ, ಅದಕ್ಕಾಗಿ ಒಬ್ಬ ಯೋಗ್ಯ ಭಕ್ತನನ್ನು ಧರೆಗೆ ಕಳಿಸಿ ಶಿವಪಾರಮ್ಯದ ಅರಿವನ್ನು ಮೂಡಿಸಬೇಕೆಂದು ನಾರದ ಪರಮೇಶ್ವರನಲ್ಲಿ ವಿನಂತಿಸಿಕೊಳ್ಳುತ್ತಾನೆ. ಪಾರ್ವತಿಯೂ ಈ ಮಾತನ್ನು ಕೇಳಿ ಶಿವನ ಜೊತೆ ಸಂವಾದ ನಡೆಸುತ್ತಾಳೆ. ಆಗ ಶಿವನು ತನಗೂ ನಂದಿಗೂ ಬೇಧವಿಲ್ಲವಾದ ಕಾರಣ ಅವನು ಭೂಮಿಯಲ್ಲಿ ಅವತರಿಸುವಂತೆ ಮಾಡುವೆನೆಂದಾಗ ಪಾರ್ವತಿಯೆ ವಿಸ್ಮಿತಳಾಗುತ್ತಾಳೆ. ಅದಕ್ಕೆ ವಿವರಣೆಯನ್ನು ಕೇಳಿಪಡೆಯುತ್ತಾಳೆ. ಆಗ ಪರಮೇಶ್ವರನು ವಿವರಿಸುತ್ತಾನೆ : ಶಿಲಾದ ಮುನಿಯು ಶಿವಭಕ್ತಿಯಿಂದ ತಪಸ್ಸನ್ನಾಚರಿಸಿ, ಶಿವನಿಂದ ಸಂತಾನದ ವರವನ್ನು ಪಡೆಯುತ್ತಾನೆ. ನಂದಿ ಅವನ ಮಗನಾಗಿ ಹುಟ್ಟುತ್ತಾನೆ. ನಂದಿಯ ತಪಸ್ಸು ಶಿಲಾದನಿಗಿಂತಲೂ ಅಧಿಕವಾಗಿತ್ತು. ಅವನ ತಪಸ್ಸಿನ ಉಜ್ವಲತೆಗೆ ದೇವಾನುದೇವತೆಗಳೇ ಹೆದರಿದರು. ಆಗ ನಂದಿಗೆ ನಿನ್ನ ಮನೋಬಯಕೆಯೇನು? ಎಂದು ಕೇಳಲು, ನಿನ್ನ ಪಾದಸೇವೆಗಿಂತ ಮಿಗಿಲಾದುದು ಬೇರೇನಾದರೂ
24 ಇರಲುಂಟೆ? ಎಂದನು. ಅವನನ್ನು ಶಿವನು ತನ್ನ ಜೊತೆ ಸದಾ ಇರಿಸಿಕೊಳ್ಳುವ ಹಂಬಲದಿಂದ ತನ್ನ ವಾಹನವಾಗಿಇರಿಸಿಕೊಂಡುದಾಗಿಯೂ ಹೇಳಿ, ಅವನನ್ನೇ ಭೂಲೋಕಕ್ಕೆ ಕಳಿಸುವುದಾಗಿ ನಿರ್ಣಯಿಸುತ್ತಾನೆ. ಪಾರ್ವತಿಯ ಅನುಮಾನಗಳನ್ನು ಪರಿಹರಿಸುತ್ತಾನೆ. ನಂದಿ ಕಿಂಚಿತ್ತೂ ಶಿವನ ಆಜ್ಞೆಯನ್ನು ನಿರಾಕರಿಸದೇ ಒಪ್ಪಿಕೊಳ್ಳುತ್ತಾನೆ. ಬಾಗೇವಾಡಿಯ ಶೈವ ಬ್ರಾಹ್ಮಣ ಮಾದಲಾಂಬೆ, ಮಾದರಸರ ಪುತ್ರನಾಗಿ ಜನಿಸಲು ಹರಸುತ್ತಾನೆ. ಇಲ್ಲಿ ಇನ್ನೊಂದು ಸಂಗತಿ ತಿಳಿಯುತ್ತದೆ. ನಾರದನನ್ನೇ ಕೊಂಡೆಮಂಚಣ್ಣನಾಗಿ ಜನಿಸಲು ಶಿವನು ಹರಸುತ್ತಾನೆ. ಗುಪ್ತ ಭಕ್ತನಾಗಿದ್ದುಕೊಂಡೆ, ಶರಣರ ವಿರುದ್ಧ ಚಾಡಿ ಹೇಳುತ್ತಲೇ, ಬಿಜ್ಜಳನ ಆಪ್ತನಾಗಿರುವ ಕಾರ್ಯ ನಿರ್ವಹಿಸುವ ಜವಾಬ್ದಾರಿಯ ಹೊಣೆಯನ್ನು ನಾರದನಿಗೆ ಶಿವನು ಹೊರಿಸುತ್ತಾನೆ.

ಇತ್ತ ಮಾದರಸ ಮಾದಲಾಂಬಿಕೆಯರು ಪುತ್ರ ಸಂತಾನದ ಅಪೇಕ್ಷೆಯಲ್ಲಿ ಇರುತ್ತಾರೆ. ತಾಯಿ ಮಾದಲಾಂಬೆಯಂತೂ ಬಂಜೆಯೆಂಬ ಕುಂದು ತನಗೆ ಬರದಿರಲಿ ಎಂದು ದುಃಖಿಸುತ್ತಾಳೆ. ಇಂದು ಹುಟ್ಟಿ ನಾಳೆ ಸತ್ತರೂ ಸರಿಯೆ ಬಂಜೆಂಬುವ ಶಬ್ದ ಹೊರಲಾರೆ ಎಂಬ ಹಂತಕ್ಕೆ ಬಂದು ಬಿಟ್ಟಿದ್ದಾಳೆ. ಆಗ ಮಾದರಸ ಪುತ್ರರಿಂದ ಯಶವೂ ಬರಬಹುದು, ವಿಪರೀತ ದುಃಖವೂ ಆಗಬಹುದು. ಈಗ ನಮಗೆ ಆ ತಾಪತ್ರಯವಿಲ್ಲವೆಂದು ಹೇಳಿ ನಿಶ್ಚಿಂತಳಾಗಿರು ಎಂದು ಸಮಾಧಾನಪಡಿಸುತ್ತಾನೆ. ಆದರೂ ತನ್ನ ಕಳವಳ ದೂರವಾಗಲಾರದೆಂಬುದೇ ಮಾದಲಾಂಬಿಕೆಯ ವಾದ. ಅಷ್ಟರಲ್ಲಿ ತ್ರಿಲೋಕ ಸಂಚಾರಿಯಾದ ನಾರದ ಶಿವನಾಮಸ್ಮರಣೆ ಮಾಡುತ್ತ ಬರುವ ದನಿ ಮಾದರಸನಿಗೆ ಕೇಳಿಸುತ್ತದೆ. ಮಾದರಸನಿಗೆ

ಅದೇ ವೇಳೆಗೆ ಬಲಭುಜ, ಬಲಗಣ್ಣು ಹಾರುತ್ತವೆ. ಏನೋ ಶುಭ ಸೂಚನೆ ಇರಬಹುದೆಂದು ಊಹಿಸುತ್ತಾನೆ. ಮೂವರ ನಡುವೆ ಮತ್ತೆ ಮಾತುಕತೆಗಳು ನಡೆಯುತ್ತವೆ.

ಮಕ್ಕಳಿಲ್ಲದ ನೋವನ್ನು ಮಾದಲಾಂಬಿಕೆ ಹೇಳಿದರೆ, ನಿಮಗೇನು ಕಡಿಮೆ, ಸುಖ ಸಂಪತ್ತನ್ನು ಸಾಯುವವರೆಗೆ ಅನುಭವಿಸಿ ನಿಶ್ಚಿಂತರಾಗಿ ಸಾಯುವುದೇ ಯೋಗ್ಯ ಎಂದು ನಾರದ ಹೇಳುತ್ತಾನೆ. ಆಗ ಮತ್ತೆ ಮಾದಲಾಂಬಿಕೆ ವೈದಿಕ ಸಂಸ್ಕಾರದಂತೆ ಮಾತು ಮುಂದುವರೆಸುತ್ತಾಳೆ. ಪುತ್ರರಿಲ್ಲದವರಿಗೆ ಗತಿ ಇಲ್ಲ ಎಂದೇ ಹೇಳಿ, ತನ್ನನ್ನು ತಾನು ಪಾತಕಿ ಎಂದು ಶಪಿಸಿಕೊಳ್ಳುತ್ತಾಳೆ. ತಮ್ಮಂಥವರು ಧರೆಯ ಮೇಲಿರಲು ಯೋಗ್ಯರಲ್ಲ ಎಂಬುದೇ ಆಕೆಯ ಬಲವಾದ ವಾದ. ನಂದಿಯ ವ್ರತವನ್ನು ಶುಚಿರ್ಭೂತವಾಗಿ ಮಾಡಲು ಹೇಳಿ ನಾರದ ನಿರ್ಗಮಿಸುತ್ತಾನೆ. ದಂಪತಿಗಳಿಬ್ಬರೂ ಅಷ್ಟೇ ತೀವ್ರವಾಗಿ ನಂದಿಯ ಗುಡಿಗೆ ತೆರಳುತ್ತಾರೆ. ನಂದಿಯಲ್ಲಿ ಆರ್ಥರಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ನಂದಿಯ ಬಲಕೋಡಿನಿಂದ ಪುಷ್ಪವು ಉದುರಿ ಬೀಳುತ್ತದೆ. ಅದನ್ನೆ ಪ್ರಸಾದವೆಂದು ಸ್ವೀಕರಿಸುತ್ತಾರೆ. ಮಾದಲಾಂಬಿಕೆಗೆ ಗರ್ಭಧಾರಣೆ ಆಗುತ್ತದೆ.

ಇಲ್ಲಿ ನಾಟಕದ ಕರ್ತೃ ಕಥೆಯನ್ನು ಓಡಿಸಿಕೊಂಡು ಹೋಗುತ್ತಾನೆ. ಒಮ್ಮೆಲೇ ಬಸವಣ್ಣನ ಉಪನಯನದ ಸಂಭ್ರಮ, ಅದಕ್ಕಾಗಿ ಜೋಯಿಸರ ಸಂಭ್ರಮ. ತಾವಿಲ್ಲದೇ ಯಾವ ಧಾರ್ಮಿಕ ಸಂಸ್ಕಾರ ಆಗಲಾರವು ಎಂಬ ಜಂಬ. ಈ ಸುದ್ದಿ ತಿಳಿಯುತ್ತಲೇ ನಾಡಿನ ನಾನಾ ಭಾಗದ ಜೋಯಿಸರು 'ಭೋಜನ ಸಂಬಂಧವಾಗಿ ಧಾವಿಸಿ ಬರತೊಡಗುತ್ತಾರೆ. ಅಲ್ಲಿ ವ್ಯಂಗ್ಯ ಸಂಭಾಷಣೆ ನಡೆಯುತ್ತದೆ. ಮಾದರಸ ಮಗನ ಸಕಲವಿದ್ಯಾ ನಿಪುಣತೆ, ವಿನಯ ಶೀಲತೆ, ಶಿವಭಕ್ತಿ ನೋಡಿ ಆಶ್ಚರ್ಯ ಚಕಿತನಾಗಿದ್ದಾನೆ. ಅವನ ಜ್ಞಾನವೃದ್ಧತೆಯನ್ನು ಮೆಚ್ಚಿಕೊಳ್ಳುತ್ತಾನೆ. ತಂದೆ ಅಂದುಕೊಂಡಂತೆ ಬಸವಣ್ಣನು ಎಂಟು ವರ್ಷದ ಬಾಲ್ಯದಲ್ಲಿಯೆ ಜ್ಞಾನವೃದ್ಧನೇ. ಅದನ್ನು ಉಪನಯನ ಸಂಸ್ಕಾರವನ್ನು ತಿರಸ್ಕರಿಸುವ ಮೂಲಕ ತೋರಿಸುತ್ತಾನೆ. ವಿದ್ವತ್‌ಪೂರ್ಣ ಚರ್ಚೆ ಮಾಡಿ, ತಂದೆಯನ್ನೇ ಬೆರಗುಗೊಳಿಸುತ್ತಾನೆ. ಹೆತ್ತವರ ಮಾತು ಕೇಳುವುದು ಮಕ್ಕಳ ಆದ್ಯಕರ್ತವ್ಯ. ಆದರೆ ಅವರೇ ಮೂಢತನ ತೋರಿಸಿದರೆ ಏನೂ ಮಾಡಲಾಗದು. ಈ ಸಂಸ್ಕಾರ ನನಗೆ ಬೇಡವೇ ಬೇಡ ಎಂದು ಎಳೆಯ ಬಾಲಕ ಬಸವ ಹಠ ಮಾಡುತ್ತಲೇ ಹೋಗುತ್ತಾನೆ. ಧರ್ಮಾಂತರ ಮಾಡುವದು ಮಹಾಪಾಪವೆಂದು ಹೇಳುತ್ತಲೇ ನನ್ನನ್ನು ಹಾಗೆ ಮಾಡಲು ಪ್ರೇರೇಪಿಸುವುದು ಸರಿಯಲ್ಲ. ಶಿವಧೀಕ್ಷಾ ಸಂಪನ್ನನಾದ ನಾನು ಮೌಂಜಿಯನ್ನು ಧರಿಸಲಾರೆ ಎಂದೇ ಹಟಹಿಡಿಯುತ್ತಾನೆ. ತಾನು ಹುಟ್ಟಿನಿಂದಲೂ ಶುದ್ಧನೇ ಇರುವುದರಿಂದ ಯಾವ

ಸಂಸ್ಕಾರವೂ ನನಗೆ ಬೇಕಿಲ್ಲ ಎಂದೇ ವಾದಿಸುತ್ತಾನೆ. ಶಿವಾಂಶಸಂಭೂತನಾದ ಮಗನ ಮಾತಿಗೆ ಹೆತ್ತವರು ಮಣಿಯಲೇಬೇಕಾಗುತ್ತದೆ. ಬಸವಣ್ಣ ಕೂಡಲ ಸಂಗಮಕ್ಕೆ ಹೋಗುವುದಕ್ಕಾಗಿ ಕೇಳಿಕೊಂಡಾಗ ಹೆತ್ತವರು ಮಂಗಲವಾಗಲೆಂದು ಹರಸುತ್ತಾರೆ. ಇದರಿಂದಾಗಿ ಗುಂಡ್ಲುಪೇಟೆಯಿಂದ ಬಂದ ಜೋಯಿಸನಿಗೆ ವ್ಯಥೆ ಆಗುತ್ತದೆ. ಕಲ್ಪನಾಬೋಜನದಲ್ಲಿಯೇ ತೆರಳಬೇಕಾಯಿತಲ್ಲ ಎಂದು ಮರಗುತ್ತಾನೆ.

ಇತ್ತ ಬಸವಣ್ಣ ಕೂಡಲ ಸಂಗಮಕ್ಕೆ ಬಂದು ಸೇರುತ್ತಾನೆ. ಸಂಗಮನಾಥನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಸಂಗಮನಾಥ ಪ್ರತ್ಯಕ್ಷನಾಗಿ ಬಂದು ದರ್ಶನವಿತ್ತು ಬಸವೇಶನ ಮನದಿಷ್ಟಾರ್ಥವನ್ನು ಕೇಳುತ್ತಾನೆ. ಬಸವಣ್ಣ ಪಾದಭಕ್ತಿಯೊಂದೇ ಸಾಕು ಎನ್ನುತ್ತಾನೆ. ಸಂಗಮನಾಥನ ನೀತಿಪರ ಬೋಧೆಯ ತನಗೆ ಜೀವ ಎನ್ನುತ್ತಾನೆ ಬಸವೇಶ. ಅಷ್ಟಾವರಣ ಮಹಿಮೆ ತಿಳಿಯಲು ಆತುರನಾದುದನ್ನು ನಿವೇದಿಸಿಕೊಳ್ಳುತ್ತಾನೆ. ಬಸವೇಶಾ ನಿನಗೆ ತಿಳಿಯದ್ದೇನಿದೆ. ಆದರೂ ಹೇಳುವೆ ಎನ್ನುತ್ತಾ ಅಷ್ಟಾವರಣಗಳ ಮಹತ್ವವನ್ನು ಸಂಗಮನಾಥ ಬಸವೇಶನಿಗೆ ತಿಳಿಸಿಕೊಡುತ್ತಾನೆ. ಸದಾ ತನಗೆ ಅನುಕೂಲನಾಗಿ ತನ್ನ ಜೊತೆಗೆ ಇರಬೇಕೆಂದು ಬಸವೇಶ ಸಂಗಮನಾಥನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಅದಕ್ಕೆ ಒಪ್ಪಿದ ಸಂಗಮನಾಥ ಶಿವಮತವನ್ನು ಉದ್ಧಾರ ಮಾಡಲು ಹೇಳುತ್ತಾನೆ. ಜೊತೆಗೆ ಬಿಜ್ಜಳನ ಮಂತ್ರಿ, ಮಾದಲಾಂಬಿಕೆಯ ಸಹೋದರ ಬಲದೇವ, ನಿನ್ನ ಸೋದರಮಾವನ ಮಗಳು ಗಂಗಾಂಬಿಕೆಯನ್ನು ಮದುವೆಯಾಗೆಂದು ಹರಸುತ್ತಾನೆ. ಎಲ್ಲ ರೀತಿಯ ಅನುಪಮ ಯಶಸ್ಸು ಸಿಗುವುದು ಎಂದು ಆಶೀರ್ವದಿಸುತ್ತಾನೆ. ಭರವಸೆಯಿತ್ತು ಮರೆಯಾಗುತ್ತಾನೆ. ಬಸವ ಆ ದಿನವನ್ನು ಇಡಿಯಾಗಿ ಸಂಗಮನಾಥನ ಸನ್ನಿಧಿಯಲ್ಲಿಯೇ ಕಳೆಯುತ್ತಾನೆ.

ಬಲದೇವ ಮಂತ್ರಿ ಸಂಗಮಕ್ಕೆ ಬಂದು ಅಳಿಯ ಬಸವೇಶನನ್ನು ಕರೆದುಕೊಂಡು ಹೋಗಿ, ಮಗಳು ಗಂಗಾಬಿಕೆಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಲಿಂಗೈಕ್ಯನಾಗುತ್ತಾನೆ. ಬಿಜ್ಜಳನಿಗೆ ಮುಂದೆ ಹೇಗೆ? ಎಂಬ ಚಿಂತೆ ಪ್ರಾರಂಭವಾಗುತ್ತದೆ. ಎಲ್ಲರ ಕಣ್ಣೂ ಅಧಿಕಾರದ ಮೇಲೆ ನೆಡುತ್ತದೆ. ದೊಡ್ಡ ಚರ್ಚೆಯೆ ಎಲ್ಲೆಡೆ ನಡೆಯುತ್ತದೆ. ಬಿಜ್ಜಳನಿಗೋ ಬಲದೇವನ ಅಗಲಿಕೆ ತುಂಬಲಾರದ ನಷ್ಟವಾಗುತ್ತದೆ. ಅವನಿಗಾಗಿ ಹಂಬಲಿಸಿ, ಕಳವಳಿಸಿ ದುಃಖಸುತ್ತಾನೆ. ಶಿವನೇ ನಾರದನನ್ನು ಮಂಚಣ್ಣನನ್ನಾಗಿ ಇಲ್ಲಿಗೆ ಕಳಿಸಿದ ಸಂಗತಿ ಹಿಂದೆ ಬಂದಿದೆ. ಶಿವನಾಜ್ಞೆಯಂತೆ ಎಲ್ಲರೆದರು ಬಸವಣ್ಣನನ್ನು ಮಂತ್ರಿಸ್ಥಾನಕ್ಕೆ ನೇಮಿಸಲು ಹೇಳಿ, ಏಕಾಂತದಲ್ಲಿ ತನ್ನ ಕೊಂಡೆಯತನದ ಗುಣವನ್ನು ಪ್ರಕಟಿಸಿ, ಆಯ್ಕೆ ನಿಮಗೇ ಬಿಟ್ಟದ್ದೆಂದು, ತನ್ನ ಇನ್ನೊಂದು ಮುಖದ ವ್ಯಕ್ತಿತ್ವವನ್ನು ಬಿಜ್ಜಳನೆದರು ಬಿಚ್ಚಿಡುತ್ತಾನೆ. ಜೈನಧರ್ಮದ ಪರವಾಗಿ ಮಾತನಾಡಿದ ಬಿಜ್ಜಳನ ಮನ ಗೆಲ್ಲಲು ಪ್ರಯತ್ನಿಸುತ್ತಾನೆ. ತನ್ನ ಮೇಲೆ

ವಿಶ್ವಾಸ ಹೆಚ್ಚುವಂತೆ ನೋಡಿಕೊಳ್ಳುತ್ತಾನೆ. ಇದೆಲ್ಲ ಶಿವನಿರ್ದೇಶನದಂತೆ ನಡೆದಿದೆ ಎಂಬಂತೆ ಮಂಚಣ್ಣನ ಪಾತ್ರ ಪರಿಚಯವಾಗುತ್ತ ಹೋಗುತ್ತದೆ. ಮಂಚಣ್ಣನನ್ನು ಎಲ್ಲರೂ ಕೇಡಿಗನೆಂದೇ ಚಿತ್ರಿಸಿದರೆ, ಇಲ್ಲಿ ಆ ಪಾತ್ರಕ್ಕೆ ವಿಶೇಷ ಮೆರಗಿದೆ. ವಚನಕಾರ ಮಂಚಣ್ಣನೂ (ಗುಪ್ತ) ಇಲ್ಲಿಯ ಮಂಚಣ್ಣನಂತೆಯೇ ತನ್ನ ಕೆಲಸಕ್ಕೆ ಚ್ಯುತಿ ಬರದಂತೆ ಎಚ್ಚರಿಕೆ ವಹಿಸಿರುವುದನ್ನು ಗಮನಿಸಬಹುದು. ಮಂಚಣ್ಣ ಬಿಜ್ಜಳನ ಪರವಾಗಿ ಮಾತನಾಡಿದರೂ ಬಿಜ್ಜಳ ಅದನ್ನು ಇಲ್ಲಿ ಗಂಭೀರವಾಗಿ ತಗೆದುಕೊಳ್ಳುವುದೇ ಇಲ್ಲ. ಆಸ್ಥಾನಕ್ಕೆ ಬಸವಣ್ಣನನ್ನು ವಿಜೃಂಬಣೆಯಿಂದ ಬಿಜ್ಜಳ ಬರಮಾಡಿಕೊಳ್ಳುತ್ತಾನೆ.

ಬಸವೇಶ ಬಂದು ಆಸ್ಥಾನದಲ್ಲಿದ್ದ ಸಮಯಕ್ಕೆ ಒಂದು ಅಪರೂಪದ ಓಲೆ ಓಲಗದಲ್ಲಿ ಬೀಳುತ್ತದೆ. ಓದಲು ಪ್ರಯತ್ನಿಸಿದ ಪಂಡಿತರ ಶ್ರಮವೆಲ್ಲ ವ್ಯರ್ಥವಾಗುತ್ತದೆ. ಅದರ ಬರಹ ಯಾವ ಕಡಿಯದೋ ಎಂದು ಗೊಣಗಾಟ. ಕೊನೆಗೆ ವಿಫಲರಾದ ಬ್ರಾಹ್ಮಣರು ಬಸವೇಶನಿಗೆ ಸವಾಲೊಂದನ್ನು ಹಾಕುತ್ತಾರೆ. ಆ ಲಿಪಿಯನ್ನು ಬಸವೇಶ ಓದಿದರೆ ತಾವು ಲಿಂಗಧಾರಿಗಳಾಗುವುದಾಗಿಯೂ, ಓದದಿದ್ದರೆ ಬಸವೇಶ ಹಾಕಿಕೊಂಡ ಲಿಂಗವನ್ನು ಹಳ್ಳದಲ್ಲಿ ಎಸೆದು ಜನಿವಾರ ಹಾಕಿಕೊಳ್ಳಬೇಕೆಂಬ ಕರಾರು ಆಯಿತು. ಬಸವೇಶ ಶಿವಮಂತ್ರ ಪಠಿಸುತ್ತ ಓದುತ್ತಾನೆ. ಬಿಜ್ಜಳರಾಜನ ಸಿಂಹಾಸನದಧೋಭಾಗದಲ್ಲಿ ದೊಡ್ಡ ನಿಕ್ಷೇಪವಿದೆಯೆಂಬುದು ಆ ಓಲೆಯಲ್ಲಿದೆಯೆಂದು ಹೇಳುತ್ತಾನೆ. ಮೊದಲು ಆಳಿದ ಚಾಲುಕ್ಯರ ಆಳ್ವಿಕೆಗೆ ಆ ನಿಕ್ಷೇಪ ಸಂಬಂಧಿಸಿದ್ದು ಎಂದು ಕೂಡ ಅಲ್ಲಿ ಬರೆದಿದೆ ಎಂದು ಅರಹುತ್ತಾನೆ. ಸಿಂಹಾಸನವನ್ನು ತೆಗೆಸಿ ನೋಡಲಾಗಿ ಅದು ಸತ್ಯವಾಗಿರುತ್ತದೆ. ಬಿಜ್ಜಳ ಸಂಭ್ರಮಿಸುತ್ತಾನೆ. ಬಸವೇಶನ ಲೀಲೆ ಅಗಾಧವಾದುದು ಎಂದು ಎಲ್ಲರೂ ಹೊಗಳುವವರೇ. ಬಿಜ್ಜಳ ತನ್ನ ರಾಜ್ಯಭಾರವು ನಿರಾತಂಕವಾಗಿ ನಡೆಯಲಿ ಎಂದು ಬಸವೇಶನಿಗೆ ದಂಡನಾಯಕ ಪದವಿಯನ್ನು ಕೊಡುತ್ತಾನೆ. ಬಸವೇಶನೇ ಬಿಜ್ಜಳನಿಗೆ ಸದ್ಭಕ್ತರ ಜೊತೆಗಿರಲು, ಸರ್ವರಲ್ಲೂ ಪ್ರೀತಿ ವಿಶ್ವಾಸದಿಂದ ಇರಲು ಹೇಳುತ್ತಾನೆ. ಬಿಜ್ಜಳ ರಾಜನಾಗಿಯೂ ಬಸವೇಶನ ಮಾತನ್ನು ಒಪ್ಪಿಕೊಳ್ಳುತ್ತಾನೆ.

ಕಂಟ್ಯಾ ಮತ್ತು ಬೀರ ಎಂಬ ಕುರುಬರಿಬ್ಬರು ಅಂದಿನ ವ್ಯವಸ್ಥಿತ ಸಮಾಜದಲ್ಲಿದ್ದ ವೈದಿಕರದ್ದೇ ಸಾಕಾಗಿತ್ತು, ಜೊತೆಗೆ ಶಿವಭಗತರು ಸೇರಿಕೊಂಡರು ಎಂದು ಆಡಿಕೊಳ್ಳುವ ಪ್ರಸಂಗ ಬರುತ್ತದೆ. ಅಲ್ಲಿ ಮಡಿವಾಳ ಮಾಚಿದೇವ ಎದುರಾಗುತ್ತಾನೆ. ಬೀರ ಮಾಚಿದೇವನ ಜೊತೆ ಅಸಡ್ಡೆಯಿಂದ ನಡೆದುಕೊಳ್ಳುತ್ತಾನೆ. ಮಡಿಬಟ್ಟೆ ಗಂಟು ಮುಟ್ಟಬೇಡೆಂದರೂ ಮುಟ್ಟಿ ಮಾಚಿದೇವನ ಶಿಕ್ಷೆಗೆ ಗುರಿಯಾಗುತ್ತಾನೆ. ಕಂಟ್ಯಾ ಹೆದರಿ ತನಗೂ ಅದೇ ಗತಿ ಬಂದರೆ ಹೇಗೆಂದು ಓಡಿ ಹೋಗಿ

ಬಸವೇಶನ ಮುಂದೆಯೇ ಬಿಜ್ಜಳನಿಗೆ ವಿಷಯ ಮುಟ್ಟಿಸುತ್ತಾನೆ. ನಿರಪರಾಧಿಗೆ ಹೀಗೆ ಮಾಡುವುದು ಸರಿಯೇ? ಎಂಬುದು ಬಿಜ್ಜಳನ ವಾದ. ಲೋಕದ ವ್ಯವಹಾರವೇ ನಿನಗೆ ತಿಳಿಯದೆಂಬುದು ಬಸವನ ವಾದ. ಬಸವಣ್ಣನ ಅಭಿಮಾನ ನೋಡಿದೆಯಾ ಎಂಬುದು ಮಂಚಣ್ಣನ ಹೇಳಿಕೆ. ಜಯಜಟ್ಟಿ, ಮಲ್ಲಜಟ್ಟಿಯರನ್ನು ಮಾಚಯ್ಯನಲ್ಲಿಗೆ ಕಳಿಸಿದಾಗ, ಅಲ್ಲಿಯೂ ಮಲ್ಲಜಟ್ಟಿ ಮಾಚಯ್ಯನಿಂದ ಕೊಲ್ಲಲ್ಪಡುತ್ತಾನೆ. ಶರಣರ ವೇಷದಲ್ಲಿರುವ ಇಂಥವರಿಂದ ಏನು ಪ್ರಯೋಜನ? ಎಂಬ ಕೋಪ ಬಿಜ್ಜಳನದು. ಕೆಟ್ಟಭಾವನೆಗಳಿಗೆ ಬೇಗನೆ ಮನಸ್ಸು ಈಡಾಗುತ್ತದೆ. ಒಳ್ಳೆಯ ಭಾವನೆಗೆ ಸಮಯ ಹಿಡಿಯುತ್ತದೆ. ಸಮಾಧಾನದಿಂದ ಯೋಚಿಸೆಂಬುದು ಬಸವಣ್ಣನ ವಿನಂತಿ. ಬಿಜ್ಜಳ ದುಡುಕಿ ಮದ್ದಾನೆಯನ್ನು ಮಾಚಿದೇವನ ಮೇಲೆ ಬಿಡಲು ಆಜ್ಞಾಪಿಸುತ್ತಾನೆ. ಸೇನಾಪತಿಯು ಹರಿ ಶ್ರೇಷ್ಠನೆಂದೂ ಮಾಚಿದೇವನು ಹರ ಶ್ರೇಷ್ಠನೆಂದೂ ವಾದಿಸುತ್ತಾರೆ. ಮದ್ದಾನೆ ಕೂಡ ಮಾಚಿದೇವನ ಮಾತು ಕೇಳಿ ತನ್ನ ಸಾತ್ವಿಕತೆ ತೋರಿಸುತ್ತದೆ. ಮತ್ತೆ ಸೇನಾಪತಿಯ ಮಾತಿಗೆ ಮಣಿದು ತಾಮಸದಿಂದ ಮೇಲೇರಿ ಹೋಗಿ ಅಸುನೀಗುತ್ತದೆ. ಸೇನಾಪತಿ ಕಾಲ್ದೆಗೆಯುತ್ತಾನೆ. ಮಾಚಿದೇವ ಎಂದಿನಂತೆ ಕಾರ್ಯಪ್ರವೃತ್ತನಾಗುತ್ತಾನೆ. ಸುದ್ದಿ ತಿಳಿದ ಬಿಜ್ಜಳ ದಿಗ್ಭ್ರಾಂತನಾಗುತ್ತಾನೆ. ಬಸವಣ್ಣ ಜ್ಞಾನ–ಭಕ್ತಿಗೆ ಎಲ್ಲಿಯಾದರೂ ಜಾತಿಯುಂಟೇ? ಅವಿವೇಕಕ್ಕೆ ಕ್ಷಮೆಯುಂಟೆ? ಎಂದು ಬಿಜ್ಜಳನಿಗೆ ಹೇಳಿ, ನ್ಯಾಯದಿಂದ ನಡೆದರೆ ಯಾರ ಭಯವಿಲ್ಲವೆಂದು ಹೇಳುತ್ತಾನೆ.

ವೇಶ್ಯಾಗೃಹ, ಅಲ್ಲಿ ಚಪಲೆ ಕಮಲೆ ಕಲಾವತಿಯರಿದ್ದಾರೆ. ಅಲ್ಲಿಗೆ ಬಾಗೇವಾಡಿಯಿಂದ ಬಂದ ಕುಶಲಮತಿಯೆಂಬ ಶ್ರೀಮಂತ ವಿಟ ಬಂದಿದ್ದಾನೆ. ಕಲಾವತಿಯೊಂದಿಗೆ ವಿಟನು ಮಾತನಾಡುತ್ತಾನೆ. ಇಬ್ಬರ ನಡುವೆ ದೀರ್ಘ ಚರ್ಚೆ ನಡೆಯುತ್ತದೆ. ವಿಟನು ಕಲಾವತಿಯನ್ನು ನಿರಾಕರಿಸುತ್ತಾನೆ. ಅವಳು ಅವನನ್ನು ವಶಪಡಿಸಿಕೊಳ್ಳಲು ಶತಪ್ರಯತ್ನ ಮಾಡುತ್ತಾಳೆ. ಕೊನೆಗೆ ಆಕೆಯೆ ಗೆಲ್ಲುತ್ತಾಳೆ. ಅವಳಿಗೆ ವಿಟ ಬಲಿಪಶುವಾಗುತ್ತಾನೆ. ಆಕೆ ತಮ್ಮ ಹಿರಿಯರ ಶ್ರಾದ್ಧಕ್ಕೆ ಕುರಿಯನ್ನು ತರುವ ಕೆಲಸವನ್ನು ಹೇಳುತ್ತಾಳೆ. ಅದವನಿಗೆ ನೀಚ ಕೆಲಸವೆನಿಸುತ್ತದೆ. ಹೀಗೆ ಅವನು ಹೇಳಿದ್ದು ನಿಂದೆಯಾಗಿ ಕಾಣಿಸುತ್ತದೆ. ಹೀಗಾಗಿ ತನ್ನ ಎಂಜಲನ್ನು ತಿನ್ನಲು ಕೊಡುವೆನೆಂದು ಅವನನ್ನು ಹಿಯಾಳಿಸುತ್ತಾಳೆ. ಒಪ್ಪದಿದ್ದರೆ ಮನೆಯಿಂದಾಚೆ ನೂಕುವುದಾಗಿ ಹೆದರಿಸುತ್ತಾಳೆ. ಮತ್ತೆ ಕುಶಲಮತಿ ಕಿನ್ನರಯ್ಯನಲ್ಲಿ ಹೋಗಿ, ಮೋಸದಿಂದ ಕುರಿಯನ್ನು ತರಲು ಪ್ರಯತ್ನಿಸಿ ಕಿನ್ನರಯ್ಯನಿಂದ ಹತನಾಗುತ್ತಾನೆ. ಸತ್ಯ ಸಂಗತಿ ತಿಳಿಯಲು ರಾಜ ಪಟ್ಟಣಶೆಟ್ಟಿಯನ್ನು ಕಳಿಸುತ್ತಾನೆ. ನಡೆದ ವಿಷಯವನ್ನು ಪಟ್ಟಣಶೆಟ್ಟಿ ರಾಜನ ಗಮನಕ್ಕೆ ತರುತ್ತಾನೆ. ಇದಕ್ಕೆ ಸಾಕ್ಷಿಯೇನು ಎಂಬುದು ಬಿಜ್ಜಳನ ಪ್ರಶ್ನೆ. ಕಿನ್ನರಯ್ಯನು ತ್ರಿಪುರಾಂತಕೇಶ್ವರನೇ ಸಾಕ್ಷಿ ಎಂದಾಗ ಬಿಜ್ಜಳ

ಖುದ್ದು ಪರೀಕ್ಷಿಸುತ್ತಾನೆ. ಈಶ್ವರ ಕಿನ್ನರಯ್ಯನ ಪರ ನುಡಿಯುತ್ತಾನೆ. ತನ್ನ ತಪ್ಪಿಗೆ ರಾಜ ತಾನೇ ಕ್ಷಮೆಯಾಚಿಸುತ್ತಾನೆ. ಕಿನ್ನರಯ್ಯ, ಬಸವ ಪರಿವಾರ, ಶರಣ ಪರಿವಾರ ಗೆಲ್ಲುತ್ತದೆ.

ಕೊನೆಯಲ್ಲಿ ಹರಳಯ್ಯ ಮಧುವಯ್ಯರು ನೀತಿಮಾರ್ಗವನ್ನೇ ತಪ್ಪಿದ್ದಾರೆ ಎಂಬ ವಿಷಯವನ್ನು ಮಂಚಣ್ಣ ರಾಜನ ಗಮನಕ್ಕೆ ತರುತ್ತಾನೆ. ಮತ್ತೆ ರಾಜ ದುಡುಕುತ್ತಾನೆ. ಶರಣರಿಗೆ ಎಳೆಹೂಟೆ ಶಿಕ್ಷೆಗೆ ಗುರಿಪಡಿಸುತ್ತಾನೆ. ಅಷ್ಟೇ ಅಲ್ಲ ಕಣ್ಣನ್ನು ಕೀಳಿಸುತ್ತಾನೆ. ಬಸವಣ್ಣ ಜಗದೇವನನ್ನು ಕರೆಸಿ, ಕಟುಕರ ನಾಡಿನಲ್ಲಿ ತಾನಿರಲಾಗದೆಂದು ಹೇಳಿ ಕಪ್ಪಡಿ ಸಂಗಮಕ್ಕೆ ಹೋಗುತ್ತಾನೆ. ಸಂಗಮನಾಥನ ಆಜ್ಞೆಯನ್ನು ಪಾಲಿಸುತ್ತಾನೆ. ಬಸವೇಶನ ಚಲಿಸದ ಮನಸ್ಸಿನ ಕಾರ್ಯವನ್ನು ಸಂಗಮನಾಥ ಮೆಚ್ಚಿಕೊಳ್ಳುತ್ತಾನೆ. ಬಸವನನ್ನು ಅಪ್ಪಿಕೊಳ್ಳುತ್ತಾನೆ. ಅಷ್ಟರಲ್ಲಿ ಜಗದೇವ ಬರುತ್ತಾನೆ. ಸಂಗಮನಾಥನಲ್ಲಿ ತಾನು ಮಾಡಿದ ತಪ್ಪಿಗಾಗಿ, ಶಿವದ್ರೋಹವೆಸಗಿದ ಬಿಜ್ಜಳನನ್ನು ಸಂಹರಿಸಬೇಕಾಯಿತು ಎಂದು ನಿವೇದಿಸಿಕೊಳ್ಳುತ್ತಾನೆ. ಆದರೂ ನನ್ನ ಪಾಪದ ಫಲವಿನ್ನೂ ಪೂರ್ಣ ನಾಶವಾಗಿಲ್ಲ. ನನ್ನ ಪ್ರಾಣವನ್ನು ನಗೆ ಅರ್ಪಿಸಿದಾಗಲೇ ನನಗೆ ಮುಕ್ತಿ ಎಂದು ಹತ್ಯೆಗೆ ಪ್ರಯತ್ನಿಸುತ್ತಾನೆ. ಸಂಗಮನಾಥ ಅದಕ್ಕೆ ಅವಕಾಶವನ್ನು ಕೊಡದೆ, ಅವನಿಗೆ ಗಣಪದ ಕೊಡುತ್ತಾನೆ. ಇಲ್ಲಿಗೆ ನಾಟಕ ಕೊನೆಗೊಳ್ಳುತ್ತದೆ.

೪. ಭಕ್ತಿಭಂಡಾರಿ ಬಸವಣ್ಣನವರು : ಈ ನಾಟಕವನ್ನು ಬರೆದವರು ಯಾರೆಂದು ನಮಗೆ ಗೊತ್ತಾಗುವುದಿಲ್ಲ. ಈತನು " ಪುರ ಅಥಣಿಯ ಶಿವಯೋಗಿ ಗುರುವರಾ/ ಚಾರು ಭರ್ಜರಾ ನಿಜಸೌಖ್ಯಕರಾ" ಎಂದು ಕೊನೆಯ ಮಂಗಳದ ಹಾಡಿನಲ್ಲಿ ಅಥಣಿಯ ಶಿವಯೋಗಿಗಳನ್ನು ನೆನಿಸುತ್ತಾನೆ. ಹೀಗಾಗಿ ಈತನು ಬೆಳಗಾಂವ ಜಿಲ್ಲೆಗೆ ಸೇರಿದವನಾಗಿರಬೇಕು. ಅಥಣಿ ಶಿವಯೋಗಿಗಳ ನಂತರ ಆಗಿಹೋದವ. ಆದುದರಿಂದ ಬಹುಶಃ ೧೯೦೧ ರಿಂದ ೧೯೨೪ರ ಒಳಗಡೆ ಈ ನಾಟಕವನ್ನು ಬರೆದಿರಬಹುದೆಂದು ಊಹಿಸಬಹುದಾಗಿದೆ. ಈ ನಾಟಕದ ಹಸ್ತಪ್ರತಿಯನ್ನು ಗಮನಿಸಿದರೆ ಇಲ್ಲಿಯ ಅಕ್ಷರಗಳು ಈ ಅವಧಿಗೆ ಹೊಂದಿಕೊಳ್ಳುತ್ತವೆ.

ಕೈಲಾಸದಲ್ಲಿ ಪಾರ್ವತಿ ಪರಮೇಶ್ವರ ಭೃಂಗೀಶ ಲೋಕಸಂಚಾರಿಯಾದ ನಾರದ ಇದ್ದಾರೆ. ಎಲ್ಲರ ನಡುವೆ ಸಂಭಾಷಣೆ ನಡೆಯುತ್ತದೆ. ನಾರದ ಮರ್ತ್ಯಲೋಕದ ಸ್ಥಿತಿಗತಿಗಳನ್ನು ಪರಮೇಶ್ವರನ ಎದುರಿಗೆ ವಿವರಿಸುತ್ತಾನೆ. ತಮ್ಮ ತಮ್ಮಷ್ಟಕ್ಕೆ ತಾವೇ ಘನತೆಯಲ್ಲಿರುವವರು ಕೆಲವರು, ಇನ್ನು ಕೆಲವರು ಶೈವಾಚಾರ ಸಂಪನ್ನರು, ಲೋಕಲೌಕಿಕ ಭೋಗಿಗಳು. ಎಲ್ಲಾ ತುಂಬಿಹೋಗಿದ್ದಾರೆ. ಆದರೆ ಅವರಿಗೆಲ್ಲ ಭಕ್ತಿಮಾರ್ಗದ ರಹಸ್ಯ ತಿಳಿದಿಲ್ಲ. ಅದನ್ನು ಪೂರೈಸಲು ಅನುಗ್ರಹಿಸಬೇಕೆಂದು ನಾರದ ಬೇಡಿಕೊಳ್ಳುತ್ತಾನೆ. ನಂದಿ ಪರಮೇಶ್ವರರಲ್ಲಿ ಭಿನ್ನತೆ ಇಲ್ಲ ಎಂಬ ಚರ್ಚೆ ಆಗುತ್ತದೆ. ಪಾರ್ವತಿ ಇದನ್ನೆಲ್ಲ ಕೇಳುತ್ತಾಳೆ.

ಮಾದಲಾಂಬಿಕೆಗೆ ಪ್ರಸವವಾಗುತ್ತದೆ. ಶಿವ ಪಾರ್ವತಿಯರೇ ಬಂದು ಮಗುವಿಗೆ ಲಿಂಗಧಾರಣ ಮಾಡುತ್ತಾರೆ. ಈ ವರ್ಣನೆ ಸಂಪೂರ್ಣ ಹರಿಹರನ ರಗಳೆಯ ಗದ್ಯಾನುವಾದದಂತೇ ಬರುತ್ತದೆ. ಮಗುವಿಗೆ ನಾಮಕರಣ ಆಗುತ್ತದೆ. ಜ್ಞಾನಿಯಾಗಿ ಭಕ್ತನಾಗಿ ಪರಿಶುದ್ಧ ಭಕ್ತಿಯ ಕಳೆಯಾಗಿ ಜಾಣನಾಗಿ ಸಕಲವಿದ್ಯಾಪಾರಂಗತನಾಗಿ ಬೆಳೆಯುತ್ತಿರುವ ಬಸವನ ತೇಜಸ್ಸು ಎಲ್ಲೆಡೆ ಹಬ್ಬಿ ಹರಡುತ್ತಿದೆ. ಅಂಥದರಲ್ಲಿ ಒಂದು ಘಟನೆ ನಡೆಯುತ್ತದೆ. ಬಸವ ಒಂದು ಕುಟುಂಬದ ಸದಸ್ಯನಲ್ಲ ಅವನು ವಿಶ್ವಕುಟುಂಬಿ, ವಿಶ್ವಮಾನವೀಯತೆಯ ಹರಿಕಾರ ಎಂಬುದನ್ನು ತೋರಿಸುವ ಉದ್ದೇಶ ಕೂಡಲ ಸಂಗನದು. ಅದನ್ನು ದಿಟ ಮಾಡುವುದಕ್ಕಾಗಿ ಮುಂಜಿವೆಯ ಪ್ರಸಂಗನ್ನು ಇಲ್ಲಿ ತರಲಾಗಿದೆ. ಪ್ರಸಂಗ ಎಳೆಯ ಬಸವನ ಪ್ರಬುದ್ಧ ಚಿಂತನೆಯ ಪ್ರತಿರೂಪವಾಗಿದೆ.

ತಂದೆ ಮಗನ ನಡುವೆ ಮುಂಜಿವೆಗಾಗಿ ದೀರ್ಘ ಚರ್ಚೆ ಆಗುತ್ತದೆ. ಬಸವ ಷಟ್‌ಸ್ಥಲ ಅಷ್ಟಾವರಣಗಳ ಮಹತ್ವದ ಬಗ್ಗೆ ಪ್ರಸ್ತಾಪಿಸುತ್ತಾನೆ. ತಂದೆ ಮಾದರಸ ತಮ್ಮ ಕುಲದ ಬೇರಿಗೆ ಗುದ್ದಲಿಯಿಕ್ಕಿದಂತೆ ಎಂದೂ ವಿಪ್ರರು ಕೇಳಿದರೆ ಊರಿಂದ ಹೊರಹಾಕುತ್ತಾರೆಂದೂ ಹೇಳುತ್ತಾನೆ. ಹಾರುವ ಕುಲಕ್ಕೆ ಕಳಂಕ ತಂದೆ, ನೀನು ಕುಲಕಂಟಕನೆಂದು ಬಸವೇಶ್ವರನನ್ನು ಬೈಯುತ್ತಾನೆ. ನಿನ್ನ ಭಕ್ತಿಯಲ್ಲಿ ನೀನಿರು ಹೋಗೆಂದೂ ಹೇಳುತ್ತಾನೆ. ಅದಕ್ಕೆ ಬಸವ ಹೋಗಿಯೇ ತೀರುವುದಾಗಿಯೂ ಹೇಳುತ್ತಾನೆ. ಬಸವಣ್ಣ ಇನ್ನು ತನಗೆ ಈಶ ಭಕ್ತರೇ ತಾಯಿತಂದೆಗಳೆಂದು ನಿರ್ಧರಿಸುತ್ತಾನೆ. ಅವರ ಕರ್ಮದಾಚಾರ ಅವರಿಗೆ, ತನ್ನ ಧರ್ಮದಾಚಾರ ತನಗೆ ಎಂದು ನಿಷ್ಠುರವಾಗಿ ಬಸವಣ್ಣ ಹೇಳುತ್ತಾನೆ. ಕೂಡಲ ಸಂಗಮದತ್ತ ಪ್ರಯಾಣ ಬೆಳೆಸುತ್ತಾರೆ.

ಸಂಗಮೇಶ್ವರನ ಸನ್ನಿಧಿಯಲ್ಲಿ ಗದ್ಗದಿತರಾಗಿ ನಿಲ್ಲುತ್ತಾರೆ. ರಕ್ಷಿಸು ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ. ಮಗ ಬಸವನನ್ನು ನೋಡಿ ಸಂಗಮನಾಥನು ಸಂಭ್ರಮಿಸುತ್ತಾನೆ. ಲಿಂಗದ ಹಿಂದೆ ಪ್ರಕಟವಾಗಿ ಬಸವಣ್ಣನಗೆ ನೀತಿಯ ಉಪದೇಶ ಮಾಡುತ್ತಾನೆ. ನಿನಗೆ ಯಾವ ಚಿಂತೆ ಬೇಡ ಎಂದು ಸಮಾಧಾನ ಪಡಿಸುತ್ತಾನೆ. ಹೊಸ ಪುಷ್ಪ, ತಿಳಿಯಾದ ಶುದ್ಧ ನೀರನ್ನು ತಂದು ಓಜೆಯಿಂದ ಪೂಜಿಸಿ, ಪ್ರಸಾದ ಕಾಯನಾಗಿರಲು ಹರಸುತ್ತಾನೆ. ಈ ಪ್ರಸಂಗ ಇಡಿಯಾಗಿಯೇ ಹರಿಹರನ ಬಸವರಾಜ ದೇವರ ರಗಳೆಯ ಪ್ರತಿಬಿಂಬವಾಗಿ ಕಾಣಿಸುತ್ತದೆ.

ಇಲ್ಲಿ ಒಮ್ಮೆಲೇ ನಾಟಕಕಾರ ಬಲದೇವ ಮಂತ್ರಿ ತೀರಿಹೋದ ಸಂಗತಿಯನ್ನು ಪ್ರಸ್ತಾಪಿಸುತ್ತಾನೆ. ತೆರವಾದ ಆ ಸ್ಥಾನಕ್ಕೆ ಅಡಿಗೆ ಭಟ್ಟನಿಂದ ಹಿಡಿದುಕೊಂಡು ಮಂಚಣ್ಣನವರೆಗೂ ಪೈಪೋಟಿ ನಡೆಯುತ್ತದೆ. ಬಿಜ್ಜಳನು ಬಸವೇಶ್ವರರನ್ನು

ಕಪ್ಪಡಿಯಿಂದ ಕರೆಸುತ್ತಾನೆ. ಓಲಗ ನಡೆದಾಗ ಯಾರಿಗೂ ತಿಳಿಯದ ಲಿಪಿಯುಳ್ಳ ಓಲೆ ಬೀಳುತ್ತದೆ. ಅದು ಬಸವಣ್ಣನವರಿಗೆ ಮಾತ್ರ ಓದಲು ಸಾಧ್ಯವಾಗುತ್ತದೆ. ಸಿಂಹಾಸನದ ಕೆಳಗೆ ಇರುವ ಅಪಾರ ನಿಧಿಯನ್ನು ಬಸವಣ್ಣನವರು ಶೋಧಿಸಿ ಕೊಡುತ್ತಾರೆ. ಹೀಗಾಗಿ ಅವರಿಗೆ ಮಂತ್ರಿಪದವಿ ದೊರೆಯುತ್ತದೆ.

ನಂತರ ಕಳಿಂಗದೇಶದ ಮಹಾದೇವಶೆಟ್ಟಿ ಕಲ್ಯಾಣಕ್ಕೆ ಬಂದ ಪ್ರಸಂಗ, ಮಂಚಣ್ಣ ಮತ್ತು ಭಟರು ಕೂಡಿ ಬಸವಣ್ಣನವರ ಪ್ರಸಿದ್ಧಿಯನ್ನು ಸಹಿಸದೆ ಬಿಜ್ಜಳನ ಮುಂದೆ ನಿಂದೆಯಾಡುವ ಪ್ರಸಂಗ, ನಂತರ ಕಿನ್ನರಯ್ಯನ ಪ್ರಸಂಗ, ಹರಳಯ್ಯ ಮತ್ತು ಮಧುವರಸರ ಪ್ರಸಂಗವನ್ನು ತಂದು, ಬಿಜ್ಜಳ ಈ ಇಬ್ಬರಿಗೆ ಶಿಕ್ಷೆಕೊಡುವ, ಬಸವಣ್ಣನವರು ಕಲ್ಯಾಣಬಿಟ್ಟು ಹೊರಡುವ ಪ್ರಸಂಗ, ಬಿಜ್ಜಳನ ವಧೆಯಾಗುವುದು, ಬಿಜ್ಜಳನ ಮಗ ಬಸವಣ್ಣನವರಿಗೆ ತಡೆದು ಕಲ್ಯಾಣದಲ್ಲಿಯೇ ಇರಲು ವಿನಂತಿಸಿಕೊಳ್ಳುವುದು, ಕೊನೆಯಲ್ಲಿ ಬಸಣ್ಣನವರು ಕೂಡಲ ಸಂಗಮನಾಥನಲ್ಲಿ ಬಂದು ಐಕ್ಯವಾಗುವ ಪ್ರಸಂಗಗಳನ್ನು ಸುಂದರವಾಗಿ ಚಿತ್ರಿಸಲಾಗಿದೆ.

೫. ಸಿದ್ಧರಾಮೇಶ್ವರ : ಸಿದ್ಧರಾಮೇಶ್ವರ ನಾಟಕವನ್ನು ಶ್ರೀನೃಪ ಶಾಲಿವಾಹನ ಶಕ ೧೮೪೬ ರಕ್ತಾಕ್ಷಿ ನಾಮ ಸಂವತ್ಸರದಲ್ಲಿ ಶುದ್ಧಪ್ರತಿ ಬರೆಯಲಾಗಿದೆ. ಅಂದರೆ ಕ್ರಿ.ಶ. ೧೯೨೪ನೇ ವರ್ಷದಲ್ಲಿ ಈ ನಾಟಕದ ಶುದ್ಧಪ್ರತಿ ರಚನೆಯಾಗಿದೆ. ಇದನ್ನು ಪ್ರತಿ ಮಾಡಿದವನು ರಟ್ಕಲ್ಲಿನ ಮಠಪತಿ ಬಸಯ್ಯನವರ ಮಗನಾದ ರುದ್ರಯ್ಯನವರು. ಇದರ ರಚನೆಕಾರ ಯಾರೆಂದು ತಿಳಿಯುವುದಿಲ್ಲ. ಸಿದ್ಧರಾಮೇಶ್ವರ ಶಿವನ ಅವತಾರವೆಂದು ಭಾವಿಸಿದ ಕಾರಣ ಕರ್ತೃವಿಗೆ ನಾಟಕದ ನಾಯಕ ಸಿದ್ಧರಾಮನೇ ಆಗಿರುವುದು ಔಚಿತ್ಯಪೂರ್ಣವಾಗಿದೆ. ನಾಯಕನ ವ್ಯಕ್ತಿತ್ವಕ್ಕೆ ಕುಂದು ಬರದ ರೀತಿಯಲ್ಲಿ ಆ ಪಾತ್ರವನ್ನು ನಿರ್ವಹಿಸಿಕೊಂಡು ಹೋಗಲಾಗಿದೆ. ಮುಗ್ಧನಾದ ಅಷ್ಟೆ ಗಂಭೀರವಾದ ವ್ಯಕ್ತಿತ್ವದ ಜ್ಞಾನಿ-ಶಿವಯೋಗಿ, ಮಲ್ಲಿಕಾರ್ಜುನನನ್ನು ಸಾಕ್ಷಾತ್ಕರಿಸಿಕೊಂಡ ಮಹಿಮನನ್ನು ಪರಿಚಯಿಸಿ ಕೊಡುವಲ್ಲಿ ಕರ್ತೃ ಮೈಯೆಲ್ಲ ಕಣ್ಣಾಗಿ ವಸ್ತು ಮತ್ತು ಭಾಷೆಯನ್ನು ದುಡಿಸಿಕೊಂಡಿದ್ದಾನೆ.

ಮೊದಲನೆಯ, ಎರಡನೆಯ ಅಂಕದಲ್ಲಿ ಶಿವನ ಓಲಗ. ಅಲ್ಲಿ ಪಾರ್ವತಿ, ಗಂಧರ್ವ, ಪ್ರಮಥರೆಲ್ಲ ಇದ್ದಾರೆ. ಭೃಂಗಿಯ ನಾಟ್ಯವನ್ನು ನೋಡಿ ಗಂಧರ್ವರು ಅವನ ಬಹಿರಂಗದ ರೂಪದ ಬಣ್ಣನೆಯನ್ನು ವ್ಯಂಗ್ಯವಾಗಿ ಮಾಡುತ್ತಾರೆ. ಆಗ ಸಹಜವಾಗಿ ಕೋಪಿಸಿಕೊಳ್ಳಬೇಕಾದ ಭೃಂಗಿ ವಿನಯದಿಂದ ನಕ್ಕವರ ಅಜ್ಞಾನದ ಪರಿಚಯವನ್ನು ಮಾಡಿಕೊಡುತ್ತಾನೆ. ಮರ್ತ್ಯದಲ್ಲಿ ಅಜ್ಞಾನ ರೂಪದ ನರಜನ್ಮವಾಗಲಿ ಎಂದು ಶಾಪ ಹಾಕುವಲ್ಲಿಯವರೆಗೆ ವಾದ ಬೆಳೆಯುತ್ತದೆ. ಗಂಧರ್ವನೂ ಅಷ್ಟೇ ಕಠೋರವಾಗಿ ನುಡಿಯುತ್ತಾನೆ. ಇಬ್ಬರಲ್ಲಿ ಶಾಪದ ಬಗ್ಗೆ ಚರ್ಚೆ ಆಗುತ್ತದೆ.

ಬಗೆಹರಿಯದೇ ಹೋದಾಗ ಈಶ್ವರನ ಮೇಲೆ ಭಾರ ಹಾಕಿ, ತೀರ್ಮಾನವನ್ನು ಅವನ ಮೇಲೇ ಬಿಡುತ್ತಾರೆ. ಭೃಂಗಿಯಲ್ಲಿ ಕ್ಷಮೆ ಬೇಡಿದರೆ ಅವನು ನಿಶ್ಶಾಪ ಕೊಡಬಹುದು ಎಂದು ಶಿವನೇ ಗಂಧರ್ವನಿಗೆ ಹೇಳಿ ಸಮಾಧಾನಪಡಿಸುತ್ತಾನೆ. ಆದರೆ ಭೃಂಗಿ ಶಿವನೇ ಪರಿಹರಿಸುವನೆಂದು ಹೇಳುತ್ತಾನೆ. ಈ ನಡುವೆ ಆ ಭೃಂಗಿಯು ಹೇಳಿದ 'ಶೀತೋಷ್ಣ, ಮೃದು–ಕಠಿಣ, ಹಸಿವು–ತೃಷೆ, ನಿದ್ರೆ–ಆಲಸ್ಯ ಇಲ್ಲದ ಕುಮಾರ ನಿಮ್ಮ ಉದರದಲ್ಲಿ ಹುಟ್ಟಿದಂದಿಗೆ, ನಿಶ್ಶಾಪವಾಗುವುದು' ಎಂಬ ಮಾತನ್ನು ನೆನಪಿಸಿಕೊಳ್ಳುತ್ತಾರೆ. ಗಂಧರ್ವರು ಸೊನ್ನಲಾಪುರದ ಕುಡಒಕ್ಕಲಿಗರ ಮನೆಯಲ್ಲಿ ಜನಿಸಲು ಆದೇಶವಾಗುತ್ತದೆ.

ಮರ್ತ್ಯದಲ್ಲೇನೋ ಜನನ ಆಗುತ್ತದೆ. ಬೆಳೆಯುತ್ತಾರೆ. ಮದುವೆ ಆಗುತ್ತದೆ. ಆದರೆ ಅರವತ್ತು ವರ್ಷಗಳವರೆಗೆ ಸಂತಾನ ಭಾಗ್ಯವಿರುವುದಿಲ್ಲ. ಒಂದು ಸಾರೆ ಶ್ರೀ ರೇವಣಸಿದ್ಧೇಶ್ವರರು ಶಿಷ್ಯರೊಂದಿಗೆ ಸೊನ್ನಲಾಪುರಕ್ಕೆ ಬರುತ್ತಾರೆ. ಆಗ ಸೊನ್ನಲಾಪುರದ ಸ್ಥಿತಿ ಹೇಗಿತ್ತೆಂದರೆ ಅಲ್ಲಿ ಒಂದೂ ಶಿವಾಲಯ, ಕರುಣೆ ಉಳ್ಳ ಭಕ್ತರೇ ಇರಲಿಲ್ಲವಂತೆ. ಇಡೀ ಪ್ರದೇಶ ಭವಿತನದಿಂದ ಕೂಡಿತ್ತಂತೆ. ಅಂತಹದರಲ್ಲಿ ಶ್ರೀ ರೇವಣಸಿದ್ಧರು ಸಾಷ್ಟಾಂಗ ನಮಸ್ಕಾರ ಮಾಡಿದರಂತೆ. ಶಿಷ್ಯರಿಗೂ ಆಶ್ಚರ್ಯ. ಯಾರಿಗೆ ಸಾಷ್ಟಾಂಗ ಎಂದಾಗ ಮುಂದೆ ಘಟಿಸುವ ಸುಮುಹೂರ್ತದ ಸುಳುಹನ್ನು ಕೊಡುತ್ತಾರೆ. ಈ ಊರಿನ ಮುದ್ದುಗೌಡ, ಸುಗ್ಗಲೆಯರ ಮಗನಾಗಿ ಶಿವಯೋಗಿಯೋರ್ವ ಜನಿಸುತ್ತಾನೆ. ಅವನಿಂದಾಗಿ ಸೊನ್ನಲಾಪುರ ಅವಿಮುಕ್ತ ಕ್ಷೇತ್ರವಾಗುತ್ತದೆ ಎಂದು ಹೇಳುತ್ತಾರೆ. ಅವರ ಮನೆಗೆ ಬಂದು ಸುಗ್ಗಲದೇವಿಯರ ಗರ್ಭಕ್ಕೆ ನಮಿಸುತ್ತಾನೆ. ಆಗ ಉಳಿದ ಹೆಣ್ಣುಮಕ್ಕಳು ಈ ಸಾಧುವನ್ನು ಅನುಮಾನದಿಂದ ನೋಡುತ್ತಾರೆ. ಆಗ ಶಿವಯೋಗಿಯ ತಾಯಿ ಆಗುವ ಭಾಗ್ಯ ಈ ಮಾತೋಶ್ರೀಗೆ ಇರುವುದರಿಂದ ನಮಿಸಿದೆ ಎಂದು ಸಮರ್ಥಿಸಿಕೊಳ್ಳುತ್ತಾನೆ. ಆಗೆ ಮಗು ಹೇಗಿರುತ್ತದೆಂದು ಹೇಳಿ, ಧೈರ್ಯಗೆಡದೆ ಅವನಿಗೆ ಮರೆಯದೆ ಸಿದ್ಧರಾಮನೆಂದು ಹೆಸರಿಡಲೇಬೇಕೆಂದು ಹರಸಿ ಹೋಗುತ್ತಾನೆ.

ಶ್ರೀ ರೇವಣಸಿದ್ಧರ ಮಾತು ದಿಟವಾಗುತ್ತದೆ. ಆದರೆ ತಾಯಿ–ತಂದೆಯರು ರೇವಣಸಿದ್ಧರ ಮಾತನ್ನು, ಹರಕೆಯನ್ನು ಮರೆತು ಹುಟ್ಟಿದ ಮಗುವಿಗೆ ಧೂಳಿಮಹಾಕಾಳನೆಂದು ಮನೆದೇವರ ಹೆಸರನ್ನಿಡುತ್ತಾರೆ. ಈ ಹೆಸರಿನಿಂದ ಕೂಗಿದರೆ ಮಗುವಿನ ಪ್ರತಿಕ್ರಿಯೆ ಏನೊಂದೂ ಇಲ್ಲದುದು ತಾಯಿ–ತಂದೆ ಮನಕ್ಕೆ ಆತಂಕ ತಂದಿರುತ್ತದೆ.

ಈ ಮುಂಚೆ ಪಾರ್ವತಿ ಪರಮೇಶ್ವರರೂ ಸಾಕಷ್ಟು ಚರ್ಚಿಸುತ್ತಾರೆ. ಶಿವ ತನ್ನೆಲ್ಲ ಸಾಮರ್ಥ್ಯವನ್ನು ತುಂಬಿ ಒಂದು ಗೊಂಬಿ ಮಾಡಿ ತಾಯಿ ಸುಗ್ಗಲೆಯ

ಮಗ್ಗಲು ಮಲಗಿಸಿ ಬಂದಿರುತ್ತಾನೆ. ಪಾರ್ವತಿಗೆ ಹೋಗಿ ಸ್ತನಪಾನ ಮಾಡಿಸಿ, ಅರಿಯದಂತೆ ಬಂದುಬಿಡು ಎಂದು ಹೇಳಿರುತ್ತಾನೆ. ಪಾರ್ವತಿ ಲಕ್ಷ್ಮಿಯೊಂದಿಗೆ ಹೋಗಿ ಪರಶಿವನು ಹೇಳಿದಂತೆಯೇ ಮಾಡುತ್ತಾಳೆ. ಹೀಗೆ ತಾಯಿಯ ಗರ್ಭಕ್ಕೆ ಕಿಂಚಿತ್ತೂ ಆಯಾಸ ಕೊಡದೆ ನಿತ್ಯತೃಪ್ತನು ಜನಿಸಿದ್ದು ಎಲ್ಲರಲ್ಲೂ ವಿಸ್ಮಯವನ್ನು ಹುಟ್ಟಿಸಿರುತ್ತದೆ. ತಾಯಿ ಪಾರ್ವತಿಯೇನೋ ಸಿದ್ಧರಾಮನೆಂದು ಹೆಸರಿಟ್ಟು ಕರೆದರೆ, ಲೌಕಿಕ ತಾಯಿ ಧೂಳಿಮಹಾಕಾಳ ಎಂದು ಹೆಸರಿಡುತ್ತಾಳೆ. ಧೂಳಿಮಹಾಕಾಳ ಅಂತರ್ಯಾಮಿ ಆಗಿ ತಾನು ಬಂದು ಜನಿಸಿದ ಉದ್ದೇಶವನ್ನು ಮೌನವಾಗಿದ್ದುಕೊಂಡೇ ಪೂರೈಸಿಕೊಂಡಿದ್ದಾನೆ. ಜಗದ ಕಣ್ಣಿಗೆ ಮೂಕನಾಗಿ ಹುಚ್ಚನಾಗಿದ್ದೇ ಜಗತ್ತನ್ನು ಗೆದ್ದಿದ್ದಾನೆ.

ಮೂಕ ಮಗನನ್ನು ಶಾಲೆಗೆ ಹಾಕಿದರೂ ಏನೂ ಪ್ರಯೋಜನ ಆಗಲಿಲ್ಲ. ಕೊನೆಗೆ ಹೆತ್ತವರು ದನಕಾಯಲು ಕಳಿಸುತ್ತಾರೆ. ಅಲ್ಲಿಯೂ ದನಕಾಯಲು ಮಾಯದ ಧೂಳಿಮಹಾಕಾಳನನ್ನು ಸೃಷ್ಟಿಸಿ, ಉಳಿದ ಹುಡುಗರೂ ದೇವ ಭಜನೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರಿಸುತ್ತಾನೆ. ಜ್ಯಾಮಲದೇವಿಯೂ ಸಿದ್ಧರಾಮನನ್ನು ಮಗನೆಂದೇ ಪ್ರೀತಿಸುತ್ತಿರುತ್ತಾಳೆ. ಅವನಿಗೆ ಶಿವಸಿದ್ಧರಾಮನೆಂದು ಕರೆದು, ದೇಹದಲ್ಲಿ ನವಚೈತನ್ಯವನ್ನುಂಟು ಮಾಡುತ್ತಾಳೆ. ಆಗ ಸಿದ್ಧರಾಮ ಬಾಯ್ದೆರೆದು ಮಾತನಾಡುತ್ತಾನೆ. ಲೋಕ, ಲೋಕದ ಜನರ ಬಗ್ಗೆ ಇದ್ದ ತನ್ನ ಭಾವನೆಗಳನ್ನು ಆ ತಾಯಿಯೊಂದಿಗೆ ಹಂಚಿಕೊಳ್ಳುತ್ತಾನೆ.

ಮೂರು ಮತ್ತು ನಾಲ್ಕನೆಯ ಅಂಕಗಳಲ್ಲಿ ಶಿವನು ಸಿದ್ಧರಾಮನನ್ನು ಪರೀಕ್ಷಿಸಬೇಕೆಂಬ ಉತ್ಸುಕತೆಯಿಂದ ಬರುತ್ತಾನೆ. ಸಿದ್ಧರಾಮನ ತಾಯಿ–ತಂದೆಯರು ಅವನನ್ನು ಪ್ರೀತಿಯಿಂದಲೇ ನೋಡಿಕೊಳ್ಳುತ್ತಾರೆ. ತಾಯಿ ಸುಗ್ಗಲೆಯಂತೂ ಮಗನಿಗಾಗಿ ಮಮತೆಯ ಮರುಕವನ್ನು ತೋರುತ್ತಲೇ ಇರುತ್ತಾಳೆ. ಒಂದು ದಿನ ಸಿದ್ಧರಾಮನನ್ನು ನವಣೆಯ ಹೊಲಕ್ಕೆ ಕಳಿಸುತ್ತಾರೆ. ಇದು ಅವನು ಶಿವಯೋಗಿ ಆಗಲು ನಡೆದ ಪ್ರಮುಖ ಘಟನೆ. ತನ್ನನ್ನು ಸಂಪೂರ್ಣ ದೇವನಿಗೆ ಅರ್ಪಿಸಿಕೊಳ್ಳುವ ಪಕ್ವ ಕಾಲವೆಂದೇ ಹೇಳಬೇಕು. ಸಿದ್ಧರಾಮ ನವಣೆಯ ಹೊಲದಲ್ಲಿ ದಯಾಮೂರ್ತಿ ಆಗಿ ಕಾಣುತ್ತಾನೆ. ಪ್ರಕೃತಿಯ ಜೀವಜಂತುಗಳಿಗೆ ಕಾಳು ತಿನಿಸಿ ನೀರು ಕುಡಿಸುತ್ತಾನೆ. ಎಂದಿಲ್ಲದ ಸಂಭ್ರಮ ಅವನಿಗೆ ಆಗುತ್ತದೆ. ಶಿವ ವೃದ್ಧ ಜಂಗಮನಾಗಿ ಬಂದು ಸಿದ್ಧರಾಮನಿಂದ ಉಪಚರಿಸಿಕೊಳ್ಳುತ್ತಾನೆ. ಹಸಿವು ಬಾಯಾರಿಕೆಯನ್ನು ಹಿಂಗಿಸುತ್ತಾನೆ. ಸೀತನಿ ತಿಂದು ತೃಪ್ತನಾದ ಶಿವ ತನ್ನ ಅಂಗ ತೃಪ್ತವಾಗದೆ ಹುಳಿಬಾನ ಮೊಸರು ಬೇಕು ಎಂದು ಕೇಳುತ್ತಾನೆ. ಶಿವನನ್ನು ಯಾರೂ ಮುಟ್ಟಬಾರದೆಂದು ಮಂಡಲ ಬರೆಯುತ್ತಾನೆ. ಓಡುತ್ತಾ ಮನೆಗೆ ಹೋಗಿ ತಾಯಿಗೆ ಹುಳಿಬಾನ ಮೊಸರು

ಕೇಳಿದಾಗ ತಾಯಿಗೂ ಅಷ್ಟೇ ಸಂತೋಷ. ಮಗ ಅವ್ವಾ ಎಂದು ಕರೆದು ಊಟ ಬೇಡಿದನಲ್ಲಾ ಎಂದು ಅಡುಗೆ ಮಾಡಿಕೊಡುತ್ತಾಳೆ. ಹೊಲಕ್ಕೆ ಓಡಿ ಬರುವುದರಲ್ಲಿ ಶಿವ ಮಾಯಾವಾಗಿರುತ್ತಾನೆ. ಆತಂಕದಿಂದ ಸಿದ್ಧರಾಮ ಹೊರಳಾಡಿ ಗೋಗರೆದು, ಮಲ್ಲಯ್ಯನಲ್ಲಿಗೆ ಹೊರಟ ಜನರೊಂದಿಗೆ ತಾನೂ ಪ್ರಯಾಣ ಬೆಳೆಸುತ್ತಾನೆ. ತಾಯಿತಂದೆಗಳಿಗೆ ಮಗ ಬರಲಿಲ್ಲವೆಂಬ ಆತಂಕ. ಶಿವನೇ ಸಾಂತ್ವನ ಹೇಳುತ್ತಾನೆ. ಸಿದ್ಧರಾಮ ಪರ್ವತ ಮಲ್ಲಿಕಾರ್ಜುನನ ದರ್ಶನಕ್ಕೆ ಹೋದ ಸಂಗತಿ ತಿಳಿಸಿ ಮರೆ ಆಗುತ್ತಾನೆ.

ಬೊಮ್ಮಣ ಬಂದು ಮುದ್ದುಗೌಡ, ಸುಗ್ಗಲಮ್ಮನಿಗೆ ಸಾಂತ್ವನ ಹೇಳಿ ತಾನೇ ಸಹೋದರನನ್ನು ಕರೆತರಲು ಹೋಗುತ್ತಾನೆ. ಅತ್ತ ಸಿದ್ಧರಾಮ ತನಗೆ ದರ್ಶನ ಕೊಟ್ಟ ಮಲ್ಲಿಕಾರ್ಜುನನ್ನು ಮತ್ತೆ ಪ್ರತ್ಯಕ್ಷ ಕಾಣುತ್ತಾನೆ. ಎಲ್ಲರಿಗೂ ಆ ದೇವನ ದರ್ಶನ ಮಾಡಿಸಿ ಧನ್ಯರನ್ನಾಗಿಸುತ್ತಾನೆ. ಮರಳಿ ಸೊನ್ನಲಗಿಗೆ ಹೋಗಿ, ಆ ಕ್ಷೇತ್ರವನ್ನು ಪುಣ್ಯ ಕ್ಷೇತ್ರವನ್ನಾಗಿ ಮಾಡಲು ಹರಸುತ್ತಾನೆ. ಸಕಲ ಸಂಪದವನ್ನು ಜನರಿಗಿತ್ತು ಸಲಹು, ಗತಪ್ರಾಣವಾದವರಿಗೆ ಪ್ರಾಣ ಪ್ರತಿಷ್ಠೆ ಮಾಡು ಎಂದು ಶಿವನು ಆಶೀರ್ವದಿಸುತ್ತಾನೆ.

ಆ ಹೊತ್ತಿಗೆ ಬೊಮ್ಮಣ್ಣ ಬರುತ್ತಾನೆ. ಪುರಕ್ಕೆ ಮರಳಿ ಕರೆದೊಯ್ಯುತ್ತಾನೆ. ತಾಯಿತಂದೆಯರ ಹೋದ ಜೀವ ಬಂದಂತಾಗುತ್ತದೆ. ಆದರೆ ಸಂಸಾರ ಮೋಹದ ಹೆತ್ತವರ ಸ್ವಭಾವಕ್ಕೂ ತನಗೂ ಹೊಂದಾಣಿಕೆ ಆಗದು ಎಂದು ಯೋಚಿಸುತ್ತಿರುವಾಗಲೇ, ಅತ್ತ ಶಿವನು ಅರಿತು, ಚ್ಯಾಮಲದೇವಿಯ ಕನಸಿನಲ್ಲಿ ಬಂದು ಸಿದ್ಧರಾಮನಿಗೆ ಎರಡು ಕೋಶ ಭೂಮಿಯನ್ನು ದಾನವಾಗಿತ್ತು, ಅವನಿಗೆ ಬೇಕಾದ ಎಲ್ಲ ಅನುಕೂಲತೆ ಒದಗಿಸಿಕೊಡಲು ಆಜ್ಞೆ ಮಾಡುತ್ತಾನೆ. ಚ್ಯಾಮಲದೇವಿ ಹಾಗೆ ಮಾಡುತ್ತಾಳೆ. ಸಿದ್ಧರಾಮ ಸಂತೋಷ ಪಡುತ್ತಾನೆ. ಈ ಪ್ರಸಂಗ ಸಿದ್ಧರಾಮನ ಬದುಕಿನ ಮತ್ತೊಂದು ತಿರುವಿಗೆ ಕಾರಣ ಆಗುತ್ತದೆ. ಆ ಭೂಮಿ ಅಗಿಯುವಾಗ ಅಪಾರ ನಿಧಿ ದೊರೆತು ಅವನ ಸಮಾಜಕಲ್ಯಾಣ ಕಾರ್ಯಕ್ಕೆ ಬೆಂಬಲವಾಗುತ್ತದೆ. ಶ್ರೀಶೈಲದ ವಾತಾವರಣವನ್ನು ಸೊಲ್ಲಾಪುರದಲ್ಲಿ ನಿರ್ಮಿಸಿದ ತನ್ನ ಕರುಣೆಯ ಕಂದನಿಗೆ ಶಿವ ಹರಸುತ್ತಾನೆ.

ಇಲ್ಲಿಯೆ ಸಿದ್ಧರಾಮನ ಜೀವನದಲ್ಲಿ ಮತ್ತೊಂದು ಪರೀಕ್ಷೆ ನಡೆಯುತ್ತದೆ. ಅವನ ಮಾನಸಿಕ ಸ್ಥಿತಿಯನ್ನು ವಿಹ್ವಲಗೊಳಿಸುವ ಪ್ರಸಂಗವೆಂದು ಶಿವ ಭಾವಿಸಿ, ಅವನ ಸನ್ಯಾಸ ಜೀವನ ಕೆಡಿಸಲು ರಂಭೆಯನ್ನು ಕಳಿಸುತ್ತಾನೆ. ಅವಳ ಯಾವ ಮರಳು ಮಾಡುವ ಮಾತು, ಹಾವ ಭಾವಕ್ಕೆ ಸಿದ್ಧರಾಮ ದಾಸನಾಗುವುದಿಲ್ಲ.

ಅವನ ನಿಶ್ಚಲತೆಗೆ ಮಣಿದು ರಂಭೆ ಕಾಲ್ತೆಗೆಯುತ್ತಾಳೆ. ಶಿವನು ಭಕ್ತನ ನಿರ್ಧಾರಕ್ಕೆ ನಡುಗಿ ಹೋಗುತ್ತಾನೆ.

ಸಿದ್ಧರಾಮ ಸ್ಥಾವರ ಉಪಾಸನೆಯಿಂದ ಲಿಂಗೋಪಾಸನೆಯತ್ತ, ಲಿಂಗದೀಕ್ಷೆ ಪಡೆದು ನಿಜಭಕ್ತನಾಗುವತ್ತ ಬೇಕಾಗುವ ವಾತಾವರಣ ಇಲ್ಲಿ ನಿರ್ಮಾಣವಾಗುತ್ತದೆ. ಶಾಂತಾದೇವಿ ಅವಳ ಮಗಳು ಸುಶೀಲಾ. ಅವರ ಮನೆಗೆ ಬೊಮ್ಮಣ ಕುಟ್ಟಲು ಗೋದಿ ತಂದಿರುತ್ತಾನೆ. ತಂದ ಗೋದಿಯನ್ನು ಸಿದ್ಧರಾಮನ ಅಂಗದ ಮೇಲೆ ಲಿಂಗವಿಲ್ಲದ ಕಾರಣ, ಭವಿ ಕಳಿಸಿದ ಗೊದಿ ಕುಟ್ಟಲಾಗದು ಎಂದು ಹೇಳಿ, ತಿಪ್ಪೆಯ ಮೇಲೆ ಚಲ್ಲುತ್ತಾರೆ. ಸಿದ್ಧರಾಮ ಶಾಂತಾದೇವಿ ನಡುವೆ ವಾದ ವಿವಾದವಾಗುತ್ತದೆ. ಸಿದ್ಧರಾಮ ಕೋಪದಿಂದ ಶಾಂತಾದೇವಿ ಮನೆಗೆ ಬೆಂಕಿ ಬೀಳುವಂತೆ ಮಾಡಿದರೆ ಶಾಂತಾದೇವಿ ಬರೀ ಧೂಳೋದಕದಿಂದ ಅಗ್ನಿ ದಮನ ಮಾಡುತ್ತಾಳೆ. ಮೊದಲೇ ಆದ ಕರಾರಿನಂತೆ ಸಿದ್ಧರಾಮ ಇಷ್ಟಲಿಂಗವನ್ನು ಧರಿಸಬೇಕಾಗುತ್ತದೆ. ಆದರೂ ಶಿವನಿಂದ ತಾನೂ ಅಗ್ನಿನೇತ್ರ ತಂದು ಆಕೆಯನ್ನು ದಹಿಸಿ, ತನಗಾದ ಅವಮಾನದ ಸೇಡು ತೀರಿಸಿಕೊಳ್ಳುವೆ ಎಂದು ಸಿದ್ಧರಾಮ ಸಂಕಲ್ಪ ಮಾಡುತ್ತಾನೆ.

ಈಶ್ವರನ ಸನ್ನಿಧಿಗೆ ಸಿದ್ಧರಾಮ ಬರುತ್ತಾನೆ. ಆದರೆ ಪ್ರಮಥರು ಸಿದ್ಧರಾಮನನ್ನು ಲಿಂಗವಿಲ್ಲದ ಕಾರಣ ಒಳಗೆ ಬಿಡುವದಿಲ್ಲ. ಅಲ್ಲದೇ ಶಿವಭಕ್ತಳಾದ ಶಾಂತಾದೇವಿಯನ್ನು ಪರಿಪರಿಯಾಗಿ ನೋಯಿಸಿ, ಸಿದ್ಧರಾಮ ಅಪರಾಧಿಯಾಗಿರುವೆ, ಒಳಗೆ ಪ್ರವೇಶವಿಲ್ಲ ಎಂದು ನಿಷ್ಠುರವಾಗಿ ಹೇಳುತ್ತಾರೆ. ಈಶ್ವರನೂ ಹೀಗೆ ಹೇಳಿದಾಗ ಸಿದ್ಧರಾಮನಿಗೆ ದುಃಖವಾಗುತ್ತದೆ. ನೇರವಾಗಿ ಶಾಂತಾದೇವಿಯಲ್ಲಿಗೆ ಬಂದು ತಪ್ಪು ಒಪ್ಪಿಕೊಳ್ಳುತ್ತಾನೆ. ಶಾಂತಾದೇವಿ ಕಲ್ಯಾಣಕ್ಕೆ ಹೋಗಿ ಚನ್ನಬಸವೇಶ್ವರನಂದ ಇಷ್ಟಲಿಂಗ ದೀಕ್ಷೆ ಪಡೆ ಎಂದು ಹೇಳಿಕಳಿಸುತ್ತಾಳೆ.

ಸಿದ್ಧರಾಮ ಕಲ್ಯಾಣಕ್ಕೆ ಬಂದು ಬಸವಣ್ಣ, ಪ್ರಭುದೇವರು, ಮಡಿವಾಳ ಮಾಚಿದೇವಯ್ಯ ಪ್ರಮಥರು, ಚನ್ನಬಸವಣ್ಣನ ಜೊತೆಗೆ ಲಿಂಗದೀಕ್ಷೆ ಬಗ್ಗೆ ಸಾಕಷ್ಟು ಚರ್ಚೆ ನಡೆಸುತ್ತಾನೆ. ವಾದ ಮಂಡಿಸುತ್ತಾನೆ. ಕೊನೆಗೆ ಶರಣರ ಮಾತಿಗೆ ಒಪ್ಪಿಕೊಂಡು ಚನ್ನಬಸವಣ್ಣನಿಂದ ದೀಕ್ಷೆ ಪಡೆಯುತ್ತಾನೆ. ಮರಳಿ ಸೊನ್ನಲಾಪುರಕ್ಕೆ ಬಂದು ಮತ್ತೆ ತನ್ನ ಲೋಕಕಲ್ಯಾಣ ಕಾರ್ಯ ಮುಂದುವರೆಸುತ್ತಾನೆ.

ಈ ನಾಟಕದಲ್ಲಿ ಪ್ರಭುದೇವ ಸಿದ್ಧರಾಮ ಕಲ್ಯಾಣಕ್ಕೆ ಹೋಗಿ ಬಂದ ಮೇಲೆ ಸೊನ್ನಲಾಪುರಕ್ಕೆ ಬಂದಿರುವುದು ವಿಶೇಷ. ಮತ್ತೆ ಸಿದ್ಧರಾಮ ಪ್ರಭುದೇವರ ನಡುವೆ ಕರ್ಮಯೋಗದ ಚರ್ಚೆ ನಡೆಯುತ್ತದೆ. ಪ್ರಭುದೇವ ಸಿದ್ಧರಾಮನಿಗೆ ಗುಪ್ತಯೋಗವನ್ನು ಆಚರಿಸಲು ನಿರ್ದೇಶನ ಮಾಡುತ್ತಾನೆ. ಎಲ್ಲರಿಗೂ ಭಕ್ತಿಯ

ಸ್ವರೂಪವನ್ನು ಸಿದ್ಧರಾಮ ತಿಳಿಸಿಕೊಡುತ್ತಾನೆ. ಕೊನೆಗೆ ತಾನೂ ಲಿಂಗೈಕ್ಯನಾಗುವ ವಿಷಯ ತಿಳಿದಾಗ ಊರವರೆಲ್ಲ ವಿರೋಧಿಸುತ್ತಾರೆ. ಆಗ ಸಿದ್ಧರಾಮ ತಾನು ಯೋಗ ಮಂಟಪದಲ್ಲಿ ಗುಪ್ತವಾಗಿದ್ದು, ಸಮಯೋಚಿತವಾಗಿ ಬರುವ ಬರವಸೆ ಕೊಡುತ್ತಾನೆ. ಕಾಲಜ್ಞಾನಿಯಂತೆ ನುಡಿಯುತ್ತಾನೆ. ಭಜನೆಯೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಹೀಗೆ ನಾಟಕದ ಕರ್ತೃ ತನಗೆ ಬೇಕಾದಂತೆ ವಿಷಯಗಳನ್ನು ಪರಿವರ್ತಿಸಿಕೊಂಡಾಗಲೂ ಸಿದ್ಧರಾಮನ ಘನವ್ಯಕ್ತಿತ್ವಕ್ಕೆ ಕುಂದು ಬರದಂತೆ ಆ ಪಾತ್ರವನ್ನು ಸಾಕಾರಗೊಳಿಸಿದ್ದಾನೆ.

–ಸಂಪಾದಕರು

ಪರಿವಿಡಿ

38

ಘಟ್ಟಿವಾಳಯ್ಯ

ಶ್ರೀಗುರುಬಸವಲಿಂಗಾಯನ್ನಮಃ

ಘಟ್ಟಿವಾಳಯ್ಯನ ಕಥೆ

ತಾ॥ ೨೭ / ೯/೧೯೦೧ ಯಿಶ್ವಿ

॥ ಘಟ್ಟಿವಾಳಯ್ಯನ ಕಥಾ ಬರೆಯಲಿಕ್ಕೆ ಶುಭಮಸ್ತು । ಶೋಭನಮಸ್ತು ॥

॥ ಪರಮೇಶ್ವರ ಸ್ತೋತ್ರ ಪದ ॥

ಸ್ತುತಿಸುವೆ ನಾನೀಗ ।
ಕ್ಷಿತಿಪತಿ ರಮಣನ ।
ಅತಿಬೇಗದಿಂದುಸುರ್ವೆ
ಕ್ಷಿತಿಗೆ ಸುಮತಿಯಾ ॥ ಪಲ್ಲ ॥

ಮಂದರಗಿರಿ ನಿವಾಸಾ ।
ನಂದಮುನೇಂದ್ರ ಪೋಷಾ ।
ಯಿಂದುಯೆನಗೆ ಕ್ಲೇಶಾ ।
ವಳಿದು ಶ್ರೀ ಜಗದೀಶಾ ॥ ೧ ॥

ಮೊದಲಿಗೆ ನಿಮ್ಮ ಸ್ತುತೆ ।
ವಿಧ ವಿಧದಲ್ಲಿ ಮಾಳ್ಪೆ ।
ಮಧುರವಾಕ್ಯದೊಳೆನ್ನ ।
ಹೃದಯದಿ ನೆಲೆಗೊಳಿಶಿ ॥ ೨ ॥

ಸೂತ್ರಧಾರ: ಯಲೊ ಪರಮೇಶ್ವರನೇ ವೀನಾಟಕವನ್ನು ರಚಿಸುವದಕ್ಕೆ ಕುಂದು ಕೊರತೆಗಳು ಬರಬಾರದೆಂದು ಬೇಡಿಕೊಳ್ಳುತ್ತೇನೆ.

ಪಾರ್ವತಿ ಸ್ತೋತ್ರಪದ

ಮೃಡನರಾಣಿ ವರಕಲ್ಯಾಣಿ ।
ನುಡಿವ ಕೃತಿಗೆ ಕೊಡು ಉಲ್ಲಾಸವು॥
ಬಿಡದೆ ನಿನ್ನ ಸತತಂ ಭಜಿಸುವೆ ।
ಕಡು ತವಕದೀ ಕರುಣಿಸು ಜಲಜಮುಖಿ ॥ ೧ ॥

ಕೋಮಲಗಾತ್ರೆ ವಿಮಲಚರಿತ್ರೆ ।
ಕಾಮಲೊಬ್ದವಸತಿ ಪರಮಪವಿತ್ರೆ ॥
ಪ್ರೇಮದಿ ನಿನ್ನಯಾ ನಾಮಸ್ಮರಿಸುವೆ ।
ಕಾಮಿಶಿದವರಿಗೆ ಕರುಣನಿಧಿಯೇ ॥ ೨ ॥

ಅಸುರರ ವೈರಿ ಕುಶಲವಿಚಾರಿ ।
ಅಸಮ ಮಹಿಮಳೆ ಪಶುಪತಿರಮಣೀ
ಯೀ ಸಮಯದಿ ನಿನ್ನ ಧ್ಯಾಸ ಮಾಡುವೆ ।
ಲೇಶಿನ ನುಡಿ ಆಯಾಸಗೊಳಿಸಿದೆ ॥ ೩ ॥

ಸೂತ್ರಧಾರ: ಯೀ ಗ್ರಂಥಕರ್ತನು ಬೇಡಿಕೊಳ್ಳುವುದೇನೆಂದರೆ ವೀರನ ವೀ ಹೊಸನಾಟಕವನ್ನು ಪ್ರಾರಂಭ ಮಾಡಬೇಕೆಂಬೋ ವಿಚ್ಚಾ ಉಂಟಾದ ಕಾರಣ ಪಾರ್ವತಿ ಪರಮೇಶ್ವರಾ ಶಾರದಾಂಬಾ ಮೊದಲಾದವರಿಗೆ ತ್ರಿಕಾಲದಲ್ಲಿ ಪ್ರಾರ್ಥಿಸುತ್ತೇನೆ. ಆದರೆ ವೀಗ ಸಾಗಿಸುವ ಹೊಸನಾಟಕಕ್ಕೆ ಕುಂದು ಕೊರತೆಗಳು ಬರಬಾರದೆಂದು ಯನ್ನ ಬಯಕಿ ಉಂಟು. ಆದರೆ ನೀವು ನಿರ್ವಿಘ್ನದಿಂದ ಸಾಗಿಸಿ, ವಿದರಲ್ಲಿ ಹಸ್ತದೋಷ ವಾಕ್ಯದೋಷ ಮುಂತಾದವುಗಳು ಅಸ್ತವ್ಯಸ್ತವಾಗದಂತೆ ವಿಸ್ತಾರವಾಗಲೆಂದು ಸುಸ್ಥಿರ ಬುದ್ಧಿಯಿಂದಾ ಬೇಡಿಕೊಳ್ಳುತ್ತೇನೆ. ಕಾಪಾಡಬೇಕು.

ನಟಿ ಪದಾ

ತಡವ್ಯಾತಕೆ ಮಾಳ್ಪೆ ।
ಕೊಡುವೆನೀಗತಿವರಾ ।
ಬಿಡದೆ ನೀ ರಚಿಸಿದಾ ।
ನುಡಿಗೆ ಕಂಟಕದೂರಾ ॥ ಪಲ್ಲ ॥

ಸೃಷ್ಟಿಯೊಳು ಕಲ್ಯಾಣ ।
ಪಟ್ಟಣದೊಳಗಿನ ।
ಘಟ್ಟಿವಾಳಯ್ಯನ ।
ದ್ರುಷ್ಟ ಸತಿಯ ಕೂನಾ ॥ ೧ ॥

ವೆಸನದೊಳುರಚಿಸಿದಾ ।
ಕುಶಲಬುದ್ಧಿಗೆ ನಾನು ।
ವಶವಾಗಿ ನಿನ್ನೊಳು ।
ರಸಿಕನೆಂದೆನಿಸುವೇ ॥ ೨ ॥

ನಟಿಮಾತು: ಯಲೊ ಪುತ್ರಾ ನೀನು ಯನ್ನ ಸ್ತುತಿ ಮಾಡಿ ಅತಿ ಹಿತದಿಂದಾ ಗತಿಯವಾಗಲೆಂದು, ಸುಮತಿಯಿಂದಾ ಬೇಡಿಕೊಳ್ಳುವ ಕೃತಿಗೆ ಸದ್ಗತಿಯಾಗಲೆಂದು ಯನ್ನ ಯತ್ನಉಂಟು. ನೀನು ಯೋಚನೆ ಮಾಡುವದೇನು? ಸುಚಿ ಸುಪುತ್ರ ಪರಮ ಪವಿತ್ರಾ.

ಸೂತ್ರಧಾರ: ಅಮ್ಮಾ ತಾಯಿ, ಹೀಗಿನ ವೇಳ್ಯದಲ್ಲಿ ಮದನಮಂಜರಿ, ಹರಿಶ್ಚಂದ್ರನಾಟಕ, ಶಾಕುಂತಲ ಮೊದಲಾದ ಯಾವತ್ತು ನಾಟಕದ ಪೈಕಿ ಹೀಗಿನ ಕಾಲದಲ್ಲಿ ಹೊಸನಾಟಕ ಅಂದರೆ ಕಲ್ಯಾಣ ಪಟ್ಟಣದಲ್ಲಿ ಘಟ್ಟಿವಾಳಯ್ಯನ ಸತಿಯು ಮಾಡಿದ ದೃಷ್ಟಕೃತಿಯು. ಮತ್ತು ಲೋಕಾಚರಿಸುವನಾಟಕ ಯಂತಲು ಪೆಸರಿಟ್ಟು, ರಚಿಸಬೇಕೆಂದು ಯೋಚನೆ ಮಾಡಿರುತ್ತೇನೆ. ಆದರೆ ನೀನು ಭೂಚರರಿಗೆ ಅಗೋಚರವಾಗುವಂತೆ ಸೂಚಿಸುತ್ತೇನೆ. ಕರುಣವಿರಲಿ ತಾಯಿ ಶಾರದಾಂಬಾ.

ನಟಿ: ಯಲೊ ಪುತ್ರಾ, ನೀನು ಚಿಂತಿಸದೆ ಸಂತೋಷದಿಂದ ಕಂತುವೈರಿಯ ಧ್ಯಾನದೊಳು ನಿಶ್ಚಿಂತನಾಗಿ, ನಿನ್ನಯ ಭ್ರಾಂತಿಗೆ ಆಯಾಸಗೊಳ್ಳದಂತೆ ಮಾಳ್ಪೆ. ಚಿಂತೆ ಬಿಡು ಬಿಡು. ಆಲಸ್ಯವೇತಕ್ಕೆ? ಆದರೆ ನೀನು ಸಾಗಿಸುವ ಕಾರ್ಯವು ಜಯವಾಗಿ ಕಲ್ಯಾಣವಾಗಿ ನಿರ್ವಿಘ್ನದಿಂದಾ ನಡಿಸುತ್ತೇನೆ. ಚಿಂತಿಬಿಡು ಪೋಗಿಬರುವಾ

(ಘಟ್ಟಿವಾಳಯ್ಯ ರಾಜನು, ಸಭಾಮಾಡಿಕೊಂಡು ಸಿಂಹಾಸನದಲ್ಲಿ ಕುಳಿತಿರಲು ನಾರದರು ಬರುತ್ತಾರೆ).

ರಾಜ: ಹೇ ಹೇ ನಾರದಮುನಿ ಶ್ರೇಷ್ಠನೆ, ತಾವು ಬಿಜಯಂಗೈಪ ಕಾರ್ಯಾರ್ಥವೇನು? ಮತ್ತು ಸಾವಧಾನದಲ್ಲಿ ಭುವನ ವಿಚಾರಿಸುವಿರಿ. ಸಕಲ ಲೋಕದ ವರ್ತಮಾನ ಪ್ರಕಟ ನಿಮಗುಂಟು, ಮತ್ತು ಭಕ್ತಿಯುಕ್ತನು ನೀನು. ಮುಕ್ತಿ ಸಾಧನಕ್ಕೆ ಚಕಿತಸುಂದರಪಾತ್ರನು. ಸಕಳೇಂದ್ರಿಯ ರಹಿತ, ಅಖಿಳಕಲಾಪ.

ನಾರದ: ಹೇ ಹೇ ರಾಜಾ ಮತ್ತೇನುವಿರುವುದು ನಮ್ಮ ಕೆಲಸ ! ತಾವು ಹೇಳಿದಂತೆ ಬೋಧವನ್ನು ನಿರ್ವಾದವಿಲ್ಲದೆ, ಆದಷ್ಟು ಸಾಧಿಸಿಕೊಂಡು ತೆರಳುವದಷ್ಟೇ. ಮತ್ತೇನುವಿರುವುದು?

॥ ಮುನಿ ಶ್ಲೋಕ ॥

ವಾಛಾ ಸಜ್ಜನ ಸಂಗತಾ ಪರಗುಣೆ
ಪ್ರೀತಿರ್ಗುರ್ಝಾನಮ್ರುತಾ ವಿದ್ಯಯಂ

ವೆಸನಂ ಸ್ವಯೇಷಿ ತಿರಿತಿರ್ಲೋಕಾಪಾವಾದಾದ್ಭಯಂ
ಭಕ್ತಿ ಶೂಲಿನಿಶಕ್ತಿರಾತ್ಮದ ಮನೆ ಸಂಸರ್ಗ ಮುಕ್ತಿಃ
ಭಲೈಕತೆಯಷು ವಸಂತನಿರ್ಮೂಲ ಗುಣಾಸ್ತೆ
ಬ್ಯೋಮಹದ್ಬ್ಯೋನಮಃ

ನಾರದಮುನಿ: ಯಲೋ ರಾಜಾ ನೀನು ಯಂತಾತನುಯಂದರೆ, ಸತ್ಪುರಷರ ಸಾಹಸದಲ್ಲಿ ವಿಚ್ಛೆಯು, ಅನ್ಯರ ಗುಣಗಳಲ್ಲಿ ವಿಶ್ವಾಸವು, ಗುರುಜನರಲ್ಲಿ ವಿನಯವು, ವೇದವೇದಾಂತವಿದ್ಯೆಗಳಲ್ಲಿ ಆಸಕ್ತಿಯು, ತನ್ನ ಪತ್ನಿಯಲ್ಲಿ ಸಂಗಿರೋಗವು, ಲೋಕನಿಂದೆಯಿಂದಾ ಭಯವು ಉಳ್ಳವನು. ಪರಮೇಶ್ವರನಲ್ಲಿ ಭಕ್ತಿಯು, ತನ್ನಲ್ಲಿರ್ಪ ದುಷ್ಟೇಂದ್ರಿಯಗಳ ನಿಗ್ರಹಣದಲ್ಲಿ ಸಾಮರ್ಥ್ಯವು. ದುರ್ಜನರೊಡನೆ ಸಾಂಗತ್ಯವು, ವೀಅಕಳಂಕವಾದ ಸದ್ಗುಣಂಗಳು ನಿನ್ನಲ್ಲಿ ಉಂಟು. ಆದರೆವೀಗ ನೀನು ಚಿಂತಾಕ್ರಾಂತನಾಗಿರುವ ಕಾರಣಯೇನು? ತಿಳಿಯದು. ಅತಿಶೀಗ್ರವಾಗಿ ಹಿತದಿಂದೆ ತಿಳಿಸುವಂತೆ ಮಾಡೊ ಮತಿಯುತನೆ.

॥ ಮುನಿಪದ ॥

ಚಿಂತಿಸುವುದ್ಯಾತಕೆ ।
ಅಂತರಂಗದ ಭಾವಾ ।
ಯಂತು ಪೇಳುವದೆನಗೆ ।
ರಾಜನೆಯಂತು ಪೇಳುವದೆನಗೆ ॥ ೧ ॥

ರಾಜನನುಡಿ:
ಗುರುವರಾ ಯನ್ನಯಾ ।
ಘೋರ ಸಂಸಾರವ ಭಾರ್ಯೆನಿಲ್ಲದೆ ।
ಕಾಲವ ಕಳಿಯಲ್ಹ್ಯಾಂಗೆ ।
ಭಾರ್ಯೆನಿಲ್ಲದೆ ಕಾಲವ ॥ ೨ ॥

ಮುನಿನುಡಿ:
ಕಷ್ಟ ಯಾತಕ್ಕೆ ಪೊಡವೀಶ
ಘಟ್ಯಾಗಿ ನಾ ನಿನ್ನ ।
ಪಟ್ಟದ ರಾಣಿಯನ್ನು ತಂದುಕೊಡುವೆ ।
ಘಟ್ಯಾಗಿ ನಾನುವಿನ್ನೂ ॥ ೩ ॥
ತಂದಿ ತಾಯಿಗಳಿಲ್ಲಾ ।
ಬಂಧುಬಳಗವಿಲ್ಲಾ ।
ಮುಂದೆನ್ನ ಗತಿವಿಲ್ಲವೋ ।
ರಾಜನೇ ಮುಂದೆನ್ನ ಗತಿಯಿಲ್ಲವು ॥ ೪ ॥

ರಾಜ: ಒಮ್ಮೆ ಸಂಸಾರವನ್ನು ಮಾಡಬೇಕೆಂಬ ಚಿಂತಿ. ಒಮ್ಮೆ ಸಂಸಾರವನ್ನು ತೊರಿಯಬೇಕೆಂಬ ಚಿಂತೆ. ಒಮ್ಮೆ ದೇವರ ಭಜನಿಯನ್ನು ಮಾಡಿ ನಿತ್ಯಪದವಿಯ ಪಡಿಯಬೇಕೆಂಬುವೆ. ಒಮ್ಮೆ ದೇವರ ಭಜನಿಯಿಂದೇನು ಫಲವಿಲ್ಲೆಂಬ ಹಮ್ಮೈಲಿ ಹರಿಯುತಿಹ ಮನವನೊಬ್ಬಳಿಗೊಳಿಸಿ, ಕಾಲವನು ಕಳಿಯುವದಕ್ಕೆ ಯತ್ನವನ್ನು ಉಂಟು ಮಾಡಿ, ಅತಿ ಆಯಾಸವಾಗದಂತೆ ಸಂಸಾರವೆಂಬಾ ಸಾಗರವನ್ನು ಶಾಕಪಾಕಾದಿಗಳ ಮೊದಲಾಗಿ ಹ್ಯಾಗೆ ಸಾಗುವವು, ಏದರ ಸಂಶಯವೆಲ್ಲಾ ಯನ್ನ ಮನಸಿನೊಳಗೆ ಘಟ್ಟಿಗೊಳಿಸಿರಿ ಮುನಿಶ್ರೇಷ್ಟನೇ.

ಮುನಿ:

ಮಾತಾಯಸ್ಯಾ ಗೃಹನಾಸ್ತಿ ।
ಭಾರ್ಯಾಚಪ್ರಿಯವಾದಿನೀ ।
ಅರಣ್ಯಂತ್ತೆನಗಂತವ್ಯಾಂ ।
ಯಥಾ ರಾಣ್ಯಂ ತಥಾ ಗೃಹಂ ॥

ಇದರ ಸಾರಾಂಶಯೇನೆಂದರೆ, ಯಾವಾತನ ಮನೆಯಲ್ಲಿ ತನ್ನ ತಾಯಿ ಇರೋದಿಲ್ಲವೋ ಮತ್ತು ಪ್ರೀಯವಾದ ಮಾತನ್ನು ಹೇಳುವ ಮಡದಿ ಇರೋದಿಲ್ಲವೋ ಆತನು ಅರಣ್ಯಕ್ಕೆ ಹೋಗಬೇಕು. ಯಾಕೆಂದರೆ ಅವನಿಗೆ ಅರಣ್ಯವು ವಂದೇ. ಮನಿಯು ವಂದೇಯಾಗಿ ಕಾಣಿಸುವದು. ಅದು ಕಾರಣ ನಿನ್ನ ಮನಶಿನೊಳಗಿನ ವ್ಯಸನವನ್ನು ಬಿಡು ಬಿಡು. ಆಲಸ್ಯವ್ಯಾತಕ್ಕೆ. ಇನ್ನುಮೇಲೆ ಭೂವಲಯದೋಳ್ ಜಾಲವನ್ನು ಹಾಕಿ, ಮೇಲಾದ ಬಾಲಿಯನ್ನು ಕೊಡಿಸುವೆ ಚಿಂತಿ ಬಿಡು ಬಿಡು.

ರಾಜ: ನಾನು ಹುಟ್ಟಿದಾರಾಭ್ಯ ನನಗೆ ತಂದಿ ತಾಯಿಗಳಿಲ್ಲಾ । ಬಂಧುಬಳಗಗಳಿಲ್ಲಾ. ಒಂದು ಆದರು ತೊಂದರೆಯು ನನೆಗೆ ಮೊದಲಿಲ್ಲಾ. ಆದರೂ ಮುಂದಿನ ಅಂದವನ್ನು ವಂದನೆ ಮಾಡಿ ಬೇಡಿಕೊಳ್ಳುತ್ತೇನೆ. ಛಂದದಿಂದೆ ಪೇಳೋ ಮುನಿಶ್ರೇಷ್ಠನೇ.

॥ **ಮುನಿಶ್ಲೋಕಾ** ॥

ಮಾತಾಸಮನಾಸ್ತಿ ಶರೀರ ಪೋಷಣಂ ।
ವಿದ್ಯಾಸಮನಾಸ್ತಿ ಶರೀರ ಭೂಷಣಂ।
ಬಾರ್ಯಾಸಮನಾಸ್ತಿ ಶರೀರ ತೋಷಣಂ ।
ಚಿಂತಾ ಸಮನಾಸ್ತಿ ಶರೀರ ಶೋಷಣಂ ॥

ಇದರ ಸಾರಾಂಶಯೇನೆಂದರೆ ತಾಯಿವಿಲ್ಲದೆ ಇರೋಣ,

ಹೆಂಡತಿವಿಲ್ಲದೆ ಇರೋಣ, ವಿದ್ಯೆ ಇಲ್ಲದೆ ಇರೋಣ ಮತ್ತು ಚಿಂತಿಯಲ್ಲಿ ಇರೋಣ ಇವು ನಾಲ್ಕು ನಿನ್ನಲ್ಲಿ ಇರೋಣದರಿಂದಾ ದುಃಖಾಕ್ರಾಂತನಾಗಿ ಚಿಂತಿಯೆಂಬುವ ಸಮುದ್ರದೋಳ್ ಮುಳಿಗಿ, ಅತ್ಯಂತ ದುಃಖರೂಪಾಗಿರುವದು. ಅದು ಕಾರಣ ನಿನ್ನ ಶರೀರವು ಚಿಂತಿಯಿಂದಾ ಭ್ರಾಂತಿಗೊಂಡು ಸುಖವಿಲ್ಲದೆ ಇರೋಣದರಿಂದಾ ನನ್ನ ಅಂತರಂಗದೋಳ್ ವ್ಯಾಪಿಶಿತು. ಕಂತುವೈರಿಯ ದಯದಿಂದಾ ನಿಶ್ಚಿಂತನಾಗಿರು. ಕೊಡು ಕೊಡು ಅಪ್ಪಣಿ ಕೊಡು ತಡವ್ಯಾತಕ್ಕೆ.

॥ ರಾಜನ ಶ್ಲೋಕಾ ॥

ಕಾರ್ಯೆಷು ಮಂತ್ರಿ । ಕರುಣೇಸುದಾಸಿ।
ಬೋಜೇಸುಮಾತಾ । ಶೈನೇಸು ರಂಭಾ।
ಧರ್ಮಾನುಕೂಲಿ । ಕ್ಷಮಯಾಧರಿತ್ರಿ ।
ಷಡ್ಗುಣಭಾರ್ಯ । ಕುಲಮುದ್ಧರಂತಿ ।

ಯಲೊ ಮುನಿಶ್ರೇಷ್ಠನೆ ಕೇಳೋ, ಕಾರ್ಯದಲ್ಲಿ ಪ್ರಧಾನಿಯಂತೆ ಕುಶಲ(ಬುದ್ಧಿ)ವಿರಬೇಕು. ಸೇವೆ ಮಾಡುವಲ್ಲಿ ತೊತ್ತಿನೋಪಾದಿ ಇರಬೇಕು. ಭೋಜನ ಬಡಿಸುವಲ್ಲಿ ತಾಯಿಯೋಪಾದಿವಿರಬೇಕು. ಮತ್ತು ರತಿವಿಲಾಸಕ್ಕೆ ರಂಭಾನ ಸಮಾನವುಳ್ಳವಳಾಗಿರಬೇಕು. ಸತ್ಕಾರ್ಯಕ್ಕೆ ಅನುಕೂಲಿಯಾಗಿರಬೇಕು. ಕ್ಷಮದಲ್ಲಿ ಭೂದೇವಿ ಯಾಗಿರಬೇಕು. ಇಂತಪ್ಪ ಆರುಗುಣವುಳ್ಳ ಸ್ತ್ರೀಯರನ್ನು ದೇಶದೋಳ್ ಶೋಧಿಶಿ, ನಿರ್ವಾದಮಿಲ್ಲದೆ, ಬೋಧವನ್ನು ಮಾಡಿ ಸಂಧಿಶಿಕೊಂಡು ಬರುವಂತೆ ಮಾಡಬೇಕು ಮುನಿಶ್ರೇಷ್ಠನೇ.

ಮುನಿ: ಒಳಿತಾಯಿತೊ ರಾಜಾ, ನಿನಗೆ ಒಪ್ಪುವಂತಾ ಕನ್ಯಾಮಣಿಯನ್ನು ತಪ್ಪದಲೆ ತರುವೆನು. ವಿವಾಹದ ಸಂಗ್ರಹವನು ನೆರವೇರಿಸು ರಾಜಾ ಪೋಗಿ ಬರುವಾ.

॥ ರಾಜನು ಮಾಡಿದ ಆಲೋಚನ ಪದಾ ॥

ಯಾರಿಗೆ ನಾನು ಮೊರೆವಿಡಲಿ ।
ಘೋರಬಡುವೀ ಸಂಸಾರವ ಸುಡಲೀ ॥ ಪಲ್ಲ ॥

ಸತಿವ್ಯಸನದಿ ಸದ್ಗತಿಯನು ಮರದೆ ।
ಹಿತವರಿಯದೆ ಸುಮತಿಯನ್ನು ತೊರೆದೆ ॥ ೧ ॥

ಬನ್ನ ಬಡುತಲೀಗ ಖಿನ್ನನಾನಾದೆ ।
ಮನ್ನಿಸುವರ ಕಾಣೆ ಗ್ರಹದೊಳು ಬಾಧೇ ॥ ೨ ॥

ಮನದೊಳಗನುದಿನಾ ವಿನಯದಿ ಗುರುಧ್ಯಾನ ।
ವನು ನೆನಿಯುವ ಮನ ಕೊನಿಗೆವಿನ್ನೆಸಿನಾ ॥ ೨ ॥

ಅಕಟಕಟಾ ಭೋ ಶಂಕರಾ! ಪರಮೇಶ್ವರಾ! ಮುಪ್ಪುರದೌಂಶ ನೀಲಕಂಠ! ಗೌರಿವಲ್ಲಭಾ ! ಈಗಿನ ಕಾಲದಲ್ಲಿ ನಿನ್ನ ಜಾಲ ತಿಳಿಯದು. ಆದರೂ ಮೂಲತತ್ವದ ಕೀಲು ಸಡಲುವಂತೆ ಖಾತಿಯಾಳ ಅನುಕೂಲಿಸಿ, ಇನ್ನು ಮೇಲೆ ಲಿಂಗಪೂಜಾ ಲೋಲನೆಂಬುವಂತಾ ಶೀಲಗುಣಂಗಳು ಕಾಲಕಾಲದೊಳ್ ಮಾಡುವದಕ್ಕೆ ವಿಶಾಲನಾಗಿರುವೆ. ಪರಂತು ಯನ್ನ ಮೇಲೆ ಕರುಣೆವಿರಲಿ ನೀಲಕಂಧರಾ ತ್ರಿಶೂಲಧರಾ.

॥ ರಾಜನ ಪದ ॥

ಯಂತ ಸೋಜಿಗವಾಯಿತೋ ।
ಚಿಂತಿಯಂಬುದು ವದಗಿತೋ ।
ಭ್ರಾಂತಿ ಮನದೊಳು ಸೇರಿತೋ ।
ಶಾಂತಿಯನ್ನೊಳು ಜರದಿತೊ ॥ ೧ ॥

ಕುಟಿಲ ಮುನಿಪನ ಮಾತಿಗೆ ।
ಸಟಿಯಮಾಡುವರೀತ್ತೀಗೆ ।
ಕಠಿಣದೋರುವದೆನಗೇ ।
ಹಟವ ಬೆರಸಿದರೆನಗೇ ॥ ೨ ॥

ಸತ್ಯಶೀಲನೆಂಬುವ ।
ದೆರ್ಥವಾಯಿತು ಸಾಂಭುವಾ ।
ಚಿತ್ತಜಾರಿಯ ಕಾಂಬುವಾ ।
ಮನಮಿತ್ತು ಬಯಸಿದರಂಬಿಯಾ ॥ ೩ ॥

ರಾಜ: ಭೋ ಶಂಕರಾ ವೀಗಿನವೇಳೆದೊಳ್ ಯಂತಾ ಮೋಸವಾಯಿತು. ಆದರೂ ಚಿಂತಿಯಿಲ್ಲಾ. ಎನ್ನ ಮನ ಸುಭ್ರಾಂತಿಯೋಳ್ ಮುಳುಗಿ ಶಾಂತವಾಗದು. ಮತ್ತು ಸತ್ಯಶೀಲನೆಂಬುವ ವಾರ್ತೆವ್ಯರ್ಥವಾಯಿತು. ಚಿತ್ತಜಾರಿಯ ಕಾಂಬುವ ಮನವಿತ್ತು. ಐಯ್ಯೋ ದೈವವೇ ! ಮತಿಗೆಟ್ಟು ಆ ಪಾಪಿಷ್ಟನಾದ ಯತಿಯು ಕೇಳಿಗೊಳಪಟ್ಟೇನು. ಅಕಟಕಟಾ ಶಿವ

ಶಿವಾ ! ಐಯ್ಯೋ ! ಭೋಗವೇ ! ಯೆಂಥಾ ಅನುಚಿತ ಕರ್ಮ ಸಂಘಟಿಸಿತು. ಹ್ಯಾಗೆ ಮಾಡಲಿ, ಶಿವ ಶಿವಾ !

॥ **ರಾಜ ನುಡಿದ ಶ್ಲೋಕ** ॥

ಉದಾರಶ್ಯ ತೃಣಮಿತ್ತಂ ।
ಶೂರಸ್ಯಾ ಮರಣಯುತ್ತಂ ।
ವಿರಕ್ತಸ್ಯಾ ತೃಣಂಬಾರ್ಯಾ ।
ನಿಸ್ಪೃಹಾಸ್ಯಾ ತೃಣಂಜತ ॥

ಇದರ ಸಾರಾಂಶಯೇನೆಂದರೆ, ಉದಾರಗುಣವುಳ್ಳಾತನಿಗೆ ದ್ರವ್ಯವು ತೃಣಸಮಾನ. ಶೂರನಿಗೆ ಮರಣವು ತೃಣ ಸಮಾನ. ವಿರಕ್ತನಿಗೆ ಸ್ತ್ರೀಯು ತೃಣಸಮಾನ. ನಿರಾಸ್ಯನಿಗೆ ಜಗತ್ಯವು ತೃಣಸಮಾನ. ಈ ಪ್ರಕಾರ ಮನವಿತ್ತು ದೇಹ ಮಾತ್ರ ನರಲೋಕದಲ್ಲಿ ಜೀವ ಮಾತ್ರ ಪರಲೋಕದಲ್ಲಿ . ಹೀಗೆಯಿರಲಾಗಿ ಕಪಟನಾಟಕ ಮುನಿಯ ವಿಪರೀತ ವಾಕ್ಯದ ಚಪಲ ನುಡಿಗಳಿಗೆ ಸುಫಲವಾಗುವದೆಂದು ಮನ ವಿಪರೀತವಾಗುವಂತೆ ಉಪಚರಿಸಿ, ಉಪಾಯದೊಳ್ ವಚನವನು ಕೈಕೊಂಡು ಪೋದನು. ಹಾ ವಿಧಿಯೇ ಮುಂದೇನು ಗತಿ? ಕೋಪದೋಳ್ ಮುನಿ ಶಾಪವ ಕೊಟ್ಟರೆ ಉಪಾಯವೇನು? ಶಂಕರಾ! ಪರಮೇಶ್ವರಾ ! ನೀಲಕಂಠಾ !!

ಘಟ್ಟಿವಾಳಯ್ಯ: ॥ **ಘಟ್ಟಿವಾಳಯ್ಯನು ತನ್ನ ಮನಸಿಗೆ ಹೇಳುವ ಪದ** ॥

ತಳಮಳಗೊಳ್ಳುವರೇ ।
ಯಲೆ ಮನವೇ ।
ಕೊಳ್ಳು ಧೈರ್ಯವನು ।
ತಳ್ಳಿಕೋರನ ಮಾತು ।
ಸುಳ್ಳು ಮಾಡುವದೇ ಲೇಸು ॥ ಪಲ್ಲ ॥

ಮನವೆಂಬ ಮರ್ಕಟನ ಅನುವಿನಿಂದಲಿ ಕಟ್ಟಿ ।
ಘನತೇಜದೊಡನೆ ಮರಿಯೇ । ದೊರಿಯೇ।
ತನುಮನಧನವನ್ನುವನುತಿಯಳಿಗಿಯುವರೇ ।
ಘನಕೋಪದೊಳು ಬಿದ್ದು ಹೊರಳುವರೇಮರುಳೇ ॥ ೧ ॥

ದುಷ್ಟ ಸಂಸಾರದೋಳ್ ಕೆಟ್ಟು ಹೋಗುವದುಂಟೇ ।
ಪುಟ್ಟಿಸಿದನ್ಯಾಕೆ ಬ್ರಮ್ಹನು ಯನ್ನನು ।

ಕೊಟ್ಟ ವಚನಕೆ ನಾನು ಭ್ರಷ್ಟನಾದರು ಒಳಿತು ।
ದಿಟ್ಟನಾಗಿರಬಹುದು ಸೃಷ್ಟಿಯೊಳಗೇ ॥ ೨ ॥

ಮಂದ ಬುದ್ಧಿಗಳಿಂದಾ ಇಂದುಧರನ ಪೂಜಾ ।
ಸಂದೇಹದೊಳ್ ಪಟ್ಟು ಸಂಶಯಯಿಟ್ಟು ।
ಬಂದದ್ದು ಬರಲೀಗ ತಂದೆ ಶ್ರೀ ಗುರುಧ್ಯಾನ ।
ಆನಂದದೊಳ್ ಮಾಡಿ ಸುಖಿಯಾಗು ಮನವೇ ॥ ೩ ॥

ಯಲೆ ಮನವೆ ತಳಮಳಗೊಳ್ಳುವರೇ? ಕೊಳ್ಳು ಶಾಂತಿಯನ್ನು ಮತ್ತು ಧೈರ್ಯವನ್ನು ಮಾಡು. ಮನವೆಂಬಾ ಮರ್ಕಟಾ ಅನುವಿನಿಂದಲಿ ಕಟ್ಟು, ಘನತೇಜದೊಡನೆ ಕೂಡಿಕೊಂಡು ಮನಬಂದಂತೆ ನಡೆಯದಿರು. ದುಷ್ಟ ಸಂಸಾರಕ್ಕೆ ಕೆಟ್ಟು ಪೋಗಲಿ ಬ್ಯಾಡಾ. ಪುಟ್ಟಿಸಿದ ಶಿವನು ತಾನು ಅರಿಯನೇ? ಏಕೋಭಾವದೋಳ್ ವಡಗೂಡಿ ದಿಟ್ಟವಾಗಿರು ಕಂಡ್ಯಾ ಶ್ರೇಷ್ಠ ಮನವೆ. ಮಂದಬುದ್ಧಿಗಳಿಂದಾ ಕುಂದಿ ಕುಂದಿ ಇಂದುಧರನ ಪೂಜಾ ಆನಂದವನು ಸಂದೇಹವಿಲ್ಲದಲೆ ಚಂದದಲಿ ಮಾಡು ಬಂದದ್ದು ಬರಲಿ ಎಂದಿಗಾದರೂ ಒಂದು ದಿನಾ ಸಾವು ತಪ್ಪದು.ಕುಂದು ಕೊರತೆಗಳಿಲ್ಲದೆ ತಂದೆ ಶ್ರೀ ಗುರುಧ್ಯಾನದೊಳ್ಪೊಂದಿ, ಬಂಧೂರವಾದ ಮುಕ್ತಿಯನ್ನು ಪಡೆದು ಸುಖಿಯಾಗಲೇ ಮನವೇ. ಅನುಮಾನವ್ಯಾತಕ್ಕೆ ಧೈರ್ಯವನ್ನು ಹೊಂದು ಹೊಂದೆಲೆ ಮಂದಬುದ್ಧಿ ಮನವೇ.

ಮುನಿ: **॥ ಮುನಿ ಪದಾ ॥**

ತರುಣಿಯ ತಂದಿಹೆನೋ ।
ಕರುಣ ಸಾಗರನೇ ॥
ಭರದಿಂದಲಿ ಪೋಗಿ
ಸರಸಿಜಾ ಮುಖಿಯಳ ॥ ಪಲ್ಲ ॥

ಕೋಮಲಾಂಗಿಯಳ ।
ಸಾಮುದ್ರೇಕವ ನೋಡಿ ॥
ಕಾಮಿಸಿ ಮನದೊಳ್ ।
ಪ್ರೇಮದಿಂದಲಿ ನಾನು ॥ ೧ ॥

ಮಂಗಳಾಂಗಿಯಳ ।
ಭೃಂಗ ಕುಂತಳಿಯಳಾ ॥
ಭಂಗಬಟ್ಟು ।
ಸರ್ವಾಂಗ ನಿರೀಕ್ಷಿಸಿ ॥ ೨ ॥

ಮಧುರ ವಾಕ್ಯದ ನುಡಿ ।
ಕದಪು ಕನ್ನಡಿ ನಡಿ ।
ಮದಗಜ ಗಮನಿಯ ।
ಮುದದಿಂದಲೀ ಪೋಗೀ ॥ ೩ ॥

ಹೇ ಕರುಣಾಸಾಗರ ಭರದಿ ನಿನ್ನಯ ಮಾತು ಮರಿಯದೆ ತರುಣಿಯನ್ನು ಪರಿಪರಿಯಿಂದಾ ಸಾಮುದ್ರಿಕಾ ಮೊದಲಾದ ಸರ್ವಾಂಗವನ್ನು ನಿರೀಕ್ಷಿಸಿ, ಪರಮ ಉಲ್ಲಾಸದೊಳ್ ಮೆರೆವ ಸುಂದರಿಯನ್ನು ತ್ವರಿತದಲಿ ತಂದಿರುವೆ. ಹರುಷದೊಳ್ ವಿವಾಹ ನೆರವೇರಿಸೋ ಸರಸಸುಗುಣನೇ.

॥ ಘಟ್ಟಿವಾಳ ರಾಜನ ಪದಾ ॥

ಏನು ಹೇಳಲಿ ।ಈಗ ನಾನು ॥ ಪಲ್ಲ ॥
ಸತ್ಯಶೀಲನೆಂಬ ವಾರ್ತೆ ।
ವ್ಯರ್ಥವಾಯಿತೆ । ಆಹಾ ॥
ಚಿತ್ತಜಾರಿ ಮುನಿದನೆಂಬೊ ।
ಗೊತ್ತು ತಿಳಿಯದೋ ॥ ೧ ॥

ದುರಿತಯೆಂಬೊ ಪಾಶ ಯನ್ನ ।
ಸೇರಿ ತೊಡರೀತೆ ಆಹಾ ॥
ಗುರುಗಳಾಜ್ಞೆ ಮೀರಿ ನಡೆದ ।
ಪರಮಾಶ್ಚರ್ಯವೋ ಆಹಾ ॥ ೨ ॥

ಕೊಟ್ಟ ವಚನ ತಪ್ಪಿ ನಡೆದರ ।
ಭ್ರಷ್ಟನಾಗುವೆ ಆಹಾ ॥
ಸೃಷ್ಟಿಯೊಳಗೆ ಮುಖವ ।
ತೋರಿನ್ನೆಷ್ಟು ಬಾಳ್ವದು ಆಹಾ ॥ ೩ ॥

ಶ್ಲೋಕ: ಸತ್ಯಂ ಮಾತಾಪಿತಾ ಜ್ಞಾನಂ ಧರ್ಮ
ಭ್ರಾತಾದ ಸಖಾ ಶಾಂತಿಃ ಪತ್ನಿಃ
ಕ್ಷಮಾ ಪುತ್ರಾಃ ಷೂಡ್ಯೆತೆಮಮ ಬಾಂಧುವಾಃ
ಸಾರಾಂಶ ಯೇನೆಂದರೆ --

ಸತ್ಯವೆ ತಾಯಿ. ಜ್ಞಾನವೆ ತಂದಿ. ಧರ್ಮವೇ ಒಡಹುಟ್ಟಿದವನು. ದಯವೆ ಸ್ನೇಹಿತನು. ಶಾಂತಿಯೆ ಭಾರ್ಯೆಯು. ಕ್ಷಮೆಯೆ ಪುತ್ರನು.

ಈ ಆರು ಮಂದಿ ನನಗೆ ಬಂಧುಗಳೆಂದು ನೆನಿಸುತ್ತೇನೆ. ಏಳನೇದು ನಾನೇನು ಮಾಡಲಿ ಮುನಿ ಕುಲೋತ್ತಮಾ?

ಮುನಿ: ಮುನಿ ಪದ

ಕೊಟ್ಟ ವಚನವ ತಪ್ಪಿನಡೆದು ಭ್ರಷ್ಠನಾದೆಲೋ ।
ದುಷ್ಟತನದ ಕೆಟ್ಟನಡತಿ ಯಷ್ಟು ಹೇಳಲೋ ॥ ಪಲ್ಲಾ ॥

ಸತ್ಯವಂತನೆಂದು ನಿನ್ನ ಭೃತ್ಯನಾದೆನೊ ।
ಅತ್ತಯಿತ್ತ ತಿರುಗಿ ನಾಚಿ ಸತ್ತು ಪೋದೆನೋ ॥ ೧ ॥

ಮಂದಬುದ್ಧಿಯೊಳು ಯನ್ನಲಿ ಕುಂದು ತಂದಿಯೊ ।
ಹಿಂದೆಮುಂದೆ ನೋಡದೆನ್ನೊಳು ಮೌನಹೊಂದಿಯೋ ॥ ೨ ॥

ಮುನಿ: ಛೇ ಛೇ ಮೂರ್ಖ, ನೀಚಾತ್ಮಾ, ನೀನು ಆಚರಿಸುವ ವಿಚಾರವನ್ನು ಅಗೋಚರವಾಗಿ ಕಾಣುವುದು. ಯಾಕೆಂದರೆ ಮೊದಲು ಯೆನಗೆ ವಿಧವಿಧದಿಂದೆ ಸದನದೊಳ್ ಸುದತಿಯರು ಯಿಲ್ಲೆಂದು, ನಿನ್ನ ವದನದೊಳ್ ಪೇಳಿದ ನಂತರ ಈಗ ಬದಲು ವಾಕ್ಯದ ನುಡಿಗಳ ನುಡಿದರೆ, ಈ ಮದಿವಿ ಇನ್ಯಾರಿಗೆ ವದಗಿಸಲಿ? ಛೇ ಮೂರ್ಖಾ ನೀಚಾತ್ಮಾ, ಕೊಟ್ಟ ವಚನವ ಎಲ್ಲಿಯಿಟ್ಟಿರುವಿ? ನಿನ್ನ ದುಷ್ಟಗುಣಗಳು ಯೆಷ್ಟು ಹೇಳಲಿ? ನಾನು ಗಟ್ಟಿಗೊಳಿಸಿ ಶ್ರೇಷ್ಠನಾಗಿ ಬಂದಿರುವದಕ್ಕೆ ಕನಿಷ್ಟ ಮಾಡಿರುವಿಯೊ? ನಿನ್ನ ದಿಟ್ಟತನವು ಯೆಷ್ಟು ಹೇಳಲಿ? ಈಗಲೆ ಸಿಟ್ಟು ಬಂದರ ಶಾಪವ ಕೊಟ್ಟು ಬಿಡುವೆ. ತಟ್ಟನೆ ಹಿಡಿ ಹಿಡಿ ನೀಚಾತ್ಮಾ. .....

ರಾಜನ ಪದಾ

ಕೋಪವ್ಯಾತಕೆ ಮುನಿಯೇ ।
ಶಾಪವನ್ನು ಗೈದಿಯಾ ।
ತಾಪ ಸಾರಾಯನೆಯನ್ನ
ಈ ಪರಿ ಮಾಡುವರೇಮುನ್ನಾ ॥ ೧ ॥

ಮಾನಹೀನನಾಗಿ ನಾನು ।
ಮಾನುನಿಯಳ ಬಯಸಿದೆನು ।
ತನುಮನಧನವನ್ನು ।
ವನಿತೆಯೋಳರೇನೋ ॥ ೨ ॥

ಘೋರ ಸಂಸಾರದೊಳು ।
ಪಾರಗಾಣೆನು ಪೂರಾ ।
ಮುರಾರಿಯೊಳ್ ಮನ ।
ಸೇರುವದಿನ್ನೇನೋ ॥

ರಾಜನ ಶ್ಲೋಕ

ನವೈರಾಗ್ಯತ್ಪರಂ ।
ಬಾಗ್ಗೆನ್ನಬೊದಾದ ಪರಮಸುಖಮಂ।
ನಹರಾದವಸ್ತುತಾನ ।
ಸಂಸಾರತ್ಪರೋಧಿಪುಃ

ಸಾರಾಂಶಯೇನೆಂದರೆ, ವಿಷಯ ಪರಿತ್ಯಾಗಕ್ಕಿಂತಲೂ ಭಾಗ್ಯವಿಲ್ಲಾ. ಜ್ಞಾನಕ್ಕಿಂತಲೂ ಸುಖವಿಲ್ಲಾ. ಈಶ್ವರನಕ್ಕಿಂತಲೂ ರಕ್ಷಕನಿಲ್ಲಾ. ಸಂಸಾರಕ್ಕಿಂತಲೂ ಶತ್ರುಗಳಿಲ್ಲಾ. ಅದು ಕಾರಣ ಸಂಸಾರವೆಂಬ ಸಾಗರವನ್ನು ಪಾರಗಾಣಿಸುವ ಧೀರರು ಯಾರೂ ಕಾಣೆ? ಈ ಶರೀರವು ಅಶಾಶ್ವತವು. ಮಾರವೈರಿಯ ಭಜಿಸು. ಸುವಿಚಾರದೊಡನೆ ಮನೋಹರವಾಗುವಂತೆ ಘನಮುಕ್ತಿಸಾರವನು, ವಿನಯದಿಂ ಕೈಕೊಂಡು ಇರುವಂತೆ ಮಾಡೊ ಮುನಿಶ್ರೇಷ್ಠನೆ. ಘೋರ ಸಂಸಾರದೋಳ್ ಏನುಂಟು?

ಶ್ಲೋಕ (ರಾಜ)

ಶೃತಸತಂ । ತಪಶ್ಶೀಲಂ ।
ವಿಜ್ಞಾನಂ । ಯಿತ್ತಂ । ಮುನ್ನತಿಂ ।
ಇಂಧನಿಕುರುತೆ ಮೂಡಾಃ ।
ಪ್ರವಿಷ್ಯವನಿತಾಲನಂ ॥

ಇದರ ಸಾರಾಂಶವೇನೆಂದರೆ ಮೂಢನಾದವನು ಸ್ತ್ರೀಯೆಂಬುವ ಬೆಂಕಿಯಲ್ಲಿ, ತಾನು ಅಭ್ಯಸಿಸಿದ ಶಾಸ್ತ್ರವನ್ನೂ, ಸತ್ಯವ ತಾನಾಚರಿಸಿದ ತಪಸ್ಸನ್ನೂ, ತನ್ನ ಸ್ವಭಾವವನ್ನೂ, ಜ್ಞಾನವನ್ನೂ, ತನಗಿರತಕ್ಕ ಅವ್ಯವನ್ನೂ, ದೊಡ್ಡಸ್ತಿಕೆಯನ್ನೂ ಆ ಬೆಂಕಿಗೆ ಸಮಮಿತ್ತುಗಳನ್ನಾಗಿ ಮಾಡುತ್ತಾನೆ. ಅಂದರೆ ಬೆಂಕಿಯಲ್ಲಿ ಕಟಗಿಗಳು ಹ್ಯಾಗೆ ಸುಟ್ಟು ಹೋಗುವವೋ? ಆ ಪ್ರಕಾರವೇ ಸ್ತ್ರೀಯರಿಂದಾ ಎನ್ನ ಸುಗುಣಗಳೆಲ್ಲವು ಸುಟ್ಟು ಹೋಗುವವು.

ಅದು ಕಾರಣ ನಿಮ್ಮ ಕೋಪದ ಜ್ವಾಲೆಯನ್ನು ಎನ್ನ ಮೇಲೆ ಹಾಕಿದರೆ ಹ್ಯಾಗೆ ಸೈರಿಸಲಿ? ಮುನಿವರನೇ ಕರುಣಾಸಾಗರನೇ.

ಮುನಿಪದಾ

ತಾಳಲಾರೆನೋ । ತಾಪಾ ಹೇಳನಿನ್ನೇನು ।
ಕೀಳು ಮನುಜ ನೀತಿಯನಗೆ ಹೇಳಬ್ಯಾಡವೋ ॥ ಪಲ್ಲಾ ॥

ಸತ್ಯವಚನದಿ । ಎನಗೆಸ್ತುತಿಸಿದಿ ನಿತ್ಯದಿ ।
ಎನ್ನ ಭೃತ್ಯನೆಂದು ತಿಳಿದು ನಾ ಅತ್ಯಂತಹರುಷದೀ ॥ ೧ ॥

ಒಲ್ಲೆನೆಂದರೆ ನೀನೆಲ್ಲಿ ಪೋಗುವೀ ।
ಪುಲ್ಲೆ ಗಂಗಳಿಯ ತಂದು ನಿಲ್ಲಿಸುವೆನು ॥ ೨ ॥

ಎಲೋ ನಿನ್ನ ಕೃತಕ ಬುದ್ಧಿಗೆ ಎನಗೆ ಅತಿಶಯವಾದ ತಾಪವಾಯಿತು. ಆದರೂ ನಿನ್ನ ಸುನೀತಿಗಳೆಷ್ಟು ಹೇಳಿದರೂ ಕೇಳುವವನಲ್ಲಾ. ಮಾತುಕೊಟ್ಟು ಘಾತ ಮಾಡುವವನ ಎಂದಿಗೂ ನಂಬಬಾರದು. ಯಾಕೆಂದರೆ ವುತ್ತರಿಯು ಹುಸಿದರೆ, ಹೆತ್ತಮ್ಮ ತೊರೆದರೆ, ಸತ್ಯವಂತರು ತಪ್ಪಿ ನಡೆದರೆ, ಲೋಕ ಇನ್ನೆತ್ತ ಬಾಳುವದು? ಇದರ ಗೊತ್ತು ತಿಳಿದು ನೋಡು. ನೀನು ಎತ್ತ ಹೋದರೆ ವಿಧಿಯು ಬೆನ್ಹತ್ತಿ ಬರುವಂತೆ ಮತ್ತೆ ಮತ್ತೆ ನೀತಿ ಹೇಳಿದರೆ ಕೇಳಬಹುದೆ? ಬಹು ಸತ್ಯವಂತನೇ.

ರಾಜನ ಶ್ಲೋಕ

ಕೃತೇಚ ರೇಣುಕಾ ಮೃತ್ಯು ।
ಸ್ತ್ರೀತಾಯಾಂ ಜಾನಕಿ ತಥಾ ।
ದ್ವಾಪಾರ ದ್ರೌಪತಿ ಮೃತ್ಯೂ ।ಗೃಹೆ ಗೃಹೆ ॥

ಕೃತಯುಗದಲ್ಲಿ ರೇಣುಕಾ ಮೃತ್ಯುವು, ತ್ರೇತಾಯುಗದಲ್ಲಿ ಸೀತಾದೇವಿ ಮೃತ್ಯುವು, ದ್ವಾಪಾರದಲ್ಲಿ ದ್ರೌಪದೀ ಮೃತ್ಯುವು, ಕಲಿಯುಗದಲ್ಲಿ ಮನಿಮನಿಗೆ ಮೃತ್ಯು ಸ್ವರೂಪವಾದ ಸ್ತ್ರೀಯರುಯಿದ್ದಾರು. ಅಂದರೆ ಕೃತಯುಗದಲ್ಲಿ ಪರುಶುರಾಮನು ಇಪ್ಪತ್ತೊಂದು ಸಾರಿ ಸಕಲ ಕ್ಷತ್ರಿಯರ ಸಂಹಾರ ಮಾಡಲು ರೇಣುಕೆ ಕಾರಣವಾದಳು. ತ್ರೇತಾಯುಗದಲ್ಲಿ ಸೀತಾದೇವಿಗೋಸ್ಕರ ರಾಮಚಂದ್ರನು ಸಮಸ್ತ ರಾಕ್ಷಸ ಸಂಹಾರ ಮಾಡಿದನು. ದ್ವಾಪರಯುಗದಲ್ಲಿ ದ್ರೌಪತಿ ನಿಮಿತ್ಯವಾಗಿ ಹದಿನೆಂಟು ಅಕ್ಷೋಣಿಯು ನಾಶವನ್ನೈದಿತು. ಕಲಿಯುಗದಲ್ಲಿ ಪ್ರತಿಯೊಬ್ಬ ಸ್ತ್ರೀಯಳಿಗೆ

ಪ್ರತಿ ಒಬ್ಬ ಗಂಡಸು ನಾಶವನ್ನೈದವನು. ಈ ಪ್ರಕಾರ ನೀತಿ ಇರಲಾಗಿ ನೋಡಿದರೆ ಮನವು, ಮಾತಾಡಿದರೆ ಧನವು, ಒಡಗೂಡಿದರೆ ಪ್ರಾಣವನ್ನೂ ಕಳೆದುಕೊಳ್ಳುವದು. ಮಾಡಬಾರದನೆ ಮಾಡಿಸಿ ಕಡಿಗೆ ಯಮಭಟರ ತಾಡನಿಗೆ ಹಿಡಕೊಟ್ಟು, ಕೊಲ್ಲಿಪುದು ಯೆಂಬುದು ನೀತಿ, ನೋಡಿ ನೋಡಿ ಎನಗೆ ಕಾಡಬೇಡವೋ ಮುನಿಶ್ರೇಷ್ಠನೇ.

ಮುನಿ: ಎಲೊ ದುರಾತ್ಮಾ ನೀನು ಎಷ್ಟು ನೀತಿಗಳು ಹೇಳಿದರೂ ವಚನಕೊಟ್ಟದ್ದು ಸಟಿಯೇ ಹ್ಯಾಗೆ? ವಚನ ಭ್ರಷ್ಟ ನೀನಾದಂತೆ ನಾನು ಈ ಸೃಷ್ಟಿಯೊಳಗೆ ಭ್ರಷ್ಟತ್ವ ಹೊಂದಿ ಕನಿಷ್ಟನಾಗಿರಲೆ. ಇದು ನಿನಗೆ ಶ್ರೇಷ್ಟವಾಗಿ ತೋರುವುದೇ? ಎಲೋ ನಿನ್ನ ದುಷ್ಟಗುಣಗಳು ಎಷ್ಟು ವರ್ಣಿಸಿದರು ತೀರದು. ಪಾಪಿಷ್ಟ ನಿನ್ನ ಮುಖವ ನೋಳ್ಪಲಾಗದು. ತಟ್ಟನೆ ಶಾಪವನ್ನು ಕೊಟ್ಟುಬಿಡುವೆ ತಡವ್ಯಾತಕ್ಕೆ ಹಿಡಿಹಿಡಿ.

ರಾಜ: ಹಾ ವಿಧಿಯೇ ಹಣೆಯಲ್ಲಿ ಬರೆದ ಲಿಖಿತವು ಏನಿರುವದು ತಿಳಿಯದು? ಈ ಮುನಿಗೆ ಅನೇಕ ರೀತಿಯಿಂದ ಸುನೀತಂಗಳು ಹೇಳಿದರೆ ಕೇಳಲೊಲ್ಲನು. ಹಾ ವಿಧಿಯೆ. ಎನ್ನ ಮನಸು ಮರಮರನೆ ಮರುಗಿ ತರಹರಿಸದು. ಕರುಣಮಿಲ್ಲದೆ ಮುನಿಪನು ತ್ವರಿತದಿಂದೆ ಶಾಪವನು ಕೊಡುವೆನೆಂದು ನುಡಿಯುವನು. ಇನ್ನೇನು ಮಾಡಲೀ? ಪರಮೇಶ್ವರಾ ಗೌರಿಬಲ್ಲಭಾ.

ಮುನಿ: ಎಲಾ ದುರಾತ್ಮಾ ನೀನು ಇಷ್ಟುವ್ಯಾತಕ್ಕೆ ಆಲ್ಪರಿಯುವಿ? ಸಕ್ಕರಿ ಸವಿದುಣ್ಣು ಯಂಬುವವರಿಗೆ ಕೂಲಿಯ ಬೇಡಿದ ಹಾಗೆ. ನಿನ್ನ ಠಕ್ಕುತನವು ಎಷ್ಟು ಸೊಕ್ಕು ಜವ್ವನ ಕೂಡಿ ಅಕ್ಕರದಿಂದೆ ಮನವಿಕ್ಕಿ ಸೌಖ್ಯದಿಂದಿರು ಕಂಡ್ಯಾ ಮರುಳೆ. ಮಿಕ್ಕಾದ ಆಲೋಚನೆ ಯಾತಕ್ಕೆ?

ರಾಜ: ಹೇ ಮುನಿ ಕುಲೋತ್ತಮಾ ತಮ್ಮಿಷ್ಟದಂತಾಗಲಿ. ನಾನು ಎಷ್ಟು ಆಲ್ಪರಿದು ಹೇಳಿದಾಗ್ಯೂ ನಿಮಗೆ ಎಳ್ಳಷ್ಟಾದರೂ ಕರುಣವಿಲ್ಲದೆ ಹೋಯಿತು. ನಿಮ್ಮ ಕಲ್ಲಿನಂಥ ಕಠಿಣ ಹೃದಯಕ್ಕೆ ಸೊಲ್ಲು ಸೊಲ್ಲಿಗೆ ಬಲ್ಲವನೆಂದು ಉಲ್ಲಾಸದ ಸ್ತುತಿಗಳು ನಿನಗೆ ಮನಸಿಗೆ ಬಾರವು. ತಮ್ಮ ಇಷ್ಟದಂತಾಗಲಿ.

ರಾಜನ ಶ್ಲೋಕ

ಕೋಪಿಗಳ ಮನದೊಳಗೆ ಕರುಣೆ ಬರಲುಂಟೆ ।
ಪಾಪಿ ಮನುಜರಿಗೆ ಧರ್ಮದ ವಾಸನೆಯುಂಟೆ ।
ನಿಂದಕಗೆ ನೀತಿಯುಂಟೆ । ಕೂಪದೊಳು

ಹರಿಯುತಿಹ ಜಲವ ನೋಡಿದವರುಂಟೆ ।
ಕಾಮ ಪುರುಷನಿಗೆ । ಸುಜನರಿಗಿಂತ । ತಿಳಿವುಂಟೇ ।
ವರಜಿತೇಂದ್ರಿಗೆ । ತರುಣಿಯರ ಹಂಬಲಯಿರಲುಂಟೆ ।
ಮರೆವ ಯೋಗಿಗೆ ಹಣದ ಪರವಿಯೆಂಬುವುದುಂಟೆ ।
ಬಲ್ಲವರಿಗೆ ಭಯಗಳುಂಟೆ । ಪರಮಸುಜ್ಞಾನಿಗಳಿಗೆ ।
ಗತಿಗರ್ವವಿರಲುಂಟೆ । ಹಾ ವಿಧಿಯೇ ಎನ್ನದುರ್ದೈವಕ್ಕೆ।
ಈಗಿನ ವ್ಯಾಳ್ಯದಲ್ಲಿ । ಪರಮಸುಜ್ಞಾನಿಯಾದಮುನಿಪನು।
ಕೋಪದೊಳ್ ಶಾಪವನು ಕೈಕೊಂಡು।ಇರುವವನು ಏನು ಮಾಡಲಿ॥

ರಾಜ: ಹೇ ಮುನಿಶ್ರೇಷ್ಠನೆ ಸತಿಪತಿಯನ್ನು ಜತಿಮಾಡಿ, ಅತಿ ಹಿತದೊಡನೆ ಸದ್ಗತಿಂತೊಳು ಅನುಕೂಲಿಸಿ, ಮತಿಹೋಗದೆ ನಿನ್ನ ಪಾದಾರವಿಂದದೊಳ್ ಜತಿ ಅಗಲದಂತೆ ಸುಮತಿಯನ್ನು ಕೊಟ್ಟು ರಕ್ಷಿಸು. ಬ್ರಹ್ಮನಂದನನಾ ಲಗ್ನದ ಕಾರ್ಯ ತೀರಿಸಿದ ಬಳಿಕ.

ಮುನಿ: ಹೇ ಘಟ್ಟಿವಾಳಯ್ಯ ಮಹಾರಾಜನೆ ಇಗೋ ಈ ಕನ್ಯೆಮಣಿಯನ್ನು ಮನ್ನಿಸಿ ಉನ್ನತದೊಡನೆ ಸನ್ನುತ ಮಂದಿರದೊಳ್ ಒಣಬಾಧೆಗಳಳಿದು ಭಿನ್ನಭೇದಗಳಿಲ್ಲದೆ ಖಿನ್ನನಾಗದಿರು. ಚೆನ್ನಾಗಿ ಇವಳ ಒಡಗೂಡಿಯಿರು ಕಂಡ್ಯಾ ರಾಜಾ ಭಾನುಕೋಟಿತೇಜಾ. ರಾಜಾ ಪೋಗಿ ಬರುತ್ತೇನೆ ಕಲ್ಯಾಣವಾಗಲಿ.

ರಾಜ: **ರಾಜನಪದಾ**

ಎಂಥ ಮಾಯವು ತೊಡಕೀತೆನಗೆ
ಕಂತುಹರನೇ ಪಾಲಿಸೋ ॥
ಚಿಂತಿಯಂಬುವ ಸಂಸಾರದ ಭ್ರಾಂತಿಯಳಿದು। ರಕ್ಷಿಸೋ ॥ ಪಲ್ಲ ॥

ಅರ್ಥ ತನ್ನಲ್ಲಿರುವತನಕ ।
ಅರ್ಥಪ್ರೀತಿ ಮಾಳ್ಪರೋ ॥
ಅರ್ಥವೆಲ್ಲವು ವ್ಯರ್ಥವಾದರೆ ।
ಗುರ್ತು ಕೂನ ಹಿಡಿಯರೆಲೋ ॥ ೧ ॥

ಮಾನ ಮರಿಯಾದಿ ತನ್ನೊಳಿದ್ದರೆ ।
ಜ್ಞಾನಿಪುರುಷನೆಂಬುವರೋ ॥
ಏನು ಅರಿಯದೆ ಸುಮ್ಮನಿದ್ದರೆ ।
ಮಾನಗೇಡಿನೆಂಬುವರೋ ॥ ೨ ॥

ವಡವಿವಸ್ತ್ರವು ಬಿಡದೆ ತಂದರೆ ।
ಮಡದಿ ಪ್ರೀತಿ ಮಾಳ್ಪಳೋ ॥
ನಡದ ಕಾಲಕ್ಕುಂದು ಕುಡಮಿ ಆದರೆ ।
ತುಡಗ ನಾಯಿಯಂತೆ ಬೊಗಳ್ವಳೋ ॥ ೩ ॥

ಬನ್ನಬಡುತಲಿ ಬ್ಯಾಗ ದೊರಕಿಸಿ ।
ತನ್ನ ಸಂಗತ ಬರುವದೋ ॥
ಗನ್ನ ಪಾತಕಿ ತಾನು ಆದರೆ ।
ಅನ್ಯರ‍್ಯಾರು ಕಾಯ್ವರೇ ॥ ೪ ॥

ನಡೆವ ಕಾಲಕ್ಕೆ ಬಿಡದೆ ಕೀರ್ತಿಯ
ಪಡಿದು ಧರ್ಮವ ಮಾಡಿರೋ ॥
ಈ ತೊಡರು ಕಂಟಕ ಕಡಿದು ರಕ್ಷಿಸೋ ।
ಪೊಡವಿಯೋಳ್ ಪರಿಣಾಮವು ॥ ೫ ॥

ರಾಜ: ಅಯ್ಯೋ ವಿಧಿಯೆ ಎಂತಾ ಮಾಯವು ತೊಡಕಿಸಿದಿ. ಕಂತುವೈರಿಯ ಚಿಂತಿಯೆಂಬ ಸಂಸಾರ ಭ್ರಾಂತಿಯನ್ನು ಅಳಿದು ರಕ್ಷಿಸು ರಕ್ಷಿಸು.

ಶ್ಲೋಕ

ಅಸ್ಥಿರ ಜೀವತೆ ಲೋಕೆ ।
ಅಸ್ಥಿರ ಧನ ಯವ್ವನಂ ।
ಅಸ್ಥಿರೆ ಪುತ್ರದಾರಶ್ಚ ।
ಧರ್ಮಕೀರ್ತಿದ್ವಾಂಸ್ಥಿಯಂ ॥

ಇದರ ಸಾರಾಂಶವೇನೆಂದರೆ ದೇಹವು ಅಶಾಶ್ವತವು. ದ್ರವ್ಯವು, ಹೆಂಡತಿ ಮಕ್ಕಳು ಅಶಾಶ್ವತವು. ಅಂದರೆ ಧರ್ಮ ಕೀರ್ತಿಯು ಶಾಶ್ವತವು. ಅದು ಕಾರಣ ಈ ಸಂಸಾರವೆಂಬೊ ಸಾಗರವನ್ನು ಈಸಲಾರನೊ. ಆಯಾಸಗೊಳದಂತೆ ಮಾಯಪಾಶವನ್ನು ನಾಶಮಾಡಿ ಮೋಸವಾಗದಂತೆ ನಿನ್ನ ಧ್ಯಾಸದೊಳಾರೈಸಯ್ಯಾ ಉರಗಭೂಷಣಾ

ಇನ್ನುಮೇಲೆ ಇಲ್ಲಿಗೆ ಒಂದು ಅಂಕ ಆಯಿತು.

✦✦✦

ಅಂಕ – ೨

ವಿಟಗಾರ ಪುರುಷನ ಪದ

ಮಾನುಸಿಯಳ ಮಾತುಕೇಳಿ ಮೋಸಗೈದೆ ।
ಮನದೊಳಗನುದಿನಾ ಮಾಡಿ ವಿನೋದಾ ॥ ಪಲ್ಲ ॥

ಪರಿಪರಿಯಲ್ಲಿ ನಾನರಿಯದಲೆ ಮನಸೋತೆ।
ಕರುಣೆಯಿಲ್ಲದೆ ಎನ್ನ ಮರಿದಳು ಪ್ರೀತೇ ॥ ೧ ॥

ಅಂಬುಜಾಕ್ಷಿಯಳತಿ ನಂಬಿಗಿಯನ್ನು ಮಾಡಿ।
ಹಂಬಲಿಸುವ ಬಗಿ ಮಾಡಿದಳೆನ್ನನು ಕೂಡಿ ॥ ೨ ॥

ಬಂಧುರ ಗುರುಬಸವೇಂದ್ರನೊಳ ಕುಟಿಲವ।
ಹೊಂದಿದವಳ ಕೂಡ ಅಂದಭಂದಗಳ್ಯಾಕೇ ॥ ೩ ॥

ಹೋ ಹೋ ಎಂತಾ ಮೋಸವಾಯಿತು? ಈ ಕಾಂತಿ ಮಣಿಯು ಚಿಂತಿಯಿಲ್ಲದೆ ಸಂತೋಷದಿಂದಾ ಕಾಂತನೊಡಗೂಡಿ ಎಂತು ಮರಿದಳೋ? ಮತ್ತು ಇವಳ ಅಂತರಂಗದ ಭಾವ ತಿಳಿಯದು. ದಿನಂಪ್ರತಿಯಂತೆ ಬಾರಳು. ಸತ್ತವರ ಬಾಯೊಳಗೆ ಒತ್ತಿ ನೀರನೆರದಂತೆ ಚಿತ್ತವಿಲ್ಲದವಳ ಒಡನಾಟ ಶುನಿ ಹೆಣನ ಹತ್ತಿದಂತೆ. ಇವಳ ಕೃತ್ಯ ತಿಳಿಯದು.

ವಿಟನ ಪದ

ಮಾಡಬಾರದು ಪರನಾರಿಯ ಸಂಗ ॥ ಪಲ್ಲ ॥
ಮೋಹಪಾಶದಿ ಮನ । ಆಶಿತೋರಿಸಿ ।
ಘಾಸಿ ಮಾಡುತ್ತ ಉಲ್ಲಾಸದಿಂದಿರುವರೊ ॥ ೧ ॥

ತನು ಮನಧನವನು । ವಿನಯದಿ ಸೆಳೆಯುತ।
ಮನಸಿನೊಳಗೆ ಕುಟಿಲನೆಣಿಸುತ್ತಲಿರುವರೊ ॥ ೨ ॥

ಮಡದಿ ಮಣಿಯರ ಒಡಲೊಳಗಿನಥರ।
ಪೊಡವಿಗಧಿಕವಾದ ಮೃಡವೃಷಭನೆ ಬಲ್ಲಾ ॥ ೩ ॥

॥ ಶ್ಲೋಕಾ ॥

ಸ್ವಾನನ ಬಾಲದ ಡೊಂಕಂ ।
ಕಾನನದೋಳ್ ಹರಿಯು ಹಳ್ಳಕೊಳ್ಳದ ಡೊಂಕಂ ।
ಮಾನುನಿಯರ ಮನಡೊಂಕಂ ।
ಭೂನಾಥ ತಿದ್ದಲರಿಯಂ ॥

ಇದರ ಸಾರಾಂಶವೇನೆಂದರೆ ನಾಯಿಯ ಬಾಲದ ಡೊಂಕನ್ನು, ಕಾನನದಲ್ಲಿ ಹರಿಯುವ ಹಳ್ಳಕೊಳ್ಳದ ಡೊಂಕನ್ನು, ಮಾನುನಿಯರ ಮನದ ಡೊಂಕನ್ನು ತಿದ್ದಲು ಸಾಧ್ಯವಿಲ್ಲ.

ಪರಸ್ತ್ರೀಯರನ್ನು ಎಂದಿಗೂ ನಂಬಬಾರದು. ಯಾಕೆಂದರೆ ಇಚ್ಛಿಯಲ್ಲಿರುವತನಕ ನುಚ್ಚು ಒಂದು ಮಾಣಿಕವು. ಇಚ್ಛೆಯು ತೀರಿದ ಮರುದಿವಸ ಮಾಣಿಕವು ನುಚ್ಚಿನ ಕಾಳಿಗಿಂತಲೂ ಕರಕಷ್ಟ. ಇದರಂತೆ ಇವಳ ಮನಸ್ಸು ಅಥವಾ ಇಚ್ಛೆಯು ತೀರಿರುವದು. ಏನೋ ಅಥವಾ ನಿದ್ರೆಗೈದಿರುವಳೇನೊ? ತಿಳಿಯದು.

ವಿಟನ ಪದ

ಸರಸಿಜಾಕ್ಷಿ ಮರಿದು ಎನ್ನನಿಲ್ಲೇ ಬಿಟ್ಟಳೋ ।
ಸ್ಮರನ ತಾಪಕೆನ್ನ ಗುರಿಯ ಮಾಡಿಕೊಟ್ಟಳೋ ॥ ಪಲ್ಲ ॥

ನಾಳೆ ಬರುವೆನೆಂದು ನೆವನ ಹೇಳಿ ಪೋದಳೋ ।
ಭಾಳನೇತ್ರ ಬಾರದಿರಳೊ ಹೇಳಲಿನ್ನೇನೋ ॥ ೧ ॥

ಕ್ರೂರ ಮನಸಿನೊಳಗ ಮಾಡಿ ಸೇರದ್ಹೋದಳೋ ।
ಯಾರಿಗೆ ಮೊರಿವಿಡಲಿ ನಾನು ಘೋರಬಡಿಪಳೋ ॥ ೨ ॥

ಕಠಿಣಮನ್ನದಿ ದಿಟವು ಮಾಡಿ ಹಟವುದೊರೆದಳೋ ।
ನಿಟಿಲಾಕ್ಷ ವಾಹನಗೆ ಕುಟಿಲದೋರಿದಳೋ ॥ ೩ ॥

ಸರಸಿಜಾಕ್ಷಿಯು ಇವತ್ತಿನ ದಿವಸ ಎನ್ನ ಮರೆದುಬಿಟ್ಟಳೋ ಏನೋ ತಿಳಿಯದು. ಪರಿಪರಿಯಿಂದಾ ಭರವಸದೋಳ್ ಬರುವೆನೆಂದು ಪೇಳಿ ಈಗ ಕ್ರೂರ ಮನಸಿನೋಳ್ ಸೇರಿ ಬಾರಳೋ. ಬಾರಿಬಾರಿಗೆ ಮಾರನಬಾಧಿಯ ಸ್ಯರಿಸಲಾರೆ ನಾರಿಮಣಿಯೇ ಯಾರಿಗೆ ಹೇಳಲಿ?

ವಿಟನ ಪದ

ನಿದ್ರಿಬಾರದು ಕಣ್ಣಿಗೆ ।
ಕಾಮನುಪದ್ರಕ್ಕೆ ಮಾಡಲ್ಹೇಗೆ ।
ಎದ್ದು ನೀ ಬಾರದೆ ಇದ್ದರೆಯನ್ನೋಳ್ ।
ಅಸಾಧ್ಯವಾಗುವದು ಇನ್ನ ॥ ಪಲ್ಲ ॥

ಕನಕದಂತವಳು ನೀನು ।
ಇಂದಿನ ದಿನಕೆ ನಾ ಮಾಡಲೇನು?
ಅನಕ ನೀ ಬಂದೆನ್ನ ಸನಕುಲದಿ ।
ಮಾತಾಡಿ ಮನಕೆ ಸಂತೋಷವನ್ನೂ ॥ ೧ ॥

ಕಜ್ಜಲೋಚನೆಯೆ ಕೇಳು ।
ನಿನ್ನೊಳತಿ ರಂಜಿಸುವಮುಖದೊಳು॥
ಯಂಜಲಕದಪಿಂಗೆ ಮಂಜುಳವಾದಂತಾ ।
ರಂಜನಿಯ ಮಾಡ್ವೆ ನಿನ್ನೊಳು ॥ ೨ ॥

ಕ್ಷಿತಿಯೊಳು ಅತ್ಯಧಿಕವೆನಿಪ ।
ನುತಿಸುವ ಪತಿ ಗುರು ವೃಷಭ ಭೂಪ ॥
ನೊಳು ಅತಿ ಬೇಗ ನೀ ಬಂದು ।
ರತಿಸುಖದೋರಿ ಸಮ್ಮತವು ನೀ ಮಾಡೆ ತಾಪಾ ॥ ೩ ॥

ಹೇ ನಾಗವೇಣಿ ನಿನ್ನ ಬಾಗಿಲದೊಳ್ ನಿಂತು ಕೂಗಿ ಕೂಗಿ ಕರದರೆ ಹೀಗೆ ಸುಮ್ಮನಿರುವರೆ? ನಿನಗಾಗಿ ಬಂದಿರುವೆನು. ಬೇಗನೆ ಅನುರಾಗದೊಡನೆ ಕೂಡಿಕೊಳ್ಳುವೆ. ಸೋಗೆಗಂಗಳೇ ಕುಟಿಲ ಹೆಂಗಳೇ. ಹಾಹಾ ಇದು ಏನು ಆಶ್ಚರ್ಯವು. ಈಗಿನ ವ್ಯಾಳ್ಯದೊಳ್ ಮನಿ ಕೆಲಸಮಂ ಮಾಡಿ ಬೇಸರಿಕೆಯಿಂದಾ ನಿದ್ರಿಗೈದಿರುವಳೋ ಏನೋ ತಿಳಿಯದು. ಆದರೆ ನಾನು ಬಂದ ಕಾರ್ಯವು ಸಾರ್ಥಕವಾಗಲಿಲ್ಲಾ. ಇನ್ನು ಮೇಲೆ ನನ್ನ ಗೃಹಕ್ಕೆ ಪೋಗುವುದುಚಿತವು. ...... ಮುಂದೇನು?

ಘಟ್ಟಿವಾಳಯ್ಯನು ಎಚ್ಚರದಿಂದಿದ್ದು ಹೇಳಿದ ಪದ

ರೀತಿ ತಿಳಿಯದು ಇವಳ ರೀತಿ ತಿಳಿಯದು ।
ರೀತಿ ತಿಳಿಯದಿವಳ ಭೂನಾಥ ನೀನೆ ನೋಡಿಕೊಳ್ಳೊ ॥

ಕಾತುರ ವಿಟನು ಬಂದು ।
ಆತುಕೊಂಡು ಸೊನ್ನಿಯ ಮಾಡ್ವಾ ॥ ೧ ॥

ಮದನ ಮೋಹಕಾಗಿ ಇವನು ।
ಕದವ ಬಡಿದು ಎಬ್ಬಿಸುವಾ ॥
ನಿದ್ರಿಗ್ಯೆದು ಮಲಗಿರುವಳಾ ।
ಸುದತಿಯಳಿಗಾಲ್ಪಿರಿಯುವಾ ॥ ೨ ॥

ಜಾರಿಯರ ಭಾವ ಯಾರಿಗೆ ।
ತಿಳಿಯದು ದೇವಾ ॥
ಘೋರ ಸಂಸಾರದೊಳಗೆ ।
ಮೀರಿ ನಡೆದು ಪೋಗ್ವ ನೆವಾ ॥ ೩ ॥

॥ **ಶ್ಲೋಕಾ** ॥

ಅವದುಂಬರಾಣಿ ಪುಷ್ಪಾಣಿ ।
ಶ್ವೇತಕಾಕ ನಿವಾಸನಂ ।
ಮತ್ಸ್ಯಪಾದಾಜಲಂದೃಷ್ಟೆ ।
ನಾರಿಹೃದಯನಪಶ್ಯತಿ ॥ ೧ ॥

ಇದರ ಸಾರಾಂಶವೇನೆಂದರೆ ಹತ್ತಿ ಹೂವನ್ನಾದರೂ ಕಾಣಬಹುದು, ಬಿಳಿಕಾಗಿಯನ್ನಾದರೂ ಕಾಣಬಹುದು, ಜಲದಲ್ಲಿ ಮೀನಿನ ಹೆಜ್ಜೆಯನ್ನಾದರೂ ನೋಡಬಹುದು, ಪರಂತು ಹೆಂಗಸಿನ ಅಂತರಂಗದ ನೆಲಿಯು ತಿಳಿಯದು. ಲೋಕದೊಳಗೆ, ಅಸಾಧ್ಯವಾಗಿರುವದು ಇವಳ ರೀತಿಯು. ಜಾರ ಲಕ್ಷಣದಲ್ಲಿ ಮಹಾನಿಪುಣಿಯಾಗಿ ತೋರುವಳು. ಪರಂತು ಇವಳು ಜಾರಕೃತಿಗೆ ಪೂರೈಸದೆ ಘೋರ ಸಂಸಾರದೊಳ್ ಸೇರಿ ನಿದ್ರೆಗ್ಯೆದಿರುವಳು. ಈಗ ಹೊರಗೆ ಬಂದಿರುವ ಜಾರಪುರಷನು ಆಲ್ಪರಿಯುವ. ಭಾರ ನಮಗ್ಯಾಕೆ ತೀವ್ರ ಎಚ್ಚರ ಮಾಡಿ ಅವರಿಚ್ಛೆ ತೀರುವಂತೆ ಎಚ್ಚರಪಡಿಸಿ ಬಿಡೋಣಾ. ಶಿವಶಿವಾ ಇವಳ ಗೊಡವಿ ನಮಗ್ಯಾಕೆ?

ಘಟ್ಟಿವಾಳಯ್ಯ: ಎಲೇ ಸ್ತ್ರೀಯಳೇ ಏಳು ಏಳು । ಈಗಿನ ವ್ಯಾಳ್ಯದೊಳ್ ಹೊರಗೆ ಪಶು ಬಂದು ಹಸಿವು ತೃಷೆಗಳ ವ್ಯಸನದಿಂದೆ ಕಸಿವಿಸಿಗೊಳ್ಳುತ್ತಾ ಬಾಗಿಲದ್ವೊರಗೆ ನಿಂತಿಹುದು. ಇದರ ಬಾಧೆಯನ್ನು ತಾಳಲಾರೆ. ಎನಗೆ ನಿದ್ರಿಬಾರದು. ಕಾರಣಾ ಕಡುದೂರ ಪೊಡದು ಬಾರೆ ನಾರಿಮಣಿಯೆ.

(ದಾರಿಯಲ್ಲಿ ಒಬ್ಬ ಯತಿಯು ತಪಸ್ಸು ಮಾಡುತ್ತಿರಲಾಗಿ ಅವಳು ಯಾವ ಎಚ್ಚರವಿಲ್ಲದೆ ಆತನ ಮೆಟ್ಟಿಹೋದ ಸಂಗತಿಯು)

ಯತಿ: ಹೋ ಹೋ ಇವಳ್ಯಾವಳಿರುವಳು? ದೇಹದ ಮೇಲೆ ಸ್ಮೃತಿದಪ್ಪಿ ಏಕಚಿತ್ತಳಾಗಿ ಅವಸರದಿಂದೆ ಎನ್ನ ದಾರಿಯಲ್ಲಿ ಕುಳಿತಿರುವದು ಅರಿಯದೆ, ದಿಟ್ಟತನದಲ್ಲಿ ಎನ್ನ ಎದೆಮೆಟ್ಟಿ ಪೋದಳು. ಇವಳ ಆತಟತನಯೆಷ್ಟು? ನಾ ಎಷ್ಟು ಹೇಳಲಿ? ತಿರುಗಿ ಬಂದರೆ ಇವಳ ಕುಟ್ಟಿ ಕೆಡಹುವೆ. ಇವಳೆಷ್ಟರವಳು ನೋಡುವಾ.

ವಿಟ: ಹೇ ಸರಸಿಜಾಕ್ಷಿ ಸ್ಮರನವಿರಹದಿಂ ಮರಮರನೆ ಮರುಗಿ ನಿನ್ನ ಕರದೊಯ್ಯ ಭರದಿಂದೆ ನಿನ್ನ ಗೃಹದ್ವಾರದೊಳ್ ನಿಂತು ಪರಿಪರಿಯಿಂದಾ ಆಲ್ಪರಿದು ಬೆರಗಾಗಿ ಬಂದೆನು. ಮನ್ನಿಸುವರ್‍ಯಾರು? ಶರಧಿ ವುಕ್ಕಿದರೆ, ಗಿರಿಯೆದ್ದು ಚಲಿಸಿದರೆ, ಧರಣಿ ಬಾಯಿ ತೆರೆದು ನುಂಗಿದರೆ, ದೊರೆ ಪ್ರಜೆಯ ಭಾದಿಸಲು ಪರಿಹರಿಸುವರ್‍ಯಾರು? ತಮ್ಮಿಂದ ತಾವೆ ಪರಿಹರಿಸುವದಲ್ಲದೆ ಏನು ಕಾರಣ ತಡದಿ? ತರುಣಿಮಣಿ.

ಪದಾ (ಘಟ್ಟಿವಾಳಯ್ಯನ ಮಡದಿ)

ಕೋಪವ್ಯಾತಕೆನ್ನೊಳು ಪ್ರಿಯಾ।
ವಿಪರೀತವೇನಿದಾಶ್ಚರ್ಯಾ ॥ ಪಲ್ಲ ॥

ನಿದ್ರಿಗಣ್ಣಿಲಿ ನಾನು ।
ಬದ್ಧಳಾಗಿರುತಲಿ ।
ಕದ್ದು ಬಂದಿನಿ ನಿನ್ನ ಬಳಿಗೆ ।
ಇದ್ದದ್ದೇನು ಯನ್ನೊಳಗೆ ॥ ೧ ॥

ಸುಂದರ ನಿನ್ನ ಮುಖ ।
ಇಂದು ಕಾಂಬುವೆನೆಂದು ।
ವಿಂದು ಚಿಂತಿಸುವೆನು ಜಾಣಾ ।
ಉಳಿಯದು ಎನ್ನ ಪ್ರಾಣಾ ॥ ೨ ॥

ಜಾರನ ಬಾಧೆಯೊಳ್ ।
ತಾಳಲಾರೆನು ತಾಪಾ ।
ಸೊರಗಿ ಸುಣ್ಣಾದೆನು ಕಾಂತೆ ।
ಎನಗೆ ಬಡದಿತು ಭ್ರಾಂತೆ ॥ ೩ ॥

ಹೇ ಮದನ ಸುಂದರ ಇವತ್ತಿನ ದಿವಸ ನಿದ್ರಿಯೋಳ್ ಬದ್ಧಳಾಗಿ ಎದ್ದು ಬರುವದಕ್ಕೆ ಅಸಾಧ್ಯವಾಯಿತು. ಮತ್ತು ಬುದ್ಧಿಯಿಲ್ಲದ್ದರಿಂದಾ ಕದ್ದು ಬಂದಿರುವೆ. ಎನ್ನಲ್ಲಿಯಿದ್ದ ಅಪರಾಧವೇನು? ಸುಂದರಾ ಕರುಣಮಂದಿರಾ.

ವಿಟ: ॥ ವಿಟನ ಪದಾ ॥

ಮರೆಯಲಾರೆ ಮಮತೆ ಮೋಹವನ್ನ ।
ಮಾರ ಮನ್ಮಥನಾಟ ಸಂಪನ್ನೆ ॥ ಪಲ್ಲ ॥

ಸರಸಿಜಾಕ್ಷಿ ನಿನ್ನ ನೋಡಿ ಹರುಷವಾದಿತು ।
ಇರಲಾರೆ ನಡೀ ಕರುಣದಿಂದ ನೀ ದಯಮಾಡಿ ।
ಕರಗಳ ನೀಡಿ ಭರದಿ ಯನಗೆ ॥
ಸುರತ ಸೌಖ್ಯದಿ ಸುಖವಬೆರಿಸಿ ।
ಸ್ಮರನ ಶರಗಳ ಪರಿಯು ತಿಳಿದು ।
ಭರದಿ ನಿನ್ನವರಕೊಂದಿಸುವೆನೊ ॥ ೧ ॥

ಅಂಬುಜಾಕ್ಷಿ ಅಗಲಿರಲಾರೆ ।
ಬಿಂಬದಧರದಮೃತವನ್ನು ತೋರೆ ।
ಸಂಭ್ರಮದೊಳು ಕೂಡಿದನಾರೆ ।
ಕುಂಭಕುಚದ ನೀ ಮನೋಹರೆ ॥
ರಂಭೆ ನಿನ್ನ ತುಂಬಿದ ಮೈ ।
ಚುಂಬನದೊಳ್ದೊಂದಿಸಿ ಕಂಬುಕಂದರೆ ।
ನಿನ್ನ ಸಮರತಿ ಕುಂಭಿನಿಯೊಳ್ ಕಾಣೆ ನಾನು ॥ ೨ ॥

ವ್ಯಸನ ಬಾಳಾದಿತು ಎನಗೆ ।
ಪುಸಿಯ ನುಡಿಗಳು ಕೇಳು ಈಗ ।
ಶಶಿಯುವ ಧನಿಯು ಮಾಡಿದ ಭೋಗಾ ॥
ಕುಸಿರು ಹಾಕಿ ನಿಂದಿಹೆನು ನಾನೀಗ ।
ನೊಸಲಿನೋಳ್ ಬಹುಕುಶಲವಾದ ।
ಯಶವ ಕುಂಕುಮ ಭಸಿತನಿಟ್ಟುವಸುಧಿಯೋಳ್।
ಗುರುಬಸವರಾಜಗೆ ವ್ಯಸನವಾದೀತು ಸುಶೀಲರನ್ನೆ ॥ ೩ ॥

ಹೇ ಸರಸಿಜಾಕ್ಷಿ ನಿನ್ನ ನೋಡಿದಾಕ್ಷಣವೇ ಹರುಷಾಬ್ಧಿಯೋಳ್ ಮುಳಿಗಿದೆನು. ಸರಸಮಂದಿರಕ್ಕೆ ತ್ವರಿತದಿಂ ತೆರಳು. ವಿರಹ ತಾಪವು

ಸ್ಯೆರಿಸಲಾರೆ. ಮಾರಮ್ಮಥನಾಟದೋಳ್ ಸೇರುವ ನಡಿ ಕಾಮಿನಿ ಕಲಹಂಸಗಾಮಿನಿ.

ಹೇ ಸ್ತ್ರೀಯಳೇ ಕವಿಗಳು ಎಂಥವರಾದಾರು? ಯಾಕಂದರೆ ಸ್ತ್ರೀಯರ ವರ್ಣನೆಯಲ್ಲಿ ಕುಚಗಳಿಗೆ ಕಮಲದ ಮಗ್ಗಿಯೆಂದು, ಅಧರಕ್ಕೆ ತೊಂಡಿ ಹಣ್ಣೆಂದು, ಅದರಿಂದಾ ಉದಿಸುವದಕ್ಕೆ ಅಮೃತವೆಂದು, ದಂತಗಳಿಗೆ ದಾಳಿಂಬರ ಬೀಜವೆಂದು, ನಾಸಿಕಕ್ಕೆ ಸಂಪಿಗೆಯ ತೆನಿಯೆಂದು, ನೇತ್ರಗಳಿಗೆ ಕಮಲಗಳೆಂದು, ಮುಖಕ್ಕೆ ಚಂದ್ರನೆಂದು ಈ ರೀತಿಯಿಂದಾ ವರ್ಣಿಸುತ್ತಾರೆ. ಮತ್ತೊಂದು ಸ್ಥಳದಲ್ಲಿ ಕುಚಗಳು ತುಟಿಗಳು ಮಾಂಸದ ಕರಣಿಯಂದು, ಅದರಿಂದಾ ಉದಿಸುವದಕ್ಕೆ ಜೊಲ್ಲುಯಂದು, ಹಲ್ಲುಗಳಿಗೆ ಎಲುಬಿನ ಮಾಲೆಯೆಂದು, ನಾಸಿಕಕ್ಕೆ ಸುಂಬಳ ಕುಪ್ಪಿಯೆಂದು, ಕಣ್ಣುಗಳಿಗೆ ಪಿಚ್ಚಿನ ಪುಂಜಯೆಂದು, ಮುಖಕ್ಕೆ ಬಿಳಿದಾದ ಚರ್ಮಯೆಂದು ಈ ರೀತಿಯಿಂದಾ ನಿರಾಕರಿಸಿ ಮತ್ತು ಸ್ತ್ರೀ ಸಂಪರ್ಕನಿಂದಾ ಸುಖಯಿಲ್ಲೆಂದು, ಹ್ಯಾಗಂದರೆ ಸ್ವಾನನು ಯಲುಬು ಕಡಿದು ಕಡಿದು ತನ್ನ ಬಾಯಿಯೊಳಗಿನ ಜೊಲ್ಲು ತಾನೆ ನೆಕ್ಕಿ, ಯಲುವಿನಲ್ಲಿ ಸ್ವಾದ ಉಂಟೆಂದು ಮತ್ತೆ ಮತ್ತೆ ಹ್ಯಾಗೆ ಕಡಿಯುತ್ತಾ ಹೋಗುವದೋ ಹಾಗೆ ತನ್ನ ಇಂದ್ರಿಯ ಜಾರುತನದಿಂದ ತನಗೆ ಸುಖವಾಗುವದೆ ಹೊರ್ತು ಸ್ತ್ರೀಯ ಸಂಗದಿಂದ ಏನು ಸುಖವಿಲ್ಲವೆಂದು ಅನ್ನುತ್ತಾರೆ.

ಘ. ಮಡದಿ: ಹೇ ಪ್ರಾಣಪ್ರಿಯನೇ ಕೇಳು ನೀನು ಮೇಲೆ ಹೇಳಿದ ಹಾಂಗೆ ನಿಶ್ಚಯವಿದ್ದರೆ ಈಶ್ವರನಿಗೆ ಗಂಗಿ ಗೌರಿಯಂಬವರಿಬ್ಬರು. ವಿಷ್ಣುವಿಗೆ ಲಕ್ಷ್ಮಿಯಂಬವಳೋರ್ವಳು, ಬ್ರಹ್ಮನಿಗೆ ಸರಸ್ವತಿಯೆಂಬುವಳು, ಕೃಷ್ಣಂಗೆ ಹದಿನಾರುಸಾವಿರ ಗೋಪಿಕಾವಧುಗಳು ಇಂತಿಂಥಾ ದೇವಾನುದೇವತೆಗಳು ಹೆಂಡರನು ಮಾಡಿಕೊಂಡವರೆಲ್ಲಾ ಮೂರ್ಖರೆ ಹ್ಯಾಗೆ? ಹಿಂದಕ್ಕೆ ಸ್ತ್ರೀಯರಿಂದಾ ಯಾರಯಾರ ಅವಸ್ಥೆ ಏನಾಗಿರುವದು ನೋಡು. ನೀನು ಆಡಿದ್ದು ನಿಜವಾದರೆ ಇವರು ತಮ್ಮ ತಮ್ಮ ಸತಿಯರನ್ನು ಬಿಟ್ಟು ಬಿಡಲಾರರೋ. ಆ ಸ್ತ್ರೀಯರಿಂದಲೆ ಉಪಯೋಗವಿಲ್ಲದಿದ್ದರೆ ಸ್ವಾಮಿಯು ಲೋಕದಲ್ಲಿ ಹುಟ್ಟಿಸುವದೇ ಬಿಡುತ್ತಿದ್ದನು. ಮತ್ತು ಸ್ತ್ರೀಯರು ಇಲ್ಲದವರಿಗೆ ಈ ಪರಿ ಗತಿಯಿಲ್ಲ ಎಂದು ಪುರಾಣ ಪ್ರಸಿದ್ಧವಾಗಿರುವದು. ತಿಳಿದು ನೋಡು. ಮತ್ತು ಸ್ತ್ರೀಯರ ಶೃಂಗಾರಕ್ಕೂ ಸುಖಕ್ಕೂ ಲೋಕವೆ ಮೋಹಿತವಾಗಿ ಆಚರಿಸುತ್ತಾರೆ ನೋಡು.

॥ ಶ್ಲೋಕಾ ॥ (ವಿಟನ)

ದರ್ಶನಂ ಚಿತ್ತನಾಶಂ ಚ । ಸ್ಪರಶನಂ । ವಿತ್ತನಾಶಯಃ ॥
ಮೈಥುನಂ ರಕ್ತನಾಶಂ ಚ । ನಾರಿ ಪ್ರತ್ಯಕ್ಷ ರಾಕ್ಷಸಃ ॥

ಇದರ ಸಾರಾಂಶವೇನೆಂದರೆ, ಸ್ತ್ರೀಯರ ಕಂಡ ಮಾತ್ರದಿಂದ ಮನಸ್ಸು ಕೆಟ್ಟು ಹೋಗುತ್ತದೆ. ಮುಟ್ಟೋಣದರಿಂದಾ ದ್ರವ್ಯನಾಶ. ಮೈಥುನದಿಂದ ರಕ್ತನಾಶ. ಹೀಗಾದ ಬಳಿಕ ನಾರಿ ಪ್ರತ್ಯಕ್ಷ ರಾಕ್ಷಸಿಯೆನಲಿಕ್ಕೆ ಏನೇನು ಸಂದೇಹವಿಲ್ಲಾ.

॥ಶ್ಲೋಕಾ॥ (ಫ. ಮ)

ಲವಂಗ ಕರ್ಪೂರ ಕಪೋಲವಾತಂ ।
ತಂಬೂಲದಂತೊ ಪ್ರೀತ ಭೂಷಣಾನ್ವಿತಂ ।
ಮುಖಾಂತಯಃ ಮುರಷೋಸಸೇವತೆ ।
ಮೃತಾಂತರಾಂತರಶ್ಯ ನರಶ್ಯ ಜೀವಿತಂ ॥ ೧ ॥

ಇದರ ಸಾರಾಂಶ ಏನೆಂದರೆ ಲವಂಗ ಕರ್ಪೂರದ ಪರಿಮಳಯಿದ್ದಂತಾ ಗಲ್ಲಗಳನ್ನು ತಾಂಬೂಲದಿಂದಾ ಶೋಭಾಯಮಾನವಾಗಿ ಕಾಣುವಂತಾ ಹಲ್ಲುಗಳಿಂದಾ ಯುಕ್ತವಾದ ತುಟಿಗಳನ್ನು ಪುರುಷನು ಸೇವಿಸದಿರ್ದೊಡೆ ಅವನು ಸತ್ತೇನು ಇದ್ದೇನು ಫಲಾ?

॥ ಶ್ಲೋಕಾ ॥ (ವಿಟನ)

ಬಾರಿತವಾದರ ಸುಧಾರಸ ಪಾನಕಾತಿ ಚೇತೋಮ
ಧಿಯಮಭಿವಾಂಛತಿ । ಶೇಷಭಾವಂ । ಆಲಿಂಗನೆ ।
ತವಯಿರೋಚನ । ಪಾತ್ರಭಾವಂ । ಅಖಂಡ।
ಲತ್ವಮಖಿಳಾಂಗ । ನಿರೀಕ್ಷಣೇಷುಃ ॥

ಇದರ ಸಾರಾಂಶಯೇನಂದರೆ – ಎಲೆ ಸ್ತ್ರೀರತ್ನವೆ ನಿನ್ನ ತುಟಿಯಲ್ಲಿರುವ ಸುಧಾರಸವನ್ನು ಸ್ವೀಕಾರವಮಾಡಬೇಕಾದರೆ ಎನ್ನದೊಂದು ಮುಖಸಾಲದೆ? ಮಾಹಾಶೇಷನ ಹಾಗೆ ಸಹಸ್ರ ಮುಖವಾಗಲೆಂದು ನೆನಿಸಿದೆನು. ಮತ್ತು ನಿನ್ನನ್ನು ಆಲಿಂಗಿಸಬೇಕಾದರೆ ನನ್ನಎರಡು ತೋಳುಗಳಿಂದಾ ಆಗದೆ? ಬಾಣಾಸುರನ ಹಾಗೆ ಸಹಸ್ರ ತೋಳುಗಳು ಆಗಲೆಂದು ನೆನಿಸಿದೆನು. ನಿನ್ನ ಸರ್ವಾಂಗವನ್ನು ನಿರೀಕ್ಷಣೆ

ಮಾಡಬೇಕಾದರೆ ಎರಡು ನೇತ್ರಗಳಿಂದಾ ತೃಪ್ತಿಯಾಗದೆ ದೇವಿಂದ್ರನ ಸಹಸ್ರ ಕಣ್ಣುಗಳಾಗಲೆಂದು ಇಚ್ಛಿಸಿದೆನು . ಅದುಕಾರಣಾ ನಿನ್ನ ಸುರತದ ಸೌಖ್ಯಕ್ಕೆ ಮೋಹಿತನಾದೆನು. ನೀನು ಪತಿ ಇದ್ದವಳು. ತೀವ್ರ ನಿನ್ನ ಗೃಹಕ್ಕೆ ನಡೆ ಸುಂದರಿ ಕರುಣವಿರಲಿ.

ಇಲ್ಲಿಗೆ ಎರಡು ಅಂಕ ಆಯಿತು

✦✦✦

ಅಂಕ ೩

॥ ದಾರಿಯಲ್ಲಿ ತಪಸ್ಸು ಗೈದ ಯತಿಪದಾ ॥

ನಿಲ್ಲು ನಿಲ್ಲೆಲೆ ಫುಲ್ಲಲೋಚನೆ ।
ಎಲ್ಲಿ ಪೋಗ್ವಿಯಿನ್ನಾ ॥
ಬಲ್ಲಿದ ಮುನಿಪನು ಇಲ್ಲೆ ಕುಳಿತಿಹನು ।
ಕೊಲ್ಲಿ ಬಿಡುವೆ ನಿನ್ನಾ ॥ ೧ ॥

ದುಷ್ಟ ಸತಿಯೆ ಎನ್ನ ಮೆಟ್ಟಿ ।
ಪೋಗುವರೇ ಕೆಟ್ಟ ನಿನ್ನ ಕಾರ್ಯ ॥
ಸಿಟ್ಟು ಬಂದು ಈಗ ಕುಟ್ಟಿ ಬಿಡಹುವೆನು ।
ಎಷ್ಟು ನಿನ್ನ ಧೈರ್ಯ? ॥ ೨ ॥

ಮಡದಿ ನಿನ್ನ ನೋಡಿ ತಡೆಯದೆನ್ನ ।
ಮನ ದುಡಕು ಎಷ್ಟು ನಿಂದ ॥
ಬಿಡದೆ ನಿನ್ನನು ಕಡಿದು ಹಾಕುವೆನು ।
ಕಡು ತವಕದಿ ಕೊಂದ ॥ ೩ ॥

ಎಲೆ ಸ್ತ್ರೀಯಳೇ ನಿಲ್ಲು ನಿಲ್ಲು. ನೀನು ಎಲ್ಲಿ ಪೋಗುವಿಯೆ ಫುಲ್ಲಲೋಚನೆ. ನಿನ್ನ ವಲ್ಲಭನು ಬಲ್ಲಿದನಿರುವನು ಏನು? ಮತ್ತು ಯತಿದುಷ್ಟ ಸತಿಯಳೇ ನಿನ್ನ ದೃಷ್ಟಿಯು ಎನ್ನೊಳಿರದೆ ಮೆಟ್ಟಿ ಪೋಗುವರೇನೆ? ಶ್ರೇಷ್ಟನೆಂದು ತಿಳಿಯದೆ ಕೊಟ್ಟಿ ಗುಣಗಳು ಯಷ್ಟುಯಿರುವವು. ತಟ್ಟನೆ ನಿನ್ನ ಕುಟ್ಟಿ ಬಿಡಹುವೆ. ಎಲೆ ಮಡದಿಮಣಿಯೇ ನಿನ್ನ ದುಡುಕು ಎಷ್ಟು? ಬಿಡದೆ ನಿನ್ನ ಕಡು ತವಕದೋಳ್ ಕಡಿದು ಹಾಕುವೆನು. ಪೊಡವಿಯೊಳ್ ನಿನ್ನಂತಾ ಮಡದಿಯನ್ನು ಕಾಣೆ. ಬಿಡದೆ ಎಲ್ಲಿಗೆ ಹೋಗುವಿಯಾ? ಕಡುಸೊಬಗಿನ ಮಡದಿಯೇ.....

॥ **ಶ್ಲೋಕ** ॥ **(ಫ. ಮ.)**

ಪಕ್ಷಿಣಾಂಕಾಕಾ ಚಂಡಲಂ ।
ಮೃಗಚಾಂಡಾಲಾಗಾರ್ಧಭ ।

ಯತಿನಾಂ ಕೋಪ ಚಾಂಡಾಲಾ ।
ಸರ್ವ ಚಂಡಾಲನಿಂದಕಾ ॥

ಇದರ ಸಾರಾಂಶವೇನೆಂದರೆ ಪಕ್ಷಿಗಳಿಗೆ ಕಾಗಿಯು ಚಾಂಡಾಲ ಮೃಗಗಳೊಳಗೆ ಗಾರ್ಧಪ ಚಾಂಡಾಲ. ಯತಿಗಳಿಗೆ ಕೋಪ ಚಾಂಡಾಲ. ನಿಂದಕನು ಸರ್ವ ಚಾಂಡಾಲನು. ಇಂತೆಂಬ ನೀತಿಯುಂಟು.

ಘ. ಮಡದಿ: ಹೇ ಮುನಿರಾಯನೇ ಚಾಂಡಾಲವಾದ ಕೋಪವು ನಿನ್ನ ಹೃದಯದಲ್ಲಿ ನೆಲೆಗೊಂಡಿರಲಾಗಿ ನೀನು ತಪಸ್ವಿಯೆನಿಸಿ ಕೊಂಬುವದು ದುರ್ಲಭವಲ್ಲವೆ? ಆದರೂ ಚಿಂತಿಯಿಲ್ಲಾ. ಪರಂತು ನನ್ನ ಹಿಂಸೆ ಮಾಡಬೇಕೆಂದು ಶಸ್ತ್ರವನ್ನು ಧರಿಸಿರುವಿಯಲ್ಲಾ. ಇದು ಅನ್ಯಾಯವಲ್ಲವೆ? ಹೇ ಸನ್ಯಾಸಿಯೇ ಎನ್ನ ಮಾತನ್ನು ಕೇಳು. ನಾನು ನನ್ನ ವಿಟನೊಂದಿಗೆ ಹೋಗಬೇಕಾದರೆ ಅತ್ತಿತ್ತ ಅಚಲವಾಗದಂತೆ ಏಕಚಿತ್ತಳಾಗಿ ನಿನ್ನನ್ನು ತುಳಿದು ಹೋಗಿದ್ದರೂ ಹೋಗಿರಬಹುದು. ಚಿಂತಿಯಿಲ್ಲಾ. ನೀನು ಪರಮೇಶ್ವರನ ಚರಣಾರವಿಂದದೋಳ್ ಮನಯಿಟ್ಟಿದ್ದರೆ ನಾನು ನಿನಗೆ ಒದ್ದದ್ದು ಎಚ್ಚರಕಿ ಆಯಿತಲ್ಲಾ. ಇಗೋ ನಿನ್ನ ಮನಸು ಲೋಕದ ಪ್ರಾಣಿ ಮಾತ್ರಗಳ ಮೇಲೆ ಹೊರ್ತು ಪರಲೋಕ ಸೇರಲಿಲ್ಲಾ. ಹೀಗಾದರೆ ನಿನಗೆ ಎಂದೆಂದಿಗೂ ಐಕ್ಯಮಾರ್ಗ ದೊರಿಯದು ನೋಡು ಕೋಪಿಷ್ಟನೆ.

॥ ಶ್ಲೋಕಾ ॥ (ಘ. ಮಡದಿ)

ಪುಷ್ಪಕೋಟಿ ಸಮಂ । ಸ್ತೋತ್ರಂ ।
ಸ್ತೋತ್ರಕೋಟಿ ನಿಮ್ಮ ಜಪಂ ।
ಜಪಂ ಕೋಟಿ ನಿಮ್ಮ ಧ್ಯಾನಂ ।
ಧ್ಯಾನ ಕೋಟಿ ನಿಮ್ಮ ಕ್ಷಮಾ ॥

ಇದರ ಸಾರಾಂಶ ಏನೆಂದರೆ ಕೋಟಿಪುಷ್ಪಧರಿಸಿದರೆ ಒಂದು ಸ್ತೋತ್ರ ಸಮವು. ಕೋಟಿ ಸ್ತೋತ್ರವು ಒಂದು ಜಪವು. ಕೋಟಿ ಜಪವು ಒಂದು ಧ್ಯಾನವು. ಕೋಟಿ ಧ್ಯಾನವು ಸಮವು ಶಾಂತಿಯು. ಇಂತೆಂಬ ನೀತಿಯುಂಟು. ನೀನು ಯತಿಯಾದ ಬಳಿಕ ಕ್ಷಮಾಯೆಂಬುವದು ಹೃದಯದಲ್ಲಿ ಸ್ಥಿರಪಡಿಸಿ ದೃಢಮನಸ್ಸಿನಿಂದಾ ತಪವಗೈದರೆ ಪರಮಪದವಿ ತೀವ್ರ ಪ್ರಾಪ್ತಿಯಾಗುವದು ಮುನಿಶ್ರೇಷ್ಟನೆ.

ಮುನಿ: ಹೇ ತಾಯಿಯೇ ನಿನ್ನ ನೀತಿಯ ಮಾತು ಕೇಳಿ ನನ್ನ ಕೋಪದ

ಜ್ವಾಲೆಯು ತಣ್ಣಗಾಗಿ ಹೋಯಿತು. ಆದರೆ ನೀನೆ ನನಗೆ ಗುರುಸ್ವರೂಪ ಎಂದು ಭಾವಿಸುತ್ತೇನೆ. ಮತ್ತು ಸಾಷ್ಟಾಂಗವನ್ನು ಗೈಯುತ್ತೇನೆ. ನೀನು ಹೇಳಿದ ಪ್ರಕಾರ ಸ್ಥಿರ ಮನಸ್ಸಿನಿಂದಾ ಜಪತಪ ಹೋಮ ನೇಮ ನಿತ್ಯಾದಿಗಳನ್ನು ಧೃಡ ಮನಸ್ಸಿನಿಂದಾ ಮಾಡುತ್ತೇನೆ. ತಾಯಿಯೇ ಪೋಗಿ ಬಾ.

॥ ಸ್ತ್ರೀಯಳ ಪದಾ ॥ (ತನ್ನ ಪತಿ ಘಟ್ಟಿವಾಳಯ್ಯನ ಕುರಿತು)

ಕಳವಿ ಕೊಡೆಲೊ ಬೇಗನೇ ।
ಪ್ರಾಣೇಶಾ ಎನ್ನಾ ಕಳವಿಕೊಡೆಲೋ ॥ ಪಲ್ಲ ॥

ಕಳವಿ ಕೊಡೆಲೊ ಅರಗಳಿಗಿ ।
ನಾನಿರಲಾರೆ ।
ಬಳಗದವರ ನೋಡಿ ।
ಗಳಿಲಾನೆ ಬರುವೆನು ॥ ೧ ॥

ಬಂಧು ಬಳಗದವರ ನೋಡುವೆ ।
ಮನ ನಿಂದರವಲ್ಲದೀಗ ।
ತಂದಿ ತಾಯಿಗಳ ನೋಡ್ವದೆಂದು ಮನಸಾಯಿತು ।
ಬಂಧನದೊಳುಬಿದ್ದೆ ಸಂದೇಹವಿನ್ಯಾತಕೆ ॥ ೨ ॥

ಅಂಗನಮಣಿಯರನು ಈ ಪರಿಯಲ್ಲಿ ।
ಭಂಗವ ಪಡಿಸುವರೇ ।
ತಿಂಗಳದೊಳು ನಿನ್ನ ಸಂಗವ ಕಾಣೆ ೨೦೯ ।
ಇಂಗಿತ ತಿಳಿಯದು ಹ್ಯಾಂಗೆ ಸೈರಿಸಲಿನ್ನಾ ॥ ೩ ॥

ಎಲೋ ಪ್ರಾಣಪತಿಯೇ ಈಗಿನ ವ್ಯಾಳ್ಯಾದೋಳ್ ಎನ್ನ ಮನವು ಕಳವಳಗೊಳ್ಳುತಿಹದು. ಯಾಕಂದರೆ ತಂದಿ ತಾಯಿಗಳ ಮತ್ತು ಬಂಧು ಬಳಗದವರ ನೋಡಬೇಕೆಂದು ಮನವಿತ್ತು. ಸಂದೇಹಗೊಳ್ಳದೆ ಕಳುಹಿಸು. ಇಲ್ಲಿಗೆ ಬಂದು ನಾನು ಒಂದು ವರ್ಷವಾಯಿತು. ಇದರ ಅಂದವು ತಿಳಿಯದು. ಕುಂದು ಕೊರತೆಗಳಿಲ್ಲದೆ ಚಂದದಿಂ ಕಳುಹಿಸು. ಮತ್ತು ಪರ ಹೆಂಗಳೆಯರನ್ನು ಭಂಗಬಡಿಸಿ ಅಂಗಸಂಗದ ಸೌಖ್ಯವನ್ನು ಬಿಟ್ಟು ನಿನ್ನ ಅಂತರಂಗದ ಇಂಗಿತ ತಿಳಿಯದು. ಹ್ಯಾಂಗೆ ಸೈರಿಸಲಿ? ಪ್ರಾಣನಾಥಾ ಕಳುಹಿಸು. ಕಳುಹಿಸು ಮುಂದೇನು ಇರುವದೊ.

॥ ಗಂಡನ ಪದ ॥ (ಘ. ಪ.)

ನಲ್ಲೆ ನಿನ್ನ ಕಳುಹಿ ನಾನು ।
ಇಲ್ಲೆ ಇರಲೇನು ।
ನಿಲ್ಲವಲ್ಲದೆನ್ನ ಮನಸ್ಸು ।
ಎಲ್ಲಿಗ್ಹೋಗಲೀ ॥ ಪಲ್ಲ ॥

ನೀನೆ ಗತಿಯುಯಂದು ನಾನು ।
ನಂಬಿದ್ದೆ ನಿನ್ನಾ ॥
ಮಾನಹಾನಿ ಮಾಡಿ ಪೋಗ್ವಿ ।
ಮಾಡಲಿನ್ನೇನು ನಾನು ॥ ೧ ॥

ಕ್ರೂರತನವ ಮಾಡಿ ಎನ್ನೋಳ್
ಜಾರಿ ಪೋಗ್ವಳೊ॥
ಯಾರಿಗ್ಹೇಳಲಿವಳ ನಡತಿ ।
ಘೋರ ಬಡಿಪಳೋ ॥ ೨ ॥

ತರಣಿಮಣಿ ಈ ಪರಿ ।
ಮಾಡಿ ತೆರಳಿ ಪೋಗ್ವಿಯಾ ॥
ಪರಿಣಾಮ ಆಗದಂತೆ ಎನಗೆ ।
ಮರಣ ತಂದಿಯಾ ॥ ೩ ॥

ಎಲೆ ಪುಲ್ಲಲೋಚನೆ ನೀನು ಎಲ್ಲಿ ಪೋಗುವಿ? ನನ್ನಲ್ಲಿದ್ದ ಅಪರಾಧವೇನು? ಸೊಲ್ಲು ಸೊಲ್ಲಿಗೆ ತಲ್ಲಣಗೊಳ್ಳುವಂತೆ ನಿನ್ನ ಉಲ್ಲಾಸದ ನುಡಿಗಳು ಆಡಿದರೆ ನಾನೆಲ್ಲಿ ಪೋಗಲಿ? ಮತ್ತು ನೀನೆ ಗತಿಯು, ನೀನೆ ಹಿತಳು, ನೀನೇ ತಂದಿ ತಾಯಿಗಳು, ನೀನೆ ಬಂಧು ಬಳಗವು. ಹೀಗೆ ಇರಲಾಗಿ ಮತ್ತು ಮನಿಯಲ್ಲಿ ನೀನೆ ಒಬ್ಬಳು ಇದ್ದು ಎನಗೆ ನ್ಯೂನ ಆಗದಂತೆ ಶಾಕ ಪಾಕಾದಿಗಳು ಮೊದಲಾಗಿ ಅನುಕೂಲಿಸುವರ್‍ಯಾರು? ಇದು ತಿಳಿದು ನೋಡು ಕಾಂತೆ ಗುಣವಂತೆ. ನಾನೆಲ್ಲಿ ಪೋಗಲಿ? ಕ್ರೂರತನ ಮಾಡಿ ಜಾರಿ ಪೋದರೆ ಯಾರಿಗ್ಹೇಳಲಿ ತರುಣಿ–ಮಣಿ. ಈ ಪರಿಮಾಡಿ ನಡು ನೀರಲ್ಲಿ ಕೈಬಿಟ್ಟಂತೆ ಘೋರ ಸಂಸಾರದ ಬಾಧಿಗೆ ಪರಿಣಾಮ ಆಗದಂತೆ ಪೂರೈಸುವ ಯತ್ನ ಮಾಡಿದೆ ನಾರಿಮಣಿಯೇ ಕರುಣವಿರಲಿ.

ನಾರಿ: ಹೇ ಪ್ರಿಯನೆ ಈಗಿನ ವ್ಯಾಳೆದೋಳ್ ನೀನು ಕಳುಹಿಸಿಕೊಟ್ಟರೆ ಒಳಿತಾಯಿತು. ಇಲ್ಲವೆ ನಾನೇನು ಕೇಳುವಳು ಅಲ್ಲಾ. ಪೋಗುವದು ನಿಶ್ಚಯಾ ನಿಶ್ಚಯಾ. ಪರಂತು ನಿನ್ನ ಕಳವಳಕಿ ನೋಡಲಾರೆ. ಆದರೆ ನೀನು ನನ್ನ ಸಂಗಡಲೆ ಬರಬೇಕೆಂಬಾ ಇಚ್ಚೆಯುಂಟಾಗಿದ್ದರೆ ಕರೆದುಕೊಂಡು ಪೋಗುವೆ ನಡೆ.

॥ ಶ್ಲೋಕಾ ॥

ಪತಿದೈವಯಂದರಿದು ನಡೆದ ಸತಿಗಹುದು ।
ಪರಗತಿಯಿಲ್ಲದಂಗನಿಯರತಿ ಸಹಶಿಗಳ ।
ವರಕೃತಕ ಶೀಲಂಗಳಂ ನಂಬಲಾಗದು ।
ಮೇಣ್ ಸ್ವತಂತ್ರಮಂ ಕೊಡಲಾಗದು ॥

ಪಿತನಿಂದ ಬಾಲ್ಯದೋಳ್ ।
ಪತಿಯಿಂದಾ ಪ್ರಾಯದೋಳ್ ।
ಸುತನಿಂದ ವೃದ್ಧಾಪ್ಯದೋಳ್ ।
ಕುಲಸ್ತ್ರೀ ಸುರಕ್ಷಿತಯಾಗದಿರ್ದೊಡವಳಿಂದ
ನಿಜವಂಶಕುಪಹತಿ । ಬಂದುದಲ್ಲದಿರದು ॥

ಮಾತು: (ಘಟ್ಟಿವಾಳಯ್ಯ)

(ಸ್ವಗತ)ಹೋ ಶಿವಶಿವ ಈಗಿನ ವ್ಯಾಳೆದೊಳು ಈ ಸುಂದರಿಯು ಎನ್ನ ಮಂದಿರ ಬಿಟ್ಟು ಪೋಗುವಳು. ನಾನು ಹೇಳಿದರೆ ಎಂದಿಗೂ ಕೇಳುವುದಿಲ್ಲಾ. ಮುಂದೇನು ಗತಿ ಇಂದುಃಗ ನಾನೇನು ಮಾಡಲಿ? ಶಿವ ಶಿವಾ. ಹೇ ನಾರೀಮಣಿಯೇ ನಾನು ನಿನ್ನ ಸಂಗಡ ಬರುತ್ತೇನೆ. ನಾನು ಗೃಹದೊಳು ಒಬ್ಬನೆಯಿದ್ದರೆ ನನಗೆ ಸೇವಾ ಸ್ನಾನಾದಿಗಳು ಮತ್ತು ಶಾಕಪಾಕಾದಿಗಳು ನೆರವೇರಿಸುವರಿನ್ನಾರು? ನೀನೊಬ್ಬಳೆ ಇರುವವಳು. ಅದು ಕಾರಣ ನಿನ್ನ ಸಂಗಡಲೆ ಬರುತ್ತೇನೆ. ಕರೆದುಕೊಂಡು ನಡೆ. ತರುಣಿಮಣಿ ನಾ ಹ್ಯಾಗೆಯಿರಲಿ?

ಮಾತು: (ಘ. ಹೆಂಡತಿ)

ಹೇ ಪುರುಷನೇ ಸರಸದಿಂದೆ ಭರವಸವುಳ್ಳ ಪುರುಷನ್ನ ಗೊತ್ತು ಪಡಿಸಿ ಕರೆದುಕೊಂಡು ಬರುತ್ತೀನಿ. ತ್ವರಿತದಿಂದೆ ಪೋಗೋಣ ನಡಿ ಸುಂದರಾ ಕರುಣಾಮಂದಿರಾ.

ಮಾತು: (ಘಟ್ಟಿವಾಳಯ್ಯನ – ಸ್ವಗತ)

ಭೋ ಶಿವಶಿವಾ ಪತಿ ಆಜ್ಞಾಮೀರಿ ಪೋಗುವೆನೆಂದು ನುಡಿವಳು. ಇವಳ ಕೃತಕ ತಿಳಿಯದು. ಆದರೆ ಎನ್ನ ಯತ್ನ ಸಾಗುವದು. ನೀನೇ ಗತಿ ಎನಗೆ ಶಂಕರಾ ಪರಮೇಶ್ವರಾ.

॥ ವಿಟನ ಪದಾ ॥

ಸಾಕು ಸ್ನೇಹ ಸುಡಲಿ ಎನ್ನ ।
ನೇಕೆ ನೀನು ಕರದಿಯೊ ॥

॥ ಸ್ತ್ರೀಯಳ ಪದಾ ॥ (ಘ. ಹೆಂ. – ವಿಟನ ಕುರಿತು)

ಬಾರೊ ಬಾರೊ ಪ್ರಾಣಕಾಂತ ।
ಮರಿಯಲಾರೆ ನಿನ್ನ ಭ್ರಾಂತಾ ॥ ಪಲ್ಲಾ ॥

ನಿನ್ನ ಸ್ಮರಣೆಯೊಳಗೆ ನಾನು ।
ಅನ್ನ ಉದಕ ತೊರೆದಿಹೆನೋ ।
ಬನ್ನ ಬಡುತ ಬಂದೆನಿಲ್ಲಿಗೆ ।
ಸುನ್ನುತಾಂಗ ಮನ್ನಿಸಯ್ಯಾ ॥ ೧ ॥

ಹಗಲು ಇರುಳು ನಿನ್ನ ಧ್ಯಾನಾ ।
ಅಗಲದೆ ಇರಲಾರೆ ಸುಗುಣಾ ।
ಬಗೆ ಬಗೆಯಲ್ಲಿ ಎನ್ನ ಮನಾ ।
ಸೊಗಸುವಿಲ್ಲದೆ ಸೈರಿಸಲಾರೆ ॥ ೨ ॥

ಪತಿಯು ಗೃಹದೋಳ್ ಇರಲು ಬೇಗ ।
ಯತನಗೈದು ಬಂದಿರುವೆ ।
ಅತಿಯು ಮೋಹದೊಡನೆ ಕೂಡಿ ।
ರತಿಯ ಸುಖವ ತೋರೋ ರಮಣಾ ॥ ೩ ॥

ಮಾತು: (ಘ. ಹೆಂ – ವಿಟನ ಕುರಿತು)

ಹೇ ಪ್ರಾಣಪ್ರಿಯನೇ ಕೇಳು. ನಿನ್ನ ದಸಿಯಿಂದಾ ನನ್ನ ಮನಸು ಕಳವಳಗೊಳುತ್ತಿದೆ. ಮತ್ತು ನಿನ್ನ ಸ್ಮರಣೆ ಮಾತ್ರದಿಂದೆ ಅನ್ನ ಉದಕವ ತೊರೆದು ಇರುವೆನು. ಭರದಿಂದೆ ನಿನ್ನ ಕರೆದೊಯ್ಯುವ ಪರಿಯನ್ನು ತಿಳಹುವೆ. ತ್ವರಿತದಲಿ ತೆರಳುವಂತವನಾಗೋ ಸರಸಾ ಸುಗುಣಾ.

॥ ವಿಟನ ಪದ ॥

ಸಾಕು ಸ್ನೇಹಾ ಸುಡಲಿ ಎನ್ನ ।
ನೇಕೆ ನೀನು ಕರದಿಯಾಏಕಚಿತ್ತನಾಗಿ ಬರಲು ।
ಬೇಕೆಂದು ಮಮತಿ ತೋರಿದಿಯಾ ॥ ಪಲ್ಲ ॥

ಭರದಿ ಬಾಗಿಲದ್ವೊರಗೆ ನಿಂತು ।
ಪರಿ ಪರಿ ಆಲ್ಪರಿಯುತಾ ॥
ಕರುಣವಿಲ್ಲದೆ ಎನ್ನ ಮರಿದು ।
ನಿದ್ರೆಗೈಯುತಾ ॥ ೧ ॥

ಮತಿ ಹೀನನಾಗಿ ನಾನು ।
ರತಿಯಾ ಬಯಸಿದೆ ॥
ಹಿತವು ಮಾಡಿ ನಿನ್ನ ।
ಪತಿಯ ಜತಿಯಾ ಅಗಲದೆ ॥ ೨ ॥

ವಿಟಪುರುಷ: ಹೇ ಸ್ತ್ರೀಯಳೆ ಸಾಕು ಸಾಕು ನಿನ್ನ ಸ್ನೇಹ ಸುಡಲಿ. ಯಾಕಂದರೆ ಏಕಚಿತ್ತದಿಂದಾ ಬೇಕೆಂದು ನಾ ಭ್ರಮಿಸಿ ಬಂದರೆ ಎನ್ನ ಅಲಕ್ಷ ಮಾಡಿ ಮರದಿಯಾ. ಆದರೂ ಚಿಂತಿಯಿಲ್ಲಾ ಭರದಿ ಬಾಗಿಲದ್ವೊರಗೆ ನಿಂತು ಪರಿಪರಿಯಿಂದ ಆಲ್ಪರಿದರೆ ಕರುಣವಿಲ್ಲದೆ ನಿದ್ರೆಯೊಳಿರುವೆಯಾ. ನಾನೇನು ಮಾಡಲಿ? ಮತಿಹೀನನೆಂದು ನಿನ್ನಯ ರತಿ ಭ್ರಮಿಸಿ ಅತಿ ಮೂರ್ಖನೆಂದೆನಿಸಿಕೊಂಡೆ. ಇದು ಇರಲಿ. ನಿನ್ನ ಪತಿಯೊಡನೆ ಹಿತಗೂಡಿ ಜತಿ ಅಗಲದಂತೆ ಇರುವ ಕೃತಿಗೆ ಯತ್ನಯೇನುಂಟು ಸತಿಶಿರೋಮಣಿಯೇ ಪರುಷದ ಖಣಿಯೇ.

॥ ಪದಾ ॥ (ಘ. ಹೆಂ. – ವಿಟನಿಗೆ)

ಬಲ್ಲೆನೇಳು ಪ್ರಿಯಾ ನಿನ್ನ ಎಲ್ಲ ಗುಣಗಳ ।
ಬಲ್ಲಾ ಮಾತು ತೋರುವದು ಎಲ್ಲಾ ಇದರೊಳು ॥ ೧ ॥

ಬಿರುಸು ನುಡಿಗಳ್ಯಾಕೆ ।
ನಿನ್ನ ಕರಿಯ ಬಂದಿನೋ ।
ಎನ್ನ ಪುರುಷನಳಿದು ಹರುಷದಿಂದೆವಿರೊವೊಣೆಂದಿನ ॥ ೨ ॥

ಚಿಂತಿವ್ಯಾತಕಿನ್ನು ನಡಿಯೊ ಕಾಂತ ಬೇಗನೇ ।
ಶಾಂತವಾಗದೆ ಎನ್ನ ಮನವು ವಿಭ್ರಾಂತವೀಗಳೇ ॥ ೩ ॥

ಘ. ಹೆಂ: ಹೇ ಪ್ರಾಣಪದಕವೆಂಬೊ ವಿಟನೆ ಕೇಳು. ಇಂದಿನ ದಿನದೋಳ್ ನಾನು ಸಂದೇಹಗೊಂಡು ತಂದಿ ತಾಯಿಗಳ ನೋಡಬೇಕೆಂದು ನೆವದಿಂದೆ ಎನ್ನ ಪತಿಗೂಡಿ ಪೋಗುವ ಆಲೋಚನ ಮಾಡಿರುವೆ. ನೀನು ನಮಗೆ ಜತೆಯಾಗೆ ನಡುದಾರಿಯೋಳ್ ದುಷ್ಟಕೃತಿಯಂ ಮಾಡಿ ಹತವಾಗುವ ಯತ್ನವನ್ನು ಉಂಟು ಮಾಡೊ ಮತಿಯುತನೆ.

ವಿಟ: ನೀನು ಹೇಳಿದ ಪ್ರಕಾರ ನಡುದಾರಿಯಲ್ಲಿ ಪ್ರಯತ್ನ ಮಾಡಿ ಅಳಿದು ಬಿಡುತ್ತೇನೆ. ಕಾರಣವೇನೆಂದರೆ ನಿನ್ನ ಪತಿಯು ಇದ್ದರೆ ನಮಗೆ ಅತಿ ಕ್ಲೇಶ ಬರುತ್ತದೆ. ತೀವ್ರಗತಿ ಹೊಂದಿ ಹಿತದಿಂದೆಯಿರೋಣಾ ಸಖಿಯೆ ಕಮಲಮುಖಿಯೇ.

॥ ಸ್ತ್ರೀಯಳು ತನ್ನ ಗಂಡನ ಮುಂದೆ ಹೇಳುವ ಮಾತು ॥

ಹೇ ಪ್ರಿಯನೇ ಈಗಿನ ವ್ಯಾಳೆದೋಳ್ ನನಗೆ ನೀರಡಿಕೆಯಿಂದಾ ಬಾಧಿಪಡಿಸುತ್ತಿದೆ. ಕಾರಣ ಇಗೋ ಇದೇ ಮಾರ್ಗದಲ್ಲಿ ಸೇದುವ ಕೂಪವಿದೆ. ನೀವು ಇಬ್ಬರೂ ಜತಿಯಾಗಿ ಜಲವನ್ನು ತೀವ್ರ ತೆಗೆದುಕೊಂಡು ಬನ್ನಿರಿ. ಬಾಯಾರಿರುವದು.

(ಆ ಪುರುಷನು ಗಂಡನ ಬಾವಿಯೊಳಗೆ ಹಾಕಿ ಬಂದ ನಂತರ ಆವಾಗ ಅವಳು ತನ್ನ ವಿಟನ ಮುಂದೆ ಅನ್ನುವ ಮಾತುಯೇನಂದರೆ)......

ಹೇ ಪ್ರಿಯನೇ ನಿನ್ನ ಮನಸಿನಕಾಂಕ್ಷಿಯು ತೀರಿಹೋಯಿತು. ಇನ್ನು ಮೇಲೆ ಯಾರ ಭಯವು ನಮಗಿರದು. ತೀವ್ರ ದಾರಿವಿಡಿದು ಪೋಗೋಣಾ ನಡೆ.

(ಹೋಗುವರು)

(೩ನೇ ಅಂಕ ಸಮಾಪ್ತಿ)

✦✦✦

ಅಂಕ – ೪

(ವಿಟಗಾರ ಪುರುಷನು, ಇವಳು ಇಬ್ಬರೂ ಕೂಡಿ ಅತೀ ಸಂತೋಷದೊಡನೆ ಪೋಗುತ್ತಿರಲಾಗಿ ತನ್ನ ತವರೂರಲ್ಲಿ ಮತ್ತೊಬ್ಬ ಮೊದಲಿನ ಸ್ನೇಹಿತನು ಇವರ ನೋಡಿದಾಕ್ಷಣಕ್ಕೆ ತರುಬಿ ಅನ್ನುತ್ತಾನೆ.)

॥ **ಪದಾ** ॥

(ಘ. ಮಡದಿಯ ತವರಿನಲ್ಲಿರುವ ವಿಟಪುರಷನ ಪದ)

ನಾರಿಮಣಿಯೇ ಎನ್ನ ಮೀರಿ ಪೋಗುವರೇನೆ ।
ಕ್ರೂರತನವ ಬಿಡೆ ವಾರಿಜಾಕ್ಷಿ ॥ ಪಲ್ಲ ॥

ಪ್ರಾಣಸಖಿಯೆ ನಿನ್ನ ಕಾಣದೆ ಇರಲಾರೆ ।
ತ್ರಾಣಗುಂದಿಹೆ ನಾನು ಹರಿಣಾಕ್ಷಿಯೇ ॥ ೧ ॥

ಕಾಂತೆ ನಿನಗೆ ಭ್ರಾಂತಿಗೊಂಡಿರುವೆನು ।
ಕಂತುವಿನ ಬಾಧಿಯೆಂತು ತಾಳಲೆ ನಾ ॥ ೨ ॥

ಮಡದಿ ಮಣಿಯೆ ಎನ್ನ ಮಿಡಿಕಿಸುವದು ಘನಾ ।
ಪೊಡವಿಯಧಿಕವಾದ ಒಡಿಯ ಬಸವನಾ ॥ ೩ ॥

(ತವರೂರಿನ ವಿಟಪುರುಷ)

ಹೇ ನಾರಿ ನನ್ನ ಮೀರಿ ಎಲ್ಲಿ ಪೋಗುವಿ. ನಿನ್ನ ಕಾಣದೆ ಎನ್ನ ಪ್ರಾಣಾ ಉಳಿಯದು. ತ್ರಾಣಗುಂದಿ ಸೊರಗಿ ಕರಗಿ ಮರಮರನೆ ಮರಗಿ ಬಳಲುವೆನು. ಜೇರ ಆದರೂ ಕರುಣವಿಲ್ಲದೆ ಪರನಾರಿಯರಂತೆ ಉಸುರುವಿ. ನಿನ್ನ ಮರ್ಮವು ನಾನರಿಯದಿದ್ದರೆ ಪೇಳು. ಎನ್ನ ಪೂರ್ವಸ್ನೇಹದೋಳ್‌ಯಿದ್ದು ಮರ್ಮ ನಿನಗ್ಯಾಕೆ ಶರ್ಮಗೇಡಿ ಮತ್ತೆಲ್ಲಿ ಪೋಗುವಿ ನೋಡುವ.

॥ ಸ್ತ್ರೀಯಳ ಮಾತು ॥

ಅಯ್ಯೋ ಶಿವಶಿವಾ ನಡುದಾರಿಯಲ್ಲಿ ಎನ್ನ ತರುಬಿ ಮಾನ ಮರ್ಯಾದಿಗಳನ್ನು ಸೂರಿ ಮಾಡಿದನು. ಈ ಕುಲ್ಲ ಮನುಜನು. ಎಲ್ಲಿಂದ ಬಂದಿರುವನು? ಇವನ ಉಲ್ಲಾಸದ ನುಡಿಗೆ ಬೆಂಕಿ ಹಚ್ಚಲಿ. ಶಿವಶಿವಾ ಏನ ಮಾಡಲಿ?

॥ **ಶ್ಲೋಕ** ॥ **(ಸ್ತ್ರೀಯಳ)**

ಪಾವಕ ಜ್ವಾಲಿಯೊಳು ಪೊರಡಲಿಬಹುದು ।
ಹಾವುಗಳ ಹಿಡಿದ್ಹಿಡಿದು ಯಳೆದೆಳೆದು ತರಬಹುದು ।
ತೋವಿರ್ದ ಮಡುವು ಧುಮುಕಲಿಬಹುದು ।
ಗರಳವ ಸೇವಿಸಬಹುದು । ಜಟರದೊಳಗಿನ್ನು ।
ಸಾವಿಗಂಜದೆ ಕೊರಳನು ಕತ್ತರಿಸಿಕೊಳಬಹುದು ।
ಜೀವವಿದ್ದಂತೆ ಲಜ್ಜೆಯನ್ನು ಕಳಿದುಕೊಳಲಾರೆನಯ್ಯಾ ।
ಆ ಪರಿಯಲ್ಲಿ ನಿನ್ನ ನಂಬಿದೆ ಅನಾಥಳನರಕ್ಷಿಸೋ ರಕ್ಷಿಸೋ ।
ಪರಮೇಶ್ವರಾ । ಶಂಕರಾ ।
ಮುಪ್ಪುರದಾಂಶಿಯೆ ಏನು ಮಾಡಲಿ ?

॥ **ಸ್ತ್ರೀಯಳ ಪದಾ** ॥

ಏನು ಮಾಡಲಿ ಈಗ ನಾನು ॥ ಪಲ್ಲ ॥
ಹೀನಮನುಜನು ಎನ್ನ ।
ಮಾನಹಾನಿ ಮಾಡುವನು ।
ಕೂನಯಿಲ್ಲದಿವನು ಎನ್ನ ।
ಏನು ಏನು ಎಂದು ನುಡಿವಾ ॥ ೧ ॥

ಪತಿಯನಳಿದು ಬಂದ ರೀತಿ ।
ಹಿತವನರಿದು ಇವನ ಪ್ರೀತಿ ।
ನೆಲೆಯ ಕಾಣ್ದೆನೆಂದು ಖ್ಯಾತೆ ।
ಕ್ಷಿತಿಯೊಳಗ್ಹೊಂದಿದೇನು ಗತಿ ॥ ೨ ॥

ತಂದಿ ತಾಯಿಗಳನು ನೋಡಾ ।
ಬಂದರಾಯಿತೀ ಹಾಡಾ ।
ಮುಂದೆ ಯಾರು ಎನಗೆ ಜೋಡಾ ।
ತಂದಿಯೋ ಸಂಕಟವು ಮೃಡಾ ॥ ೩ ॥

ಹಾ ವಿಧಿಯೇ ಏನು ಮಾಡಿದಿ? ಹೀನಮನುಜನಿವನು ಎನ್ನ ಮಾನ ಹಾನಿ ಮಾಡುವನು. ಕೂನವಿಲ್ಲದೆ ನಾನೆ ನಿನ್ನ ಪತಿಯೆಂದು ನುಡಿವ. ಮತ್ತು ಪತಿಯನ್ನು ಅಳಿದು ಎನ್ನ ಜತಿಯಲ್ಲಿರುವ ಪುರುಷನೊಡನೆ ಹಿತವಾಗಿ ಗತಿಕಾಣಬೇಕೆಂಬ ಮತಿಯಿತ್ತು ನಾ ಬಂದೆನು. ಮತ್ತು ತಂದಿ ತಾಯಿಯಾ ನೋಡಬೇಕೆಂದು ಸಂದೇಹಗೊಳ್ಳದೆ ಬಂದಿರುವೆನು. ಎನ್ನ ಹಿಂದೆ ಬಂದಿರುವ ವಿಧಿಗೆ ನಾನೇನು ಮಾಡಲಿ? ಶಂಕರಾ ಇನ್ನು ಫಣಿಯಲ್ಲಿ ಬರೆದ ಲಿಖಿತವು ಏನಿರುವುದು? ಪಡದ ಭವಣಿಯನ್ನು ಈ ಪೊಡವಿಯಲ್ಲಿರುವ ಮಡದಿಯರು ಕೈ ಹೊಡೆದು ನಗುವಂತೆ ಮಾಡಿದಿ. ಹಾ ವಿಧಿಯೆ ಮುಂದೇನು ಗತಿಯೊ.

॥ ಎರಡನೆಯ ವಿಟನ ಪದ ॥

(ಮೊದಲವಿಟನ ಕುರಿತು)

ಎಲ್ಲಿ ಯಾವನು ನೀ ಬಂದಿಲ್ಲಿ ಯನ್ನಯಾ ।
ವಲ್ಲಭಿಯಳನು ಕೈಹಿಡಿದು ಬಲ್ಮೆಯಿಂದಲೀ ॥ ೧ ॥

ಎನ್ನ ಮಡದಿಯೇ ಇವಗಿನ್ನು ಬಿಡುವೆನೇ ।
ಬೆನ್ನು ಬಿಡದಲೆ ನಾನು ಇನ್ನು ಕೊಡುವೆನೇ ॥ ೨ ॥

ಎಷ್ಟು ನಿನ್ನದು ಸೊಕ್ಕು ನಷ್ಟ ಆದಿಯೋ ।
ದುಷ್ಟಬುದ್ಧಿಯಿಂದ ನೀನು ಕೆಟ್ಟು ಪೋದಿಯೋ ॥ ೩ ॥

ಎರಡನೇ ವಿಟ: ಎಲಾ ನೀಚಾತ್ಮಾ. ನೀನು ಎಲ್ಲಿಯವನು? ಎನ್ನ ವಲ್ಲಭಿಯಳನ್ನು ಬಲ್ಮೆಯಿಂದ ಹಿಡಿದು ಎಲ್ಲ ಬಲ್ಲಂತೆ ಮಾತಾಡ[illegible]ಯಾ? ಈಗ ನಿನ್ನ ಕೊಲ್ಲಿ ಬಿಡುವೆ ನಿಲ್ಲು ನಿಲ್ಲು, ನೋಡುವಾ.

ಮೊದಲ ವಿಟ: (ಗಂಡನ ಊರಿನಲ್ಲಿರುವ ವಿಟ):

ಎಲಾ ಮೂರ್ಖಾ ಇವಳು ಎನ್ನ ಮಡದಿಯಿರುವಳು. ತಡಿಯದೆ ಹಿಡಿದುಕೊಂಡು ಇರುವೆ. ಎನ್ನ ಒಡಲೊಳ್ ಕಡುಕೋಪ ಉಂಟಾಗಿರುವದು. ಪರರೊಡವಿಯೆಂದರಿಯದೆ ನಡುದಾರಿಯಲ್ಲಿ ಗಡಬಡಿಸಿ ನುಡಿವಿಯಾ? ಇವಳ ಗೊಡವಿ ನಿನಗ್ಯಾಕೆ? ಕಡುಮೂರ್ಖರೊಳ್ ಶಿರೋಮಣಿಯೇ.

ಎರಡನೇ ವಿಟ: (ತವರಿನಲ್ಲಿರುವ)

ಎಲಾ ದುಷ್ಟಾ ನೀನು ಎಷ್ಟು ಶೌರ್ಯದ ನುಡಿಯನ್ನು ಘಟ್ಟಿ ಘಟ್ಟಿಸಿ ನುಡಿಯುವಿ? ಆದರೆ ನೀನು ಭ್ರಷ್ಟತನದಿಂದಾ ಕೆಟ್ಟು ಪೋಗುವಿ. ಎಷ್ಟು ನಿನ್ನ ಕೆಟ್ಟ ಬುದ್ಧಿಯು. ಮೈ ಮುಟ್ಟಬಂದರೆ ನಿನ್ನ ಕುಟ್ಟಿ ನಷ್ಟ ಮಾಡಿ ಯಮಪಟ್ಟಣಕ್ಕೆ ಅಟ್ಟಿಬಿಡುವೆ ನೀಚಾತ್ಮಾ.

(ಈ ಸಮಯಕ್ಕೆ ಘಟ್ಟಿವಾಳಯ್ಯ ಬರುತ್ತಾನೆ)

॥ ಘಟ್ಟಿವಾಳಯ್ಯನ ಪದ ॥

ಎನ್ನನು ಪಾಲಿಸೊ ಬಾನುನೇತ್ರಾ ।
ಸನ್ನುತ ಸುಗುಣಮಣಿ ಪರಮಪವಿತ್ರಾ ॥ ಪಲ್ಲ ॥

ಸತಿಸುತರೆಂಬುವ ಹಿತದಿ ನಾನು ।
ಗತಿಯನು ಕಾಂಬುವುದೆಂದಿಗೆ ಇನ್ನು ॥ ೧ ॥

ತ್ರಿಪುರದೌಂಶಿ ಎನ್ನಪರಾಧಗಳನು ।
ವಿಪರೀತಹ ಉಪಚರಿಸಿ ಇನ್ನು ॥ ೨ ॥

ಕ್ಷಿತಿಯೊಳು ಅಧಿಕವಾದ ಪತಿವೃಷಭೇಂದ್ರಾ ।
ಗತಿ ನೀನೆಯೆಂದು ನಂಬಿರುವೆ ಸುಸಾಂದ್ರಾ ॥

(ಘಟ್ಟಿವಾಳಯ್ಯನ ಸ್ವಗತ)

ಭೋ ಶಂಕರಾ. ಗೌರಿವಲ್ಲಭಾ ರಕ್ಷಿಸು ರಕ್ಷಿಸು. ಈಗಿನ ವ್ಯಾಖ್ಯಾದೋಳ್ ಇದೆ ಸತಿಯಿಂದ ಎನಗೆ ಈ ಗತಿಯಾಗಿರುವುದು. ಯಾಕೆಂದರೆ ಒಬ್ಬ ಸ್ತ್ರೀಯಳಿಗೆ ಇಬ್ಬರು ಪುರುಷರು ಗುದ್ಯಾಟದೋಳ್ ಬದ್ಧರಾಗಿ ನಿಂತಿಹರು. ಇದು ಅಸಾಧ್ಯವೇ ಸರಿ. ಆದರೂ ಚಿಂತಿಯಿಲ್ಲಾ. ಎನ್ನ ಮುಗ್ಧಭಾವದ ರೀತಿಯನ್ನು ತಿಳಿದು, ಇದ್ದ ಸಂಸಾರವನ್ನು ಅಳಿದು ಪ್ರಸಿದ್ಧವಾದ ಸದ್ಗತಿಯನ್ನು ಹೊಂದಿಸಿ ಉದ್ಧಾರ ಮಾಡೊ ಶಂಕರಾ ಗೌರಿವಲ್ಲಭಾ. ಮುಪ್ಪುರದೌಂಶಿ ಎನ್ನಪರಾಧವೇನು? ಎಲಾ ಪುರುಷರುಗಳಿರಾ. ನಿರಿಶಿನಿಂದ ಈ ಸರಸಿಜಾಕ್ಷಿಯಳ ಹಿಡಿದು ಪರಿಪರಿಯಿಂದಾ ಚೆರಿಶ್ಯಾಡುವ ಪರಿಯು ಎನಗೆ ಪರಮಾಶ್ಚರ್ಯ ಕಾಣುವುದು. ತ್ವರಿತದಿಂದಾ ಪೇಳಿರಿ ಸರಿವಾದಿಗಳಿರಾ.

ವಿಟಪುರುಷ: (ಗಂಡನ ಊರಿನಲ್ಲಿರುವ)

ಮಹಾ ಪುರುಷನೇ ಕೇಳ್, ಇವಳು ಎನ್ನ ಸತಿಯಳು ಎಂದು ನಾನು ಪಿಡಿದಿರುವೆನು. ಆದರೆ ಇವನು ನನ್ನವಳೆಂದು ಭಿನ್ನ ಭೇದಗಳಿಲ್ಲದೆ ಅನ್ಯಾಯದಿಂದಲೆ ನನ್ನ ಸಂಗಡ ಗುದ್ಯಾಟವನ್ನು ಮಾಡುವನು. ಇದರ ವಿಚಾರವನ್ನು ಚೆನ್ನಾಗಿ ಮಾಡಿ ಉಭಯರಿಗೆ ಈ ಕನ್ಯಾಮಣಿಯನ್ನು ಸನ್ಮತವ ಪಡಿಸಿರಿ ಮಹಾಪುರುಷರೇ.

(ಘಟ್ಟಿವಾಳಯ್ಯ ಸ್ವಗತ)

ಇವಳು ಮಾಡಿದ ಕೃತಕ ಬುದ್ಧಿಯ ಕಾರ್ಯವು ಮತ್ತೂ ನನ್ನ ದೃಷ್ಟಿಗೆ ಬಿದ್ದಿತೇ ಶಿವಶಿವಾ. ಈ ನೀಚಾತ್ಮಳ ಆಚಾರವನ್ನು ಸೂಚಿಸಬೇಕಾದರೆ ಅಗೋಚರವಾಗಿ ತೋರುವದು. ಇದಕ್ಕೆ ಯೋಚನೆ ಏನು ಮಾಡಲಿ? ಈಗಿನ ವ್ಯಾಳ್ಯದಲ್ಲಿ ಉಭಯ ಪುರುಷರಿಗೆ ಉಭಯ ಸ್ತ್ರೀಯರುಗಳ ಮಾಡಿ ನಿರ್ವಾದವಿಲ್ಲದೆ ಬೋಧವನ್ನು ಕೊಟ್ಟು, ಭಾದಾ ಬಾರದಂತೆ ಮಾಡುವೆ. ಮತ್ತು ಸಂಸಾರವೆಂಬಾ ವಿಧಿಯೋಳ್ ಸಿಲ್ಕಿ ನಿನ್ನ ಪಾದಾರವಿಂದದೋಳ್ ಮನವ ನಿಲ್ಲಿಸೊ ಶಂಕರಾ. ಕರುಣವಿರಲಿ ಕರುಣಿಸು.

(ಘಟ್ಟಿವಾಳಯ್ಯ:–ತನ್ನ ಸ್ತ್ರೀಯಳಿಗೆ)

ಹೇ ಸ್ತ್ರೀಯಳೆ ಇತ್ತ ಬಾ. ನಿನ್ನ ಕೃತ್ಯ ಸರಿಯಿಲ್ಲಾ ಮೃತ್ಯುರೂಪಳೆ. (ಎಂದು ಘಟ್ಟಿವಾಳಯ್ಯನು ಸೀಳಿ ಎರಡು ತೊತ್ತುಗಳ ಮಾಡಿ, ಸನ್ಮತವ ಪಡಿಸಿದನು.)

ಇಲ್ಲಿಗೆ ಕಥೆ ಸಂಪೂರ್ಣವಾಗಿ ಮಂಗಳಾರ್ತಿ

✦✦✦

ಮಂಗಳಾರುತಿ ಪದಾ

ಮಂಗಳಾರುತಿ ಬೆಳಗುನು ಬಾರೆ ।
ಮಹಾಲಿಂಗದೇವಗೆ ಮನೋಹರೇ ॥ ಪಲ್ಲ ॥

ಕುಂದಕುಸುಮ ಸುಗಂಧವ ಲೇಪಿಸಿ ।
ಇಂದುಧರಗೆ ಆನಂದದಿ
ಛಂದದಿ ಸುಂದರಾಂಗಿಯೇ ॥ ೧ ॥

ಕಾಲಕಾಲಗೆ ನೀಲಕಂಧರಗೆ ।
ಬಾಲಿಗೊಲಿದ ಸುವಿಶಾಲಗೆ
ಲೋಲಗೆ ತ್ರಿಶೂಲಗೆ ॥ ೨ ॥

ಮನದೊಳಗನುದಿನ ವಿನಯದಿ ನೆನೆಯುತ ।
ಘನ ವೃಷಭಗೆ ಮಾನಿನಿ
ರನ್ನೆ ಮೋಹನೆ ಸಂಪನ್ನೆ ॥ ೩ ॥

ಮಂಗಳಾರತಿ ಬೆಳಗುನು ಬಾರೆ ।
ಮಹಾಲಿಂಗದೇವಗೆ ಮನೋಹರೇ ॥ ೪ ॥

ಅಂಕ – ೪ ಸಮಾಪ್ತವಾಗಿರುತ್ತದೆ.

✦✦✦

ನಾಟಕ ಹೇಳಿದವರು

ಅಲ್ಲಿಂದಾ ಘಟ್ಟಿವಾಳಯ್ಯನು । ತಾನು ಗುರುಧ್ಯಾನದೋಳ್ ಬೆರದು ಐಕ್ಯ ಪದವಿಯನ್ನು ಹೊಂದಿದನೆಂದು ಪುರಾಣ ಪ್ರಸಿದ್ಧವಿದ್ದದ್ದು ನೋಡಿ "ಸಿದ್ದಪ್ಪಾ ಕಡಿ – ಅರಸನಾಳ" ಈತನು ವೃತಾ ವ್ಯಾಳ್ಯಗಳಿಯಬಾರದೆಂದು ಲೋಕೋಪಕಾರವಾಗಿ ಪರಮೇಶ್ವರ ಪಾರ್ವತಿ ಶಾರದಾಂಬಾ ಮೊದಲಾದವರ ಸ್ತೋತ್ರವನ್ನು ಮಾಡಿ ಸ್ವಕಲ್ಪನೆಯಿಂದಾ ಕೇಳುಕಿಯ ಬಲದಿಂದಲು ಚಮತ್ಕಾರ ಭಾವವುಳ್ಳ 'ಘಟ್ಟಿವಾಳಯ್ಯನ ಕಥೆ" ಅಥವಾ 'ಲೋಕಾಚರಿಸುವ ನಾಟಕ' ಯಂತಲೂ ಪೆಸರಿಟ್ಟು ಶ್ಲೋಕಾರ್ಥಗಳು ಮಾತುಗಳು ಮೊದಲಾಗಿ ಕಲ್ಪಿಸಿದ. ಶಕ ೧೮೨೩ ಪ್ಲವನಾಮ ಸಂವತ್ಸರೆ ಮಿತಿ ಅಧಿಕ ಶ್ರಾವಣ ಶುದ್ಧ ॥೭॥ ಮಂಗಳವಾರ ದಿವಸ ಮುಗಿದಿದ್ದು ಚಿತ್ತಾ ನಕ್ಷತ್ರ, ಮತ್ತು ಪರಹಿತಾರ್ಥ ಜನರಿಗೆ ಚಮತ್ಕಾರವು ಬುದ್ಧಿಯ ಕುಶಲತ್ವವು ಜ್ಞಾನವು ಉಂಟಾಗುವದು. ಬರೆದು ಓದಿ ಕೇಳಿದವರಿಗೆ ಧನಧಾನ್ಯ ಕನಕ ವಸ್ತ್ರ ಪುತ್ರಪೌತ್ರಾದಿ ಸಕಲ ಐಶ್ವರ್ಯವು ಸಮೃದ್ಧಿಯಾಗಲೆಂದು ನಾನು ಶ್ರೀ ಪಾರ್ವತೀ ಪರಮೇಶ್ವರರ ಕುರಿತು ತ್ರಿಕಾಲದಲ್ಲಿ ಪ್ರಾರ್ಥಿಸುತ್ತೇನೆ.

ಫಲಶೃತಿ

ಇದರಲ್ಲಿ ವಾಕ್ಯದೋಷ ಹಸ್ತದೋಷ ಮುಂತಾದವುಗಳು ಅಸ್ತವ್ಯಸ್ತವಾಗಿದ್ದರೆ ಬುದ್ಧಿವಂತರು ತಿದ್ದಿಕೊಳ್ಳಲೆಂದು ಯಾವತ್ತರಿಗೂ ಪ್ರಾರ್ಥನಾವಿರುತ್ತದಲ್ಲಾ. 'ಚಂದನ ಕೊರಡು ಕಚ್ಚಿ ನೋಡಿದರೆ ವಿಷವಕ್ಕು. ಪರಂತು ಸುಗಂಧವೆಂಬುದೊಂದು ಸದ್ಗುಣ ಇರಲಾಗಿ ಪರಿಮಳದ್ರವ್ಯಯೆನಿಸಿಕೊಂಡಿತು. ಮತ್ತು ಲೋಕ ಪೂಜೆ ಆಯಿತು. ಅದು ಕಾರಣಾ ಈ ಗ್ರಂಥದಲ್ಲಿ ದುರ್ಗಣವೆಂಬೋ ವಿಷವೇನಾದರೂ ಇದ್ದರೆ ಸತ್ಪುರುಷರು ನೋಡಿ ಕಿಂಚಿತ್ ಸದ್ಗುಣವಿರಲು ಅದನ್ನು ಪ್ರಸಿದ್ಧಕ್ಕೆ ತರಬೇಕೆಂದು ವಿಜ್ಞಾಪನೆ ಮಾಡುತ್ತೇನೆ.

ವೀ ಲೋಕಾಚರಿಸುವ ನಾಟಕವು ಸಮಾಪ್ತ ಸಂಪೂರ್ಣ ಮುಗಿಯಿತು.

ಸಂಪೂರ್ಣ ಸಮಾಪ್ತ ಮಂಗಳಮಾಃ

ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

✦✦✦

ಈ ಘಟ್ಟಿವಾಳಯ್ಯನ ನಾಟಕವನ್ನು ಬರೆದವರು ಯಾರೆಂದರೆ ಸಂಗನ ಬಸಯ್ಯಾ ತಂದೆ ಸಂಗಯ್ಯಾ ಮಠದ

ಸಾ॥ ಗಂಗೂರ, ತಾಲೂಕು ಮುದ್ದೇಬಿಹಾಳ

ಜಿಲ್ಲಾ ವಿಜಾಪೂರ

ಮುಕ್ಕಾಮ ಮುದ್ದೇಬಿಹಾಳ

ತಾಲೂಕ ಪೈಕಿ ಹೊಳಿಇಂಗಳಗಿ

ಗಾವಟಿಶಾಲಾ ಮಾಸ್ತರ ಇಂಗಳಗಿ

ಇವರು ಬರದದ್ದು ಮಿತಿ ತಾ ॥ ೯ ॥ ಮಾಹೆ ಅಗಟೊಂಬರ ಸನ್ನ ಇಸ್ವಿ ಬುಧುವಾರ ಘ ॥ ೦ ॥ ೦ ॥ ಮುಗಿದುವಿದ್ದೀತು ಸಂಪೂರ್ಣ

✦✦✦✦✦

ಬಸವೇಶ್ವರ

೧ನೇ ಅಂಕ.

ನಾಂದಿ-(ಚಾಲ "ಪ್ರೇಮ ನೇಮ")

ಶ್ರೀ ಶಂಭೋ ಶಂಕರಸುರಶ್ರುತಿತತಿನುತಹತಮುರಾಧಿರಾ । ಗಂಗಾ
ಭಂಗಾಸಂಗಾ ತುಂಗಾಸುಜಲದಿ ಗುರುಪತಮಂಗಲಾಂಗ ॥ಗಿರಿರಾ
ಡ್ವಾಲಾ । ಮುಖಕಿಲಾಲಾ । ಭವಗ್ರಣಿಮಾಲಾ । ಗಲಕುಕ್ಷೇಲಾ ॥
ಸ್ಫುರುಣಕರುಣಹರ । ಶರಣಶರಣಪರ । ಮರಣಹರಣವರ ॥
ಚರಣಸುಗುಣಗುರು ॥ ೧ ॥

ಸೂತ್ರಧಾರ: ಶ್ರೀ ಜಗಚ್ಚಾಲಕನಾದ ಪರಮೇಶ್ವರನ ಸ್ತವನವನ್ನು ಎಷ್ಟು ಮಾಡಿದರೂ ಅಲ್ಪವೇ ಸರಿ. ಪ್ರಸ್ತುತ ಸಮಯಕ್ಕೆ ಭಕ್ತಿಪೂರ್ವಕವಾಗಿ ಈ ಪರ್ಯಂತ ಮಾಡಿದಷ್ಟು ಸಾಕು. ಆದರೆ ಈ ಪ್ರಸನ್ನ ಮುಖ, ಸಭಿಕರ ಮನಸನ್ನು ಯಾವ ನಾಟಕವನ್ನು ಮಾಡಿ ತೃಪ್ತಿಪಡಿಸಬೇಕು? ಇದರ ವಿಷಯಕ್ಕೆ ನನ್ನ ತರ್ಕವೇ ಸಾಗದು.

ಸಾಕಿ

ಅರಿಯನೇ ನಾನೀ ಸಭೆಮನರಂಜನ ಮಾಡುವ ಪರಿಯಿಂದಿನ್ನು॥
ಗೌರಿಹರನೆ ತ್ವರಿತದಿ ದಾಸನಹರಿಸೀ ಸಂಕಟವನ್ನು
ಭರದೊಳು ಬೇಡುವೆನು । ತವಪದಯುಗನನಮಸಿನ್ನು ॥ ೧॥

ಅಹಾಹಾ ! ಈ ದೀನ ಭಕ್ತವತ್ಸಲನಾದ ಶ್ರೀಶಂಕರನನ್ನು ಸ್ಮರಿಸಿದಕೂಡಲೆ ನನ್ನ ಲಕ್ಷ್ಯದಲ್ಲಿ ಬಂದದ್ದೇನೆಂದರೆ -ಶ್ರೀಬಸವೇಶ್ವರ ನಾಟಕವನ್ನು ಮಾಡಿ ತೋರಿಸಿದರೆ, ಈ ನರರು ಅಜ್ಞಾನದಿಂದಾ ತೊಡಗಿದ್ದ ಮಹಾ ಪಾಶದಿಂದ ದೂರಾಗಿ ಭಕ್ತಿಯೆಂಬುವುದು ಇವರ

ಕರತಲಾಮಲಕವಾಗುವುದು. ಒಳ್ಳೇದಿರಲಿ, ಕೇವಲ ಶಿವಭಕ್ತಿಯುಕ್ತಳಾಗಿ ನನ್ನ ಸಹಾಯಕ್ಕೋಸ್ಕರ ಯಾವಾಗಲೂ ತತ್ಪರಳಿರುವಂಥ ಪತ್ನಿಯನ್ನು ಕರೆದು ವಿಚಾರಿಸುವಾ. ಪ್ರಿಯೇ ! ಸರ್ವಾಲಂಕೃತಳಾಗಿದ್ದರೆ, ಇತ್ತ ಬಾ.

ಪದ–(ಚಾಲ– "ತುಮಸೇ ಬಚನ ದೇ ದೇ".)

ಬಾರೆ ಸುಂದರೀಗ ನೀ ಮನೋಹಾರಿ ॥ ಇಂದ್ವತ ಮಾರನಾ ।
ಅಂದದಿ ಸ್ಮರಿಸುತ ಮಂದಗಮನಿ ॥ ಬಾರೆ ಮನೋಹಾರಿ ॥ ೧ ॥

ನಟಿ:

ಪದ–(ಚಾಲ– "ಕಿತಿ ಪ್ರೀತಿ ತರಿ")

ಪುರಹರನೆ ಪೊರಿಯೊ ಮುದದೀಗಿನ್ನಾ । ಭವಸಾಗರದಿ ನಾ ॥
ಭವಿಸುವೆ ಕಷ್ಟವಾ ॥ ಶಿವಶರಣರ ಸಂಜೀವನೆ ॥ ಪಲ್ಲ॥
ಹರುಷದಿ ಎನ್ನೊಳ । ಕರುಣವನಿತ್ತು ।
ಹರಿಸೆನ್ನಯ ಕ್ಲೇಶವ ಭರದಿ ॥ ೧ ॥

ಪ್ರಿಯಾ! ತಮ್ಮ ಆಜ್ಞೆಯಂತೆ ಪರಮೇಶ್ವರನ ಸ್ತೋತ್ರ ಮಾಡುತ್ತ ಬಂದೆನು. ಮುಂದೇನಪ್ಪಣೆ?

ಸೂತ್ರಧಾರ: ಒಳ್ಳೇ ಉತ್ಸುಕತೆಯಿಂದ ನಾಟಕವನ್ನವಲೋಕಿಸಬೇಕೆಂಬ ಕಾಂಕ್ಷೆಯಿಂದ ಮಹನ್ ಮಹನ್ ಪಂಡಿತರು ಇಲ್ಲಿ ನೆರೆದಿರುತ್ತಾರೆ. ಆದರೆ ಭಕ್ತಿರಸದಿಂದ ಮತ್ತು ಹಾಸ್ಯರಸದಿಂದ ಯುಕ್ತವಾದ ಶ್ರೀ ಬಸವೇಶ್ವರವೆಂಬ ಆಖ್ಯಾನವನ್ನು ಇವರ ಮುಂದೆ ಆಡಿ ತೋರಿಸಬೇಕೆಂದು ಯೋಚಿಸಿರುತ್ತೇನೆ. ಆದರೆ, ಇದರ ವಿಷಯಕ್ಕೆ ನಿನ್ನ ಅಭಿಪ್ರಾಯವೇನು?

ನಟಿ: ಪ್ರಿಯಾ ! ಬಸವೇಶ್ವರಾಖ್ಯಾನವೆಂದು ಕೇಳಿದಕೂಡಲೆ ಚಿತ್ತ ಸಾನಂದಸಾಗರದಲ್ಲಿ ಮುಳುಗಿತು. ಆದರೆ ಆ ಪ್ರಯೋಗವನ್ನು ರಚಿಸಿದ ಕವಿಯ ನಾಮಧೇಯವೇನು?

ಸೂತ್ರ: ಪ್ರಿಯೆ ! ಕೇಳು.

ಸಾಕಿ

ಲಿಂಗಸುಗುರಪುರದೊಳಿರುತಿಹ ವರ । ಕವಿ ಅಮರೇಶನು
ತಾನು ॥ ಗಂಗಾಧರನಂ ಸ್ಮರಿಸುತೀ ನಾಟಕ ಸಂಗೀತದೊಳ
ರಚಿಸಿಹನೂ ॥ ಸನ್ನುತದಿ ಭವದಿ ಧನ್ಯನಾದನು ತಾನಿಜದಿಂ ॥ ೧॥

ನಟಿ: ಪ್ರಿಯಾ! ಇದನ್ನು ಕೇಳಿ ಪರಮಾನಂದವಾಯಿತು. ಆದರೆ, ಮುಂದೆ ನಾನೇನು ಮಾಡಬೆಕು? ಅದನ್ನು ಆಜ್ಞಾಪಿಸರಿ

ಸೂತ್ರ: ಪ್ರಿಯೆ! ಮಹನಿಯರಿಗೆ ಸಂತೋಷವಾಗುವಂತೆ ಪರಮಾತ್ಮ ನನ್ನು ಸ್ಮರಿಸು.

ಪದ–(ಚಾಲ "ಸಜ್ಜ ಕರುನಿ")

ಕರುಣಾಕರ ಗುರುಹರನೆ । ಮಾರನಾಶಕ ॥ಹರನೇ ಹರುಷದಿಂದೆ
ನಮಿಸುವೆ ಸುರ । ನರವಂದ್ಯನೆ ॥ ಪಲ್ಲ ॥
ಘೋರಸಂಕಟಿರಲುಭವದಿ । ಹರಶರಣರಿಗಿಂದು ನಿಜದಿ ॥
ಹರಸೆ ವರತಾಪ ದಯದಿ । ವರನೀಡಿಕಾಯ್ವಿ ಮುದದಿ ॥
ಹರಭಕ್ತವತ್ಸಲೆಂದು । ಬಿರುದು ಧರಿಸಿದಿ ॥ ೧ ॥

ಸೂತ್ರ: ಪ್ರಿಯೇ ! ನೀನು ಮಾಡಿದ ಸ್ತೋತ್ರವನ್ನು ಕೇಳಿ ಸಂತೋಷ ವಾಯಿತು. ಆದರೆ ಪಾತ್ರಗಳನ್ನು ಸಿದ್ಧಮಾಡಲಿಕ್ಕೆ ತಡವಾಗುವುದು, ಹೋಗುವಾ, ನಡೆ (ಹೋಗುತ್ತಾರೆ).

===***===***===

೧ನೇ ಪ್ರವೇಶ

(ಸ್ಥಳ–ಕೈಲಾಸಪರ್ವತ–ಪಾರ್ವತಿ, ಪರಮೇಶ್ವರ ಮತ್ತು ನಂದೀಶ್ವರ ಕೆಲವು ಪ್ರಮಥರು)

ವಿಷ್ಣು: (ಕೈ ಮುಗಿದು)

ಪದ–(ರಾಗ, ಬಿಹಾಗ, ಆದಿತಾಳ)

ಶ್ರೀಜಗದಂಬಾಕಾಂತಬಲಾಹಿತ ।
ಪೂಜಿತಪಾದಸದಾವಧರಾರಥ ॥ ಪಲ್ಲ ॥
ಶ್ರೀದಸುಹೃಚ್ಚತುರ್ವೇದ ವೇದ್ಯಘೃಣಾ ।
ಗಾಧವನದಿ ಹಿಮಪಾದಗರಾಶನ ॥ ೧ ॥
ಸಾರಹಿತ ಸಂಸಾರದವಾನಲ ।
ನಿಜಸ್ವರೂಪ ಸ್ಮರಾರೇಧರಾದ್ರಶ ॥ ೨ ॥

ಹೇ ಜಗಜ್ಜನನಿ ಜನಕರಾದ ಭವಾನಿಭವರೇ ! ಈ ನಿಮ್ಮ ಅಮಂದ ಸುಂದರವಾದ ಪಾದಾರವಿಂದಗಳಿಗೆ ಈ ದೀನ ವಿಷ್ಣುವಿನ ಅಭಿವಂದನವಿರಲಿ.

ಪರಮಾತ್ಮ: ಒಳ್ಳೇದು, ನಿನ್ನ ಸ್ಥಾನದಲ್ಲಿ ವಿಶ್ರಮಿಸು. (ಅಷ್ಟರಲ್ಲಿ ನಾರದನು ವೀಣೆಯನ್ನು ಹಿಡಿದುಕೊಂಡು ಕೆಳಗಿನ ಪದವನ್ನು ಅನ್ನುತ್ತ ಬರುತ್ತಾನೆ).

ನಾರದ–

ಪದ–ಚಾಲ–("ರಾಮಚಂದ್ರ ರಘುವರ ಫಾಹಿ")

ಜಾತನೋವಾ । ಶ್ರೀ ಶಿವಾಧವದೇವಾ । ಹತಭಾವಾ ॥ ಹೇ
ವಸುಕುಲಸುಮನೋ । ಜಲಜಾಧಿವಾಸಾ ॥ ಪಲ್ಲ ॥
ನೀರಜ ಜಾತಮದಭೂದರದಂಭೋ ।
ಶ್ರೀರವಿಶರಜಸಮೀರಸಖಿನೇತ್ರ ॥ ೧ ॥

ಪಾರ್ವತಿ: ಪತಿಯೇ, ಮಹದ್ಭಕ್ತಿಶೀಲನಾಗಿ ನಿನ್ನ ಸ್ತೋತ್ರವನ್ನು ಮಾಡುತ್ತ ಬಂದು ನಮುಸ್ಕರಿಸಿ, ಎದುರಿನಲ್ಲಿ ನಿಂತಿರುವ ನಾರದನು ತ್ರಿಲೋಕ

ಸಂಚಾರಿಯಾದ ಕಾರಣ ಅವನ ಮುಖದಿಂದ ಸರ್ವ ಲೋಕದ ವೃತ್ತಾಂತವನ್ನು ಕೇಳಬೇಕೆಂಬ ಅಭಿಲಾಷೆಯು ನಿನ್ನಲ್ಲಿ ಉಂಟಾಗಿರುವದೆಂದು ನಾನು ತಿಳಕೊಂಡೆನು. ಆದರೆ ಆ ಪ್ರಶ್ನವನ್ನು ನಾನು ಮಾಡುತ್ತೇನೆ (ಎಂದು ನಾರದನನ್ನು ನೋಡಿ)

ಪದ–(ಚಾಲ–"ದೇ ಮೇರಿ ಶ್ಯಾಮ")

ಹೇ ಮುನಿಪಾಲನೆ ಪೇಳ್ಮುದದಿ ।
ನೀಮರುದಾಲಯ ಭೂಮಿ ಮುಖಾಖಿಲ ।
ಸೀಮೆಯವಾರ್ತೆಯಾ ।
ಧಾಮವಿಜಿತ ಸೋಮ ಕಿರಣವಾರ ॥ ೧ ॥

ದೇವಮುನಿಯೇ, ನೀನು ಯಾವ ಯಾವ ಲೋಕಗಳನ್ನು ಸಂಚರಿಸಿ ಬಂದಿಯೋ, ಆ ಆ ಲೋಕಗಳಲ್ಲಿ ಶಿವಭಕ್ತಿಯುಕ್ತರಾಗಿ ಶಿವಪದ ಧ್ಯಾನಲೋಲಪರಾದ ಶಿವಭಕ್ತರಾದ ಜನರು ಮಂಗಲವಷ್ಟೇ?

ನಾರದ: (ಸ್ವಗತ) ಈ ಜಗನ್ನಿಯಾಮಕನಾದ ಶ್ರೀಮಚ್ಛಂಕರನಿಗೆ ನಾನು ಭೂಲೋಕದ ಸಮಾಚಾರವನ್ನು ವಿಸ್ತರಿಸಿಬೇಕೆಂಬ ಕರ್ತವ್ಯದಿಂದ ಇಲ್ಲಿಗೆ ಬಂದದ್ದು ಈ ಕಾಲಕ್ಕೆ ಈ ಶೈಲಸುತೆಯ ವಾಕ್ಯವು ಸಹಾಯಕವಾಗಿ ಒಳ್ಳೇ ಸಮಯಕ್ಕೊದಗಿತು. (ಪರಮಾತ್ಮನನ್ನು ನೋಡಿ) ಹೇ ಗಂಗಾಧರಾ! ದೇವಿಯವರು ಕೇಳಿದ ವಿಷಯವನ್ನು ವಿಸ್ತರಪಡಿಸುತ್ತೇನೆ.

ಪದ–(ಚಾಲ–"ಆಪಣ ಜಾ")

ಕೇಳ್ ಗಿರಿಜಾಧವ ಹತಭಾವಭವವಿನ । ತಾವನಪರಶಿವ ॥
ಶ್ರೀಕರತ್ವತ್ಪಾದ ಭಕ್ತಿಯದು । ಪ್ರಾಕಟಮಿರೆ ಬಹು
ಲೋಕಂಗಳೊಳಗೆ ॥ ೧ ॥
ಶ್ಯೂನ್ಯಮಾಗಿಹುದು ಮಾನ್ಯಭವಚ್ಛರ । ಣುನ್ನತಭಕ್ತಿಯು
ಹೀನಧರಣಿಯೊಳು ॥ ೨ ॥

ಯಾಕೆಂದರೆ, ಆ ಭರತಖಂಡದಲ್ಲಿ ಜೈನ ಬೌದ್ಧಾದಿ ಮತಸ್ಥರು ಪ್ರಾಬಲ್ಯವನ್ನು ಹೊಂದಿ, ಅನಾದಿ ಸಂಸಿದ್ಧವಾದ ಮತ್ತು ವೈದಿಕ ತಾಂತ್ರಿಕವಾದ ವೀರಶೈವ ಮತವನ್ನು ಯಾವಾಗಲೂ ದೂಷಿಸುತ್ತ, ಗುರುಲಿಂಗ ಜಂಗಮಾದ್ಯಷ್ಟಾ ವರ್ಣಗಳ ಮಹಿಮಾತಿಶಯವನ್ನು ತಿಳಿಯದೆ ತಿರಸ್ಕರಿಸುತ್ತ, ಮುಂದೆ ನಾವು ನರಕವಾಸಿಗಳಾದೇವೆಂಬ ಭೀತಿಯು ಎಳ್ಳಷ್ಟಿಲ್ಲದೆ ಮದೋನ್ಮತ್ತರಾಗಿರುವರು.

ಪದ-(ಚಾಲ-"ಮದನಾಧನು ಸಾರಿಗಮನಾ")

ಮದನಾರಿಯ ಗಿರಿಸದನದಯಾ । ಬುಧಿವಿಧುಸಮ ಬಹು ಮುದ
ದಲಿಲಾಲಿಪು । ದಿದನು ಧರಾರಥವೇದಹಯಾ ॥ ಪಲ್ಲ ॥
ಜೈನ ಬೌದ್ಧಮತ ಲೀನನೃಪರತಿ । ಮಾನದೊಳು ಜನಿಕಾಣನೊಲು ।
ಘನಹೀನದೊಳು । ಗತಜ್ಞಾನಿಗಳಾ । ಗಿರೆ ಶಂಭೋ । ತತ್ಪರಿಪಾಲಿ
ತದಹಂ । ಕರುಣಯುಕ್ತ ಚಿತ್ತರು ದೇವಾ ॥ ೧ ॥

ಇದಲ್ಲದೆ, ನಿನ್ನ ಸ್ವರೂಪಿಗಳಾದ ಜಂಗಮರಿಗೆ ಶಿವಭಕ್ತಿ ಪಾರಾಯಣರಾದ ಆದ್ಯನೃಪಾಲರಿಂದ ಕೊಡಲ್ಪಟ್ಟ ಭೂಗ್ರಾಮ ಮಾನ್ಯಗಳೆಲ್ಲಾ ಈಗಿನ ಭೂಪತಿಗಳಿಂದ ತಿರಿಗಿ ತಕ್ಕೊಳ್ಳಲ್ಪಟ್ಟಿರುವವು. ಮತ್ತು ಎಲ್ಲಿ ನೋಡಿದಾಗ್ಯೂ ಬಸದಿಗಳು ತುಂಬಹತ್ತಿರುವವು. ಅಧರ್ಮಾಚಾರ, ಅನಾಚಾರ, ಮೋಸ ಮೊದಲಾದ ದುರ್ಗುಣಗಳಿಂದ ಭೂಲೋಕವು ತುಂಬಿಹೋಗಿರುವದು. ಅಲ್ಲದೆ ಶಿವಭಕ್ತಿಪರಾಯಣರಾದ ವೀರಶೈವರು ಆ ಲೋಕದಲ್ಲಿ ಕೆಲಕೆಲವು ಪ್ರದೇಶಗಳಲ್ಲಿದ್ದಾಗ್ಯೂ ತಮ್ಮ ವೇಷವನ್ನು ಬದಲಿಸಿಕೊಂಡು ಬಹು ಕಷ್ಟದಿಂದ ಕಾಲಕ್ಷೇಪವನ್ನು ಮಾಡುತ್ತಿರುವರು. ಕೆಲವರು ಭೂಲೋಕದ ವ್ಯಾಪಾರವನ್ನೇ ಮರೆತು ತ್ವತ್ಪಾದ ಭಕ್ತಿಯ ಧ್ಯಾನಾಸಕ್ತರಾದಾಗ್ಯೂ ಮೇಲೆ ನಿದರ್ಶನಮಾಡಿದ ಮತಸ್ಥರ ದುರಾಚಾರ ಪ್ರಾಬಲ್ಯವನ್ನು ಸಹಿಸದೆ ಗುಪ್ತರಾಗಿದ್ದು, ಶಿವಮತ ಮಹತ್ವವನ್ನು ಲೋಕಕ್ಕೆ ಪ್ರತ್ಯಕ್ಷ ಪ್ರಮಾಣವನ್ನಾಗಿ ತೋರ್ಪಡಿಸದೆ ಇರುವುದರಿಂದ, ಆ ಜನರಲ್ಲಿ ಜ್ಞಾನಾಂಧಕಾರವು ಹೆಚ್ಚಿರುವುದು. ತಸ್ಮಾತ ಶಂಭೋ ! ಈ ರೀತಿ ದುರಾಚಾರವೇಷ್ಟಿತವಾದ ಮಹೀತಲದಲ್ಲಿ ನಿನ್ನಪಾದ ಭಕ್ತಿಯನ್ನು ವ್ಯಕ್ತಪಡಿಸಿ ಭಕ್ತರನ್ನು ಕೃತಕೃತ್ಯರಂ ಮಾಡುವುದಕ್ಕಾಗಿ ನೀನು ಆ ಭೂಮಿಯಲ್ಲಿ ಅವತರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಪರಮೇಶ್ವರ: ದೇವಋಷಿ ! ಹಾಗಾದರೆ, ಇಲ್ಲಿ ನೋಡು. (ಸನ್ನಿಧಿಯಲ್ಲಿ ರುವ ನಂದೀಶನನ್ನು ತೋರಿಸಿ) ಈ ನಂದೀಶ್ವರನಿಗೂ ನನಗೂ ಏನೂಭೇದವಿಲ್ಲಾ. ತಸ್ಮಾತ, ಈ ಪೂತಾತ್ಮನನ್ನು ಧರಾತಲಕ್ಕೆ ಕಳುಹಿಸಿಕೊಡುತ್ತೇನೆ. ಈತನು ಅಲ್ಲಿ ಭಕ್ತಿ, ಜ್ಞಾನ, ಶಿವಾಚಾರಗಳನ್ನು ಪ್ರತಿಷ್ಠಿಸಿ ವೀರಶೈವಮತದ ಪರಿಪಾಲನವಂ ಗೈಯ್ಯುವನು. ದ್ವಿತೀಯ ಶಂಭುವಾದ ಈ ನಂದೀಶ್ವರನಿಂದ ಭೂಲೋಕವೆಲ್ಲಾ ಸಂತೋಷಶರಧಿಯಲ್ಲಿ ಮುಳುಗುವುದು. ತಿಳಿಯಿತೇ?

ಪಾರ್ವತಿ: (ಶಂಕರನನ್ನು ನೋಡಿ) ಪ್ರಿಯಾ ! ಈ ನಂದೀಶ್ವರನಿಗೂ ನಿನಗೂ ಏನೂ ಭೇದವಿಲ್ಲೆಂದು ನುಡಿದಿಯಷ್ಟೇ? ಆದರೆ, ಈ ಮಾತು ಭಕ್ತೈಕತನುವೆಂದು ನುಡಿದಪರಿಯೋ ? ಅಥವಾ ನಿಜವಾಗಿ ಅಭೇದವೋ?

ಪರಮೇಶ್ವರ: ದೇವಿ ! ನಿನ್ನ ಸಂಶಯವೆಂಬ ವೃಕ್ಷವನ್ನು ನಿರ್ಮೂಲವನ್ನಾಗಿಮಾಡುತ್ತೇನೆ. ನಾನು ಭಕ್ತೈಕತನುವೆಂಬ ವಾಕ್ಯವು ದಿಟವೇ. ಆದರೂ ಮತ್ತೊಂದು ವಿಶೇಷವುಂಟು. ಅದೇನೆಂದರೆ, ಪೂರ್ವದಲ್ಲಿ ಶಿಲಾದನೆಂಬ ಒಬ್ಬ ತಾಪಸಶ್ರೇಷ್ಠನು ತನಗೆ ಸುತರಿಲ್ಲದ ಕಾರಣ ಶಿವಭಕ್ತಿಯುಕ್ತ ಸುತನನ್ನು ಪಡಿಯಬೇಕೆಂಬ ಕಾಂಕ್ಷೆಯಿಂದ ಪೂರ್ವದಿಕ್ಕಿಗೆ ಹೋಗಿ, ಅಲ್ಲಿ–

ಪದ–(ಚಾಲ–"ಥಾಟ ಮಾಟ ಸದನಿನವಾ")

ಶ್ರೀಶೈಲದ ಯಮವರುಣದಿಗ್ದೇಶಮಧ್ಯದೋಳ್ ।
ಆ ಶಿಲಾದನು ಗ್ರತಪವನಾಚರಿಸಿದನು ॥ ೧ ॥
ಆದರದಿಂ ಕಂದ ಮೂಲೋದ ಕಾದಿ ।
ತ್ಯೋದಕೇಜಪಾದವಾತಾದಿ ಭಕ್ಷದಿ ॥ ೨ ॥

ಈ ಪ್ರಕಾರ ಅತಿ ಶ್ರಮದಿಂದ ಬಹುದಿವಸ ತಪಶ್ಚರ್ಯವ ನ್ನಾಚರಿಸಿದ ಋಷಿಯ ತಪಶ್ಶಕ್ತಿಗೆ ಮತ್ತು ಆತನ ಭಕ್ತಿಗೆ ನಾನು ಮೆಚ್ಚಿ ಪ್ರತ್ಯಕ್ಷನಾಗಿ, ಆ ಋಷಿಗೆ ನಿನ್ನಭಿಮತ ವರವನ್ನು ಈಗಿಂದೀಗಲೇ ಕೊಡುವೆನು, ಕೇಳೆಂದನು. ಅದಕ್ಕೆ ಮುನಿಯು ನಯಭಯ ಭಕ್ತಿಯಿಂದ ನಮಸ್ಕರಿಸಿ, ದೇವಾ ! ಶಿವಭಕ್ತಿ ಸಂಪನ್ನನಾಗಿ ಶಿವಮತೋದ್ಧಾರಕನಾದ ನಿನ್ನಂಥ ಸುಪುತ್ರನನ್ನು ಕೊಟ್ಟು ನನ್ನ ಮನಸ್ಸನ್ನು ತೃಪ್ತಪಡಿಸಬೇಕೆಂಬುವ ಮುನಿಯನ್ನು ಕುರಿತು, ಎಲೋ ! ನಿನ್ನಿಷ್ಟವನ್ನು ಪೂರ್ಣಮಾಡುವೆನು. ಇದು ನಿಶ್ಚಯವೆನಲು, ಅದಕ್ಕೆ ಶಿಲಾದ ಋಷಿಯು ಕೈಮುಗಿದು, ದೇವಾ ! ನನ್ನಿಷ್ಟವನ್ನು ಪೂರ್ಣಮಾಡಬೇಕಾದರೆ ಕೇವಲ ಭಕ್ತಿಯುಕ್ತ ಸುತನನ್ನು ಕರುಣಿಸಬೇಕು. ಒಂದು ಪಕ್ಷಕ್ಕೆ ಆ ಮಗನು ನಿನ್ನ ಪಾದಭಕ್ತಿಗೆ ದೂರನಾದರೆ, ಅವನು ನನಗೆ ಶತ್ರುವೆಂದು ತಿಳಿಯಲಾಗಿಂದಾಗಲೆ ಅವನ ಶಿರವನ್ನು ಛೇದಿಸುವೆನೆಂದೆಂಬುವ ಆ ಮುನಿ ಪತಿಯ ಭಕ್ತಿಯ ನಿಷ್ಠೆಗೆ ಅತಿ ಸಂತೋಷಬಟ್ಟು, ನಾನು ಎಲ್ಲಾ ವಿಷಯದಲ್ಲಿ ನಿನಗೆ ಅಭಿನ್ನನಾಗಿ ಆದಿಗಾದಿಯಾದ ಈ ವೃಷಭೇಶ್ವರನನ್ನು ಕುರಿತು, ಎಲೋ ! ನೀನು

ನಂದೀಶ್ವರೆಂಬ ನಾಮದಿಂದ ಈ ಶಿಲಾದನಿಗೆ ಪುತ್ರನಾಗೆಂದು ಅರ್ಪಣೆಕೊಡಲು, ಈತನು ಒಪ್ಪಿ, ಅಯೋನಿಜನಾಗಿ ಹ್ಯಾಗೆ ವೃದ್ಧಿಯನ್ನು ಹೊಂದಿದನೆಂದರೆ:-

ಪದ-(ಚಾಲ- 'ಚಲೊ ಸಂಯಾಮೋರಿ')

ಭೋಗಿವಲಯ ಪ್ರಿಯೇ ಬಾಗೀ ಪೇಳುವೆನಾ ।
ನೀಗಳವಧರಿಸು ಮುದದಿಂದೆ ॥
ವಿತತ ಸುತಾಮೃತವೇ ಮೊಲೆವಾಲ್‌ಪ್ರಾರ್ಥಿತ ಗುರುಪದ ಚಿಂತಾನವ ।
ನಿತರಹಾಸ್ಯಪ । ರೋಕ್ತಿಗಳೇತೊದಲ್ ಮಾತುಗಳಾಡಿ ।
ಕೀತದಿತಿಶಯನ । ಪೂತಾಚಾರವನೋತು ಪಿಡಿ ದು ತತ್ಪ್ರೀತಿಪತಿ ಪಾದಕ ।
ಚಾತವತನ್ನಾಂತದೊಳಗೇಭ । ಕ್ತ್ಯಾತಿಶಯದಿ । ಯಾತನುಬೆಳದಿಂತು ॥ ೧ ॥

ಹೀಗೆ ವೃದ್ಧಿಯನ್ನು ಹೊಂದಿದ ಬಾಲಕನನ್ನು ನೋಡಿ, ತಂದೆಯು ಸಂತೋಷ ಪಡುತ್ತಿದ್ದನು. ಆ ಮೇಲೆ ನಂದೀಶ್ವರನಾದರೂ ತಪಶ್ಚರ್ಯವನ್ನಾಚರಿಸಬೇಕೆಂಬ ಕಾಂಕ್ಷೆಯಿಂದ ಶ್ರೀಶೈಲಕ್ಕೆ ಬಂದು, ಮಳೆಗಾಲದಲ್ಲಿ ವಟವೃಕ್ಷದ ಕೆಳಗೆ ನೀರಿನಲ್ಲಿ ನಿಂತು ಮತ್ತು ಬೇಸಿಗೆಯಲ್ಲಿ ತನ್ನ ಸುತ್ತಲು ಪಂಚಾಗ್ನಿಯನ್ನು ಹಾಕಿಕೊಂಡು ಸೂರ್ಯನನ್ನು ನೋಡುತ್ತ ನಿಂತು, ಭಯಂಕರವಾದ ತಪವನ್ನು ಮಾಡಲು, ಆ ತ್ರಿಲೋಕ ವ್ಯಾಪಿತವಾದ ತಪೋಜ್ವಾಲೆಗೆ ತಮ್ಮ ತಮ್ಮ ಪದಂಗಳಾಶೆಯಿಂದ –

ಪದ-(ರಾಗ-"ಜೋಗಿ, ತಾಲ-ಝಂಪಾ")

ಭೀತರಾಗುತ ಕಮಲಜಾತದೇವಾ ।
ನಾಥಮುಖ ನಿರ್ಜರದವ್ರಾ ತಬರಲು ।
ಕೇಳೆ ತದ್ವಾರ್ತೆಯನು ಮನದಿ ನಾನು ।
ತಾಳಿದೆನು । ಭಯವನು । ಕಾಳಿಭಾನು ।
ಮಾಲಿವಿಧು ಶಿಖಿಸ್ಫುರಣ । ಶೀಲ ನಯನನ ಬಳಿಗೆ ।
ಲೋಲಮತಿಯಿಂಬಂದೆವ್ವೇಳಲೇನು ॥ ೧ ॥

ದೇವಿ ! ಆ ಪ್ರಕಾರವಾಗಿ ಚಂಚಲ ಮನಸ್ಕರಾಗಿ ಬಹು ಕೈಂಕರ್ಯ ಭಾವದಿಂದ ಸ್ತೋತ್ರಮಾಡುತ್ತ ನಿಂತಿರುವ ದೇವತೆಗಳ ಮುಖವನ್ನು ನೋಡಿ, ನಾನು ಈ ಮಹನಿಯನ ಪೂರ್ವ ವೃತ್ತಾಂತವನ್ನೆಲ್ಲಾ ಹೇಳಿ ಅಭಯದಾನ ಮಾಡಿದೆನು. ಹೇ ಶಾಂಭವೀ ! ಆ ಕಾಲಕ್ಕೆ ಇವರು

ತಮ್ಮ ಪದಚ್ಯುತಿಯಾಗುವದೆಂದು ವೃಥಾ ಭೀತರಾಗಿದ್ದರು. ಈ ಪರಮ ಪುರುಷನು ಇಂಥವರ ಪದವಿಗಳಿಗೆ ಆಶೆ ಪಡುವನೇ? ಇರಲಿ, ಆಗ ನಾನು ಈತನ ತಪಶ್ಯಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ನಿನ್ನ ಇಷ್ಟವೇನೆಂದು ಕೇಳಲು, ನಿಖಿಲನಶ್ವರಪದವಿಗಳಾವುವೂ ನನಗೆ ಬೇಕಾಗಿಲ್ಲ. ನಿನ್ನ ಪಾದಕಮಲಗಳ ಭಕ್ತಿಯನ್ನಷ್ಟುಕೊಟ್ಟು ನನ್ನನ್ನು ರಕ್ಷಿಸಬೇಕೆಂದು ನುಡಿದ ನಂದೀಶ್ವರನನ್ನು ರತ್ನಖಚಿತವಾದ ವಿಮಾನದಲ್ಲಿ ಕುಳ್ಳಿರಿಸಿಕೊಂಡು, ಇಲ್ಲಿಗೆ ತಂದು ಪ್ರಮಥ ಪತಿ ಪಟ್ಟವನ್ನು ಕಟ್ಟಿ ನನಗೆ ವಾಹನವನ್ನಾಗಿರಿಸಿಕೊಂಡು ಸರ್ವಜ್ಞತ್ವವನ್ನು ಕೊಟ್ಟೆನು. ಶಂಕರೀ! ಶ್ರೀಶೈಲದಲ್ಲಿ ನಂದೀಶ್ವರನು ತಪಶ್ಚರ್ಯವನ್ನಾಚರಿಸಿದ ಸ್ಥಾನವು ಈಗ ನಂದಿಮಂಡಲವೆಂಬ ನಾಮದಿಂದ ಪ್ರಶಿದ್ಧವಾಗಿ ಆಶ್ರಿತರಿಗೆ ಮುಕ್ತಿಯನ್ನು ಕೊಡುವುದು.

ಪಾರ್ವತಿ: ಪ್ರಿಯಾ ! ಈ ಮಹನೀಯನ ಸಂಗತಿಯನ್ನು ಕೇಳಿ ನನ್ನ ಸಂಶಯವು ಹೋಗಿ ಮನಸ್ಸಿಗೆ ಪರಮಾನಂದವಾಯಿತು, ಆಹಾ! ಈ ಸದಾಚಾರತ್ವ, ಈ ಮಹಿಮಾತಿಶಯತ್ವ, ಈ ಔದಾರ್ಯ, ಈ ನಿರಹಂಕಾರಭಕ್ತಿ, ಈ ಧೈರ್ಯ, ಈ ಸ್ಥೈರ್ಯ, ಈ ಗಾಂಭೀರ್ಯ, ಈ ಸ್ವಾಮಿಪದ ಭಕ್ತಿ, ಈ ಮತಾಭಿಮಾನ ಮೊದಲಾದ ಸುಗುಣಗಳು ಇವನಿಗಲ್ಲದೆ ಅನ್ಯರಿಗುಂಟೇ? ಅಂದ ಬಳಿಕ ಈ ವೃಷಭೇಶ್ವರನಿಗೂ ನಿನಗೂ ಏನೂ ಭೇದವಿಲ್ಲೆಂದೆಂಬುವುದಕ್ಕೆ ಸಂದೇಹವೇ ಬೇಡಾ. ಈತನನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟರೆ ಈತನಿಂದ ಭೂಲೋಕದಲ್ಲಿ ಶಿವಭಕ್ತಿವರ್ಧಿಸುವದು ನಿಶ್ಚಯವು.

ಪರಮೇಶ್ವರ: (ನಂದೀಶ್ವರನಕಡೆಗೆ ನೋಡಿ)

ಪದ–(ಚಾಲ– "ಸ್ವಾರ್ಥಿ ಪ್ರೀತಿ")

ಬಾರೈ ನಂದಿನಾಥಾನೆ ಮುದದಲಿ ॥ ಧೃ ॥
ಪಂಕಭಯಾನಕಪಂಕತಪ ನಪ್ರತಿ ।
ಮಾಂಕಚಿದಾಲಯನೇ ॥ ೧ ॥
ಭಕ್ತ್ಯಬಲಾವರ ವಕ್ತ್ರಾ ದಶರನೆ ।
ದಿಕ್ತಟ ಸಿತಕೀರ್ತೆ ॥ ೨ ॥

ಮಗುವೇ! ಇತ್ತ ಬಾ, ಜ್ಞಾನಿಯಾದ ಶಿವಭಕ್ತಿಯ ವೃದ್ಧ್ಯರ್ಥವಾಗಿ ಭೂಲೋಕದಲ್ಲಿ ಬಾಗವಾಡಿಯೆಂಬ ಪವಿತ್ರ ಗ್ರಾಮದಲ್ಲಿ ಮತ್ಪಾದಭಕ್ತಿಯಿಂದೊಪ್ಪುವ ಮಾದರಸ ಮಾದಲಾಂಬಿಕೆಯರೆಂಬ ಪುಣ್ಯಾ ದಂಪತಿಗಳಿಗೆ ಪುತ್ರನಾಗಿ, ಬಸವನೆಂಬ ನಾಮವನ್ನು ತಾಳಿ, ಭಕ್ತಿಜ್ಞಾನ ಸದಾಚಾರಗಳನ್ನು ಜನರಿಗೆ ಬೋಧಿಸಿ ನನ್ನ ಮಹಿಮೆಯನ್ನು ವ್ಯಕ್ತಪಡಿಸು. ಮತ್ತು ಪ್ರಾಕೃತ ಧರ್ಮವನ್ನು ನಿರಾಕರಿಸಿ ಅಪ್ರಾಕೃತ ಧರ್ಮವನ್ನು ಪ್ರಸಾರಗೊಳಿಸು. ಇದಕ್ಕಾಗಿ ನಿನ್ನ ಸಹಾಯಕ್ಕೆ ಪ್ರಮಥರನ್ನು ಕಳುಹಿಸಿಕೊಡುತ್ತೇನೆ.

ನಂದೀಶ್ವರ: (ಕೈಮುಗಿದು)

ಪದ–(ಚಾಲ–"ಹಾಲ ಇಕಡಚೆ ಪಹಾ")

ಶಂಕರದಯದಿಂ ಭೋಂಕನೆ ಲಾಲಿಸು ।
ಕಿಂಕರವಾಕ್ಯವನುದೇವಾ ॥ ಕಲುಷಭರಿತ ಭೂತಲಕೆನ್ನನು
ನೀಕಳುಹಲು ಯೋಗ್ಯವೆಪೇಳ್ ದೇವಾ ॥
ದೂರಮಾಡುವರೆ ಚಾರುಭವತ್ಪದ ।
ನೀರಜಕೆನನ್ನನು ಪೇಳ್‌ದೇವಾ ॥ ೧ ॥

ಶಂಭೋ! ಆ ಧರಣಿತಲದಲ್ಲಿ ಅವತರಿಸಿದವನು ವಿಕಾರವೆಂಬ ಅಡವಿಯಲ್ಲಿ ಸಂಚರಿಸುತ್ತ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ನದೀ ಪ್ರವಾಹಗಳಲ್ಲಿ ಬಿದ್ದು, ಅವುಗಳ ಶೆಳವಿನಿಂದ ಅಪಾರವಾದ ಸಂಸಾರ ಪಾರಾವಾರದಲ್ಲಿ ಕೆಡುಹಲ್ಪಟ್ಟು. ಪಂಚಕ್ಲೇಶಗಳೆಂಬ ಜಲಜಂತುಗಳಿಗೆ ತುತ್ತಾಗಿ, ಅಂತ್ಯಕ್ಕೆ ನಿನ್ನ ಪಾದವನ್ನು ಕಾಣದೆ, ಯಮನ ಬಾಧೆಗೆ ಗುರಿಯಾಗಿ ನರಕವನ್ನು ಹೊಂದುವನು. ಇಂಥಾ ಮಾನವರಿಂದ ಯುಕ್ತವಾದ ಆ ಭೂಮಿಯಲ್ಲಿ ನಿನ್ನ ಪಾದ ಭಕ್ತಿಯನ್ನು ವ್ಯಕ್ತಪಡಿಸುವುದು, ನನ್ನ ಯೋಗ್ಯತೆಯೋ? ಜಗನ್ನಿಯಾಮಕನಾದವನಿಗೆ ಆ ಉದ್ಯೋಗ ಸಲ್ಲುವುದು.

ಪರಮೇಶ್ವರ: ನಂದಿಯೇ! ನಾನು ನಿನಗೆ ಭೂಲೋಕದಲ್ಲಿ ಗುರುವಾಗಿ ಜ್ಞಾನಾಮೃತವನ್ನು ಪಾನಮಾಡಿಸುವೆನು. ಇಷ್ಟಲಿಂಗವಾಗಿ ನಿನ್ನ ಕರುಣಾದಿಗಳಲ್ಲೆಲ್ಲಾ ವ್ಯಾಪಿಸುವೆನು. ಜಂಗಮ ಸ್ವರೂಪನಾಗಿ ಪ್ರಸಾದವನ್ನೀಯುವೆನು. ಮತ್ತು ಸಂಗಮೇಶ್ವರನಾಮದಿಂದ ಬೇಕಾದಾಗ ನಿನಗೆ ಪ್ರತ್ಯಕ್ಷನಾಗಿ, ನಿನಗೆ ಬೇಕಾದಾಗ ಸಹಾಯಮಾಡುವೆನು.

ನಂದೀಶ್ವರ: ಹೇ ಭಕ್ತವತ್ಸಲಾ ! ನನ್ನ ಸಹಾಯಕ್ಕಾಗಿ ಪ್ರಮಥಗಣರನ್ನು ಕಳುಹಿಸುವದಲ್ಲದೇ, ನೀನು ಕೂಡ ಈ ಪ್ರಕಾರವಾಗಿ ನನ್ನನ್ನೆಡಬಿಡದೆ ಕಾಪಾಡಿದರೆ ಆ ಭೂತಲವನ್ನು ತತ್ವಾದ ಭಕ್ತಿಯುಳ್ಳದ್ದಾಗಿ ಮಾಡುವುದಕ್ಕೆ ಅಸಾಧ್ಯವಾದೀತೆ?

ಪರಮೇಶ್ವರ: ಹೇ ಮತ್ಪ್ರಾಣ ಸ್ವರೂಪಿಗಳಾದ ಪ್ರಮಥರೇ ! ನೀವು ಈ ನಂದೀಶ್ವರನೊಡನೆ ಭೂಲೋಕಕ್ಕೆ ಹೋಗಿ, ನಿಮ್ಮ ನಿಮ್ಮ ಇಷ್ಟವಾದ ಸ್ಥಳಗಳಲ್ಲಿ ಜನಿಸಿ, ಈ ನಂದೀಶ್ವರನಿರುವ ಸ್ಥಳಕ್ಕೆ ಬಂದು, ಈತನಿಗೆ ಸಹಾಯವಾಗುವಂತೆ, ನೀವೂ ಕೆಲವು ಮಹಿಮೆಗಳನ್ನು ತೋರಿಸಿ, ಸುಖವಾಗಿ ಭೂಲೋಕದಲ್ಲಿದ್ದು, ಅಂತ್ಯದಲ್ಲಿ ನನ್ನಲ್ಲಿ ಏಕತ್ವವನ್ನು ಹೊಂದಿರಿ.

ಪ್ರಮಥರು: ಅಪ್ಪಣೆ (ನಮಸ್ಕರಿಸುತ್ತಾರೆ)

ಪರಮಾತ್ಮ: ಪಾರ್ವತಿ! ಮತ್ಪ್ರೀತಿಪುತ್ರನಾದ ಬಸವೇಶ್ವರನಿಗೆ ಸೂಚಿಸತಕ್ಕದ್ದೇನಿರುವುದು?

ಪಾರ್ವತಿ: ಪ್ರಿಯಾ ಮತ್ತೇನಿರುವುದು ? ಜಾಗ್ರತೆಯಾಗಿ ಪ್ರಯಾಣ ಮಾಡೆಂದು ಸೂಚಿಸುವುದೊಂದೇ ಉಂಟು.

ಪರಮೇಶ್ವರ: ಹೌದು. (ನಂದೀಶ್ವರನಕಡೆಗೆ ನೋಡಿ) ಪುತ್ರಾ ಇನ್ಯಾಕೆ ಆಲಸ್ಯವು? ಭೂಲೋಕಕ್ಕೆ ಶೀಘ್ರವಾಗಿ ಗಮಿಸು.

ನಂದೀಶ್ವರ: ನಿನ್ನ ಪಾದ ಭಕ್ತಿಯನ್ನು ವ್ಯಕ್ತಪಡಿಸಲು ಭೂಲೋಕಕ್ಕೆ ಪ್ರಯಾಣ ಮಾಡುವೆನು. ನನ್ನಲ್ಲಿ ಭಕ್ತಿ ಪ್ರೇಮಿಯಾದ ನಿನ್ನ ಅಂತಃಕರಣವು ಪೂರ್ಣವಿರಬೇಕೆಂದು ಬೇಡಿಕೊಳ್ಳುವೆನು. ಶಂಭೋ ! ಇನ್ನು ಮೇಲೆ ನನಗೆ ಅಪ್ಪಣೆಯನ್ನು ಕೊಡಬೇಕು.

ಪರಮೇಶ್ವರ: ಪುತ್ರಾ ! ಗಮನಮಾಡು. ಹೇ ವಿಷ್ಣುವೇ ಮೊದಲಾದ ದೇವತೆಗಳೇ ನೀವು ನಿಮ್ಮ ಸ್ಥಳಕ್ಕೆ ಗಮನಮಾಡಿರಿ.

ಎಲ್ಲರು: ಅಪ್ಪಣೆ (ಎಂದು ಹೋಗುವರು).

ನಾರದ: (ತನ್ನೊಳಗೆ) ನಾನು ಯಾವ ಕಾರ್ಯವು ಕೊನೆಗಾಣಬೇಕೆಂಬ ಕಾಂಕ್ಷೆಯಿಂದ ಇಲ್ಲಿಗೆ ಬಂದು ಬೀಜವನ್ನು ಊರಿದೆನೋ, ಅದು

ಶಿವಕೃಪಾ ರಸದಿಂದ ವೃದ್ಧಿಯನ್ನು ಹೊಂದಿ ಫಲವಾಗುವದು. (ಪರಮೇಶ್ವರನಕಡೆಗೆ ನೋಡಿ) ಹೇ ಭಕ್ತವತ್ಸಲಾ ! ನನ್ನ ಮನೋಭಿಲಾಷೆಯನ್ನು ಪೂರ್ಣ ಮಾಡಿದಂತಾಯಿತು. ಇನ್ನುಮೇಲೆ ನನಗೆ ಅಪ್ಪಣೆಯನ್ನು ಕೊಡಬೇಕು.

ಪರಮಾತ್ಮ: ಒಳ್ಳೇದು.

ನಾರದ: ಇನ್ನು ಮೇಲೆ ಭೂತಲಕ್ಕೆ ಹೋಗಿ ಅಪುತ್ರರಾಗಿ ಬಳಲುವ ಮಾದರಸ ಮಾದಲಾಂಬಕೆಯರೆಂಬ ದಂಪತಿಗಳಿಗೆ ನಂದೀ ವ್ರತವನ್ನು ಮಾಡಿರೆಂದು ಹೇಳಲು ಹೋಗುವಾ

ಪದ–(ಚಾಲ– "ಶುಲಭ ಮನಿಗಣೂ")

ಶಿವೇಶ ಪಾಹಿ ಸದಾ ಶರಜಧರ । ಮುರಹರವಂದಿತ ಪಾದಮುದಾ॥
ಅಮರಧುನೀವೀ । ಚಿಮನೋಹರ ಜಟಸುಮನೋ ಮನೋವಾಸ ॥ ೧ ॥
ಭಾವಭಯಾನಾ । ಪಾವನಪರಶಿವ । ದೇವಾಧಿದೇವೋಗ್ರಾ ॥ ೨ ॥

(ಈ ಪದವನ್ನನ್ನುತ್ತಾ ಹೋಗುವನು)

===

೨ ನೇ ಪ್ರವೇಶ

(ಮಾದರಸ ಮಾದಲಾಂಬಿಕೆಯರು ಮಂಚದಮೇಲೆ ಕುಳಿತಿರುವರು)

ಮಾದಲಾಂಬಿಕೆ:

ಪದ–(ಚಾಲ– "ಸೂಮನೆ ಭಾನನು")

ಪೇಳ್ವೇನರೇಶ್ವರ ಲಾಲಿಸು ನೀನತಿ ।
ಲಾಲನೆಯಂ ಗುಣಜಾಲವಿ ಭೂಷಿತಾ ॥
ಭರತಿಮೃಕಂಡು ವಿನೊರತನುಜಾತನ
ಸಾರ ಚರಿತ್ರವನಾರ್ಯನೆ ಕೇಳಿದೆ ॥ ೧ ॥

ಅದರಲ್ಲಿ

(ಚಾಲ–ಸದರ)

ಬಾಲಸುಲೀಲೆಯನಾಲಿಸಿ ಚಿತ್ತದಿ ।
ತಾಳಿದೆನು ಘನಚಿಂತೆಯನು ಹಾ ॥ ೨ ॥

ಪತಿಯೇ! ಕಮಲಗಳಿಂದ ರಹಿತಮಾದ ಸರೋವರದ ತೆರೆಯಂತೆಯೂ ಸಾಂದ್ರತರವಾದ ಕತ್ತಲುಪಟಲವನ್ನು ನಾಶಮಾಡಿ, ಮನುಷ್ಯರ ದೃಷ್ಟಿಗಳಿಗೆ ಪುಷ್ಟಿಯನ್ನುಂಟುಮಾಡುವ ಕಮಲ ಬಂಧುವಾದ ಸೂರ್ಯನಿಲ್ಲದ ಆಕಾಶದಂತೆಯೂ ಶುಕಗಳಿಲ್ಲದ ಆಮ್ರತರುವಿನಂತೆಯೂ ಗರ್ಭವನ್ನು ಧರಿಸದೆ ಇದ್ದ ಸ್ತ್ರೀಯ ಉದರವು ಅತಿ ನಿಷ್ಪ್ರಯೋಜನವಾದಂಥಾದ್ದು. ಪ್ರಿಯಾ ! ತೊದಲ್ ಮಾತಾಡುತ್ತ ಕುಣಿದಾಡುವ ಮಕ್ಕಳಿಲ್ಲದ ಮನೆಯು ಮನೋಹರವಾದಿತೇ? ಅಯ್ಯೋ ! ಬಹಳವಾಗಿ ಮಾತಾಡಿದಲ್ಲಿ ಏನು ಪ್ರಯೋಜನವು?

ಪದ–(ಚಾಲ–"ಹಾರೆ ಮುಂಯಾ")

ಚಂದದಿಂದ ಸುಂದರಮಣಿಮಂಡಿತ । ನಂದನನೆಮ್ಮಗೃಹದೋಳ್।
ಮಂದಸುಯಾನದಂದವನುಯಂದು । ಮಂದಭಾಗ್ಯಮ ದಕ್ಷಿಪಥ
ಕೆಂದು । ಹಾಕುವನೊ ತಾನತಿಬಂಧು । ರೈಕಾಮೋದ ಪದತ್ವರ
ದಿಂದೆ । ಪಡೆಯುವೆನು । ತಡೆಯುವೆನು । ಕಡುವ್ಯಸನ । ವನು
ನಾನು ಚಿತ್ತದಿಂದೆ ॥ ಮತ್ತಮಾತನುಭವನುತ್ತಮ ಪಾಣಿಗಳೊ
ತ್ತರ । ದಿಂಪಿಡಿಯಲು ನಾ । ಸತ್ವರದಿಂದೋಡುತ್ತನ ।
ಗುತ್ತ ಕೈಯತ್ತ ಜಗ್ಗುತ್ತ ಬರನೋ ॥ ೧ ॥

ಅಂಥಾ ಕಂದನನ್ನು ನೋಡದಿರುವ ಸ್ತ್ರೀಯಳ ಕಣ್ಣು ಮನೋಹರವಾದ ಪದ್ಮಗಳಂತೆ ಎಷ್ಟು ಮನೋಹರವಾದಾಗ್ಯೂ ಅದು ಬಲಗಂಣೆನಿಸುವದು. ಅಂಥಾ ಸುಂದರ ಮಗುವನ್ನು ಮಲಗಿಸಿ ಮುದ್ದಾಡಿ ಗಲ್ಲವನ್ನು ಪಿಡಿದು ಆಲಂಗಿಸುತ್ತ ಪ್ರೀತಿಪೂರ್ವಕವಾಗಿ ಆ ಮಗುವಿನಮುಂದೆ ಜೋಗುಳಗಳನ್ನು ಹಾಡದೆ ಇರುವ ಹೆಂಗಸಿನ ಬಾಯಿಯು ಎಷ್ಟು ರಮಣೀಯವಾದಾಗ್ಯೂ ಆ ಬಾಯಿಯು ಮೂಷಕಬಿಲಕ್ಕೆ ಸಮಾನವಾಗಿ ವ್ಯರ್ಥ ಬಾಯಿಯೇ ಅನಿಸಿಕೊಳ್ಳುವುದು.

ಮಾದರಸು:

ಪದ–(ಭೈರವಿ, ತ್ರಿತಾಳ)

ತನುಭವಹೀನನಾದೆನೀ । ಜನಿಯೊಳುಗುಣವತಿ ॥
ಹಾಪ್ರಜಯಾ ಹಿಮನುಷ್ಯ ಇತಿ ।

ಯಂಬುವದಾ ಪರಮ ಶೃತಿಯು । ಹೇ ಪದ್ಮೆಕ್ಷಣೆ ।
ಯಾಪರುಷೋಕ್ತಿಯ । ಧ್ಯಾನಿಸಿ ಮನಸ
ಕಿನ್ನೇನು ಕಾಣೆನು । ತೋಷವತರುಣಿಮಣಿ ॥ ೧ ॥

ಅಲ್ಲದೆ, ಈ ಸಂಪತ್ತು, ಈ ಸೌಂದರ್ಯ ಈ ವಿದ್ಯಾಭ್ಯಾಸ ಇವೆಲ್ಲಾ ಪುತ್ರನಿಲ್ಲದ್ದರಿಂದ ನಿಷ್ಫಲಗಳೇ ಸರಿ. (ಇಷ್ಟರಲ್ಲಿ ನಾರದನು ಬರುವನು ಅವನಿಗೆ ದಂಪತಿಗಳು ನಮಸ್ಕರಿಸುತ್ತಾರೆ.)

ನಾರದ: ಎಲೋ ಮಾದರಸನೇ ! ನೀವೀರ್ವರು ಚಿಂತಾಕ್ರಾಂತರಾಗಿರುವ ಕಾರಣವೇನು?

ಮಾದಲಾಂಬಿಕೆ: ಮುನಿಶ್ರೇಷ್ಠರೇ ! ಪುತ್ರಾಭಿಲಾಷೆಯಿಂದ ಅನೇಕ ವ್ರತಗಳನ್ನು ಮಾಡಿದರೂ ಪುತ್ರನಾಗದಿರುವದರಿಂದ ಚಿಂತಾಕ್ರಾಂತ ರಾಗಿರುವೆವು. ಆರ್ತತ್ರಾಣ ಪರಾಯಣರಾದ ಮಹರ್ಷಿಗಳೇ ಈ ದುಃಖಪರಿಹಾರಕ್ಕೆ ಉಪಾಯವನ್ನು ನಿರೂಪಿಸಬೇಕು.

ನಾರದ: ಪೂರ್ವ ಜನ್ಮದೋಷದಿಂದುಂಟಾದ ಬಂಜೆತನದ ನಿವಾರಣಕ್ಕೆ ನಂದೀವ್ರತವನ್ನು ತ್ರಿಕರ್ಣಪೂರ್ವಕವಾಗಿ ಮಾಡಿರಿ. ಅಂದರೆ ಮನೋಭಿಲಾಷೆಯು ಕೈಗೂಡುವದು. ಇನ್ನು ನಾನು ಹೋಗಿಬರುತ್ತೇನೆ. (ದಂಪತಿಗಳು ನಮಸ್ಕರಿಸುವರು. ನಾರದನು ಹೋಗುವನು.)

ಮಾದರಸ: ಪ್ರೀಯೆ! ಪೂಜ್ಯರ ಅಪ್ಪಣೆಯಮೇರಿಗೆ ನಂದೀ ವ್ರತವನ್ನಾಚರಿಸಲು, ದೇವಾಲಯಕ್ಕೆ ಹೋಗುವಾ ? (ಎಂದು ದೇವಾಲಯಕ್ಕೆ ಹೋಗುವರು).

===

೩ನೇ ಪ್ರವೇಶ

ಸ್ಥಳ–ದೇವಾಲಯ

ಮಾದರಸ ಮಾದಲಾಂಬಿಕೆ:

(ಚಾಲ– "ಜಯಕೃಷ್ಣ ತಟವಾಸಾ")

ಜಯಗಂಗಾಧರರೂಪಾ । ಭಯಹರಪರತರತಾವ ।
ತ್ರಯಸಂಹರ ವೃಷಭೂಪಾ ॥

ನಿಖಿಲಹರಿದ್ಗತಕೀರ್ತಿ । ಸುಖಕರ ಮಂಗಲಮೂರ್ತೆ ।
ನಕಲಂಕಚರಿತಪೂರ್ತೆ ॥
ನತಜನಕಲ್ಪಕುಜಾತಾ ।
ಹತಭವಮೂಲಪುನೀತಾ ।ತತಸಾರಗುಣಪೇತಾ ॥ ೧ ॥

ಮಾದರಸ: ಹೇ ದಯಾಘನಾ ! ಪಾಪಸಂಹಾರಕಾ !! ಭಕ್ತವತ್ಸಲಾ !!! ಶ್ರೀಮಜ್ಜಗದುದ್ಧಾರಕನಾದ ನಂದೀಶಾ! ನಿನ್ನಂಥಾ ಸುಪುತ್ರನನ್ನು ನನಗೆ ಕರುಣಿಸಿದರೆ ಆ ಶಿಸುವಿಗೆ ಬಸವನೆಂಬ ಹೆಸರನ್ನು ಇಡುತ್ತೇನೆ. (ಎಂದು ನಮಸ್ಕರಿಸುವಷ್ಟರಲ್ಲಿ ಬಲಗೋಡಿನಿಂದ ಒಂದು ಪುಷ್ಪ ಗುಚ್ಛವು ಬೀಳುವುದು. ಇದನ್ನು ಮಾದರಸ ಕೈಯಲ್ಲಿ ತಕ್ಕೊಂಡು ಸಂತೋಷದಿಂದ)

ಸಾಕಿ

ಅಕ್ಷಯಘನಪಾಪಕ್ಷಯ ಭಕ್ತೌಘಾಕ್ಷಯ ಸುಖದವೃಷೇಶಂ ।
ಶಿಕ್ಷಿತನಿಖಲವಿಪಕ್ಷ ಸಕರುಣಕೃಪಾಕ್ಷನು ಕರುಣಿಸಿದಂ ತಾಂ ।
ದಕ್ಷಿಣ ಶ್ರೀಗದಿನೀ ಕುಸಮವರಕ್ಷಿತ ಲೋಕಕುಲಂ ॥ ೧ ॥

(ಎಂದು ಮಾದಲಾಂಬಿಕೆಯ ಕೈಯಲ್ಲಿ ಕೊಡುವನು. ಅದನ್ನು ಆಕೆಯು ಉಡಿಯಲ್ಲಿ ಧರಿಸಿಕೊಳ್ಳುವಳು.)

ಮಾದರಸು: ಪ್ರಿಯೇ ! ಇನ್ನುಮೇಲೆ ತಡಮಾಡದೆ ಮಂದಿರಕ್ಕೆ ಹೋಗಿ ಆರಾಧನೆ ಮಾಡಿ ಧನ್ಯರಾಗೋಣ ನಡೆ.

ಇಬ್ಬರು: (ನಂದೀಶ್ವರನನ್ನು ನೋಡಿ)

ಪದ–(ಚಾಲ–"ಗಣಧೀರಾ ಶ್ರೀವರ")

ಸ್ಮರದೂರಾ ಶ್ರೀಖರಕರುಣದಿ ಪೊರೆಯೊವರ ।ಸಾರತರ ।
ಮುಕ್ತಿಶರ । ಜಾರಿಮುಖೀ ಮುಖ । ಮಣಿಮುಕರಾ ॥ ಋಷಿರಾ ।
ಜವರಾ । ನಂದಿತಭವ್ಯಕರಾಂ । ಗಾ–ಶಾ । ನಾ–ಶಾ ।
ಪರಿವೃತಗುಣಕರುಣಾ । ಭರಣ ॥ ೧ ॥

೧ನೇ ಅಂಕ ಸಮಾಪ್ತ

===*****=====*****===

೨ನೇ ಅಂಕ

೧ನೇ ಪ್ರವೇಶ

ಸ್ಥಳ–(ಮಾದರಸ ಮಾದಲಾಂಬಿಕೆಯರ ಅಂತಃಪುರವು)

ಹೈಮಾವತಿ: ಒಡಿಯಳೇ! ಹೀಗೆ ನೀವು ಸ್ವಲ್ಪಾದರೂ ಅನ್ನ ತಕ್ಕೊಳ್ಳದೆ ಇರುವುದು ಬಹಳ ಅನುಚಿತವು.

ಮಾದಲಾಂಬಿಕೆ: ಹೈಮಾವತಿ ! ಗರ್ಭವನ್ನು ಧರಿಸಿದ ನನಗೆ ರುಚಿಕರ ಪದಾರ್ಥವು ಕೂಡಾ ಬಹು ಅರುಚಿಕರವಾಗಿರುವುದು. ಅಲ್ಲದೆ ಹಸಿವೆಯಂತೂ ಎಷ್ಟೂ ಇಲ್ಲವು.

ಕಾತ್ಯಾಯನಿ: ಹೈಮಾವತಿ! ದೇವಿಗೆ ಈ ರೀತಿ ಆದದ್ದು ಯೋಗ್ಯವೇ. ನಿನಗೆ ತಿಳಿಯಲ್ಲೊಲ್ಲದೇನು? ಅದೇನಂದರೆ ಭಕ್ತಿರುಚಿಕನಾದ ಶ್ರೀಮನ್ ನಂದೀಶ್ವರನು ಈಕೆಯ ಬಸುರಿನಲ್ಲಿರುವುದರಿಂದ ಈಕೆಗೆ ರುಚಿಕರವಾದದ್ದು ಅರುಚಿಕರವಾಗಿರುವುದು. ಅಮೃತ ತನುವಿನ ತನಯನು ಈಕೆಯ ಗರ್ಭದಲ್ಲಿ ಬೆಳಿಯುತ್ತಿರುವುದರಿಂದ ಈಕೆಗೆ ಹಸಿವಿಲ್ಲದಾಗಿರುವುದು. (ಇಷ್ಟರಲ್ಲಿ ಮಾದರಸನು ಈ ಮಾತು ಕೇಳುತ್ತ ಒತ್ತಟ್ಟಿಗೆ ನಿಂತಿರುವನು.)

ಮಾದರಸ: ಅಹಾ! ದಾಶಿಯರಲ್ಲಿ ಕಾತ್ಯಾಯನಿಯಳು ಈ ಮತ್ಪ್ರಾಣ ಪ್ರೀಯಳ ಉದರದಿಂದ ನಂದೀಶ್ವರನು ಜನಿಸುವನೆಂದು ಹೇಳುವಳು. ಹೌದು. ಈ ಮಾತು ನಿಜವೇ. ಯಾಕಂದರೆ, ಆ ಭಸ್ಮಶಿತಗಾತ್ರನಾದ ಶ್ರೀ ಶಿವನ ಪ್ರತಿಮನು ಈಕೆಯ ಉದರದಲ್ಲಿ ನೆಲಸಿರುವುದರಿಂದ–

ಪದಾ

ತರುಣೀ ಮಣಿಯ ದೇಹ । ವಿರದೆ ಶುಚತ್ವದಿ ।
ಮೆರೆಯುತ್ತತೋವಿಷವ ಬೀರುವದೀಗಳೇ ॥ ೧ ॥

ಇನ್ನು ಕಾಲಕ. ಠರೂಪನಾದ ಶ್ರೀ ನಂದೀಶ್ವರನೇ ಈ ಮತ್ಪ್ರೀಯಳ ಉದರದಿಂದ ಹುಟ್ಟುವನೆಂದೇ, ಈ ಮದ್ಭಾರ್ಯಾಮಣಿಯು–

ಪದ–(ಚಾಲ–ಅಶಿ ಹಿ ಸುಗುಣ ಖನಿ)

ಕನದ್ಧೇಮಕಲ ಶವನಕುಚಾಗ್ರಂ ವಿನುತ ಶಾಮಕಾಂತೀ ।
ಯನುಪೊಂದಿಹುದು ಮೇಣ್ ಪ್ರಾಣಕಾಂತಾ ।
ತುಂದರ ಯುಗವಳಿಗಳ್ ಕಾಣವೀಗಿ । ವಿರಾಗಿ ।
ಸರಾಗಿ । ನಿರೋಗಿ । ಸುಯೋಗಿ ।
ಸುಭೋಗಿ । ವಲಯ ವಾಹದಯವೆಂತದೆಮ್ಮೊಳು ॥ ೧ ॥

ಅಲ್ಲದೆ ಗರ್ಭಭಾರದಿಂದ ಈಕೆಯ ಗಮನವು ಮಂದವಾಗಿ ರುವುದು, (ಎಂದು ಮಂಚದಮೇಲೆ ಕುಳಿತು) ಪ್ರಿಯೇ ಗರ್ಭವತಿಯಾದ ನಿನಗೆ ಯಾವದಾದರೊಂದು ಪದಾರ್ಥದಲ್ಲಿ ಅಪೇಕ್ಷೆಯಾದರೆ, ಬೇಡು.

ಮಾದಲಾಂಬಿಕೆ: ಪ್ರಿಯಾ! ಶಿವಸಂಬಂಧವಾದ ವಸ್ತುಗಳಲ್ಲಿ ನನ್ನ ಚಿತ್ತವು ಆಸಕ್ತವಾಗಿರುವುದರಿಂದ ನನಗೆ ಎರಡನೇ ವಸ್ತುವಿನಲ್ಲಿ ಬಯಕೆಯೇ ಆಗಲೊಲ್ಲದು.

ಮಾದರಸ: ಆಹಾ! ಯೋಗ್ಯವು ಯೋಗ್ಯವು, ಪ್ರಿಯೆ ನಿನ್ನ ಬಸರಿನಲ್ಲಿ ಶಿವಧ್ಯಾನತತ್ಪರನಾದ ವೃಷಭೇಶ್ವರನಿರುವಕಾರಣ ನಿನಗೆ ಶಿವ ಕಥಾಶ್ರವಣ, ಶಿವಪಾದಪೂಜಾ ಮತ್ತು ಶಿವಧ್ಯಾನ ಇವೇ ಮೊದಲಾದವುಗಳಲ್ಲಿಯೇ ಹೊರ್ತು, ಬೇರೆ ವಸ್ತುಗಳಲ್ಲಿ ಅಪೇಕ್ಷೆಯುಂಟಾದೀತೇ ? ಆಗಲಾರದು, ಯಾಕೆಂದರೆ

ಶ್ಲೋಕ

ಗವ್ಯಂ ದುಗ್ಧಮಪಾಸ್ಯಂ ಪಾಸ್ಯತಿ ಜನಃ ಕೋವಾ
ಯವಾಗೋರಸಂ ॥

ಪ್ರಿಯೆ! ಗೋಸಂಬಂಧವಾದ ಕ್ಷೀರವನ್ನು ಬಿಟ್ಟು ಯಾವನು ಯಾವಾಗಲೂ ರಸವನ್ನು ಪಾನವಾಡುವನೇ ? ಇರಲಿ, ವೇಳೆಯಾಯಿತು. ಇನ್ನು ಮೇಲೆ ಮಲಗಿಕೋ. ನಾನು ಹೋಗುತ್ತೇನೆ. ದಾಸಿಯರೇ ! ನೀವು ಎಚ್ಚರದಿಂದ ಮಲಗಿ ಕೊಳ್ಳಿರಿ, (ಹೋಗುವಷ್ಟರಲ್ಲಿ ಬಲಗಣ್ಣು ಹಾರುವುದು, ತಿರುಗಿ) ಹೇ ಶಾಂತಭರಿತೆ ! ಇದೇ ಸಂತೊಷಸಮಯದಲ್ಲಿ ನನ್ನ ಬಲಗಣ್ಣು ಹಾರಿ ಮತ್ತಿಷ್ಟು ಸಂತೋಷವನ್ನುಂಟುಮಾಡಿತು. ಆದರೆ ಈ ಶುಭ ಚಿನ್ಹದ ಫಲವನ್ನು ತೋರಿಸುವ ದಿನವು ಯಾವ ಅಕ್ಷರಗಳಿಂದ ಅಲಂಕೃತವಾಗಿದ್ದೀತು?

ಹೈಮಾವತಿ: ದೇವಾ! ರಾಣಿಯವರ ಚಿನ್ಹಗಳನ್ನು ನೋಡಲಾಗಿ "ಸೋಮವಾರ ವೆಂಬೀ ನಾಲ್ಕು ಅಕ್ಷರಗಳಿಂದ ಅಲಂಕೃತವಾದ ನಾಳಿನ ದಿವಸವೇ ನಿಮ್ಮ ಬಲಗಣ್ಣು ಹಾರಿದ ಫಲವನ್ನು ತೋರಿಸುವಂತೆ ಕಾಣುತ್ತದೆ.

ಮಾದರಸು: ಒಳ್ಳೇದು, ದಾಸೀ, ನೀವೆಲ್ಲರು ಮಲಗಿಕೊಳ್ಳಿರಿ, ನಾನು ಹೋಗುತ್ತೇನೆ. (ಎಂದು ಹೋಗುವನು. ಎಲ್ಲರೂ ಮಲಗುವರು. ಹಿಂದೆ ಶುಭಧ್ವನಿಯಾಗುವುದು. ಅಷ್ಟರಲ್ಲಿ ಒಂದು ವಿಮಾನ ಇಳಿಯುವದು, ಎಲ್ಲರೂ ಜಯಜಯಕಾರ ಮಾಡುತ್ತಾರೆ.)

ಪಾರ್ವತಿ: (ಆ ಶಿಸುವನ್ನು ಎತ್ತಿಕೊಂಡು ಮುದ್ದಾಡುತ್ತ) ಅಹಾ! ಶಿವಶಾಂತಿರಸವೇನಾದರೂ ಶಿಸುರೂಪವಾಗಿ ಇಲ್ಲಿ ಅವತರಿಸಿತೋ ಏನೋ ತಿಳಿಯದು, (ಎಂದು ಆಲಿಂಗಿಸಿ) ನೂತನವಾದ ಕುವಲಯದಂತೆ ಸ್ನಿಗ್ಧವಾದ ತನ್ನ ಅಂಗಗಳಿಂದ ನನ್ನ ದೇಹಕ್ಕೆ ಈ ಕೋಮಲ ಶಿಸುವು ಎಷ್ಟು ಸಂತೋಷವನ್ನು ಮಾಡುತ್ತಿರುವದು, (ಎಂದು ಪರಮೇಶ್ವರನ ಕೈಯಲ್ಲಿ ಕೊಡುವಳು).

ಪರಮೇಶ್ವರಾ: ಅಹಾ! 'ಇದೆಂಥಾ" ಮಂಗಲಮೂರ್ತಿಯು, ಮಹಿಮೆಗೆ ಸ್ಥಾನೀಭೂತವಾಗಿ ಜ್ಞಾನವೆಂಬ ಅಮೃತವು ಹೆಪ್ಪುಗಟ್ಟಿ ಸೌಮ್ಯಾಕಾರವನ್ನು ಧಾರಣಮಾಡಿತೋ ಎಂಬಂತೆ ಶುಭ್ರಕಾಂತಿಯಿಂದ ಶೋಭಿತವಾದ ದೇಹವುಳ್ಳವನಾಗಿ ಈ ಬಾಲಕನು ನನ್ನ ಮನಸ್ಸಿಗೆ ಅತ್ಯಂತೋತ್ಸವವನ್ನುಂಟು ಮಾಡುತ್ತಿರುವನು.

ಪಾರ್ವತಿ: ಪ್ರಿಯಾ ! ಈ ಧರ್ಮಸ್ವರೂಪಿಯಾದ ಶಿಸು[illegible] ರಜಸ್ತಮೋ ಗುಣ ಸಮುದಾಯವನ್ನು ನಾಶಮಾಡುವ ಚಿನ್ಮಯ ದೀಕ್ಷೆಯನ್ನು ಮಾಡಿ, ನಾವು ಇನ್ನು ಮೇಲೆ ಹೋಗುವಾ, (ಎಂಬ ಮಾತನ್ನು ಶಿವನು ಕೇಳಿ, ಭಸ್ಮಸ್ನಾನವನ್ನು ಮಾಡಿ ಹಣಿಯಲ್ಲಿ ಭಸ್ಮವನ್ನು ಧರಿಸಿ ಕಂಠದಲ್ಲಿ ಲಿಂಗ ಧಾರಣಗೈಯುತ್ತಾನೆ.)

ಸಾಕಿ

ಮಂಗಲವಿರಲೀ । ಮಂಗಲಮೂರ್ತಿಗನಂಗ ರಮ್ಯತರವರ ರೂ ।
ಪಂಗೆ ಸಾರತರ ಜಂಗಮಸುಪ್ರೀ । ತಂಗೆ ಸುಗುಣನಿಜಧಾ
ಮಂಗೆಗತತ್ರೈತಾಪಂಗೆ ಧೀರರಿಗೆ ॥ ೧ ॥

(ಅನ್ನುತ್ತ ಹೋಗುವರು)

ಮಾದಲಾಂಬಿಕೆ: (ಎಚ್ಚೆತ್ತು ತನ್ನ ಬಗಲಲ್ಲಿರುವ ಶಿಸುವನ್ನು ನೋಡಿ) ಅಹಾ! ಇದೆಂಥಾ ಚಮತ್ಕೃತಿಯು. ನನ್ನ ಗರ್ಭಭಾರದ ಶ್ರಮವೇ ಇಲ್ಲದಂತಾಗಿರುವದು? (ಹೊರಳಿ ನೋಡಿ) ಓಹೋ ಶ್ರೀಮನ್ನಂದೀಶ್ವರನು ತನ್ನ ಮಹಿಮಾತಿಶಯವನ್ನು ಲೋಕದಲ್ಲಿ ಪ್ರಕಟವಾಗಿ ತೋರಿಸಬೇಕೆಂಬಕಾಂಕ್ಷೆಯಿಂದ ಮತ್ಪುಣ್ಯವಶದಿಂದ ನನ್ನ ಗರ್ಭವನ್ನು ಪವಿತ್ರಮಾಡಿ, ನನಗೆ ಪ್ರಸವ ವೇದನೆಯನ್ನು ಸಹ ಉಂಟುಮಾಡದೇ ನನ್ನ ಮಗ್ಗಲಲ್ಲಿ ಮಲಗಿ ಅತಿಸಂತೋಷವನ್ನುಂಟು ಮಾಡಿರುವನು. ಒಳ್ಳೇದು ದಾಸೀ! ಜಾಗ್ರತೆಯಾಗಿ ಮತ್ಪ್ರಾಣಪತಿಯನ್ನು ಕರಕೊಂಡು ಬಾ.

ದಾಸಿ: ಒಳ್ಳೇದು (ಹೋಗುವಳು. ಮಾದರಸ ಬರುತ್ತಾನೆ).

ಮಾದರಸ: ಪ್ರಿಯೇ ! ಈಗ ಜರಗಿದ ಆನಂದದ ಸಂಗತಿಯೇನು?

ಮಾದಲಾಂಬಿಕೆ:

ಪದ–(ಚಾಲ– 'ಮೇರೆ ಗಲಿಯಾ')

ಧರಾಸುರೇಶ । ಬಾಲನಮೋದದಿ । ಲೀಲೆಯೊಳೀಕ್ಷಿಸು ॥
ವೃಷಭೇಶನೆಮ್ಮಯ । ಬಸುರಿಸ್ಯತಂದನು । ಶಿಸುರೂಪದಿಂದೆ ॥ ೧ ॥

(ಶಿಸುವನ್ನು ತೋರಿಸಿ) ಪ್ರಿಯಾ! ನನಗೆ ಪ್ರಸವ ವೇದನೆ ಯನ್ನುಂಟು ಮಾಡದೆ, ನಂದೀಶ್ವರನೇ ನನ್ನ ಮಗ್ಗುಲಲ್ಲಿ ಶಿಸುರೂಪವನ್ನು ಧರಿಸಿ ಮಲಗಿರುವನು.

ಮಾದರಸ: ಅಹಾ ! ಇದೆಂಥಾ ಚಮತ್ಕಾರವು. ಶಿವತೇಜೋಭರಿತನಾದ ಈ ಪುತ್ರನ ಜನನ ರೀತಿಯನ್ನು ಯೋಚಿಸಲು ಅಸಾಧ್ಯವಾಗಿರುವದು. (ಯೋಚಿಸಿ ಮನಸ್ಸಿನಲ್ಲಿ ವಿಚಾರಮಾಡಲು, ಭಕ್ತವತ್ಸಲನಾದ ನಂದೀಶ್ವರನು ನನ್ನ ಮನೋಭಿಲಾಷೆಯನ್ನು ಪೂರ್ಣಮಾಡಲು ಭೂಪವಿತ್ರಾರ್ಥವಾಗಿ ಅಯೋನಿಜನಾಗಿರುವನೆಂಬುದಕ್ಕೆ ಸಂದೇಹವೇ ಬೇಡಾ. (ಮತ್ತೂ ನೋಡುತ್ತ ನಿಲ್ಲುವನು.)

ಮಾದಲಾಂಬಿಕೆ: ಪ್ರಿಯಾ ! ಮತ್ತೊಂದು ಆಶ್ಚರ್ಯಕರವಾದ ಸಂಗತಿಯುಂಟು.

ಮಾದರಸ: ಅದೇನು?

ಮಾದಲಾಂಬಿಕೆ: ನನ್ನ ಸ್ವಪ್ನದಲ್ಲಿ ಸಾಕ್ಷಾತ್ ಪರಮೇಶ್ವರನು ಪಾರ್ವತಿ ಸಮೇತನಾಗಿ ಬಂದು ಈ ಶಿಸುವಿಗೆ ಲಿಂಗಧಾರಣವನ್ನು ವಿಧಿಪೂರ್ವಕವಾಗಿ ಮಾಡಿ, ಈ ಬಾಲಕನನ್ನು ಮುದ್ದಾಡಿ ಹೋದನು. ಇಗೋ ಈ ಕಂಠದಲ್ಲಿ ನೋಡಿರಿ. ಇಷ್ಟಲಿಂಗವು ಒಪ್ಪುತ್ತಿರುವದು. ಇದಲ್ಲದೆ ಈತನಿಗೆ ಸ್ಥಿತಿಗತಿಗನುಸರಿಸಿದ ಬಸವನೆಂದು ನಾಮವನ್ನು ಇಡಬೇಕೆಂದು ಶಿವಾಜ್ಞೆಯಾಗಿರುವುದು.

ಮಾದರಸ: (ಸಂತೋಷದಿಂದ) ಪ್ರಿಯೆ! ನಿನ್ನ ಈ ಮುಖೋದ್ಗತ ವಾಕ್ಯಗಳನ್ನು ಕೇಳಿ ಮನಸ್ಸಿನಲ್ಲಿ ವಿಚಿತ್ರವಾದ ಕಲ್ಪನೆಗಳು ಹುಟ್ಟುತ್ತವೆ. ಇರಲಿ, ನಂದೀಶ್ವರನಿಗೆ ಬಾಗಿಣಗಳನ್ನು ಕಳುಹಿಸಿ ಸಂತೋಷದಿಂದ ಗಣಾರಾಧನೆಯನ್ನು ಜರಗಿಸಿ, ಇವನಿಗೆ ಬಸವೇಶನೆಂದು ಶಾಸ್ತ್ರೀಯ ಪದ್ಧತಿಯಂತೆ ನಾಮಕರಣವನ್ನು ಮಾಡೋಣ ನಡೆ.

ಮಾದರಸ, ಮಾದಲಾಂಬಿಕೆ:

ಪದ–(ಬ್ಯಾಂಡ)

ಹರಭವಹರ ಪೊರೆಯ್ಯೆ । ಕರುಣದಿ ಮುರಹರ ಸುರವರ
ಮುಖನಿರ್ಜರ ಕುಲವಂದಿತಾಂಘ್ರೆ ॥ ಪಲ್ಲ ॥
ಶರಣ ಜನಕ ಮಹಕರುಣ ಜಲನಿಧೆ ।
ಮರಣಭೀತಿ ದೂರತರಣಿ । ಸೋಮ
ಶಿಖಸ್ಫುರಿತ ಸುನಯನ । ಸ್ಮರಹರ । ಪರತರ । ಗುರುವರ। ಶುಭಕರ ॥ ೧ ॥

ಜೋಗಳಪದಾ

ಸುಜನಸರೋದ್ಭವರವಿ ಜೋ । ಕುಜನಧರಾ ಧರಪವಿ ಜೋ ।
ವಿಜಿತಕೀರ । ಬಸವದಯಾ ಭವಸುತ ಜೋ । ಅಸಮಗುಣಾ
ವಳಿಯುತ ಜೋ । ಪಶುಪತಿ ಕಿಂಕರನತ ಜೋ ॥ ೧ ॥
ಅಂಜನರಂಜಿತ ಕಂಜನೇತ್ರಿಯರು । ಕುಂಜರ ಮಂಜುಳ
ಮಂದಯಾನಿಯರು । ಕಂಜಾಕ್ಷವಾಹನ ಶತ್ರುವೇಣಿಯರು
ನೀವ್‌ಮೃತ್ಯುಂಜಯ ಭಕ್ತೆಯರು ತೂಗಿಪಾಡಿರೇ ಜೋ ಜೋ ।
ಜೋ ಜೋ ಯನ್ನ ಜೋತಿಯಕಂದಾ ॥ ೧ ॥

ಕಮಲಜ ಕಮಲಾಕ್ಷ ವಂದೀತಪಾದಾ ।
ಕಮಲಭವನ ಪ್ರೀತಿ ಭಕ್ತನಮೋದ
ದಮಲ ಸುಗುಣಮಣಿ ಭೂಷಿತನೋಜದಿಂದೆ ।
ಕಮಲಿನಿಮುಖಿಯರು ತೂಗಿಪಾಡೀರೇ ಜೋ ಜೋ ।
ಜೋ ಜೋ ಯನ್ನ ಜೋತಿಯಕಂದಾ ಜೋ ಜೋ ॥ ೨ ॥

(ಎಂದು ಹೋಗುವರು)

===

೨ನೇ ಪ್ರವೇಶ

(ಬೀದಿ–ಇಬ್ಬರು ಭಟ್ಟರು ಭೆಟ್ಟಿಯಾಗುವರು)

೧ನೇ ಭಟ್ಟ: ಭಟ್ಟರೇ ಎಷ್ಟು ವಿಲಂಬಮಾಡಿದಿರಿ? ನಿಮ್ಮ ಮಾರ್ಗಪ್ರೇಕ್ಷಣೆಯನ್ನು ಎಷ್ಟು ಮಾಡಬೇಕು?

೨ ನೇ ಭಟ್ಟ: ಹೌದು, ಶಂಕರನೆಂಬ ನಿಮ್ಮ ಶಿಷ್ಯನು ಇದೇ ಈಗ ನಮ್ಮ ಮನೆಗೆ ಬಂದು ನಮ್ಮ ಗುರುಗಳು ನಿಮ್ಮನ್ನು ಕರೆಯುತ್ತಾರೆಂದು ಹೇಳಿ ಹೋದನು. ಆ ವೇಳೆಕ್ಕೆ ನಾನಾದರೂ ನಿಮ್ಮಲ್ಲಿಗೆ ತ್ವರದಿಂದೆ ಹೊರಟ್ಟಿದ್ದೆ, ಅದೇನು ವಿಶೇಷವು?

೧ನೇ ಭಟ್ಟ: ಏನೂ ಇಲ್ಲಾ, ಮಾದರಸನ ಮಗನಾದ ಬಸವೇಶ್ವರನಿಗೆ ಈಗ ಎಂಟನೇ ವರ್ಷ ಪ್ರಾಪ್ತವಾಗಿರುವದು. ಕಾರಣ ಮಾದರಸನು ಉಪನಯನ ಕರ್ವವನ್ನು ಜರಗಿಸಲುದ್ಯುಕ್ತನಾಗಿ ಶುಭಮುಹೂರ್ತವನ್ನು ತೆಗೆದುಕೊಡಲಿಕ್ಕೆ ನಮ್ಮನ್ನು ಕರೆಸಿದ್ದಾನೆ.

೨ನೇ ಭಟ್ಟ: ಹಾ ಹಾ ! ನಮಗೆ ಸುಗ್ಗಿ ಕಾಲ ಬಂದಂತಾಯಿತು. ಹಾಗಾದರೆ ಜಾಗ್ರತೆಯಾಗಿ ಹೋಗೋಣ ನಡೆಯಿರಿ. ಈ ಹೊತ್ತಿನ ದಕ್ಷಿಣೆಯು ಚವಲ, ಪವಾಲಿ ಮೇಲೆ ತೀರುವಂತಿಲ್ಲಾ. ನಿದಾನ ಪಕ್ಷಕ್ಕೆ ಹತ್ತು ಅವತಾರವಂತೂ ಸರೀಯೇ, ಹೋಗೋಣ ನಡೆಯರಿ.

೧ನೇ ಭಟ್ಟ: ಹೋ ! ಹಾಗಾದರೆ, ಹೋಗೋಣ ನಡೆಯಿರಿ. (ಎಂದು ಹೋಗುವರು)

===

೨ನೇ ಪ್ರವೇಶ

ಸ್ಥಳ–(ಮಾದರಸನ ಮಂದಿರವು. ಮಾದರಸು ಇಬ್ಬರು ಜೋಯಿಸರು)

ಮಾದರಸ: ಅಯ್ಯಾ ಜೋಯಿಸರೇ ! ಜಗದುದ್ಧಾರಕನಾದ ಶ್ರೀ ನಂದೀಶ್ವರನವರದಿಂದ ಹುಟ್ಟಿದ ಮತ್ಪ್ರೀತಿ ಪುತ್ರನಾದ ಬಸವೇಶ್ವರನಿಗೆ ಏಳುವರ್ಷ ಮುಗಿದು ಎಂಟನೇವರ್ಷ ಪ್ರಾಪ್ತವಾಗಿರುವದು. ಆದ್ದರಿಂದ ಮತ್ಪುತ್ರನಿಗೆ ಉಪನಯನ ಕರ್ಮವನ್ನು ಜರಗಿಸಬೇಕೆಂಬ ಆಶೆಯುಂಟಾಗಿರುವದು. ತಸ್ಮಾತ ಯಾವದಾದರೊಂದು ಶುಭಮುಹೂರ್ತವನ್ನು ಉಪನಯನ ಕಾರ್ಯಕ್ಕೆ ಯೋಗ್ಯವಾಗುವಂತೆ ತೆಗೆದುಕೊಡಿರಿ.

ಭಟ್ಟರು: ಒಳ್ಳೇದು, ಒಳ್ಳೇದು, (ಎಂದು ಪಂಚಾಂಗವನ್ನು ತಿರತಿರುವಿ ನೋಡುತ್ತಾ ಕೂಡ್ರುವರು. ಅಷ್ಟರಲ್ಲಿ ಬಸವೇಶ್ವರನು ಬರುವನು.)

ಬಸವೇಶ್ವರ: (ಅವರೆಲ್ಲರನ್ನು ನೋಡಿ) ಎಲೈ ತಂದಿಯೇ ಇಲ್ಲಿ ಇಷ್ಟು ಜನರನ್ನು ಕೂಡಿಸಿಕೊಂಡು ಏನೋ ಒಂದು ಆಲೋಚನೆಯನ್ನು ನಡಿಸಿದಂತೆ ತೋರುತ್ತದೆ. ಇದರ ನಿಜಸ್ಥಿತಿಯನ್ನು ಹೇಳಬೇಕು.

ಮಾದರಸ: ಪುತ್ರಾ ನಿನಗೆ ಉಪನಯನ ಮಾಡುವ ಕಾಲವು ಬಂದಿರುವುದು, ಅದಕ್ಕೆ ಒಳ್ಳೇ ದಿವಸವನ್ನು ವಿಚಾರಮಾಡುತ್ತಾ ಕುಳಿತಿರುವೆನು.

ಬಸವೇಶ್ವರ: ಅಹಹ!ಜನಕಾ !! ಶಿವದೀಕ್ಷೆಯಿಲ್ಲದವನಂತೆ ನನ್ನನ್ನು ಮುಂಜಿಗಟ್ಟುವ ಬುದ್ಧಿಯು ನಿನಗೆ ಹ್ಯಾಗೆ ಹುಟ್ಟಿತು? (ಯೋಚಿಸಿ) ತಿಳಿಯಿತು. ನೀನು ಹೆಚ್ಚಾಗಿ ಉಪೋಷಣವನ್ನು ಮಾಡಿ ಮಾಡಿ ನಿನ್ನ ಮಸ್ತಕಕ್ಕೆ ಪಿತ್ತವೇರಿರುವುದು. ಆದ್ದರಿಂದಲೇ ಇಂಥ ಅಯೋಗ್ಯಾಲೋಚನೆಯನ್ನು ನಡೆಸಿರುವಿ. ನಾನು ಜನಿಸಿದಕೂಡಲೇ ಸಂಗಮೇಶ್ವರನು ಬಂದು ನನಗೆ ಗುರುವಾಗಿ ಬೋಧಿಸಿ ವೀರಶೈವಾಚಾರ ಮಾರ್ಗ ದೊಳಗಿರಸಿದ್ದದ್ದನ್ನು ಮರೆತು ಬಿಟ್ಟಿಯಾ ! ನೋಡು ಶಿವದೀಕ್ಷೆಯನ್ನು ಜಡದು, ಭೂತಾಂಶವನ್ನು ಕಳೆದು, ಪೂತಾತ್ಮನಾದ ನಾನು ಅನ್ಯ ಸಂಸ್ಕಾರಕ್ಕೆ ಆಶೆಪಡುವೆನೇ? ಓಹೋ ! ಇದೆಂಥಾ ಬುದ್ಧಿಭ್ರಂಶತ್ವವು !! ವಿಚಾರ ಮಾಡಿ ನೋಡು. ಅತ್ಯಧಿಕವಾದ ರಾಜ್ಯಪಟ್ಟವನ್ನು ಕಟ್ಟಿಕೊಂಡ ಮಹಾ ಪುರುಷನು ಉಳಿದ ಹೀನ ಪದವಿಗಳನ್ನು ಆಶಿಸುವನೇ? ಜನಕಾ ! ಭವಾಬ್ಧಿಯನು ದಾಟಿಸಿ ನಿರಪಾಯ ಸಂಶ್ರಯವಾದ ಮೋಕ್ಷಪದವಿಯನ್ನು ಕೊಡತಕ್ಕ ಶಿವಚರಣಾರವಿಂದದ ಭಕ್ತಿಯಲ್ಲಿ ಮನಸ್ಸಿಟ್ಟಿರುವವನಿಗೆ ಅನ್ಯ ದೇವತಾಭಕ್ತಿಯಲ್ಲಿ ಮನಸ್ಸು ನಾಟುವದೇ?

ಪದ–(ಚಾಲ–"ರಾಮರಾಯಾ ರಾಘೋಬಾರ")

ಸ್ಥಿರಚಿತ್ತನಾಗುತಲೆನ್ನ । ಸರಸೋಕ್ತಿಭರವ ಕೇಳ್ ಮುನ್ನ ॥
ಸುರಧರಿಣೀಸಿದ ನೆರಳನು ಪೊಂದಿಹ । ನರನೀತರ ಕುಜದ ।
ನಾತಪ। ವಾತನು । ತಾತನ ಭಜಿಪನು ॥ ೧ ॥
ಎಸವ ಸಂಜೀವನನ ರಸವನು ಪ್ರಾಶಿಸು ।
ವ ಸಮನರನಿತರ ನೀಚರ ಸಾಚಮವಾಚರಪನೆಗಡ ॥ ೨ ॥

ಇದಲ್ಲದೆ ಮಹತ್ಪರ್ವತವನ್ನು ಆಶ್ರಯಿಸಿಕೊಂಡು ಇರುವ ಸಿಂಹಕ್ಕೆ ಸಣ್ಣ ಗುಡ್ಡದಲ್ಲಿ ವಾಸಮಾಡುವುದು ಮನಸ್ಸಿಗೆ ಬಂದೀತೇ? ಅದರಂತೆ ದೇವದೇವನ ಪಾದಶೇವೆಯನ್ನು ಮಾಡುವ ಪುಣ್ಯಶಾಲಿಗೆ ಇತರ ದೇವೋಪಾಸನೆಯು ಸಮ್ಮತವಾದೀತೆ? ಮತ್ತು ರಾಜಚಿನ್ಹವನ್ನು ಧರಿಸಿದವನು ಉಳಿದ ಅಧಮ ಚಿನ್ಹವನ್ನು ಧರಿಸಲು ಅಪೇಕ್ಷಿಸುವನೇ? ತದ್ವತ ದೇಹದಲ್ಲಿ ಅತ್ಯಂತ ಶ್ರೇಷ್ಠವಾದ ಶಿವಲಾಂಛನೆಯನ್ನು ಧಾರಣವಾಡಿಕೊಂಡಿರುವವನು ಉಳಿದ ಲಾಂಛನೆಗಳನ್ನು ಧರಸಬೇಕೆಂದು ಅಪೇಕ್ಷೆ ಮಾಡುವನೇ?

ಮಾದರಸ: ತನಯಾ ! ನೀನು ಪೂರ್ವಪುಣ್ಯದಿಂದ ಜಗತ್ ಸೃಷ್ಟಿಕರ್ತನಾದ ಬ್ರಹ್ಮನ ವಂಶದಲ್ಲಿ ಹುಟ್ಟಿ ಬ್ರಾಹ್ಮಣೋತ್ತಮನೆನಿಸಿಕೊಂಡು ಈಗ ಉಪನಯನ ಕರ್ಮವನ್ನು ಧಿಕ್ಕರಿಸಿ ಈ ಬ್ರಾಹ್ಮಣತ್ವಕ್ಕೆ ದೂರನಾಗುವದು ಒಳೀತೇ!

ಬಸವೇಶ್ವರ: ಹಾ, ತಂದೆಯೇ ! ನಿನ್ನ ವಿಚಾರಕ್ಕೆ ಸರಿಯೇ ಇಲ್ಲಾ. ಕೇಳು ವ್ಯಾಸ ಮಹರ್ಷಿಯು ಬ್ರಾಹ್ಮಣನಷ್ಟೇ? ಆದರೆ ಆತನು ಜನಿಸಿದಕೂಡಲೆ ಆತನಿಗೆ ಉಪನಯನವನ್ನು ಮಾಡಿದವರಾರು? ಹೇಳು. ನೋಡು, ಪ್ರಾಕೃತ ಕರ್ಮೋಪನಯನವನ್ನು ಸ್ವೀಕರಿಸಿ ತ್ಯಜಿಸುವುದಕ್ಕಿಂತಲೂ ಅದನ್ನು ಅಂಗೀಕರಿಸದಿರುವದೇ, ಒಳಿತೆಂಬುವದಕ್ಕೆ "ಕರ್ಮತ್ಯಾಗೇತು ಕಿಲ್ಮಿಷಂ" ಮತ್ತು "ನಕರ್ಮಣಾ" ಎಂಬ ಶ್ರುತಿಗನುಸಾರ ಆಚರಿಸಿ ವ್ಯಾಸಾದಿ ಮಹರ್ಷಿಗಳು ಮೊಂಜೀವ್ರತವನ್ನು ಪರಿತ್ಯಾಗಮಾಡಿ ತಮ್ಮ ಪ್ರಭಾವದಿಂದಲೇ ಬ್ರಾಹ್ಮಣರೆನಿಸಿಕೊಂಡರು. ಪ್ರಾಕೃತ ಯಜನಕ್ಕೂ ಕೂಡಾ ಅತ್ಯವಶ್ಯಕವೆನಿಸಿದ ಉಪನಯನ ಕಾರ್ಯವು ಬ್ರಹ್ಮಸೃಷ್ಟಿಯನ್ನು ದಹಿಸುವ ಶಾಂಭವೀ ದೀಕ್ಷೆಯುಳ್ಳ ಅಪ್ರಾಕೃತ ಬ್ರಾಹ್ಮಣ್ಯಕ್ಕಂತೂ ಬಹಳೇ ದೂರವು.

ಮಾದರಸ: ಎಲಾ ! ಇನ್ನು ಹ್ಯಾಗೆ ಮಾಡಬೇಕು? (ಯೋಚಿಸಿ) ಹಾ !

ಪದ–(ಚಾಲ–"ಮಜಗಮೇ ಐಸಾ")

ಸುಜನ ಹೃನ್ನಾಳಿಕಾರ್ಕನಂ ವಲಿಸುವೆನು ।
ಏತಚ್ಚಿನ್ಹವೇ ಭೂತಪತಿಯ ಪ್ರ । ಖ್ಯಾತ ಚಿನ್ಹ ವಂದಿ ।
ತನಿಗೋರಿಯು ತಾ। ಅತುರದಿಂದೀಪೂತ ಸುಕರ್ಮವ। ನೋತು
ನಂಬುವಂತೀ ತನುಜನು ತಾ ॥ ೧ ॥

ಪುತ್ರಾ ದ್ವಿಜಚಿನ್ಹವು ಎಂಬುವದು ಶಿವಚಿನ್ಹವೇ ಹೊರ್ತು ಬೇರೆ ಅಲ್ಲಾ.

ಬಸವೇಶ: ಹಾಂ ! ಅದು ಹ್ಯಾಗೆ ?

ಮಾದರಸ: ಪುತ್ರಾ ! "ಹರಿಕೇಶೋಪವೀತಿನ ಪುಷ್ಟಾನಾಂ ಪತಯೇ ನಮೋನಮಃ" ಎಂಬ ಇದು ಮೊದಲಾದ ಶ್ರುತಿಗಳಿಗನುಸರಿಸಿ ಪರಶಿವನು ವಿಷ್ಣುವಿನ ಕೇಶಗಳನ್ನು ಯಜ್ಞೋಪವೀತವನ್ನಾಗಿಯೂ ಕಂಕಾಳವನ್ನು ದಂಡವನ್ನಾಗಿಯೂ ನೃಶಿಂಹ ಚರ್ಮವನ್ನು ಅಂಬರವನ್ನಾಗಿಯೂ ಬ್ರಹ್ಮಶಿರಚ್ಛೇದನಂಗೈದು ಆ ತಲೆ ಓಡನ್ನು ಭಿಕ್ಷಾಪಾತ್ರೆಯನ್ನಾಗಿಯೂ ಧರಿಸಿರುವದರಿಂದ ಮೌಂಜೀಬಂಧನ ಕಾಲದಲ್ಲಿ ಅಳವಡಿಸತಕ್ಕ ಯಜ್ಞೋಪವೀತ, ಪಾಲಾಶದಂಡ, ಕೃಷ್ಣಾಜಿನ, ಭಿಕ್ಷಾಪಾತ್ರೆ ಮುಂತಾದವುಗಳು ಕೇವಲ ಶಿವಚಿನ್ಹಗಳೇ ಆಗಿವೆ. ಮತ್ತೂ ಗಾಯಿತ್ರಿ ಮಂತ್ರಕ್ಕೂ ಕೂಡಾ ಶಿವನೇ ಅಧಿದೈವವು. ಇದೆಲ್ಲಾ ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಅಂದ ಬಳಿಕ ಶಿವನ ಭಕ್ತಿಗೂ ಮೌಂಜೀ ಕರ್ಮಕ್ಕೂ ಏನು ವಿರುದ್ಧ ಉಂಟು ?

ಬಸವೇಶ್ವರ: ಜನಕಾ! ಉಪವೀತವೆಂಬ ತಂತುವು ಮೋಕ್ಷದಾಯಕವಾದ ಯಜ್ಞೋಪವೀತವಲ್ಲಾ. ಯಜ್ಞೋಪವೀತ ವಾಚ್ಯವು ಪರಶಿವರೂಪಿಯಾದ ಲಿಂಗಮೂರ್ತಿಯೆಂದು ಬ್ರಹ್ಮೋಪನಿಷತ್ತು ಮೊದಲಾದ ಗ್ರಂಥಗಳಲ್ಲಿ ಘಂಟಾಘೋಷವಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ. ಪರಮೇಶ್ವರನು ವಿಷ್ಣು ಮುಂತಾದವರ ಪ್ರಾರ್ಥನೆ ಮೇರೆಗೆ ವಿಷ್ಣು ಕೇಶಕಂಕಾಳ ಚರ್ಮಗಳನ್ನು ಬ್ರಹ್ಮಕಪಾಲ ರುಂಡಮಾಲಿಗಳನ್ನು ಆ ಭಜಕರ ಉದ್ಧಾರಾರ್ಥವಾಗಿ ತನ್ನ ಘೋರ ತನುವಿನಲ್ಲಿ ಧಾರಣಮಾಡಿರುತ್ತಾನೆ. "ಯಾತೇರುದ್ರ ಶಿವಾತನುಘೋರಾ ಪಾಪಕಾಶನಿ" ಇತ್ಯಾದಿ ಶ್ರುತಿಗಳಿಂದ ಪರಶಿವನಿಗೆ ಘೋರತನು

ಅಘೋರತನು ವೆಂಬ ಎರಡು ನಾಮಗಳು ಇರುವವೆಂಬುವದು ಸಿದ್ಧವಾಗುತ್ತದೆ. ಆದ್ದರಿಂದ ವೀ ಮಾರ್ಗದೊಳು ಘೋರತನು ಸಮ್ಮಂಧವಲ್ಲ. ಮತ್ತು ಅಘೋರ ತನುವಿಗೆ ವಿರುದ್ಧವಾದ ಈ ಚಿನ್ಹಗಳು ಧರಿಸಲಿಕ್ಕೆ ಯೋಗ್ಯಗಳಲ್ಲಾ. ಶಿವದೀಕ್ಷಾಸಂಪನ್ನರಿಗೆ ಮಂಗಲಮಯವಾದ ಅಘೋರತನು ರೂಪವಾದ ಶಿವಲಿಂಗವು ತತ್ಸಮ್ಮಂಧವಾದ ಚಿನ್ಹಗಳು ಧರಿಸಲ್ಲಿಕ್ಕೆ ಯೋಗ್ಯವಾಗಿರುವವು. ತಂದೆಯೇ ಕರ್ಮಸೂಚಿಕವಾದ ತಂತುಮಯ ಯಜ್ಞೋಪವೀತವನ್ನು ಮೋಕ್ಷಪ್ರದವಾದ ಲಿಂಗರೂಪ ಯಜ್ಞೋಪವೀತವನ್ನು ಏಕತ್ರವಾಗಿ ಧರಿಸುವ ನಿನ್ನ ಮಿಶ್ರಮಾರ್ಗವನ್ನು ಆರ್ಯರಾದ ಶಿವಶರಣರು ಮತ್ತು ಶಾಸ್ತ್ರವು ಒಪ್ಪಲಿಲ್ಲವಾದ್ದರಿಂದ ಶಿವಾಚಾರ, ಶಾಸ್ತ್ರಾಚಾರ ವಿರುದ್ಧವಾದ ಈ ಕರ್ಮಬಂಧನವು ಶಿವದೀಕ್ಷೆಯಿಂದ ಪರಿಪೂತವಾದ ದೇಹಕ್ಕೆ ಸರಿಯುಲ್ಲಾ. "ನಹಿಕರ್ಮಣಿ ಕರ್ಮಾಂತರರಿಭಃ" ಹೀಗೆ ಪ್ರಮಾಣವಿರುವುದರಿಂದ ಕರ್ಮಾಂತರವನ್ನು ಸ್ವೀಕರಿಸುವದು ಅಯೋಗ್ಯವಾದದ್ದು. ಮತ್ತು ನೀನು ಹೇಳತಕ್ಕ ಕರ್ಮವು ಮೋಕ್ಷವನ್ನುಂಟುಮಾಡುವದಿಲ್ಲಾ. "ನಕುರ್ಯಾನಿಷ್ಫಲಂಕರ್ಮ" ಹೀಗೆ ನ್ಯಾಯವಿರುವದರಿಂದ ಮೌಂಜೀ ಬಂಧನರೂಪವಾದ ಪ್ರಾಕೃತ ಕರ್ಮಕ್ಕೆ ಅಪ್ರಾಕೃತವಾದ ನಾನು ಎಂದು ಒಪ್ಪುವುದಿಲ್ಲಾ

ಪದ–(ಚಾಲ–"ಬಳಜಾಚೆ ತ್ಯಾಸ")

ಸ್ಥಿರಮನದೀ ತಾತನೇ ಕೇಳೋ ನರೆಭೂಸುರೇಶನೆ
ಪರಶಿವ ತನಗೆ ಗುರುವಾಗಿರೆ ಮುರ । ಹರಗಭಿನ್ಮುಖ
ಸುರಾಳಿಯಂ ಪರಿಗಣಿಪನ್ನೈ ॥ ೧ ॥

ಇಂಥಾ ಶಿವಾಂಶದಿಂದ ಹುಟ್ಟಿದ ಬ್ರಾಹ್ಮಣನು ಶ್ರೇಷ್ಠವಾದ ರುದ್ರಾಕ್ಷಿಗಳಿಂದಲಂಕೃತವಾದ ತನ್ನ ಕಂಠದಲ್ಲಿ ತಂತುಮಯವಾದ ಉಪವೀತವನ್ನು ಧರಿಸಲು ಅಪೇಕ್ಷಿಸುವನೇ? ಸಕಲ ಮಂತ್ರಕ್ಕೂ ಶಿರೋಮಣಿಯಾದ ಪಂಚಾಕ್ಷರಿ ಮಂತ್ರವನ್ನು ಜಪಿಸುವ ಈ ಜಿಹ್ವೆಯಿಂದ ಇತರ ಮಂತ್ರವನ್ನು ಜಪಿಸುವನೇ? ತಸ್ಮಾತ, ನನಗೆ ಉಪದೇಶ ಮಾಡುವ ಈ ನಿನ್ನ ಎಲ್ಲಾ ವಾಕ್ಯಗಳು ಹೋತಿನ ಕೊರಳಲ್ಲಿರುವ ಮೊಲೆಗಳಂತೆ ನಿಷ್ಫಲವೇ ಆಗಿರುವವು.

ಮಾದರಸ:

ಪದ–(ಚಾಲ–"ಅರ್ಪಿತಿ ಸುಮನ ಹೆ")

ತುಷ್ಟಿಯಿಂದ ಸುಗಣಾ ವೇಷ್ಟಿತ ಬಾಲನೆ ಕೇಳೈ ।
ಘನಶಿಷ್ಟಾಚಾರವ ಬಿಡುವ । ದ್ಯೋಗ್ಯವೆ ಪೇಳು
ಯೋಚಿಸಿನ್ನು ಚಿತ್ತದೀಗಳೆ ॥ ಪ ॥
ಜನಕನಿಗ್ಯಾವನು ಘನಸಂ । ಮುದವನು ವಿನಯ ಗುಣದಿ
ತಾನು ಪೊಂದಿಸುವನು ತನಯನವನು । ಹೇಧಿಯುತಾ ।
ಧಿಕಸಾರ ಗುಣ ಮಣಿಗಣಸದನಾ ॥ ೧ ॥

ಸಜ್ಜನಾಲ್ಹಾದಕಾ ಯಜಮಾನದಿಂದ ಆಚರಿಸಲ್ಪಟ್ಟ ಆಚರಣೆಗೆ ದೂರನಾಗಿರುವದು ಜಾಣತನವಲ್ಲಾ.

ಬಸವೇಶ್ವರ: ತಂದಿಯೇ ! ನಾನು ಯಜಮಾನರ ಆಚರಣೆಗೆ ಸರಿಯಾಗಿ ಅನುಸರಿಸಿ ನಡೆಯದೆ ಇರತಕ್ಕವನಲ್ಲಾ.

ಮಾದರಸ: ಪುತ್ರಾ ! ಅಂದಬಳಿಕ ನೀನು ಹೀಗ್ಯಾಕೆ ಮಾತನಾಡಿದಿ?

ಬಸವೇಶ್ವರ: ತಂದೆ ! ಕಾಗಿಯಿಂದ ಸಲಹಲ್ಪಟ್ಟ ಕೋಗಿಲೆಯು ತನ್ನ ಸುಸ್ವರವನ್ನೆತ್ತಿ ಕೂಗುವದಲ್ಲದೆ ಕಾಗಿಯಂತೆ ಕಾ ! ಕಾ ! ಎಂದು ಒದರುವದೇ? ಎಲೋ ! ತಲೆಕೂದಲು ಬಿಳುಪಾಗಿ ಮೈದೊಗಲು ಸುಕ್ಕಗಟ್ಟಿದರೂ ತಿಳಿಗೇಡಿಗಳಾದವರು ಹಿರಿಯರೇ? ಅವರ ಆಚರಣೆಯನ್ನು ನಾನು ಅನುಸರಿಸುವೆನೇ ? ಶಿವಭಕ್ತಸಂಪನ್ನರೂ ಶಿವಜ್ಞಾನಿಗಳೂ ಆದ ವೀರಶೈವ ಮತಸ್ಥರೇ ನನಗೆ ಹಿರಿಯರು. ಅವ . ಮಾರ್ಗವಲಂಬನವೇ ನನಗೆ ಯೋಗ್ಯವು.

ಮಾದರಸ: ಬಾಲಕಾ ! ಈ ಪ್ರಕಾರವಾಗಿ ಮಾತನಾಡುವದು ನಿನಗೆ ಧರ್ಮವಲ್ಲಾ. ವಿಚಾರಮಾಡಿ ನೋಡು. ನೀನು ಉಪನಯನವನ್ನು ಧಿಕ್ಕರಿಸಿದ ಮಾತನ್ನು ಕೇಳಿ ನಮ್ಮ ದ್ವಿಜರು ನಿನ್ನನ್ನು ನಿಂದಿಸುವದಲ್ಲದೆ ನನ್ನನ್ನು ಸಹಾ ತಮ್ಮ ಜಾತಿಯಿಂದ ದೂರವಾಡ್ಯಾರು. ಆದ್ದರಿಂದ ಈ ಪ್ರಕಾರ ಹೀಯಾಳಿಸಬೇಡಾ.

ಬಸವೇಶ್ವರ: ತಂದಿಯೇ ನಾನಾ ದೇವತೆಗಳನ್ನು ಸೇವಿಸಿ ಮೋಕ್ಷಪದವಿಗೆ ದೂರಾಗಿ ಪುನಃ ಭವಸಾಗರದಲ್ಲಿ ಬಿದ್ದು ದುಃಖಪಡುವ ಈ ನಿಮ್ಮವರು ತಮ್ಮ ಜಾತಿಯಿಂದ ದೂರಮಾಡಿದರೆ ನಿಮ್ಮ ಪುಣ್ಯಕ್ಕೆ ಒರೆಯೇ ಇಲ್ಲಾ.

ನೀನು ಬುದ್ಧಿಶಾಲಿಯಾದ ಪಕ್ಷದಲ್ಲಿ ಶ್ರೀಮತ್ಪರಮೇಶ್ವರನ ಪಾದವನ್ನು ನಂಬಿ ಪೂಜಿಸಿದರೆ ಜನನಮರಣ ದುಃಖರಹಿತನಾದ ಆ ಪರಮಾತ್ಮನು ನಿನಗೆ ಮೋಕ್ಷ ಪದವಿಯನ್ನು ಕೊಡುವನು. ವಿಚಾರಮಾಡಿ ನೋಡು. ತಮ್ಮ ಜನನಮರಣವನ್ನೇ ಕಳಕೊಳ್ಳದ ದೇವತೆಗಳು ಇತರರಿಗೆ ಮೃತ್ಯುಂಜಯನಂತೆ ಮೋಕ್ಷ ಪದವಿಯನ್ನು ಕೊಡಲು ಸಮರ್ಥರಾದರೆ? ಬೇಕಾದರೆ ಈ ವಿಷಯವನ್ನು ಅಥರ್ವಣ ಶಿಖೆಯಲ್ಲಿ ನೋಡು. ತಸ್ಮಾತ ಮುಕ್ತಿದಾಯಕನಾದ ಆ ಪರಮಾತ್ಮನಲ್ಲಿಯೇ ಭಕ್ತಿಯನ್ನು ವಹಿಸು. ನೋಡು, ಬಹು ಕೋಟಿ ಜನ್ಮಗಳಿಂದ ಗಳಿಸಿದ ಪುಣ್ಯರಾಸಿಯು ಫಲಿಸಿದವನಿಗೆ ಮಾತ್ರ ಈಶ ಭಕ್ತಿಯೆಂಬ ನಾರೀಮಣಿಯು ದೊರೆಯುವಳಲ್ಲದೆ ಉಳಿದವರಿಗೆ ದೊರಿಯಲಾರಳು.

ಪದ–(ಚಾಲ–"ಸುಜನಕಾಹಿ ನಾಹಿ")

ಪರಮತೋಷದಿಂದ ತಾತವರನೆ ಭೂಮಿಸುರನೆ
ಲಾಲಿಸೈ । ದಯಾ ನಯಾ ಭಯಾದಿವಾಸನೆ ॥ ಪ ॥
ಹತದಿತಿ । ಸುತಶತ । ಕ್ರತುವಿರಂಚಿಯತಿಪತಿ । ನತಚರಣಾ ।
ಶ್ರಿತಶರಣಾ । ಹತಮರಣಾ ।
ವ್ರತಕರುಣಾ । ಶ್ರಿತಗಳನೇ ನನಗೇಪಿತಂ ॥ ೧ ॥

ಇದಲ್ಲದೆ, ಶಿವಲಾಂಛನಧಾರಿಗಳೇ ನನ್ನಿಂದ ಸೇವೆಯನ್ನು ಮಾಡಿಸಿಕೊಳ್ಳುವ ಪ್ರಭುಗಳು ಶಿವಪಾದ ಸೇವೆಯೇ ಅನನ್ಯಧಾರಣವಾದ ಭಾಗ್ಯವು ಶ್ರೀಶಂಕರನ ಪಾದಭಕ್ತಿಯೇ ನನಗೆ ಮುಕ್ತಿಸಂಪತ್ತು. ಆದ್ದರಿಂದ ನೀನು ಎಷ್ಟು ಹೇಳಿದಾಗ್ಯೂ ನಿನ್ನ ಮಾತಿಗೆ ಒಡಂಬಡುವದು ಅಯೋಗ್ಯವು.

ಮಾದರಸ: ಅಹಾ! ಈ ಬಸವೇಶ್ವರನೆಂಬ ಮತ್ಪುತ್ರನಿಗೆ ಎಣಿಯಿಲ್ಲದ ಈ ಶಿವಭಕ್ತಿ ಎಂಬ ಸಂಪತ್ತೇ ದೊರೆತಿರುವದು. ಅಂದ ಬಳಿಕ ಹೇಳುವದೇನದೆ ? ಇಲ್ಲಿಯವರಿಗೂ ಈತನಿಂದ ಉಪದೇಶಿಸಲ್ಪಟ್ಟ ವಾಕ್ಯಗಳೆಂಬ ಬೆಳದಿಂಗಳಿಂದ ನನ್ನ ಅಜ್ಞಾನವೆಂಬ ಅಂಧಃಕಾರವೇ ಹರಿದು ಹೋಗಿ, ಮನಸ್ಸೆಂಬನೈದಿಲೆಯು ವಿಕಾಸವನ್ನು ಹೊಂದಿ, ಸೌಮ್ಯ ಜ್ಞಾನವೆಂಬ ಮಕರಂದವನ್ನು ಹೊರಪಡಿಸುತ್ತಿರುವದು. ನೋಡಿದಿರ್ರ್ಯಾ, ಭಟ್ಟರೇ ! ಈ ಬಾಲಕನ ಚಾತುರ್ಯವನ್ನು. ಇವನಾಡಿದ ಎಲ್ಲಾ ಮಾತುಗಳು ನಮ್ಮ ನಿಮ್ಮಗಳಿಗೆ ಹಿತೋಪದೇಶಗಳೇ ಹೊರ್ತು, ಬೇರೆ ಅಲ್ಲಾ.

೧ನೇ ಭಟ್ಟ: ಹೌದು, ಮಹಾರಾಜ ! ಇದು ಸತ್ಯವದೆ. ನಿಮ್ಮ ಪುಣ್ಯಾತಿಶ ಯದಿಂದ ನಿಮಗೆ ಇಂಥಾ ಮಗನು ಜನಿಸಿರುವನು. (ಎಂದು ಮುಂದಕ್ಕೆ ಬಂದು) ಇವನು ಇಲ್ಲಿಯವರೆಗೂ ನಮ್ಮನ್ನು ನೋಡಿಲ್ಲಾ. ಅಂದಬಳಿಕ ಇದೊಂದು ಜಗತ್ಪಾಲಕನ ಕೃಪೆಯೇ ಸರಿ. ಒಂದು ಪಕ್ಷಕ್ಕೆ ನೋಡಿದ್ದರೆ ನಮ್ಮ ಸಮಾರಾಧನೆಯು ನೆಟ್ಟಗಾಗುತ್ತಿತ್ತು.

೨ನೇ ಭಟ್ಟ: ಭಟ್ಟರೇ ! ನಾವು ಈ ಗೃಹವನ್ನು ಪ್ರವೇಶಮಾಡುವಾಗ್ಗೆ ಶುಭಲಗ್ನವಿತ್ತು.

೧ನೇ ಭಟ್ಟ: ಅಂದಲ್ಲೇ ಮಹಾರಾಜನಿಗೆ ಶುಭ ತಿಥಿಯನ್ನು ತೆಗೆದು ಕೊಟ್ಟು ಎಂಥಾ ಸಂಭಾವನೆಯನ್ನು ಪಡೆದೊಯ್ಯುತ್ತೇವೆ, ನೋಡಿರಿ !

೨ನೇ ಭಟ್ಟ: ಭಟ್ಟರೇ ! ನಿಮಗೆ ಹುಚ್ಚು ಹಿಡಿದಂತೆ ಕಾಣುತ್ತದೆ, ಯಾಕೆಂದರೆ, ಈ ಬಾಲಕರು ನಮ್ಮನ್ನು ನೋಡಿ ನಮ್ಮಮೇಲೆ ವಾಗ್ಜಾಲವನ್ನು ಹಾಕಿದ್ದರೆ ನಮಗೆ ತಪ್ಪಿಸಿಕೊಳ್ಳುವ ಶಕ್ತಿ ಇತ್ತೇ? ಅವನು ನಮ್ಮ ಕಡಿಗೆ ಲಕ್ಷಗೊಡಲಿಲ್ಲ. ಇದೊಂದು ದೊಡ್ಡ ಸಂಭಾವನೆಯೆಂದು ತಿಳಿಕೊಂಡು ಸುಮ್ಮನೆ ನಮ್ಮ ನಮ್ಮ ಮನೆಗಳಿಗೆ ಹೋಗುವಾ. ಮಹಾರಾಜಾ ! ಇನ್ನು ಮೇಲೆ ನಮಗೆ ಅಪ್ಪಣೆ ಕೊಡು. ನಾವು ಹೋಗುತ್ತೇವೆ.

ಮಾದರಸ: ಒಳ್ಳೇದು, ಹೋಗಬಹುದು. ಪುತ್ರಾ ! ಇನ್ನುಮೇಲೆ ವೇಳೆಯಾಯಿತು, ಹೋಗೋಣನಡೆರಿ (ಎಂದು ಹೋಗುವರು.)

===

೪ನೇ ಪ್ರವೇಶ

(ಸ್ಥಳ–ಬೀದಿ, ವಾಮದೇವಭಟ್ಟ, ಮಹಾದೇವಭಟ್ಟರು)

ವಾಮದೇವ: ಓಹೋ! ಮಹಾದೇವ ಭಟ್ಟರೆ, ನಮಸ್ಕಾರ! ನಮಸ್ಕಾರ !!

ಮಹಾದೇವ: ಓಹೋ ! ಭಟ್ಟರೆ, ನಮಸ್ಕಾರ ! ನಮಸ್ಕಾರ ! ! ತಮ್ಮ ಗಮನವೆತ್ತ?

ವಾಮದೇವ: ಎಲ್ಲಿಯು ಇಲ್ಲಾ, ತಮ್ಮ ಭೆಟ್ಟಿಯಾಗಬೇಕೆಂದು ತಮ್ಮ ಗೃಹದ ಕಡೆಗೆ ಬರುತ್ತಿದ್ದೆ; ಅಕಸ್ಮಾತ ಮಾರ್ಗದಲ್ಲಿ ಭೆಟ್ಟಿಯಾಯಿತು. ಇದು ಯೋಗ್ಯವೇ ಆಯಿತು.

ಮಹಾದೇವ: ಅಹಾ! ಬಹಳ ನೆಟ್ಟಗಾಯಿತು, ನೆಟ್ಟಗಾಯಿತು; ಕಾರ್ಯವೇನಿತ್ತು?

ವಾಮದೇವ: ಏನೂ ಇಲ್ಲಾ. ಈ ರಾಜ್ಯಕ್ಕೆ ಅಧಿಪತಿಯಾದ ಬಿಜ್ಜಳ ಮಹರಾಜನ ಸರ್ವರಾಜ್ಯಭಾರವನ್ನು ವಹಿಸಿಕೊಂಡು ನಡಿಸುವ ಬಲದೇವ ಮಂತ್ರಿಯು ಸುಮಾರು ಹದಿನೈದು ದಿವಸಗಳ ಹಿಂದೆ ಮೃತವಾದನು. ಇದು ತಮಗೆ ಗೊತ್ತಿರಬಹುದು.

ಮಹಾದೇವ: ಏನು? ವಾಮದೇವ ಭಟ್ಟರೆ! ಬಲದೇವ ಮಂತ್ರಿಗಳು ಮರಣ ಹೊಂದಿದರೆ ? ಅಯ್ಯೋ ! ಹರಹರಾ ! ! ಇದು ನನಗೆ ಗೊತ್ತೇ ಇಲ್ಲಾ. ಯಾಕಂದರೆ, ಈ ತಿಂಗಳಲ್ಲಿ ನಾನು ಸಂಗಮೇಶ್ವರನಲ್ಲಿಯೇ ಇದ್ದೆನು. ಅಯ್ಯೋ ಎಂಥಾ ಗುಣಶೀಲನು ! ಸ್ವಲ್ಪ ದಿವಸಗಳ ಹಿಂದೆ ತನ್ನ ಮಗಳಾದ ಗಂಗಾಂಬಿಕೆಯನ್ನು ತನ್ನ ಅಕ್ಕನ ಮಗನಾದ ಬಸವೇಶ್ವರನಿಗೆ ಕೊಟ್ಟು ಅತಿ ಸಂಭ್ರಮದಿಂದ ಲಗ್ನ ಮಾಡಿದನು.

ವಾಮದೇವ: ಹೌದು ನೋಡ್ರಿ, ಅವರು ಬಸವೇಶ್ವರನ ಲಗ್ನ ಸಮಾರಂಭದ ವೃತ್ತಾಂತವನ್ನು ಪರಮೇಶ್ವರನಿಗೆ ಹೇಳುವ ಉದ್ದಿಶ್ಯ ಹೋದರೋ ಅನ್ನುವಂತೆ ಲಗ್ನವಾದ ಹದಿನೈದು ದಿವಸಗಳಲ್ಲಿಯೇ ಮರಣ ಹೊಂದಿದರು. ಉಪಾಯವಿಲ್ಲಾ.

ಮಹಾದೇವ: ಒಳ್ಳೇದು, ! ದೇವರು ತಂದದ್ದಕ್ಕೆ ಮಾಡುವದೇನು ಒಳ್ಳೇದು! ನಿಮ್ಮ ಕಾರ್ಯವೇನಿರುವುದು ?

ವಾಮದೇವ: ಮತ್ತೇನಿರುವುದು ! ಮಂತ್ರಿಗಳು ಮೃತರಾದ ಕಾರಣ ಮಹಾರಾಜರು ರಾಜ್ಯಭಾರವನ್ನು ವಹಿಸತಕ್ಕವರು ಯಾರೂ ಇಲ್ಲವೆಂದು ಬಹಳ ವ್ಯಸನದಲ್ಲಿರುವರು. ಅದೇ ವಾರ್ತೆಯನ್ನು ತಿಳಿಸಬೇಕೆಂದು ತಮ್ಮಕಡೆಗೆ ಬರುತ್ತಿದ್ದೆನು. ಮತ್ತೇನು ಇಲ್ಲಾ.

ಮಹಾದೇವಾ: ಹಾ! ಇದಕ್ಯಾಕೆ ವ್ಯಸನವು? ಬಲದೇವ ಮಂತ್ರಿಯ ಅಳಿಯನಾದ ಬಸವೇಶ್ವರನು ಮಹಾ ಬುದ್ಧಿಶಾಲಿಯಾಗಿ ಸರ್ವ ಕಾರ್ಯ ಧುರೀಣನಾಗಿ ಜಗತ್ ಪ್ರಸಿದ್ಧನಾಗಿರುವನು. ಆತನು ಮಂತ್ರಿಯಾದರಂತೂ ಈ ರಾಜ್ಯದ ಪುಣ್ಯಕ್ಕೆ ಬೆಲೆಯೇ ಇಲ್ಲಾ.

ವಾಮದೇವ: ಹಾ ! ಹೀಗಿದ್ದ ಪಕ್ಷದಲ್ಲಿ ಬಹಳೇ ನೆಟ್ಟಗಾಯಿತಲ್ಲಾ. ಯಾಕೆಂದರೆ, ಬಲದೇವನು ಮಹರಾಜರ ಪ್ರೀತಿಯ ಪ್ರಧಾನನು. ಈ ಬಸವೇಶ್ವರ ನಾದರೂ ಬಲದೇವನಿಗೆ ಅಳಿಯನಾಗಿರವನು. ಅಂದ ಬಳಿಕ ಮಹರಾಜನ ಮನಸ್ಸಿಗಾದರೂ ಇದು ಬರಬಹುದು. ಒಳ್ಳೇದು, ಆತನೆಲ್ಲಿರುವನು?

ಮಹಾದೇವ: ಆತನು ಈಗ ಹತ್ತುದಿವಸಗಳ ಹಿಂದೆ ಸಂಗಮೇಶ್ವರಕ್ಕೆ ಬಂದನು. ಅಹಾ! ವಾಮದೇವ ಭಟ್ಟರೆ, ಅವನ ಮಹಿಮಾಧಿಕ್ಯವನ್ನು ಎಷ್ಟೆಂದು ವರ್ಣಿಸಲಿ ? ನೆನಪಾದರೆ ರೋಮಾಂಚನವಾಗುತ್ತದೆ.

ವಾಮದೇವ: ಹೋ! ಅದೇನು ?

ಮಹಾದೇವ: ಅದೇನೆಂದರೆ, ಆ ಬಸವೇಶ್ವರನು ಬಾಗವಾಡಿಯಿಂದ ಸಂಗಮೇಶ್ವರಕ್ಕೆಂದು ಬರಲು, ಸಂಗಮೇಶ್ವರನ ಸಮೀಪದಲ್ಲಿರುವ ಕೃಷ್ಣಾ ನದಿಯು ತುಂಬಿ ಹರಿಯುತ್ತಿತ್ತು. ಆ ಕಾಲಕ್ಕೆ ಪತ್ನಿಯೊಡನೆ ಬಂದ ಬಸವೇಶ್ವರನು ಆ ನದಿಯದಂಡೆಗೆ ಬಂದು ಸ್ಥಿರಮನಸ್ಸಿನಿಂದ ಸಂಗಮೇಶ್ವರನ ಸ್ತೋತ್ರಮಾಡಲು ಕೃಷ್ಣಾ ನದಿಯು ಆಗಿಂದಾಗ್ಗೆ ವಿಭಾಗವಾಗಿ ಮಾರ್ಗಕೊಟ್ಟಿತು. ಅಹಹ ! ನೋಡಿರಿ, ಅವನೆಂಥಾ ಭಕ್ತಿವಂತನು !! ಇಷ್ಟೇಂತಲ್ಲಾ ದೇವಾಲಯವನ್ನು ಪ್ರವೇಶಮಾಡಿದ ಮಾತ್ರದಿಂದಲೇ ಶ್ರೀ ಸಂಗಮೇಶ್ವರನು ಎಲ್ಲರೂ ನೋಡುವಂತೆ ಯತಿ ರೂಪದಿಂದ ಬಂದು ಲೋಕದಲ್ಲಿ ತಂದೆಯು ಮಗನನ್ನು ಮುದ್ದಾಡುವಂತೆ ಮುದ್ದಾಡಿ ಆ ಬಸವೇಶ್ವರನಿಗೆ ಬಹು ರೀತಿಯಿಂದಾ ಉಪದೇಶ ಮಾಡಿದನು. ಆಗ ಬಸವೇಶ್ವರನು ಉಪದೇಶವನ್ನು ಕೈಕೊಂಡು ಭಕ್ತಿಪೂರ್ವಕವಾಗಿ ಆ ಪರಮೇಶ್ವರನ ಸ್ತೋತ್ರಮಾಡುತ್ತಿರಲು ಯತಿರೂಪದಿಂದ ಬಂದ ಸಂಗಮೇಶ್ವರನು ಗರ್ಭಗುಡಿಯನ್ನು ಹೊಕ್ಕನು. ಶಿವಭಕ್ತರು ಗಡಬಡಿಯಿಂದ ಗರ್ಭಗುಡಿಯನ್ನು ಹೊಕ್ಕು ನೋಡಲು, ಮಾಯವಾಗಿದ್ದನು. ಇದನ್ನು ನೋಡಿ ಸರ್ವರೂ ಆಶ್ಚರ್ಯಪಟ್ಟು ಬಸವೇಶನ ಭಕ್ತಿಯನ್ನು ಕೊಂಡಾಡಿದರು.

ವಾಮದೇವ: ಮಹಾದೇವ ಭಟ್ಟರೆ ! ನೀವು ಹೇಳಿದ ಬಸವೇಶ್ವರನ ವೃತ್ತಾಂತವನ್ನು ಕೇಳಿ ಮನಸ್ಸಿನಲ್ಲಿ ಬಹಳೇ ಆನಂದವಾಯಿತು. ಇಂಥ ಮಹಿಮಾಶಾಲಿಯು ನಮ್ಮ ರಾಜನಿಗೆ ಮಂತ್ರಿಯಾದರೆ ಮಹರಾಜನ ಪುಣ್ಯವು ವಿಶೇಷವದೆಂದು ತಿಳಿಯಬೇಕು. ಒಳ್ಳೇದು, ಜಾಗ್ರತೆಯಾಗಿ ಮಹಾರಾಜನಿಗೆ ಇದನ್ನು ತಿಳಿಸಿ ಆ ಚತುರನನ್ನು ಇಲ್ಲಿಗೆ ಬರಮಾಡುವ ಯತ್ನವನ್ನು ಮಾಡೋಣ?

ಮಹಾದೇವ: ಹಾಗಾದರೆ, ಹೋಗೋಣ ನಡೆಯರಿ.

===

೫ನೇ ಪ್ರವೇಶ

(ಬಿಜ್ಜಳನು ಮಂದಿರದಲ್ಲಿ ಒಬ್ಬನೆ ಕುಳಿತಿರುತ್ತಾನೆ.)

ಬಿಜ್ಜಳ: ಅಹಾ ! ಸುಗುಣಶೀಲನಾಗಿ ನನಗೆ ಬಲಭುಜದಂತಿದ್ದ ಬಲದೇವನು ಮೃತನಾದನು. ಅಹಾ ! ಅವನೆಂಥಾ ಸ್ವಾಮಿ ಭಕ್ತಿಯುಳ್ಳವನಿದ್ದನು!! ನೆನಿಸಿದರೆ ಬಹಳ ಖೇದವಾಗುತ್ತದೆ. ಅಯ್ಯೋ! ಇನ್ನು ಮೇಲೆ ಅವನಂತೆ ನನ್ನ ರಾಜ್ಯವನ್ನು ತೊಂದರೆ ಬಾರದಂತೆ ನೋಡಿಕೊಂಡು ಹೋಗತಕ್ಕ ಶಕ್ತರು ಯಾರಿರುವರು? (ಅಷ್ಟರಲ್ಲಿ ವಾಮದೇವ ಮಹಾದೇವ ಭಟ್ಟರು ಪ್ರವೇಶಿಸುತ್ತಾರೆ)

ವಾಮದೇವ: ಮಹರಾಜಾ ! ತಾವು ಯಾವ ಕಾರ್ಯದ ನಿಮಿತ್ತ ವ್ಯಸನವುಳ್ಳವರಾಗಿದ್ದೀರೋ ಆ ಕಾರ್ಯವು ತಮ್ಮ ವ್ಯಸನವನ್ನು ದೂರಮಾಡಲು ಸ್ವಲ್ಪ ದಿವಸಗಳಲ್ಲಿ ಕೈಗೂಡುವದು.

ವಾಮದೇವ: ಮಹಾದೇವ ಭಟ್ಟರನ್ನು ವಿಚಾರ ಮಾಡಿದರೆ ತಾನೇ ತಿಳಿಯುವುದು.

ಬಿಜ್ಜಳ: ಮಹಾದೇವ ಭಟ್ಟರೆ! ಅದೇನು ಸಂಗತಿಯು

ಬಿಜ್ಜಳ: ಅದು ಹ್ಯಾಗೆ ?

ವಾಮದೇವ: ರಾಜೇಂದ್ರಾ ! ತಮ್ಮ ಮಂತ್ರಿತನಕ್ಕೆ ಶೋಭಿಸುವ ಒಬ್ಬ ಮಹಾ ಪುರುಷನಿರುವನು.

ಬಿಜ್ಜಳ: ಅವನ್ಯಾರು ?

ಮಹಾದೇವ: ತಮ್ಮ ಪ್ರೀತಿಗೆ ಪಾತ್ರನಾದ ಬಲದೇವ ಮಂತ್ರಿಯ ಅಳಿಯನೇ ಅವನು.

ಬಿಜ್ಜಳ: ಓಹೋ ! ಬಲದೇವ ಮಂತ್ರಿಯ ಅಕ್ಕನ ಮಗನಾದ ಬಸವೇಶ್ವರನೇನು ?

ಮಹಾದೇವ: ಹೌದು. ಮಹರಾಜಾ ! ಅವನೇ.

ಬಿಜ್ಜಳ: ಹಾಗಾದರೆ, ಅವನು ಬಹಳ ಮಹಿಮಾಶಾಲಿಯು. ಅದು ಹ್ಯಾಗಂದರೆ, ಮೊನ್ನೆ ಸಂಗಮೇಶ್ವರಕ್ಕೆಂದು ಬಾಗವಾಡಿಯಿಂದ ಬಂದು–

ಪದ–(ರಾಗ–ವಸಂತ, ತ್ರಿತಾಳ)

ಭಕ್ತಿಯಿಂದ ತಾಂ ಸೂಕ್ತಿಗಳಿಂ । ಕೀರ್ತನಂಗೈದನು ॥ ಪ ॥
ಆಗಯೋಗಿವೇಷಿಯಾಗಿ ಬಂದನು । ನಾಗಕಂಕಣಂ ಬೇಗನೆ ॥ ೧ ॥
ಬಳಿಕ ಬಸವನಂ । ಪುಳುಕಿತನಾಗೆ । ಘಳಿಲನೆಯಪ್ಪುತೆ ।
ಗಳಿತಮಲನು ॥ ೨ ॥
ನೆರೆಮೇ । ಙುರುತರ । ಸ್ಮರಹರ । ಸಮಯದ ।
ಪರಿಯನು । ಭರದಿಂದ ದೊರೆದನೀಶ ॥ ೩ ॥

ಇದಲ್ಲದೆ ರಾಜನೀತಿಯಲ್ಲಿ ದಕ್ಷನಾಗಿಯೂ ಶಿವಾನುಗ್ರಹಕ್ಕೆ ಪಾತ್ರನಾಗಿರುವುದರಿಂದ ಈತನೇ ಮಂತ್ರಿತನಕ್ಕೆ ಯೋಗ್ಯನೆಂದು ಬಲದೇವ ಮಂತ್ರಿಯು ತನ್ನ ಮರಣದಕಾಲಕ್ಕೆ ನನಗೆ ಸೂಚಿಸಿದ್ದನು. ಆದ್ದರಿಂದ ಕೆಲವು ಮಂತ್ರಿಗಳೊಡನೆ ನೀವು ಹೋಗಿ ಬಹು ಪ್ರಯತ್ನದಿಂದ ಆತನನ್ನು ಇಲ್ಲಿಗೆ ಕರೆದುಕೊಂಡು ಬನ್ನಿರಿ. ಈ ಕೆಲಸವನ್ನು ಸಾಧಿಸಿಕೊಟ್ಟರೆ ನಿಮ್ಮಿಬ್ಬರಿಗೆ ಯೋಗ್ಯ ಸಂಭಾವನೆ ದೊರಿಯುವುದು.

ಮಹಾದೇವ: ಒಳ್ಳೇದು, ಮಹಾರಾಜಾ ! ಅಪ್ಪಣೆಯನ್ನು ಕೊಡಬೇಕು. ಹೋಗಿ ಪ್ರಯತ್ನವನ್ನಂತೂ ಮಾಡುತ್ತೇವೆ. (ಎಂದು ಹೊಗುವರು.)

===

೬ನೇ ಪ್ರವೇಶ

ಬಸವೇಶ್ವರ:

ಸಾಕಿ

ಶಂಕರಪದವ ಕಳಂಕ ಚಿತ್ತದೋಳ್ । ಭೋಂಕನೆಧ್ಯಾನಿಸುಮನುಜ ।
ಶಂಕಿಸದೀ ಭವ ಶೃಂಖಲೆಯನುಭವ । ದಿಂಕರಮುರುಮುಕ್ತಿ ।
ಪಂಕಜದಳನಯನೆ । ಮೋದದಿ ತಾಂ
ಕರಪಿಡಿಯುವಳ್ಳೆ ॥ ೧ ॥

ಅಹಾ ! ಈ ಪಟ್ಟಣವು ರಮಣೀಯವಾದ ಮಂದಿರಗಳಿಂದ ಇಂದ್ರನ ಪಟ್ಟಣವನ್ನು ಸಹ ಧಿಕ್ಕಾರಮಾಡುವದು. (ಮಹಾದೇವ ಭಟ್ಟನ ಕಡೆಗೆ ನೋಡಿ) ಇದೇನು ಕಲ್ಯಾಣ ಪಟ್ಟಣವೋ?

ಮಹಾದೇವ: ಹೌದು. ಮಹನಿಯಾ ಇದೇ. ಅಗೋ ನೋಡಿರಿ, ಬಿಜ್ಜಳ ಭೂಪತಿಯ

ಮೇಲ್ಮಂದಿರವು ಎಷ್ಟು ರಮಣೀಯವಾಗಿ ತೋರುವುದು. (ಎಂದು ಹುಬ್ಬಿನಮೇಲೆ ಕೈಯಿಟ್ಟು ಮುಂದೆ ನೋಡಿ) ಓಹೋ ! ಮಹದೇವ ಭಟ್ಟನು ಮುಂದೆ ಹೋಗಿ ನಿಮ್ಮ ಆಗಮನವನ್ನು ಸೂಚಿಸಿದ ಕಾರಣ ಮಹರಾಜರು ಅತಿ ಸಂಭ್ರಮದಿಂದ ನಿಮ್ಮೆದುರಿಗೆ ಬರುತ್ತಿರುವರು. (ಬಿಜ್ಜಳನು ಬರುತ್ತಾನೆ.)

ಬಿಜ್ಜಳ: (ಬಸವೇಶ್ವರನನ್ನು ನೋಡಿ)

ಪದ–(ಚಾಲ– 'ಮಮ ಚಿತ್ತಸರೋಜನಿ')

ಮಲಚಿತ್ತಜ ನಾಶಕನಿವನೊ । ಖಲಕಾನನಾಸುಗಸಖನೊ ॥ ಪ ॥
ಭಾವಿಸೆ ನಿಖಿಲಜನಾವಳಿಯನುಃಕರುಣಾವಲೋಕದಿಂದೆ
ಪಾವನ ಗೈಯುವ । ದೇವನಿವನೋ ವಿಚಾರಿ । ಸೇವರಶ ರಜನೋ
ಶೇವ್ಯರಶೀವನು ತಾನು ॥ ೧ ॥

ಮಹಿಮೆಗೆ ಸ್ಥಾನೀಭೂತನಾದ ಬಸವೇಶ್ವರನೇ ! ನಿನಗೆ ಮಂಗಲವೇ ?

ಬಸವೇಶ್ವರ: ಮಹಾರಾಜಾ ! ಮಂಗಲಮೂರ್ತಿಯಾದ ಪರಮೇಶ್ವರನ ಕರುಣವೆಂಬ ಅಮೃತದಿಂದ ಸದಾ ತೃಪ್ತಿಯನ್ನು ಹೊಂದುವವನಿಗೆ ಯಾವಾಗ್ಯೂ ಮಂಗಲವೇ ಸರಿ.

ಬಿಜ್ಜಳ: ಹೌದು, ಹೌದು ! ಶಿವಭಕ್ತ ಶಿರೋಮಣಿ ! ! ಇದರಲ್ಲೇನು ಸಂದೇಹವಿಲ್ಲಾ. (ತನ್ನೊಳಗೆ) ಅಹಾ ! ಈತನ ಚಾತುರ್ಯಕ್ಕೆ ಎದುರೇ ಇಲ್ಲಾ. ಬಸವೇಶಾ ಇನ್ಯಾಕೆ ಮಾರ್ಗದಲ್ಲಿ ತಡವು? ಇನ್ನು ರಾಜಧಾನಿಗೆ ಹೋಗೋಣ ನಡೆ. (ಎಂದು ಹೋಗವರು)

೨ನೇ ಅಂಕ ಸಮಾಪ್ತ

===***===***===

೩ ನೇ ಅಂಕ

೧ನೇ ಪ್ರವೇಶ

(ರಾಜಸಭಾ)

ಬಿಜ್ಜಳ: ಶಿವಭಕ್ತಾಗ್ರೇಸರಾ ! ಈ ರತ್ನಖಚಿತವಾದ ಪೀಠವನ್ನು ಅಲಂ ಕರಿಸಬೇಕು. (ಬಸವೇಶ್ವರನು ಕೂಡ್ರುವನು. ಬಿಜ್ಜಳನು ತನ್ನ ಸಿಂಹಾಸನದಲ್ಲಿ ಕೂಡ್ರುವನು ಮತ್ತು ನೃತ್ಯ ನಡಿಯುವದು.)

ಮಂತ್ರಿ: ಇಗೋ ಈ ಸಂಭಾವನೆಯನ್ನು ತೆಗೆದುಕೋ ? (ಕೊಡುತ್ತಾನೆ. ಗಣಿಕಾ ಸ್ತ್ರೀಯರು ಅವುಗಳನ್ನು ತೆಗೆದುಕೊಳ್ಳುತ್ತಾರೆ ಅಷ್ಟರಲ್ಲಿ ಮೇಲಿಂದ ಒಂದು ಪತ್ರ ಬೀಳುವುದು.)

ಬಿಜ್ಜಳ: (ಆ ಪತ್ರವನ್ನು ಕೈಯಲ್ಲಿ ತೆಗೆದುಕೊಂಡು) ಅಹಾ ! ಇದೇನು ಆಕಾಶಮಾರ್ಗದಿಂದ ಬಂದು ನನ್ನ ಮುಂಭಾಗದಲ್ಲಿ ಬಿದ್ದಿತಲ್ಲಾ ! ಒಳ್ಳೇದು, (ನೋಡುತ್ತಾನೆ) ಅಹಾ ! ಇದೇನು ಚಮತ್ಕಾರವು ? ಇದರಲ್ಲಿದ್ದ ಅಕ್ಷರಗಳೇ ತಿಳಿಯವು. ಏನಿದು? ಎಂಥಾ ಲಿಪಿಯು ? ಪಂಡಿತರೇ ! ನೋಡಿರಿ. ಈ ಅಕ್ಷರಗಳು ಯಾವ ಭಾಷೆಗೆ ಹೊಂದಿರುವವು ? ಮತ್ತು ಈ ಪತ್ರಿಕೆಯ ವೃತ್ತಾಂತವೇನು ? ಶೀಘ್ರದಿಂದ ಹೇಳಿರಿ.

ಸರ್ವರೂ: (ತಮ್ಮ ತಮ್ಮೊಳಗೆ ಗುಜುಗುಟ್ಟುತ್ತ ಮಹಾರಾಜನ ಕಡಿಗೆ ನೋಡಿ) ಮಹಾರಾಜಾ ! ನಾವು ತೆಲಗುಲಿಪಿ, ದ್ರಾವಿಡಲಿಪಿ, ಫಾರ್ಸಿ ಇವೇ ಮೊದಲಾದ ಹಲವು ಲಿಪಿಗಳಲ್ಲಿ ಪ್ರವೀಣರು. ಹೀಗಿದ್ದು ಈ ಪತ್ರಿಕೆಯಲ್ಲಿರತಕ್ಕ ಅಕ್ಷರಗಳು ನಮಗೆ ತಿಳಿಯವು. ಈ ಪತ್ರಿಕೆಯ ಅಭಿಪ್ರಾಯವು ವಿಷ್ಣು ಬ್ರಹ್ಮ ಇವರಿಗೋ ಅಸಾಧ್ಯವಾದದ್ದು. ಅಂದಮೇಲೆ ನಮ್ಮ ಪಾಡೇನು.? (ಎಂದು ರಾಜನ ಕೈಯಲ್ಲಿ ಕೊಡುವರು.)

ಬಿಜ್ಜಳ: (ತಕ್ಕೊಂಡು) ಆಹಾ! ಇದೇನಾಶ್ಚರ್ಯವು? ಯಾರಾದರೂ ಪತ್ರಿಕೆಯನ್ನು ಓದಿ ಇದರಲ್ಲಿರುವ ಸರ್ವ ವೃತ್ತಾಂತವನ್ನು ತಿಳಿಸಿದವರಿಗೆ ಅಮಾತ್ಯಾದಿ

ಸರ್ವನಿಯೋಗದ ಅಧಿಕಾರವನ್ನು ಕೊಡುವೆನು. ಅಂಥವರ್ಯ್ಯಾರಿರುವರು? (ಯೋಚಿಸಿ) ಬಸವೇಶಾ! ಇವರು ಸಕಲ ಭಾಷಾ ಪ್ರವೀಣರೆಂದು ಇವರಿಗೆ ಬೇಡಿದಷ್ಟು ಹಣವನ್ನು ಕೊಟ್ಟೆನು. ಆದರೆ ಈಗ ಉಪಯೋಗವಿಲ್ಲದೆ ಹೋದರು. ಇವರ ಸಕಲ ಭಾಷಾಪ್ರವೀಣತೆಯು ಎತ್ತ ಹೋಯಿತೋ ಏನೋ ಆದ್ದರಿಂದ ನೀನು ಓದು. (ಎಂದು ಬಸವೇಶ್ವರನ ಕೈಯಲ್ಲಿ ಕೊಡುವನು)

ಬಸವೇಶ್ವರ: ರಾಜಶಿರೋಮಣಿ ! ಇದು ಬೇರೆ ಇರುವದು. ಇದನ್ನು ತಿಳಿಯಲು ಸರ್ವರಿಗೂ ಸಾಧ್ಯವಿಲ್ಲಾ.

೧ ನೇ ಪಂಡಿತ : ಇವನು ರಾಜನಿಂದ ಮರ್ಯಾದೆಯನ್ನು ಪಡೆದಿರುವೆನೆಂದು ಈ ಪ್ರಕಾರ ಮಾತನಾಡುವನು ಇರಲಿ, ಬಸವೇಶಾ ! ನಿನಗಾದರು ಸಾಧ್ಯವೇ?

ಬಸವೇಶ್ವರ: ಓಹೋ ! ಸಾಧ್ಯವು !!

೨ ನೇ ಪಂಡಿತ: ಅಹಹ! ಈತನ್ಯಾರು ? ಪಂಡಿತರೇ !

೧ ನೇ ಪಂಡಿತ: ಈತನು ಬಲದೇವ ಮಂತ್ರಿಯ ಅಳಿಯನು

೨ ನೇ ಪಂಡಿತ: ಹಾ ! ಬಸವೇಶನೆಂಬುವನೇನು ? ಓಹೋ ! ಈತನು ಮಹಾ ಕಪಟನಾಟಕಿಯು.

೧ ನೇ ಪಂಡಿತ: ಪಂಡಿತರೇ ! ಸಕಲ ಭಾಷಾಪ್ರವೀಣರಾದ ನಮ್ಮಂಥವರ ಮುಂದೆ ಈತನ ಆಟ ನಡಿಯುವದೇ ? ಎಂಥಾ ಹುಚ್ಚುತನದ ಮಾತನಾಡುವಿರಿ ! ಶಿವಲಿಂಗವೆಂದು ಕೊರಳಲ್ಲಿ ಶಿಲೆಯನ್ನು ಧರಿಸಿದ ಮೂಢರಾದ ಶಿವಭಕ್ತರ ಮುಂದೇ ಈತನ ಪರಾಕ್ರಮವು.

ಬಸವೇಶ್ವರ: (ತನ್ನೊಳಗೆ) ಈ ನರಾಧಮರು ಯಾವ ಶಿವಲಿಂಗವನ್ನು ದೂಷಿಸುವರೋ ಅದೇ ಲಿಂಗವನ್ನು ಮಾನ್ಯವೆಂದು ಧಾರಣಮಾಡಿಕೊಳ್ಳುವಂತೆ ಮಾಡುತ್ತೇನೆ. ಎಲೋ ಮಾನವರೇ ! ನಿಮ್ಮಿಂದ ದೂಷಿಸಲ್ಪಟ್ಟ ಆ ಶಿವಲಿಂಗಧಾರಿಗಳಲ್ಲದೆ, ನಿಮ್ಮಂಥಾ ಲಿಂಗಹೀನರಿಗೆ ತಿಳಿಯಲಾರದು.

೩ ನೇ ಪಂಡಿತ : ತ್ ತ್ ತ್ ತಾಳಿರಿ ಪಂಡಿತರೇ ಇವನು ಲಿಂಗಧಾರಿಯು, ಇವನಿಗೆ ಈ ಪತ್ರದಲ್ಲಿರುವ ಅಭಿಪ್ರಾಯವು ತಿಳಿಯಲಿಕ್ಕೇಬೇಕು. ಬಸವೇಶಾ ಇದು ಯಾವ ಲಿಪಿಯು ಹೇಳು ನೋಡುವಾ?

೨ ನೇ ಪಂಡಿತ: ಹಾಗಲ್ಲ, ಬಸವೇಶಾ ! ಇದು ನಿನಗೆ ತಿಳಿಯದ ಪಕ್ಷದಲ್ಲಿ ಬಹಳ ಕಠಿಣವಾದೀತು, ನೋಡು. ಸಕಲ ಭಾಷಾಪ್ರವೀಣರಾದ ಪಂಡಿತರಿಂದ ಕೂಡಿದ ಸಭೆಯು.

ಬಸವೇಶ್ವರ: ಎಲೋ ಶಿವಕೃಪೆಯುಳ್ಳವರು ನಿಮ್ಮಂಥಾ ಪಂಡಿತರ ಹುಲು ಮಾತಿಗೆ ಅಂಜುವರೇ ?

೨ ನೇ ಪಂಡಿತ: ಹ! ಹ! ಮಾತನಾಡಲಿಕ್ಕೆ ಬಲು ಸರಸಾಗಿರುವಂತೆ ಕಾಣುತ್ತದೆ. ವಿಚಾರಮಾಡಿ ನೋಡು. "ಅಪಂಡಿತಃ ಪಂಡಿತಾನಾಂ ಕುಲೆವೌನಂ ನವರ್ಜಿತ" ಈ ನೀತಿ ಭಾಷಣವನ್ನು ಸ್ವಲ್ಪು ಮನಸ್ಸಿನಲ್ಲಿ ತಾ.

೩ ನೇ ಪಂಡಿತ: ಪಂಡಿತರೇ! ಈ ರೀತಿಯಾಕೆ ಈತನನ್ನು ಅನುಸರಿಸಿ ಮಾತನಾಡುವಿರಿ ? ಈತನಿಗೆ ತಿಳಿದೀತೆಂಬ ಭೀತಿಯುಂಟೇನು ? ಛೇ! ಛೇ !! ಅದೆಂತಾಗುವುದು

೨ ನೇ ಪಂಡಿತ: ಅದೇನು ಇಲ್ಲಾ. ಪರಂತು–

೩ ನೇ ಪಂಡಿತ: ಪರಂತೂ, ಆದರೆ, ಮತ್ತೂ, ಏನಿದು ನಡುವೆ? ಮನಸ್ಸಿನಲ್ಲಿ ಇರುವದನ್ನು ಒಮ್ಮೆ ಬಾಯಿಬಿಚ್ಚಿ ಹೇಳಿದರಾಯಿತು.

೨ ನೇ ಪಂಡಿತ: ಹಾಗಾದರೆ ಹೇಳಲೇನು ? ಇಲ್ಲಾ ನಾವೇ ಪ್ರವೀಣರೆಂಬ ಅಹಂಕಾರ ನಮಗ್ಯಾತಕ್ಕೆ ? ನಮ್ಮಕ್ಕಿಂತಲು ಸಕಲ ಭಾಷಾ ಪ್ರವೀಣರಾದವರು ಲೋಕದಲ್ಲಿರಲಿಕ್ಕೆಲ್ಲೇನು ?

೩ ನೇ ಪಂಡಿತ: (ನಗುತ್ತ) ಏನು ಪಂಡಿತರೇ ! ತಾವು ಎಂಥಾ ಅಂಜಬುರುಕರು ಇರುವಿರಿ. ನಮಗಿಂತಲೂ ಪ್ರವೀಣರಿದ್ದಾರೆ ಪರಂತು ಇವರ ಯೋಗ್ಯತೆ ಅಲ್ಲಾ. ಆದರೆ ಸ್ವಲ್ಪು ಮೋಜುಮಾಡುತ್ತೇನೆ. ನೋಡರಿ, ಹ್ಯಾಗೆ ವಾಾಡುತ್ತೇನೆ? (ಬಸವೇಶನಕಡೆಗೆ) ಬಸವೇಶಾ ! ಬಹಳ ಮಾತಾಡುವದರಲ್ಲಿ ಪ್ರಯೋಜನವೇನೂ ಇಲ್ಲಾ. ಅದುಯಾವ ಲಿಪಿಯು? ಹೇಳು.

ಬಸವೇಶ್ವರ: ಪಂಡಿತರೇ ! ನಾನು ಹೇಳುತ್ತೇನೆ. ಆದರೆ ಆಮೇಲೆ ನೀವು ಎಲ್ಲರೂ ಕೂಡಬೇಕಾದೀತು. ಅದೇನಂದರೆ ನೀವು ಯಾವ ಲಿಂಗವನ್ನು ದೂಷಿಸುವಿರೋ ಅದೇ ಲಿಂಗಧಾರಿಗಳ ಸೇವಕರಾಗಿರಬೇಕಾದೀತು.

೨ ನೇ ಪಂಡಿತ: ಅಹಾ ! ಇವನು ಎಂಥಾ ಬಾಯಿಬಡುಕನು. ಒಳ್ಳೇದು ನೀನು

ಓದಿದಪಕ್ಷದಲ್ಲಿ ನಾವು ನಿಮ್ಮ ಸೇವಕರಾಗುತ್ತೇವೆ. ಹಾಗದ ಪಕ್ಷದಲ್ಲಿ ನೀನು ನಮ್ಮ ದಾಸನಾಗಲಿಕ್ಕೆಬೇಕು.

ಬಸವೇಶ್ವರ:

ಪದಾ

ಈಶ ದಯದಿಂದ ಲೇಶಾ । ನಸು ಲೇಖವನೀಗ ॥ ಪ ॥
ನಮಿಸಿ ನರಪಗೆ ಪರಮ ಸುಮೋದವಾಗಿ ।
ಭರದಿ ಪಠಿಸುವೆನು ಬೇಗ ॥ ೧ ॥
ವಾದಿಪವಾದಿಗಳೋದಿ ತಿಳಿಯದರ ।
ಶೀಧರನೀಧವಗಾದ ಸಂಶಯಕುಜ ।
ಆದರದಿಂದೋದಿ ತರಿಸುವೆ ನಾನು ॥ ೨ ॥

ಕೇಳಬೇಕು ಮಹಾರಾಜಾ ! ಇದು ಶಿವನಿಂದ ಕಳುಹಿಸಿಕೊಟ್ಟ ಲಿಪಿ ಇರುತ್ತದೆ.

ಬಿಜ್ಜಳ: ಅಹಾ ! ಇದನ್ನು ಶಿವನು ಕಳಿಸಿರುವನೇ?

೩ ನೇ ಪಂಡಿತ: ಅಹಾ ! ಶಿವನು ಕಳಿಸಿರುವನೇ !! ಶಿವನಸಂಬಂಧ ಮಹಾರಾಜನು ಶಿವನ ಭಕ್ತನೇ? ನಿನ್ನಂತೆ ಕೊರಳಲ್ಲಿ ಲಿಂಗವನ್ನು ಧರಿಸಿಕೊಂಡು ಶಿವಪೂಜೆವನ್ನು ಮಾಡತಕ್ಕವನೇ? ಒಳ್ಳೇ ಮಾತನಾಡಿದಿ. ಪಂಡಿತರೇ! ನೋಡಿರಿ, ಹ್ಯಾಗೆ ಒಂದಕ್ಕೊಂದು ಸಂಬಂಧವಿಲ್ಲ.

ಬಿಜ್ಜಳ: ಪಂಡಿತರೇ! ಹೀಗೆ ಕೋಲಾಹಲ ಧನಿಯನ್ನು ಮಾಡಬೇಡರಿ. (ಬಸವೇಶನಿಗೆ) ಬಸವೇಶಾ ! ಈ ಪತ್ರದ ಅಭಿಪ್ರಾಯವೇನು ?

ಬಸವೇಶಾ: ಮಹರಾಜಾ! ವಿಶೇಷವೇನೂ ಇಲ್ಲಾ. ಹಿಂದೆ ರಾಜ್ಯವನ್ನಾಳಿದ ನಿನ್ನ ಚಾಲುಕ್ಯ ವಂಶದವರು **ಎಂಬತ್ತೆಂಟು ಕೋಟಿ ಧನರಾಸಿಯನ್ನು** ಸಿಂಹಾಸನದ ಕೆಳಗೆ ನಿಕ್ಷೇಪಿಸಿರುವರೆಂಬುದೇ ಈ ಲೇಖದ ಅಭಿಪ್ರಾಯವು.

ಪಂಡಿತರು: ಇಷ್ಟರಿಂದ ನಮಗೆ ನಂಬಿಗೆ ಆಗಲಾರದು.

ಬಸವೇಶ್ವರ: ಏನು? ಇಷ್ಟರಮೇಲಿಂದ ನಿಮಗೆ ನಂಬಿಗೆ ಇಲ್ಲವೋ? ಮಹರಾಜಾ! ನಿನ್ನ ಸಿಂಹಾಸನದ ಕೆಳಗೆ ಎಂಭತ್ತೆಂಟು ಕೋಟಿ ಧನರಾಶಿಯನ್ನು

ತೋರಿಸುತ್ತೇನೆ. ಶಿವಪ್ರೇರಿತವಾದ ಈ ಲೇಖನದ ಮುಖ್ಯ ಅಭಿಪ್ರಾಯದಂತೆ.

ಪದಾ-(ರಾಗ, ಪೂರ್ವಿ ರೂಪ ತಾಲ)

ತೋರಿಸುವೆನು ಧನವನೀಗ । ಧಾರುಣೀಶಗೆ ।
ಬಾರಿ ಬಾರಿಗೀಶಪದವ । ನುರೆ ಸ್ಮರಿಸುತೇ ॥ ಪ ॥
ನೋಡಿ ಶಿವನಪಾಡೆ ಮುದವ ।
ಗೂಡಿ ನೃಪನು ಮೇಣ್ ।
ಮಾಡ್ವೆನೀಚಬುಧರ ಮುಖವ । ಪಾಡುವಂದದೀ ॥ ೨ ॥

ಬಿಜ್ಜಳ:

ಪದಾ-(ಝಂಪಾ)

ಧನ್ಯ ಧನ್ಯನು ಜಗನ್ಮಾನ್ಯನಹ । ಬಸವೇಶಾ ॥ ಪಲ್ಲ ॥
ನಿನ್ನಯುನ್ನತ ಮಹಿಮೆಯನ್ನು ತಿಳಿಯಲು ಭೂಮಿ ।
ಮಾನವರುಶಕ್ತರೆಯ । ಗಣ್ಯಪುಣ್ಯ ॥ ೧ ॥
ಅಸ್ತ್ರದುರಿತನೆ ಭುವನ । ನುತ್ಯಪಾವನ ವರಚರಿತ್ರ. ತವದಯದಿಕೃತ ।
ಕೃತ್ಯನಾದೆನು ಜಗದಿ । ಮೃತ್ಯುವಿಷಭವರೋಗ ಭೀತಿ ದೂರ ॥ ೨ ॥

ಅಹಾ! ಈ ಮಹಾ ಪುರಷನು ತೋರಿಸಿದ ಧನರಾಸಿಯು ಎಂಭತ್ತೆಂಟು ಕೋಟಿ ಸಂಖ್ಯುವುಳ್ಳದ್ದಾಗಿದ್ದು ಪರುಷ ಖಣಿಯಾದ ಬಸವೇಶ್ವರನ ಕರವು ಸೋಂಕಿದ ಮಾತ್ರದಿಂದಲೇ ಆ ಧನರಾಸಿಯು ನೂರರಮೇಲೆ ಇಪ್ಪತ್ತಾರು ಕೋಟಿಯಾಗಿ ಝಗಝಗಿಸುತ್ತಾ ಮನಕ್ಕೆ ಅತ್ಯಂತಾಶ್ಚರ್ಯವನ್ನು ಹೊಂದಿಸಿತು. ಆದ್ದರಿಂದ ಸಕಲ ಸಾಮ್ರಾಜ್ಯವನ್ನು ನಿರಾತಂಕವಾಗಿ ನಡಿಸಿಕೊಂಡು ಹೋಗುವಂತೆ ಈತನಿಗೆ ವಿನಯದಿಂದ ಹೇಳಿಕೊಂಡು, ಇದೇ ಆನಂದ ಸಮಯದಲ್ಲಿ ಇವನಿಗೆ ಮಂತ್ರಿ ಪಟ್ಟವನ್ನು ಕಟ್ಟುತ್ತೇನೆ. (ಬಸವೇಶ್ವರನಕಡೆಗೆ ನೋಡಿ) ಬಸವೇಶಾ! ಪೂರ್ವದಲ್ಲಿ ನಿನ್ನ ಶ್ವಶುರನಾದ ಬಲದೇವ ಮಂತ್ರಿಯು ಈ ರಾಜ್ಯವನ್ನು ಯಥಾನ್ಯವಾಗಿ ಹ್ಯಾಗೆ ಪರಿಪಾಲಿಸಿದನೋ ಹಾಗೇ ನೀನು ಈ ರಾಜ್ಯವನ್ನು ಪಾಲಿಸು. ನೋಡು ಈ ಚತುರಂಗ ಬಲವನ್ನೂ ಸರ್ವ ಕೋಶಾಗಾರಗಳನ್ನೂ ಮತ್ತೂ ಈ ಎಲ್ಲಾ ಮಂತ್ರಿಗಳನ್ನೂ ನಿನ್ನ ಸ್ವಾಧೀನ ಮಾಡುತ್ತೇನೆ. ಇದಲ್ಲದೆ ನಾನೂ ಕೂಡ ಊಚ ನೀಚ

ಕಾರ್ಯಗಳನ್ನು ನಿನ್ನ ಅನುಮೋದನೆ ತೆಗೆದುಕೊಳ್ಳದೆ ಎಂದೂ ಮಾಡಲಿಕ್ಕಿಲ್ಲಾ. ಇದನ್ನು ಶಿವಸಾಕ್ಷಿಯಾಗಿ ಹೇಳುತ್ತೇನೆ.

ಬಸವೇಶ್ವರ: ರಾಜೇಂದ್ರಾ ! ಹಾಗಾದರೆ ಕೇಳು. ನನ್ನನ್ನುದ್ದೇಶಿಸಿ ಅನೇಕ ಶಿವಭಕ್ತರು ದೇಶಾಂತರದಿಂದ ಬರುವರು, ಅವರಿಗೂ ಈ ನಿನ್ನ ಪುರದಲ್ಲಿರುವ ಜನರಿಗೂ ಯಾವ ಕಾರಣದಿಂದಲೇ ಆಗಲಿ ಕಲಹವಾಗಿ, ಈ ನಿನ್ನ ಪುರದ ಜನರು ಅವರಲ್ಲಿ ವೃಥಾದೋಷಾರೋಪಣವನ್ನು ಮಾಡುವರು. ಆಗ ನೀನು ಅವರಲ್ಲಿ ಕೃದ್ಧನಾದರೆ ಅವರು ಸಹಿಸಲಿಕ್ಕಿಲ್ಲಾ. ಆಮೇಲೆ ಮಾತ್ರ ಕಠಿಣವಾದೀತು. ಮತ್ತು ನಿನ್ನ ಮಂತ್ರಿಗಳು ಅಸೂಯೆಯಿಂದ ಬಸವೇಶ್ವರನು ಕೋಶಾಗಾರದಲ್ಲಿದ್ದ ಸರ್ವ ಧನವನ್ನು ಶಿವಭಕ್ತರಿಗೆ ಕೊಟ್ಟನೆಂದು ಹೇಳುವರು. ಆಗ ನೀನು ಸೌಮ್ಯ ರೀತಿಯಿಂದ ಪರೀಕ್ಷಿಸದೆ ನನ್ನ ಮೇಲೆ ಸಿಟ್ಟಾದರೆ ನಾನು ನಿನ್ನ ಸರ್ವ ರಾಜ್ಯವನ್ನು ನಿನಗೆ ಒಪ್ಪಿಸುವೆನು. ಇದಕ್ಕೆ ನಿನ್ನ ಸಮ್ಮತಿಯು ಹ್ಯಾಗದೆ? ವಿಚಾರ ಮಾಡಿ ನೋಡು.

ಬಿಜ್ಜಳ: ಬಸವೇಶಾ! ಸರ್ವರೀತಿಯಿಂದ ನಿನ್ನ ಅಭಿಪ್ರಾಯದಂತೆ ವರ್ತಿಸುತ್ತೇನೆಂದು ಮೊದಲೇ ಶಿವಸಾಕ್ಷಿಯಾಗಿ ಹೇಳಿರುವೆನು ಅಂದಬಳಿಕ ಎರಡನೇ ಆಲೋಚನೆಯನ್ನು ಮಾಡಬೇಡಾ.

ಬಸವೇಶ್ವರ: ಹಾಗಾದರೆ, ನಿನ್ನ ಅಭಿಪ್ರಾಯದಂತೆ ವರ್ತಿಸಲಿಕ್ಕೆ ಏನೂ ಪ್ರತಿಬಂಧಕವಿಲ್ಲಾ.

ಬಿಜ್ಜಳ: ಹಾಗಾದರೆ ಹೋಗುವ ನಡೆ. (ಹೋಗುವರು).

===

ಪ್ರವೇಶ – ೨

(ಬಸವೇಶ್ವರನ ಮನೆ)

ಬಸವೇಶ್ವರ: ನಾನು ಗುರುಮೂರ್ತಿಯಾದ ಸಂಗಮೇಶ್ವರನ ಆಜ್ಞಾನುಸಾರವಾಗಿ ತಪ್ಪದೆ ನಡಿಸುವ ಪ್ರತಿಜ್ಞೆಗಳನ್ನು ಮಾಡುವೆನು. ಶಿವಶರಣರಲ್ಲಿ ಪ್ರಮಾದದಿಂದ ಪಂಕ್ತಿಭೇದವನ್ನು ಎಂದೂ ಮಾಡಲಿಕ್ಕಿಲ್ಲಾ. ಶಿವಶರಣರ ಇಷ್ಟ ವಸ್ತುವು ಅಧಿಕ ಬೆಲೆಯುಳ್ಳದ್ದಾದರೂ ಎಷ್ಟೂ ಲೋಭವಿಲ್ಲದೆ

ಸಲ್ಲಿಸುವೆನು. ಶಿವಶರಣರನ್ನು ಬಿಟ್ಟು ಶಿವಪ್ರಸಾದ ಸೇವೆಯನ್ನು ಎಂದೂ ಮಾಡಲಿಕ್ಕಿಲ್ಲಾ. ಶಿವಭಕ್ತರನ್ನಲ್ಲದೆ ಅನ್ಯ ಭವಿಗಳನ್ನು ಎಂದೂ ಪೂಜಿಸಲಿಕ್ಕಿಲ್ಲಾ. ಶಿವಭಕ್ತರು ಬೇಡಿದ್ದನ್ನು ದಾಸಭಾವದಿಂದ ಕೊಡದೆ ಇರಲಿಕ್ಕಿಲ್ಲಾ. ಶಿವಭಕ್ತರಿಗೆ ಮಾಡಿದ ದಾನವು ಮೋಕ್ಷಕ್ಕೆ ಕಾರಣವೆಂದು ನಿಶ್ಚಯಿಸದಿರಲಿಕ್ಕಿಲ್ಲಾ. ಪ್ರಾಣತ್ಯಾಗಕ್ಕೆ ಕಾರಣವಾದ ಶಿವಶರಣರ ಸಂಕಟದ ನಿವಾರಣಕ್ಕಾಗಿ ನನ್ನ ಪ್ರಾಣ ಕೊಡದೆ ಇರಲಿಕ್ಕಿಲ್ಲಾ. ನನ್ನಲ್ಲಿ ಕುಪಿತರಾದ ಶಿವಶರಣರಿಗೆ ಎಂದೂ ಅಪಮಾನ ಮಾಡಲಿಕ್ಕಿಲ್ಲಾ. ಶಿವಭಕ್ತರು ನನ್ನಲ್ಲಿ ವಿರುದ್ಧ ಬೆಳಿಸಿದಾಗ್ಯೂ ಅವರಲ್ಲಿ ನಾನು ಕೋಪ ತಾಳಲಿಕ್ಕಿಲ್ಲಾ. ಶಿವಲಿಂಗ ಗುರು ಜಂಗಮರ ಮೂರ್ತಿಗಳ ಪ್ರಸಾದವನ್ನು ಧಿಃಕ್ಕಾರ ಮಾಡಲಿಕ್ಕಿಲ್ಲಾ. ಜೀರ್ಣವಾದ ಸ್ಥಾವರ ಲಿಂಗಸ್ಥಾನಗಳಿಗೆ ಭಕ್ತಿ ಪೂರ್ವಕವಾಗಿ ಸಹಾಯ ಮಾಡದೆ ಇರಲಿಕ್ಕಿಲ್ಲಾ. ಸ್ಥಾವರ ಲಿಂಗಾರ್ಪಿತ ಪ್ರಸಾದವನ್ನು ಎಂದೂ ಸೇವಿಸಲಿಕ್ಕಿಲ್ಲಾ. ವೀರಭದ್ರಾದಿ ಗಣೇಶ್ವರರಿಂದ ಗೌತುವಾದಿ ಋಷಿಗಳಿಂದ ಸೇವಿಸಲ್ಪಟ್ಟವರನ್ನು ಶಿವಲಿಂಗಾರ್ಚನೆ ಕಾಲದಲ್ಲಿ ಎಂದೂ ನೋಡಲಿಕ್ಕಿಲ್ಲಾ. ನಿತ್ಯದಲ್ಲಿ ಭಕ್ತಿಪೂರ್ವಕವಾಗಿ ಜಂಗಮಾರ್ಚನೆಯನ್ನು ಮಾಡದಿರಲಿಕ್ಕಿಲ್ಲಾ. ಗುರುವಿಗೆ ತನುವನ್ನು ಲಿಂಗಕ್ಕೆ ಮನವನ್ನು ಜಂಗಮಕ್ಕೆ ಧನವನ್ನು ಭಕ್ತಿಪೂರ್ವಕವಾಗಿ ಅರ್ಪಿಸದಿರಲಿಕ್ಕಿಲ್ಲಾ. ಇವೇ ಮೊದಲಾದ ಸಶಾಸ್ತ್ರದ ಪ್ರತಿಜ್ಞೆಗಳನ್ನು ಗುರುಲಿಂಗ ಜಂಗಮಸಾಕ್ಷಿಯಾಗಿ ಇವುಗಳಿಗೆ ಸ್ವಲ್ಪೂ ಕೊರತೆ ಬಾರದಂತೆ ನಡಿಸುವೆನು. ಇರಲಿ, ನನ್ನ ಗುರುಮೂರ್ತಿಯಾದ ಸಂಗಮೇಶ್ವರನ ಸ್ತೋತ್ರವನ್ನು ಮಾಡುವೆನು.

ಪದ–(ಚಾಲ– "ಶ್ರೀ ಕೃಷ್ಣತೋ ಪರಮಾತ್ಮಾ")

ಗೌರೀಶ ಪಾಹಿಸು ಪೂತಾ । ತ್ಮ ಗಿರೀಶ ಸಂಗಮನಾಥ ।
ಗಂಗಾ ತರಂಗಜಾತ । ಜಟತುಂಗ ಕುಂದಾಜ್ಞಾತೊ ॥
ಪಲಹೀರ ಶಾರದ ಶ್ವೇತಾಂಗರವೀಂದು ವಹ್ನಿಸುನೇತ್ರಾ ॥ ೧ ॥

ಪ್ರಿಯೆ ! ಒಳಗೆ ಇರುವಿಯೇನು? ಸ್ವಲ್ಪು ಇತ್ತ ಬಾ.

ಗಂಗಾಂಬಿಕೆ: (ಬಂದು ನಮಸ್ಕರಿಸಿ) ಪ್ರಿಯಾ ! ಈ ತಮ್ಮ ಚರಣ ದಾಸಿಯಾದ ನನಗೆ ಯಾವ ಆಜ್ಞೆಯನ್ನು ಮಾಡುವಿರಿ?

ಬಸವೇಶ್ವರ: ಏನೂ ಇಲ್ಲಾ. ಮನೋರಮೆ ! ಬಂಗಾರವೇ ನಾನಾ ಒಡವೆಗಳಾದಂತೆ ಶೈವರ ಶಿವನ ಚಿತ್ಕಳೆಯೇ ಬಹುರೂಪಗೊಂಡ ಗಣವೃಂದ ದಲ್ಲಿದ್ದ ವಿಟಜಂಗಮರು ಬರುವ ವೇಳೆಯಾಯಿತು. ಆ ಪೂಜ್ಯರಿಗೆ

ಸಮರ್ಪಿಸುವ ವಸ್ತ್ರ ಪುಷ್ಪಮಾಲಿಕಾ ಗಂಧ ದ್ರವ್ಯಾದಿ ಸಾಮಾನುಗಳನ್ನು ಸಿದ್ಧ ಪಡಿಸಿರುವಿಯೇನು?

ಗಂಗಾಂಬಿಕೆ: ದೇವಾ! ಎಲ್ಲಾ ಸಿದ್ಧತೆ ಅದೆ.

ಬಸವೇಶ್ವರ: ಅಗೋ ಅವರೇ ಬಂದರು ನೋಡು.

ಮೂರು ವಿಟ

ಜಂಗಮರು: (ಪ್ರವೇಶಿಸಿ) ಎಲೋ ಬಸವಾ ! ನಾವು ಸೂಳೆಗೈಯ್ಯಲು ಪೋಗುವ ವೇಳೆಯಾಯಿತು. ಆದ್ದರಿಂದ ನಮಗೆ ಕೊಡುವ ಸಾಮಗ್ರಯಗಳನ್ನು ಜಾಗ್ರತೆಯಾಗಿ ಕೊಡು.

ಬಸವೇಶ್ವರ: ಮಹನೀಯರೇ ! ಬನ್ನಿರಿ ಸ್ವಲ್ಪ ಆಸನದಮೇಲೆ ವಿಶ್ರಮಿಸಿರಿ. (ಶಂಕರ! ಶಂಕರ !! ಎಂದು ಕುಳಿತುಕೊಳ್ಳುವರು) (ಗಂಗಾಂಬಿಕೆಯ ಕಡೆಗೆ ನೋಡಿ) ಹೋಗು. ತೆಗೆದುಕೊಂಡು ಬಾ. ಮಹನೀಯವರ ವಸ್ತ್ರಾಭರಣಗಳನ್ನು (ಗಂಗಾಂಬಿಕೆ ಹೋಗಿ ತಾಟನ್ನು ತಂದಿಟ್ಟು ದೂರ ನಿಲ್ಲುವಳು.) ಯಾಕೆ ದೂರನಿಂತುಕೊಂಡಿ? ಪೂಜ್ಯರಿಗೆ ಗಂಧವನ್ನು, ಪುಷ್ಪ ಮಾಲಿಕೆಯುನ್ನು ಕೊಡು. ಈ ಮಹನಿಯರಿಗೆ ವೇಳೆಯಾಗುವುದಿಲ್ಲವೆ ?

ಗಂಗಾಂಬಿಕೆ: (ಕೊಟ್ಟು ನಮಿಸುವಳು.)

ಬಸವೇಶ್ವರ: ಮಹನಿಯರೇ ! ತಾವು ಹೋಗಿಬರಬಹುದು.

(ವಿಟ ಜಂಗಮರು ಹೋಗುವರು)ಈ ಮಹನಿಯರು ನರರಂತೆ ಮೋಹಿಸಿ ವೇಶ್ಯಾಗಮನ ಮಾಡುವರೇ? ನಾನು ಮಾಡಿರುವ ಪ್ರತಿಜ್ಞೆಗಳಲ್ಲಿ ಜಂಗಮಕ್ಕೆ ಏನೂ ವಂಚನೆ ಮಾಡಲಿಕ್ಕಿಲ್ಲಾ. ಶಿವಭಕ್ತರ ಅಪೇಕ್ಷೆಯನ್ನು ಸಲ್ಲಿಸದಿರಲಿಕ್ಕಿಲ್ಲಾ ಎಂಬುವ ಪ್ರತಿಜ್ಞೆಗಳ ಪರೀಕ್ಷಾರ್ಥವಾಗಿ ವಿಟರಂತೆ ನಟಿಸುವರು. ಇರಲಿ, ಪ್ರಿಯೆ ! ಶಿವ ಪೂಜಾ ಸಮಯವಾಯಿತು. ಹೋಗೋಣ ನಡೆ ("ಗೌರಿಶಾಪಾಹಿ" ಎಂಬ ಮೊದಲಿನ ಪದ ಅನ್ನುತ್ತ ಹೋಗುವರು.)

ವಿಟ ಜಂಗಮರು:(ಲಗುಬಗೆಯಿಂದ ಹೋಗುತ್ತ ಹೊಗುತ್ತ ಹಿಂದೆ ಶಂಕರ! ಶಂಕರ!! ಎಂದು ಶಬ್ದವಾಗುವದನ್ನು ನೋಡಿ) ಓಹೋ ! ಮುಗ್ಧ ಸಂಗಾರ್ಯರು ಇತ್ತ ಬರುವಂತೆ ತೋರುತ್ತದೆ.

ಮುಗ್ಧಸಂಗಾರ್ಯ: ಮಹಾತ್ಮರೇ! ತಾವು ಪುಷ್ಪಮಾಲಿಕೆಗಳನ್ನು ಗಂಧವನ್ನು ತೆಗೆದುಕೊಂಡು ಎಲ್ಲಿಗೆ ಹೋಗುವಿರಿ?

ಜಂಗಮರು: ಮುಗ್ಧಸಂಗಾರ್ಯನೇ ! ನಾವು ಇವೆಲ್ಲಾ ತೆಗೆದುಕೊಂಡು ಸೂಳೆಯರ ಮನೆಗೆ ಹೋಗುತ್ತೇವೇ.

ಮುಗ್ಧಸಂಗಾರ್ಯ: ಹೋಗಬಹುದು. (ಎಂದು ನಮಸ್ಕಾರ ಮಾಡುವನು. ಅವರು ಹೋಗುವರು.) (ತನ್ನೊಳಗೆ) ಓಹೋ ! ಹೀಗೆ ಗಂಧ ಪುಷ್ಪಗಳನ್ನು ತೆಗೆದುಕೊಂಡು ಹೋಗಬೇಕಾದರೆ, ಸೂಳೆಯರ ಮನೆಗೆ ಶಿವಪೂಜಿಕ್ಕೋಸ್ಕರವೇ ಹೋಗುವಂತೆ ಕಾಣುತ್ತದೆ. ಅಲ್ಲಿ ಇವರ ಪೂಜಾಸಮಾರಂಭವು ನೆಟ್ಟಗಾಗುವಂತೆ ತೋರುತ್ತದೆ. ಆದ್ದರಿಂದಲೇ ಹೋಗುವರು. (ವಿಚಾರಮಾಡಿ) ಹಾ ! ನಾನೂ ಸೂಳೆಯರಮನೆಗೆ ಹೋಗಬೇಕು. ಅಂದರೆ ಅಲ್ಲಿ ಶಿವಪೂಜ ನೆಟ್ಟಗಾಗುತ್ತದೆ. ಒಳ್ಳೇದು ಬಸವೇಶ್ವರನ ಕಡೆಗೆ ಹೋಗುವಾ. (ಎಂದು ತಿರುಗಿ ನೋಡಿ) ಅಯ್ಯಾ ಬಸವೇಶಾ ! ಏನು ಮಾಡುವಿ?

ಬಸವೇಶ್ವರ: ಓಹೋ ! ಮುಗ್ಧಸಂಗರ್ಯರೇನು ? ಇಲ್ಲಿ ಕೂಡ್ರಬೇಕು.

ಮುಗ್ಧಸಂಗಾರ್ಯ: (ಕುಳಿತು) ಬಸವೇಶಾ ನನ್ನದೊಂದು ಬಯಿಕೆಯುಂಟು. ಅದನ್ನು ಪೂರ್ಣ ಮಾಡುವಿಯಾ?

ಬಸವೇಶ್ವರ: ಅದೇನು ಪೂಜ್ಯರೇ?

ಮುಗ್ಧಸಂಗಾರ್ಯ: ನಾನು ಸೂಳೆಯರ ಮನೆಗೆ ಹೋಗುವೆನು. ನೀನು ಕಳುಹಿಸಿ ಕೊಡುವೆಯಾ ?

ಬಸವೇಶ್ವರ: (ಸ್ವಗತ) ಅಹಾ ! ಸೂಳೆಯರ ಸಂಗವನ್ನರಿಯದ ಈ ಮಹನೀಯನ ಸ್ವಭಾವವು ಎಷ್ಟು ಮುಗ್ಧವಿರುವದು. ಈಗ ಹೋದ ಮಹನೀಯರನ್ನು ನೋಡಿ ತಾನೂ ಹೋಗುವೆನೆಂದೆನ್ನುವನು. (ನಕ್ಕು) ಹೇ ಮುಗ್ಧ ಶಿರೋಮಣಿ !

ಮುಗ್ಧ ಸಂಗಾರ್ಯ: ಹಾ ! ಹಾ ! ! ಇದೇನು ನಾನು ಮುಗ್ಧನೇ? ನೀನು ಮುಗ್ಧನು. ನನ್ನಲ್ಲೇನು ಮುಗ್ಧತನವನ್ನು ಕಂಡೆಪ್ಪಾ ?

ಬಸವೇಶ್ವರ: ಪೂಜ್ಯರೇ ! ತಪ್ಪಾಯಿತು ಕ್ಷಮಿಸಬೇಕು. ತಾವು ಮಹಾ ಚತುರರಿರುವಿರಿ.

ಮುಗ್ಧ ಸಂಗಾರ್ಯ: ಹಾ! ಹೀಗೆ ಅನ್ನು. ಇರಲಿ. ತಡವ್ಯಾಕೆ ? ನನ್ನನ್ನು ಜಾಗ್ರತೆಯಾಗಿ ಕಳುಹಿಸಿಕೊಡು. (ಬಸವೇಶನು ಒಳಗಿಂದ ವಸ್ತ್ರ ಗಂಧ ಪುಷ್ಪಾದಿಗಳನ್ನು ತಂದುಕೊಡುವನು.) ಬಸವೇಶಾ ! ನಾನು ಆ ಗಣಿಕಾ ಸ್ತ್ರೀಯಳ ಮನೆಯನ್ನು ನೋಡಿಲ್ಲಾ.

ಬಸವೇಶ್ವರ: ಎಲೋ ! ಯಾರಿರುವಿರಿ?

ಶೇವಕ: ಮಹನ್ ! ನಾನಿರುವೆನು (ಎಂದು ಒಳಗೆ ಬರುವನು.)

ಬಸವೇಶ್ವರ: ಈ ಮಹನೀಯರನ್ನು ಒಬ್ಬ ಶಿವಭಕ್ತಿವಂತೆಯಾದ ವಾರಣ ಸ್ತ್ರೀಯಳ ಮನೆಗೆ ಕಳುಹಿಸಿ ಬಾ.

ಶೇವಕ: ಒಳ್ಳೇದು. (ಎಂದು ಕರಕೊಂಡು ಹೋಗುವನು).

===

೩ನೇ ಪ್ರವೇಶ

ಸ್ಥಳ: ಗಣಿಕಾ ಸ್ತ್ರೀಯಳ ಮಂದಿರ

ಪದ (ಚಾಲ– "ರಾಮ ಪಾಹಿಲಾ")

ಸೋಮಶೇಖರ ಪಾಹಿ । ಕಾಮಾರೆಸೂದೇಹಿ ॥
ಲಿಧಮೇಂದ್ರಾರಿಸಾ । ಮುದ ಶಿರೋಮಾಲ ॥
ವಿಧುರವಿಮರುದಾಪ್ತಾಂಭಕೇಶ ॥ ೧ ॥
ಶರಜತಾತವಿಧಿ । ಹರಿಸುರೇಶರಾದಿ ॥
ಸುರನರತಾಪಸ ವಂದಿತ ಪಾದ ॥ ೨ ॥

ಶೇವಕ: ದೇವಾ ! ತಾವು ಇದೇ ಮಂದಿರವನ್ನು ಪ್ರವೇಶಿಸಬಹುದು.

ಮುಗ್ಧಸಂಗಾರ್ಯ: (ಒಳಗೆ ಹೊಗುವನು)

ಗಣಿಕಾ: ಅಹಾ ! ಪೂಜ್ಯರೇ ಇತ್ತ ಬರಬಹುದು (ಎಂದು ನಮಸ್ಕಾರ ಮಾಡುವಳು).

ಮುಗ್ಧಸಂಗಾರ್ಯ: (ಅತ್ತಿತ್ತ ಗಾಬರಿಯಾಗಿ ನೋಡಿ) ಅಹ ! ಇದೆಂಥಾ ಶಿವಪೂಜೆ ಮಂದಿರಪ್ಪಾ ?

ಪದ– "ಲಾವಣಿ"

ಗೃಹವಿದೆಂತು ಶೋಭಿಪುದೀಗ । ಳಹ ಶಂಭು ಸದನದೋಲ್ಮಿಗೆ ॥ ಪ ॥
ಝುಗಝುಗಿಸುತಿಹದು ಶಿವಭಕ್ತಿ ।
ಮೃಗನಯನೆಗಿರ ವೊಯನುರಕ್ತಿ । ಯನುಮಿೂ ।
ಮನಕೆ ಗಡ ಮಿೂವುದು ಸುದ್ಯ ಥಮೀ ।
ಶ ಮನ ಯಮಪೂಜಗೃಹಂ । ಮುಕ್ತಿಲತಿಕಾಬೀಜ ॥ ೧ ॥

ಈ ಪ್ರಕಾರ ಶೋಭಿಸುವ ಈ ಮಂದಿರದಲ್ಲಿ ಎತ್ತನೋಡಿದರೂ ಪೂಜಗೆ ಯೋಗ್ಯವಾದ ವಸ್ತುಗಳೇ ಇರುವವು. (ಸ್ವಲ್ಪು ಮುಂದಕ್ಕೆ ಹೋಗಿ) ಇಲ್ಲಿ ಪೂಜೆಗೆ ಯೋಗ್ಯವಾದ ನೀರಿನಗಿಂಡಿ ಇರುವದು. ದೊಡ್ಡದಾದ ಒಂದು ಕನ್ನಡಿಯನ್ನಿಟ್ಟಿರುವರು. ಅಹಾ ! ಇದು ಎಷ್ಟು ಹೊಳೆಯುವುದು? (ಬಗ್ಗಿ ನೋಡಿ) ಅಹಾ ! ಇದರಲ್ಲಿ ಮುಖವು ಕಾಣುತ್ತದೆ. ಅಯ್ಯೋ ಇಂಥ ದೊಡ್ಡ ಕನ್ನಡಿಯನ್ನು ನಾನು ಎಂದೂ ನೋಡಿದ್ದಿಲ್ಲ. ಇದನ್ನು ಪೆಟ್ಟಿಗೆಯಲ್ಲಿ ಯಾಕೆ ಹಾಕಿಟ್ಟಿಲ್ಲಾ? ಹಾಗೇ ಹೊರಗೆ ಯಾಕೆ ಇಟ್ಟಿದ್ದಾರು? ಇದು ಏನು ಕಾರಣ? (ವಿಚಾರಮಾಡಿ) ಹಾ! ತಿಳಿಯಿತು. ಈ ಪವಿತ್ರವಾದ ಮಂದಿರದಲ್ಲಿ ಪೂಜೆಯನ್ನು ತೀರಿಸಿಕೊಂಡು ಹೋಗುವ ಜನರು ಬಹಳೇ ಎಂದು ತೋರುತ್ತದೆ. ಆದ್ದರಿಂದ ಸದಾ ಹೊರಗೆ ಇಡುವ ಪ್ರಸಂಗ ಬಂದದೆ.

ಪದ–("ಚಾಲ–ತುಜ ದೇವುನಿ ವಚನೆ")

ಸಾಂದ್ರಾವಹ ಕೇಸರಿ ಪ್ರಮುಖ ।
ಗಂಧದಭರಣಗಳಿರುವವು ಮೇ
ಣ್ ॥ ಮಾರ್ದ್ವೀಕೋಧಕ । ಮೃದ್ವಿಕಾದ್ಯಪಾ ॥
ಕದ್ಯುತಿಮತ್ಕನ । ಕೋದ್ಯಾತ್ಕಲಶಗ ॥
ಳೀಧಾಮದೊಳಿರುವವು ॥ ೧ ॥

ಮತ್ತು ಇಲ್ಲಿ ಹೂವಿನ ಪೆಟ್ಟಿಗೆ ಇರುವದು. ಅಹಾ ! (ಮಂಚದಕಡೆಗೆ ತೋರಿಸಿ) ಸ್ವಸ್ಥಚಿತ್ತನಾಗಿ ಕುಳಿತು ಶಿವಪೂಜೆಯನ್ನು ಜರಗಿಸಲು ಈ ಶಿವಪೂಜೆಯ ಮಂಟಪವು ಎಷ್ಟು ರಮಣೀಯವಾಗಿ ತೋರುವುದು !

ಗಣಿಕಾ ಸ್ತ್ರೀ: ಮಹಸಿಯರೇ! ಹಂಸ ತೂಲಿಕೆಯ ಹಾಸಿಗೆಯಿಂದ ಶೋಭಿಸುವ ಈ ಮಂಚದಮೇಲೆ ಕೂಡ್ರಬೇಕು.

ಮುಗ್ಧ ಸಂಗಾರ್ಯ: ಎಲೇ ಭಕ್ತಳೆ ! ಶಿವಪೂಜೆಗೆ ಯೋಗ್ಯವಾದ ಈ ಶಿವಪೂಜಾ ಮಂಟಪದಲ್ಲಿ ಸ್ನಾನಮಾಡದೆ ಹಾಗೇ ಕೂಡ್ರಬೇಕೆ ? ಆದ್ದರಿಂದ ನಾನು ಇಲ್ಲೇ ಕೂಡ್ರುತ್ತೇನೆ. (ಎಂದು ಕುಳಿತುಕೊಂಡು) ಅಮ್ಮಾ ! ಕೆಲವು ಸಂಶಯಗಳು ಬರುವವು.

ಗಣಿಕಾ: ದೇವಾ ! ಅವ್ಯಾವವು ?

ಮುಗ್ಧಸಂಗಾರ್ಯ: ಏನೂ ಇಲ್ಲಾ. ನೀನು ಶಿವಭಕ್ತಿವಂತಿ ಹೌದಲ್ಲೋ ?

ಗಣಿಕಾ: ಹೌದು, ಮಹನೀಯಾ ! ನಾನು **ಶಿವದೀಕ್ಷಾ ಸಂಸ್ಕಾರದಿಂದ ಲಿಂಗಾಂಗಿಯಾದ ವೀರಶೈವಾಚಾರ ಸಂಪನ್ನಳು**. ಸದಾ ಗುರುಲಿಂಗ ಜಂಗಮ ಶೇವಾತತ್ಪರಳು. ಭಕ್ತಮಾಹೇಶ್ವರರ ಪಾದಧೂಳಿಯಿಂದ ಪವಿತ್ರವಾದ ಈ ದೀನಳ ಗೃಹದಲ್ಲಿ ಭವಿಗಳ ಪ್ರವೇಶಕ್ಕೆ ಕೂಡಾ ಅವಕಾಶವಿಲ್ಲಾ ?

ಮುಗ್ಧಸಂಗಾರ್ಯ: ಹಾಗಾದರೆ, ನಿನ್ನ ಸರ್ವಾಂಗಕ್ಕೆ ಭಸ್ಮವನ್ನು ಯಾಕೆ ಧರಿಸಿಲ್ಲಾ.

ಗಣಿಕಾ: (ನಕ್ಕು) ಇಗೋ ! ನೋಡಿರಿ. ಧರಿಸಿರುವೆನಲ್ಲಾ. ಇದು ಮಾತ್ರ ಹಳದೀ ಬಣ್ಣದ ಭಸ್ಮವು. (ಎಂದು ಕೈಯನ್ನು ತೋರಿಸುವಳು).

ಮುಗ್ಧ ಸಂಗಾರ್ಯ: ಹೌದು, ಕಾಣಿಸುತ್ತದೆ. ಅಮ್ಮಾ! ಇದನ್ನು ಎಲ್ಲಿಂದ ತರಿಸಿದಿ?

ಗಣಿಕಾ: ಇದನ್ನು ದ್ವೀಪಾಂತರದಿಂದ ತರಿಸಿರುವೆನು. ಈ ಭಸ್ಮವನ್ನು ಪರಮೇಶ್ವರನ ಹೆಂಡತಿಯಾದ ಪಾರ್ವತಿಯು ಸದಾ ಧರಿಸಿಕೊಳ್ಳುವಳು.

ಮುಗ್ಧಸಂಗಾರ್ಯ: ಇರಬಹುದು. ಅಮ್ಮಾ ! ಇರಬಹುದು.

ಗಣಿಕಾಸ್ತ್ರೀ: (ಸ್ವಗತ) ಅಹಾ! ಗಣಿಕಾ ಸ್ತ್ರೀಯರ ಪದ್ಧತಿಯಂತೆ ಧರಿಸಿಕೊಂಡಿರುವ ಅರಿಷಿಣವನ್ನು ಹಳದೀ ಬಣ್ಣದ ವಿಭೂತಿಯೆಂದು ಹೇಳಿದರೆ ಈತನು ಒಡಂಬಟ್ಟನು. ಅಹಾ! ಎಂಥಾ ಮುಗ್ಧನು.

ಮುಗ್ಧಸಂಗಾರ್ಯ: ಒಳ್ಳೇದು. ನೀವು ಕೂದಲುಗಳನ್ನು ಮೇಲಕ್ಕೆ ಯಾಕೆ ಕಟ್ಟಿಲ್ಲಾ?

ಗಣಿಕಾ: ಶಿವಪ್ರಸಾದ ಕುಸುಮವನ್ನು ಮುಡಿದುಕೊಳ್ಳಬೇಕಾದರೆ ತೊಂದರೆಯಾಗುವುದೆಂದು ಈ ರೀತಿ ಒಂದಾಗಿ ಹೆಣೆದಿರುವೆನು. (ಎಂದು ವೇಣಿಯನ್ನು ತೋರಿಸುವಳು).

ಮುಗ್ಧಸಂಗಾರ್ಯ: ಕೊರಳಲ್ಲಿ ರುದ್ರಾಕ್ಷಿಯನ್ನು ಯಾಕೆ ಧರಿಸಿಲ್ಲಾ ?

ಗಣಿಕಾ: ಪುಣ್ಯಾತ್ಮನೇ! ನೋಡಬೇಕು. ಬಿಳುಪಾದ ಈ ರುದ್ರಾಕ್ಷಿಯ ಸರವನ್ನು.

ಮುಗ್ಧಸಂಗಾರ್ಯ: (ತನ್ನ ಕಂಠದಲ್ಲಿರುವ ರುದ್ರಾಕ್ಷಿಯನ್ನು ನೋಡಿಕೊಂಡು) ಅವು ಬೇರೆ ಇರುವದಲ್ಲಾ. ಅಮ್ಮಾ ! ಇವು ಎಲ್ಲಿ ಹುಟ್ಟುವವು?

ಗಣಿಕಾ: ಇವು ಕ್ಷೀರ ಸಮುದ್ರದಲ್ಲಿ ಹುಟ್ಟುವವು.

ಮುಗ್ಧಸಂಗಾರ್ಯ: ಹಾ ! ಅಂದಲ್ಲೇ ಬಿಳುಪಾಗಿರುವವು. ಒಳ್ಳೇದು ಇವುಗಳನ್ನು ಯಾರು ತಂದುಕೊಟ್ಟರು ?

ಗಣಿಕಾ: ಒಬ್ಬಾನೊಬ್ಬ ಮಹಾತ್ಮ ಪುರುಷನು ತಂದು ಕೊಟ್ಟನು.

ಮುಗ್ಧಸಂಗಾರ್ಯ: ಒಳ್ಳೇದು, ಮೂಗಿನಲ್ಲಿರುವುದು ರುದ್ರಾಕ್ಷಿಯೇನು ?

ಗಣಿಕಾ: ಹೌದು, ಮಹನಿಯಾ ! ಮೂಗಿನಲ್ಲಿರುವುದು ರುದ್ರಾಕ್ಷಿಯೇ.

ಮುಗ್ಧಸಂಗಾರ್ಯ: ಅಮ್ಮಾ ! ನೀನು ಎಂಥಾ ಹುಚ್ಚಿಯು? ಒಂದು ರುದ್ರಾಕ್ಷಿಯನ್ನು ಮಸ್ತಕದಲ್ಲಿ ಧರಿಸಬೇಕೆಂದು ಆರ್ಯರು ಹೇಳುತ್ತಾರೆ. ಆದ್ದರಿಂದ ಅದನ್ನು ಮಸ್ತಕದಲ್ಲಿ ಧರಿಸಿಕೋ. ಮೂಗಿನಲ್ಲಿ ರುದ್ರಾಕ್ಷಿಯನ್ನು ಧರಿಸಿಕೊಳ್ಳುವುದನ್ನು ನಾನು ನೋಡಿಲ್ಲಾ. ಮತ್ತು ಕೇಳಿಲ್ಲಾ. ಇದೇನು ವಿಶೇಷವು?

ಗಣಿಕಾ: ಇದನ್ನು ಶಿವನೇ ಬಲ್ಲನು.

ಮುಗ್ಧಸಂಗಾರ್ಯ: ಒಳ್ಳೇದು, ನೀನು ನನ್ನಂತೆ ಕೌಪೀನವನ್ನು ಯಾಕೆ ಹಾಕಿ ಕೊಂಡಿಲ್ಲಾ?

ಗಣಿಕಾ: (ನಕ್ಕು) ಅವ್ವಯ್ಯಾ ! ಈತನ ಮಾತುಗಳಿಗೆ ನನಗೆ ನಗಿಯೇ ಬರುವುದು. ಮಹನಿಯಾ! ಭವಿಗಳನೋಟವು ನಮ್ಮಮೇಲೆ ಬೀಳಬಾರದೆಂದು ನಮ್ಮ ಸರ್ವಾಂಗಕ್ಕೆ ವಸ್ತ್ರವನ್ನು ಸುತ್ತಿಕೊಂಡಿರುವೆನು.

ಮುಗ್ಧಸಂಗಾರ್ಯ: ಇವರು ಧರಿಸಿಕೊಳ್ಳುವ ಶಿವಲಾಂಛನಗಳು ಅಪೂರ್ವಗಳಾಗಿ ರುವುವು. ಒಳ್ಳೇದು, ಅಮ್ಮಾ! ಶಿವಪೂಜೆಯ ವೇಳೆಯಾಯಿತು. ಸ್ನಾನಕ್ಕೆ ಹೋಗುವಾ ನಡೆ. (ಹೋಗುವರು). ಅಹಾ ಈ ಹೊತ್ತಿನ ಲಿಂಗಪೂಜೆಯು ಬಹು ನೆಟ್ಟಗಾಯಿತು. ಹೀಗೆ ಎಂದೆಂದೂ ಆಗಿದ್ದಿಲ್ಲಾ. (ಆಕೆಯ ಕಡೆಗೆ ನೋಡಿ) ಶಿವ ಭಕ್ತಳೇ ನಾನು ಹೋಗಿ ಬರುತ್ತೇನೆ. ಆದರೆ ನೀನು ಇನ್ನು ಮೇಲೆ ಹೀಗೆ ವರ್ತಿಸು.

ದಿಂಡಿ

ನಿತ್ಯ ಮಾಡುತ ಶಿವಲಿಂಗ ಪೂಜೆಯನ್ನು ॥
ಭೃತ್ಯಭಾವವ ಪಿಡಿ ಜಂಗಮರೊಳಗಿನ್ನು ॥
ಸತ್ಯತನದಿಂದ ಸನ್ಮಾರ್ಗದೊಳಗೆ ನೀನು ॥
ವರ್ತಿಸುತ್ತಲಿ ಪಡಿ ಮೋಕ್ಷಪದವಿಯನ್ನು ॥ ೧ ॥

ಗಣಿಕಾ:

ಪದ–(ಬೈರವಿ, ಆದಿತಾಳ)

ಧನ್ಯಳಾದೆನು ಶಿವಶರಣರ ಬೋಧದಿ ॥ ಪ ॥
ಗುರುತರ ಪಾಪವು ಹರಿದು ಪೋದಿತಹಾ ।
ಪರತರ ಜ್ಞಾನವು । ತ್ವರದಿ
ಭರದಿ ದೊರಕಿತು ಅಹ ॥ ೧ ॥

ಒಳ್ಳೇದು ಮಹನಿಯಾ ಹೋಗಿ ಬರಬಹುದು. (ಎಂದು ನಮಸ್ಕರಿಸುವಳು)

ಮುಗ್ಧಸಂಗಾರ್ಯ: ಅಹಾ ! ಬೆಳಗಾಯಿತು. ಈ ಪ್ರಾತಃಕಾಲವು ಎಷ್ಟು ರಮಣೀಯವಾಗಿ ತೋರುವುದು !

ಪದಾ

ನೆರೆಶೋಭಿಪು ಸಮಯವಿದು । ಪರಿಯಲು ತಿಮಿರಸ ಮೂಹವದು । ಗತಭವಿಯಾದ ವಿದು ॥ ಪಲ್ಲಾ ॥ ಗಿರೀಶ ನಾಮವ ಪರಿಪಠಿಸಲು ಈ । ಪುರವು ಶರಣರುಚ್ಛಸ್ವರದಿ । ಬೆರದಿರಲಿ ನಿದಾಗಿ ॥ ೧ ॥

(ಎಂದು ಹೋಗುವನು).

——

೪ನೇ ಪ್ರವೇಶ

ಬಸವೇಶ್ವರ: ಅಹಾ! ಪ್ರಾತಃಕಾಲವು ಎಷ್ಟು ರಮಣೀಯವಾಗಿ ತೋರುವುದು? ಈ ಕಾಲದಲ್ಲಿ ನನ್ನ ಗುರುಮೂರ್ತಿಯಾದ ಸಂಗಮೇಶ್ವರನ ಸ್ತೋತ್ರ ಮಾಡುವಾ.

ಪದ–(ಚಾಲ–"ಮಜ ಸಮೇರಿಯಾ")

ಭಜಗೌರಿಪತಿಂ ಮಾನಸರೆ । ಶೌರೀಸುನಾಸೀರಧ್ಯಾತ ಪದಾ
ಬ್ಜಾತಮ್ಮುದಾ ॥ ಕರುಣವನಧಿಂ ಶರಣಶರಣಂ । ಮರಣವಿಗ
ತಂ ಧರಣಿಸುರಥಂ । ಹತಪಾಪಂ ಶಂಕರಂ । ಗಿರಿಜಾ ಸುಮು
ಖ ಜಲಜ । ದಿನರರತುಲಿತ ಮಹಿಕಪರಿಲಸದ್ಗುಲಂ । ವಾರ
ಣಾಸುರಾರಿ ಮೀಶ । ಮೂರ್ಖಿಧರ ಗೃಹಂ ॥ ೧ ॥

ಅಹಾ! ಬ್ರಹ್ಮೇಂದ್ರಾದಿ ದೇವತೆಗಳಿಗೆ ಅಸಾಧ್ಯವಾದ ಶಿವಪಾದ ಭಕ್ತಿಯು ಮುಕ್ತಿಯೆಂಬ ಮೇಲ್ಮಂದಿರಕ್ಕೆ ಸೋಪಾನದಂತಿರುವದು. ಲೋಕದಲ್ಲಿ ಶಿವಭಕ್ತಿ ಸಂಪನ್ನನಾದ ಮನುಷ್ಯನಿಗೆ ಅಗಾಧವಾದ ಸಮುದ್ರವು ಮೊಣಕಾಲವುದ್ದ ನೀರಾಗುವದು. ಪ್ರಜ್ವಲಿಸುವ ಬೆಂಕಿಯು ಚಂದನ ಗಂಧದಂತೆ ತಂಪಾಗುವುದು. ಮೃತ್ಯು ಚರಣದಾಸಿಯಾಗುವುದು. ಇದಲ್ಲದೆ **ಹಣೆಬರವು ನೀರಿನ ಮೇಲಿನ ಬರಹದಂತೆ ಆಗುವುದು.** ಆದ್ದರಿಂದ ಮನುಷ್ಯನು ಶಿವಭಕ್ತಿಯೆಂಬ ಸಂಪತ್ತನ್ನು ಗ್ರಹಿಸಬೇಕು. ಶಿವಭಕ್ತಿಹೀನನಾಗಿರತಕ್ಕಂಥವನಿಗೆ ದ್ವಿಪಾದ ಪಶುವೆನ್ನಲಿಕ್ಕೆಬೇಕು. (ಅಷ್ಟರಲ್ಲಿ ಮುಗ್ಧಸಂಗಯ್ಯನು ಬರುವನು. ಅವನಿಗೆ ಬಸವೇಶ್ವರನು ನಮಸ್ಕಾರ ಮಾಡಿ) ಮಹನಿಯಾ ನಿನ್ನೆ ರಾತ್ರಿ ನಡೆದ ವೃತ್ತಾಂತವೇನು?

ಮುಗ್ಧಸಂಗಾರ್ಯ: ಬಸವೇಶಾ ಆ ಸಂಗತಿಯನ್ನು ನಾನು ಏನುಹೇಳಲಿ? ಅದನ್ನು ಪರಮೇಶ್ವರನೇ ಬಲ್ಲನು. ಅಯ್ಯಾ ನೀನು ನನ್ನೊಡನೆ ಬರಲಿಲ್ಲ. ಬಂದಿದ್ದರೆ ನಿನಗಾದರೂ ಆ ಸೌಖ್ಯದೊರೆಯುತ್ತಿತ್ತು. ಏನುಮಾಡುವದದೆ? ನಿನ್ನ ದೈವವಿಲ್ಲಾ. ಆ ಸಂತೋಷ ಸಮಯದಲ್ಲಿ ನಿನ್ನನ್ನು ಸ್ಮರಿಸಿದೆನು. ಬಸವಾ ಆ ಗಣಿಕಾ ಸ್ತ್ರೀಯಳ ಭಕ್ತಿಯು ಆಶ್ಚರ್ಯಕರವಾದದ್ದು ಇರುವದು. ಶಿವ ಪೂಜೆಗಾಗಿಎಷ್ಟು ಸಿದ್ಧತೆಯೋ? ಅಲ್ಲಿ ಅನೇಕ ದಾಸಿಯರು ಇರುವರು. ಒಬ್ಬಳು ಗಂಧವನ್ನು, ಒಬ್ಬಳು ಪುಷ್ಪವನ್ನು, ಒಬ್ಬಳು ನೀರನ್ನು, ಈ ರೀತಿಯಾಗಿ ಸಿದ್ಧತೆ ಪಡಿಸುತ್ತಿರುವರು. ನಿನ್ನಿನ ರಾತ್ರೆಯಲ್ಲೆಲ್ಲಾ ಆ ಮನೆಯಲ್ಲಿ ಪರಮ ಹರುಷದಿಂದ ಶಿವಪೂಜೆಯನ್ನು ಮಾಡಿದೆನು. ನೋಡು ಹಗಲಿರುಳೆನ್ನದೆ ಹೀಗೆ ಸೂಳೆಗಾರಿಕೆಯನ್ನು ಮಾಡಿಕೊಂಡಿರುವ ಭಕ್ತರಿಗೆ ಇನ್ನು ಬೇರೆ ಸುಖಗಳು ಸೊಗಸಾದಾವೇ? ಇರಲಿ, ನೀನು ಹೀಗೇ ಎಷ್ಟುಸಾರೆ ಸೂಳೇಗಾರಿಕೆಯನ್ನು ಮಾಡಿರುವಿ? ಮನಃಪೂರ್ವಕವಾಗಿ ಹೇಳು.

ಬಸವೇಶ್ವರ: ಅಹಾ! ವಿಕಾರ ದೂರನಾಗಿ ಸ್ರಕ್ಚಂದ್ರನವನಿತಾದಿ ವಿಷಯರಹಿತನಾದ

ಈ ಆಚಾರ್ಯ ಸ್ವಭಾವವು ಎಂಥಾ ಅಲೌಕಿಕವಾದದ್ದು?

ಮುಗ್ಧಸಂಗಾರ್ಯ: ಹಾ! ಹಾ!! ಯಾಕೆ ಸುಮ್ಮನೆ ಕುಳಿತಿ? ನನಗೆ ಹೇಳಬಾರದೆಂದೋ? ನೀನು ಹೇಳದಿದ್ದರೂ ನಾನು ನಿನ್ನಿನ ರಾತ್ರಿಯಲ್ಲಿ ಎಲ್ಲಾ ತಿಳಕೊಂಡೆನು. ಹಾಗಿಲ್ಲದಿದ್ದರೆ ನಿನಗೆ ಈ ಶಿವಭಕ್ತಿ ಸಂಪತ್ತು ಹ್ಯಾಗೆ ದೊರೆಯಬೇಕು?

ಬಸವೇಶ್ವರ: ಈ ಪುಣ್ಯಾತ್ಮನು ಮನಸ್ಸಿನಿಂದ ಶಿವಧ್ಯಾನ, ವಾಕ್ಯದಿಂದ ಶಿವಮಂತ್ರಜಪ, ಕಾರ್ಯದಿಂದ ಶಿವಪೂಜಾ, ಅಲ್ಲದೆ ಮತ್ತೊಂದರಲ್ಲಿ ಗುರ್ತಿಲ್ಲಾ. ಇರಲಿ, ಮಹನೀಯಾ ! ನಾನು ಸ್ನಾನವನ್ನು ತೀರಿಸಿಕೊಂಡು ರಾಜಧಾನಿಗೆ ಹೋಗಲಿಕ್ಕೆ ವೇಳೆಯಾಗುವುದು. ತಸ್ಮಾತ್ ಶಿವಪೂಜೆಯನ್ನು ಮಾಡಲು ಹೋಗೋಣ ನಡೆಯಿರಿ.

ಮುಗ್ಧಸಂಗಾರ್ಯ: ನಾನು ನಿನ್ನಲ್ಲಿ ಶಿವಪೂಜೆಯನ್ನು ಮಾಡುವದಿಲ್ಲಾ, ನಾನು ಆ ಸ್ತ್ರೀಯಳಮನೆಗೇ ಹೋಗುತ್ತೇನೆ. ಆದ್ದರಿಂದ ನೀನೊಬ್ಬನೇ ಹೋಗು.

ಬಸವೇಶ್ವರ: ಮಹನೀಯಾ ಹಾಗೇ ಆಗಲಿ.

ಮುಗ್ಧಸಂಗಾರ್ಯ:

ಪದಾ–(ಚಾಲ–"ಧಿಮಾ ಧಿಮಾ ಚಲೋರೆ")

ಪಾಹಿ ಪಾಹಿ ಪುರಾರೆ ಮಾಮುರೇಶ್ವರಾ । ಭೋಯತೀಂದ್ರಾ ।
ಗಿರಿಂದ್ರಾದಿವಾಸಪರಾ । ಶುಭಕರ ಗುರುವರಾಮೋದಕ । ರಾಕಾ
ಯಜಹರ । ಹೇ ಕರುಣಾಬ್ಧೆ ಪರಿಹತ ಪಾಕವಿವಂದಿತ ಪಾದಕ ।
ಶ್ರೀಕರ ನಿಷ್ಕಾಮನ ತ್ರೈಲೋಕಪತೀಶಾ ॥ ೧ ॥

(ಹೋಗುವನು.)

ಬಸವೇಶ್ವರ: (ಗಾಬರಿಯಾಗಿ) ಹಾ ! ಇದೇನು? ಹೊರಗೆ ಗಾನಪ್ರವೀಣ ನಾಗಿ ಶ್ರೀಮತ್ ಪರಮೇಶ್ವರನನ್ನು ಗಾನದಿಂದ ಮೆಚ್ಚಿಸಿ ಪ್ರತಿದಿನದಲ್ಲಿ ಆ ಪರಮೇಶ್ವರನಿಂದ ಹೊನ್ನನ್ನು ಪಡೆದುಕೊಂಡು ಜಂಗಮಸಂತರ್ಪಣವನ್ನು ಮಾಡುವ **ಕಿನ್ನರೇಶ**ನೆಂಬ ಒಬ್ಬ ಶಿವಶರಣನು **ಉಡೂರೆಂಬ** ಪಟ್ಟಣದಿಂದ ನಿನ್ನ ದರ್ಶನಾರ್ಥಿಯಾಗಿ ಬರುವನೆಂದು ನನ್ನ ಪ್ರಾಣಸ್ವರೂಪಿಯಾದ ಲಿಂಗಮೂರ್ತಿಯು ನನಗೆ ಸೂಚಿಸಿದನು. ಒಳ್ಳೇದು ಮಾರ್ಗಪ್ರಯಾಸವುಳ್ಳ ಮಹನೀಯನನ್ನು ಅತ್ತಿಂದತ್ತೇ ಶಿವಪೂಜಾಮಂದಿರಕ್ಕೆ ಕರೆದುಕೊಂಡು ಹೋಗಿ ಆ ಪೂಜ್ಯಕನನ್ನು

ಸತ್ಕರಿಸುತ್ತೇನೆ. (ಎಂದು ಹೋಗುವನು.)

(ಕಿನ್ನರೇಶನು ಸ್ತೋತ್ರಮಾಡುತ್ತ ಬರುವನು).

ಕಿನ್ನರೇಶ:

ಪದಾ–ಚಾಲ–("ಮರಾಂಧೆ ಮಹಾ")

ರಮಾರಮಣಾ । ಪೂಜಿತ ಚರಣಾ । ಪಾವನಕರಣಾ ।
ಸಂಹತ ಕಾಲಾ । ಶಂಕರ ನೀಲಾ ।
ಕಂಧರರೇಲಾ । ಲೋದ್ಭವಮೌಲೆ ॥ ೧ ॥
ಗಿರಿವರವಾಸಾ । ಗಿರಿವರಜೇಶಾ ।
ಗುರುವರಕೇಶಾ ।ವಸುತನಾಶಾ ॥ ೨ ॥

ಅಹಾ! ದ್ವಿತೀಯ ಶಂಭುವಾದ ಬಸವೇಶ್ವರನ ಮಹಿಮಾತಿಶಯವನ್ನು ಅವಲೋಕಿಸಬೇಕೆಂಬ ಕಾಂಕ್ಷೆಯಿಂದ ಯಾವ ಪುರ ಪ್ರಯಾಣೋನ್ಮುಖನಾಗಿದ್ದಾನೋ! ಅದೇ ಕಲ್ಯಾಣಪುರವು ಇದೇ ಎಂಬುದಾಗಿ ತೋರುತ್ತದೆ. ಅಹಾ! ಎಂಥ ರಮ್ಯವಾಗಿ ತೋರುವುದು. ಒಳ್ಳೇದು ಬಸವೇಶ್ವರನ ದರ್ಶನ ತೆಗೆದುಕೊಳ್ಳುವಾ.

(ಪುನಃ ಮೇಲಿನ ಪದವನ್ನು ಅನ್ನುತ್ತಾ ಹೋಗುವನು).

೩ ನೇ ಅಂಕ ಸಮಾಪ್ತ.

===***====***====

೪ ನೇ ಅಂಕ

೧ನೇ ಪ್ರವೇಶ

(ಸ್ಥಳ–ಬೀದಿ)

ಗೋವಿಂದರಾವ: ಅಯ್ಯೋ ಏನುಮಾಡುವದದೆ. ನಾನು ನಿನ್ನಿನ ದಿವಸ ನಮಸ್ಕಾರಕ್ಕೆಂದು ದೇವಾಲಯಕ್ಕೆ ಹೋಗಿ ತಿರುಗಿಬರುವ ರಾಜಮಾರ್ಗದಲ್ಲಿ ಎಡಭಾಗಕ್ಕೆ ಇದ್ದ ಗಣಿಕಾ ಸ್ತ್ರೀಯರ ಕೇರಿಯಲ್ಲಿರುವ ವಾರಣ ಸಾನಿಯೆಂಬ ವೇಶ್ಯಾ ಸ್ತ್ರೀಯಳನ್ನು ಕಂಡೆನು. ಓಹೋ! ಅವಳೆಂಥಾ ರೂಪವತಿಯೋ ? ತೊಂಡೆ ಹಣ್ಣಿನಂತಿರುವ ತುಟಿಗಳಿಂದಲೂ, ಚಂದ್ರನಂತಿರುವ ಮುಖದಿಂದಲೂ, ಒಪ್ಪುವಳು. ಅಹಾ ! ಆಕಿಯು ಮದನ ಬಾಣದಂತಿರುವ ತನ್ನ ಕಟಾಕ್ಷಗಳಿಂದ ನನ್ನ ಮನಸ್ಸೆಂಬ ಮೃಗವನ್ನು ಹೊಡೆದು ತನ್ನ ಸ್ವಾಧೀನ ಮಾಡಿಕೊಂಡಳು. ಅಯ್ಯೋ ಈ ಸಂಪತ್ತು, ಈ ತಾರುಣ್ಯ, ಈ ವಿದ್ಯಾ, ಈ ಸೌಂದರ್ಯ ಇವೆಲ್ಲಾ ಇದ್ದು ಅಂಥಾ ಸ್ತ್ರೀಯ ಆಲಿಂಗನವಿಲ್ಲದ್ದರಿಂದ ಇವೆಲ್ಲಾ ನಿಷ್ಫಲಗಳೇ ಸರಿ. ಅಯ್ಯೋ! ಹ್ಯಾಗೆ ಮಾಡಬೇಕು? (ಸ್ವಲ್ಪ ಯೋಚಿಸಿ) ಇದಕ್ಯಾಕೆ ಇಷ್ಟು ಆಲೋಚನೆಯು? ಹೇಳಿ ಕೇಳಿ ಅವಳು ವೇಶ್ಯಾ ಸ್ತ್ರೀಯಳು. ದ್ರವ್ಯವಂದಿದ್ದರಾಯಿತು. ಬೇಕಾದವರು ಹೋಗಲಿ. (ಅತ್ತಿತ್ತ ನೋಡಿ) ಓಹೋ! ನಾನು ವಿಚಾರಮಾಡುತ್ತ ಅದೇ ವೇಶ್ಯಾ ಸ್ತ್ರೀಯಳ ಮನಿ ಹತ್ತರವೇ ಬಂದೆನು.

===

೨ನೇ ಪ್ರವೇಶ

(ಸ್ಥಳ–ವಾರಣಸಾನಿಯ ಮಂದಿರ)

ವಾರಣಸಾನಿ: ಅವ್ವಯ್ಯಾ! ಈಗಿನ ಪುರುಷರು ಎಂಥಾ ಠಕ್ಕರು. ಇಲ್ಲಿಯ ವರೆಗೂ ನನ್ನೊಡನೆ ಇದ್ದ ಧನಂಜಯನೆಂಬ ಒಬ್ಬ ವಿಟ ಪುರಷನು ತಾನು

ಮೊದಲು ಬರುವಾಗ್ಗೆ ನಾನು ಧನವಂತನೂ ವಿದ್ಯಾವಂತನೂ, ನಂಬಿಗೆಯವನೂ ಎಂದು ಹೇಳಿದನು. ಇದಲ್ಲದೆ ನಿನಗೆ ಅಷ್ಟು ಧನವನ್ನು ಕೊಡುತ್ತೇನೆ, ಇಷ್ಟು ಧನವನ್ನು ಕೊಡುತ್ತೇನೆ, ಎಂದು ಬಹಳ ಹೇಳಿ ನನ್ನನ್ನು ಮೋಸಗೊಳಿಸಿ ನನ್ನಲ್ಲಿ ಎರಡು ತಿಂಗಳವರೆಗೆ ಇದ್ದು ನಾನು ಏನಾದರೂ ಕೇಳಿದರೆ ನಾಲ್ಕು ಸವಿ ಮಾತುಗಳನ್ನಾಡಿ ನಿನ್ನಿನ ದಿವಸ ಈ ಕಲ್ಯಾಣಪಟ್ಟಣವನ್ನು ಬಿಟ್ಟು ಓಡಿ ಹೋಗಿರುವನು. ಏನುಮಾಡಬೇಕು? ಅವನಾಡುವ ಮಾತುಗಳಿಗೆ ವ್ಯರ್ಥವಾಗಿ ಮರುಳಾದೆನು. ಅವನ ವಿದ್ಯೆಯು ನನಗೇನಾದರೂ ತಿಳಿಸಿಕೊಟ್ಟಿತೋ? ಅವನ ಧನವು ನನ್ನ ದರಿದ್ರತನವನ್ನು ದೂರಮಾಡಿತೇ? ಉಪಾಯವಿಲ್ಲಾ. ಇನ್ನು ಮೇಲೆ ಬರುವ ಪರಪುರುಷರು ಎಷ್ಟು ಉಪಚಾರದ ಮಾತುಗಳನ್ನಾಡಿದರೂ ಅವುಗಳಿಗೆ ಮನಸ್ಸು ಹಾಕಬಾರದು. ಆದರೆ ಕಬ್ಬನ್ನು ಗಾಣದಲ್ಲಿ ಹಾಕಲು ಅದು ರಸವನ್ನು ಹ್ಯಾಗೆ ಹೀರಿಕೊಂಡು ಸೊಪ್ಪೆಯನ್ನು ಹೊರಚಲ್ಲುವದೋ ಅದರಂತೆ ವಿಟಪುರಷರಲ್ಲಿದ್ದ ಸರ್ವ ಧನವನ್ನು ಸೆಳೆದುಕೊಳ್ಳುವದಲ್ಲದೆ ಅವರನ್ನು ನಾನು ಬೆರಳಿನಿಂದ ತೋರಿಸಿದ ಕೆಲಸವನ್ನು ಮಾಡುವಂತೆ ಮಾಡುವೆನು. ಅಂದರೆ ನನ್ನ ಮನಸ್ಸಿನಂತಾಗುವುದು.

ಗೋವಿಂದರಾವ:

ಪದ–(ಚಾಲ–"ಜಸಿ ಸುರಾ ಸುಧಾ")

ಜಲರಾಶಿಸುತನೊಕುಶಯವೋ । ದರ್ಪಣವೋ ॥
ವಿಲಸದಾ ಸ್ಯವೋರಮ್ಯ । ನೀಲಫಣಿ ಸ್ಥೂಲವೇಣಿಯ ॥ ೧ ॥
ಅಂಬುಜಗ ಳೋ ಮದನಕ । ಲಂಬಗಳೋಸಾ ॥
ರಾಂಬಕಗಳೋಸು ವರ್ಣ । ಕುಂಭಗಳೋಕುಚ । ಬಿಂಬಗಳಿವೋ ॥ ೨ ॥

(ಸ್ವಗತ) ಅಹಾ! ಇದೇನು ನನ್ನನ್ನು ಕಣ್ಣೆತ್ತಿ ಸಹ ನೋಡಲೊಲ್ಲಳು. ಒಳ್ಳೇದು ಮಾತನಾಡಿಸುವಾ (ವಾರಣಸಾನಿಗೆ) ತರುಣೀಮಣೀ ! ನಿನ್ನ ಸೌಂದರ್ಯಕ್ಕೆ ಬೆರಗಾಗಿ ಬಂದೆನು, ಸ್ವಲ್ಪ ಮಾತನಾಡು.

ವಾರಣಸಾನಿ: ಅವ್ವಯ್ಯಾ ! ಇವರಾರೆ? (ಮಂಚದಿಂದ ಎದ್ದು) ಪುರಷ ಶ್ರೇಷ್ಠರೇ! ತಾವು ಯಾರು? ಇತ್ತ ಬರಬೇಕು.

ಗೋ. ಸಾಂಡೆ: ಅಹಾ ಎಂಥಾ ಸೌಮ್ಯಾಕಾರವಿದು? ಈ ನಾರಿಮಣಿಯ ಮೃದು ಭಾಷಣಗಳನ್ನು ಕೇಳಿ ಯಾರು ಸೋಲರು? ಹಾ ! ಇದೇನು? ಈ

ಕೋಮಲಾಂಗಿಯು ಪ್ರಶ್ನಕ್ಕೆ ಉತ್ತರವನ್ನು ಕೊಡಲಿಲ್ಲ. ಹೇ ಪ್ರಮುದೆ! ನಾನು ಯಾರೆಂಬುದು ನಿನಗೆ ಗೊತ್ತಿಲ್ಲವೇನು? ನಾನೊಬ್ಬ ಧನಿಕ ಪುತ್ರನು. ನನ್ನ ಹೆಸರು ಗೋವಿಂದರಾವ ಸಾಂಡೇ ಎಂದೆನ್ನುವರು.

ವಾರಣಸಾನಿ: ತಾವು ಇಲ್ಲಿಗೆ ಬಂದ ಕಾರಣವೇನು?

ಸಾಂಡೇ: ಹಾ! ಇದೇನು ಬಂದ ಕಾರಣವೇನೆಂದು ಕೇಳುವಿ? ನಿನಗೆ ತಿಳಿಯುವದಿಲ್ಲವೇನು? ತೃಷೆಯುಳ್ಳ ಮನುಷ್ಯನು ತೃಷಾಪರಿಹಾರಾರ್ಥವಾಗಿ ಜಲಪ್ರದೇಶಕ್ಕೆ ಬರುವದೇ ಸ್ವಭಾವವು.

ವಾರಣಸಾನಿ: (ಕೆಳಗೆ ಮುಖವನ್ನು ಮಾಡಿ) ಈ ಮೃಗವು ಮಾತ್ರ ಬಲೆಯಲ್ಲಿ ಬೀಳುವಂತೆ ಕಾಣುತ್ತದೆ.

ಗೋ. ಸಾಂಡೇ: ("ಜಲರಾಸಿಸೂತ" ಎಂಬ ಹಿಂದಿನ ಪದವನ್ನು ಅನ್ನುತ್ತಾನೆ) ಯಾಕೆ? ಏನೋ ವಿಚಾರಮಾಡುವಂತೆ ಕಾಣುತ್ತದೆ. ನೀನು ಮನಸ್ಸಿನಲ್ಲಿ ಇವನು ಕಪಟಿಯೆಂದು ವಿಚಾರಿಸುವಿಏನು ? ಅಲ್ಲ ನಾನು ಮಹಾನಿಷ್ಕಪಟಿಯು. ರೂಪವಂತನಲ್ಲೆಂದು ವಿಚಾರಮಾಡುವೆಯೇನು? ನೋಡು. ಕೇವಲ ಮನ್ಮಥನೇ ನಾನು. ನಿನಗೆ ಸರಿಯಾದ ಪ್ರಾಯದವನಲ್ಲೆಂದು ಯೋಚಿಸುವೆನು? ಈಗ ನನಗೆ ಇಪ್ಪತ್ತೆರಡು ವರ್ಷಗಳು ನಡಿಯುತ್ತವೆ.

ವಾರಣಸಾನಿ: ಅಹಾ! ಪೌರುಷವು ನಡೆದಂತಾಯಿತು. ಪುರುಷರು ಕಾರ್ಯಕೊನೆಗಾಣುವವರೆಗೆ ಇಂಥ ಸವಿಮಾತುಗಳನ್ನು ಆಡುತ್ತಾರೆ. ಅದಕ್ಕಂತೂ ಈಡೇ ಇಲ್ಲ. ಆದ್ದರಿಂದಲೇ ನಮ್ಮ ಜಾತಿಯವರು ಇಂಥಾ ಕಾರ್ಯಸಾಧಕರ ಮಾತಿಗೆ ಮರುಳಾಗಿ ತಿನ್ನಲಿಕ್ಕೆ ಅಶನವಿಲ್ಲದೆ ಆಭರಣಗಳನ್ನು ಮಾರಿ ಹೊಟ್ಟೆ ತುಂಬಿಕೊಂಡು ಅಂತ್ಯಕ್ಕೆ ಗತಿಗಾಣದೆ ತಿರುಗುವರು.

ಗೋ. ಸಾಂಡೇ: ಸುಂದರೀ ಹೀಗ್ಯಾಕೆ ಮೌನದಿಂದಿರುವಿ? ನಾನು ದರಿದ್ರನೆಂಬ ಸಂದೇಹ ಬಂದಿರುವುದೇ? ಹಾಗಾದರೆ ಕೇಳು.

ಪದಾ–(ಚಾಲ–"ದೂರಿರು ಖೂಳನೆ")

ಕಾಮ ಸುಕಾಮಿನಿ ಲಾಲಿಸೆ ನಿ ।
ಪ್ರೇಮಾದಿಂದೆ ಸಾಮಜಯಾನೆ ॥ ಪಲ್ಲಾ ॥

ಹೇ ಶಶಿವಕ್ತ್ರೆ ತ್ವದಾಶಾ ಸಮುದ್ರಕ್ಕೆ । ಸಾಶೇಸುವನು
ಬಂಧಿಸುವೆನು ಧನದಿ ॥ ೧ ॥

ಹೀಗಿದ್ದು ಮತ್ತೇನು ಆಲೋಚನೆಯು?

ವಾರಣಸಾನಿ: ವಿಟಸೇಖರಾ ! ಯೋಚನೆ ಏನೂ ಇಲ್ಲಾ. ತಾವು ನಿಷ್ಕಪಟಿಗಳು ರೂಪವಂತರು ನನಗೆ ಸರಿಯಾದ ಪ್ರಾಯದವರು. ಇದಲ್ಲದೆ ಧನವಂತರಿರುವಿರಿ. ಆದರೆ–

ಗೋ. ಸಾಂಡೇ: ಇಷ್ಟೆಲ್ಲಾ ಪ್ರತ್ಯಕ್ಷವಿದ್ದು "ಆದರೆ" ಯಾಕೆ? ನನ್ನಿಂದ ನಿನಗೆ ಯೋಗ್ಯ ಧನಪ್ರಾಪ್ತಿಯಾಗಲಿಕ್ಕಿಲ್ಲೆಂಬ ಸಂಶಯ ಉಂಟೇನು? ನಿನ್ನ ಆಶೆಯೆಂಬ ಸಮುದ್ರಕ್ಕೆ ಧನದಿಂದ ಶೇತುವೆಯನ್ನು ಕಟ್ಟುವೆನೆಂದು ಮೊದಲೇ ಹೇಳಲಿಲ್ಲವೇ ? ಅದನ್ನು ಮರೆತುಬಿಟ್ಟಿಯಾ ಏನು?

ವಾರಣಸಾನಿ: ಅಹಾ ! ಸ್ತ್ರೀಯಳನ್ನು ಮರುಳುಮಾಡುವ ಈ ಮಾತು ಗಳನ್ನು ತಾವು ಎಲ್ಲಿ ಕಲಿತಿರುವಿರಿ? ನನ್ನ ಮುಂದೆ ಈ ಸಾಹಸವನ್ನು ತೋರಿಸಬೇಕಾದರೆ ತಮಗೆ ಬಹಳ ಶ್ರಮವಾಗಿರಬಹುದು. ಇಷ್ಟರಮೇಲಿಂದಲೆ ತಮ್ಮ ನಿಜಸ್ಥಿತಿಯು ನನಗೆ ತಿಳಿಯಿತು. ಇನ್ನುಮೇಲೆ ಈ ಪೌರುಷವನ್ನು ಸಾಕುಮಾಡಬೇಕು.

ಗೋ. ಸಾಂಡೇ: ಸುಂದರೀ! ಹೀಗೆ ನನ್ನಲ್ಲಿ ಆಶೆಯನ್ನು ತೊರಿಯಬೇಡಾ. ಸ್ವಲ್ಪ ಕೃಪಾದೃಷ್ಟಿಯಿಂದ ಅವಲೋಕಿಸು. ಕೋಮಲಾಂಗಿ–

ಪದ–(ಚಾಲ–"ಅಗ ದೇ ದೇ")

ಸಖಿ ಬಾ ಬಾ ಬಾ ಶುಕ । ಸುಖಕರ ವಾಣಿ ಬಾ ।
ಮುಖಚುಂಬನವನ್ನೀಯೇ ॥

ವಾರಣಸಾನಿ:

ಹಾಸರಿ ಕಾರ್ಯವ । ನೀ ಸಾಧಿಸಲತಿ ।
ಮೋಸದ ಮಾತು ಗಳಂ । ಈ ಸರಸ ತನದಿ ।
ಈಸ ನಾಡುವರೆ । ಭಾಸುರ ದೇಹನೆ ಸಾಕೈ ॥

ಗೋ. ಸಾಂಡೆ:

ನೆರೆನಾರೀಮಣಿ । ಭರದಿ ವಿಚಾರಿಸು ।

ಪುರುಷರೋಳ್ ನಿಷ್ಕಪಟ । ಇರುತಿರಲಾಸೀ ।
ಪರಿ ಹೀನರಿಗೆ । ಸರಿಮಾಡುವರೆಕಾಂತೇ ॥ ೧ ॥

ಪ್ರಿಯೆ! ಈ ತನುಮನಧನಗಳನ್ನು ನಿನ್ನ ಸ್ವಾಧೀನ ಮಾಡುವೆನು. ಇನ್ನಾದರೂ ತೀರಿತಿಲ್ಲೋ?

ವಾರಣಸಾನಿ: ಹುಂ! ಹುಂ!! ಇಂಥ ಮಾತಿಗೆ ನಾನೇನು ಬಲಿಯಲ್ಲಿ ಬೀಳುವುದಿಲ್ಲ.

ಗೋ. ಸಾಂಡೆ: ಹಾಗಾದರೆ ವಚನವನ್ನು ಕೊಡಬೇಕೇನು? ನಾನು ಎಲ್ಲಿಯವರಿಗೆ ಜೀವಂತನಾಗಿರುವೆನೋ ಅಲ್ಲಿಯವರಿಗೆ ನನ್ನ ತನುವನ್ನು, ಧನವನ್ನು, ಮನವನ್ನು ನಿನ್ನ ಸ್ವಾಧೀನ ಮಾಡುವೆನು. ಇಗೋ ತೆಗೆದುಕೋ ವಚನವನ್ನು.

ವಾರಣಸಾನಿ: ಇಂಥಾ ವಚನದಿಂದೇನು ಪ್ರಯೋಜನವು?

ಗೋ ಸಾಂಡೆ: ಅಂದರೇನು?

ವಾರಣಸಾನಿ: ನಿಮ್ಮ ಕುಲದೇವರ ಸಾಕ್ಷಿಯಾಗಿ ತನುಮನಧನವನ್ನು ಜೀವ ಇರುವವರೆಗೂ ನಿನ್ನ ಸ್ವಾಧೀನವೆಂದು ವಚನ ಕೊಟ್ಟರೆ ನನಗೆ ನಂಬಿಕೆಯಾಗುವುದು.

ಗೋ. ಸಾಂಡೆ: ಇದಾದರೇನು ಅಸಾಧ್ಯವು? ನನ್ನ ಕುಲಸ್ವಾಮಿಯಾಗಿ

ಪದ–(ಚಾಲ– "ವಾರಿಜಾವುರೆ")

ಪರಿಗ್ರಹಿಸೀಗಲೆ ಸ್ಮರನಾರಿಯೆ ವಚನವ ।
ಸಾರಸಾರಂಬಿಕೆ ಮುದದಲಿ ॥ ಪಲ್ಲ ॥
ತನುಮನಧನವನು । ಸನುಮತದಿಂದಲಿ ।
ನಿನಗರ್ಪಿಸುವೆನು ನಾ ಪರಿ ।
ವಚನ ದೊರೆದು ನಯದಿ ಮನದೊಳು ಗುಣವತಿ ॥ ೧ ॥

ವಾರಣಸಾನಿ: ಒಳ್ಳೇದು ಧನಿಕ ಶಿರೋಮಣಿ ಇನ್ನು ನಡೆಯಿರಿ.

ಗೋ. ಸಾಂಡೇ: ನಡೆ ಹಾಗಾದರೆ.

(ಪದ–ಬ್ಯಾಂಡ.)

ಮನದಿಕಡುಹರುಷವ ಪಡದೀವು ನೀಸುಯೋಗದಿ ।
ದೇವದಯ ದಿನಾವು ಧನ್ಯನೀಸುಯೋಗದಿ ॥
ಕ್ರೂರಮನ್ಮಥತಾಪವನೀಗ । ಪರಿಹರಿಸಲಾಲಯಕೀಗ ॥
ಪೋಗುತಸುರತಾ । ಭೋಗದಿವಿರ ತಾ ॥
ರಾಗುತ್ತಲೆಗತ ತಾಪರಾಗುವ ॥ ೧ ॥

===

೩ ನೇ ಪ್ರವೇಶ

ಕಿನ್ನರೇಶ: ಅಹಾ ಬಸವೇಶ್ವರನು ಎಂಥಾ ಮಹಿಮಾಶಾಲಿಯು? ಆತನ ಭಕ್ತಿಯು ವಾಚ್ಯಾಮಗೋಚರವಿರುವುದು.

ಪದ–(ರಾಗ–ಕಾನಡಾ ತ್ರಿವಿಡಿ)

ಶಿವರೂಪ ಜಗದಾವೃತಕೀರ್ತಿ ।
ಪಾವನದೇಹ ಬಸವೇಶನೆ ಧನ್ಯ ॥ ಪ ॥
ಖಂಡಿತ ಕುಲಷ್ಯಾಜ್ಯಾಲ ಮಿತಗುಣ । ಶೀಲನ ಭಾವವ ॥
ನೂಹಿಸಲಶಕ್ಯ ॥ ೧ ॥

ಒಳ್ಳೇದು. ಈ ಕಲ್ಯಾಣಪಟ್ಟಣದಲ್ಲಿ ಸ್ಥಾನೀಭೂತವಾದ ತ್ರಿಪುರಾಂತಕೇಶ್ವರನ ದೇವಾಲಯಕ್ಕೆ ಹೋಗುವಾ (ಎ.. ಯ ಹೋಗುವನು)

ಗೋ. ಸಾಂಡೇ ಅಯ್ಯೋ! ಈ ವಿಟತನಕ್ಕೆ ಬೆಂಕಿಹಚ್ಚಲಿ ! ಈ ವಾರಣಸಾನಿ ಎಂಬ ವೇಶ್ಯಾ ಸ್ತ್ರೀಯು ಯಂಥಾನೀಚಳು? ನಾನು ಈಕೆಯು ಬೇಡಿದಷ್ಟು ಹಣವನ್ನು ಕೊಟ್ಟು ಕೊಟ್ಟೂ ಹೇಳಿದಷ್ಟು ಕೆಲಸವನ್ನು ಮಾಡಿ ಮಾಡಿ ಮತ್ತು ನನ್ನ ಮೇಲೆ ಸಿಡಿಪಿಡಿಯೇ ! ಈಕೆಯ ಸಲುವಾಗಿ ತಂದೆತಾಯಿಗಳ ಕೂಡ ಕಲಹವನ್ನು ಬೆಳಸಿ ಲೋಕಾಪವಾದಕ್ಕೆ ಗುರಿಯಾಗಿ ಜನರಿಗೆ ಮುಖವನ್ನು ತೋರಿಸಲಿಕ್ಕೆ ಸಹ ನಾಚಿಕೆ ಬರುವದು. ಮತ್ತು ಈಕಿಗೆ ಕೊಟ್ಟು ಕೊಟ್ಟು ಧನವು ಹಾಳಾಯಿತು. ಬಿಟ್ಟೇನೆಂದರೆ ಕುಲಸ್ವಾಮಿಯ ಸಾಕ್ಷಿಯಾಗಿ ತನುಮನಧನಗಳನ್ನು ನಿನ್ನವೆಂದು ವಚನಕೊಟ್ಟಿರುವೆನು. ಅಂದ ಬಳಿಕ ವಚನವನ್ನು ಹ್ಯಾಗೆ ಮುರಿಯಬೇಕು? ಇವುಗಳನ್ನೆಲ್ಲಾ

ಯೋಚಿಸಿದರೆ ಮನಸ್ಸಿಗೆ ಬಹಳೇ ಬೇಸರವಾಗುವುದು. ಇದನ್ನು ಕಳೆದುಕೊಳ್ಳಬೇಕೆಂದು ಯಾವುದಾದರೊಂದು ವಿಶ್ರಾಂತಿ ಸ್ಥಳಕ್ಕೆ ಹೋದರೆ ಅಲ್ಲಿಗೆ ಬಂದು ಅಲ್ಲಿಂದ ಎಳೆದುಕೊಂಡು ಬಂದು ಈ ಗಾದಿಯನ್ನು ಸುತ್ತಿಡು, ಜಮುಖಾನವನ್ನು ಹಾಸು, ತಬಕವನ್ನು ಬೆಳಗು, ಮತ್ತು ಪೀಕದಾನಿ ತೊಳಿ. ಇವೇ ಮೊದಲಾದ ಕೆಲಸಗಳನ್ನು ನನ್ನಿಂದ ಮಾಡಿಸಿಕೊಳ್ಳುವಳು. ಒಲ್ಲೇನಂದರೆ ಬಿಡುವಂತಿಲ್ಲಾ. ಹಾ! ಅವಳೇ ಬಂದಳು. ಆಕಿಯು ಹೇಳಿದ ಪ್ರಕಾರ ಗಾದಿಯನ್ನು ಸುತ್ತಿಡುತ್ತೇನೆ. ಹಾಗೆ ಇಟ್ಟರೆ ನನ್ನ ಪರಿಣಾಮ ನೆಟ್ಟಗಾಗುವುದಿಲ್ಲ. (ಎಂದು ಗಾದಿಯನ್ನು ಸುತ್ತಿಡುವಷ್ಟರಲ್ಲಿ ವಾರಣಸಾನಿ ಬರುವಳು.)

ವಾರಣಸಾನಿ: ನಾನು ನಿನಗೆ ಈ ಕೆಲಸ ಹೇಳಿ ಎಷ್ಟು ಹೊತ್ತಾಯಿತು? ಏನು! ಮಾಡಿಲ್ಲವೇ? ನೀನು ಎಂಥಾ ಮಂದನಿರುವಿ?

ಸಾಂಡೇ: (ಸ್ವಗತ) ಅಹಾ ! ಈಕೆಯ ಮುಖವನ್ನು ನೋಡಲು ಈ ಹೊತ್ತು ನಮ್ಮ ಶ್ರಾದ್ಧವು ನೆಟ್ಟಗಾಗುವಂತೆ ತೋರುತ್ತದೆ.

ವಾರಣಸಾನಿ: ಈಹೊತ್ತು ನಮ್ಮ ಕುಲಸ್ವಾಮಿಯ ಹಬ್ಬವಿರುವದು. ಆದ್ದರಿಂದ ನೀನು ಬಂದು ದೊಡ್ಡದಾದ ಕುರಿಯನ್ನು ನಮ್ಮ ಕುಲಸ್ವಾಮಿಗೆ ಆಹುತಿಗಾಗಿ ತೆಗೆದುಕೊಂಡು ಬಾ. ತಿಳಿಯಿತೆ?

ಸಾಂಡೇ: ಅಯ್ಯೋ ಏನು ಮಾಡಲಿ? ನಾನು ಉತ್ತಮ ಜಾತಿಯವನಿದ್ದು ಈ ನೀಚಳಿಗೆ ದೇವರ ಆಹುತಿಗಾಗಿ ಕುರಿಯನ್ನು ತಂದು ಕೊಡಬೇಕಂತೆ. ಏನು ಮಾಡಬೇಕು? ಇದನ್ನು ಕಂಡರೆ ಜನರು ದೂಷಿಸಲಿಕ್ಕಿಲ್ಲವೇ? ಇರಲಿ, ಈ ಕಾರ್ಯವನ್ನು ಬಿಟ್ಟು ಮತ್ತೊಂದು, ಮನೆಯಲ್ಲಿರುವ ಕೆಲಸವನ್ನು ಮಾಡುವೆ ನೆಂದು ಈ ಸ್ತ್ರೀಯಳಿಗೆ ಹೇಳೇನೆ, ನನ್ನ ಗತಿ ನೆಟ್ಟಗಾಗಲಿಕ್ಕಿಲ್ಲಾ. ಅಂತೂ ಒಮ್ಮೆ ಹೇಳಿ ನೋಡುವೆನು. ಪ್ರಿಯೆ ! ಉತ್ತಮ ಜಾತಿಯವನಿದ್ದು ನಾನು ಕುರಿಯನ್ನು ತರುವುದೆಂದರೆ ಅಯೋಗ್ಯವು. ಆದ್ದರಿಂದ ಇದನ್ನು ಬಿಟ್ಟು ಮತ್ಯಾವ ಕೆಲಸವನ್ನಾದರೂ ಹೇಳಿದರೆ ಶಿರಸಾವಹಿಸಿ ಮಾಡುವೆನು.

ವಾರಣಸಾನಿ: ಹಾ! ಹಾ !! ಯಾಕೆ ಬಹಳ ಮಾತನಾಡುವಿ! ನಮ್ಮ ಸ್ವಾಮಿಗೆ ಅರ್ಪಿಸುವ ಕುರಿಯನ್ನು ತರುವದು ಅಯೋಗ್ಯವೆಂದೆನ್ನುವಿಯೋ?

ಯಾಕೆ ಬೇಕಾಗಿರುವುದೇನು? ನನ್ನ ಸಂಗವು ನಿನಗೆ ಅಯೋಗ್ಯವಾಯಿತೇನು? ಹಾಗಾದರೆ ಇಲ್ಲಿ ಇರಕೂಡದು. ಹೊರಗೆ ನಡೆ. ಯಾಕೆ? ಏಳು.

ಸಾಂಡೇ: ಅಹಾ ! ರೋಗಿ ಬಯಸಿದ್ದು ಹಾಲೋಗರಾ ವೈದ್ಯ ಹೇಳಿದ್ದು ಹಾಲೋಗರಾ ಎಂಬಂತೆ ನನಗೆ ಅನುಕೂಲವಾದ ಮಾತನ್ನೇ ಆಡಿದಳು. ತಡಮಾಡದೆ ಇದೇ ಸಮಯದಲ್ಲಿ ಪಲಾಯನ (ಎಂದು ಹೋಗುವನು.)

ವಾರಣಸಾನಿ: (ದೋತರ ಶರಗು ಹಿಡಿದು ಜಗ್ಗಿ) ಹಾ ! ಹಾ !! ಎಲ್ಲಿಗೆ ಹೋಗುವಿ? ಹೋಗೆಂದಕೂಡಲೆ ಹೋಗುವುದೇನು ? ನಿನ್ನ ವಚನವೆಲ್ಲಿ ಹೋಯಿತು? ಹೋಗು ನೋಡೊಣ (ಎಂದು ಕಸಬರಿಗಿಯಿಂದ ಹೊಡೆಯುವಳು)

ಸಾಂಡೇ: ಮಹರಾಯಳೇ? ಹೊಡಿಯಬೇಡಾ, ತಪ್ಪಾಯಿತು. ಇನ್ನು ಮೇಲೆ ಕುರಿಯನ್ನು ಯಾಕೆ! ಅದರ ಮಾಂಸವನ್ನು ಸಹಾ ತೆಗೆದುಕೊಂಡು ಬಾ! ಅಂದರೆ ತೆಗೆದುಕೊಂಡು ಬರುವೆನು. ಮತ್ತೂ ಅದರ ಪಾಕು ಮಾಡಿ, ನಿನ್ನ ಮುಂದೆ ಕುಳಿತು ತುತ್ತುಮಾಡಿ ಉಣಿಸೆಂದರೆ ಉಣಿಸುವೆನು. ದಯಮಾಡಿ ಕಸಬರಿಗಿಯಿಂದ ಮೇಲಿಂದಮೇಲೆ ಹೊಡಿಯಬೇಡಾ.

ವಾರಣಸಾನಿ: ಹೂ ! ಹೊಡೆಯಬೇಡೆಂದು ನನಗೆ ಅಪ್ಪಣೆ ಮಾಡುವಿಯಾ? ಅಷ್ಟು ಯೋಗ್ಯತೆ ಬಂತೇನು? (ಎಂದು ಹೊಡೆಯುವಳು).

ಸಾಂಡೇ: ಹಾ! ಇಲ್ಲ. ಇಲ್ಲ. ನಿನ್ನ ತನುವೇ ಇದು ಇರುವುದು. ಬೇಕಾದ್ದು ಮಾಡಿಕೋ.

ವಾರಣಸಾನಿ: ಹಾಗಾದರೆ, ನಡೆ ತೆಗೆದುಕೋ ರೂಪಾಯಿಗಳನ್ನು (ಎಂದು ರೂಪಾಯಿ ಕೊಡುವಳು.) ತೀವ್ರದಿಂದ ತೆಗೆದುಕೊಂಡು ಬಾ. (ಎಂದು ಹೇಳಿ ಹೋಗುವಳು)

ಸಾಂಡೇ: ಲೋಕದಲ್ಲಿ ಬುದ್ಧಿವಂತನಾದ ಮನುಷ್ಯನು ಇಂತಾ ವೇಶ್ಯಾ ಸ್ತ್ರೀಯರ ಗೊಡವೆಗೆ ಎಂದೂ ಹೋಗಬಾರದು. ಹೋದವನಿಗೆ ನನ್ನಂತೆ ಆಗುವದು. ಇದರಲ್ಲೇನು ಸಂಶಯವಿಲ್ಲಾ. (ಎಂದು ಹೋಗುವನು).

===

೪ನೇ ಪ್ರವೇಶ

ಸ್ಥಳ–ದೇವಾಲಯ.

ಕಿನ್ನರೇಶ–

ಪದಾ–(ಚಾಲ–ಪಾಂಡುನೃಪತಿ)

ಪಾಹಿಸದಯಾ ಹೃದಯಹರಾ । ಭವಾಂಬೋಧಿತ ತರುಣಿಧರಾ ।
ನರ್ಮಗೋತ್ರ ತರಣಿಶರಾ । ಜಾಗ್ನಿಕಾಕ್ಷರೇ ॥ ೧ ॥
ನತಶರಣಾ ।ಸೋಮಧರಾ ಮುರಾರೀಂದ್ರನುತಪಧರಾ ।
ಜೀವಕಾಲಶಮನಗರ । ಕಂತಶಂಕರಾ ॥ ೨ ॥

ಹೇ ಮೃಡಾನಿಪತೇ! ಮೃತ್ಯುಂಜಯಾ !! ಶೂಲಪಾಣಿ ಫಾಲಾಕ್ಷಾದೀನ ದಯಾಳೋ ! ಭಕ್ತವತ್ಸಲಾ !! ದೀನನಾದ ನನ್ನನ್ನು ರಕ್ಷಿಸು. ಯಾವ ಅನ್ಯರಿಗೆ ಅವಿಷವಾದ ಈಶ್ವರನೆಂಬ ಶಬ್ದವು ಯಾವನಲ್ಲಿ ಯಥಾರ್ಥಾಕ್ಷರವಾಯಿತೋ ಅವನ ಭಕ್ತಿಯೇ ಮನುಷ್ಯನಿಗೆ ಸಂಪತ್ತು, ಅಲ್ಲದೆ ಬೇರೆ ಸಂಪತ್ತುಂಟೇ? ಅದೇ ಭವವೆಂಬ ಕಾಡ ಬೆಂಕಿಗೆ ಮಹಾ ವೃಷ್ಟಿಯಂತಿರುವದು. ಆ ಭಕ್ತಿಯೆಂಬ ಚಿಂತಾಮಣಿಯಿಂದ ಭೂಷಿತನಾದ ಮನುಷ್ಯನಿಗೆ ಅನ್ನ ಶ್ರೇಷ್ಠ ರತ್ನಗಳಲ್ಲಿ ಅಪೇಕ್ಷಿಯಾದೀತೆ? ಆದ್ದರಿಂದ ಶಿವಭಕ್ತಿಯೇ ಮನುಷ್ಯನಿಗೆ ಭೂಷಣವು. ಈ ರೀತಿ ಸುಖದಾಯಕವಾದ ಆ ಶಿವಭಕ್ತಿಹೀನನಿಗೆ ನರಶ್ವಾನನೆನ್ನಲಿಕ್ಕೆ ಬೇಕು. ಆದ್ದರಿಂದ ನರಶ್ವಾನವೆಂಬ ಶಬ್ದವನ್ನು ದೂರಮಾಡಲಪೇಕ್ಷೆಯುಳ್ಳವನು ಭಕ್ತಿಯೆಂಬ ನಾರಿಯ ಸಂಗ ಮಾಡಬೇಕಾಗುತ್ತದೆ. ಇರಲಿ, ಕುಳಿತುಕೊಳ್ಳುವಾ. (ಅಷ್ಟರಲ್ಲಿ ಕುರಿಯು ಗುಡಿ ಶೇರುವುದು)

ಸಾಂಡೇ: ಅಹಾ ಹಗ್ಗವನ್ನು ಹರಿದುಕೊಂಡು ಈ ಕುರಿಯು ಗುಡಿಯನ್ನು ಹೊಕ್ಕಿತಲ್ಲಾ ! ಎಷ್ಟು ಕಾಡುತ್ತಿರುವದು. ತಡವಾದರೆ ನನ್ನ ಪ್ರಿಯಳು ಏನನ್ನುವಳೋ ಏನೋ? (ಹಿಡಿಯಲಿಕ್ಕೆ ಹೋಗುವನು.)

ಕಿನ್ನರೇಶ: ಎಲೋ ! ಈ ಕುರಿಯು ಯಾರದು?

ಸಾಂಡೇ: ನನ್ನದು.

ಕಿನ್ನರೇಶ: ಇದನ್ನು ಯಾತಕ್ಕೆ ವೈಯುತ್ತೀ?

ಸಾಂಡೇ: ಹಬ್ಬಕ್ಕಾಗಿ ವೈಯ್ಯುತ್ತೇನೆ.

ಕಿನ್ನರೇಶ: ಎಲೋ! ಹಾಗಾದರೆ ಆ ಪ್ರಾಣಿಯನ್ನು ಹಿಡಿಯಬೇಡಾ. ಇದು ಮರಣಕ್ಕಂಜಿ ಈ ತ್ರಿಪುರಾಂತಕೇಶ್ವರನ ಗುಡಿಯನ್ನು ಹೊಕ್ಕಿರುವದು. ನೋಡು, ಲೋಕದಲ್ಲಿ ಮರಣ ಭಯವೆಂಬುದು ಸರ್ವರಿಗೂ ಒಂದೇ ರೀತಿ ಇರುವದು. ಇದಲ್ಲದೆ "ಮಾಹಿಂಸ್ಯಾತ್ಸರ್ವ ಭೂತಾನಿ" ಎಂಬ ಶ್ರುತಿಗನುಸರಿಸಿ ಶಿವಶರಣರು ಪ್ರಾಣದ ಭಯದಿಂದ ತಮ್ಮ ಮರೆಹೊಕ್ಕ ಪ್ರಾಣಿಯನ್ನು ಕೊಟ್ಟರೇ ಅನುಮೋದನ ಹಿಂಸಾ ದೋಷವು ಘಟಿಸುವದು. ಕಾರಣ ಕುರಿಯನ್ನು ಹಿಡಿಯಬೇಡಾ. ಇದರ ಬೆಲೆಯೇನು ಹೇಳು. ಅದಕ್ಕೆ ಇಮ್ಮಡಿಯಾಗಿ ಕೊಡುವೆನು.

ಸಾಂಡೇ: (ನಗುತ್ತ) ಅಹಾ! ತಾವು ಎಂಥಾ ದಯಾಶಾಲಿಗಳು. ನಿಮ್ಮಂಥಾ ತ್ಯಾಗಿಗಳನ್ನೇ ನೋಡಿಲ್ಲಾ. ವಾಹವ್ವಾ! ನೀನು ಕುರಿಯನ್ನು ಬಿಡಿಸಿ ಕೊಳ್ಳಬೇಕೆಂದು ಯೋಚಿಸುವಿಯಾ? ಅಹಾ ! ಅದು ಹ್ಯಾಗೆ ಆಗುವದು? ಕುರಿಗಳೇನು ಒಬ್ಬರ ಅಂಗಳಕ್ಕೆ ಹೋಗುವವು. ದೇವಾಲಯಕ್ಕೆ ಹೋಗುವವು. ಅಷ್ಟರಿಂದಲೇ ಹಿಡಿಯದಾಗದೆಂದು ಹೇಳಿದರೆ ಬೆಲೆಯನ್ನು ಕೊಟ್ಟು ತಂದವರು ಬಿಟ್ಟಾರೇ? ಅಹಾ! ಯೋಗ್ಯ ಮಾತನಾಡಿದಿ. ಸರಿ ಹಿಂದಕ್ಕೆ (ಎಂದು ಒಳಗೆ ಹೋಗುವಷ್ಟರಲ್ಲಿ)

ಕಿನ್ನರೇಶ:

ಪದ–ಚಾಲ– ("ತೇ ಕುಟಿಲ ಕಪಟ")

ಹೇ ಕುಟಿಲಹೃದಯ ಬಿಡು ಬಿಡು ಜವನು ।
ನೀ ಕರುಣವ ತಾಳಿ ಭಯದಿ ॥
ಕಾಕುಕುಕ್ಷಿಮಾಲ ಗೃಹವ । ಪೊಕ್ಕಿರುವದಿದು ॥ ೧ ॥
ಪೋಗು ಕೊಲುವದಿದನುನಿನಗೆ ।
ಬೇಗ ದೋಷವಲ್ಲೆ ಯೋಚಿ ।
ಸೀಗ ಮನದಿ ಶಿವನುಮೆಚ್ಚನ್ನೆಗಡಿದಕೆತಾಂ ॥ ೨ ॥

ಸಾಂಡೇ: ಎಲೋ ! ವೃಥಾ ನನ್ನೊಡನೆ ಯಾಕೆ ವಾದಿಸುವಿ? ಇದನ್ನು ಒಯ್ಯುವುದು ತಡವಾದರೆ ನನ್ನ ಪ್ರೀಯಳು ಕೋಪಿಶ್ಯಾಳು. ಆದ್ದರಿಂದ ಬಿಡು. ವ್ಯರ್ಥವಾಗಿ ಕಾಡಬೇಡಾ.

ಕಿನ್ನರೇಶ: ಎಲೋ! ನೀನು ಬೇಡಿದಷ್ಟು ಧನವನ್ನು ಕೊಡುವೆನಲ್ಲದೆ ಈ ಕುರಿಯನ್ನು ಮಾತ್ರ ಎಂದೂ ಬಿಡಲಿಕ್ಕಿಲ್ಲಾ.

ಸಾಂಡೇ: ಎಲೋ! ನಿನಗೆ ಸರ್ವ ಜೀವಿಗಳು ಒಂದೇಸಮನಾಗಿ ಕಂಡರೆ ಮನುಷ್ಯನ ಬೆಲೆಯು ಒಂದು ಸಾವಿರ ಹೊನ್ನಿನದೆಂದು ತಿಳಿದು ಈ ಕುರಿಯನ್ನು ಒಂದು ಸಾವಿರ ಹೊನ್ನನ್ನು ಕೊಟ್ಟು ಬಿಡಿಸಿಕೊಳ್ಳುವಿಯಾ?

ಕಿನ್ನರೇಶ: ಎಲೋ! ನೀಚಾ!! ಪಾಪಾತ್ಮಾ ವೃಥಾ ಬಡಬಡಿಸಬೇಡಾ. ನೀನು ನುಡಿದಂತೆ–

ಪದ–(ಚಾಲ–"ನಾಥಾ ಬಹುತ ಛಳಿಯಲೆ")

ನೀಚಾ ಗ್ರಹಿಸು ಧನವನು । ವ್ಯರ್ಥ ಗಳಪದೆ ಇತ್ತೊಚನವ ॥
ತಪ್ಪೆ ನಿನ್ನಯತ್ತಬಿಡೆನಿಕೋ । ನೀನರ್ತಿಯಿಂದಲ ।
ಧನವನೆಣಿಸೆಕೊಳುತೆ । ಮನೆಗೆ ಪೋಗಲೋ ಬೇಗನೆ ॥
ದೇಗುಲವ ಬಿಡೈ । ಎಳೇಳು ಮರಳಿಬರಲು ತರಿಪೆ ಶಿರವನ್ನಿಡುಗದಿಂದಲ ॥ ೧ ॥

(ಹಣವನ್ನು ಕೊಡುತ್ತಾನೆ) ಪುನಃ ಬಂದು ದುರಾಶೆಯಿಂದ ಈ ಕುರಿಯನ್ನು ಬೇಡಿದರೆ ನಾನು ಎಂದಿಗೂ ಕೊಡಲಿಕ್ಕಿಲ್ಲಾ.

ಸಾಂಡೇ: ಛೇ! ಛೇ!! ಅದೆಂತಾಗುವುದು? (ಜನರ ಕಡಿಗೆ) ಆಹಾ! ಈ ಧನವನ್ನು ನನ್ನ ಪ್ರೀತಿಗೆ ಪಾತ್ರಳಾದ ಕೋಮಲಾಂಗಿಗೆ ಕೊಟ್ಟರೆ ಆಕೆಯು ಮಹಾ ಸಂತೋಷದಿಂದ ನನ್ನನ್ನು ಪ್ರೀತಿಸುವಳು. ಇವತ್ತಿನ ಹಬ್ಬಕ್ಕಾಗಿ ಮತ್ತೊಂದು ಕುರಿಯನ್ನು ವೈದರಾಯಿತು. ಒಳ್ಳೇದು, ಶೀಘ್ರವಾಗಿ ತೆಗೆದುಕೊಂಡು ಹೋಗುವಾ. (ಎಂದು ಹೋಗುವನು).

ಕಿನ್ನರೇಶ: ಈ ಕುರಿಯನ್ನು ಯಾರೂ ಹಿಡಿಯದಂತೆ ಇದಕ್ಕೆ ಲಿಂಗಮುದ್ರೆಯನ್ನು ಒತ್ತಿಬಿಡುತ್ತೇನೆ. ಆ ನೀಚ ವಿಟನ ಕೈಯಲ್ಲಿ ಶಿಕ್ಕ ಕುರಿಯು ಹಸಿದಿರುವುದು. ಸ್ವಲ್ಪ ಈ ತ್ರಿಪುರಾಂತಕೇಶ್ವರನ ಕೆರೆಯ ಆಚೆಯ ದಂಡೆಗೆ ವೈದು ತೃಣಜಲಗಳಿಂದ ತೃಪ್ತಿಪಡಿಸಿಕೊಂಡು ಬರುತ್ತೇನೆ. (ಎಂದು ಮೈಮೇಲೆ ಕೈಯಾಡಿಸಿ) ಅಹಾ ! ಈ ಪ್ರಾಣಿಯು ಎಷ್ಟು ತೇಕುತ್ತಿರುವದು? ಇರಲಿ, ಹೋಗುವೆನು. (ಹೋಗುತ್ತಾನೆ).

===

೫ನೇ ಪ್ರವೇಶ

(ಸ್ಥಳ–ವಾರಣಸಾನಿಯ ಮಂದಿರ)

ಸಾಂಡೇ: ಹೇ ಗುಣಭರಿತೆ! ಇಗೋ ತೆಗೆದುಕೋ ಈ ಹಣದ ಚೀಲವನ್ನು. ಕುರಿಯನ್ನು ತಂದು ಹೊರಗೆ ಅಂಗಳದಲ್ಲಿ ಕಟ್ಟಿರುವೆನು.

ವಾರಣಸಾನಿ: ಈ ಧನವನ್ನು ಎಲ್ಲಿಂದ ತಂದಿ? ಇದು ಯಾರಿಗೆ ಸಲ್ಲ ತಕ್ಕದ್ದು.

ಸಾಂಡೇ: ಪ್ರಿಯೆ ನನ್ನಿಂದ ತರಲ್ಪಟ್ಟ ಹಣವು ನಿನಗಲ್ಲದೆ ಅನ್ಯರಿಗೆ ಸಲ್ಲುವದೇ? ಇದನ್ನು ಕಿನ್ನರೇಶನೆಂಬ ಒಬ್ಬ ಶಿವಶರಣನು ಕೊಟ್ಟನು.

ವಾರಣಸಾನಿ: ಯಾತಕ್ಕೆ?

ಸಾಂಡೇ: ನಾನು ಇಲ್ಲಿಂದ ಕುರಿಯನ್ನು ತರುವದಕ್ಕೆಂದು ಹೋಗಿ ಒಂದು ಕುರಿಯನ್ನು ತೆಗೆದುಕೊಂಡು ಬರುವಾಗ್ಗೆ ಆ ಕುರಿಯು ದಾರಿಯಲ್ಲಿ ಹರಿದುಕೊಂಡು ತ್ರಿಪುರಾಂತಕೇಶನ ಗುಡಿಯನ್ನು ಹೊಕ್ಕಿತು. ನಾನು ತ್ವರದಿಂದ ಹೋಗಿ ಕುರಿಯನ್ನು ಹಿಡಿದೆನು. ಆಗ ಕಿನ್ನರೇಶನು ಬಂದು ಈ ಪ್ರಾಣಿಯು ಶಿವಲಿಂಗದ ಬೆನ್ನು ಬಿದ್ದಿರುವದು. ಇದನ್ನು ನಾನು ನಿನ್ನ ಸ್ವಾಧೀನವೆಂದೂ ಮಾಡುವುದಿಲ್ಲಾ. ಆದರೆ ನೀನು ಬೇಡಿದಷ್ಟು ಧನವನ್ನು ಕೊಡುವೆನೆಂದು ಹೇಳಲು ನಾನು ಅವನ ಮನಸ್ಸನ್ನು ಪರೀಕ್ಷಿಸಲು ಒಂದು ಸಾವಿರ ಹೊನ್ನನ್ನು ಬೇಡಿದೆನು. ಅದಕ್ಕೆ ಅವನು ಸ್ವಲ್ಪವಾದರೂ ಯೋಚಿಸದೆ ಇಷ್ಟು ಹಣ ಕೊಟ್ಟನು. ಇಷ್ಟೇ ಸಂಗತಿಯು.

ವಾರಣಸಾನಿ: ಅಯ್ಯೋ ಮಾನಹೀನನೇ ! ನೀನ್ಯಾತರ ವಿಟ ಪುರುಷನು? ಈ ದುಡ್ಡಿಗಾಗಿ ಮೊದಲು ವಿಕ್ರಯಿಸಿದ ಕುರಿಯನ್ನು ಬಿಟ್ಟುಬಂದಿಯಾ? ಇದರಿಂದ ನಾನು ಈ ಹಣದಿಂದ ಸಂತುಷ್ಟಳಾಗತಕ್ಕವಳೇ? ನನಗೆ ಹಣವೆಂದರೆ ತೃಣಸಮಾನವು. ನೋಡು ಬೇಕಾದರೆ ಬೀದಿಬೀದಿಯಲ್ಲೆಲ್ಲಾ ಹಣವನ್ನು ದಟ್ಟವಾಗಿ ಬಿತ್ತಿಸುವೆನು. ಸುಡು ನಿನ್ನ ಹಣದ ಚೀಲವನ್ನು. ಸರಿ ವೇಶ್ಯಯರು ಇದನ್ನು ಕೇಳಿ ನಗಲಿಕ್ಕಿಲ್ಲವೇ? ಛೀ, ಛೀ, ನೀಚನೆ ನಡಿ! ನನ್ನಹತ್ತರ ನಿಲ್ಲಬೇಡ. ಅತ್ತ ನಡೆ.

ಸಾಂಡೇ: ಅಯ್ಯೋ! ನನಗೆ ಮೊದಲೇ ಸಂಶಯ ಬಂತು. ಆ ಕಿನ್ನರೇಶನಿಗೆ ಎಷ್ಟು ಹೇಳಿಕೊಂಡರೂ ಕುರಿಯನ್ನು ಬಿಡಲಿಲ್ಲ. ಈಗ ಸ್ತ್ರೀಯಳ ನಿಂದೆಗೆ ನಾನು ಪಾತ್ರನಾದಂತೆ ತಾನು ಪಾತ್ರನಾದಾನೇನು. ಈ ಕಾಲದಲ್ಲಿ

ಇವಳಿಗೆ ಉತ್ತರ ಕೊಡದೆ ಸುಮ್ಮನೆ ಕೂಡ್ರುವದು ಯೋಗ್ಯವು. ಯಾಕಂದರೆ ನಾನು ಉತ್ತರ ಕೊಟ್ಟರೆ ಅಗೋ ಎಂದು ಕಸಬರಿಗೆಯನ್ನು ತೋರಿಸುವಳು. ಯಾಕಂದರೆ ಇಲ್ಲಿಗೆ ಬಂದು ಸ್ವಲ್ಪ ದಿವಸದಲ್ಲಿ ಅವರಿಗೂ ನನಗೂ ಒಳ್ಳೇ ಪರಿಚಯವಾಗಿರುವದು. ಆದ್ದರಿಂದಲೇ ಅವರು ನಮ್ಮ ಡುಬ್ಬದ ಮೇಲೆ ಹಾರ್‍ಯಾರಿ ಹೋಗುವರು.

ವಾರಣಸಾನಿ: ಎಲೋ! ಧನದಾಶೆಗಾಗಿ ಆ ಕುರಿಯನ್ನು ಬಿಟ್ಟು ಈ ನನ್ನ ಸರಿ ಗೆಳತಿಯರ ಹಾಸ್ಯಕ್ಕೆ ಗುರಿಮಾಡಿದಿಯಾ ? ಇದಲ್ಲದೆ ಆ ಕುರಿಯು ನಮ್ಮ ಕುಲಸ್ವಾಮಿಯ ಬಲಿಗಾಗಿ ನೇಮಿಸಿ ತಂದದ್ದು. ಅದರಹೊರ್ತು ನಮ್ಮ ಕುಲಸ್ವಾಮಿಯು ತೃಪ್ತಿ ಹೊಂದುವುದಿಲ್ಲ. ಆದ್ದರಿಂದ ನೀನು ಹೋಗಿ ಬೇಗನೆ ಹಣವನ್ನು ಕೊಟ್ಟು ಕುರಿಯನ್ನು ತಂದರೆ ಹಬ್ಬವನ್ನು ಮಾಡುವೆನು.

ಸಾಂಡೇ: ಅಯ್ಯೋ ! ಹ್ಯಾಗೆ ಮಾಡಬೇಕು? ಆ ಕಿನ್ನರೇಶನ ಹತ್ತಿರ ಹೋಗಿ ಕುರಿಯನ್ನು ಬೇಡುವಬಗೆಯಾದರೂ ಹೇಗೆ? ಮತ್ತು ಈಕೆಗೆ ಆ ಕುರಿಯ ಆಶೆಯನ್ನು ಬಿಡೆಂದು ಹೇಳುವಬಗೆ ಹ್ಯಾಗೆ? ಕಿನ್ನರೇಶನು ಕುರಿಯನ್ನು ಬೇಡಿದರೆ ಕೊಡುವಂತಿಲ್ಲಾ. ಇವರ ಮಧ್ಯದಲ್ಲಿ ನನ್ನ ಗತಿ ನೆಟ್ಟಗಾಗುವದಿಲ್ಲಾ.

ವಾರಣಸಾನಿ: ಯಾಕೆ! ಏನು ಆಲೋಚನೆ ನಡದದೆ? ನಾನು ಹೇಳುವ ಮಾತುಗಳು ತಮ್ಮ ಮನಸ್ಸಿಗೆ ಬರಲಿಕ್ಕಿಲ್ಲ! ಯಾಕೆ ಬಂದಾವು? ಅವರು ಬಂದು ಒಮ್ಮೆ ಡುಬ್ಬದಮೇಲೆ ಹಾರಿ ಹೋದರೆ ಗೊತ್ತಾದೀತು.

ಸಾಂಡೇ: ಮಹಾರಾಯಳೇ! ಅಷ್ಟು ಮಾತ್ರ ಮಾಡಬೇಡ ಈಗಿಂದೀಗಲೇ ಕುರಿಯನ್ನು ಹೊತ್ತುಕೊಂಡು ಬರುತ್ತೇನೆ. (ಎಂದು ಹೋಗುವನು).

===

೬ನೇ ಪ್ರವೇಶ

(ಸ್ಥಳ–ದೇವಾಲಯ)

(ಸಾಂಡೆ ಈತನು ಓಡಿ ಬಂದು ಕುರಿಯನ್ನು ಹಿಡಿಯುತ್ತಾನೆ)

ಕಿನ್ನರೇಶ: ಎಲೋ! ನೀಚನೆ ಬಸವೇಶ್ವರನ ಆಣೆ ಅದೆ, ನಮ್ಮ ಕುರಿಯನ್ನು ಹಿಡಿಯಬೇಡಾ ಬಿಡು. ಬಿಡದೆ ಹೋದರೆ ನಿನ್ನ ಶಿರವನ್ನು ಛೇದಿಸುವೆನು.

ದುಷ್ಟಾ ಲಿಂಗಮುದ್ರಿಯನ್ನು ಧರಿಸಿರುವ ಕುರಿಯನ್ನು ಭವಿಯಾದ ನೀನು ಮುಟ್ಟಬೇಡಾ. ನೋಡು ಶಿವಭಕ್ತರು ತಮ್ಮ ಪ್ರಾಣವನ್ನು ಕೊಡುವರಲ್ಲದೆ ಶಿವಚಿನ್ಹಾಂಕಿತ ಪ್ರಾಣಿಗಳನ್ನು ಹಿಂಸೆಗಾಗಿ ಅನ್ಯರ ಸ್ವಾಧೀನ ಮಾಡ್ಯಾರೇ? ಅದೆಂದೂ ಆಗುವುದಿಲ್ಲ. ಎಲೋ ನೀನಲ್ಲಾ, ನಿಮ್ಮ ಮನೆಯ ದೇವರು ಬಂದು ಕುರಿಯನ್ನು ಹಿಡಿದು ಎಳೆದಾಗ್ಯೂ ಒಂದು ಹೆಜ್ಜೆಯನ್ನು ಮುಂದಕ್ಕಿಡಗೊಡದೆ ಅವರ ಮೂಗು ಕೊಯ್ದು ಚಲ್ಲುವೆನು.

ಸಾಂಡೇ: ಯಾಕೆ? ನಾನು ಸುಮ್ಮನೆ ನಿಂತುಕೊಂಡೆನೆಂದು ಬಹಳ ಮಾತು ಆಡುವೆ. ಇಗೋ ನೋಡು! ಅವತಾರವನ್ನು ತೋರಿಸುವೆನು. (ಎಂದು ಕೈ ಎತ್ತಿ ಮೈಮೇಲೆ ಬರುವನು).

ಕಿನ್ನರೇಶ:

ಪದಾ–(ಚಾಲ–"ತೂ ಪಾಪಿ")

ಹೇ ಪಾಪಿ । ನೀ ಪರಿಗ್ರಹಿಸದಿರು ।
ಕುರಿಯು ಮಾಪರೋಪ ಗೃಹದಿ ।
ನಂಜು ನಿನಗೆ ಲಿಂಗಮುದ್ರೆ ರಂಜಿಸುವದು ।
ಮೇಷವಿದಕಂಜಿರುವನೀ । ನಾನು ಪಾಪ ಪುಂಜೆ ಯೋಚಿಸು ॥ ೧ ॥

ದುಷ್ಟಾ! ತಾಳು, ತಾಳು. ಈ ಖಡ್ಗಾಘಾತೆಯನ್ನೂ ಶಿವಭಕ್ತರ ಪರಾಕ್ರಮವನ್ನೂ ನೋಡು. (ಖಡ್ಗದಿಂದ ಹೊಡಿಯುವನು. ಸಾಂಡೇ ಬೀಳುವನು) ಈ ನೀಚ ಶವವು ಈ ಪವಿತ್ರ ಮಂದಿರದಲ್ಲಿ ಇರಲು ಅಯೋಗ್ಯವು. ಆದ್ದರಿಂದ ಹೊರಗೆ ಎಳೆಯುವೆನು (ಬೀದಿಗೆ ಎಳಿಯುತ್ತಾನೆ.)

===

೭ನೇ ಪ್ರವೇಶ

(ಸ್ಥಳ–ರಾಜಸಭಾ.)

ಶೇವಕ: ಮಹಾರಾಜಾ! ವಾರಣಸಾನಿಯಳೊಡನೆ ಇದ್ದ ಗೋವಿಂದ ರಾವ ಸಾಂಡೇ ಎಂಬವನು ತನ್ನ ಸ್ತ್ರೀಯಳ ಹಬ್ಬಕ್ಕಾಗಿ ಒಂದು ಕುರಿಯನ್ನು ವಿಕ್ರೈಸಿಕೊಂಡು ಬರುವ ಮಾರ್ಗದಲ್ಲಿ ಆ ಕುರಿಯು ದೇವಾಲಯವನ್ನು ಪ್ರವೇಶಿಸಲು ಅದನ್ನು ಹಿಡಿದುಕೊಳ್ಳುವುದಕ್ಕೆ ಹೋಗಲು

ನಿರಪರಾಧಿಯಾದ ಆತನ ಶಿರವನ್ನು ಕಿನ್ನರೇಶನು ಕತ್ತರಿಸಿದನಂತೆ. ಈಗ ಅವನ ತಂದೆ ತಾಯಿಗಳು ಹೊರಗೆ ಬಂದು ನಿಂತಿರುವರು.

ಬಿಜ್ಜಳ: ಒಳ್ಳೇದು, ಗಣಿಕಾ ಸ್ತ್ರೀಯಳು ಬಂದಿರುವಳೇನು?

ಶೇವಕ: ಇಲ್ಲಿಲ್ಲಾ. ಮಹನ್ ಅವಳೇನು ಬಂದಿಲ್ಲಾ. ಪರಂತು ಇವರಿಗೆ ಹೇಳಿ ಕಳುಹಿಸಿರುವಳಂತೆ.

ಬಿಜ್ಜಳ: ಅಹಾ! ಈಗಿನ ಗಣಿಕಾ ಸ್ತ್ರೀಯರು ಎಂಥಾ ನಿಷ್ಕಪಟಿಗಳು. ಇರಲಿ ಆ ಪ್ರೇತವನ್ನು ತಂದಿರುವರೇನು?

ಶೇವಕ: ಇಲ್ಲ ಮಹನ್ ! ಅದನ್ನು ಗುಡಿಯ ಮುಂದೆ ಬಿಟ್ಟಿರುವರಂತೆ.

ಬಿಜ್ಜಳ: (ಸಿಟ್ಟಿನಿಂದ) ಬಸವೇಶಾ! ಇದೆಂಥಾ ಅನರ್ಥವು? ಶಿವಭಕ್ತರು ಅಹಿಂಸಾ ಧರ್ಮಪರರೂ, ಶಾಂತಿಭರಿತರೂ, ಭೂತದಯಾಪರರೂ ಎಂಬುದಾಗಿ ಹೇಳಿದ ನಿನ್ನ ವಾಕ್ಯಗಳೆಲ್ಲಾ ಸುಳ್ಳಾದವೇನು? ಇಲ್ಲಿಯವರೆಗೂ ಶೇವಕನು ಹೇಳಿದ ಮಾತುಗಳನ್ನು ಕೇಳಿದಿಯೋ ಇಲ್ಲವೋ? ಕಿನ್ನರೇಶನು ಹೀಗೆ ಮಾಡಬೇಕೇ? ಪಾಪಕ್ಕೂ ಲೋಕಪವಾದಕ್ಕೂ ಸ್ವಲ್ಪವಾದರು ಹೇಸದೆ ತಪ್ಪಿಲ್ಲದವರನ್ನು ಕೊಂದಿರುವನು. ಇದೆಯೋ! ನಿಮ್ಮ ಶಿವಭಕ್ತರ ನಾಡಾವಳಿಯು? ಚೆನ್ನಾಗಿರುವದು. ಬಸವೇಶಾ! ಇಂಥವರನ್ನು ದಂಡಿಸುವರಾರು? ದೊರೆತನವೇ ತಮಗೆ ಬಂದಂತೆ ಅನ್ಯರನ್ನು ವಧಿಸುವದೇ ! ಇದಲ್ಲದೆ ನಿಮ್ಮ ಶಿವಶರಣರು ನಮ್ಮ ಆಜ್ಞೆಯನ್ನು ಎಷ್ಟೂ ಮಾನ್ಯ ಮಾಡುವುದಿಲ್ಲ. ಅಂದಬಳಿಕ ರಾಜಗೆ ಆಜ್ಞಾಭಂಗವೇ ಮರಣಸಮಾನವು. ಆದ್ದರಿಂದ ನಮಗೆ ದೊರೆತನವೇ ಸಾಕು. ನಾವು ಎತ್ತಲಾದರೂ ಹೋಗುವೆವು. ನೀವೇ ಈ ರಾಜ್ಯವನ್ನು ಆಳಿಕೊಳ್ಳಿರಿ.

ಬಸವೇಶ್ವರ: (ನಗುತ್ತ) ಮಹಾರಾಜಾ! ಶಿವಭಕ್ತರು ಅಹಿಂಸಾ ಧರ್ಮ ಪರರೂ ಶಾಂತಿಭರಿತರೂ ಪ್ರಾಣಿದಯಾಪರರೂ ಎಂಬುದಾಗಿ ಹೇಳಿದ ನನ್ನ ವಾಕ್ಯಗಳನ್ನು ಅಸತ್ಯವೆಂದು. ನೀನು ಕಲ್ಪಿಸಬೇಡಾ. ಶಿವಶರಣರು ಎಂದೂ ಶಿವಧರ್ಮವನ್ನು ಬಿಡತಕ್ಕವರಲ್ಲಾ. ನೋಡು ವಿಚಾರಮಾಡು. ಈ ಮೂಢರ ಮಾತಿಗೊಡಂಬಟ್ಟು ಮುಂಡಾಗುವ ಕೇಡನ್ನು ಯೋಚಿಸದೆ ಬಾಯಿಗೆ ಬಂದಂತೆ ಮಾತನಾಡುವುದು ಹಿತವಲ್ಲಾ. ಕೇಳು, ಆ ಕಿನ್ನರೇಶನು ಸಾಮಾನ್ಯನೇ?

ಪದಾ

ಕಿನ್ನರನಾಥನವ ನಿಂದಿಸುವದು ಛಂದೆ । ಕೋಪದಿಂದೆ ।
ಯೋಚೀಸುಯಾತ ಶಿವನಿಂದೇ ।
ಪ್ರಾಣಿದಯಾ ಪರಮಾನವನವನು ।
ಕಾಣದೆ ತಪ್ಪಲು ಕೊಲ್ಲಲು ತಾನು ತಾನ್ಮೇಣ್।
ಮಾನಿಗಳನುದಂಡಿಪನು ॥ ೧ ॥

ಆದ್ದರಿಂದ ಜ್ಞಾನಿಗಳು ನಿನ್ನ ಮಾತುಗಳಿಗೆ ಮೆಚ್ಚುವರೇ? ಹಾಗೇ ನಿನಗೆ ಸಂಶಯವಿದ್ದ ಪಕ್ಷದಲ್ಲಿ ಆ ಮಹನೀಯನ ಬಳಿಗೆ ಶೇವಕನನ್ನು ಕಳುಹಿಸಿ ಅವನಲ್ಲಿ ದೋಷ ಉಂಟಿಲ್ಲೆಂಬುದನ್ನು ಪರೀಕ್ಷಿಸುವಾ.

ಬಿಜ್ಜಳ: ಒಳ್ಳೇದು ! ಏನೂ ಅಡ್ಡಿ ಇಲ್ಲಾ. ಶೇವಕಾ ! ದೇವಾಲಯಕ್ಕೆ ಹೋಗಿ ಇವರ ನಿಜ ಸ್ಥಿತಿಯನ್ನು ತಿಳಿದುಕೊಂಡು ಬಾ (ಒಳ್ಳೇದು ಎಂದು ಹೋಗುವನು). (ಸ್ವಲ್ಪು ಯೋಚಿಸಿ) ಬಸವೇಶಾ ! ನಿನ್ನ ಅವಿಚಾರತನಕ್ಕೆ ಎದುರೇ ಇಲ್ಲಾ. ಎಲ್ಲಾ ಪ್ರತ್ಯಕ್ಷವಾಗಿ ಅವನ ತಂದೆ ತಾಯಿಗಳೇ ನಮ್ಮ ಮಗನನ್ನು ಕಿನ್ನರಯ್ಯನು ಕೊಂದನೆಂದು ಪದೇ ಪದೇ ನುಡಿಯುತ್ತಿರವರಲ್ಲೇ? ದೋಷಾದೋಷ ವಿಚಾರಮಾಡಲು. ಕಾರಣವೇನು ಬೀಳುವುದು? ಒಂದು ಪಕ್ಷಕ್ಕೆ ಅವನು ದೋಷಿಯೇ ಇರಲಿ ಅಂದರೆ ಕೊಲ್ಲತಕ್ಕದ್ದೇನು?

ಬಸವೇಶ: ಮಹರಾಜಾ ! ಹಾಗಲ್ಲ, ಶಿವಭಕ್ತರು ಎಂದೂ ನೀತಿಯನ್ನು ಬಿಡತಕ್ಕವರಲ್ಲಾ. ವಿಚಾರಾಂತ್ಯದಲ್ಲಿ ಕಿನ್ನರೇಶನು ಮಾಡಿದ್ದು ಯೋಗ್ಯವೆಂದು ನಿನಗೇ ತಿಳಿದೀತು. ಮಹರಾಜಾ ! ಹಲವು ಮಾತುಗಳಿಂದ ಪ್ರಯೋಜನವೇನು? ಶೇವಕನು ಬರಲಿ.

ಶೇವಕ: (ಪ್ರವೇಶಮಾಡಿ) ಮಹರಾಜಾ ! ದೇವಾಲಯಕ್ಕೆ ಹೋಗಿ ಅವರನ್ನು ವಿಚಾರಮಾಡಿದೆನು. ಅವರು ಹೇಳಿದ ಮಾತುಕೇಳಿದರೆ ಅವರಲ್ಲಿ ಸ್ವಲ್ಪಾದರೂ ದೋಷವಿಲ್ಲೆಂದು ಕಂಡುಬರುವುದು.

ಬಿಜ್ಜಳ: ಒಳ್ಳೇದು ! ಅವರು ಅಂದಿದ್ದಾದರೂ ಏನು ?

ಶೇವಕ: ಏನಂದರೆ, ಆ ವಿಟ ಪುರಷನು ತಂದ ಕುರಿಯು ದೇವಾಲಯದಲ್ಲಿ ಪ್ರವೇಶಿಸಲು, ಅದನ್ನು ಹಿಡಿಯಲು ಬಂದ ವಿಟ ಪುರಷನ ಮುಖದಿಂದ

ಈ ಕುರಿಯನ್ನು ಯಾತಕ್ಕೆ ವ್ಯೆಯ್ಯುವೆನೆಂಬ ಕಾರಣವನ್ನು ತಿಳಿದುಕೊಂಡು ಆ ಕುರಿಯನ್ನು ಕೊಡದೆ ಸಾವಿರ ಹೊನ್ನುಗಳನ್ನು ಅವನಿಗೆ ಕುರಿಯ ಬೆಲೆಯೆಂದು ಕೊಡಲು, ಅವುಗಳನ್ನು ತೆಗೆದುಕೊಂಡು ಹೋದ ಆ ನೀಚನು, ತನ್ನ ಸ್ತ್ರೀಯು ಅದೇ ಕುರಿಯನ್ನು ತೆಗೆದುಕೊಂಡು ಬಾಯೆಂದೆಂಬುವ ಮಾತಿಗೆ ಬಡಂಬಟ್ಟು ಪುನಃ ಬಂದು ಕುರಿಯನ್ನು ಹಿಡಿದನು. ಆ ಕಾಲಕ್ಕೆ ಎಷ್ಟು ಹೇಳಿದಾಗ್ಯೂ ಕೇಳದೆ ಮದಾಂಧನಾಗಿ ಮೈಮೇಲೆ ಬಂದಕಾರಣ ಅವನ ಶಿರವನ್ನು ತರಿದೆನೆಂದು ಹೇಳಿದನು. ಅದಕ್ಕೆ ನಾನು ಕಿನ್ನರೇಶಾ ! ನೀವು ಹೇಳಿದ ಮಾತು ನಮಗೆ ಹ್ಯಾಗೆ ನಂಬಿಗೆಯಾಗಬೇಕೆಂದು ಕೇಳಿದೆನು ಆ ಮಾತಿಗೆ ಮಹನೀಯನು ಸ್ವಲ್ಪು ಸಹ ಯೋಚಿಸದೆ ಈ ವಿಷಯದಲ್ಲಿ ದೋಷ ಯಾರಲ್ಲಿರುವುದೆಂಬದಕ್ಕೆ ಈ ತ್ರಿಪುರಾಂತಕೇಶ್ವರನೇ ಸಾಕ್ಷಿಯೆಂದು ಹೇಳಿದನು. ಆದ್ದರಿಂದಲೇ ತೀವ್ರ ದೇವಾಲಯಕ್ಕೆ ಹೋಗೋಣ ನಡೆಯಿರಿ.

ಬಿಜ್ಜಳ: ಏನು ತ್ರಿಪುರಾಂತಕೇಶ್ವರನೆಂಬ ನಾಮದ ಗುಂಡುಗಲ್ಲಿನಿಂದ ಸಾಕ್ಷಿಯನ್ನು ಹೇಳಿಸುವನೇ? ಆಹಾ ಈ ಶಿವಭಕ್ತರ ಗೂಢ ಮಾತುಗಳಿಗೆ ಯಾರು ನಗಲಿಕ್ಕಿಲ್ಲಾ. ಆಗಲಿ ದೇವಾಲಯಕ್ಕೆ ಯಾಕೆ ಹೋಗಬಾರದು? ಅಲ್ಲಿಗೆ ಹೋಗುವ ಶ್ರಮವಷ್ಟೇ ಅಲ್ಲವೆ? ಆದರೂ ಚಿಂತೆಯಿಲ್ಲಾ. ಶಿವಭಕ್ತರ ಹುರುಳು ಹ್ಯಾಗೆ ಹೊರಬೀಳಬೇಕು? ಒಳ್ಳೇದು, ಬಸವೇಶಾ! ದೇವರಿಗೆ ಹೋಗೋಣ ನಡೆಯಿರಿ.

ದಿಂಡಿ

ಸ್ಮರಹರನಂ ಕಿನ್ನರನು ನುಡಿಸೆ ತಾನು ।
ಶರಣನೆನುವೆನು ಅತಿಮಾನ್ಯನೆಂದು ನಾನು ॥
ತ್ವರದಿಂದಂತಾಗದೆ ದಂಡಿಪೆನು ।
ಪರಿಕಿಸಲಿದನಾಲಯಕೆ ಪೋಗುವೆನೊ ॥ ೧ ॥
(ಎಂದು ಹೋಗುವರು.)

===

೮ನೇ ಪ್ರವೇಶ

ಸ್ಥಳ–ದೇವಾಲಯ

ಬಸವೇಶ: (ಮುಂದೆ ಬಂದು) ಹೇ ದಯಾಭರಿತಾ ಕಲುಷರಹಿತಾ ಶಿವ ಸ್ವರೂಪಿನ್ ಪರವಾದಿ ಕಾರಣ ಮೃಗೇಂದ್ರ ಹೇ ಶಾಪಾನುಗ್ರಹ ಸಮರ್ಥಾ ಕಿನ್ನರೇಶಾ! ನಿಮ್ಮ ಸುಂದರ ಪಾದಾರವಿಂದಕ್ಕೆ ನಮಸ್ಕರಿಸುವೆ. ನಿನ್ನ ಚರಣಭಕ್ತನನ್ನು ಕೃಪಾದೃಷ್ಟಿಯಿಂದ ಅವಲೋಕಿಸು.

ಕಿನ್ನರೇಶ: ಜಯಶೀಲನಾಗು. ಬಸವೇಶಾ! ಇಲ್ಲಿಗೆ ಬರಲು ಕಾರಣವೇನು?

ಬಸವೇಶಾ: ಶಿವಭಕ್ತಶಿರೋಮಣಿ ! ನೃಪಶಿರೋಮಣಿಯಾದ ಬಿಜ್ಜಳ ರಾಜನು ಬಂದು ಹೊರಗೆ ನಿಂತಿರುವನು. (ಅಷ್ಟರಲ್ಲಿ ಬಿಜ್ಜಳನು ಬರುವನು.)

ಕಿನ್ನರೇಶ: ಬಿಜ್ಜಳ ಭೂಪತೇ ! ಇತ್ತ ಕೂಡ್ರಬೇಕು.

ಬಿಜ್ಜಳ: ಶಿವಭಕ್ತಾ ಕೂಡ್ರುವದೊತ್ತಟ್ಟಿಗಿರಲಿ! ಇದೆಂಥಾದ್ದುಷ ಕೃತ್ಯವನ್ನು ಜರಗಿಸಿರುವಿಯಲ್ಲಾ. ಶಿವಶರಣರು ಪ್ರಾಣಿದಯಾಪರರೆಂದು ಹೇಳುತ್ತ ಸಂಚರಿಸುವ ಶಿವಭಕ್ತರಾದ ನೀವೇಯೋ ಈ ರೀತಿದೋ ಕಾರ್ಯವನ್ನು ಜರಗಿಸಬೆಕೋ ?

ಕಿನ್ನರೇಶ: ಹೇ ನೃಪಾಧಮಾ! ಈ ರೀತಿ ಅವಿಚಾರತನದಿಂದ ಮಾತನಾಡ ಬೇಡ. ಸ್ವಲ್ಪ ವಿಚಾರಮಾಡಿ ನೋಡು. ಈ ರಾಜ್ಯಕ್ಕೆ ನಾನೇ ಅಧಿಪತಿಯೆಂಬ ಅಹಂಕಾರದಿಂದ ಪೂರ್ವಾಪರ ವಿಚಾರ ಮಾಡದೆ ಈ ಪ್ರಕಾರ ಮಾತನಾಡುವಿಯಾ?

ಬಿಜ್ಜಳ: ನೋಡಿದಿಯಾ ! ಬಸವೇಶ ಈತನ ಉದ್ಧಟತನವನ್ನು. ಈ ರೀತಿಯಾದ ಈತನ ವರ್ತನದಮೇಲಿಂದ ವಿಚಾರಮಾಡಿದರೆ ಆ ವಿಟ ಪುರಷನು ನಿರ್ದೋಷಿಯಾಗಿದ್ದು ಈತನೇ ಕೊಂದಿರಬಹುದೆಂದು ನನಗೆ ತಿಳಿಯುತ್ತದೆ.

ಕಿನ್ನರೇಶ: ಎಲೋ ವೃತಾ ಯಾಕೆ ಬಡಬಡಿಸುವಿ? ನಾನು ದೋಷಿಯೋ? ಅವನು ದೊಷಿಯೋ? ಎಂಬುದಕ್ಕೆ ಈ ತ್ರಿಪುರಾಂತಕೇಶ್ವರನೇ ಸಾಕ್ಷಿಯು.

ಬಿಜ್ಜಳ: ಏನು ಗುಡಿಯಲ್ಲಿರುವ ಗುಂಡುಗಲ್ಲು ಮಾತಾಡುವದೇ? ಶಿವ ಭಕ್ತರೆಂದರೆ ಕೇವಲ ದ್ವಿಪಾದ ಪಶುವು. ಇವರಿಗೆ ಏನೇನು ಜ್ಞಾನವಿಲ್ಲಾ.

ಕಿನ್ನರೇಶ: ಎಲೋ! ಮುಂಗೈಗೆ ಕಟ್ಟಿದ ಕಂಕಣಕ್ಕೆ ಕನ್ನಡಿಯಾಕೆ? ಬಾ, ನಾನು

ನಿರ್ದೋಷಿಯೆಂಬುದನ್ನು ಈ ತ್ರಿಪುರಾಂತಕೇಶ್ವರನಿಂದಲೇ ಹೇಳಿಸುವೆನು.

ಬಿಜ್ಜಳ: ಹಾಗಾದರೆ, ಶೇವಕಾ ಬಾಗಿಲಗಳನ್ನು ತೆರೆ (ಎಲ್ಲರೂ ಲಗಬ ಗೆಯಿಂದ ಹೋಗಲುದ್ಯುಕ್ತರಾಗುವರು. ಅಷ್ಟರಲ್ಲಿ ಶೇವಕನು ಬಾಗಿಲದಕಡೆಗೆ ನೋಡಿ.)

ಶೇವಕ: ಮಹರಾಜಾ ಈ ಗುಡಿಯ ಬಾಗಿಲಗಳು ಮುಚ್ಚಿರುವವು. ತೆರಿಯಲಿಕ್ಕೆ ಹೋದರೆ ಸ್ವಲ್ಪಾದರೂ ಹಿಂದಕ್ಕೆ ಸರಿಯವು. ಬಾಗಿಲವನ್ನೇ ಹಾಕಿರಬೇಕೆನ್ನಬೇಕೆ ಅದು ಇಲ್ಲಾ. ಇಗೋ ನೋಡಿರಿ ಸ್ವಷ್ಟವಾಗಿ ಕಾಣುತ್ತದೆ. (ಎಂದು ಎಲ್ಲರೂ ನೋಡುವರು.).

ಬಿಜ್ಜಳ: ಛೇ! ಛೇ!! ಏನು ಹುಚ್ಚುತನವು? ಬೀಗವನ್ನು ಹಾಕದೆ ಇದ್ದು ಬಾಗಿಲಗಳು ಹ್ಯಾಗೆ ತೆರೆಯಲಿಕ್ಕೆ ಬಾರವು? ಇದೇನು? ಬಸವೇಶಾ ಬಾಗಿಲುಗಳು ತೆರೆಯಲೊಲ್ಲವು. ಒಳಗೆ ಯಾರಾದರೂ ಇರಬಹುದೇನು? ಶೇವಕಾ! ದೇವಾಲಯದ ಹಿಂದಿರುವ ಖಿಂಡಿಯಲ್ಲಿ ನೋಡು.

ಶೇವಕ: (ಅದರಂತೆ ನೋಡಿ ಬಂದು) ಮಹರಾಜಾ! ಒಳಗೆ ಯಾರೂ ಇಲ್ಲಾ.

ಬಿಜ್ಜಳ: ಬಸವೇಶಾ ಇದು ನನಗೆ ಯಾವುದೂ ತಿಳಿಯಲೊಲ್ಲದು.

ಬಸವೇಶ್ವರ: ಹೌದು ಮಹಾರಾಜಾ! ಇದು ತಿಳಿಯಲಸಾಧ್ಯವಾಗಿರುವದು. ಇದು ಕೇವಲ ಶಿವಶರಣರಿಗಲ್ಲದೆ ಅನ್ಯ ಪಾಮರರಿಗೆ ಎಂದೂ ತಿಳಿಯಲಾರದು.

ಕಿನ್ನರೇಶ: ಯಾಕೆ ರಾಜಾ! ತಡವ್ಯಾಕೆ ಜಾಗ್ರತೆಯಾಗಿ ಬಾಗಿಲವನ್ನು ತೆರಿ. ಆಮೇಲೆ ನಿನ್ನ ಸಂಶಯವೆಂಬ ವೃಕ್ಷವನ್ನು ದಗ್ಧಮಾಡಿ ಬಿಡುತ್ತೇನೆ.

ಬಸವೇಶ್ವರ: (ಮುಂದಕ್ಕೆ ಬಂದು) ಮಹನೀಯಾ! ಬೀಗವನ್ನು ಹಾಕದೆ ಇದ್ದಾಗ್ಯೂ ಈ ಬಾಗಿಲಗಳು ತೆರೆಯಲಿಕ್ಕೆ ಬಾರವು. ಆದ್ದರಿಂದ ತಡವು.

ಕಿನ್ನರೇಶ: ಹಾಂ ! ಬಾಗಿಲಗಳು ತೆರೆಯಲೊಲ್ಲವೇ ? ಹುಂ ! ಇದೇನು ಚಮತ್ಕಾರವು ನೋಡುವಾ. (ಎಂದು ಬಾಗಿಲದಕಡೆಗೆ ನೊಡುವರು.)

ಪದ

ಶಿವಶಿವನೇ ನಿಜವನುಸುರೀಗ ।
ಅವನಿಪನ ಸಂಶಯ ಬಿಡಿಸು ಬಿಡಿಸು ॥ ಪ ॥

ಪೂರ್ವದಿ ನೀಚಾಪೂರ ಬೊಮ್ಮನಿಗೆ ।
ಧಾರುಣಿಯರಿಯಲು ಧೀರನೆ ಉಸುರಿದ್ಯಾ ।
ಅರಿತೀಗ ನುಡಿ ಭರದಿಭರದಿ ॥ ೧ ॥

ಎಲೈ ಪರಮೇಶ್ವರನೇ? ನಾನು ದೋಷಿಯೋ! ಆ ನೀಚ ವಿಟನು ದೋಷಿಯೋ? ಎಂಬುದನ್ನು ಸತ್ಯವಾಗಿ ಹೇಳಿ ಈ ಅವಿಚಾರಿಯಾದ ರಾಜನ ಮನಸ್ಸಿನ ಸಂದೇಹವನ್ನು ದೂರಮಾಡಿ ಸರ್ವ ಶಿವಭಕ್ತರಿಗೆ ಆನಂದವನ್ನುಂಟು ಮಾಡು. ತಡವ್ಯಾಕೆ ? ನೀನು ಭಕ್ತವತ್ಸಲನಲ್ಲವೇ ! ನೋಡು ! ಪರೀಕ್ಷಿಸಲು ಎಷ್ಟು ಜನರು ಕೂಡಿರುವರು? (ಅಷ್ಟರಲ್ಲಿ ಪರಮೇಶ್ವರನು ಭಯಂಕರ ಶಬ್ದ ಮಾಡುತ್ತ ಲಿಂಗದಿಂದೆದ್ದು)

ಪರಮೇಶ: ಎಲೋ! ಅವಿಚಾರಶೀಲರೆ!! ಶಿವಶರಣರ ಮಹಿಮಾತಿಶಯವನ್ನು ತಿಳಿಯದೆ ಅವರು ನಿರ್ದೋಷಿಗಳಾದಾಗ್ಯೂ ವೃಥಾ ಅವರ ಮೇಲೆ ದೊಷಾರೋಪಣವನ್ನು ಮಾಡಿ ಕಡೆಗೆ ಯಾಕೆ ದುಃಖಕ್ಕೆ ಕಾರಣರಾಗುವಿರಿ. ಈ ಮಹಿಮಾಗಾರನಾದ ಕಿನ್ನರೇಶನು ಸಾಮಾನ್ಯನೇ? ಇವನಲ್ಲಿ ದೋಷಾರೋಪಣವನ್ನು ಮಾಡಿದಿರ್‍ಯಾ? ಕೇಳಿರಿ. ಈ ನೀಚ ವಿಟನು ಆಹುತಿಗಾಗಿ ಒಯ್ಯತಕ್ಕ ಕುರಿಯು ಮರಣಕ್ಕಂಜಿ ದೇಗುಲವನ್ನು ಪ್ರವೇಶಿಸಲು ಆಗ ಮಹಜ್ಞಾನಿಯಾದ ಕಿನ್ನರೇಶನು ಈ ನೀಚನು ಕುರಿಯನ್ನು ಕೊಲ್ಲಲಿಕ್ಕೆ ಒಯ್ಯುತ್ತಾನೆಂದು ತಿಳಿದು, ಇವನು ಬೇಡಿದಷ್ಟು ಹಣವನ್ನು ಕೊಟ್ಟು ಕಳುಹಿಸಿದನು. ಎಲೋ ಮೂಢರೇ ನೋಡಿರಿ, ಇವನು ಯಂಥಾ ಪ್ರಾಣಿದಯಾಪರನು! ಆಮೇಲೆ ಆ ನೀಚನು ಆ ಧನವನ್ನು ತೆಗೆದುಕೊಂಡು ಹೋಗಿ ಇಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತನ್ನ ಸ್ತ್ರೀಯಳಿಗೆ ಹೇಳಿ ಧನವನ್ನು ಮುಂದಿಡಲು ಆ ಮದಾಂಧೆಯಾದ ನೀಚ ವೇಶ್ಯಳು ಧನವನ್ನು ದೂಡಿ ಪುನಃ ಅದೇ ಕುರಿಯನ್ನು ತೆಗೆದುಕೊಂಡು ಬಾ ಅನ್ನಲು, ಆ ನೀಚಳ ಮಾತಿಗೆ ಒಡಂಬಟ್ಟು, ಇಲ್ಲಿಗೆ ಬಂದು ಆ ಕುರಿಯನ್ನು ಹಿಡಿಯುವದಲ್ಲದೆ ಈ ಕಿನ್ನರೇಶನು ಬಹು ರೀತಿಯಾಗಿ ಹೇಳುವ ಹಿತ ಭಾಷಣಕ್ಕೊಡಂಬಡದೆ ಪುನಃ ಇವನ ಮೇಲೆ ಉದ್ಧಟತನವನ್ನು ಮಾಡಿದ ಕಾರಣ ವೀರ ಭಕ್ತಶಿರೋಮಣಿಯಾದ ಕಿನ್ನರೇಶನು ಇವನನ್ನು ಹತಿಸಿಬಿಟ್ಟನು. ಈ ರೀತಿ ಇವನು ನಿರ್ದೋಷಿಯಾಗಿರಲು, ಇವನಲ್ಲಿ ದೋಷಾರೋಪಣವನ್ನು ಮಾಡುವ ವಿಚಾರವು ನಿಮ್ಮ ತಲೆಯಲ್ಲಿ ಹ್ಯಾಗೆ ಬಂದಿತು? ಇಗೋ ! ಇನ್ನು ಮೇಲೆ ಶಿವಭಕ್ತರಲ್ಲಿ ವೃಥಾ

ದೂಷಾರೋಪಣವನ್ನು ಮಾಡಬೇಡಿರಿ. ಅವರು ಎಂದೂ ಇಂಥಾ ಅನುಚಿತ ಕಾರ್ಯವನ್ನು ಮಾಡತಕ್ಕವರಲ್ಲಾ. (ಎಂದು ಲಿಂಗದಲ್ಲಿ ಮಾಯವಾಗುವನು.)

ಬಿಜ್ಜಳ: ಹೇ ದಯಾಳೋ ನಾನು ಮಹಾ ಪಾಪಿಯು. ಕುಮಾರ್ಗಿಯು. ಅಲ್ಲದೆ ನಿರ್ಲಜ್ಜನೂ ದುರಾಚಾರಿಯೂ ಆದ ನಾನು ಮಾಡಿದ ಅಪರಾಧವನ್ನು ಕ್ಷಮಿಸಿ ಕಾಪಾಡು. ನಿಮ್ಮ ಮಹಿಮೆಯು ಆದಿಶೇಷನಿಗೆ ಸಹಾ ತಿಳಿಯಲಸಾಧ್ಯವಾಗಿರುವದು. ಅಂದಬಳಿಕ ನಮ್ಮಂಥವರ ಪಾಡೇನು? (ಎಂದು ನಮಸ್ಕರಿಸುವನು.)

ಬಸವೇಶ: ಮಹನೀಯಾ ಈ ವಿಟ ಪುರಷನಿಗೆ ಜೀವದಾನ ಕೊಡು.

ಕಿನ್ನರೇಶ: ಎಲೋ ಭುಜಂಗಾ ಏಳು ಏಳು. (ಎಂದು ಎಬ್ಬಿಸುವನು)

ಗೋ.ಸಾಂಡಾ: (ಎದ್ದು) ಅಹಾ! ನಾನು ಎಲ್ಲಿರುವೆನು. ಅಹಾ! ನಾನು ಭ್ರಾಂತನಾಗಿರುವೆನೇನು? (ಎಂದು ಕಿನ್ನರೇಶನನ್ನು ನೋಡಿ) ಓಹೋ ಪ್ರಾಣಿ ದಯಾಪರನಾದ ಕಿನ್ನರೇಶಾ ಅಜ್ಞಾನವಶಾತ್ ವಾಙ್ಮನೋತೀತವಾದ ತನ್ನ ಮಹಿಮೆಯನ್ನು ಅರಿಯದೆ ತಮ್ಮಮೇಲೆ ಜರಗಿಸಿದ ಉದ್ಧಟತನಕ್ಕೆ ಕೃದ್ಧನಾಗದೆ ಕೃಪೆಯಿಂದ ಅನುಗ್ರಹಿಸಬೇಕೆಂದು ಬೇಡಿಕೊಳ್ಳುವ ನನ್ನನ್ನು ಸಂರಕ್ಷಿಸುವ ಭಾರವು ತಮ್ಮದೇ? (ಎಂದು ನಮಸ್ಕರಿಸುವನು) ಅಹಾ! ಇದೆಂಥಾ ವಿಚಿತ್ರವು? ಈ ಶಿವಶರಣರ ಮಹಿಮೆಯನ್ನು ವರ್ಣಿಸಲು ವಿಷ್ಣು ಬ್ರಹ್ಮರಿಗೆ ಕೂಡಾ ಅಶಕ್ಯವೇ? ಯಾಕೆಂದರೆ ಈ ಮಹನೀಯರು ಮೊದಲು ನಿಗ್ರಹಿಸಿದವರು ತಾವೇ! ಆಮೇಲೆ ದಯದಿಂದ ಅನುಗ್ರಹಿಸಿದವರು ತಾವೇ ಅಂದಬಳಿಕ ಈ ಮಹನೀಯನ ಚರಿತ್ರವು ವಿಚಿತ್ರವಲ್ಲೇ?

ಕಿನ್ನರೇಶ: ಎಲೋ ಭುಜಂಗಾ ನೀನು ಇನ್ನುಮೇಲೆ ಇಂಥಾ ಜಾರ ಕರ್ಮವನ್ನು ಮಾಡಲುದ್ಯುಕ್ತನಾಗಬೇಡಾ. ಕಂಡಿಯಾ?

ಗೋ.ಸಾಂಡಾ: ಮಹನೀಯಾ ! ಅದೇ ದುಷ್ಕರ್ಮದಿಂದಲೇ ಇಂಥಾ ದುಸ್ಸಂಕಟವನ್ನು ಹೊಂದಿದನಲ್ಲವೇ? ಅಂದಮೇಲೆ ಇನ್ನೆಂತಾಗುವದು. ಈ ಜಾರತನವು ಅಪಮೃತ್ಯು ಅಪಮಾನ ಅಪಕೀರ್ತಿ ಇತ್ಯಾದಿ ದುರ್ದಶಗಳಿಗೆ ಕಾರಣೀಭೂತವಾದಂಥಾದ್ದು. ಇದು ನನಗೆ ಅನುಭವವಿದ್ದು ಪುನಃ ಅದೇ ಜಾರಕರ್ಮದಲ್ಲಿ ಪ್ರವರ್ತನ ಮಾಡುವದೆಂದರೆ ಮಹಾ ಮೂರ್ಖತನವು.

ಕಿನ್ನರೇಶ: ಹಾಂ ! ಹೀಗೆ ವರ್ತಿಸುವದು ಮನುಷ್ಯನಿಗೆ ಮುಖ್ಯ ಹಿತ ಕರ್ಮವು.

ಗೋ.ಸಾಂಡಾ: ಇರಲಿ, ಮಹನಿಯಾ! ಇನ್ನುಮೇಲೆ ನನಗೆ ಸದೂಪದೇಶವನ್ನು ಮಾಡಿ ದೀಕ್ಷೆಯನ್ನು ಕೊಟ್ಟು ನನ್ನನ್ನು ಪೂತಾತ್ಮನನ್ನಾಗಿ ಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ..

ಕಿನ್ನರೇಶ: ಒಳ್ಳೇದು ನಡೆ. (ಎಂದು ಹೋಗುವನು).

ಬಸವೇಶ್ವರ: ಮಾರಾಜ ಸಿರೋಮಣಿಯೇ ಇನ್ನು ಮಂದಿರಕಡೆಗೆ ಹೋಗುವಾ ನಡೆ.

ಪದ

ಸ್ಮರಹರ ಮುರಹರ ಪರಿಣತ ವರಪದ । ಶರಜಸಮನಹರ
ಗುರುವರ ಪರಿಪಾಹಿ । ಪರತರ ಗಿರಧರ । ಶರಣ ಶರಣಹರ ॥
ಸ್ಮರಹರ ಮುರಹರ ॥ ಭೂಬ್ರುಝಾ । ಮುಖಪಂಕಜಾತಕರಣೇ
ಸಂಸಾರಾಗ್ನೀಪಯೋದ ಸಾಮ್ಯ ಶಂಭೋ ॥ ಪರತರ ॥ ೧ ॥

೪ನೇ ಅಂಕ ಸಮಾಪ್ತ.

===***===***===

೫ನೇ ಅಂಕ

ದೃಶ್ಯ – ೧

(ರಸ್ತಾ ಪರದೆ ಜಗದೇವ ಬರುವನು)

ಜಗದೇವ:

ಪದ

ಪೊರೆಯೊ ವಿಧುತನಯ
ಸಿಖಿಲೋಚನ ಸ್ಮರಹರ ಘನಕರುಣಾ ಭರಣ ॥ ಪ ॥
ಸುಗುಣ ಗಣ ಸದನ ವೃಷಭ ವಾಹನ ಬಿಸಜನಯನ
ವಿಷಭವ ಭವನ ಪರಿಣತ ಚರಣ ಗರಗಲ ಶಿವನೆ ॥ ೧ ॥

ಆಹಾ! ಶಿವಭಕ್ತವಂತನಾದ ನಾನು ಅನೇಕ ಶುಭಕಾರ್ಯಗಳನ್ನು ಜರಗಿಸುತ್ತಾ ಅನ್ನದಿಂದ ಬಹುಜನರನ್ನು ತೃಪ್ತಿಪಡಿಸುತ್ತಾ ಈ ಲೋಕದಲ್ಲಿ ಜಗದೇವನೇ ಅನ್ನದಾತನು ಶಿವಭಕ್ತಿವಂತನು. ಪ್ರಾಣಿದಯಾಪರನು ಎಂದು ಪ್ರಸಿದ್ಧಿಯನ್ನು ಪಡೆದಿರುವೆನು. ಅಂದ ಬಳಿಕ ಇದೊಂದು ಶಂಕರ ಕೃಪೆಯೆ ಸರಿಯೆಂದು ಕಲ್ಪಿಸುತ್ತೇನೆ. ಇರಲಿ! ಬಸವೇಶ್ವರನು ಕೇವಲ ಮಹಿಮಾಶಾಲಿಯು. ಆ ಮಹನೀಯನ ಶಿವಭಕ್ತಿ ತತ್ಪರತೆಯನ್ನು ಶಿವಜ್ಞಾನ ಸಂಬಂಧತೆಯನ್ನು ಊಹಿಸಲು ಅಸಾಧ್ಯವಾಗಿರುವುದು. ನಾನಾದರೂ ಆತನ ಆಜ್ಞಾಬದ್ಧನಾಗಿಯೇ ಇರುವೆನು. ಒಳ್ಳೆಯದು. ಆತನ ಚರ ಸಂತರ್ಪಣದ ವೇಳೆ ಆದರೂ ಈಗಲೇ ಇರುವುದು. ನಾನಾದರೂ ಆತನ ದರ್ಶನ ತೆಗೆದುಕೊಂಸಡು ಮುಂದಿನ ಕೆಲಸ ನೋಡುವಾ (ಎಂದು ಹೋಗುವನು).

ಬಿಜ್ಜಳ: (ಬಸವೇಶ್ವರಾ ಮಂಚಣ್ಣರೊಡನೆ ಕೂಡ್ರಬೇಕು.) ಮಂಚಣ್ಣರೇ ನಮ್ಮ ಪಟ್ಟಣದಲ್ಲಿ ಇವತ್ತಿನ ದಿವಸದಲ್ಲಿ ಏನಾದರೂ ಅನಿಮಿತ್ಯವಾಗಿ ಜರುಗಿದ ಸಂಗತಿ ಉಂಟೇನು?

ಮಂಚಣ್ಣ: ಮಹಾನ್! ಏನು ಹೇಳಲಿ? ಪದೇ ಪದೇ ಶಿವಭಕ್ತರ ನಡಾವಳಿಯು

ಹೇಳಿ ಸಾಕಾಯಿತು. ಕೇಳಿರಿ– ಸರ್ವಮತೋತ್ಕೃಷ್ಟವಾದ ಯಾವ ನಮ್ಮ ಜೈನ ಮತದವರಿಗೆ ಈ ನಮ್ಮ ಗ್ರಾಮದಲ್ಲಿ ಶಿವಧ್ಯಾನವನ್ನು ಮಾಡುತ್ತ ತಿರುಗುವ ಅಲ್ಲಮ ಮಲ್ಲಿ ಮೊಬ್ಮಯ್ಯಗಳೆಂಬವರು ತಮ್ಮ ಶಿವಮತವೆ ಸರ್ವ ಮತಾಚಾರಕ್ಕಿಂತಲೂ ಶ್ರೇಷ್ಠವೆಂದು ಬೋಧಿಸಿ, ನಿನಗೆ ದೀಕ್ಷೆ ಮಾಡುತ್ತೇವೆಂದು ಮಾಡಿ, ಒಬ್ಬರ ಕನ್ನೆಯರೊಬ್ಬರು ತಗೆದುಕೊಂಡು ಲಗ್ನಮಾಡಿ, ನಿನ್ನಿನ ದಿವಸ ವಧುವರರನ್ನು ಮೆರೆಸಿ, ಈ ಪಟ್ಟಣವೆಲ್ಲ ಹಾಳು ಮಾಡಿಬಿಟ್ಟಿರುವರು. ಈ ಶಿವಭಕ್ತರ ನಡಾವಳಿಯೆಂಬ ಗ್ರಹಣದಿಂದ ನಮ್ಮ ಜೈನ ಮತದ ನಡಾವಳಿಯೆಂಬ ಚಂದ್ರನು ಕಂದಿರುವನು. ಮಾಡತಕ್ಕದ್ದೇನೂ ಉಪಾಯವಿಲ್ಲ. ಸುಮ್ಮನಿರುತ್ತೇವೆ.

ಬಿಜ್ಜಳ: (ವ್ಯಸನದಿಂದ)

ಪದ

ನಮೋ ಜೈನಾಯ ಎಂಬೋ ಮಂತ್ರ
ಅಮಮ ಸಾರಿತೆ ಅತಂತ್ರ
ಉಮಾರಮಣ ಪೊರೆಯೊ ನನ್ನ ಸನ್ಮತದಲ್ಲಿ ॥ ಪ ॥
ಜಾತಿಸೂತಕವಳಿದು ಈ । ನೀತಿ ಪಾತಕನ ಮಾತು ಕೇಳಿ
ಸೋತೆನಕಟ ಪೊರೆಯೊ ಭವದಿ । ಪತಿತ ಪಾವನ॥ ೧ ॥
ಭೂಪರಿಪಾಲಿಪ ನಾನು । ಭೂಸಂಚಾರಿಯಾದೆನಯ್ಯಾ
ಭೂಗ್ರಾಮದೊಡೆಯ ಮನ್ನಿಸೊ ಭೂರಿ ಭಾಗ್ಯನೆ ॥ ೨ ॥

ಆಹಾ! ಯಾವ ಪರಮ ಪವಿತ್ರವಾದ ಈ ನಮ್ಮ ಜೈನ ಮತದಲ್ಲಿ ಉದ್ಭವಿಸಿದ ನಾನು ಮಹಾ ಪರಾಕ್ರಮಶಾಲಿಯಾಗಿ ನಾನು ಮಾಡುವ ಭೂಪರಿಪಾಲನದ ನೀತಿಯನ್ನು, ಮತ್ತು ಪ್ರಜರಲ್ಲಿರುವ ನನ್ನ ಭೀತಿಯನ್ನು ಮನಸ್ಸಿನಲ್ಲಿ ಉತ್ಪ್ರೇಕ್ಷಿಸಿದರೆ, ಪ್ರಜರ ಮನಸ್ಸಿನಲ್ಲಿನ ದುಷ್ಕರ್ಮವನ್ನು ಎಷ್ಟೆಂದು ಹೇಳಲಿ? ಸಧ್ಯ ಪರಮತದವರನ್ನು ದೂಷಿಸುವುದಲ್ಲದೆ, ತಮಗನ್ಯವಾದ ಜೈನಾದಿ ಶ್ರೇಷ್ಠ ಮತದವರಿಗೆ ಒಡಂಬಡಿಕೆಯಾಗುವಂತೆ ಉಪದೇಶವನ್ನು ಮಾಡಿ, ಅವರನ್ನು ಕುಲಗೆಡಿಸಿದರು ಮತ್ತು ಪರಮತದ ದೇವಾಲಯಗಳಲ್ಲಿರತಕ್ಕ ದೇವರುಗಳನ್ನು ಕಿತ್ತಿ ಹಾಕಿ ತಮ್ಮ ಈಶ್ವರಲಿಂಗ ಸ್ಥಾಪನೆ ಮಾಡಿರುವರು. ಅಯ್ಯೋ! ಭ್ರಷ್ಟರ ಉಪಟಳವನ್ನು ನಾನು ಎಷ್ಟು ಸಾರೆ ಸಹಿಸಲಿ. ನಾನು ಸಾರ್ವಭೌಮ ಶೇಖರನಾಗಿದ್ದು, ನಮ್ಮ ಕುಲಕ್ಷಯವನ್ನು ಮಾಡುವ ಈ ದುರ್ನಡತೆಗೆ ಕ್ಷಮಿಸಿದ ನನ್ನ ಜನ್ಮಕ್ಕೆ

ಧಿಕ್ಕಾರ ಧಿಕ್ಕಾರ. ಅಯ್ಯೋ! ಆ ಶರಣರಿಂದ ಈ ನಮ್ಮ ಪವಿತ್ರವಾದ ಜೈನ ಮತದವರು ಉಪದೇಶಿಸಲ್ಪಟ್ಟು, ಈ ರೀತಿ ಜಾತಿ ಭ್ರಷ್ಟರಾದರೆ ಆಹಾ! ಕಷ್ಟ ಕಷ್ಟ (ಎಂದು ವ್ಯಸನದಿಂದ ಕೂಡ್ರುವನು)

ಬಸವೇಶ್ವರ: ಮಹಾರಾಜಾ ಕಪಟಯಾದ ಈ ಕೊಂಡಿಮಂಚಣ್ಣರ ಮಾತನ್ನು ಕೇಳಿ ಮುಂದಾಗುವುದನ್ನರಿಯದೆ ಸುಮ್ಮನೆ ಯಾಕೆ ಬಡಬಡಿಸಿ ಈ ನಿಮ್ಮ ಕಲ್ಯಾಣ ಪಟ್ಟಣಕ್ಕೂ ಮತ್ತು ನಿಮ್ಮ ರಾಜಸ್ಥಾನಕ್ಕೂ ಹಾನಿ ಯಾತಕ್ಕೆ ತರಿಸಿಕೊಳ್ಳುವೆ? ಕೇಳು ನೀನು ಕೇವಲ ಶಿವಾನುಭವಿಗಳಾದ ಅಲ್ಲಮ, ಮಲ್ಲಿಬೊಮ್ಮಯ್ಯಗಳು ಅಂತ್ಯಜರೆಂದು ತಿಳಿದು ಪ್ರತಿಯೊಂದು ಭಾಷಣಕ್ಕೆ ಹೊಲೆಯರು, ಹೊಲೆಯರು ಎಂದು ನುಡಿದು ಅವರಿಗೆ ತುಚ್ಛ ಮಾಡುತ್ತೀಯಾ? ಭೂಪಾಲಮಣಿ. ಆ ಮಹನೀಯರು ಅಂತ್ಯಜರಲ್ಲ. ಭೂಪವಿತ್ರಾರ್ತವಾಗಿ ಬಂದಿರುವ ಕೇವಲ ಪರಶಿವರೇ ಅವರು. ತಸ್ಮಾತ್ ಆ ಮಹಾತ್ಮರ ಮಹತ್ವವು ವರ್ಣಿಸಲು ಅಸಾಧ್ಯವಾಗಿರುವುದು ನೋಡು. ಪೂರ್ವದಲ್ಲಿ ಪರಶಿವನು ಅರ್ಜುನನಿಗೆ ಹಿತಮಾಡುವುದಕ್ಕೆ ಬಂದು, ಕಿರಾತನಾಗಿ ಆತನ ಮನೋಭಿಲಾಷೆಯನ್ನು ಪೂರ್ಣಮಾಡಲಿಲ್ಲವೆ? ಅದರಂತೆ ಆ ಮಹನೀಯರಾದರೂ ಶಿವಶರಣರ ಹಿತಾರ್ಥಕ್ಕಾಗಿ ಆ ನಾಮಧರಿಸಿ ಬಂದಿರುವರಲ್ಲದೆ ಮತ್ತೆ ಬೇರೆಯಿಲ್ಲ.

ಬಿಜ್ಜಳ: (ಸಿಟ್ಟಿನಿಂದ) ಬಸವೇಶಾ! ನೀನು ಬಹಳ ಹುಚ್ಚನಿರುವಿ. ಯಾಕೆಂದರೆ ಕೇಳು–ಯಾವ ಜಾತಿಯವರೇ ಆಗಲಿ ಅವರು ಶಿವನಾಮವನ್ನು ಉಚ್ಚರಿಸುತ್ತಾ ಭಸ್ಮ ರುದ್ರಾಕ್ಷಿಗಳಿಂದ ಅಲಂಕೃತರಾಗಿ ಸಂಚರಿಸುತ್ತಾ ನಿನ್ನ ಹತ್ತಿರ ಬಂದರೆ ಅವರು ಭಕ್ತರಕ್ಷಿತಾರ್ಥವಾಗಿ ಬಂದಿರುವ ಸಾಕ್ಷಾತ್ ಪರಮೇಶ್ವರರೆಯೆಂದು ಕಲ್ಪನೆ ಮಾಡುತ್ತಿ? ಇಂಥಾ ನೀಚರೆಲ್ಲರು **ಪರಶಿವ**ರಾದರೆ ತೀರಿತು ಬಿಡು. ಇಂಥಾ ಭಾಷಣಕ್ಕೆ ನಾನುಯೆಂದೂ ವಡಂಬಡುವುದಿಲ್ಲ. ನೀನು ಸುಮ್ಮನಿರು(ಯೆಂದು ರೌದ್ರದಿಂದ)

ಪದ(ರೌದ್ರದಿಂದ)

ಸಾರಿರಿ ಸಾರಿರಿ ಮಂಚಣ್ಣರೆ ನೀವು
ತರಿಸಿರಿ ವಂಚಕರ ಶಿರವನ್ನು ಭರದಿ ॥ ಪಲ್ಲ ॥
ಅಲ್ಲಯ್ಯ ಮಲ್ಲಿಬೊಮ್ಮಯ್ಯ ವೆಂಬಂತ್ಯಜರ
ನಿಲ್ಲದಲೆ ಕಣ್ಣುಗಳ್ ಕೀಳಿಸಿರಿ ಭರದಿ ॥ ೧ ॥

ಧರೆಯನಾಳುವ ನನ್ನ ಧೈರ್ಯಕೆ ಪರುಷ
ದೊರೆಯು **ಮುರಿಗೇಂದ್ರಾ**ನು ಪೊರೆವನು ಸರಸಾ ॥ ೨ ॥

ಆದ್ದರಿಂದ ಕೊಂಡಿಮಂಚಣ್ಣರೆ ಇಂಥಾ ನೀಚರಿಗೆ ಇದೆ ಶಿಕ್ಷವೆ ಹೊರತು ಮತ್ತೆ ಬೇರೆ ಇಲ್ಲ. ಕಾರಣ ಅವರೀರ್ವರನ್ನೂ ಒಂದು ಭಯಂಕರವಾದ ಕಾಡಿಗೆ ತೆಗೆದುಕೊಂಡು ಹೋಗಿ ಅವರ ಕಣ್ಣುಗಳನ್ನು ಕಿತ್ತುವಂತೆ ಚಾಂಡಾಲರಿಗೆ ಆಜ್ಞಾಪಿಸಿ ಬನ್ನಿ.

ಮಂಚಣ್ಣ: ಮಹಾನ್ ಆಜ್ಞಾ (ಎಂದು ಹೋಗುವರು).

ಬಸವೇಶ್ವರ: ಮಹಾರಾಜಾ ಸ್ವಲ್ಪ ಸ್ವಲ್ಪ ವಿಚಾರ ಮಾಡಿ ನೊಡಿರಿ. ಯಾಕೆಂದರೆ ಅನೇಕ ವೇಳೆ ಶಿವಭಕ್ತರ ಶಕ್ತಿಯು, ಭಕ್ತಿಯು, ಮತ್ತು ಮಹತ್ವವು ಇವೆಲ್ಲಾ ನೀವು ಪ್ರತ್ಯಕ್ಷವಾಗಿ ನೋಡಿರುವಿರಿ. ಆ ಕಾರಣ ಇಂಥಾ ದುರ್ಬುದ್ಧಿಗೆ ಈಡಾಗಬೇಡರಿ. 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬ ನೀತಿಯ ವಾಕ್ಯದ ಅಭಿಪ್ರಾಯವನ್ನು ಮನಸ್ಸಿನಲ್ಲಿ ಗ್ರಹಿಸಿ, ಮಹಾರಾಜಾ ಕೇಳು ವಿಷ್ಣು ಶಿವಭಕ್ತನಾದ ದಧೀಚನೊಡನೆ ಯುದ್ಧವನ್ನು ಮಾಡಿ, ಚಕ್ರಾಯುಧವನ್ನು ಮುರಿದುಕೊಂಡು ಪರಾಭವವನ್ನು ಹೊಂದಲಿಲ್ಲವೆ? ನೋಡು ವಿಷ್ಣು ಸಾಮಾನ್ಯನೆ? ಅಂಥವನು ಸಹ ಶಿವಭಕ್ತರನ್ನು ಧಿಕ್ಕರಿಸಿದ ಕಾರಣ ಪರಮಾರ್ಥಕ್ಕೆ ಗುರಿಯಾದನು. ಅಂದ ಬಳಿಕ ನಿನ್ನಂಥವನ ಪಾಡೇನು? ಆದ್ದರಿಂದ ಅವರೀರ್ವರನ್ನೂ ಸುಮ್ಮನೆ ಬಿಡುವಂತೆ ಪ್ರತಿ ಆಜ್ಞೆಯನ್ನು ಮಾಡು.

ಬಿಜ್ಜಳ: ಬಸವೇಶಾ! ಮತಾಭಿಮಾನದಿಂದ ಈ ರೀತಿ ಕಥೆಗಳನ್ನು ಕಲ್ಪಿಸಿ ಹೆದರಿಸಿದರೆ ನಾನು ಹೆದರತಕ್ಕವನೆ? ಜಿಂಕೆಗಳ ಹಿಂಡಿಗೆ ಮೃಗಶಿರೋಮಣಿಯಾದ ಸಿಂಹವು ಹೆದರುವುದೆ? ಸರ್ಪಗಳನ್ನೂ ನುಂಗುವ ಗರುಡವು ಮಳೆಯಿಂದ ಬೀಳುವ ಕಿರುಜಂತುಗಳಿಗೆ ಹೆದರುವುದೆ? ಆದ್ದರಿಂದ ಈಗಿನವೇಳೆಯಲ್ಲಿ ನೀನು ನನಗೆ ಎಷ್ಟು ಹೇಳಿದಾಗ್ಯೂ ಕೇಳುವ ಹಾಗಿಲ್ಲ.

ಬಸವೇಶ್ವರ: ರಾಜಾ, ಶಿವಭಕ್ತದ್ರೋಹಿಯಾದ ನಿನ್ನ ಮಂತ್ರಿತನವೆ ಸಾಕು. ಇನ್ನು ಮೇಲೆ ಜಾರತ್ವ, ಚೋರತ್ವ, ಮೋಸ ಮೊದಲಾದ ಅನಾಚಾರಭರಿತವಾಗಿ, ಕಟಕರ ಕೇರಿಯಂತೆ ಆಗುವ ಈ ಕಲ್ಯಾಣಪಟ್ಟಣದಲ್ಲಿ ವಾಸ ಮಾಡುವುದು ಸಾಕು. ಇನ್ನು ಮೇಲೆ ನನಗೆ ಅಪ್ಪಣೆಯನ್ನು ಕೊಡು.

ಬಿಜ್ಜಳ: ಆಹಾ! ಬಸವೇಶ. ಈ ಕಲ್ಯಾಣಪಟ್ಟಣವು ಕಟಕರ ಕೇರಿ ಆಗುವುದೆಂದು ಸೂಚಿಸುವೆ ಅಲ್ಲಾ, ಅಯ್ಯೋ ನಿನ್ನ ಭವಿಷ್ಯ ಜ್ಞಾನಕ್ಕೆ ಬೆಲೆಯೆ ಇಲ್ಲ. ನೀನು ಭವಿಷ್ಯಜ್ಞಾನಿ ಆಗಿದ್ದರೆ ಈ ರೀತಿಯಾಗಿ ಜೈನ ಮತದವರನ್ನು ಕುಲಗೆಡಿಸಬೇಡ. ಮಹಾರಾಜನು ಜೈನಮತೋದ್ಭವನಾಗಿದ್ದು ಮಹಾ ಕೋಪಿ ಆಗಿರುವನು. ಇದನ್ನು ಕೇಳಿ ನಿನ್ನನ್ನು ಕೊಲ್ಲಿಸುವೆನೆಂದು ಮೊದಲೆ ಸೂಚಿಸಬೇಕಾಗಿತ್ತು. ಇಲ್ಲದಿದ್ದರೆ ಈ ಕಲ್ಯಾಣಪಟ್ಟಣಕ್ಕೆ ಅಧಿಪತಿಯಾದ ರಾಜನಿಂದ ಇಂಥಾದೊಂದು ಶಿವಭಕ್ತ ವಧೆಯಾಗುವುದು, ಅದನ್ನು ನೋಡಲಾಗದು ಎಂದು ಮೊದಲೇ ಹೇಳಬೇಕಾಗಿತ್ತು. (ನಗುತ್ತ) ಆಹಾ ಬಸವೇಶ! ಎಂಥಾ ಜ್ಞಾನಿಯೋ ನೀನು. ನಿನ್ನ ಮನಸ್ಸಿಗೆ ಬಂದಂತೆ ಮಾತನಾಡಿದರೆ ಆಯಿತೇನು?

ಬಸವೇಶ್ವರ: ಆಹಾ! ಶಿವ ಶಿವಾ!! ಈ ಹೀನೋಕ್ತಿಗಳು ಈ ರಾಜನ ಮನಸ್ಸಿಗೆ ಕಾರಣಗಳಾಗಿರುವವು. ಇರಲಿ. ಮಹಾರಾಜಾ ಹಲವು ಮಾತುಗಳಿಂದ ಪ್ರಯೋಜನವೇನು? ನಮಗೆ ಈ ಮಂತ್ರಿಪಟ್ಟವು ಸಾಕು. ಬೇಗನೆ ಅಪ್ಪಣೆ ಕೊಡು.

ಬಿಜ್ಜಳ: ಒಳ್ಳೆಯದು ಬಸವೇಶಾ. ನಿನ್ನ ಮನಸ್ಸಿನಂತಾಗಲಿ, ಹೋಗಬಹುದು. (ಎಂದು ಹೇಳಿ ತಾನು ಹೊರಟುಹೋಗುವನು)

ಬಸವೇಶ್ವರ: **ಸಾಕಿ**

ನಾಶಮಾಡಲಿ । ಈಶ್ವರ ನೀ ಭೂ ।
ಮೀಶನ । ಕುಲವು ಬೇಗಾ॥
ಆಶಿಸುವನು । ಮನದಿ । ಶಿವಭಕ್ತಿ ।
ಈಶಾ ಸಂಗತಿ ಈಗಾ ॥

ಇನ್ನು ಮೇಲೆ ಸಂಭ್ರಮದಿಂದೊಪ್ಪುವಾ ಈ ಕಲ್ಯಾಣಪಟ್ಟಣವು ಕಟುಕರ ಕೇರಿಯಾಗುವುದು ಸಿದ್ಧಾಂತ ! ಸಿದ್ಧಾಂತ !! ಇದೇ ವಾಕ್ಯವು ನಿಶ್ಚಯವೆ ಸರಿ. (ಎಂದು ಶಪಿಸಿ ಹೋಗುವನು).

===

ದೃಶ್ಯ – ೨

(ರಸ್ತಾ ಪರದೆಯ ಮುಂದೆ ವ್ಯಸನದಿಂದ ಪದ ಅನ್ನುತ್ತಾ)

ಜಗದೇವ:

ಪದ

ಘನತರ ದಯಾಂಭೋನಿಧೇ । ದೇವಾ ಪಾವಕಾ
ನೇತ್ರ ಸಮಯ । ಕಮಲ ವಿಮಲ । ಶಮನತಾತಾ
ನೀ ಕೇಳೈ । ಕಿಲಾಲ ರಾಶಿಯೊಳಗೆ । ಮುಳುಗಿದೆ
ನಾನು ತ್ವರದಿಂದೆ ॥ ೧ ॥
ಅಸುಗಳೀಯಲೇನು?ಕಾನನಾಲಯದೊಳು
ಆದೇಶವನ್ನು । ದೋಷವನ್ನು ಸಮ್ಮತದಿ ಕೆಡವುತ್ತೇನಾ ।
ಸುಡಲು ತಡಿಯದೆ ಒಡೆಯಾ ಉಡುಪತಿ ಮೌಲಿರುಪಾನೆ॥

ಆಹಾ ! ಶಿವಭಕ್ತದ್ರೋಹಿಯಾದ ಬಿಜ್ಜಳನನ್ನು ವಧಿಸಲು, ಶಿವ ಶರಣರ ಆಜ್ಞಾನುಸಾರವಾಗಿ ಶೀಘ್ರವಾಗಿ ಹೋಗುತ್ತೇನೆ. ಆ ಕಾರಣ ಶೀಘ್ರವಾಗಿ ಶಿವಪ್ರಸಾದವನ್ನು ಕೊಡು ಎಂದು ನನ್ನ ಜನನಿಗೆ ಕೇಳಲು, ಆ ಪೂಜ್ಯಳು ಅಂದದ್ದೇನೆಂದರೆ– (ಕೋಪವನ್ನು ತಾಳಿ) ಎಲೋ ಭೂಮಿಯಲ್ಲಿ ಶಿವದ್ರೋಹಿಯನ್ನು ನೋಡಿದ ಕೂಡಲೇ ಶಿಕ್ಷಿಸಬೇಕು. ಅದು ಅಸಾಧ್ಯವಾದರೆ ತಾನು ಪ್ರಾಯಶ್ಚಿತ್ತ ಹೊಂದಬೇಕು. ಅದು ಇಲ್ಲವೆ ಆ ದೇಶವನ್ನಾದರೂ ಬಿಡಬೇಕು. ಇದು ಆಗದೆ ಯಾವನು ಸೈರಿಸಿಕೊಂಡಿರುವನೋ ಅವನು ಮಹಾಪಾಪಿಯು, ಅವನು ನರಕಕ್ಕೀಡಾಗುವನು. ಹಿಂದೆ ತಂದೆಯಾದ ದಕ್ಷಬ್ರಹ್ಮನು ಯಜ್ಞ ಮಾಡುವಲ್ಲಿ ಪಾರ್ವತಿಯು ಶಿವನಿಂದೆಗೆ ಅನುಸರಿಸದೆ ಯಜ್ಞಕುಂಡದಲ್ಲಿ ಬಿದ್ದು, ತನುವನ್ನೆ ಬಿಡಲಿಲ್ಲವೆ? ಉಪಮಾನ್ಯು ಮುನಿಯು ಶಿವನಿಂದೆಯನ್ನು ಕೇಳಲಾರದೆ ಸತ್ತುಭಸ್ಮವಾಗಲಿಲ್ಲವೆ? ಎಲವೋ ಪಾಪಾತ್ಮಾ, ಶಿವದ್ರೋಹದ ವಾರ್ತೆಯನ್ನು ಕೇಳಿ, ಆ ದ್ರೋಹಿಯನ್ನು ಕೊಲ್ಲದೆ ಪ್ರಮಥಗಣ್ಯನಾದ ಬಸವೇಶ್ವರನಿಗೆ ಕೊಟ್ಟ ಭಾಷೆಯನ್ನು ಎಚ್ಚರವಿಲ್ಲದೆ, ಮಹಾಗಣಂಗಳ ಆಜ್ಞೆಯನ್ನು ಲಕ್ಷಕರಿಸದೆ, ಆ ದುರಾತ್ಮನ ದುಷ್ಕೃತ್ಯವನ್ನು ನೆನೆಯದೆ ಈ ನಿನ್ನ ಪಾಳು ಹೊಟ್ಟೆಯನ್ನು ಹರಿದುಕೊಳ್ಳುವುದಕ್ಕೆ ಬಂದೆಯೊ? ಥೀ ಥೀ !! ನಿನಗೆ ನಾಯಿಯ

ಜನ್ಮವು ಬರುವುದೇ ನಿಜವು. ಎಲೋ ಪಾಪಾತ್ಮ ಶಿವಭಕ್ತ ದ್ರೋಹದ ವಾರ್ತೆಯನ್ನು ಕೇಳಿ, ಪ್ರಸಾದ ಸೇವನೆಗೆ ಗಡಬಡಿಸುತ್ತಾ ಬಂದಿರುವೆಯಾ? ಮೂರ್ಖಾ! ನಿನ್ನ ಗಂಟಲಿನಲ್ಲಿ ಈ ಪ್ರಸಾದವಾದರೂ ಹ್ಯಾಗೆ ಇಳಿಯುವುದು? ಥೂ ! ನಿರ್ಲಜ್ಜಾ !! ತಿನ್ನು ಎಂದು ಹಿತ್ತಲ ಬಾಗಿಲ ಮುಂದೆ, ನೆಲದ ಮೇಲೆ ನನ್ನ ತಾಯಿಯು ಪ್ರಸಾದವನ್ನು ಚೆಲ್ಲಿರುವಳಲ್ಲಾ ! ಶಿವ ಶಿವಾ! ಪಾಪಿಯಾದ ನಾನು ಆ ಪ್ರಸಾದವನ್ನು ಹ್ಯಾಗೆ ತಿನ್ನಲಿ? (ಯೆಂದು ಮುಖ ತಗ್ಗಿಸಿ ನಿಲ್ಲುವನು. ಅಷ್ಟರಲ್ಲಿ ಅಲ್ಲಯ್ಯ ಮಲ್ಲಿಬೊಮ್ಮಯ್ಯಗಳು ಬರುವರು).

ಬೊಮ್ಮಯ್ಯ: ಏನು ಜಗದೇವನೆ ಯೋಚನೆಯಲ್ಲಿರುವೆ?

ಜಗದೇವ: ಮಹಾತ್ಮರೆ ಏನು ಹೇಳಲಿ? ನಾನು ಅಜ್ಞಾನಿ ಇರುವೆನೆಂದು ತಿಳಿದು ಮೊದಲು ಬಸವೇಶ್ವರನ ದರ್ಶನ ತಗೆದುಕೊಳ್ಳಬೇಕೆಂದು ಆತನ ಬಳಿಗೆ ಹೋಗಿದ್ದೆನು. ಆತನು ನನಗೆ ಸುಜ್ಞಾನ ಬೋಧಿಸಿ ಶಿವಾ ಶಿವಾ ಅನ್ನು, ಶಿವನಿಂದೆ ಮಾಡವರ ಮುಖದರ್ಶನ ಮಾಡಬೇಡ. ಒಂದು ಪಕ್ಷಕ್ಕೆ ಕೇಳಿದರೆ ಅವರನ್ನು ಸಂಹರಿಸುವಂತೆ ಭಾಷೆ ತಗೆದುಕೊಂಡು ಕಳಿಸಿದನು. ಆಮೇಲೆ ತಿರುಗಿ ನಾನು ಮನೆಗೆ ಬಂದ ಮೇಲೆ ದುಷ್ಟ ಬಿಜ್ಜಳನು ಮಾಡಿದ ಶಿವದ್ರೋಹದ ವಾರ್ತೆಯನ್ನು ಕೇಳಿದ ತತಕ್ಷಣವೆ ಸಂಹರಿಸದಿರುವುದಕ್ಕೆ ನನ್ನ ತಾಯಿಯಾದರೂ ಕೋಪಿತಳಾಗಿ ನುಡಿದ ವಚನಗಳು ನನಗೆ ಲಜ್ಜೆಯನ್ನು, ಭೀತಿಯನ್ನು, ಪ್ರಾಯಶ್ಚಿತ್ತವನ್ನು ಉಂಟುಮಾಡುತ್ತಾ ನಾಯಿಯಂತೆ ಈ ಕೂಳನ್ನು ಹ್ಯಾಗೆ ತಿನ್ನಲಿ ಎಂದು ಯೋಚನೆಯಲ್ಲಿರುವೆನು. ತಮ್ಮ ಗಮನವೆತ್ತ?

ಮಲ್ಲಯ್ಯ: ನಮ್ಮ ಗಮನವಾದರೂ ಅತ್ತೇ ಸರಿ. ಮೂರ್ಖ ಬಿಜ್ಜಳನು ನಮ್ಮೀರ್ವರ ಕಣ್ಣುಗಳನ್ನು ಅರಣ್ಯದಲ್ಲಿ ಕೀಳಿ ಬರುವಂತೆ ಚಾಂಡಾಲರಿಗೆ ಹೇಳಿರಲು ಅವರು ನಮ್ಮನ್ನು ತಗೆದುಕೊಂಡು ಅರಣ್ಯಕ್ಕೆ ಹೋಗಿ, ನಮ್ಮ ಕಣ್ಣುಗಳನ್ನು ಕಿತ್ತುವಾ ಸಮಯದಲ್ಲಿ ಶಿವಾ ಶಿವಾ ಎಂದು ನಾಮಸ್ಮರಣೆ ಮಾಡಲು, ಆ ನಾಮಸ್ಮರಣೆಯು ಪ್ರಜ್ವಲಿಸುವ ಅಗ್ನಿಯಾಗಿ ಆ ಮೂರ್ವರಿಗೆ ತಾಗಲು ಅವರು ಭಯಪಟ್ಟು ಓಡಿಹೋದರು. ಆಮೇಲೆ ನಾವು ಇನ್ನು ಮಾತ್ರ ಆ ದುಷ್ಟ ಬಿಜ್ಜಳನಿಗೆ ವಧೆ ಮಾಡದೆ ಬಿಡಬಾರದೆಂದು ಹೊರಟಿರುತ್ತೇವೆ. ಬನ್ನಿರಿ ಹೋಗುವಾ.

ಬೊಮ್ಮಯ್ಯ: ಹೌದು ಮಹಾತ್ಮರೆ, ಈ ಅವಶ್ಯ ಕರ್ತವ್ಯವನ್ನು ಮಾಡುವವರೆವಿಗೂ

ತಾವು ನಾಯಿಯೆ ಸರಿ. ಈವಾಗ್ಗೆ ಹೆಚ್ಚಿನ ವಿಚಾರ ಮಾಡುತ್ತಾ ಕೂಡ್ರುವುದಕ್ಕೆ ಅವಕಾಶವಿಲ್ಲ. ಈ ಪ್ರಸಾದವನ್ನು ತಿರಸ್ಕರಿಸದೆ ಸೇವನೆ ಮಾಡಿ, ನಮ್ಮ ಕರ್ತವ್ಯ ಪೂರೈಸಿದ ನಂತರ ನಿಮ್ಮ ಅಪರಾಧ ವಿಷಯಕ್ಕೆ ವಿಚಾರ ಮಾಡುವಾ. ನಡೆಯಿರಿ ಬೇಗನೆ ಹೋಗುವಾ.

ಜಗದೇವ: ಓಹೋ ! ಭಕ್ತಿಮಾರ್ಗ ಸಂಪನ್ನರೆ, ಬಸವೇಶ್ವರನಾದರೂ ಈ ಕಲ್ಯಾಣಪಟ್ಟಣವು ಕ(ಖ)ಟಕರ ಕೇರಿಯಾಗಲೆಂದು ಶಪಿಸಿ, ತಾನು ಕಪ್ಪಡಿಯ ದಾರಿ ಹಿಡಿದಿರುವಂತೆ ನನಗೆ ಸ್ವಪ್ನಸೂಚಿ ಆಗಿರುವುದು. ನಾವಾದರೂ ಆ ದುಷ್ಟ ಬಿಜ್ಜಳನನ್ನು ಯಮಪಟ್ಟಣಕ್ಕೆ ಅಟ್ಟಿ, ಬಸವೇಶ್ವರನಲ್ಲಿಗೆ ಕಲಿಯೋಣ ಬೇಗ ನಡೆಯಿರಿ.

ಬೊಮ್ಮಯ್ಯ: ಆಹಾ! ಇದು ಬಹಳೆ ಉತ್ತಮವು ಬೇಗ ನಡೆಯಿರಿ (ಎಂದು ಶಂಕರ ಶಂಕರ ಎನ್ನುತ್ತ ಹೋಗುವರು)

===

ದೃಶ್ಯ – ೩

ಬಿಜ್ಜಳ: **ಪದ್ಯ**

(ವ್ಯಸನದಿಂದ)

ಹಾ ಶಾಪಂ ಹಾ ಪಾಪಂ ಕೋಪಿಸಿ ಪೋದನು
ಭೂಪ ಬಸವನು ॥ ಪಲ್ಲವಿ ॥
ಅರಿದು ಈ ಪರಿಯನು ಎಲ್ಲರಲು ।
ಚರಣ ನಡುಗಲೇನು ಚೋದ್ಯವೊ ।
ಭರದಿ ತಿಳಿಸಿರಿ ಈ ಶಕುನ ಶೂಚಯ ॥ ೧ ॥
ಕನ್ನಡಿಯ ನೋಡಲ್ಲೀಗ ಇನ್ನ ಶಿರವ ಕಾಣದಿರಲು
ಪನ್ನಂಗಧರಾ । ಇನ್ನೇನು ಗತಿಯೊ ॥ ೨ ॥

ಆಹಾ! ಇದೇನು ಕೊಂಡಿ ಮಂಚಣ್ಣರೆ? ಇವತ್ತು ಸಿಂಹಾಸನ ವನ್ನು ಏರುವಾಗ್ಗೆ ನನ್ನ ಕೈಕಾಲುಗಳು ನಡುಗಿದವು. ಅಲ್ಲದೆ ಈವಾಗ್ಗೆ ನನ್ನ ವಾಮನೇತ್ರವು ಹಾರುತ್ತಿರುವುದು. ಮತ್ತು ಇದಲ್ಲದೆ ನಿನ್ನಿನ ರಾತ್ರಿಯಲ್ಲಿ ನಮ್ಮ ಕುಲಕಂಟಕನಾದ ಬಸವೇಶ್ವರನು ಈ ನಗರವನ್ನು ಬಿಟ್ಟುಹೋದಂತೆ ಸ್ವಪ್ನ ಸೂಚ್ಯೆ ಆಯಿತು. ಇದೇನು ಮೋಸವಿರುವುದೊ ತಿಳಿಯದು.

ಆದ್ದರಿಂದ ಇನ್ನು ಮೇಲೆ ಪುರನಿವಾಸಿಗಳಾದ ಶಿವಭಕ್ತರುಗಳನ್ನು, ಮನಸ್ಸಿಗೆ ಬಂದಂತೆ ದಂಡಿಸುವುದಲ್ಲದೆ ಅವರನ್ನು ಈ ಪುರದಿಂದ ಹೊರದೂಡಿ ಬಿಡುವುದಕ್ಕೆ ಯಾರದೂ ಆತಂಕವಿಲ್ಲವೆಂದು ಯೋಚಿಸುತ್ತಾ ಸಂತೋಷದಿಂದ ಕನ್ನಡಿಯನ್ನು ನೋಡಿಕೊಳ್ಳಲು, ಅದರಲ್ಲಿ ನನ್ನ ಶಿರಸ್ಸೆ ಕಾಣದೆ ಹೋಯಿತು. ಇವೆಲ್ಲಾ ಅಮಂಗಳ ಚಿಹ್ನವೆ ಹೊರತು ಮತ್ತೆ ಬೇರೆ ಏನೂ ಇಲ್ಲ. ಇದಕ್ಕೆ ಏನು ಯೋಚನೆಯು?

ಮಂಚಣ್ಣ: ಮಹಾರಾಜಾ ಯೋಚನೆಯೇನು? ಇದಕ್ಯಾಕೆ ಇಷ್ಟು ವ್ಯಸನವು? ಪಿತ್ಥ ಪ್ರಕೋಪದಿಂದ ಹೀಗಾಗುತ್ತಿರಬಹುದು. ಮತ್ತೆ ಏನೂ ಇಲ್ಲ. ಪರಂತು ಹಾಗೆ ನಿಮಗೆ ಮತ್ತೇನಾದರೂ ಸಂಶಯವಿದ್ದ ಪಕ್ಷದಲ್ಲಿ ಶಾಂತಿ ಹೋಮಾದಿಗಳನ್ನು ನಮ್ಮ ಜೈನ ಮುನೀಶ್ವರರಿಂದ ಮಾಡಿಸಿದರಾಯಿತು. ತತ್ಕಾಲದಲ್ಲಿ ಇಂಥಾ ವಿಪತ್ತುಗಳು ನಾಶವಾಗಿ ಹೋಗುವವು. ಮತ್ತು ಅಸಮಧಾನವು ದೂರಾಗಬೇಕೆಂದರೆ ನಮ್ಮ ಮಹಾಮಂತ್ರವಿಲ್ಲವೆ? ನಮೋ ಜೈನಾಯ ನಮೋ ಜೈನಾಯ ಎಂದು ಪಠಿಸುತ್ತಾ ಕೂಡಿರಿ. ಅಂದರೆ ಆ ಮಂತ್ರವು ಸಿಂಹಾಸನವನ್ನಿಳಿಯಗೊಡದೆ, ಈ ಎಲ್ಲಾ ಕಟಕಟೆಯಿಂದ ಸ್ವಲ್ಪ ಕಾಲದಲ್ಲಿ ದೂರಮಾಡಿ ಬಿಡುವುದು. ಮಹಾರಾಜಾ! ಈ ಮಂತ್ರ ಪ್ರಭಾವವೇ ಅಂಥಾದ್ದು. ಯಾವನೇ ಪಠಿಸಲಿ ಸರ್ವ ಕಂಟಕಗಳು ಆತನಿಗೆ ಬಿಟ್ಟು ಓಡುವವು.

ಬಿಜ್ಜಳ: ಮಂಚಣ್ಣರೆ ನಿಶ್ಚಯವೇ ಸರಿ. ಹಾಗೇ ಮಾಡುತ್ತೇನೆ (ಎಂದು ತಡೆದು). ಹಾ ಇದೇನು? ನನ್ನ ಎದೆಯು ಹಾರುವದಲ್ಲಾ (ಎಂದು ರೋಧಿಸುವನು. ಅಷ್ಟರಲ್ಲಿ ಒಳಗೆ ಓಂಕಾರ ಶಬ್ದಮಾಡಬೇಕು).

ಜಗದೇವ: (ಪ್ರವೇಶಿಸಿ)

ಪದ

ದುಷ್ಟನೆ ಖಳ ಕರ್ಮಿಷ್ಟನೆ ದುರ್ಮಲ ನಷ್ಟಶೀಲನೆ ನಿನ್ನಂ!
ಕ್ರೂರಾಷ್ಟನೆ ಮದದಿ ಗರ್ವಿಷ್ಟನೆ ಭ್ರಷ್ಟನೆ ಕೊಲ್ಲಲು ಬಂದೆವೈ ।
ದಿಟ್ಟನೆ ನಿನ್ನ ಕುಟ್ಟುವೆವು ನಾವು ಅಟ್ಟುವೆವು ಯಮಸದನಕೆ ।
ಕೊಟ್ಟಿ ಮನುಜನೆ, ದುಷ್ಟ ಬಿಜ್ಜಳನೆ, ಮೆಟ್ಟಿಸೀಳುವೆವು ನಿನಗೆ ।
ಎಲೋ ನೃಪಾ! ಅಧಮಾ ಪಾಮರ ಶಿಖಾಮಣಿಯಾದ ಬಿಜ್ಜಳಾ !

ಯಾವ ಶಿವಭಕ್ತ ಶಿರೋಮಣಿಯಿಂದ ನೀನು ಸಕಲೈಶ್ವರ್ಯ ಸಂಪನ್ನನಾದೆಯಲ್ಲದೆ ತ್ರಿಜಗದಿ ವಿಶ್ರಾಂತಿನಾದೆಯೊ ಪುನಃ ಅದೇ ಶಿವಭಕ್ತರಲ್ಲಿ ದ್ವೇಷವನ್ನು ಬೆಳೆಸಿದಿಯಾ? ಥೂ ಥೂ ಭ್ರಷ್ಟಾ ! ಶಿವಭಕ್ತರೆಂದರೇನು ಸಾಮಾನ್ಯರೆಂದು ಕಂಡೆಯಾ? ಕೇಳು– ಯಾವ ಶಿವಶರಣರ ಭಯಂಕರ ಕಾರ್ಯಗಳಿಗೆ ಭೂಮಿಯು ನಡುಗಿ, ಸಪ್ತಸಮುದ್ರಗಳು ಅಲ್ಲೋಲ ಕಲ್ಲೋಲಗಳಾಗುತ್ತವೆಯೊ ಅಂಥಾ ವೀರಭಕ್ತ ಶಿಖಾಮಣಿಗಳಲ್ಲಿ ದ್ವೇಷತಾಳುವುದು ನಿನ್ನ ಯೋಗ್ಯತೆಯೊ? ಎಲೋ ಮೂಢಾ ! ಯಾವನು ಭುವನೋದ್ಧಾರಕನಾಗಿ, ದ್ವಿತೀಯ ಶಂಭುವಾಗಿ ಪರವಾದಿ ಕ್ರೂರ ಗಜಸಿಂಹನೆಂದು ಪ್ರಸಿದ್ಧಿಯನ್ನು ಪಡೆದ, ಆ ಬಸವೇಶ್ವರನು ಪೇಳುವ ಆ ಹಿತ ಭಾಷಣಗಳನ್ನು ಸಹ ಧಿಕ್ಕಾರ ಮಾಡಿದೆಯಾ? ಆಹಾ ! ಧಿಕ್ಕಾರ ! ಧಿಕ್ಕಾರ !! ಧಿಕ್ಕಾರ !!! ಎಲವೋ ನಿರ್ಲಜ್ಜ ನಿನ್ನ ಜನ್ಮಕ್ಕೆ ಏನೆನ್ನಬೇಕು? ಪಾಮರ ಶಿಖಾಮಣಿ ಬಿಜ್ಜಳ ಎಂದಲ್ಲವೆ ಮೂರ್ಖಾ ! ಈಗಲೇ ಶಿವಭಕ್ತರ ಅವತಾರವನ್ನು ನೋಡು.

ಮಂಚಣ್ಣ: ಛೀ ! ಛೀ ! ಹೇ ಮೂಢರಾದ ಶಿವಭಕ್ತರೆ, ಇಷ್ಟು ದಿವಸಗಳಲ್ಲಿ ನಡೆದಂತೆ ಇನ್ನು ಮೇಲೆ ನಿಮ್ಮ ಆಟವು ಇಲ್ಲಿ ನಡೆಯಲಾರದು. ಅದರಿಂದ ಏನಾದರೂ ಕೇಳಿಕೊಳ್ಳುವುದಿದ್ದರೆ, ದೂರ ನಿಂತು ಕೇಳಿಕೊಳ್ಳಿರಿ. ಇಲ್ಲದಿದ್ದರೆ ಇಕೊ ಯುದ್ಧಕ್ಕೆ ಸನ್ನದ್ಧರಾಗಿರಿ (ಎಂದು ಹತೇರಿ ಹಿರಿದು).

ಬಿಜ್ಜಳ:

ಪದ

ಅಲಲಲಲಾ ದೂರ ಸರಿರಿ ಭರದಿ ಮೂಢರೆ
ಕಿಲಕಿಲಕಿಲಕಿಲ ಜವದಿ ನಿಮ್ಮ ಸೀಳ್ವೆ ಅಧಮರೆ ॥ ಪ ॥
(ಎಂದು ಹತೇರಿ ಉಜ್ಜಿ ತಿರುವುತ್ತಾ ನಿಲ್ಲಬೇಕು)

ಜಗದೇವ:

ಪದ

ಛೀಛೀಛೀಛೀ ಛೀ ದೃಷ್ಟನೆ, ಭ್ರಷ್ಟನೆ ನಷ್ಟ ನೃಪವರ।
ಶ್ರೇಷ್ಠರೀಗ ನಿನಗೆ ಕಷ್ಟದೊಳಗೆ ನೂಕುವೆವೈ

(ಎಂದು ಈತನಾದರೂ ಒತ್ತಟ್ಟಿಗೆ ಹತೇರಿ ತಿರುವುತ್ತಾ ನಿಲ್ಲಬೇಕು).

ಬಿಜ್ಜಳ:

ಪದ

ತಡವದ್ಯಾತಕೆ? ಗಡಣದಿ ಬನ್ನಿರಿ ಸೈನಾ ನಾಯಕರೆ
ಒಡೆಯನ ಭಜಿಸುತ ಅಡಿಯಿಡಗುಡದಲ್ಲಿ ಈ
ಮೂಢರನು ಕುವಜವದಲ್ಲಿ ನಾವು.

ಜಗದೇವ: ಶರಣರಾ ಘಾಯದಿಂ ನೀನು ಮರಣ ಪೊಂದೆಲೋ
ಅರುಣೋದಯದಿ । ಕರುಣಿಸುವನು ಗುರುವರ ಜವದೀ ॥

(ಹತೇರಿ ತಿರುವಿ ಹೊಡೆದಂತೆ ಚೀರಬೇಕು). ಎಲೋ ದುಷ್ಟ ಶಿವಶರಣರ ಅಪ್ಪಣೆ ಮೇರೆಗೆ ಸಂಹರಿಸಲು ಬಂದ ನಮ್ಮ ಈ ಖಡ್ಗದ ಹತಿಯನ್ನು ಸಹಿಸಿಕೊ. (ಹಾ ! ಎಂದು ಹಕಾರಿ ಹೊಡೆದು ಪರಾಕು ಅನ್ನುತ್ತ ಬಯಲಾಗುವರು).

===

ದೃಶ್ಯ – ೪

(ದೇವಾಲಯ. ಸ್ಥಳ ಸಂಗಮೇಶ್ವರನ ದೇವಾಲಯವು ತಯಾರಾಗಬೇಕು).

ಪದ

ಕ್ಷೇತ್ರವೆಂತು ಶೋಭಿಪುದೀಗಾ ಅಭಿರ ಲೋಹ ಸುರಿತಾ।
ಭವಿಜ ಸ್ನಿಗ್ಧ ನಿಲು ಸೇವಕರಾವನಿಜಾ ।
ಗವಿ ಶೋಭಿಮಾಗಿ । ಶರಣಸಂಚಯಶ್ರೀ
ತರುಮಣಿಯತೀಶಪರಿಲಸುಧಿ ನೀ ।
ಪರಿತತೋನ್ನತಾ । ಪರಮದ್ವೀಪಗಳಿಂ । ಭರಿತಮಾಗಿ
ಮುಕ್ತಿಶರಜನೇ । ತ್ರಿಯಳಿಗೆದಿರುವ ನೋಯಿಸಲ್ಕೆ

ಜಗದೇವ: (ಅಲ್ಲಯ್ಯ, ಮಲ್ಲಿಬೊಮ್ಮಯ್ಯಗಳು ಶಂಕರಾ ಅನ್ನುತ್ತಾ ಸೀನ ಪರದಾದ ಮುಂದೆ ಪ್ರವೇಶ)

ಓಹೋ ! ನಾವು ಎಲ್ಲರೂ ಯಾವ ಕಾರ್ಯವನ್ನು ಕೊನೆಗಾಣಿಸಬೇಕೆಂಬ ಆಕಾಂಕ್ಷೆಯಿಂದಾ ಹೋಗಿದ್ದೆವೋ ಆ ಕಾರ್ಯವು ಕೊನೆಗಾಣಿತು. ಸ್ವಲ್ಪ ದಿವಸಗಳ ಹಿಂದೆ ಬಸವೇಶ್ವರನಿಗೆ ಕೊಟ್ಟ ಭಾಷೆಯು

ಸಾರ್ಥಕವಾಯಿತು. ಮತ್ತು ನನ್ನ ಜನನಿಯ ವಾಕ್ಯವಾದರೂ ಸಿದ್ಧವಾಯಿತು. ಅಂದ ಮೇಲೆ ಈವಾಗ್ಗೆ ನಮ್ಮ ಜನ್ಮವು ಪವಿತ್ರವು. ಮಹಾತ್ಮರೆ ಭಕ್ತಿಸಂಪನ್ನನಾದ ಆ ಬಸವೇಶ್ವರನು ಈ ಪಟ್ಟಣ ಬಿಟ್ಟು ಹೋದನೋ ಅಥವಾ ಇಲ್ಲೋ ತಿಳಿಯಲಿಲ್ಲವಲ್ಲಾ !

ಬೊಮ್ಮಯ್ಯ: ಏನು ಜಗದೇವನೆ ನಿನಗೆ ತಿಳಿಯುವದಿಲ್ಲವೇ? ಈ ಮದಾಂಧನಾದ ಬಿಜ್ಜಳನನ್ನು ಶಪಿಸಿದ ಕೂಡಲೆ ಅಗಣಿತ ಗಣಕೂ ಲಿಂಗಾರಾಧನೆ ಮಾಡಿ ಆಚರಿಸುತ್ತಾ ಚರ ಸಂತರ್ಪಣೆ ಅಲ್ಲಲ್ಲಿ ಜರುಗಿಸುತ್ತಾ ಶರಣರ ನಾಮಸ್ಮರಣೆಗೈಯ್ಯುತ್ತಾ ಇದೇ ಮಾರ್ಗವಾಗಿ ಬರುವನು. ಸ್ವಲ್ಪ ನಿಲ್ಲಿರಿ. ಎಲ್ಲರೂ ಈ ಕಲ್ಯಾಣ ಪಟ್ಟಣ ಬಿಟ್ಟು ಕಪ್ಪಡಿ ಸಂಗಮನಾಥನಲ್ಲಿಗೆ ಹೋಗಿ ಪರಮೇಶ್ವರನ ಆಜ್ಞೆಯಂತೆ ನಮ್ಮ ನಮ್ಮ ಇಷ್ಟವಾದ ಸ್ಥಳಗಳಲ್ಲಿ ಐಕ್ಯಸ್ಥರಾಗುವಾ.

ಮಲ್ಲಯ್ಯ: ಇರಲಿ ಬೊಮ್ಮಯ್ಯಗಳೆ. ಅಕ್ಕನಾಗಮ್ಮ ಮತ್ತು ಚೆನ್ನಬಸವರಾದರು ಬರುವರೇನು?

ಬೊಮ್ಮಯ್ಯ: ಇಲ್ಲಾ ಇಲ್ಲಾ. ಅವರೇನೂ ಬುರುವುದಿಲ್ಲಾ. ನಿನ್ನೆ ಮೂರ್ಖ ಬಿಜ್ಜಳನು ವಧೆಯಾದನು. ಆಗುವ ಕರ್ತವ್ಯವೆಲ್ಲಾ ಆಗಿ ಹೋಯಿತು. ಮುಂದೆ ನಾನು ಶ್ರೀ ಸಂಗಮೇಶ್ವರನ ಪಾದವನ್ನು ಕಾಣುವ ಬಗೆ ಹ್ಯಾಗೆ? ಎಂದು ಶಿವನಾಮಸ್ಮರಣೆ ಮಾಡುತ್ತ ಲಿಂಗಧ್ಯಾನದಲ್ಲಿ ತದ್ಗತಳಾಗಿರುವಳು. ಮತ್ತು ಚೆನ್ನಬಸವರಾದರೂ ಅವಶ್ಯ ಕರ್ತವ್ಯವನ್ನು ಯೋಚಿಸುತ್ತಾ ಕುಳಿತಿರುವರು. ಈ ಜಗತ್ಪೂಜ್ಯನು ಕಪ್ಪಡಿಗೆ ಹೋಗುವ ವರ್ತಮಾನವು ಅವರಿಗೆ ಗೊತ್ತಿಲ್ಲ. ಇನ್ನು ಕೊಂಚ ದಿವಸವು ಈ ಪರಿಯಾಗಿ ಶ್ರೀ ಸಂಗಮೇಶ್ವರನ ಧ್ಯಾನಾಸಕ್ತರಾಗಿ ಬಸವೇಶ್ವರನು ಮತ್ತು ಗಂಗಾಂಬೆಯು ಕಪ್ಪಡಿಗೆ ಹೋದ ವರ್ತಮಾನವು ಜ್ಞಾನದೃಷ್ಟಿಯಿಂದ ತಿಳಿದು ಆಮೇಲೆ ಸ್ವಲ್ಪ ದಿವಸದಲ್ಲಿ ಯಾವ ಜಾಗದಲ್ಲಿ ಸ್ವಸ್ಥಚಿತ್ತರಾಗಿರುವರೊ ಅದೇ ಸ್ಥಳದಲ್ಲಿ ಗುಪ್ತರಾಗುವರು. ಮಹಾನೀಯರೇ ನಡೆಯಿರಿ. ಈ ನಮ್ಮ ನಮ್ಮ ಅವತಾರವಾದರೂ ಕೊನೆಗಾಣುವ ವೇಳೆಯು ಸಮೀಪಿಸಿರುವುದು. ನಡೆಯಿರಿ ಬೇಗನೇ ಹೋಗುವಾ.

ಜಗದೇವ: ಮಹನೀಯರೇ ಸ್ವಲ್ಪ ನಿಲ್ಲಿರಿ. ಪತ್ನಿಸಮೇತರಾಗಿ ಪರಮೇಶ್ವರನ ಸ್ತೋತ್ರಗೈಯುತ್ತಾ ಶರಣರ ನಾಮಸ್ಮರಣೆಯಿಂದಾ ಹೊರಟಿರುವ ಆ ಮಹಾನೀಯರ ದರ್ಶನ ಮಾಡಿ, ಈ ಪಟ್ಟಣದಿಂದ ಹೊರಹೊಂಟು

ಆಮೇಲೆ ಎಲ್ಲಿಂದಲ್ಲೆ ಗುಪ್ತರಾಗೋಣ.

ಬೊಮ್ಮಯ್ಯ: ಮಹನೀಯರೇ ಹಾಗೆಯೇ ಸರಿ. (ಎಂದು ಶಂಕರ ಅನ್ನುತ್ತಾ ಒತ್ತಟ್ಟಿಗೆ ನಿಲ್ಲುವರು.)

ಬಸವೇಶ್ವರ:

ಪದ

ಶಾಪಾನುಗ್ರಹ ಶಕ್ತಂ । ಆ ಪುಣ್ಯದೇಹಭಕ್ತ ।
ಮಲನಾಶಕ ಗುಣಭೂಷಿತನೊ ।
ಹಿಮಾಲಯ ಸ್ವರೂಪಕನಾಥನು ಕೇಳ್ ।
ಒಂದಾರು ಜನಕೆ । ಮಂದಾರ ಸಮಾನು ಮಂದೀಕೃತ
ಸಂಸಾರನು ತಾನೈ ।

ಆಹಾ ! ಲೋಕದಲ್ಲಿ ಮನುಷ್ಯನಿಗೆ ಗುರುಭಕ್ತಿಯೆ ಮುಖ್ಯ ಸಂಪತ್ತು. ಇದರ ಹೊರ್ತು ಅನ್ಯ ಸಂಪತ್ತು ಉಂಟೆ? ತಸ್ಮಾತ್ ಮನುಷ್ಯನು ಈ ಗುರುಭಕ್ತಿಯೆಂಬ ಸಂಪತ್ತನ್ನೇ ಸಂಗ್ರಹಿಸತಕ್ಕದ್ದು. ಯಾಕೆಂದರೆ ಇದು ಬಹು ಪ್ರಯಾಸದಿಂದ ಸಂಪಾದಿಸಲ್ಪಟ್ಟ ಧನ ಕನಕಾದಿ ನಶ್ವರ ಸಂಪತ್ತಿನಂತೆ ಚೋರರಿಂದ ಅಪಹರಿಸಿದರೂ ಹೋಗತಕ್ಕದ್ದಲ್ಲಾ. ನೀರಿನಲ್ಲಿ ಮುಳುಗಿಸಿದರೂ ಮುಳುಗತಕ್ಕದ್ದಲ್ಲಾ. ಈ ರೀತಿ ನಾಶರಹಿತವಾದ ಗುರುಭಕ್ತಿ ಸಂಪತ್ತು ಸುಖದಾಯಕವೆಂದು ತಿಳಿದು ತಿಳಿದು, ಈ ಮೂರ್ಖ ಮನುಜರು ನಾಶಕ್ಕೀಡಾದ ವಿಷಸಮಾನವಾದ ದ್ರವ್ಯವನ್ನು ಸಂಪಾದಿಸಲು ಉದ್ಯುಕ್ತರಾಗುತ್ತಾರಲ್ಲಾ ! ಅಯ್ಯೋ ಇದೆಂಥಾ ಮೂಢತನವು !! ಇದೇ ಗುರುಭಕ್ತಿಯಿಂದಲೆ ಗುರುಭಕ್ತಾಂಡಾರಿಯು ಅನನ್ಯ ಅಸಾಧ್ಯವಾದ ಅಖಂಡ ಸುಖವನ್ನು ಹೊಂದಿದನು. ಇರಲಿ ಪ್ರಿಯೆ. ಅಕ್ಕನಾಗಮ್ಮನು ಮತ್ತು ಚೆನ್ನಬಸವರಾದರೂ ಇನ್ನೂ ಸ್ವಲ್ಪ ದಿವಸದಲ್ಲಿ ಇದೇ ಕಲ್ಯಾಣ ಪಟ್ಟಣದಲ್ಲಿ ಗುಪ್ತರಾಗಿ ಮುಂದೆ ಅಜ್ಞಾನದಿಂದ ತೊಡಗಿದ ಜನರ ಕೈಲಿ ಪೂಜೆಯನ್ನು ತೆಗೆದುಕೊಂಡು, ಆಮೇಲೆ ಚನ್ನಬಸವರು ಅವತಾರ ಪುರಷನಾಗಿ ಕಾಲಸೂಚಿಯನ್ನು ಕೊನೆಗಾಣಿಸುವುದಕ್ಕೆ ಬರುವ ಹಾಗೆ ನನಗೆ ಭವಿಷ್ಯ ತಿಳಿದಿರುವುದು. ಇದಕ್ಕೆ ನಿನ್ನ ಸಮ್ಮತಿ ಹ್ಯಾಗೆ? ಯೋಚಿಸು.

ಗಂಗಾಂಬೆ: ಪ್ರಿಯಾ ಯೋಚಿಸುವುದೇನಿರುವುದು? ಕಾಲಾತಿಕ್ರಮಣವಾಗುತ್ತಾ ಬಂತು.

ಬೇಗನೇ ಈ ಕಲ್ಯಾಣ ಪಟ್ಟಣದಿಂದ ಹೊರಹೊರಟು, ಕಪ್ಪಡಿಗೆ ಹೋಗಿ, ಶ್ರೀಸಂಗಮನಾಥನಾ ಪಾದದಲ್ಲಿ ತಲ್ಲೀನನಾಗೋಣ ನಡೆಯಿರಿ.

ಬಸವೇಶ್ವರ: ಪ್ರಿಯೆ ಹಾಗೆ ಸರಿ. ಈ ಪುಣ್ಯಾತ್ಮರಾದರೂ ನಮ್ಮ ಸಲುವಾಗಿ ನಿಂತಿರುವರು. ಇರಲಿ ! ಎಲ್ಲಾ ಮಾನವರ ಹಿಂದೆ ಈ ಬಸವಾವತಾರದಂತೆ ವರ್ತಿಸಿ, ಕಾಲಹರಣ ಮಾಡಿರಿ. ಅಂದರೆ ಆ ಪರಮಾತ್ಮನು ನಿಮಗೆ ಮೋಕ್ಷಪದವಿಯನ್ನುಕೊಡುವನು. ಬಹಳ ಹೇಳುವುದುರಲ್ಲೇನು? ನನಗೆ ಗಮಿಸುವುದಕ್ಕೆ ವೇಳೆ ಆಗುವುದು. ಕಾರಣ ನಿಮಗೆ ವಿನಂತಿ ಹೇಳುತ್ತೇನೆ. ಭಕ್ತಿಮಾರ್ಗಕ್ಕೆ ಹೋಗಿ ಬರುತ್ತೇನೆ. ಶರಣಾರ್ಥಿ. ಮುಕ್ತಿಸಂಪನ್ನರೇ ಹೋಗಿ ಬರುತ್ತೇನೆ ಶರಣಾರ್ಥಿ. ಜಂಗಮಪ್ರಾಣಿಗಳೆ ಹೋಗಿ ಬರುತ್ತೇನೆ ಶರಣಾರ್ಥಿ. ಲಿಂಗಧ್ಯಾನ ತದ್ಗತರೆ ಹೋಗಿ ಬರುತ್ತೇನೆ ಶರಣಾರ್ಥಿ. ಸಂಗಮನಾಥನ ಚರಣಸಾಧಕರೆ ಹೋಗಿ ಬರುತ್ತೇನೆ. ಮಹಾತ್ಮರೆ ಇನ್ನು ವೇಳೆ ಆಗುವುದು. ಭಜನೆಗೈಯ್ಯುತ್ತಾ ನಡೆಯಿರಿ. ಬೇಗನೆ ಈ ಪಟ್ಟಣದಿಂದ ಹೊರಡಿರಿ. ಸಂಗಮನಾಥನ ಪಾದವಾ ಕಾಣುವಾ !!

ಶರಣರು: ಜಗತ್ಪೂಜ್ಯನೆ ಹಾಗೆಯೆ ಸರಿ (ಭಜನಿ ಅನ್ನುವರು)

ಪದ

ಸಾಂಭ ಸದಾಶಿವ ಸಾಂಭ ಸದಾಶಿವ
ಸಾಂಭ ಸದಾಶಿವ ಸಾಂಭ ಹರಾ ।
ಸಾಂಭ ಸದಾಶಿವ ಸಾಂಭ ಸದಾಹರಾ ।
ಸಾಂಭ ಸದಾಶಿವ ಸಾಂಭ ಹರಾ । ಪ ।

ಬಸವೇಶ್ವರ:

ಅವನಿಯೊಳ್ ಅವತರಿಸುತ ಶಿವನಾಮವ ಸ್ಮರಿಸುತ
ಭವದಾಟುವೆ ನಾನ್ನೈ ।
ತವಪದಯುಗ ನೆನೆಯುವೆ ಶಿವಶರಣರ ಸಂಜೀವ ಪೊರೆ
ಮಹಾದೇವಾ ॥ ೧ ॥
ಚಂದ್ರ ದಿನೇಂದ್ರ ಮುನೀಂದ್ರ ಗಣೇಂದ್ರ ವೃಷಭೇಂದ್ರ
ಯತೇಂದ್ರಗೆ ಶರಣಾರ್ಥಿ ।
ಇಂದ್ರ ಉಪೇಂದ್ರ ಖಗೇಂದ್ರ ಮೃಗೇಂದ್ರ ನಗೇಂದ್ರ ದಿಗೇಂದ್ರಗೆ
ಶರಣಾರ್ಥಿ ॥ ೨ ॥

ರಾಗಿಗೆ ರೋಗಿಗೆ ಭೋಗಿಗೆ ಜೋಗಿಗೆ ತ್ಯಾಗಿಗೆ
ಯೋಗಿಗೆ ಶರಣಾರ್ಥಿ ।
ಮಾಗಿಗೆ ಬೇಗಿಗೆ ಕಾಗಿಗೆ ಗೂಗಿಗೆ ಶೋಗಿಗೆ
ಸೀಗಿಗೆ ಶರಣಾರ್ಥಿ ॥ ೩ ॥
ಜಾರಗೆ ಚೋರಗೆ ಬೀರಗೆ ಪೀರಗೆ
ವೀರಗೆ ಶೂರಗೆ ಶರಣಾರ್ಥಿ
ಊರಿಗೆ ದಾರಿಗೆ ನೀರಿಗೆ ನಾರಿಗೆ
ಮಾರಿಗೆ ಮೀರಗೆ ಶರಣಾರ್ಥಿ ॥ ೪ ॥
ಹಲವು ನಾಮರಿಗೆ ಹಲವು ಉರುಪರಿಗೆ
ಹಲವು ಕ್ರಿಯರಿಗೆ ಶರಣಾರ್ಥಿ
ಹಲವು ಜಾಣರಿಗೆ ಹಲವು ಮುಗ್ಧರಿಗೆ
ಹಲವು ಬಲುವರಿಗೆ ಶರಣಾರ್ಥಿ ॥ ೫ ॥
ಸರ್ವ ಶರಣರಿಗೆ ಸರ್ವಹರಣರಿಗೆ
ಸರ್ವ ವರಣರಿಗೆ ಶರಣಾರ್ಥಿ
ಸರ್ವ ಭರಣರಿಗೆ ಸರ್ವಮರಣರಿಗೆ
ಸರ್ವ ಶರಣರಿಗೆ ಶರಣಾರ್ಥಿ ॥ ೬ ॥
ಸರ್ವ ಜೀವರಿಗೆ ಸರ್ವಭಾವರಿಗೆ
ಸರ್ವ ದೇವರಿಗೆ ಶರಣಾರ್ಥಿ
ಸರ್ವ ಬ್ರಹ್ಮಾಂಡಕೆ ಸರ್ವಪಿಂಡಾಂಡಕೆ
ಸರ್ವ ನಿರ್ವಯಲಿಗೆ ಶರಣಾರ್ಥಿ ॥ ೭ ॥
ವಿಲಸಿತ ನಿಜಸ್ತುತಿ ಕಲಿತೋದಿದವರಿಗೆಲ್ಲಿದು
ಕಳಿವದೀ ಭವದುಃಖ ಸುಲಭ ಪರಮರನು
ಸಲ್ಲೇ ವೃಷಬೇಷನು ಒಲಿದು ಕೊಡುವುತಾ
ಶಿವಸುಖವಾ ॥ ೮ ॥
ಮತಿಮಾನ್ಯನುತಾ ಮಾತಾಪಿತರನು
ಸತತ ಭಜಿಸುತಾ ಕಲಿತವನ
ಕವಿತಾರಸವನು ವನಿತಾ ಜನರು
ಇನಿತೀಗಲೆ ಸವಿವದು ಭವದಿಂದಾ ॥ ೯ ॥

(ಎಲ್ಲಾ ಶರಣರು ಶಂಕರ ಶಂಕರ ಅನುತಾ, ಭಜನೆಯಿಂದ ಕುಣಿಯುತಾ ಹೋಗುವರು)

(ಬಸವೇಶ್ವರನು ದೇವಾಲಯದಲ್ಲಿ ಶಿವಪೂಜಾನಿರತನಾಗಿ ಇರಬೇಕು)

ಪದ

ಕ್ಷೇತ್ರವೆಂತು ಶೋಭಿಪುದೀಗ ಅಬಿರಲೋಹ ಸುರಿತ ।
ಭವಿಜಾ ಸ್ನಿಗ್ಧನೀಲ ಶಿವಕರ ವನಿಜಾ ॥ ಪ ॥
ಗವಿ ಶೋಭಿಯಾಗಿ । ಶರಣ ಸಂಚಯಾಶ್ರಿತರು
ಮಣಿಯತರು ಪರಿಲ ಶುದ್ಧಿ ನಿಘರಿತತೋನ್ನತ ॥ ೧ ॥
ಪರಮ ದ್ವೀಪಗಳಿಂ ಭರಿತಮಾಗಿ ಮುಕ್ತಿ ಶರಜ
ನೇತ್ರಿಯಳಿಗೇದಿರುವೆ ನೋಯಿಸಲೇಕೆ ॥ ೨ ॥

(ಆಶ್ಚರ್ಯದಿಂದ) ಆಹಾ ! ತುಂಬಿ ಹರಿವ ನದಿಗಳಿಂದಲೂ ಅಲ್ಲಲ್ಲಿಗೆ ತೋರುವ ಫಲಗಳಿಂದಲೂ ಈ ಆಕಾಶವನ್ನು ಮುಟ್ಟುವ ಈ ಭವ್ಯ ದೇವಾಲಯದಿಂದಲೂ ರಮ್ಯವಾದ ಸ್ಥಳವು ಮನೋವ್ಯಾಕುಲತೆಯನ್ನು ದೂರ ಮಾಡುವುದು. (ಮತ್ತೊಂದು ಕಡೆ ನೋಡಿ) ಆಹಾ ! ಈ ನದಿಗಳು ಎಷ್ಟು ಮನೋಹರವಾಗಿ ಹರಿಯುತ್ತವೆ. ಇರಲಿ (ಎಂದು ದೂರ ಕೇಳಿದಂತೆ). ಓಹೋ ! ಇನ್ನು ಕೆಲವು ಶಿವಶರಣರು ಉಳವಿಯ ಕ್ಷೇತ್ರಕ್ಕೆ ಹೋದರು. ಕೆಲವರು ಶ್ರೀಶೈಲಕ್ಕೆ ಹೋದರು. ಇನ್ನು ಕೆಲವರು ತಮಗೆ ಯೋಗ್ಯವಾದ ಸ್ಥಳಕ್ಕೆ ಹೋಗಿರುವರು. ಅಂದಬಳಿಕ ನನ್ನದೇನೂ ಇರುವದಿಲ್ಲ. ಅಲ್ಲದೆ ಪರಮೇಶ್ವರನ ಆಜ್ಞೆಯಂತೆ ಈ ಬಸವವಾತಾರವು ಇನ್ನು ಸ್ವಲ್ಪ ವೇಳೆಯಲ್ಲಿ ಕೊನೆಗಾಣುವುದು. ಕಾರಣ ಕೆಲವು ಶಿವಶರಣರೊಡನೆ ಆ ನಡುಗುಡ್ಡೆಯಲ್ಲಿ ಆನಂದಪೂರಕವಾಗಿ, ಶಿವಧ್ಯಾನ ಮಾಡುತ್ತ ಕುಳಿತಿರುವ ನನ್ನ ಪತ್ನಿಯು ಬರಲಿಲ್ಲ. ಪ್ರಸ್ತುತ ಇನ್ನು ಕೆಲವು ಶಿವಶರಣರಾದರೂ ಬರಲಿಲ್ಲವಲ್ಲಾ?

(ಬೊಮ್ಮಯ್ಯನು ಶಂಕರ ಶಂಕರ ಎಂದು ಭಜನೆಗೈಯುತ್ತಾ ಬರಬೇಕು) ಓಹೋ ! ಮಹನೀಯರೆ ಇನ್ನು ಕೆಲವು ಶಿವಶರಣರು ಹಾಗೂ ಗಂಗಾಂಬೆಯು ಯಾಕೆ ತಡಿದರು?

ಬೊಮ್ಮಯ್ಯ: ಓಹೋ ! ಜಗತ್ಪೂಜ್ಯನೆ ನಾನಾದರೂ ಗಂಗಾಂಬೆಯನ್ನು ಇಲ್ಲಿಗೆ ಬೇಗನೆ ಕರೆತರುವ ಯತ್ನವನ್ನು ಮಾಡೇ ಮಾಡಿದೆನು. ಅದಕ್ಕೆ ಆ ಪುಣ್ಯಾತ್ಮಳು ಅಂದದ್ದೇನೆಂದರೆ– ಮಹನೀಯರೆ ಜಗದ್ವ್ಯಾಪಕನಾದ ಶ್ರೀ ಸಂಗಮೇಶ್ವರನು ಅಲ್ಲೇ ಇರುವನೇನು? ಎಲ್ಲಿಯಾದರೂ ಇರುವನೆಂದು ನುಡಿಯುತ್ತಾ ತನ್ನ ಇಷ್ಟಲಿಂಗವನ್ನು ಕರಪೀಠದಲ್ಲಿರಿಸಿ,

ಶ್ರೀ ಸಂಗಮೇಶ್ವರನ ಧ್ಯಾನ ಮಾಡುತ್ತಾ, ಅದೊ ಆ ದೂರದಲ್ಲಿರುವ ನಡುಗಡ್ಡೆಯಲ್ಲಿಯೆ ಐಕ್ಯಸ್ಥಳಾದಳು. ಇನ್ನು ಕೆಲವು ಶಿವಶರಣರು ತಮ್ಮ ತಮ್ಮ ಇಚ್ಛೆ ಇದ್ದಲ್ಲಿ ಮುಕ್ತರಾದರು. ಇನ್ನು ಕೆಲವರು ಇದನ್ನು ನೊಡಿ ಆಶ್ಚರ್ಯ ಭರಿತರಾಗಿ ತಮ್ಮ ಚಿತ್ತ ಬಂದಂತೆ ಬಯಲಾದರು. ನಾನೊಬ್ಬನೇ ಈ ಕಡೆಗೆ ಬಂದಿರುತ್ತೇನೆ.

ಬಸವೇಶ್ವರ: ಓಹೋ ! ಗಂಗಾಂಬೆಯು ಶ್ರೀ ಸಂಗಮನಾಥನು ಎಲ್ಲಿಯಾದರೂ ಇರುವನೆಂದು, ಆ ನಡುಗಡ್ಡೆಯಲ್ಲಿ ಬಯಲಾದಳೆ? ಇದಾದರೂ ಯೋಗ್ಯವೆ ! ಮಹನೀಯರೆ, ನೀವಾದರೂ ಒತ್ತಟ್ಟಿಗೆ ತೆರಳಿರಿ.

(ಬೊಮ್ಮಯ್ಯನು ಅಪ್ಪಣೆಯೆಂದು ಶಂಕರ ಶಂಕರ ಅನುತ್ತಾ ಹೋಗುವನು)

(ಬಸವೇಶ್ವರನು ಕೈಜೋಡಿಸಿ). ಶಂಭೋ ಇನ್ನು ಮೇಲೆ ಬಸವಾವತಾರವು ಕೊನೆಗಾಣಿಸಿ ಬಂದಿರುತ್ತೇನೆ. ಗುರುಮೂರ್ತಿ, ಸಂಗಮನಾಥಾ ಬೇಗನೆ ಕರುಣಿಸು.

ಪದ

ಶಶಿಧರ ಸುರನುತ ವರಸಂಗಮೇಶಾ
ವಿಷಕಂದರ ಹರಾ ಗುರುಕರುಣೇಶಾ ॥ ಪ ॥

ವ್ಯಾಗ್ರಾಂಬರಧರ ವ್ಯಾಲವಿಭೂಷ
ಯೋಗಿ ಜನರ ಹೃತ್ಕಮಲ ನಿವಾಸಾ
ಸಾಗರ ದಯಾ ಸುಜನದಾಯಕ ತೋಷ ।
ಸರ್ವ ಜನೋಧರ ನೀ ಸರ್ವೇಶ ॥ ೧ ॥

ಸಾಸಿರ ವದನದಿ ಅನುದಿನ ತೋಷ ।
ಭೋ ! ಶಿವಗುಣವೆಣಿಸಲ್ಕೆ ವಿಶೇಷ ।
ತ್ರಾಸಾಗುತೆ ಕುಳಿತಿರ್ಪೆವು ದಾಸಾ ।
ಹೇ ! ಶಂಭೋ ಸ್ಥವನಾಮೃತಶೇಷ ॥ ೨ ॥

(ಈ ಪದ ಅನ್ನುವದರಲ್ಲಿ ಪರಮೇಶ್ವರನು ಉದ್ಭವಿಸುವನು). ದೇವಾ ಜಗತ್ಪಾಲಕಾ ಕರುಣಾನಿಧಿಯೆ, ಕೂಡಲ ಸಂಗಮನಾಥನ ಮಹದಾಜ್ಞೆ ಮೇರೆಗೆ ನಾನು ಕೈಕೊಂಡ ಪ್ರತಿಜ್ಞೆಗಳು, ತಮ್ಮ ಕೃಪಾಕಟಾಕ್ಷ ಬಲದಿಂದ ನೆರವೇರಿಸಿದೆನು. ಇನ್ನು ಮೇಲೆ ನಿಮ್ಮ ಚರಣಾರವಿಂದಗಳಲ್ಲಿ

ಐಕ್ಯಸುಖವನ್ನೀಯುವುದಾಗಿ ಬೇಡಿಕೊಳ್ಳುತ್ತೇನೆ.

ಪರಮೇಶ್ವರ: ಹಾ ! ಮಗುವೆ, ಇತ್ತ ಬಾ. ಹಾಲಿನಲ್ಲಿ ಹಾಲು ಬೆರೆತಂತೆ ಇತ್ತ ಬಂದು ನನ್ನಲ್ಲಿ ಐಕ್ಯನಾಗು. ಯಾಕೆ ತಡಮಾಡುವಿ? ಬೇಗನೆ ಬಂದು ಒಮ್ಮೆ ದೃಢಾಲಿಂಗನವನ್ನು ಕೊಟ್ಟು, ನನ್ನನ್ನು ಶಾಂತಪಡಿಸು. ಬೇಗನೆ ಬಾ (ಎಂದು ಕೈಚಾಚುವನು).

ಬಸವೇಶ್ವರ: ಹಾ ! ಗುರುವೆ ಬಂದೆನು. (ಎಂದು ಮೇಲಿನ ಹಾಡಿನ ಪಲ್ಲಾ ಹಾಡುತ್ತಾ ಐಕ್ಯರಾಗುತ್ತಾರೆ. ಮಂಗಲ ಹಾಡಬೇಕು).

ಮಂಗಲಪದ

ಮಂಗಲ ಸಂಗಮೇಶ್ವರಾ ತ್ವಂಗಾ ದೃಂಗಾದ್ಗಂಗಾ
ಭಂಗಸಂಗ ಜಟಲಿಂಗ ತುಂಗತರ ॥ ಪ ॥
ಸಾರಿ ಸಾರಿ ಘನ ಸಾರ ಹೀರಮಣಿ
ತಾರಹಾರ ಹಿಮ ಸಾರ ವಾರನಪ ।
ಶಾರದ ನೀರದ ನಾರದ ಭಾರದ
ಗುರುದಯಾ ದುರಿತ ಭಾರದ ಮನಕರ ॥ ೧ ॥
ಖ್ಯಾತ ಮತರವಿಜಾತ ಜಿತಮುನಿಪುತ್ರ ಶಾತಕರ ।
ಧೂತ ಪಾತಕಪುರಾತನ ನುತನಚೆತುನ ಜಾತನ
ತಾ ತನು ಘನ ಘನಿ ಕೇಳುತನಭಯಹರ ॥ ೨ ॥
ಕಾಲ ಕಾಲ ಸದ ಯಾಲಯಾಲ ಯಸು
ಶೀಲ ಲೋಲ ಬಸವಿ ಶಾಲಲೀಲ ಮುನಿ
ಪಾಲಕಪಾಲಕ । ರಾಲ್ಲಿಕ । ತಿಲಕ । ಲಾಲ
ಕರುಣ ಸಿಸು ಶೈಲ ಕವಿ ಸುಕರ ॥ ೩ ॥

ಪಂಚಮಾಂಕ ಸಮಾಪ್ತಂ

ಶ್ರೀಮತ್ ವೀರಶೈವ ಧುರೀಣರಾದ ಲಿಂಗಸೂಗುರು ನಿವಾಸಿಗಳಾದ ಅಮರೇಶ್ವರರ ಕವಿತಾ ರಸ ಮಾಧುರ್ಯವಾದ ಶ್ರೀ ಭಸವೇಶ್ವರವೆಂಬೋ ಆಖ್ಯಾನವು ! ಶ್ರೀ ಕಾಳಯುಕ್ತಿ ನಾಮ ಸಂವತ್ಸರೆ ಮಿತಿ ಕಾರ್ತಿಕ ॥ ಸು ॥ ಪ್ರತಿಪದ ರೋಜ ಸೋಮವಾರ ದಿವಸ ರಟ್ಕಲ್ಲ ಪುರ ನಿವಾಸಿಗಳಾದ ಮಠಪತಿ ರುದ್ರಯ್ಯನವರು ಗುರುಕರ ಜಾತರಾಗಿ ಮನಃಪೂರ್ವಕವಾಗಿ

ಬರೆದು ಮುಗಿಸಿರುತ್ತಾರೆ. ಆದರೆ ಇದಕ್ಕೆ ವಿನಂತಿ ಮಾಡಿಕೊಳ್ಳುವದೇನೆಂದರೆ ಹಸ್ತದೋಷದಿಂದಾಗಲೀ ವಾಕ್ಯ ದೋಷದಿಂದಾಗಲೀ ದೇಹ ಶ್ರಮದಿಂದಾಗಲೀ ಅಲ್ಲಲ್ಲಿ ತಪ್ಪು ಬಿದ್ದಿದ್ದರೆ ಬಲ್ಲಂತಹ ಪ್ರಾಜ್ಞರು ತಿದ್ದಿ ಓದಿಕೊಳ್ಳಬೇಕು. ಇತಿ ರಾಜಯೋಗಃ ಅಮೃತ ವ್ಯಾಖ್ಯದಲ್ಲಿ ಸಮಾಪ್ತಮಂಗಲ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

===***=====***===

ಶ್ರೀ ಬಸವೇಶ್ವರ

ಶ್ರೀ ಸಿದ್ಧಲಿಂಗಾಯನಮಃ
ಸ್ತೋತ್ರಪದ

ಶ್ರೀಶಂಭೊ ಸದಾ ಪಾಲಿಸುವದು
ಸುರತತಿನುತಪದಯುಗಲ ॥ ಪಲ್ಲ ॥
ಭೂತೇಶ । ಪೊರೆಮಹೇಶ । ಪ್ರೀತಿಯಲೀ
ನಾಟ್ಯವೃಂದಕೆ । ಸದಯಾತ್ಮ
ದಯದೋರ್‍ಯೆ । ಮಧುರಾ ಭಾಷಣವೀಯುತ ॥ ೧ ॥

ಪಾರ್ವತೀ ಪರಮೇಶ್ವರರ ಸಭಾ

(ನಾರದನ ಪ್ರವೇಶ) ಈಶಸ್ತವನ.

ಶ್ರೀ ಶಂಕರ । ಪೊರೆವಿಜಿತಮಾರಾ ॥ ಪಲ್ಲ ॥
ಕ್ಷೀರಾಬ್ಧಿಜಾತಾ । ವರವಿನುತಪಾದ ।
ದೂರದುರಿತಕರುಣಾ । ಸಾರಸುಗುಣವರದ । ಶ್ರೀಶಂಕರಾ ॥ ೧ ॥

ಶರಧಿಯನ್ನು ಮಥಿಸೆ । ಕ್ರೂರವಿಷವದುದಿಸೆ ।
ಕೊರಳಿನಲ್ಲಿ ಧರಿಸಿ । ಪೊರದೆ ಕರುಣವಿರಿಸಿ । ಶ್ರೀ ಶಂಕರ ॥ ೨ ॥

ಶಂಕರಾ! ತಮ್ಮ ಪವಿತ್ರ ಪಾದಾರವಿಂದಗಳಿಗೆ ಈ ದೀನನಾದ ನಾರದನ ವಂದನೆಯಿರಲಿ.

ಪರಮೇಶ್ವರ: ನಾರದ ಋಷಿಗಳೇ, ನಿಮಗೆ ಸದಾ ಶುಭವಾಗಲಿ. ಮೇಲಕ್ಕೇಳಿರಿ. ನಾರದರೇ, ತ್ರಿಲೋಕ ಸಂಚಾರಿಗಳಾದ ತಮಗೆ ಸರ್ವ ವಿಧದಿಂದಲೂ ಕ್ಷೇಮವೇ !

ನಾರದ: ಪ್ರಭುವೇ, ನನ್ನ ಸುಖಕ್ಕೂ ದುಃಖಕ್ಕೂ ಭಕ್ತವತ್ಸಲನಾದ ನಿನ್ನ ಕೃಪೆಯೇ ಕಾರಣವಲ್ಲವೇ? ಆ ನಿನ್ನ ಕೃಪಾಕಟಾಕ್ಷದಿಂದ ಸುಖವಾಗಿರುವೆನು.

ಪರಮೇಶ್ವರ: ಒಳ್ಳೇದು ತಾವು ತ್ರಿಲೋಕ ಸಂಚಾರಿಗಳು. ಆದರೆ ತಮ್ಮ ಸಂಚಾರದಿಂದ ಯಾವ ಲೋಕವು ಪವಿತ್ರವಾಯಿತು ಮತ್ತು ಅಲ್ಲಿಯ ವಿಶೇಷ ವಾರ್ತೆಯೇನಾದರೂ ಇದ್ದರೆ ಅರುಹಬೇಕು.

ನಾರದನ ಪದ

ಚರಿಸುತ ಧರೆಯಲಿ ಪರಿಪರಿವಾರ್ತೆಯನರಿಯುತ
ತಿರುಗಿದೆ ನಾನಿರದೆ ॥ ಪಲ್ಲ ॥

ಪುರಹರ ನಿನ್ನಯ । ಚರಣಸೇವಕರು ।
ದುರುಳರಿಂದ ಬಹು ಬಳಲುವರು ॥
ವರಜಂಗಮಧನನಿಚಯವನಿರದಲೆ ।
ಹರಣವಗೈದಿಹರೀತೆರದಿ ॥ ೧ ॥

ಭವಭಯದೂರಗೆ ಶಿವಮಹಿಮೆಯುತಾ ।
ನವನಿಯೋಳೀಪರಿ ಮಾಜಿರಲು ॥
ಅವಿರಳಪ್ರೇಮದೆ । ಶಿವಶರಣರುಸದಾ ।
ತಪದಧ್ಯಾನದಲಿರುತಿಹರೈ ॥ ೨ ॥

ಪ್ರಭೋ, ನಾನು ಭೂಲೋಕವನ್ನು ಕುರಿತು ಗಮನ ಮಾಡಿದ್ದೆನು. ಅಲ್ಲಿ ನಡೆದ ಮಹದನರ್ಥವನ್ನೇ ವಿಜ್ಞಾಪಿಸಬೇಕೆಂದು ಪ್ರಭುವಿನ ಪಾದಸನ್ನಿಧಿಗೆ ಆಗಿಮಿಸಿದ್ದೇನೆ. ಅವಕಾಶಂಗೊಟ್ಟರೆ ಅರುಹಿಕೊಳ್ಳುವೆನು.

ಪರಮೇಶ್ವರ: ನಾರದರೇ, ಭೂಲೋಕದಲ್ಲಿ ಅನರ್ಥಗಳು ನಡೆದಿರುವವೇ? ಆ ಅನರ್ಥಗಳಾವವೆಂಬುದನ್ನು ಬೇಗ ಹೇಳಿರಿ.

ಪಾರ್ವತಿ; ಶಂಕರಾ, ಭುಲೋಕದಲ್ಲಿ ಅನರ್ಥಗಳೊದಗಿದರೆ ಅವುಗಳನ್ನು ತಾವೇಕೆ ಇಷ್ಟು ಆಸ್ಥೆಯಿಂದ ಕೇಳುವಿರಿ.

ಪರಮೇಶ್ವರ: ಪ್ರಿಯೆ, ಯಾಕಂದರೆ ನಾನು ಸಕಲ ಲೋಕ ನಾಯಕನಾಗಿರುವ ದರಿಂದ ಅನುಚಿತ ಕಾರ್ಯಗಳ ನಿರ್ಮೂಲ ಮಾಡುವ ಆಲೋಚನೆಯನ್ನು ಬೇಗ ಮಾಡಬೇಕಾಗುವುದು. ಅದಕ್ಕಾಗಿಯೇ ಇಷ್ಟು ಆತುರತೆಯು. ನಾರದರೇ ಹೇಳಿರಿ.

ನಾರದ: ಸಚ್ಚಿದಾನಂದ ಶಿವಭಕ್ತಿಯು ಸಕಲ ಲೋಕಗಳಲ್ಲಿಯೂ ವಿಶೇಷವಾಗಿ ಪಸರಿಸಿರುವುದು. ಆದರೆ ಭೂಲೋಕದಲ್ಲಿ ಮಾತ್ರ ಬಹು ಗುಪ್ತವಾಗಿರುವದು. ಆ ಕರ್ಮಬದ್ಧವಾದ ಭಾರತ ಭೂಮಿಯಲ್ಲಿ ಅನೇಕ ಮತಗಳುದ್ಭವಿಸಿ ಶಿವಮತವನ್ನು ಬಹು ವಿಧದಿಂದ ನಿಂದಿಸುತ್ತಿರುವವು. ಅಷ್ಟಾವರಣಗಳನ್ನು ದೂಷಿಸುವ ಪ್ರಭುಗಳೂ, ಪ್ರಜೆಗಳೂ ಪ್ರಬಲರಾಗಿರುವರು. ಸರ್ವೆಡೆಯಲ್ಲಿ ಸಂಶೋಧಿಸಿದರೂ

ಶಿವಾಲಯದ ದ್ವಾರಗಳು ಶಿಲೆಗಳಿಂದ ಭದ್ರಮಾಡಲ್ಪಟ್ಟಿರುವವು. ಜಂಗಮಾರ್ಪಿತವಾದ ಗ್ರಾಮ ಭೂಮಿ ಮಾನ್ಯಗಳೆಲ್ಲ ಹರಣ ಮಾಡಲ್ಪಟ್ಟಿರುವವು. ಸದಾಚಾರಗಳ ಸ್ಥಳದಲ್ಲಿ ಅನಾಚಾರಗಳು ಅಭಿಷಿಕ್ತವಾಗಿರುವವು. ಅದಕ್ಕೋಸುಗವೇ ಶಿವಾನುಭವಿಗಳು ದುಷ್ಟರ ದುರ್ವಿಲಾಸಗಳಿಗೆ ಬೆದರಿ, ಬಹಿರಂಗವಾಗಿರದೆ ಬಹು ಗುಪ್ತವಾಗಿರುವರು. ಶಿವಭಕ್ತಿ ಸಂಪನ್ನರಲ್ಲನೇಕರು ಕೆಲವಡೆಯಲ್ಲಿ ತೋರಿದಾಗ್ಯೂ ಅವರು ತಮ್ಮ ರೂಪಗಳನ್ನು ಮಾಜಿಕೊಂಡು ಕಾಲಯಾಪನೆಯನ್ನು ಮಾಡುತ್ತಿರುವರು. ಅವರಲ್ಲಿ ಕೆಲವರು ಈ ಧರಾತಲದಲ್ಲಿ ವಾಸಿಸುವದಕ್ಕೆ ಬೇಸತ್ತು ಕೇವಲ ಪರವಶಭಾವದಿಂದಿರುವರು. ಇಂತು ಶಿವಮಹತ್ವವು ಪ್ರತ್ಯಕ್ಷವಾಗಿ ಲೋಕಕ್ಕೆ ತೋರ್ಪಡದೆ ಇರುವದರಿಂದ ಮೂಢ ಜನರಲ್ಲಿ ಭಕ್ತಿ ವಿಶ್ವಾಸಗಳು ಹುಟ್ಟದೆ ಗುರು-ಲಿಂಗ-ಜಂಗಮದ ಮಹಿಮಾಜ್ಞಾನವೂ ಕಡಿಮೆಯಾಗಿರುವದು. ಇದೇ ಭೂಲೋಕದಲ್ಲವಲೋಕಿಸಿದ ಅನರ್ಥ ವಾರ್ತೆಯು.

ಪರಮೇಶ್ವರ: ಹಾಗಾದರೆ ಈ ಅನರ್ಥಗಳ ಪರಿಹಾರೋಪಾಯವನ್ನು ಯೋಚಿಸಿ ಹೇಳಬಾರದೇ? ಅದರಂತೆ ವರ್ತಿಸಲು ಸಿದ್ಧನಾಗಿಯೇ ಇರುವೆನು.

ನಾರದ: **ಪದ (ನೋಡೈ ಭೂಪ)**

ಪ್ರಭುವೇ ! ಒರವೆ ತವ ಚರಣದೆಡೆಯಲಿ ॥
ಭವಹರ ಭುವನದಿ । ಅವತರಿಸುತೆ ನೀ ಶಿವಮತವನು
ಪೊರೆಯೈ ॥ ೧ ॥
ಈತೆರನುಳಿದೊಡೆ । ರೀತಿಯು ತೋರದು । ನಾಥನೆ
ಗ್ರಹಿಸುವುದೆ ॥ ೨ ॥

ಹೇ ಉಮಾಧವ, ನೀನು ದಯವಿಟ್ಟು, ಭೂಮಿಯಲ್ಲಿ ಅವತರಿಸಿ, ಶಿವಭಕ್ತಿಯ ಪ್ರಭಾವವನ್ನು ಸವಿಸ್ತರಿಸಿ ಆ ಭಕ್ತಿಯನ್ನು ಚರಾಚರಾತ್ಮಕವಾದೀ ಸೃಷ್ಟಿಯಲ್ಲಿ ಸ್ಥಿರಮಾಡಬೇಕಲ್ಲದೆ ಇನ್ನಾವ ಯೋಚನೆಯೂ ಸರಿಯಾಗದೆಂದು ತೋರುವುದು; ಆದರೆ ಇನ್ನು ಮೇಲೆ ಪ್ರಭುವಿನಿಚ್ಛೆ.

ಪರಮೇಶ್ವರ: ಸರಿ, ಸರಿ. ಬ್ರಹ್ಮಪುತ್ರ, ಆ ಹಮ್ಮಿನ ಪರಮತಸ್ಥರು ಶಿವಮತವನ್ನು ಅಜ್ಞಾನವಶದಿಂದ ನಿಂದಿಸುತ್ತಿದ್ದರೆ ಅದಕ್ಕೆ ನಿನ್ನ ಆಲೋಚನೆಯೇ

ಸರಿಯಾದದ್ದು. ಆದರೆ ನನಗೂ ಈ ನಂದೀಶ್ವರನಿಗೂ ಯಾವ ತರದ ಬೇಧವೂ ಇರುವುದಿಲ್ಲ. ಮತ್ಸ್ವರೂಪನಾದ ಈತನನ್ನು ಭೂಲೋಕದಲ್ಲಿ ಅವತರಿಸುವದಕ್ಕೆ ಕಳಿಸುತ್ತೇನೆ. ಈತನು ಅಲ್ಲಿ ಭಕ್ತಿ, ಜ್ಞಾನ, ಶಿವಾಚಾರಗಳನ್ನು ಪಸರಿಸುವನು. ಸಕಲ ಸದ್ಧರ್ಮ ನೀತಿಗಳನ್ನು ಸ್ಥಿರಮಾಡುವನು, ದ್ವಿತೀಯ ಶಂಭುವೆನಿಸಿದ ಈತನಿಂದ ಭುವನದಲ್ಲಿ ಶಿವಮತವು ಅಭಿವೃದ್ಧಿಯಾಗಿ ಸರ್ವರಿಗೂ ಸುಖವೆನಿಸುವದು.

ಪಾರ್ವತಿ:

ಪದ

ಏನನಾಡಿದೆ ದೇವ । ಮಾನವರೆಲ್ಲರ । ಸಾನುರಾಗದಿ ಕಾಯ್ವನೆ ॥
ನಿನ್ನ ನಂದಿಯಭೇದ । ವಿನ್ನಿಲ್ಲವೆಂದುದ ।
ಸನ್ನುತಚರಿತನೆ । ಯನ್ನೋಳ್ ಪೇಳುವದೀಗ ॥ ೧ ॥

ಶಂಕರಾ, ಈ ನಂದೀಶ್ವರನಿಗೂ ತಮಗೂ ಭೇದವಿಲ್ಲೆಂ ಬದನ್ನು ಕೇಳಿ ವಿಸ್ಮಿತಳಾದೆನು. ಈ ಮಾತು ಭಕ್ತನೇ ದೇಹವಾಗಿ ಉಳ್ಳವನು ಎಂಬ ಭಾವದಿಂದಾಡಿದ್ದೋ ಅಥವಾ ಸತ್ಯವಾಗಿ ತಮಗೂ ನಂದೀಶ್ವರನಿಗೂ ಅಭೇದವೋ? ಯಥಾರ್ಥವಾದ ಸಂಗತಿಯನ್ನು ಅಪ್ಪಣೆ ಕೊಡಿಸಬೇಕೆಂದು ಬೇಡುವೆನು.

ಪರಮೇಶ್ವರ: ಪ್ರಿಯೆ, ವಿಚಾರ ಮಾಡಿ ನೋಡಿದರೆ ನಾನು ಭಕ್ತ ದೇಹಿಯೆಂದೆನಿಸಿಕೊಳ್ಳುವುದು ನಿಶ್ಚಯವೇ ಸರಿ. ಆದಾಗ್ಯೂ ಇದರಲ್ಲೊಂದು ವಿಶೇಷವುಂಟು. ಏನಂದರೆ– ಪೂರ್ವದಲ್ಲಿ ಶಿಲಾದನೆಂಬೋರ್ವ ಮುನಿಪುಂಗವನು ನನ್ನ ಧ್ಯಾನದಲ್ಲಿ ಆಸಕ್ತನಾಗಿ ಶ್ರೀಶೈಲದೋಳ್ ಘೋರವಾದ ತಪಸ್ಸನ್ನಾಚರಿಸಲು, ಅವನ ತಪೋನಿಷ್ಠೆಗೆ ನಾನು ಮೆಚ್ಚಿದವನಾಗಿ ವರವಂ ಬೇಡೆನಲು, ಆ ಯತಿಕುಲತಿಲಕನು ಶಿವಭಕ್ತಸಂಪನ್ನನಾಗಿಯೂ, ಶಿವಮತೋದ್ಧಾರಕನಾಗಿಯೂ ಇರುವ ನಿನ್ನಂಥ ಸುತನೋರ್ವನನ್ನು ದಯಪಾಲಿಸಬೇಕೆಂದು ಬೇಡಿದನು. ಅದಕ್ಕೆ ನಾನು ಮತ್ಸ್ವರೂಪನಾದ ನಂದಿಯು ನಿನಗೆ ಕಂದನಾಗುದಯಿಸಲೆಂದು ವರವಂ ಕೊಟ್ಟೆನು. ಅದರಂತೆ ನಂದಿಯು ಅಯೋನಿಜನಾಗಿ ಶಿಲಾದನಿಗೆ ಪುತ್ರನಾಗುದ್ಭವಿಸಿದನು. ಆ ಮೇಲೆ ನಂದಿಯು ನನ್ನಂ ಕುರಿತು ಘೋರ ತಪಸ್ಸನ್ನು ಮಾಡಲು, ಆತನ ತಪೋಜ್ವಾಲೆಗೆ ಬ್ರಹ್ಮ, ವಿಷ್ಣು ಮೊದಲಾದವರು ನನ್ನಂ ಮೊರೆ ಹೊಕ್ಕರು. ಆಗ ನಾನು ಆತನ ತಪಕ್ಕೆ ಮೆಚ್ಚಿ ಪ್ರತ್ಯಕ್ಷನಾಗಿ ಮಗುವೇ ವರವನ್ನು ಬೇಡೆಂದು ಅತಿ ಹರುಷದಿಂದ ನುಡಿದೆನು.

ಪಾರ್ವತಿ: **ಪದ**

ಕಂದ ನಂದಿಯ ತಪಕೆ । ಇಂದ್ರಾದಿ ಪ್ರಮುಖರು ।
ಪೊಂದಲು ಭಯವನು ಮುಂದೇನಾದಿತು ಇನ್ನು ! ೨ ॥

ಶಂಭೋ, ನಂದಿಯು ಮಾಡಿದ ತಪವು ಅಷ್ಟು ಭಯಂಕರವಾಗಿದ್ದಿತೇ? ಅಂತೇ ಬ್ರಹ್ಮ, ವಿಷ್ಣು, ಮಹೇಂದ್ರಾದಿಗಳು ಬೆದರಿ ನಿನ್ನ ಬೆನ್ನು ಬಿದ್ದಿರುವರು. ದೇವ, ಮುಂದೆ ನಡೆದ ಸಂಗತಿಯನ್ನು ಕೇಳಲು ಮನವು ಬಹು ಆತುರ ಪಡುತ್ತಿರುವುದು.

ಪರಮೇಶ್ವರ: ಪ್ರಿಯೇ, ಆಗ ನಂದಿಯು ಆನಂದಪರವಶನಾಗಿ ಪರಿಪರಿ ಯಿಂದ ನನ್ನ ಸ್ತುತಿಯಂಗೈದನು. ಆಮೇಲೆ ನಾನು–ನಂದಿಯೇ, ಶ್ರೇಷ್ಠತರವಾದ ನಿನ್ನ ತಪೋನಿಷ್ಠೆಗೆ ನಾನು ಮೆಚ್ಚಿರುವೆನು. ನಿನ್ನ ಮನೋಬಯಕೆಯನ್ನು ಪೇಳೆನಲು, ಪರಮ ವೈರಾಗ್ಯಮೂರ್ತಿಯಾದ ನಂದಿಯು–ಹೇ ಶಂಕರನೇ, ಕ್ಷೀರಸಾಗರದೋಳ್ ಕ್ರೀಡಿಸುವ ಹಂಸವು ಕೆರೆಯನ್ನು ಆಶಿಸುವುದೇ? ನಿನ್ನ ಪಾದಸೇವೆಯೆಂಬ ಶ್ರೇಷ್ಠವಾದ ಐಶ್ವರ್ಯದ ವಿನಾ ಬೇಡತಕ್ಕ ವರವು ಇನ್ನಾವದಿರುವದು? ಶಂಭೋ, ನಿನ್ನ ಪಾದಭಕ್ತಿ ಸಂಪತ್ತಿನ ಸುಖವು ಮಾತ್ರ ಸ್ಥಿರವಾಗಿರಲಿ ಎಂದು ನುಡಿಯಲು, ಆಗ ನಂದಿಗೆ ಪ್ರಮಥಗಣ ಪಟ್ಟಗಟ್ಟಿ ಸ್ಥಿರಭಕ್ತಿಯನ್ನು ಅನುಗ್ರಹಿಸಿ, ಎಂದೆಂದಿಗೂ ನೀನೇ ನನಗೆ ವಾಹನನಾಗೆಂದು ವರವಂ ಕೊಟ್ಟು ಸರ್ವರೊಂದಿಗೆ ಕೈಲಾಸಕ್ಕೆ ಹೊರಟು ಬಂದೆನು.

ನಾರದ: ಶಂಭೋ, ನಂದಿಯ ಮಹಿಮೆಯನ್ನು ಕೇಳಿ ಬಹು ಆನಂದವಾಯಿತು. ದಟ್ಟವಾಗಿ ಹಬ್ಬಿದ ತಮೋರಾಶಿಯು ಭಾಸ್ಕರ ಕಿರಣ ಪ್ರಭಾವದಿಂದ ಹರಿದು ಹೋಗುವಂತೆ ಈ ನಂದೀಶನ ಘನತರವಾದ ಶಿವಭಕ್ತಿಯ ಪ್ರಭಾವದಿಂದ ಪರಶಿವಮತಕ್ಕೊದಗಿದ ಕಷ್ಟಪರಂಪರೆಗಳು ದೂರಾಗಿ ಶಿವಭಕ್ತಿಯು ಸರ್ವೆಡೆಯಲ್ಲಿ ಪಸರಿಸುವದೆಂದು ಹೇಳಲು ಯಾವ ಅಭ್ಯಂತರವು ಇಲ್ಲ. ಆದ್ದರಿಂದ ಈತನನ್ನೇ ಧರಾತಲಕ್ಕೆ ಕಳಿಸುವದು ಯೋಗ್ಯವಾಗಿ ತೋರುವದು.

ಪರಮೇಶ್ವರ: ಆಗಲಿ, ಈ ನಂದಿಯನ್ನೇ ಕಳಿಸುವ ಯೋಚನೆಯು ಸರಿಯಾದದ್ದು.

ಪಾರ್ವತಿ: **ಪದ**

ಪುರವೈರಿ ಪೇಳೋ ಸರಸದಿಂದೆನ್ನಗಿರದೇ ॥

ತರುಳನು ಧರೆಯಲಿ । ತ್ವರಿತದಲುದಿಸಲು ।
ದೊರೆವವೆ ಮೊದಲಿನವು ॥ ೧ ॥
ಈ ವರಭಕುತಿಯು । ಪಾವನಶರೀರವು ।
ದೇವನೆ ದೊರಕುವವೇ ॥ ೨ ॥

ಶಂಭೋ, ನಂದಿಯು ಧರಾತಲದಲ್ಲಿ ಅವರತಿಸಿದ ಮೇಲೆ ಈ ರೂಪವೂ, ಭಕ್ತಿಯೂ, ಈ ಪವಿತ್ರ ಶರೀರವು, ಈ ಸದ್ಗುಣಾಲಂಕಾರವೂ ಮಹಿಮೆ, ನಿಪುಣತ್ವ ಮೊದಲಾದವುಗಳು ಈತನಿಗೆ ಲಭಿಸುವವೆ?

ಪರಮೇಶ್ವರ: ಪ್ರಿಯೆ, ನಿನ್ನ ಮನಸ್ಸಿನ ಶಂಕೆಯು ತಾನಾಗಿಯೇ ಹೋಗುವದು. ನಿಶ್ಚಿಂತಳಾಗು. (ನಂದೀಶನಿಗೆ) ಮಗೂ, ನಂದಿ ನೀನು ಭಕ್ತ ಹಿತಾರ್ಥವಾಗಿ ವಸುಧೆಯಲ್ಲಿ ಬಸವನೆಂಬ ನಾಮಾಭಿಧಾನದಿಂದುದ್ಭವಿಸಿ, ಭಕ್ತಿಜ್ಞಾನ ಶಿವಾಚಾರಗಳನ್ನು ಸವಿಸ್ತರಿಸಿ ಭೂಮಿಯಲ್ಲೆಲ್ಲಾ ಮನ್ಮಹಿಮೆಯನ್ನು ವ್ಯಕ್ತಪಡಿಸು. ಈ ಕಾರ್ಯವು ನಿನ್ನಿಂದ ಸಂದೇಹವಿಲ್ಲದೆ ಪೂರ್ತಿಯಾಗುವದು ಕಂಡ್ಯಾ .

ನಂದೀಶ್ವರ: ಸಚ್ಚಿದಾನಂದ, ಸಕಲ ಪ್ರಪಂಚಕ್ಕೂ ನೀನೇ ಪತಿಯಾಗಿ ನಿನಗೆ ಆ ಲೋಕ ಈ ಲೋಕವೆಂಬ ಭೇದವೆಲ್ಲಿಯದು? ಆದುದರಿಂದ ಪೊಡವಿಯಲ್ಲಿ ನಿನ್ನ ವಿಷಯದ ಭಕ್ತಿಯು ದೃಢವಾಗಿ ಹರಡಿಕೊಳ್ಳುವಂತೆ ಮಾಡುವ ಕಾರ್ಯವು ನಿನ್ನದೇ ಅಲ್ಲವೇ? ಶಂಕರಾ, ಭೂಮಂಡಲದಲ್ಲಿ ಕಂಡ ಕಡೆಯಲ್ಲಿ ಮಂಡಿಸಿರುವ ದುರಳ ತಂಡದ ಉದ್ದಾಮತನವನ್ನು ಅಡಗಿಸಿ ಶ್ರೇಷ್ಠವಾದ ಶಿವಮಹಿಮೆಯನ್ನು ಪ್ರಚುರಗೊಳಿಸುವೆನು. ಇದಕ್ಕೆ ನೀನು ಸಹಾಯಕನಾದರೆ ಸೂತ್ರದಾರನ ಕೈಯೊಳಗಿನ ಬೊಂಬೆಯಂತೆ ಮುಂಬರಿದು ಕಾರ್ಯವಂ ಮಾಡುವೆನು.

ಪರಮೇಶ್ವರ: **ಪದ**

ಸಾರುಮಗನೆ ಗುರುವೆನ್ನಿಸಿ । ಧರೆಗೆ ಬರುವೆನು ।
ಭೂರಿಸುಖವ ತೋರಿ ನಿನ್ನ ನಿರುತ ಪೊರೆವೆನು ॥ ೧ ॥
ಪರಮಲಿಂಗವಾಗಿ ನಿನ್ನಲಿರದೆ ಬೆರೆಯುವೆ ।
ಕರಣ ತನುಗಳಲ್ಲಿ ಸೇರಿ ಸತತ ಪೊರೆವೆನು ॥ ೨ ॥

ಮಗೂ ನಂದಿ, ನಾನು ನಿನಗೆ ಸಹಾಯಕನಾಗುವದಕ್ಕೋಸ್ಕರ ಭೂಮಿಯಲ್ಲಿ ಗುರುವಾಗಿ ಬಂದು ನಿನಗೆ ಜ್ಞಾನ ಸೌಖ್ಯವನ್ನು ಕೊಡುವೆನು. ಇಷ್ಟಲಿಂಗವಾಗಿ ನಿನ್ನ ತನು ಕರಣಾದಿಗಳಲ್ಲೆಲ್ಲಾ

ವ್ಯಾಪಿಸಿಕೊಂಡಿರುವೆನು. ಮತ್ತು ನನ್ನ ಪ್ರಾಣಸ್ವರೂಪರಾದ ಪ್ರಮಥರನ್ನು ನಿನ್ನೊಡನೆ ಕಳಿಸಿಕೊಡುವೆನು. ಅಂದರೆ ನಿನ್ನ ಕಾರ್ಯವು ಸರ್ವ ವಿಧದಿಂದಲೂ ಸುರಕ್ಷಿತವಾಗಿ ನಡೆಯುವದು ಕಂಡ್ಯಾ.

ನಂದೀಶ್ವರ: ಶಂಭೋ, ನಿನ್ನ ಅಪ್ಪಣೆಯನ್ನು ಶಿರಸಾ ವಹಿಸುವೆನು. ಆದರೆ ಧರಾತಲದಲ್ಲಿ ನಾನವತರಿಸುವ ಸ್ಥಳವಾವುದು? ದಯದೋರಿ ಅಪ್ಪಣೆಯಾಗಬೇಕೆಂದು ಬೇಡುವೆನು.

ಪರಮೇಶ್ವರ: **ಪದ**

ಹಸುಳೆಮಾದಲಾಂಬಿಕೆಯ ಬಸುರಿನಲ್ಲಿಯೇ ।
ಶಿಶುವಾಗಿಯೆ ಜನಿಸಿ ಸ್ವೀಕೃತಕಾರ್ಯ ಮಾಳ್ಪುದೈ ॥ ೧ ॥

ಮಗೂ ನಂದಿ, ಭೂಲೋಕದಲ್ಲಿ ಕನ್ನಡ ನಾಡಿನೊಳಗೆ ಬಾಗೆವಾಡಿಯೆಂಬ ಹೆಸರಿನದೊಂದು ಮಹಾ ಪಟ್ಟಣವಿರುವದು. ಆ ಪಟ್ಟಣದಲ್ಲಿ ಸತ್ಕುಲಪ್ರಸೂತನೂ ಶಿವಭಕ್ತಿಸಂಪನ್ನನಾಗಿರುವ ಮಾದರಸನೆಂಬ ಶೈವ ಬ್ರಾಹ್ಮಣನಿರುವನು. ಆತನಿಗೆ ಪತಿವ್ರತಾ ಶೀರೋಮಣಿಯಾಗಿಯೂ, ಗುಣಸಂಪನ್ನೆಯಾಗಿಯೂ ಶೋಭಿ ಸುವ ಮಾದಲಾಂಬಿಕೆಯೆಂಬ ಸತಿ ಶಿರೋಮಣಿಯಿರುವಳು. ಆ ದಂಪತಿಗಳೀರ್ವರು ಸಂತಾನವಿಲ್ಲದ್ದರಿಂದ ನನ್ನ ಸಂಬಂಧದ ವ್ರತಗಳನ್ನು ಮಾಡುತ್ತಿರುವರು. ಆ ದಂಪತಿಗಳ ಅಭೀಷ್ಟ ಪೂರ್ತಿ ಮಾಡುವದು ಒಂದು ಕೆಲಸ, ಭೂಮಿಯಲ್ಲಿ ಶಿವಮತಾಧಿಕ್ಯವಂ ಮಾಡುವದು ಮತ್ತೊಂದು ಕೆಲಸ. ಹೀಗೆ ಎರಡು ಕಾರ್ಯಗಳನ್ನು ಸಾಧಿಸುವದಕ್ಕಾಗಿ ನೀನು ಆ ಮಾದರಸು ಮಾದಲಾಂಬಿಕೆಯರ ಗರ್ಭದಲ್ಲುದ್ಭವಿಸಿ ಮುಂದಿನ ಪವಿತ್ರ ಕಾರ್ಯಮಂ ಮಾಡಬೇಕು ಕಂಡಿಯಾ.

ನಂದೀಶ್ವರ: ದೇವ, ಲೋಕನಾಯಕನಾದ ನಿನ್ನಿಂದ ಸರ್ವವೂ ತಾನಾಗಿಯೇ ನಡೆಯುತ್ತಿರುವದು; ಆದರೆ ನಿಮಿತ್ತಮಾತ್ರಕ್ಕಾಗಿ, ನನ್ನನ್ನು ಮುಂದೆ ಮಾಡಿರುವೆ. ಆಗಲಿ, ಅನುಜ್ಞೆಯಂತೆ ಧರಾತಲಕ್ಕೆ ತೆರಳುವೆನು. (ಹೋಗುವನು.)

ಪರಮೇಶ್ವರ: ವಿರಿಂಚಿಪುತ್ರಾ, ನಂದೀಶ್ವರನನ್ನು ಧರಾತಲಕ್ಕೆ ಕಳಿಸಿದೆನು. ಆದರೆ ನೀನು ಈಗಲೇ ತೆರಳಿ, ಪುತ್ರಾಭಿಲಾಷೆಯಿಂದ ಕಷ್ಟಬಡುತ್ತಿರುವ ಮಾದರಸು ಮಾದಲಾಂಬಿಕೆಯರಿಗೆ ಪುತ್ರೋತ್ಪತ್ತಿಯ ಬಗ್ಗೆ ನಂದಿಯ ವ್ರತವನ್ನು ಮಾಡಲಿಕ್ಕೆ ಹೇಳಿ, ಆ ಮೇಲೆ ನೀನು ಕೊಂಡಿ

ಮಂಚಣ್ಣನಾಗುದ್ಭವಿಸಿ ಬಿಜ್ಜಳನ ದರ್ಬಾರಿನಲ್ಲಿ ಸೇರಿ, ಶಿವಶರಣರ ಅಗಾಧ ಲೀಲೆಗಳು ಬಹಿರಂಗ ಪಡುವಂತೆ ಶಿವಶರಣರ ಸಂಬಂಧದ ಚಾಡಿಗಳನ್ನು ಹೇಳುತ್ತ ಆ ಬಿಜ್ಜಳನಿಗೆ ಪರಮಾಪ್ತನಂತೆ ಕಾಲ ಕಳೆಯತಕ್ಕದ್ದು. ಭೃಂಗೀಶ್ವರ, ವೀರಭದ್ರ, ಗಣಪತಿ ಮೊದಲಾದವರನ್ನು ಈ ಕಾರ್ಯಸಾಧನೆಗೋಸುಗ ಭೂಮಂಡಲಕ್ಕೆ ಕಳಿಸುವೆನು. ಆದ್ದರಿಂದ ನೀನು ತೀವ್ರ ಗಮನ ಮಾಡು (ಎಂದೆಲ್ಲರೂ ಹೋಗುವರು.)

(ಮಾದರಸು ಮಾದಲಾಂಬಿಕೆಯರು ಪ್ರವೇಶಿಸಿ)

ಮಾದರಸ: ಪ್ರಿಯೆ ಮಾದಲಾಂಬಿಕೆ, ನಿನ್ನ ಇಂದುವದನವು ಎಂದೂ ಇಲ್ಲದೆ ಇಂದೇ ಕಂದಿ ಕುಂದಿರುವ ಕಾರಣವೇನು? ಇಂದುಶೇಖರನ ಭಕ್ತರು ದಯಾಘನನ ಧ್ಯಾನದಿಂದ ಸದಾ ಆನಂದಿತರಾಗಿರುವುದು ಸ್ವಾಭಾವಿಕವಾದದ್ದು. ಇಂತಿರುವದಕ್ಕೆ ವಿಪರೀತವಾಗಿ ಈ ದಿನ ನಿನ್ನ ಮುಖಕಮಲವು ರಾಹುಗ್ರಸ್ತ ಚಂದ್ರಮಂಡಲದಂತೆ ಅಸ್ತವ್ಯಸ್ತವಾಗಿರುವ ಕಾರಣವೇನು?

ಮಾದಲಾಂಬಿಕೆ: **ಪದ**

ಪತಿಯೆ ಎನ್ನಯ ಮನ । ದತಿದುಃಖವನುನಾ ।
ಶೃತಗೊಳಿಸಿದೊಡದು । ಖೇದಗೊಳಿಸುವುದು ॥ ೧ ॥
ಮುನಿಮುಖ್ಯ ಮೃಕಂಡು । ತನಯನ ಚರಿತೆಯ ।
ಅನುನಯದಿಂ ಕೇಳೆ । ಘನದುಃಖವಾದುದು ॥ ೨ ॥

ನಾಥ, ಇಂದಿನವರೆಗೆ ತಮ್ಮ ಸುಂದರ ಮುಖಾವಲೋಕ ನದಿಂದ ಆನಂದಬಡುತ್ತ ಛಾಯೋಪಮಾನಳಾಗಿ ನಿಮ್ಮನುವರ್ತಿಯಾಗಿದ್ದೆನು. ಆದರೆ ನಿನ್ನಿನ ದಿವಸ ಮಹಾಮಹಿಮ ಮಾರ್ಕಂಡೇಶ್ವರನ ಪುರಾಣದೋಳ್ ಬರೆದ ಬಾಲಲೀಲೆಯನ್ನು ಕೇಳಿ ನಮಗೆ ಪುತ್ರಸಂತಾನವಿಲ್ಲದುದರಿಂದ ಚಿಂತಾಕ್ರಾಂತಳಾಗಿರುವೆನೇ ಹೊರತು ಅನ್ಯ ಕಾರಣವಿಲ್ಲ.

ಮಾದರಸ: ಪ್ರಿಯೆ, ಪುತ್ರರಂ ಪಡೆಯುವದನ್ನು ಮೃಡನಲ್ಲಿ ಬೇಡಿ ಬಂದಿಲ್ಲ. ಇಂತು ಚಿಂತೆಗೀಡಾಗಿ ಕಾಡು ಮನುಷ್ಯರಂತೆ ಗೋಳಾಡುವದು ಸರಿಯಲ್ಲ. ಅಂತಕಾಂತಕನ ಕರುಣವು ನಮ್ಮ ಮೇಲೆ ಇಲ್ಲದಂತಾಗಿರುವುದು. ಆದರೆ ನಾವು ವ್ಯರ್ಥ ಚಿಂತಿಸಿದರೆ ಪುತ್ರಸಂತಾನವು ದೊರಕುವದೇ? ಎಂದಿಗೂ ದೊರಕಲರಿಯದು. ಕಾರಣ ವ್ಯರ್ಥವಾದ ಚಿಂತೆಯನ್ನು ಬಿಟ್ಟುಬಿಡು.

ಮಾದಲಾಂಬಿಕೆ: **ಪದ**

ಏನುಹೇಳಲಿ ಪ್ರಿಯಾ । ನಾನೆನ್ನಯ ।
ಮಾನಸದೊಳ ಗಿರುತಿಹ ಚಿಂತೆಯಾ ॥
ತನಯರಿಲ್ಲದ ನಮಗೆ ಘನಮುಕ್ತಿಯು
ಇನಿಯ ದೊರಕದು ಎನುತ ಶೋಕಿಸುವೆ ॥ ೧ ॥

ಪ್ರಿಯಾ, ಮನೋಹರ ಕಮಲವು ಬೆಳೆಯದಿರುವ ಸರೋವರವೂ, ಶುಕ–ಪಿಕಂಗಳು ವಾಸ ಮಾಡದಿರುವ ಆಮ್ರವೃಕ್ಷವೂ, ಗರ್ಭವಂಧರಿಸದ ನಾರಿಯ ಉದರವೂ ನಿಷ್ಪ್ರಯೋಜನವಾದವುಗಳಲ್ಲವೇ? ನಾಥ, ಚಲುವನಾದ ಬಾಲನನ್ನು ಎತ್ತಿ ಅಪ್ಪಿಕೊಳ್ಳದಿರುವ ಲಲನೆಯ ತೋಳು ಬಂಜೆ ದೋಳೆನಿಸಿಕೊಳ್ಳವುದಿಲ್ಲವೆ? ಮೃದುವಾದ ಹಾಸಿಗೆಯುಕ್ತವಾದ ತೊಟ್ಟಿಲಲ್ಲಿ ಎಳೆ ಮಗುವನ್ನು ಮಲಗಿಸಿ ಜೋಗುಳವಂ ಪಾಡದಿರುವ ನಳಿನಾಲಲನೆಯರ ಬಾಯಿಗಳು ಮೂಷಕ ಬಿಲದಂತೆ ನಿಷ್ಫಲವಾದವುಗಳೇ ಸರಿ. ಅಂಥಾ ಸುಕುಮಾರನನ್ನು ಪಡೆಯದಿರುವ ನಾವು ಭೂಮಿಯಲ್ಲಿ ಇರಬಾರದು. ಇಂದು ಹುಟ್ಟಿ ನಾಳೆಗೆ ಮರಣ ಹೊಂದಿದರೆ ಮಂದಿಯಿಂದ ವಂಧ್ಯೆ ಅನ್ನಿಸಿಕೊಳ್ಳುವ ಕುಂದವು ದೂರವಾಗುವದು.

ಮಾದರಸ: ಪ್ರಿಯೆ, ಸುತರಿಲ್ಲದವರಿಗೆ ವ್ಯಥೆಯಾಗುವದು ನಿಜವು. ಆದರೆ ಸುತರಿಂದ ಸದ್ಗತಿ, ಸುತರಿಂದ ದುರ್ಗತಿಗಳು ಪ್ರಾಪ್ತವಾಗುವವು. ಅತಿ ಪ್ರೇಮದಿಂದ ಸಲಹಿದ ಮಗನು ಸತ್ಪಥಗಾಮಿಯಾದರೆ ಹೆತ್ತವರಿಗೆ ಸುಖವೆನಿಸುವದು. ಹೆತ್ತದ್ದಕ್ಕೂ ಸಾರ್ಥಕವಾಗುವದು. ಇದಕ್ಕೆ ವಿಪರೀತನಾದರೆ ದುಃಖವೆನಿಸುವದು. ಆದರೆ ಉಭಯತಾಪಿ ಸಮನಾಗಿರುವ ನಾವು ಈಗ ಸುಖಿಗಳೇ ಸರಿ. ಆದ್ದರಿಂದ ಪ್ರಿಯೆ, ನಿನ್ನ ವ್ಯರ್ಥ ಚಿಂತೆಯನ್ನು ಬಿಟ್ಟು ಬಿಡು.

ಮಾದಲಾಂಬಿಕೆ: ಪ್ರಿಯನೇ, ಯಾವ ರೀತಿಯಾಗಿ ಬೋಧಿಸಿದರೂ ನನ್ನ ಚಿಂತೆಯು ಮಾತ್ರ ಶಾಂತವಾಗಲರಿಯದು. ಕಂತುಹರನು ನಮ್ಮಂಥ ದೀನರನ್ನು ಶಾಂತಗೊಳಿಸಬಾರದೆ?

(ತೆರೆಯಲ್ಲಿ) ಪಾಹಿಸದಾಶಿವ । ಪಾಹಿಸದಾಶಿವ । ಪಾಹಿಸದಾಶಿವ ಪಾಹಿ ॥

ಮಾದರಸ: (ಆಲಿಸಿ) ಪ್ರಿಯೆ ಕೇಳಿದೆಯಾ, ಸುಮುನಿಗಳಾದ ನಾರದರು ಪುರಹರನ ಸ್ಮರಣೆ ಮಾಡುತ್ತ ಈ ಕಡೆಗೇ ಬರುವಂತೆ ತೋರುವದು. ಪ್ರಿಯೆ, ಈ ತ್ರಿಭುವನ ಸಂಚಾರಿಯ ಈಶಸ್ಮರಣೆಯ ಸ್ವರವನ್ನು ಕೇಳಿದೊಡನೆ ನನ್ನ ಬಲಭುಜವೂ ಬಲನೇತ್ರವೂ ಬಲುವತ್ತರವಾಗಿ ಹಾರುತ್ತಿರುವವು. ಏನೋ ಶುಭಸೂಚನೆಯೇ ಕಾಣುತ್ತದೆ ಇರಲಿ.

॥ ಪದ ॥

ಗಿರಿಜಾತಾಮುಖ ಸರಸೀರುಹಸಖ ।
ಪರತರಮೂರುತಿ ತೋರುವುದ್ಯೆ ಸುಖ ॥ ೧ ॥
ಉರಗಾಭರಣಾ । ಸುರನುತಚರಣಾ ।
ಭೂರಿಕೃಪಾರಸಪೂರಿತ ಪುರಹರ ॥ ೨ ॥

ಮಾದರಸ: ಭೋ ಮುನಿಪುಂಗವ, ತಮ್ಮ ಪಾದಾರವಿಂದಗಳಿಗೆ ಈ ದೀನನಾದ ಮಾದರಸನ ವಂದನೆಯಿರಲಿ.

ನಾರದ: ಮಾದರಸಾ, ಸದಾ ಶುಭವಾಗಲಿ ಏಳು.

ಮಾದಲಾಂಬಿಕೆ: ದಯಾಘನ, ತಮ್ಮ ಪವಿತ್ರ ಪಾದಾರವಿಂದಗಳಿಗೆ ಈ ಭಾಗ್ಯ ಹೀನೆಯ ವಂದನೆಯಿರಲಿ.

ನಾರದ: ಪುತ್ರವತಿಯಾಗಿ ಬಾಳಮ್ಮಾ, ಮೇಲಕ್ಕೇಳು. ಅಮ್ಮಾ ಭಾಗ್ಯ ಹೀನೆಯೆಂದು ಅಯೋಗ್ಯವಾದ ಮಾತುಗಳನ್ನೇಕೆ ಆಡಿದೆ? ನೀನು ಪತಿವ್ರತಾ ಶಿರೋಮಣಿಯಿದ್ದು, ಹೀಗೆ ಅಶುಭವನ್ನು ನುಡಿಯಬಾರದಮ್ಮಾ.

ಮಾದಲಾಂಬಿಕೆ: ಮಹಾತ್ಮಾ, ನಾವು ಭೂಮಿಯಲ್ಲಿ ಹುಟ್ಟಿ, ಪುರಹರನ ಧ್ಯಾನಾನಂದ ಸಾಗರದೊಳ್ ಲೋಲಾಡಿಯೂ ಕಡೆಗೆ ಪರತರವಾದ ಪರಲೋಕವು ದೊರಕದಂತಾದ ಮೇಲೆ ನಾವು ಭಾಗ್ಯಹೀನರೆನ್ನುವದೇ ಯೋಗ್ಯವಾಗಿರುವದು.

ನಾರದ: ಅಮ್ಮಾ ನೀವು ಅಂಥಾ ಭಾಗ್ಯಹೀನರಲ್ಲ. ಇದನ್ನು ನಿಶ್ಚಯ ವೆಂದು ತಿಳಿದುಕೋ, ಅದು ಹಾಗಿರಲಿ. ನಿಮ್ಮೀರ್ವರ ಮುಖ ಕಮಲಗಳು ಇಂದು ಯಾಕೋ ಬಾಡಿರುವವು. ಇದಕ್ಕೆ ಕಾರಣವೇನೋ ತಿಳಿಯದಾಗಿದೆ. ಅಮ್ಮಾ, ಇದಕ್ಕೆ ಕಾರಣವಾ ದದ್ದನ್ನು ನೀನೇ ಹೇಳು.

ಮಾದಲಾಂಬಿಕೆ: **ಪದ**

ಮುನಿಯೆ ನಿನಗೆ ಪೇಳಲೇನು । ದುಃಖವನ್ನು ॥
ಅನುಪಮಸುಖಿಸಮ । ತನುಭವರನ್ನು ।
ಪೊಂದಲಿಲ್ಲಾ । ಕೇಳೊಸೊಲ್ಲ ॥ ೧ ॥

ಹೇ ದಯಾಘನ, ನಮ್ಮೀರ್ವರ ವದನಗಳು ಕಂದಿರುವದಕ್ಕೆ ತನುಭವರಿಲ್ಲದ್ದೇ ಕಾರಣವಾಗಿರುವದು. ಈ ಅಪರಿಮಿತ ಸಂಪತ್ತಿಗೆ ಅನುರೂಪನಾದ ಸುತನಿಲ್ಲದ ಮೇಲೆ ನಾವು ಭೂಮಿಯ ಮೇಲೆ ಬದುಕಿಯೂ ವ್ಯರ್ಥವೆಂದೇ ಭಾವಿಸ ಬೇಕಾಗಿದೆ.

ನಾರದ: ಸಾಧ್ವೀಮಣಿ, ನಿಮ್ಮೀರ್ವರಿಗೆ ಅಪರಿಮಿತ ಸಂಪತ್ತಿಯೂ, ಮೇಲಾದ ಸೌಖ್ಯವೂ, ನೂತನ ತಾರುಣ್ಯವೂ ಇವೆಲ್ಲವುಗಳಿದ್ದು ಸುಖದಿಂದಿರುವದನ್ನು ಬಿಟ್ಟು ಮಕ್ಕಳು ಮಕ್ಕಳೆಂದು ವ್ಯರ್ಥವಾಗಿ ದುಃಖಿಸುವದನ್ನು ನೋಡಿದರೆ ನೀವು ಅಜ್ಞಾನಿಗಳೆಂದೇ ಊಹಿಸಬೇಕಾಗಿದೆ. ಯಾಕಂದರೆ, ಅಸಾಧ್ಯವಸ್ತುವಿನ ಸಲುವಾಗಿ ಚಿಂತಿಸುತ್ತಿರುವಿರಿ. ಮರಣ ಪರ್ಯಂತ ದಂಪತಿಗಳೀರ್ವರೂ ಸುಖಬಟ್ಟು ಸತ್ತುಹೋಗುವುದೇ ವಿಹಿತವಾದುದೆಂದು ನನ್ನ ಅಭಿಪ್ರಾಯವಿರುವದು.

ಮಾದಲಾಂಬಿಕೆ: **ಪದ (ಸುಖಕರಸಂಸ್ಕೃತಿ)**

ಗುರುವರ ನಿನಗಿದು ಸರಿಯನಿಸುವುದೇ ॥
ಕರುಣವ ತೋರದೆನೀ ಜರೆಯುವದುಮಾ ॥ ಪಲ್ಲ ॥
ತನುಭವರಿಲ್ಲದ । ಮನುಜರಿಗೆಂದಿಗೂ ।
ಘನತರಪರಗತಿ ಯೊದಗದುನಿಜವೈ ॥ ೧ ॥
ಶ್ರೀಗುರುನಿನ್ನನು । ಬಾಗಿಯೆಬೇಡುವೆ ।
ರಾಗದಿ ಪೊರೆಭವ । ರೋಗಪೀಡಿತರನು ॥ ೨ ॥

ಗುರುವರ ಮರಣಪರ್ಯಂತ ಸುಖಬಟ್ಟು ಸತ್ತುಹೊಗುವದೇ ಯೋಗ್ಯವೆಂದು ಹೇಳುವಿರಲ್ಲ. ಇದು ನ್ಯಾಯವೇ? ತನುಭವ ಹೀನರಿಗೆ ಪರಗತಿಯು ಎಂದಾದರೂ ದೊರೆಯುವುದೇ? ಅದಕ್ಕಾಗಿಯೇ "ಅಪುತ್ರಸ್ಯ ಗತಿರ್ನಾಸ್ತಿ" ಎಂದು ಹೇಳುವರ ಲ್ಲವೇ? ಆದ್ದರಿಂದ ನಮ್ಮಂಥ ಪರಮ ಪಾತಕಿಗಳು ಧರೆಯ ಮೇಲೆ ಸರ್ವಥಾ ಇರದಂತಾಗುವದೇ ಯೋಗ್ಯವೆಂದು ತೋರುವದು.

ನಾರದ: ಸಾಧ್ವೀಮಣಿ, ಇಲ್ಲದ ಮಕ್ಕಳ ಸಲುವಾಗಿ ಸುಳ್ಳೇ ದುಃಖಿಸಿದರೆ ತಲೆನೋವು ಮಾತ್ರ ಆಗುವದು. ಆದರೆ ಪುರಹರನು ನಿಮ್ಮ ಮೊರೆಯನ್ನು ಕೇಳ್ಯಾನು? ಇದಕ್ಕೇಕೆ ಚಿಂತಿಸಬೇಕಮ್ಮಾ?

ಮಾದಲಾಂಬಿಕೆ: ಗುರುವರ, ನೀನು ದಯದೋರಿದರೆ ಯಾವುದು ತಾನೇ ಅಸಾಧ್ಯ? ಭಕ್ತವತ್ಸಲನಾದ ನೀನೇ ಕೃಪೆ ಮಾಡದಿದ್ದರೆ ಭೂಮಿಯಲ್ಲಿ ನಾವು ಬಾಳಿಯೂ ವ್ಯರ್ಥವೆಂದು ಭಾವಿಸಬೇಕಾಗಿದೆ.

ನಾರದ: ಆಗಲಿ, ನಿಮ್ಮಲ್ಲಿ ಸುತರ ಹಂಬಲವು ಮಿತಿಮೀರಿದೆ. ಆದರೆ ನಾನೊಂದು ವ್ರತವನ್ನು ಹೇಳುತ್ತೇನೆ. ಅದನ್ನು ನೀವೀರ್ವರೂ ಏಕನಿಷ್ಠೆಯಿಂದ ನಡೆಯಿಸುವಿರಾ?

ಇಬ್ಬರೂ: ಪ್ರಭುವರ, ನಿಶ್ಚಯವಾಗಿ ಆ ವ್ರತವನ್ನು ನಡೆಯಿಸುವೆವು.

ನಾರದ: ಹಾಗಾದರೆ ನೀವೀರ್ವರೂ ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಶುಚಿರ್ಭೂತರಾಗಿ ನಂದಿಯ ದೇವಾಲಯಕ್ಕೆ ಹೋಗಿ ಆತನನ್ನು ಭಕ್ತಿಯಿಂದ ಭಜಿಸಿದರೆ ನಿಶ್ಚಯವಾಗಿ ನಿಮ್ಮಭೀಷ್ಟವು ಫಲಿಸುವುದು. ಇದರಂತೆ ನೀವೀರ್ವರೂ ನಡೆದುಕೊಳ್ಳಿರಿ. ನಾನು ಸುರಲೋಕಕ್ಕೆ ತೆರಳಬೇಕಾಗಿದೆ. ಕಾರಣ ನಾನು ಪ್ರಯಾಣ ಮಾಡುವೆನು

(ಪಾಹಿ ಸದಾಶಿವ, ಹಾಡುತ್ತ ಹೋಗುವನು)

ಮಾದರಸ: ಪ್ರಿಯೆ, ಇಂದು ಪುರವೈರಿಯು ದಯದೋರಿದನು. ಇನ್ನು ನಿನ್ನ ದುಃಖವನ್ನು ಶಾಂತಮಾಡು. ಆ ಗುರುವರೇಣ್ಯನನುಜ್ಞೆಯಂತೆ ಕಡುಮಹಿಮನಾದ ನಂದೀಶನ ಪೂಜೆಗೆ ತಡಮಾಡದೆ ತೆರಳೋಣ.

॥ ಪದ ॥

ರಮಣಿ ನೋಡೆ ಹರನು ತಾನು ದಯವ ತೋರಿದ ।
ಕಮಲನಯನೆ ಶಾಂತಳಾಗು ಮುನಿಯು ಪೇಳಿದಾ ॥ ೧ ॥
ನಡಿಯೆ ಗಡನೆ ನಂದಿಯಿರುವ ಗುಡಿಗೆ ತೆರಳುವಾ ।
ಒಡನೆ ಮನದ ಬಯಕೆಯನ್ನು ಬೇಡಿಕೊಳ್ಳುವಾ ॥ ೨ ॥

(ಎಂದು ಹೋಗುವರು)

ನಂದಿಯ ದೇವಾಲಯ

(ಮಾದರಸು ಮಾದಲಾಂಬಿಕೆಯರು ಪ್ರವೇಶಿಸಿ)

ಪದ

ಪಾಲಿಸಯ್ಯ ಪರಮದೇವ । ಹರವಾಹನನಾಗಿರುತೆ ।
ಸ್ಥಿರಪದವೀಯುತ್ತ । ಕರುಣದಲಿ ಪೊರೆದಿರುವೆ
ದೂರದುರಿತನೆ ॥
ತರುಳರನ್ನು ಪಡೆವುದಕ್ಕೆ ಭರದಿಬಂದ ದಂಪತಿಗಳ ।
ಪ್ರೇಮದಿಂದಲೀಕ್ಷಿಸುತ್ತ ಪಾಲಿಸಯ್ಯ ॥ ೧ ॥

ಮಾದರಸ: ದೇವಾ ನಂದೀಶ್ವರ, ದಯಾಸಮುದ್ರನಾಗಿಯೂ, ಭಕ್ತರಿಗೆ ಇಷ್ಟಾರ್ಥವನ್ನಿತ್ತು ಕಾಪಾಡುವವನಾಗಿಯೂ ಇರುವ ನಿನ್ನನ್ನು ಪುತ್ರಪ್ರಾಪ್ತಿಗಾಗಿ ಮೊರೆಹೊಕ್ಕಿರುವೆವು. ನನ್ನ ನಿಷ್ಕಲಂಕವಾದ ಮತ್ತು ದೃಢವಾದ ಭಕ್ತಿಯು ನಿನ್ನ ಪಾದತಲದಲ್ಲಿದ್ದದ್ದಾದರೆ ಈ ದೀನನ ಬಯಕೆಯನ್ನು ಪೂರ್ತಿ ಮಾಡು. ನಿನ್ನ ವರಪ್ರಸಾದದಿಂದ ಜನಿಸಿದ ಸುತನಿಗೆ ಪವಿತ್ರ ಮೂರ್ತಿಯಾದ ನಿನ್ನ ನಾಮವನ್ನೇ ಇಡುವೆನು. ಭಕ್ತವತ್ಸಲ, ನೀನು ದಯದೋರಿದರೆ ಯಾವದು ತಾನೆ ಅಸಾಧ್ಯ? ದೇವಾ, ಈ ದೀನನಲ್ಲಿ ದಯವನ್ನು ತೋರು, ತೋರು.

ಮಾದಲಾಂಬಿಕೆ: ದೀನದಯಾಳು, ಸುತನನ್ನು ಪಡೆಯುವದೇ ಸುದತಿಯರಿಗೆ ಭೂಷಣವು. ಅಂತೇ ಸಂತಾನ ಹೀನಳಾದ ನಾನು ಸಂತಾನ ಪ್ರಾಪ್ತಿಗಾಗಿಯೇ ನಿನ್ನನ್ನು ನಂಬಿರುವೆನು. ಕಾರುಣ್ಯಸಿಂಧು, ಈ ಹತಭಾಗ್ಯರ ಭಾಗ್ಯೋದಯಕ್ಕೆ ಸರಿಯಾಗಿ ನಿನ್ನಂಥ ಸುತನೋರ್ವನನ್ನು ದಯಾಪಾಲಿಸಬೇಕೆಂದು ಬೇಡುವೆನು.

(ಇಷ್ಟರಲ್ಲಿ ನಂದೀಶನ ಬಲಶೃಂಗದಿಂದ ಪುಷ್ಪವು ಉದುರ್ವುದು)

ಮಾದರಸ: ಪ್ರಿಯೆ ನೋಡಿದಿಯಾ, ಈ ಮಹಿಮಾಪೂರ್ಣನಾದ ನಂದೀಶನು ನಮ್ಮಿರ್ವರ ಚಿಂತಾಪರಿಹಾರಕ್ಕೋಸುಗ ತನ್ನ ಬಲಶೃಂಗದ ಮೇಲಿನ ಪುಷ್ಪರೂಪದಿಂದ ಪುತ್ರರತ್ನವನ್ನು ದಯಪಾಲಿಸಿದನು. ಇಂದಿಗೆ ನಾವು ಧನ್ಯರಾದೆವು. ಇನ್ನು ನಿನ್ನ ದುಃಖವನ್ನು ಶಾಂತಮಾಡು ಕಂಡ್ಯಾ. ಇಕೋ ಈ ಪ್ರಸಾದ ಪುಷ್ಪವನ್ನು ತೆಗೆದುಕೋ. (ಕೊಡುವನು.)

ಮಾದಲಾಂಬಿಕೆ: ಪ್ರಿಯನೇ, ಇದೇನು ಸ್ವಪ್ನವೋ, ನಿಜವಾಗಿ ನಂದೀಶನ ಕೃಪಾ ಫಲವೋ? ಈಗ ನಾನಂತು ಆನಂದದಿಂದ ಉನ್ಮತ್ತಳಾಗಿರುವೆನು.

ಮಾದರಸ: ಪ್ರಿಯೆ, ಇಚ್ಛಿತ ವಸ್ತು ಪ್ರಾಪ್ತಿಯಾಗಲು, ಮನುಜರು ಆನಂದ ದಿಂದ ಉನ್ಮತ್ತರಾಗುವದು ಸ್ವಾಭಾವಿಕವೇ. ಅಂತೇ ನೀನೂ ಉನ್ಮತ್ತಳಾಗಿರುವಿ, ಇದರಲ್ಲಿ ಆಶ್ಚರ್ಯವೇನು? ನಡೆ, ನಮ್ಮಾಲಯಕ್ಕೆ ತೆರಳೋಣ. (ಹೋಗುವರು.)

(ಅಂತಃಪುರದಲ್ಲಿ ಗರ್ಭಿಣಿಯಾದ ಮಾದಲಾಂಬಿಕೆಯೂ, ದಾಸಿಯೂ ಪ್ರವೇಶಿಸುವರು.)

===***====***===

೨ನೇ ಅಂಕವು

(ಬೀದಿಯಲ್ಲಿ ಓರ್ವನು ಪ್ರವೇಶಿಸಿ)

ಜೋಯಿಸರಾಗಿ ಜನಿಸಬೇಕಾದರೆ ಪುರಾಕೃತ ಪುಣ್ಯದ ಬಲವಿರಲೇಬೇಕೆಂಬಂತೆ ಕಾಣುತ್ತದೆ. ಯಾಕಂದರೆ, ಆ ಬಲವಿರದಿದ್ದರೆ ನಾವು ಜೋಯಿಸರಾಗಿ ಹುಟ್ಟಿ ಲೋಕದ ಜನರ ಆದರ ಸತ್ಕಾರಗಳಿಗೆ ಪಾತ್ರರಾಗುತ್ತಿದ್ದಿಲ್ಲ. ಹಾಗಾದರೆ ಲೋಕದ ಜನರು ನಮಗೆ ಈ ರೀತಿ ಆದರ ಸತ್ಕಾರಗಳನ್ನು ಮಾಡುವ ಕಾರಣವೇನು? ನಾವು ಪ್ರಾಣಿಗಳ ಬಲಾಬಲಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವರಾದುದರಿಂದಲೇ ಈ ಬಗೆಯ ಆದರ ಸತ್ಕಾರಗಳು. ದೈವವನ್ನು ತಿಳಿಯುವದು ಸಾಮಾನ್ಯವೆ? ಸ್ವರ್ಗಲೋಕದಲ್ಲಿ ಬ್ರಹ್ಮನು ಬರೆದ ಬರಹವನ್ನು ನಾವು ಈ ಮರ್ತ್ಯಲೋಕದಲ್ಲಿ ಕುಳಿತು ತಿಳಿದುಕೊಳ್ಳುತ್ತೇವೆ. ಅಂತೇ ನಮಗೆ ದೈವಜ್ಞ ಶಿಖಾಮಣಿಗಳೆಂಬ ಹೆಸರು ಬಂದಿದೆ. ಆದರೆ ಈಗೇನೋ ಬಸವ ಕುಮಾರನ ಉಪನಯನ. ಈ ಉಪನಯನ ಕಾರ್ಯದಲ್ಲಿ ನಮ್ಮದೇ ಪ್ರಾಬಲ್ಯ. ಮನೆಯ ಯಜಮಾನನಂತೂ ಉಪನಯನ ಸಮಾಪ್ತಿಯವರೆಗೆ ಶ್ರೀ ರಾಮಭಕ್ತನಾದ ಹನುಮಂತನಂತೆ ಕೈಕಟ್ಟಿಕೊಂಡು ನಿಲ್ಲಬೇಕಾಗುವದು. ಇದಲ್ಲದೆ ಇನ್ನೂ ೪-೫ ದಿವಸಗಳವರೆಗೆ ಪಕ್ವಾನ್ನಗಳನ್ನುಂಡು ಉಂಡು ತಲೆ ಚಿಟ್ಟೆನಿಸುವದು. ಇದನ್ನೆಲ್ಲ ನೋಡಿದರೆ ಇಂಥಾ ಮರ್ಯಾದೆ, ಇಂಥಾ ಭೋಜನ, ನಮ್ಮ ಜೋಯಿಸರ ಹೊರತು ಅನ್ಯರಿಗಿರುವವೇ? (ನೋಡಿ) ಇಲ್ಲಿ ಯಾರೋ ಬರುತ್ತಿರುವಂತೆ ಕಾಣುವದು. (ಇಷ್ಟರಲ್ಲಿ ಒಬ್ಬ ನು ಪ್ರವೇಶಿಸಿದ ಕೂಡಲೆ) ಏನಿರಯ್ಯಾ; ತಾವು ಯಾರು?

೨ನೇ: ನಾನೋರ್ವ ವಿದೇಶೀ ಬ್ರಾಹ್ಮಣನು.

೧ನೇ: ತಮ್ಮ ಸ್ಥಳವಾವುದು?

೨ನೇ: ನಮ್ಮದು ಗುಂಡ್ಲುಪೇಟೆ.

೧ನೇ: ಓಹೋ, ಬಹು ದೂರದಿಂದ ಪ್ರಯಾಣ ಮಾಡಿರುವಿರಿ?

೨ನೇ: ಇದೇತರ ದೂರವಯ್ಯಾ? ಇನ್ನು ಹತ್ತು ಗಾವುದವಾದರೂ ಅದು ನನಗೆ ಸಮೀಪವೇ.

೧ನೇ: ಅಂಥಾ ಮಹತ್ವದ ಕೆಲಸವೇನು !

೨ನೇ: ಕೆಲಸವೇನೆಂದು ಕೇಳುವಿರೋ? ಈ ಗ್ರಾಮದಲ್ಲಿ ಮಾದರಸ ನೆಂಬ ಶ್ರೀಮಂತನ ಮಗನ ಉಪನಯನವಂತೆ. ಅದಕ್ಕಾಗಿ ಹೊರಟು ಬಂದೆ.

೧ನೇ: ಹಾಗಾದರೆ ತಾವು ಮಾದರಸನ ಸಂಬಂಧಿಕರೋ?

೨ನೇ: ಎಲ್ಲಿಯ ಸಂಬಂಧವಯ್ಯಾ, ಭೋಜನ ಸಂಬಂದವೇ ಸಂಬಂಧ.

೧ನೇ: ಹಾಗಾದರೆ ತಾವು ಭೋಜನಕ್ಕಾಗಿಯೇ ಇಷ್ಟು ದೂರ ಬಂದಂತಾಯಿತು ?

೨ನೇ: ಅದರಲ್ಲಿ ಸಂಶಯವೇ ಇಲ್ಲವೆಂದು ತಿಳಿದರಾಯಿತು.

೧ನೇ: ಸರಿ, ಸರಿ. ನೀವು ಬಂದದ್ದು "ಬ್ರಾಹ್ಮಣೋ ಭೋಜನ ಪ್ರಿಯಃ" ಎಂದು ಹೇಳಿಕೊಳ್ಳುವ ಮಾತಿನ ನಿಜತ್ವವನ್ನು ಪ್ರತ್ಯಕ್ಷ ಪ್ರಯೋಗದಿಂದ ಸಿದ್ಧಮಾಡಿ ತೋರಿಸಿದಂತಾಯಿತು.

೨ನೇ: ತಾವು ಹೇಗಾದರೂ ಭಾವಿಸಿರಿ. ನನಗಂತೂ ಈಗ ಹಸಿ ವೆಯು ಬಹು ಬಾಧಿಸುವದು. ತಾವು ಬ್ರಾಹ್ಮಣರಿದ್ದಂತೆ ತಮ್ಮ ರೂಪದಿಂದಲೂ ಭಾಷಣದಿಂದಲೂ ತಿಳಿದು ಬರುವದರಿಂದ ಈ ಹಸಿವೆಯನ್ನು ಅಡಗಿಸಲು ಈಗ ಸಹಾಯ ಮಾಡುವಿರಾ?

೧ನೇ: ನಡೆ ಮಹಾರಾಯ ಹೋಗೋಣ. (ಎಂದಿಬ್ಬರೂ ಹೋಗುವರು.)

(ಮಾದರಸನೋರ್ವನೇ ಪ್ರವೇಶಿಸಿ)

ಮಾದರಸ: ಇಂದೇ ಉಪನಯನ ಕಾರ್ಯವು ನೆರವೇರತಕ್ಕದ್ದೆಂದು ಸರ್ವರಿಗೂ ವಿಶದ ಪಡಿಸಿದಂತೆ ಸರ್ವರೂ ಆಗಮಿಸಿರುವರು. ಆದರೆ ಪೂರ್ವಸಿದ್ಧತೆಗಾಗಿ ಜೋಯಿಸರು ಇನ್ನೂ ಬರಲೇ ಇಲ್ಲ. ಎಲೋ, ಯಾರಲ್ಲಿ.

ಸೇವಕ: ಸ್ವಾಮಿ, ಏನಪ್ಪಣೆ.

ಮಾದರಸ: ಬೇಗ ಹೋಗಿ ಜೋಯಿಸರನ್ನೂ, ಕುಮಾರ ಬಸವೇಶ ಮೊದಲಾದವರನ್ನೂ ಕರೆತಾ.

ಸೇವಕ: ಆಜ್ಞೆ ಮಹಾನ್. (ಎಂದು ಹೋಗುವವನು)

ಮಾದರಸ: ಕುಮಾರನಂತೂ ಸಕಲ ವಿದ್ಯಾ ನಿಪುಣನಾಗಿರುವನು. ಆತನ ಈಶಭಕ್ತಿಯನ್ನೂ, ವಿನಯಶೀಲತೆಯನ್ನೂ ನೋಡಿದರೆ ಬಹು ಆಶ್ಚರ್ಯವಾಗುತ್ತದೆ. ಈಗ ಆತನು ವಯಸ್ಸಿನಿಂದ ಬಾಲಕನಾದರೂ ಜ್ಞಾನದಿಂದ ವೃದ್ಧನಾಗಿರುವನು. (ಇಷ್ಟರಲ್ಲಿ ಜೋಯಿಸರು ಬರುವರು.) ದೈವಜ್ಞ ಶಿಖಾಮಣಿಗಳೇ (ಮಾದರಸನು ವಂದಿಸುವನು.)

ಜೋಯಿಸ: ಐಶ್ವರ್ಯ ಪ್ರಾಪ್ತಿರಸ್ತು. ಮಾದರಸರೇ ಇದೇನು? ಇನ್ನೂ ಕುಮಾರನೇ ಬಂದಿಲ್ಲವಲ್ಲ.

ಮಾದರಸ: ಬರುವನು. ತಾಳಬೇಕು. (ಅಷ್ಟರಲ್ಲಿ ಬಸವೇಶನೂ ಮಾದಲಾಂಬಿಕೆಯೂ ಬಂದು)

ಬಸವೇಶ: ಜನಕನೆ, (ಬಾಲನಾದ ಬಸವನು ವಂದಿಸುವನು.)

ಮಾದರಸ: ಸುಕುಮಾರ, ಸರ್ವದಾ ಸುಖಿಯಾಗಿ ಬಾಳು.

ಬಸವೇಶ: ಜನಕನೆ, ವಿದ್ಯಾವ್ಯಾಸಂಗದಲ್ಲಿ ತೊಡಗಿದ ನನ್ನನ್ನು ಇಷ್ಟು ಆತುರತೆಯಿಂದ ಕರೆಯಿಸಿದ್ದು ಯಾಕೆ?

ಮಾದರಸ: ಮಗುವೆ, ನೀನು ಜನ್ಮ ತಾಳಿ ಇಂದಿಗೆ ಎಂಟು ವರ್ಷಕ್ಕೆ ಬಂದಂತಾಯಿತು. ಆದರೆ ಇಂದು ಶುಭಮುಹೂರ್ತವಿರುವು ದರಿಂದ ನಿನ್ನ ಉಪನಯನ ಕಾರ್ಯವಂ ಮಾಡಿಸುವುದಕ್ಕಾಗಿ ಈ ಬ್ರಹ್ಮಜ್ಞಾನಿಗಳಾದ ಜೋಯಿಸರನ್ನು ಕರೆಯಿಸಿರುವೆನು. ಇದರ ಹೊರತು ಇನ್ನಾವ ಕಾರಣವೂ ಇಲ್ಲ.

ಬಸವೇಶ: **ಪದ**

ಏನನಾಡಿದೆ ಜನಕ ಜ್ಞಾನ । ಹೀನರಂತೆ ನುಡಿದೆ ಮುನ್ನ। ॥ ಪಲ್ಲ ॥
ಸಾನುರಾಗದಿಂದ ತಿಳಿಯೋ । ನಿನ್ನ ಮನದೊಳುಂ ॥ ೧ ॥
ಪರಮಹರನಮತದನರನು । ಪರಮತದಲಿ ಸೇರ್ವನೇ ॥ ೨ ॥
ಉರುತರ ಮಹಾಜ್ಞಾನಿ ನೀನು । ಇರಿಸೊ ನಿನ್ನ ಮನದಲಿದನು ॥ ೩ ॥

ಜನಕನೆ, ಇದೇನು ಕಾರ್ಯವನ್ನಾರಂಭಿಸಿದೆ? ವೃದ್ಧಾಪ್ಯಕ್ಕೆ ಬುದ್ಧಿಭ್ರಮಣವಾಗಿದೆಯೋ? ಇಲ್ಲವೇ ವ್ರತೋಪಾಸಾದಿ ಗಳಂ ಮಾಡಿ ನೆತ್ತಿಗೆ ಪಿತ್ತವೇರಿದೆಯೋ? ಜನಿಸಿದ ಕೂಡಲೆ ಪರಮೇಶ್ವರನು ಬಂದು

ನನಗೆ ಶಿವದೀಕ್ಷೆಯನ್ನು ಕೊಟ್ಟು ಉಪದೇಶಿಸಿದ್ದನ್ನು ಮರತೆಯಾ? ಶಿವದೀಕ್ಷೆಯಂ ಪೊಂದಿದವನು ಅನ್ಯ ದೀಕ್ಷೆಗಳಿಗೆ ಆಸೆ ಮಾಡುವದೆಂತು? ಅಲ್ಲದೆ ಶಿವಭಕ್ತಿಯೋಳ್ ಮನ ನಟ್ಟಿರುವವನಿಗೆ ಅನ್ಯ ದೈವತಾ ಭಕ್ತಿಯೋಳ್ ಮನನಾಟುವುದೇ? ಪಿತನೇ, ಏನು ಹೇಳಲಿ. ಕಲ್ಪವೃಕ್ಷದ ನೆಳಲನ್ನು ಬಿಟ್ಟು, ಅಲ್ಪವೃಕ್ಷದ ನೆಳಲನ್ನಾಶ್ರಯಿಸಬಹುದೇ? ಶಿವಪಾದ ಸೇವಾಸಕ್ತನಾದ ಪುಣ್ಯಶಾಲಿಗೆ ಇತರ ದೇವತೆಗಳನ್ನು ಸೇವಿಸುವವನು ಸಮನಾದಾನೆ? ಇದೂ ಅಲ್ಲದೆ ಶಿವಲಾಂಛನಗಳನ್ನು ಧರಿಸುವವನು ಉಳಿದ ಲಾಂಛನಗಳನ್ನು ಧರಿಸಲಿಕ್ಕೆ ಮನ ಮಾಡುವನೇ? ತಾತಾ, ಇದನ್ನು ವಿಚಾರಿಸಿ ಈ ಕಾರ್ಯವಂ ಮಾಡುವದು ನ್ಯಾಯವೋ ಅನ್ಯಾಯವೋ ನೀನೇ ತಿಳಿದು ನೋಡು.

ಮಾದರಸ: ಬಸವೇಶಾ, ಹೀಗೇಕೆ ಹೇಳುವೆ? ನಿನ್ನ ದುರಾಗ್ರಹವನ್ನು ಬಿಟ್ಟು, ನಾನು ಹೇಳುವುದನ್ನು ಕೇಳು. ಈ ದ್ವಿಜಚಿನ್ಹವು ಶಿವಚಿನ್ಹವೇ ಹೊರತು ಬೇರೆಯಲ್ಲ. ಹ್ಯಾಗಂದರೆ, ತ್ರಿಪುರಾರಿಯು ಕಾಲಭೈರವಾವತಾರದಲ್ಲಿ ನಾರಸಿಂಹನಂ ಸಂಹರಿಸಿ, ಆತನ ಕೇಶದಿಂದ ಮಾಡಿ ಧರಿಸಿಕೊಂಡಿರುವುದೇ ಯಜ್ಞೋಪವೀತವು. ಆ ನಾರಸಿಂಹನ ಅಸ್ತಿಯೇ ದಂಡವು, ಮತ್ತು ಆತನ ಚರ್ಮವೇ ಕೃಷ್ಣಾಜಿನವು. ಬ್ರಹ್ಮಶಿರಃ ಕಪಾಲವೇ ಭಿಕ್ಷಾಪಾತ್ರೆಯು. ಅದು ಕಾರಣ ಇವೆಲ್ಲ ಶಿವಚಿನ್ಹಗಳಾಗಿವೆ. ವತ್ಸಾ, ಗಾಯತ್ರಿ ಮಂತ್ರಕ್ಕಾದರೂ ಶಿವನೇ ಅಧಿದೇವತೆಯು. ದ್ವಿಜನೂ ಕೂಡ ಶಿವಾಂಶಸಂಭೂತನೇ ಇರುವನು. ಇದಲ್ಲದೆ ಅಗ್ನಿಯೂ ಕೂಡ ಪರಮೇಶ್ವರನ ಒಂದು ಅಂಶವು. ಇಂತು ವೇದ ಪ್ರಮಾಣವಿರಲು, ನೀನು ಉಪನಯನವನ್ನು ತಿರಸ್ಕರಿಸಿದರೆ, ಈ ವಿ[illegible]ಯುವನ್ನು ವಿಪ್ರರುಗಳು ಕೇಳಿ ನನ್ನನ್ನು ನಿಂದಿಸದೆ ಬಿಡಲಾರರು. ಅದರಿಂದ ಇಂಥಾ ದುರಾಗ್ರಹವನ್ನು ಬಿಟ್ಟು ಈ ಕಾರ್ಯಕ್ಕೆ ಅನುಕೂಲನಾಗು.

ಬಸವೇಶ: **ಪದ (ನಾರಿಮಣಿಯು ಎಂಬಂತೆ)**

ಮಾನ್ಯವಹುದೆ । ನಿನ್ನಯ ಮನಸಿನ ಭಾವನೆ ।
ಜ್ಞಾನನಿಧಿಯೆ ಪರಿಭಾವಿಸುವುದು ॥
ಸಾನುರಾಗದಿ ಪಿತ । ಭಾನುನಯನ ನಾಮ ।
ಧ್ಯಾನಿಪ ಪಂಚಾಕ್ಷರಿಗೆ । ಹೀನ ಮಂತ್ರವ ಸರಿ ಎಂದು
ಪೇಳುವದಿದು । ಜ್ಞಾನಿ ನಿನಗೆ ಸಮವೆನಿಸುವುದೇ ॥ ೧ ॥

ಜನಕನೆ, ಮೂಢರೊಡನಾಡಿ ನೀನೂ ಮೂಢನಾಗುವೆಯಲ್ಲ. ಅಜಗಜನ್ಯಾಯದಂತೆ ಯಾವ ವಸ್ತುವಿಗೆ ಯಾವ ವಸ್ತುವನ್ನು ಸಮನಾಗಿ ಮಾಡುವೆ? ನಿಜಸ್ಥಿತಿಯನ್ನರಿಯದ ನಿನ್ನ ಮನದ ಮಾಲಿನ್ಯವೆಲ್ಲ ಹರಿದು ಹೋಗುವಂತೆ ವಿವರಿಸುವೆನು ಕೇಳು. ಗಾಯತ್ರಿ ಮಂತ್ರಕ್ಕೆ ಶಿವನೇ ಅಧಿದೇವತೆಯೆಂದು ಹೇಳಿದಿರಿ. ಆದರೆ ಆ ಮಂತ್ರಕ್ಕಾದರೂ ಅಂಗಾಧಿ ದೇವತೆಗಳು ಬೇರೆ ಇದ್ದಾರೆ. ಹೀಗಿರುವಲ್ಲಿ ಪವಿತ್ರವಾದ ಪಂಚಾಕ್ಷರಿ ಮಂತ್ರಕ್ಕೆ ಸಮನಾಗುವದೇ? ಪರಶಿವನು ತನಗೆ ಸ್ವಾಮಿಯಾಗಿರಲು ವಿಷ್ಣು, ಬ್ರಹ್ಮೇಂದ್ರಾದಿಗಳನ್ನು ಗಣನೆ ಮಾಡದೆ ಜೀವಿಸು ವವನೇ ಶಿವಾಂಶದಿಂದುದ್ಭವಿಸಿದವನು. ಪಿತನೆ, ಅಗ್ನಿಯು ಶಿವನ ಅಂಗವೆಂದು ಹೇಳಿದಿರಿ. ಆದರೆ ಆತನ ನಾಲಿಗೆಯನ್ನು ವೀರಭದ್ರೇಶ್ವರನು ಯಾತಕ್ಕೆ ಶೀಳಿದನು? ಅಯ್ಯೋ ! ಮೂಢನಾದ ನಿನ್ನ ವಿಚಾರವನ್ನು ನಾನು ಹ್ಯಾಗೆ ಪುರಸ್ಕರಿಸಲಿ? ಶಿವಜ್ಞಾನದಿಂದ ಪರಿಪೂರ್ಣನಾದ ನನ್ನನ್ನು ಆ ಅಜ್ಞಾನಿಗಳ ನುಡಿಯು ಏನು ಮಾಡಬಲ್ಲದು? ಅದರಿಂದ ಉಪನಯನ ಸಂಸ್ಕಾರಕ್ಕೆ ನನ್ನ ಮನವು ಸರ್ವಥಾ ಒಪ್ಪಲೊಲ್ಲದು. ಮಾಡಲೇನು?

ಮಾದಲಾಂಬಿಕೆ: ಸುತನೇ, ಹೆತ್ತವರು ನಿನಗೆ ಸರ್ವದಾ ಹಿತವನ್ನೇ ಬಯಸುವರು. ಅಂಥಾ ಹಿತಕರವಾದ ಮಾತಿಗೆ ಪ್ರತ್ಯುತ್ತರವನ್ನಾಡುವದು ಯಾವ ತರಹ ನೀತಿಯು? ಮತ್ತು ಮತೋದ್ಧಾರಕನಾದ ನೀನು ಮತಪದ್ಧತಿಯಂತೆ ಉತ್ತಮವಾದ ಉಪನಯನ ಕಾರ್ಯಕ್ಕೆ ಅನುಮತಿಯನ್ನು ಕೊಡು. ಹಡೆದವರು ಮಾಡುವ ಕಾರ್ಯಕ್ಕೆ ಎಡರನ್ನು ತರಬೇಡ ಕಂಡೆಯಾ.

ಬಸವೇಶ್ವರ: ॥ **ಶ್ಲೋಕ** ॥

ಯನ್ನಸ್ಪೃಶಂತ್ಯೇನಮ ಚಿಂತ್ಯ ತತ್ವಂ ।
ಧುರಂತಧಾಮನಮನಂತರೂಪಂ ॥

ಮನೋವಚೋವೃತ್ತಯ ಆತ್ಮಭಾಜಾಂ ।
ಸವಿಷಪೂಜ್ಯಃ ಪರಮಃ ಶಿವೋನಃ ॥

ಜನನಿ, ಯಾವ ಆತ್ಮಜ್ಞಾನಿಗಳ ಮನ–ವಚನ–ವೃತ್ತಿ ಇವು ಯಾವಾತನನ್ನು ಸೋಂಕಲರಿಯವೋ, ಯಾವಾತನು ಚಿಂತಿಸಲಿಕ್ಕೆ ಅಗಾಧವಾದ ತತ್ವವುಳ್ಳವನೋ, ಯಾವಾತನು ಅನಂತರೂಪಿಯೋ ಅಂಥಾ ಪರಶಿವನೇ ನನಗೆ ಪೂಜ್ಯನು ! ಆತನಿಗೇ ನನ್ನ ನಮಸ್ಕಾರವು ! ಇಂತದನ್ನುಳಿದು

ಅನ್ಯ ದೈವತೋಪಾಸನೆಯಂ ಮಾಡುವ ನಿಮ್ಮ ಆಚರಣೆಯಂತೆ ನಡೆಯಲಿಕ್ಕೆ ನನ್ನ ಮನವು ಅನುಮತಿಯನ್ನು ಕೊಡಬ ಹುದೇ? ಮಾತೇ, ಈ ಮಾತು ಮಾತ್ರ ಎಂದಿಗೂ ಆಗದು ಕಂಡೆಯಾ? ಮಾತಾ-ಪಿತರ ಅಪ್ಪಣೆಯನ್ನು ನಡೆಯಿಸುವದು ಪುತ್ರನ ಕರ್ತವ್ಯವು; ಆದರೆ ಪಡೆದವರೇ ಮೂಢರಾದರೆ ಸುತನು ಮಾಡುವುದೇನು? ಮಾತೇ, ಮೃಡನ ಭಕ್ತರಿಗೆ ಈ ನಡತೆಯು ಸಲ್ಲದು. ಅದರಿಂದ ತಾವು ಉಪನಯನ ಕಾರ್ಯದ ಹಂಬಲವನ್ನು ಬಿಡಬೇಕೆಂದು ಬೇಡುವೆನು.

ಮಾದರಸ: ಮಗೂ, ನೀನೆ ಹೀಗೆ ಯುಕ್ತಾಯುಕ್ತಗಳನ್ನರಿಯದೆ ಉಸರು ವದು ಜ್ಞಾನಿಗಳ ಲಕ್ಷಣವಲ್ಲ. ಯಾಕಂದರೆ ಧರ್ಮಾಂತರ ಮಾಡುವದು ಮಹಾ ಪಾತಕವಲ್ಲವೇ? ನೀನು ಬ್ರಾಹ್ಮಣ ಧರ್ಮದೊಳ್ ಉದಯಿಸಿದ ಮೇಲೆ ಆ ಧರ್ಮಕ್ಕನುಸಾರವಾದ ಆಚರಣೆಗಳನ್ನು ಅನುಸರಿಸುವದು ಯಥಾಯೋಗ್ಯವಾದದ್ದು. ಮಗುವೇ ಸರ್ವ ಜಗತ್ತಿಗೆ ಒಬ್ಬನೇ ದೇವರಿದ್ದಾನೆ ! ಆತನು ಅನಂತರೂಪಿಯಾದದ್ದರಿಂದ ಆ ಅನಂತ ರೂಪಗಳಿಗೆ ಅನಂತ ಹೆಸರುಗಳನ್ನಿಟ್ಟು ಉಪಾಸನೆಯನ್ನು ಮಾಡುತ್ತ ಬಂದದ್ದರಿಂದ ಅನೇಕ ಮತಗಳ ಉತ್ಪತ್ತಿಯಾಯಿತು. ಈ ಸರ್ವ ಮತದವರೂ ಸರ್ವ ರೀತಿಯಿಂದ ಅರ್ಚಿಸಿದರೂ ಆ ಸರ್ವೇಶ್ವರನನ್ನೆ ಹೊರತು ಅನ್ಯರನ್ನು ಮಾತ್ರವಲ್ಲ. ಸರ್ವೇಶನ ಅನಂತ ರೂಪೋಪಾಸಕ ಮತಂಗಳಲ್ಲೊಂದಾದ ಬ್ರಾಹ್ಮಣ ಮತದಲ್ಲಿ ನೀನು ಉದಯಿಸಿದ ಮೇಲೆ ಅದರ ಆಚರಣೆಯಂತೆಯೇ ನೀನು ನಡೆದರೆ ಆ ಅನಂತ ರೂಪಿಯಾದ ಶಿವನನ್ನೇ ಪೂಜಿಸಿದಂತಾಗುವುದಿಲ್ಲವೇ? ಹೀಗೆ ಸರ್ವವೂ ಶಿವನನ್ನೇ ಆಶ್ರಯಿಸಿರುವದರಿಂದ ಶೈಶವಾವಸ್ಥೆಯಲ್ಲಿದ್ದ ನೀನು ಅರಿಯದೆ ಹೀಗೆ ಛಲ ಹಿಡಿಯುವದು ಸರಿಯಲ್ಲ. ಇಂತು ಛಲವಿಡಿದರೆ ಮಾತಾ-ಪಿತರ ಆಜ್ಞೋಲ್ಲಂಘನ ದೋಷಕ್ಕೂ ಧರ್ಮಾಂತರವಂ ಮಾಡಿದ ಮಹಾ ಪಾತಕಕ್ಕೂ ಗುರಿಯಾಗುವೆ. ಆದ್ದರಿಂದ ಮಗುವೇ ಈ ಕಾರ್ಯಕ್ಕೆ ಅನುಕೂಲನಾಗು.

ಬಸವೇಶ:

ಪದ

ಜನಕನೇಕೇಳ್ಕೈ ತನಯನಾಡುವ ನುಡಿಯ ॥ ಪಲ್ಲ ॥
ತಾತನೆ ಪೂರ್ವದೊಳ್ । ಗೌತಮಯತಿಕುಲ ।
ಖ್ಯಾತರಪರಿತಿಳಿಯೈ ॥ ೧ ॥
ಜಲವೆನುತಲಿಮೃಗ । ಜಲವನು ಪಿಡಿವರೆ ।
ಮಲಹರನನು ಭಜಿಸೈ ॥ ೨ ॥

ಜನಕರ್ನೇ, ಸರ್ವ ದೇವತೆಗಳೂ ಸರ್ವೇಶನ ಅವತಾರಗಳೆಂದು ಹೇಳಿದಿರಿ. ಆದರೆ ಸರ್ವ ಅವತಾರಗಳಿಗೂ ಕರ್ತನಾದ ಆ ಪರಶಿವನ ಅನುಯಾಯಿಯಾಗುವದು ವಿಹಿತವಲ್ಲವೇ? ಜಲ ವೆಂಬ ಭ್ರಾಂತಿಯಿಂದ ಮೃಗಜಲವನ್ನು ಬೆನ್ನಟ್ಟಿದಂತೆ ನಿಮ್ಮ ಸ್ಥಿತಿಯಾಗಿರುವದು. ತಾತಾ, ಪೂರ್ವದೋಳ್ ದಧೀಚಿ, ಗೌತಮ ಮೊದಲಾದ ಯತಿಕುಲತಿಲಕರು ಈಗ ನೀನು ಹೇಳುವ ದ್ವಿಜಚಿಹ್ನಧಾರಿಗಳಾಗಿದ್ದು ತದನಂತರ ಪವಿತ್ರವಾದ ಶಿವಚಿನ್ಹವನ್ನು ಧರಿಸಿಕೊಳ್ಳಲಿಲ್ಲವೇ? ಅಂಥಾ ಮಹಾಮಹಿ ಮರೇ ಇಂತೆಸಗಿದ ಮೇಲೆ ಶಿವಲಾಂಛನಧಾರಿಯಾದ ನಾನು ಅನ್ಯ ದೈವತೋಪಾಸಕ ಚಿನ್ಹಮಂ ಧರಿಸಿಕೊಳ್ಳುವುದು ಸರಿಯಲ್ಲ. ಮತ್ತು ಧರ್ಮಾಂತರಮಂ ಮಾಡುವದು ಮಹಾ ಪಾತಕವೆಂದು ಹೇಳಿದಿರಿ ! ಆದರೆ ಶಿವಧರ್ಮಿಯಾದ ನನ್ನನ್ನು ಅನ್ಯ ಧರ್ಮದಲ್ಲಿ ದಬ್ಬಿ ಪಾಪದಲ್ಲಿ ನೂಕಲಿಕ್ಕೆ ಹವಣಿಸುವದನ್ನು ನೋಡಿದರೆ ನನಗೆ ನಗೆ ಬರುತ್ತದೆ. ಆದ್ದರಿಂದ ತಾತಾ, ಶಿವದೀಕ್ಷಾಸಂಪನ್ನನಾದ ನಾನು ಈ ಮೌಂಜಿಯಂ ಧರಿಸಿಕೊಳ್ಳುವುದಿಲ್ಲ ಪುನರ್ಜನ್ಮವನ್ನುಂಟು ಮಾಡದೇ ಇರುವ ಶಿವಭಕ್ತಿಯೆಂಬ ದೇವಗಂಗೆಯನ್ನುಳಿದು, ಪುನಃ ಭವಕ್ಕೆ ತರುವ ಇತರ ದೇವತೆಗಳ ಮತವೆಂಬ ಮೃಗಜಲವನ್ನು ಪಾನ ಮಾಡಲಿಕ್ಕೆ ಅಪೇಕ್ಷಿಸುವೆನೇ? ಶ್ರೇಷ್ಠವಾದ ರುದ್ರಾಕ್ಷಿಯಂ ಧರಿಸುವ ಈ ಕಂಠದಲ್ಲಿ ಮೌಂಜಿಯಂ ಧರಿಸುವೆನೇ? ಶಿವಭಕ್ತರಿಗೆ ನಮಿಸುವ ಈ ಮಸ್ತಕದಿಂದ ಅನ್ಯರಿಗೆ ನಮಸ್ಕರಿಸುವೆನೇ? ಸಕಲ ಮಂತ್ರಕ್ಕೂ ಶ್ರೇಷ್ಠವಾದ ಪಂಚಾಕ್ಷರಿ ಮಂತ್ರಮಂ ಜಪಿಸುವ ಈ ವಾಕ್ಕಿನಿಂದ ಇತರ ಮಂತ್ರವನ್ನು ಜಪಿಸುವೆನೇ? ತಾತಾ, ಕುಲದಿಂದ ಬಹಿಷ್ಕೃತರಾದವರನ್ನು ಪರಿಶುದ್ಧಂಗೈಯ್ವಂತೆ ನನ್ನನ್ನು ಶುದ್ಧೀಕರಿಸಲಿಕ್ಕೆ ಹವಣಿಸುವಿರಲ್ಲ? ಆದರೆ ನಾನು ಅಶುದ್ಧನಲ್ಲ; ಜನ್ಮಾರಂಭದಿಂದಲೂ ಶುದ್ಧನೇ ಇರುತ್ತೇನೆ.

ಮಾದಲಾಂಬಿಕೆ: **ಪದ**

ಸರಿಯಿದಲ್ಲವೈ । ತರುಳ ನಿನ್ನ ಈ ।
ಪರಿಯಯೋಚನೆ । ಗ್ರಹಿಸು ಮನದಲಿ ॥ ೧ ॥
ಜನನಿಜನಕರ । ಮನಕೆತೋಷವ ।
ತನುಜನೀವುದೇ । ಘನವದೇನಿಪ್ಪುದೈ ॥ ೨ ॥

ಸುಕುಮಾರಾ, "ಪ್ರೀಣಾತಿಯಃ ಸುಚರಿತ್ರೈಃ ಪಿತರಂಸಪುತ್ರಃ" ಅಂದರೆ ಯಾವಾತನು ತನ್ನ ಒಳ್ಳೇ ನಡತೆಯಿಂದ ಮಾತಾ ಪಿತರನ್ನು

ಸಂತೋಷಪಡಿಸುವನೋ ಅವನೇ ಸುಪುತ್ರನು. ತದ್ವಿಪರೀತನಾದವನು ಕುಲಘಾತಕನೆನಿಸುವನು. ಅದರಿಂದ ಮಗೂ, ನಿನ್ನ ಹಡೆದವರ ಅಭಿಪ್ರಾಯವನ್ನು ಅಲ್ಲಗಳೆಯಬೇಡ. ಆಜ್ಞೋಲ್ಲಂಘನದಿಂದ ಕುಲಘಾತಕನೆನಿಸಿಕೊಳ್ಳಬೇಡ. ನಾವೀರ್ವರೂ ಈಗ ನಿನ್ನ ಉಪನಯನ ಕಾರ್ಯವನ್ನೂ, ಆ ಮೇಲೆ ವಿವಾಹ ಕಾರ್ಯವನ್ನೂ ಮಾಡಿ ದಂಪತಿಗಳೀರ್ವರು ಸುಖಬಡುವದನ್ನು ನೋಡಿ ಅನಂದಬಡಬೇಕೆಂಬ ನಮ್ಮ ಮನಸಿನ ಆಶೆಯನ್ನು ಪೂರ್ಣ ಮಾಡು.

ಬಸವೇಶ: ಮಾತೇ, ಹಾಗಾದರೆ ನಾನು ನಡೆಯುವ ನಡತೆಯ ತಿಲಾಂಶವೂ ನಿಮ್ಮ ಮನಸ್ಸಿಗೆ ಒಡಂಬಡಿಕೆ ಇಲ್ಲವೋ? ಇದೆಂಥ ಮೂಢತನ? ಮೃಡನ ಧ್ಯಾನಾನಂದದಲ್ಲಿರುವ ನನ್ನ ಈ ನಡತೆಯು ಜಡದೇಹಿಗಳಾದ ಮೂಢರ ಹಿಂಡಿನೊಳಗಿರುವ ನಿಮಗೆ ಹ್ಯಾಗೆ ಸರಿದೋರೀತು? ಸಾಕು, ವೃಥಾಲಾಪಗಳನ್ನು ನಿಲ್ಲಿಸಬೇಕೆಂದು ಬೇಡುವೆನು.

ಮಾದರಸ: ಮಗೂ, ನಾನೆಷ್ಟು ಬೋಧಿಸಿದರೂ ಅದು ನಿನಗೆ ಇಷ್ಟವಿಲ್ಲ ದಾಯಿತೇ? ಹಿರಿಯರ ಪದ್ಧತಿಗೆ ವಿರುದ್ಧಾಭಿಪ್ರಾಯವು ಸರಿಯಾದದ್ದಲ್ಲ. ಯಾಕಂದರೆ, ವರ್ಣಾಶ್ರಮೋಚಿತವಾದ ವೈದಿಕ ಶಿವಭಕ್ತಿಯಿಂದ ಶಿವಕೃಪೆಯಂ ಪಡೆಯಬಹುದು. ಹೀಗಿದ್ದು ಉಪನಯನವನ್ನು ತಿರಸ್ಕರಿಸುವದು ವಿಹಿತವಲ್ಲ. ಚೆನ್ನಾಗಿ ತಿಳಿದು ನೋಡು.

ಬಸವೇಶ: ಜನಕನೇ, ನೀನು ಹೇಳುವದು ವಯಸ್ಸಿನಿಂದ ಹಿರಿಯ ರಾದವರ ಪದ್ಧತಿಯೇ ಹೊರತು ಜ್ಞಾನದಿಂದ ಹಿರಿಯರಾದವರ ಪದ್ಧತಿಯಲ್ಲ. ಹಿರಿಯರೆಂದರೆ ಪರಮ ಶಿವಭಕ್ತಿಸಂಪನ್ನರಾಗಿ ಶಿವಜ್ಞಾನದಿಂದ ಕೂಡಿರುವ ಶಿವಶರಣರೇ ಹಿರಿಯರು. ಪಿತನೇ, ವರ್ಣಾಶ್ರಮ ಧರ್ಮದಿಂದ ಶಿವಕೃಪೆಯಂ ಪಡೆಯಬಹುದೆಂದು ಹೇಳಿದಿರಿ ! ಆದರೆ ನನಗೆ ಶಿವಪಂಚಾಚಾರ ವರ್ಣವಿರಲು ಅನ್ಯ ವರ್ಣವೇತಕ್ಕೆ ಬೇಕು? ಶಿವಪಾದದ ಆಶ್ರಯವೆಂಬ ಆಶ್ರಮವು ನನಗಿರಲು ಅನ್ಯ ಆಶ್ರಮಗಳೇತಕ್ಕೆ ಬೇಕು? ತಾತ, ಪಾಪನಾಶಕ್ಕೆ ಭಸ್ಮಾವಲೇಪವಿರಲು ಸಾಗರ ಸ್ನಾನಗಳೇತಕ್ಕೆ ಬೇಕು? ಶಿವಲಿಂಗವೆಂಬ ಯಜ್ಞೋಪವೀತವಿರಲು ಅನ್ಯ ಯಜ್ಞೋಪವೀತಗಳೇತಕ್ಕೆ ಬೇಕು? ಶ್ರೇಷ್ಠವಾದ ಮೋಕ್ಷಪ್ರಾಪ್ತಿಗೆ ಈ ಶಿವಚಿನ್ಹಗಳೇ ಕಾರಣವಲ್ಲವೇ? ಜನಕನೇ ವೀರಶೈವರಲ್ಲಿ ಗುರುವಿನ ಮಾರ್ಗವೇ ಬೇರೆ; ದೀಕ್ಷಾಕ್ರಮವೇ ಬೇರೆ; ನಿತ್ಯಾಚಾರ ಕ್ರಮವೇ ಬೇರೆ; ಮತ್ತು ದೇಹದಲ್ಲಿ ಧರಿಸುವ ಲಾಂಛನಗಳೂ ಬೇರೆ; ಇದಲ್ಲದೆ

ಶಿವಪೂಜೆಯನ್ನು ಮಾಡುವ ರೀತಿಯೂ, ಜಪಿಸುವ ಮಂತ್ರವೂ, ಪೂಜಿಸುವ ದೈವವೂ ಬೇರೆ ಬೇರೆಯಾಗಿರುವವು. ಹೀಗಿದ್ದ ಮೇಲೆ ನಿಮ್ಮ ತಿಳುವಳಿಕೆಯೂ ನನ್ನ ತಿಳುವಳಿಕೆಯೂ ಎರಡೂ ಹ್ಯಾಗೆ ಒಂದಾಗುವವು? ಶಿವನೊಬ್ಬನಲ್ಲೇ ವಿಶ್ವಾಸವುಳ್ಳ ಶಿವಶರಣರ ಆಚರಣೆಯು ಪತಿವ್ರತಾಶಿರೋಮಣಿಯಾದ ಸತಿಯಳ ನಡತೆಗೆ ಸಮಾನವಾದದ್ದು ಕಂಡೆಯಾ.

ಮಾದಲಾಂಬಿಕೆ: ಬಸವೇಶ, ಇದೇನು? ಉಪದೇಶಕ್ಕೆ ಆರಂಭಿಸಿದೆಯಲ್ಲ ! ನಾವೆಷ್ಟು ರೀತಿಯಿಂದ ಹೇಳಿದರೂ ಪ್ರತಿಕೂಲವೇ ಹೊರತು ಅನುಕೂಲವಿಲ್ಲ. ನಿನ್ನಂಥ ದುರ್ಮಾರ್ಗಿಯನ್ನು ಹಡೆಯುವ ದಕ್ಕಿಂತ ಬಂಜೆಯಾಗಿರುವದೇ ವಿಹಿತವಾಗಿತ್ತು. ಆದರೆ ಪರಮಾತ್ಮನು ನಮ್ಮನ್ನು ಗೋಳಾಡಿಸಬೇಕೆಂದೇ ಈ ರೀತಿ ಮಾಡಿರುವನೆಂದು ಭಾವಿಸಬೇಕಾಗಿದೆ.

ಬಸವೇಶ: **ಪದ**

ಪಿತ–ಮಾತೆಯರೇ ಇಂತಾಡುವರೇ ॥
ಮತಿಯುತರಾದರೆ । ಹಿತದಲಿ ಗಿರಿಜಾ
ಪತಿಯಪಾದಾಬ್ಜವ ಧ್ಯಾನಿಪುದೈ ॥ ೧ ॥
ವರತಾತನು ತಾ । ಪರಶಿವನೆನಗೆ ।
ವರಮಾತೆಯು ತಾ ಗರಿಜಾತೆಯು ॥ ಪಿತ ॥ ೨ ॥

ಜನನೀ ಜನಕರೇ, ನನ್ನ ಅಭಿಪ್ರಾಯಕ್ಕೆ ಉಪದೇಶವೆಂದು ಹೆಸರಿಟ್ಟಿರೋ! ಇಕೋ, ನನ್ನ ಆ ಉಪದೇಶದಿಂದಲೇ ನಿಮ್ಮೀರ್ವರ ಮನದ ಮಾಲಿನ್ಯವೆಲ್ಲ ಹರಿದು ಹೋಗುವಂತೆ ವಿವರಿಸುತ್ತೇನೆ. ಚಿತ್ತವಿಟ್ಟು ಆಲಿಸಬೇಕು. ಜನಕನೇ, ಶಿವಪ್ರಸಾದವಂ ಪಡೆದ ಶುಕಮುನಿಯೂ ಚಂಡೇಶ್ವರರೂ ಸಹ ಉಪನಯನವನ್ನು ಮಾಡಿಸಿಕೊಂಡಿದ್ದರೋ? ಉಪನಯನ ಸಂಸ್ಕಾರ ಹೊಂದಿದವರು ಮಹಿಮ ಶಕ್ತಿಯ ವಿಷಯದಲ್ಲಿ ಶುಕ, ಚಂಡೇಶ್ವರರಿಗೆ ಸಾಟಿಯಾಗುವರೇ? ಇದನ್ನು ನಿನ್ನ ಮನಸ್ಸಿನಲ್ಲಿಯೇ ತಿಳಿದು ನೋಡು. ವ್ಯರ್ಥವಾದ ಅಭಿಮಾನಕ್ಕೆ ಬೀಳಬೇಡ. ಜನಕನೆ, ನೀನು ಬುದ್ಧಿಶಾಲಿಯಾದ ಪಕ್ಷದಲ್ಲಿ ಹಲವು ಪರಿಯಾಗಿ ಹಂಬಲಿಸದೆ ಪಾರ್ವತೀ ಪತಿಯ ಪಾದಾರವಿಂದವಂ ನಂಬಿ ಪೂಜಿಸುತ್ತಿದ್ದರೆ ನಿನ್ನ ಇಷ್ಟಾರ್ಥವು ಸಿದ್ಧಿಸುವದು. ಬಹುಕೋಟಿ ಜನ್ಮಂಗಳಿಂದ ಸಂಪಾದಿಸಿದ ಪುಣ್ಯರಾಶಿಯು ಫಲಿಸಿದವರಿಗೆ ಮಾತ್ರ ಈ ಶಿವಭಕ್ತಿಯೆಂಬ ಚಿಂತಾಮಣಿಯು ದೊರಕೊಳ್ಳುವದೇ ಹೊರತು

ಪರರಿಗೆ ದೊರೆಯಲರಿಯದು. ತಮ್ಮ ಜನನ ಮರಣಗಳನ್ನು ಕಳೆದುಕೊಳ್ಳದ ದೇವತೆಗಳು ಇತರರಿಗೆ ಪರಶಿವನಂತೆ ಉರುತರ ಮುಕ್ತಿಯನ್ನು ಕೊಡಲಿಕ್ಕೆ ಸಮರ್ಥರಾದಾರೆ? ಸವಳು ನೆಲದೊಳಗಿರ್ಪ ಬಾವಿಯ ಜಲವು ಗಂಗಾಜಲದಂತೆ ನೀರಡಿಕೆಯನ್ನು ಅಡಗಿಸುವದೇ? ಇಲ್ಲ. ನನಗಾದರೊ ಆ ಪರಶಿವನೇ ತಂದೆಯು; ಪಾರ್ವತಿಯೇ ತಾಯಿಯು; ಶಿವಾನುಭವಿಗಳೇ ನೆಂಟರು; ಶಿವಲಾಂಛನಧಾರಿಗಳೇ ನನ್ನಿಂದ ಸೇವೆಯನ್ನು ಮಾಡಿಸಿಕೊಳ್ಳುವ ಸ್ವಾಮಿಗಳು; ಶಿವಪಾದಸೇವೆಯೇ ಎನಗೆ ಸೊತ್ತು; ಆ ಪರಶಿವಭಕ್ತಿಯೇ ಮುಕ್ತಿ ಸಂಪತ್ತು ಆಗಿರುವವು. ಜನಕನೇ, ನನಗೆ ತಿಳಿದಷ್ಟನ್ನು ಅರಿಕೆ ಮಾಡಿಕೊಂಡಿರುವೆನು. ಇನ್ನು ಮೇಲೆ ತಮ್ಮ ಮನಸದಿಚ್ಛೆ.

ಮಾದರಸ: ಪ್ರಿಯೆ, ಈ ಸುತನು ಶಿವಾಂಶಸಂಭೂತನು; ಈ ಕಡುಮಹಿಮ ನಾಡಿದ ನುಡಿಗಳೇ ನಮಗೆ ಫಲಕಾರಿಯಾದ ಉಪದೇಶ ಗಳಾಗಿರುವವು. ಉಮಾಧವನ ಭಕ್ತನಾದ ಈ ಕುಮಾರನಿಂದ ಪಾಮರರಾದ ನಾವು ಪುನೀತರಾದೆವು. ಈತನ ಜ್ಞಾನಾಮೃತ ಭುಂಜನದಿಂದ ಜನನ ಮರಣ ರಹಿತರಾದೆವು. ಪ್ರಾಣಪ್ರಿಯೆ, ನಮ್ಮ ಪೂರ್ವರ ಪುಣ್ಯವಿಶೇಷದಿಂದ ಈತನು ನಮಗೆ ಮಗನೆನಿ ಸಿಕೊಂಡನು. ಇಷ್ಟೇ ಸಾಕು. ಈತನು ಜನಿಸಿದ್ದರಿಂದ ಧರಾ ವನಿತೆಯು ಪರಿಶುದ್ಧಳಾದಳು. ನಮ್ಮ ಮತವು ಪ್ರಕಾಶಮಾನ ವಾಯಿತು. ನಮ್ಮ ಪಿತೃ ಪಿತಾಮಹಾದಿಗಳಿಗೆಲ್ಲ ಪರಮ ಸಂತೋಷವಾಯಿತು. ಇಂದಿಗೆ ನಾವೇ ಧನ್ಯರು.

ಮಾದಲಾಂಬಿಕೆ: ಪ್ರಿಯನೆ, ಕುಮಾರನು ಉಮಾಧವನ ಪರಿಪೂರ್ಣ ಭಕ್ತನಾದುದರಿಂದ ಅಗಣಿತ ಮಹಿಮಾಯುಕ್ತನಾಗಿರುವನು. "ಕೊಳಕು ಶಿಂಪಿನಲ್ಲಿ ಹುಟ್ಟಿದ ಮುತ್ತಿಗೆ ಕೊರತೆಯುಂಟೇ !" ಎಂಬಂತೆ ಅಜ್ಞಾನಿಗಳಾದ ನಮ್ಮ ಉದರದಲ್ಲಿ ಉದ್ಭವಿಸಿದ ಈ ಕುಮಾರನು ಸುಜ್ಞಾನಿಯಾಗಿರುವನು. ಇಂಥ ಸುಕುಮಾರ ನನ್ನು ಹಡೆದ ನಾವು ಇಂದಿಗೆ ಧನ್ಯರಾದೆವು.

ಬಸವೇಶ: **ಪದ(ಮನ್ನಿಸು ಯನ್ನನು)**

ಧನ್ಯನು ಇಂದಿಗೆ ನಾ ಜಗದಿ ॥
ಮಾನ್ಯರೆ ನೀವತಿತೋಷಿತರಾಗಲ್॥
ಘನಮಹಿಮನ ಪದ । ದರುಶನಕೀಗ ।
ಅನುನಯದಲಿ ಪೋಪೆ ॥ ೧ ॥

ಜನನೀ-ಜನಕರೇ ನನ್ನ ಮನಸ್ಸಿನ ನಿಜತ್ವವು ಇಂದಿಗೆ ನಿಮಗೆ ಮನವರಿಕೆಯಾಯಿತೇ? ನಿಮ್ಮ ಅಜ್ಞಾನಾಂಧಕಾರಕ್ಕೆ ಇಂದಿಗೆ ಇಂದುವಿನ ಉದಯವಾದಂತಾಯಿತೇ? ನಿಮ್ಮ ಮನಸ್ಸೆಂಬ ನೈದಿಲೆಯು ಇಂದಿಗೆ ವಿಕಾಸವಮಾನವಾಯಿತೇ? ಧನ್ಯನು. ಮಾತಾ-ಪಿತರ ಮನಾನಂದಗೊಳಿಸಿದ ನಾನೇ ಇಂದಿಗೆ ಧನ್ಯನು. ಮಾತಾ-ಪಿತರೆ, ಗಂಗಾರಮಣನೂ ಉತ್ತುಂಗಶೈಲ ಶೃಂಗವಾಸಿಯೂ ಮಂಗಲ ಮೂರ್ತಿಯೂ ಆದ ಸಂಗಮನಾಥನ ದರ್ಶನಕ್ಕೆ ಕಪ್ಪಡಿಗೆ ತೆರಳುವೆನು. ತಮ್ಮ ಅನುಜ್ಞೆಯು ದೊರೆದರೆ ಈ ತರುಳನು ಪ್ರಯಾಣ ಮಾಡಲಿಕ್ಕೆ ಸಿದ್ಧನಾಗಿರುವನು.

ಮಾದರಸ: ವತ್ಸ, ಅಗಣಿತ ಮಹಿಮನೂ, ಸಚ್ಚಿದಾನಂದನೂ ಆದ ಆ ಸಂಗಮನಾಥನ ದರ್ಶನಕ್ಕೆ ಗಮನ ಮಾಡಿ ಆತನಂ ಮೆಚ್ಚಿಸಿ ಸುಖಿಯಾಗಿ ಬಾಳು.

ಮಾದಲಾಂಬಿಕೆ: ಸುಕುಮಾರ, ನಿನಗೆ ಎಲ್ಲೆಲ್ಲಿಯೂ ಮಂಗಲವಾಗಲಿ. ಸಂತೋಷ ದಿಂದ ಪ್ರಯಾಣ ಮಾಡು. (ಬಸವೇಶನು ಹೋಗುವನು.)

ಮಾದರಸ: ದೈವಜ್ಞಶಿಖಾಮಣಿಗಳೇ, ಉಪನಯನ ಕಾರ್ಯಕ್ಕೆ ಸುಕುಮಾರನು ಸಮ್ಮತಿಸದೆ ಸಂಗಮನಾಥನ ದರ್ಶನಕ್ಕೆ ತೆರಳಿದನು. ಕಾರಣ ತಾವು ತಮ್ಮ ಆಶ್ರಯಸ್ಥಾನಗಳಿಗೆ ತೆರಳಬಹುದು.

ಜೋಯಿಸ: ಮಾದರಸ, ಕೇವಲ ಭೋಜನಾಪೇಕ್ಷೆಯಿಂದ ಬಂದ ಈ ಗುಂಡ್ಲುಪೇಟೆಯ ಜೋಯಿಸರ ಮನೋಭೀಷ್ಟವು ಪೂರ್ತಿ ಯಾಗಲಿಲ್ಲ. ಕಲ್ಪನಾಭೋಜನದಲ್ಲಿಯೇ ಇವರು ತೆರಳಬೇಕಾ ಯಿತಲ್ಲ.

ಮಾದರಸ: ಅದಕ್ಕೆ ಯಾರ ಉಪಾಯವೂ ಇಲ್ಲ. ಆಕಸ್ಮಿಕವಾಗಿ ಲಭಿಸಿದ ಈ ಪ್ರಸಂಗದಿಂದ ಯಾರ ಮೇಲೆಯೂ ದೋಷಾರೋಪಣೆ ಮಾಡುವಂತಿಲ್ಲವಷ್ಟೆ.

ಜೋಯಿಸ: ಹಾಗಾದರೆ ಅಪ್ಪಣೆಯನ್ನು ದಯಪಾಲಿಸಿರಿ. (ಹೋಗುವರು.)

ಮಾದರಸ: ಪ್ರಿಯೆ, ನಿತ್ಯ ಕರ್ಮಾಚರಣೆಗೆ ತೆರಳೋಣ ನಡೆ (ಹೋಗುವರು.)

(ಸಂಗಮನಾಥನ ದೇವಾಲಯ)

(ಬಸವೇಶನೋರ್ವನೇ ಪ್ರವೇಶಿಸಿ)

ಪದ

ಸೋಮಶೇಖರ । ಪಾಹಿ । ಸೋಮಶೇಖರ ॥
ಕಾಮದಹನನಾದ ನಿನ್ನ । ಪ್ರೇಮದಿಂದೆ ಭಜಿಪೆನು ಶ್ರೀ ॥ ೧ ॥
ಪಾಲನುಣಿಸಬಂದ ಬಾಲೆಯ । ನೀಲಕಂಠ ದಯದಿ ಕಾಯ್ದೆ ॥ ೨ ॥

ಆಹಾ, ಅಜ್ಞಾನಾಂಧಕಾರದಲ್ಲಿ ಮುಳುಗಿದ ಮಾತಾಪಿತರ ಮನಸಿನ ದುಗುಡವನ್ನಡಗಿಸಿ, ಅವರ ಅನುಜ್ಞೆಯಂ ಪಡೆದು, ಸಂಗಮನಾಥನ ದೇವಾಲಯವು, ಅದೋ ಗೋಪುರವು ದರ್ಶನಂಗೊಡುವದು. ದೇವಾ ಸಂಗಮನಾಥ, ನನಗೆ ಶೈಶವಾವಸ್ಥೆಯಲ್ಲಿ ಒಮ್ಮೆ ದರ್ಶನವಿತ್ತು ಅಂದಿನಿಂದ ಇಂದಿನವರೆಗೂ ದರ್ಶನಂಗೊಡದೆ ಈ ಪಾಮರನನ್ನು ಆ ಪಾಪಿಗಳ ಸ್ವಾಧೀನ ಮಾಡಿ ಬಿಟ್ಟಿದ್ದೆಯಲ್ಲ ! ಆದರೆ ನಿನ್ನ ಕರುಣಾಕಟಾಕ್ಷದ ನೆಳಲಿನಲ್ಲಿದ್ದ ನನಗೆ ಯಾವ ಅಭ್ಯಂತರವೂ ಒದಗದೆ ಈಗ ನಾನು ತಾಯಿಯಂ ಹುಡುಕುವ ಎಳೆಗರುವಿ ನಂತೆ ನಿನ್ನಂ ಧ್ಯಾನಿಸುತ್ತ ಇಲ್ಲಿಗೆ ಬಂದೆನು. ಭಕ್ತವತ್ಸಲಾ, ನನಗೋಸುಗವೇ ಸಂಪದ್ಯುಕ್ತವಾದ ಸ್ವರ್ಗಲೋಕವಂ ಬಿಟ್ಟು ನೀನು ಈ ಭೂಲೋಕದಲ್ಲಿ ವಾಸಿಸಬೇಕಾಯಿತಲ್ಲವೇ? ಅಂತೆ ನಿನಗೆ ಭಕ್ತವತ್ಸಲನೆಂಬ ಬಿರುದು ಬಂದಿದೆ. ಸಚ್ಚಿದಾನಂದ ಈ ಕುವರನಾದ ನನ್ನಲ್ಲಿ ಘನತರವಾದ ದಯವನ್ನು ತೋರು, ತೋರು.

(ಸಂಗಮೇಶ್ವರನು ಪ್ರತ್ಯಕ್ಷನಾಗಿ)

ಸಂಗಮೇಶ್ವರ: ಬಸವೇಶಾ, ನೀನು ನಿನ್ನ ಮಾತಾಪಿತರ ಅಜ್ಞಾನವೆಂಬ ಕತ್ತಲೆಯನ್ನು ಸುಬೋಧಚಂದ್ರಿಕಾ ಪ್ರಸಾರದಿಂದ ದೂರೀಕರಿಸಿದ್ದನ್ನು ಜ್ಞಾನದೃಷ್ಟಿಯಿಂದ ತಿಳಿದು ನಿನ್ನ ಮಾರ್ಗವನ್ನು ಪ್ರತೀಕ್ಷಿಸುತ್ತಿದ್ದೆನು. ಒಳ್ಳೇದು, ಮಗೂ, ನಿನ್ನ ಮನದಿಷ್ಟಾರ್ಥವೇನು?

ಬಸವೇಶ:

ಪದ

ಮೊರೆಯೆನ್ನ ಸಂಗಮನಾಥ । ಕರುಣಾಬ್ಧಿ
ಕಾಯಲೊದಾತಾ ॥ ಇರಲೆನ್ನಪಾಲಕನೀನು ।
ಪೆರತೇನನಾ ಯಾಚಿಪೆನು । ಹರನಿನ್ನ ಪದಭಕುತಿಯನು ।
ಸ್ಥಿರವಾಗಿ ಕರುಣಿಪುದಿನ್ನು ॥ ೧ ॥

ಶಂಭೋ, ಸೃಷ್ಟಿ-ಸ್ಥಿತಿ-ಲಯಾದಿಗಳಿಗೆ ಕರ್ತನಾದ ನೀನೇ ನನ್ನ

ಪಾಲಕನಾಗಿರಲು, ನಾನು ಬೇಡತಕ್ಕ ಎರಡನೇ ವರವಾದರೂ ಯಾವದು? ದೇವ, ನಾನು ಬೇಡುವ ವರವೆಂದರೆ, ನಿನ್ನ ಪಾದಭಕ್ತಿಯೊಂದೇ. ಆ ಭಕ್ತಿಯ ಆಚರಣೆಯನ್ನೇ ಬೋಧಿಸಬೇಕೆಂದು ಬೇಡುವೆನು.

ಸಂಗಮೇಶ್ವರ: ಬಸವೇಶಾ, ನನ್ನ ಪಾದಭಕ್ತಿಯು ವಿಷ್ಣು ಬ್ರಹ್ಮೇಂದ್ರಾದಿ ದೇವತೆಗಳಿಗೂ ದುರ್ಲಭವು. ಸಕಲ ಪದಾರ್ಥಗಳಿಗೂ ಇದು ತವರಮನೆಯಾಗಿರುವದು. ಮೋಕ್ಷವೆಂಬ ಉಪ್ಪರಿಗೆಗೆ ಭಕ್ತಿಯು ಸೋಪಾನ ಪ್ರಾಯವಾಗಿರುವದು. ಮತ್ತು ಶಿವಕಥಾ ಶ್ರವಣ, ಸ್ತುತಿ, ಸ್ಮರಣೆ, ಪಾದಸೇವೆ, ನಮಸ್ಕಾರ, ಅರ್ಚನೆ, ವಿಶ್ವಾಸ, ಸೇವೆ, ಪ್ರಾಣಸಮರ್ಪಣ ಇಂತು ಶಿವಭಕ್ತಿಯು ನವವಿಧವಾಗಿರುವದು. ಯಾವದೊಂದು ವಸ್ತುವಿನಲ್ಲಿ ಸದಾ ಎಡೆಬಿಡದೆ ನಿಂತಿರುವ ಮೇಲಾದ ಯಾವ ಪ್ರೀತಿಯುಂಟೋ ಅಂಥಾ ಪ್ರೀತಿಯೇ ನನ್ನ ಪಾದಕಮಲದಲ್ಲಿ ಸ್ಥಿರವಾಗಿದ್ದರೆ ಅದು ಭಕ್ತಿಯೆನಿಸುವದು. ಈ ಜಗತ್ತಿನಲ್ಲಿ ನನ್ನ ಪಾದಭಕ್ತಿ ಸಂಪನ್ನನಾದವನಿಗೆ ಸುಡುವ ಅಗ್ನಿಯು ಶೀತಲವಾಗುವದು; ಮೃತ್ಯುವು ದಾಸಿಯಾಗುವದು; ವಿಷವು ಅಮೃತವಾಗುವದು; ವಿಧಿಲಿಖಿತವು ಜಲಲಿಪಿಯಂತಾಗುವದು; ಮನ್ಮಥನು ತೃಣ ಚೂರ್ಣನಾಗುವನು; ಅಣಿಮಾದಿ ಸಂಪತ್ತುಗಳು ಅಣು ಮಾತ್ರವಾಗುವವು. ಬಸವೇಶಾ, ಅನ್ಯ ದೂಷಣೆಯನ್ನೂ, ಪರವಸ್ತು ಪರಸ್ತ್ರೀಯರಲ್ಲಿ ಅಪೇಕ್ಷೆಯನ್ನೂ ತ್ಯಜಿಸಿ ಯಾವಾಗಲೂ ಅನ್ಯ ದೇವತೆಯನ್ನು ಆರಾಧಿಸದೆ, ಆಶೆಯನ್ನಳಿದು, ಗುರುವಿಗೆ ದೇಹವನ್ನೂ, ಲಿಂಗಕ್ಕೆ ಮನಸ್ಸನ್ನೂ, ಜಂಗಮಕ್ಕೆ ಧನವನ್ನೂ ಅರ್ಪಿಸಿ ಮೆರೆಯುವವನೇ ಭಕ್ತಶ್ರೇಷ್ಠನು. ಮಗುವೇ, ಜಂಗಮನು ತಾನಾಗಿ ಬಂದರೆ ಅವನೊಳ್ ಕುಲ–ರೂಪ–ಗುಣ, ಪ್ರೀತಿ, ವಿದ್ಯಾ, ಸತ್ಯತೆ ಇವೆಲ್ಲವುಗಳನ್ನು ನೋಡದೆ, ಸಾಕ್ಷಾತ್ ಪರಶಿವನೇ ಆತನೆಂದು ನಂಬಿ ಆತನಿಗೆ ತೃಪ್ತಿಪಡಿಸಿ, ಆತನ ಪ್ರಸಾದಸೇವನಂಗೈದು ಸೇವಿಸುವದೇ ಭಕ್ತಿಯ ಲಕ್ಷಣವು ಕಂಡ್ಯಾ.

ಬಸವೇಶ: ದೇವಾ, ನಿನ್ನ ಉಪದೇಶಾಮೃತದಿಂದ ನಿರ್ಜೀವನಾದ ನಾನು ಸಜೀವನಾದೆನು.

ಶ್ಲೋಕ

ಸಹಸ್ರಂ ವರ್ತಂತೇ ಜಗತಿವಿಬುಧಾಃ ಕ್ಷುದ್ರಫಲದಾಃ ।
ನಮಸ್ಯೇ ಸ್ವಪ್ನೇವಾ ತದನುಸರಣಂ ತತ್ಕೃತಫಲಂ ॥

ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ ।
ಚಿರಂಯಾಚೇಶಂಭೋ ಶಿವತವಪದಾಂಭೋಜಭಜನಂ ॥

ಶಂಕರಾ ಈ ಲೋಕದಲ್ಲಿ ತುಸು ತುಸು ಫಲಗಳನ್ನು ಕೊಡುವ ಸಹಸ್ರಾವಧಿ ದೇವತೆಗಳಿದ್ದರೂ ಅವರನ್ನು ಸ್ವಪ್ನದಲ್ಲಿಯೂ ಕೂಡ ಸ್ಮರಿಸುವದಿಲ್ಲ. ಮತ್ತು ಅವರು ಕೊಡುವ ಫಲಗಳಿಗೆ ಆಶೆಯನ್ನೂ ಮಾಡುವದಿಲ್ಲ. ಶಂಕರಾ, ಅತಿ ಸಮೀಪದಲ್ಲಿರುವ ಹರಿಬ್ರಹ್ಮಾದಿಗಳಿಗೂ ದೊರಕಿಸಲಿಕ್ಕೆ ಅತಿ ಕಠಿಣವಾದ ನಿನ್ನ ಪಾದಭಜನೆಯು ನನಗೆ ಸದಾ ಸ್ಥಿರವಾಗಿರಲಿ. ಸಚ್ಚಿದಾನಂದ ಅಷ್ಟಾವರಣಗಳ ಮಹಿಮೆಯನ್ನರಿಯಲು ಆತುರನಾಗಿರುವೆನು. ದಯಮಾಡಬೇಕೆಂದು ಪ್ರಾರ್ಥಿಸುವೆನು.

ಸಂಗಮೇಶ್ವರ:

ಪದ

ಏನನಾಡುವೆ । ಮಗುವೆ ॥ ನೀನು ತಿಳಿಯದಿರುವುದೇನು ।
ಸೂನು ಲಾಲಿಸು ಪೇಳ್ವೆನಿನ್ನು ॥ ಪಲ್ಲ ॥
ಗುರುವು ಶಿಷ್ಯನಲ್ಲಿ ನೆಲಸಿ ।
ಇರುವ ತಮವನಳಿಯುತಾಗ ।
ಸಾರಮೋಕ್ಷಪದಕೆಮಾರ್ಗವ ।
ತೋರುವಂಥ ಚಾರುಚರಿತ ॥ ೧ ॥
ಗುರುವೆ ಮೋಕ್ಷದಾಯಕನು ।
ಗುರುವೆ ಭವದಬಾಧೆಯನ್ನು ।
ದೂರಮಾಳ್ಪನೆಂದು ನೀನು ।
ಅರಿಯೊ ನಿನ್ನಮನದಲಿನ್ನು ॥ ೨ ॥

ಮಗುವೇ, ನಾನೇ ನೀನಾಗಿದ್ದು ನಿನಗರಿಯದ್ದು ಒಂದಾದರೂ ಇರುವದೇ? ನೀನು ಸರ್ವವನ್ನು ಅರಿತವನಾದರೂ ಈ ಅಷ್ಟಾವರಣಗಳ ಮಹತ್ವವು ಸರ್ವರಿಗೂ ತಿಳಿಯಬೇಕೆಂಬ ಉದ್ದೇಶದಿಂದ ಅರಿಯದವನಂತೆ ನನ್ನ ಬಾಯಿಂದ ಹೊರಡಿಸಲು ಯತ್ನ ಮಾಡಿರುವೆ. ಒಳ್ಳೇದು ಮಗುವೇ, ಅಷ್ಟಾವರಣಗಳೆಂದರೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ, ಮಂತ್ರ ಹೀಗೆ ಎಂಟಾಗಿರುವವು. ಗುರುವೆಂದರೆ ಶಿಷ್ಯನಲ್ಲಿರುವ ಅಜ್ಞಾನಾಂಧಕಾರವನ್ನು ದೂರ ಮಾಡಿ ಸುಜ್ಞಾನವೆಂಬ ಚಂದ್ರಿಕೆಯನ್ನು ಪಸರಿಸಿ ಮೋಕ್ಷಮಾರ್ಗಕ್ಕೆ ಸೋಪಾನಪ್ರಾಯವಾಗಿರುವ ಮಂತ್ರದೀಕ್ಷೆ ಯನ್ನು ಕೊಟ್ಟು ಕಾಪಾಡುವ

ಪರಮಾತ್ಮನೇ ಗುರುವೆನಿಸುವನು. ಅಂತೇ "ಗುರುಬ್ರಹ್ಮಾ ಗುರುರ್ವಿಷ್ಣೂ ಗುರುರ್ದೇವೋ ಮಹೇಶ್ವರಃ । ಗುರುಃಸಾಕ್ಷಾತ್ ಪರಬ್ರಹ್ಮಾ" ಎಂಬ ವೇದವಾಕ್ಯ ವಾದರೂ ಗುರುವಿನ ಮಹತ್ವವನ್ನೇ ದೃಢೀಕರಿಸುವುದು. ಆ ಕಾರಣ ಗುರುವೇ ಮೋಕ್ಷದಾಯಕನು; ಗುರುವೇ ಪರಬ್ರಹ್ಮನು; ಇಂಥ ಗುರುವನ್ನಾಶ್ರಯಿಸಿದ ಶಿಷ್ಯನಿಗೆ ಭವಬಾಧೆಯು ಎಂದೂ ಸೋಂಕಲರಿಯದು. ವೇಷಧಾರಿಗಳಾಗಿ ಕಾರ್ಯಸಾಧನೆಗೋಸುಗ ತಿರುಗುವವರನ್ನು ಗುರುಗಳೆಂದು ಹೇಗೆ ಕರೆಯಬೇಕು? ಆ ಕಾರಣ ಸದ್ಗುರುವಿನ ಸಮಾನ ಅನ್ಯ ವಸ್ತುಪಿಲ್ಲೆಂದು ತಿಳಿದುಕೋ.

ಬಸವೇಶ: **ಪದ**

ದೇವಸರಿಗಾಣೆ ನಿಂದಿಗೆ । ಸದ್ಗುರುವಿನ ॥
ಆ ಡಂಬರದಿ । ಅಂಡಲೆವ । ಭಂಡರಿಗೆ ।
ಮಂಡೆಬಾಗಿಸಲಾಗದಯ್ಯೊ ॥ ೧ ॥
ಭೋ । ಶಶಿಧರ ।ದೋಷದೂರ ।
ಗುರುಸಮ । ನಾರ ಕಾಣೆ ಕಾಣೆ ಲೋಕದಿ ॥ ೨ ॥

ದೇವ, ಸದ್ಗುರುವಿನ ಸಮಾನರುಂಟೆ? ಮಳೆಯ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ ಆಡಂಬರದಿಂದ ಅಂಡಲೆಯುವ ಜ್ಞಾನವಿಹೀನರಿಗೆ ಗುರುಗಳೆಂದು ಭಾವಿಸಿ ಅವರನ್ನು ಸೇವಿಸುವ ಮೂಢರಿಗೆ ಮೋಕ್ಷವು ದೊರೆಯುವದೊತ್ತಟ್ಟಿಗುಳಿದು ಮೋಕ್ಷದ ಹೆಸರು ಕೂಡ ತಿಳಿಯಲಾರದು. ದೇವಾ, ಇಂಥ ನಿರ್ಗಂಧ ಕುಸುಮದಂತಿರುವ ಗುರುಗಳ ಸಾನಿಧ್ಯವು ನನಗೆ ದೊರಕದೆ ಸುಜ್ಞಾನಿ ಗುರುವಾದ ನಿನ್ನ ಸಾನಿಧ್ಯವೇ ಸತತ ದೊರಕುವಂತೆ ಕೃಪೆ ಮಾಡು. ಶಂಭೋ, ಇನ್ನು ಲಿಂಗಮಹಾತ್ಮ್ಯವನ್ನು ಹೇಳಬೇಕೆಂದು ಬೇಡುವೆನು.

ಸಂಗಮೇಶ್ವರ: ಬಸವೇಶ, ಲಿಂಗಮಹಾತ್ಮ್ಯವನ್ನು ಚಿತ್ತಗೊಟ್ಟು ಕೇಳು. ಗುರುನಾಥನು ಕರುಣಾರಸಪೂರಿತನಾಗಿ ಕೊಟ್ಟ ಲಿಂಗವನ್ನು ಶರೀರಕ್ಕೆ ಸಂಬಂಧ ಮಾಡಿಕೊಂಡು ಗುರುವು ಹೇಳಿದಂತೆ ಆ ಲಿಂಗವು ತನ್ನ ಪ್ರಾಣಸ್ವರೂಪವೆಂದು ತಿಳಿದು ಅದನ್ನು ಎಂದೂ ತನ್ನ ದೇಹದಿಂದ ಬೇರ್ಪಡಿಸಲಾಗದು. ಹೀಗೆ ಲಿಂಗಧಾರಿಯಾದವನೇ, ಮೋಕ್ಷಕ್ಕೆ ಅಧಿಕಾರಿಯಾದ ಮಂಗಲಾತ್ಮಕನೆನಿಸುವನು. ಗುರು ಕೃಪೆಯಿಂದ ಶರೀರಕ್ಕೆ ಲಿಂಗಧಾರಣವಾದ ಕೂಡಲೆ ಶರೀರವು ಲಿಂಗಕ್ಕೆ ಅರ್ಪಿಸಲ್ಪಟ್ಟಂತಾಯಿತು.

ಯಾವನ ಮನಸ್ಸು ಲಿಂಗಸ್ವರೂಪದಲ್ಲಿ ತಲ್ಲೀನವಾಗಿ, ದೇಹದ ಮರವೆಯಾಗಿ, ಆತ್ಮ ಜ್ಞಾನವು ಉದಯವಾದರೆ ಅವನು ಶಿವಾನಂದ ಸಮುದ್ರದಲ್ಲಿ ವಿಹರಿಸುವನು. ಮಗುವೇ, ಲಿಂಗವು ಪ್ರಾಣಸ್ವರೂಪವು. ಅದನ್ನು ದೇಹದಿಂದ ಎಂದೂ ಬೇರ್ಪಡಿಸಲಾಗದು. ಪ್ರಾಣ ಹೋದರೆ ಮಣ್ಣಿನ ಕಾಯ ಹೇಗೆ ಉಳಿಯುವದೋ ಹಾಗೆ ಪ್ರಾಣಸ್ವರೂಪವಾದ ಲಿಂಗವನ್ನಗಲಿದವನಿಗೆ ಜೀವ ಹೋದಂತೆಯೇ ಸರಿ. ಪತಿಯು ಪರಲೋಕಕ್ಕೆ ತೆರಳಲು ಸತಿಯ ಮಾಂಗಲ್ಯವು ಹೇಗೆ ಹೋಗುವದೋ ಹಾಗೆ ಲಿಂಗವನ್ನು ಧರಿಸದೆ ಮನೆಯಲ್ಲಿ ಗೂಟಕ್ಕೆ ಕಟ್ಟಿ ಅಡ್ಡಾಡುವ ಮೂಢರು ಗಂಡ ಸತ್ತವರಂತೆ ಅಮಂಗಲವಾಗಿ ಕಾಣುವರು. ತಾನು ಕಟ್ಟದಿದ್ದರೂ ಕಟ್ಟಿದವರ ಕೊರಳನ್ನಾದರೂ ನೋಡಬೇಕು. ಹೀಗಿದ್ದು ಗುರುಕೊಟ್ಟ ಪರಮ ಪವಿತ್ರವಾದ ಲಿಂಗವನ್ನು ಮೂಲೆಯಲ್ಲಿ ಚಲ್ಲಿ ಬಲ್ಲಂತೆ ನಡೆಯುವ ಮಹಾ ಮೂರ್ಖರಿಗೆ ಮೋಕ್ಷವು ಎಂದಿಗೆ ದೊರಕಬೇಕು? ಇಂಥ ಮೋಕ್ಷದಾಯಕವಾದ ಲಿಂಗಪೂಜೆಯನ್ನು ದಿನಕ್ಕೆ ಎರಡಾವರ್ತಿ ಮಾಡಿದವರಿಗೆ ಇಚ್ಛಿತ ಫಲವು ದೊರೆಯುವುದು.

ಬಸವೇಶ : **ಪದ**

ಲಿಂಗವೇ ತಾ ಪರಬ್ರಹ್ಮ । ಪ್ರಾಣ ॥
ಅಂಗವ ತಾ ಬಹು ಪಾವನಗೈಯುವ ॥ ಪಲ್ಲ ॥
ಲಿಂಗಾಂಗಿಗಳ । ಅಂಗಳದಲ್ಲಿಯೆ ।
ತುಂಗುವಿಕ್ರಮನು ಯಮ ತಾ ಸುಳಿಯನು ॥ ೧ ॥
ಈ ಮಾಲಿಂಗವ । ನೇಮದೆ ಧರಿಸದ ।
ಪಾಮರರಿಗೆ ಸ್ಥಿರಮೋಕ್ಷ ದೊರೆಯದು ॥ ೨ ॥

ದೇವಾ, ಮಂಗಲಸ್ವರೂಪವಾದ ಪ್ರಾಣಲಿಂಗವೇ ಪರಬ್ರಹ್ಮ. ಆ ಪ್ರಾಣಲಿಂಗವು ಅಂಗದಲ್ಲಿದ್ದದ್ದಾದರೆ ಆ ಮಾನವನ ಸಕಲ ಅವಯುವಗಳೂ ಆತನ ಜನ್ಮವೂ ಪವಿತ್ರವಾಗುವವು. ಇಂಥ ಲಿಂಗಧಾರಿಗಳ ಅಂಗಳವೇ ಕೈಲಾಸವು. ಲಿಂಗಧಾರಿಗಳ ಅಂಗಳದಲ್ಲಿ ಸುಳಿಯಲಿಕ್ಕೆ ಯುಮನಿಗೂ ಕೂಡ ಅಸಾಧ್ಯವಾ ಗಿರುವದು. ಲಿಂಗಧಾರಿಗಳ ಸತ್ವವನ್ನರಿಯುವದು ವಿಷ್ಣು, ಬ್ರಹ್ಮೇಂದ್ರಾದಿಗಳಿಂದಲೂ ಆಗದು. ಇಂಥ ಪ್ರಾಣಲಿಂಗವನ್ನು ಜನಿಸಿದಾಗಲೇ ಗುರುಮಹಾರಾಜನು ಕೊಟ್ಟಿರಲು ಮದಾಂಧತೆ ಯಿಂದ ಬಿಟ್ಟು ತಿರುಗುವ ಮೂಢರಿಗೆ

ಏನೆನ್ನಬೇಕೋ ತಿಳಿಯದು. ಶಂಕರಾ. ಇನ್ನು ಇಷ್ಟಲಿಂಗವನ್ನು ಶರೀರದಲ್ಲಿ ಧರಿಸುವ ನಾನಾಸ್ಥಾನಗಳ ವಿವರವನ್ನು ಹೇಳಿ ನನ್ನನ್ನು ಕಾಪಾಡು.

ಸಂಗಮೇಶ್ವರ: ಬಸವೇಶಾ, ಇಂಥ ಗುರುದತ್ತ ಪರಮ ಪವಿತ್ರವಾದ ಲಿಂಗವನ್ನು ಶಿರದಲ್ಲಿಯಾಗಲಿ, ಮೊಳಕೈಯಲ್ಲಾಗಲಿ, ಕೊರಳಿನಲ್ಲಿಯಾಗಲಿ, ಭುಜಗಳು ಎದೆ ಈ ಸ್ಥಾನಗಳಲ್ಲಿಯಾಗಲಿ ಧರಿಸಬೇಕು. ಪ್ರಾಣಲಿಂಗವನ್ನು ನಾಭಿಯ ಕೆಳಗೆ ಎಂದೂ ಧರಿಸಬಾರದು. ಧರಿಸಿದರೆ ಮಹಾ ಪಾತಕವು ಬರುವದು. ಮಗುವೇ, ಲಿಂಗಕ್ಕೆ ಮೈಲಿಗೆಯಿಲ್ಲ ಆ ಕಾರಣ ಸ್ನಾನಮಾಡುವಾಗ, ಭೋಜನ ಮಾಡುವಾಗ, ಮಲಮೂತ್ರ ವಿಸರ್ಜನೆ ಮಾಡುವಾಗ, ನಿದ್ರಿಸುವಾಗ, ಕಾಮಿನಿಯರಲ್ಲಿ ರಮಿಸುವಾಗ ಕೂಡ ಇಷ್ಟಲಿಂಗವನ್ನು ದೇಹದಿಂದ ಬೇರ್ಪಡಿಸಲಾಗದು.

ಬಸವೇಶ: ದೇವಾ, ಲಿಂಗದಿಂದಲೇ ಜಗತ್ತಿನ ಉದಯವಾಯಿತು. ಲಿಂಗದಿಂದ ಸರ್ವ ಕಲೆಗಳಾದವು. ಲಿಂಗವನ್ನು ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಪೂಜಿಸಿ ಇಚ್ಛಿತ ಫಲವನ್ನು ಪಡೆದರು. ಅಂತೇ ಸೇತು ಬಂಧನಕ್ಕೆ ಅಡ್ಡಿಯಾಗಬಾರದೆಂದು ಶ್ರೀರಾಮಚಂದ್ರನು ಮಳಲ ಲಿಂಗವನ್ನು ಪೂಜಿಸಿ ಸೇತುವನ್ನು ಕಟ್ಟಿ ಪ್ರಿಯ ಪತ್ನಿಯಾದ ಸೀತೆಯನ್ನು ತಂದನು. ಇಂಥಾ ಲಿಂಗದ ಮಹತ್ವವನ್ನರಿಯದೆ, ಲಿಂಗಧಾರಣ ಮಾಡದೆ ಸಂಚರಿಸುವ ಬುದ್ಧಿಗೇಡಿಗಳ ಹಿಂಡಿನಲ್ಲಿ ನಾನು ಸೇರಿ ಹೋಗದಂತೆ ವರವನ್ನು ಕರುಣಿಸು. ಶಂಕರ, ಇನ್ನು ಜಂಗಮ ಮಹಾತ್ಮ್ಯವನ್ನು ಹೇಳಬೇಕೆಂದು ಬೇಡುವೆನು.

ಸಂಗಮೇಶ್ವರ: ಬಸವೇಶಾ, ಶರೀರಕ್ಕೆ ಮುಖವು ಹ್ಯಾಗೆ ಮುಖ್ಯವೋ, ಹಾಗೆ ಲಿಂಗಕ್ಕೆ ಜಂಗಮ ಮೂರ್ತಿಯು ಮುಖದಂತಿರುವದು. ಜಂಗಮನು ಆದ್ಯಂತರಹಿತನು; ನಿತ್ಯಪರಿಪೂರ್ಣನು; ವಿಷ್ಣು ಬ್ರಹ್ಮೇಂದ್ರಾದಿಗಳಿಂದ ವಂದನೆಗೊಳ್ಳುವವನಾಗಿರುವನು. ಮಗೂ, ಜಂಗಮ ಮಹಾತ್ಮ್ಯವನ್ನು ಏನೆಂದು ಹೇಳಲಿ, ಜಂಗಮನು ಜನನ ಮರಣ ರಹಿತನು, ಜಂಗಮನೇ ಸ್ವರ್ಗ, ಮರ್ತ್ಯ, ಪಾತಾಳ ಸಕಲ ಭುವನತಲಕ್ಕೂ ಆಧಾರನು. ಸಚ್ಚಿದಾನಂದ ಸ್ವರೂಪನು. ಬಸವೇಶಾ, ಬಹಳ ಹೇಳುವದೇನು? ನನ್ನ ರೂಪವೆ ಆತನಾಗಿರುವನು. ಆ ಕಾರಣ ಜಂಗಮನನ್ನು ಕಂಡೊಡನೆ ಬಹು ಭಕ್ತಿಯಿಂದ ಸೇವೆಯಂ ಮಾಡಿ ಆತನ ಕೃಪೆಗೆ ಪಾತ್ರನಾದರೆ ಇಚ್ಛಿತ ಫಲಪ್ರಾಪ್ತಿಯು ನಿಶ್ಚಯವೆಂದೇ ತಿಳಿದುಕೋ.

ಬಸವೇಶ : ದೇವಾ, ಜಂಗಮಮೂರ್ತಿಯು ನಿನ್ನ ಸ್ವರೂಪವೇ ಆಗಿರುವದರಿಂದಲೇ ಜಂಗಮನು ಜಗದೀಶನೆಂಬ "ನುಡಿಯು ಪ್ರಮಾಣವಾಗಿರುವದು. ಇಂಥಾ ಜಂಗಮ ಮೂರ್ತಿಯನ್ನು ಕಂಡೊಡನೆ ಸದ್ಭಾವದಿಂದ ಆತನನ್ನು ಪೂಜಿಸಿ, ಆತನು ಬೇಡಿದ್ದನ್ನು ಆಲೋಚಿಸದೆ ಒದಗಿಸಿಕೊಡುವ ಬುದ್ಧಿಯನ್ನೂ ಸಾಮರ್ಥ್ಯವನ್ನೂ ನನಗೆ ಸರ್ವದಾ ಕೊಡು. ದೇವಾ ಇನ್ನು ಭಸ್ಮದ ಮಹತ್ವವನ್ನು ವಿವರಿಸಬೇಕೆಂದು ಬೇಡುವೆನು.

ಸಂಗಮೇಶ್ವರ: ಬಸವೇಶಾ, ಭಸ್ಮದ ಪ್ರಭಾವವನ್ನು ಏನೆಂದು ಹೇಳಲಿ. ರೋಗಪೀಡಿತನಾದವನ ರೋಗವು ಔಷಧದಿಂದ ದೂರಾಗು ವಂತೆ, ಭವರೋಗ ಪೀಡಿತನಾದವನ ಭವಬಾಧೆಯು ಈ ಭಸ್ಮವೆಂಬ ಔಷಧಲೇಪನದಿಂದ ದೂರಾಗುವುದು. ಮನಶ್ಶುದ್ಧಿಯಿಂದ ಸ್ನಾನ ಮಾಡಿ ಮಂತ್ರೋಕ್ತವಾಗಿ ವಿಭೂತಿಯನ್ನು ಧಾರಣ ಮಾಡಿಕೊಂಡು ಇಷ್ಟಲಿಂಗ ಪೂಜೆಯನ್ನು ಮಾಡಿದವನಿಗೆ ಭವಬಾಧೆಯು ಏನು ಮಾಡೀತು? ಭೂತ, ಪ್ರೇತ, ಪಿಶಾಚ, ರಾಕ್ಷಸ, ವೈರಿ, ಬೇನೆಗಳು, ದುಷ್ಟಮೃಗ, ಹಾವು, ಚೇಳು, ಸಿಡಿಲು, ಚೋರಾಗ್ನಿಗಳ ಭಯವು ಏನು ಮಾಡೀತು? ಭಸ್ಮಧಾರಿಯನ್ನು ಎಂದೂ ಸೋಂಕಲರಿಯವು. ಬಸವೇಶಾ, ಬಹಳವೇಕೆ? ಭಸ್ಮವು ಬೆರಳಿಗೆ ಸೋಂಕಿದರೆ ಸಾಕು, ಆ ಮನುಷ್ಯನಿಗೆ ಅನಿಷ್ಟಗಳು ಒದಗಲಾರವು. ತಾನು ವಿಭೂತಿಯನ್ನು ಧರಿಸದಿದ್ದರೂ ಧರಿಸಿದವರ ಹಣೆಯನ್ನಾದರೂ ನೋಡಬೇಕು. ವಿಭೂತಿಯನ್ನು ಧರಿಸದೆ, ಲಿಂಗವನ್ನರ್ಚಿಸದೆ ಅನ್ನವನ್ನು ತಿನ್ನುವ ಮಾನವನು ಪಶುಗಳಿಗೆ ಸಮಾನವೇ ಸರಿ. ವಿಭೂತಿಯಿಲ್ಲದವನ ಮುಖವನ್ನು ನೋಡಿದರೆ ರೌರವ ನರಕವು ಪ್ರಾಪ್ತಿಯಾಗುವದು ಕಂಡ್ಯಾ.

ಬಸವೇಶ:

ಪದ

ಪೇಳಲೇನನು । ಶಂಕರ । ಪೇಳಲೇನನು ॥
ಫಾಲನೇತ್ರ ಖೂಳರಪರಿ ॥ ಪಲ್ಲ ॥
ಮದದೆ ಕಲಹವಾಡಿ ಮನದೆ ।
ಮೋದ ಪೊಂದುತೆ । ಸದಯ ನಿನ್ನ
ನಮಿಸಲಾರರು ॥ ೧ ॥
ಕಾಮವಾಸನೆಯಿಂದಲನ್ಯ । ಕಾಮಿನಿಯರಲಿ ।
ಸೋಮಶೇಖರ ಸೇರಿ ಸುಖಿಪರು ॥ ೨ ॥

ದೇವಾ. ಅನ್ನವನ್ನುಣ್ಣೆಂದರೆ ಮಣ್ಣನ್ನೇ ತಿನ್ನುವೆನೆಂಬ ಮೂಢರಿಗೆ ಏನೆನ್ನಬೇಕು? ಮಣ್ಣಿನಲ್ಲಿಯಾದರೂ ಹೊರಳಾಡುವರು, ವಿಭೂತಿಯನ್ನು ಧರಿಸಲಾರರು. ಮದದಿಂದ ಪರರೊಡನೆ ಕಲಹವಾಡಿ ಕಡೆಗೆ ಮಲ್ಲಯುದ್ಧವನ್ನು ಮಾಡುವರೇ ಹೊರತು ಭಕ್ತಿಯಿಂದ ನಮಸ್ಕರಿಸಿ ನಿನ್ನನ್ನು ಅಪ್ಪಿಕೊಳ್ಳಲಾರರು. ಕಾಮವಾಸನೆಯಿಂದ ಅನ್ಯ ಕಾಮಿನಿಯರಲ್ಲಿ ಸೇರಿ, ಅವರ ಅಂಗಸಂಗದಿಂದ ತೃಪ್ತಿಪಡುವರೇ ಹೊರತು ಮುಕ್ತಿಯೆಂಬ ಅಂಗನೆಯ ಸಂಗಕ್ಕೆ ಮನವೆಳಸರು. ವಂದನೆಗೆ ಯೋಗ್ಯನಾದ ಜಂಗಮ ಮೂರ್ತಿಯನ್ನು ವಂದಿಸದೆ ನಿಂದೆ ಮಾಡಲಿಕ್ಕೆ ಆರಂಭಿಸುವರು. ಪರಮೇಶನಾದ ನಿನ್ನ ಪದ ಧ್ಯಾನಯುಕ್ತವಾದ ಪದಪದ್ಯಗಳನ್ನು ಹಾಡುವದನ್ನೂ ಕೇಳುವದನ್ನೂ ಬಿಟ್ಟು, ಸ್ತ್ರೀ ವರ್ಣನೆಯ ಪದಗಳನ್ನು ಹಾಡಿ ಕೇಳಿ ಸಂತೋಷಪಡುವರು. ಯೋಗ್ಯಾಯೋಗ್ಯ ವಿಚಾರ ಮಾಡದೆ ನೀಚರೂ, ದುಷ್ಟರೂ, ಕಾರ್ಯಸಾಧಕರೂ, ಡಾಂಭಿಕರೂ ಆದವರ ಮಾತುಗಳಿಂದ ಸಜ್ಜನರ ಮೇಲೆ ಕೆಟ್ಟ ಆಲೋಚನೆಯನ್ನು ಮಾಡುವರು. ಅನ್ಯಾಯವಾಗಿ ಪರರ ಮನಸ್ಸನ್ನು ನೋಯಿಸುವರು. ಇಂಥ ಮಹಾ ಮಹಾ ಮೂರ್ಖರಿಗೆ ನಿನ್ನ ಪಾದತಲವು ದೊರೆಯುವದೆಂತು? ಇಂಥ ನೀಚರ, ಭಸ್ಮವಿಹೀನರ ಸಹವಾಸವು ನನಗೆ ದೊರಕದಂತೆ ಕರುಣಿಸು. ಇನ್ನು ಪರಮ ಪವಿತ್ರವಾದ ಪಂಚಾಕ್ಷರೀ ಮಂತ್ರದ ಪ್ರಭಾವವನ್ನು, ಪಠಣ ವಿಧಿಯನ್ನೂ ಹೇಳಬೇಕೆಂದು ಬೇಡುವೆನು.

ಸಂಗಮೇಶ್ವರ: ಮಗುವೇ, ಅಂಥ ನೀಚರ ಸಹವಾಸವು ನಿನ್ನನ್ನು ಸೋಂಕ ಲರಿಯದು. ಸೋಂಕಿದರೂ ಕಮಲದ ಎಲೆಯಂತೆ, ಕುಂಬಾರ ಹುಳದಂತೆ, ಆತ್ಮಜ್ಞಾನಿಯಾದ ಸಂಸಾರಯೋಗಿಯಂತೆ ನೀನು ಶುದ್ಧನಾಗಿಯೇ ಉಳಿಯುವೆ. ಮಗುವೇ, ಮಂತ್ರವೆಂದರೆ ನನ್ನ ನಾಮವು. ಯಾವನೊಬ್ಬನನ್ನು ಹೆಸರುಗೊಂಡು ಕರೆದರೆ ಹೇಗೆ ಅವನು ನಮಗೆ ಎದುರಾಗಿ ಬಂದು ನಾವು ಹೇಳುವುದನ್ನು ಕೇಳುವನೋ ಅಂತೇ ಶಿವನ ಸನ್ನಿಧಿಯಲ್ಲಿ ಶಿವನಾಮವನ್ನು ತೆಗೆದುಕೊಂಡರೆ ಆಗ್ಗೆ ನಾನು ಅಭಿಮುಖಿನಾಗಿ ಬಂದು ನಿಮ್ಮ ಬೇಡಿಕೆಗಳನ್ನೆಲ್ಲ ಪೂರ್ಣ ಮಾಡುವೆನು. ಮಗುವೇ ನಾನು ಸರ್ವವ್ಯಾಪಿಯಾಗಿರುವದರಿಂದ ನನ್ನನ್ನು ಎಲ್ಲಿ ಕರೆದರೂ ಬಂದು ಇಷ್ಟಾರ್ಥಗಳನ್ನು ಪೂರ್ತಿ ಮಾಡುವೆನು. ಬಸವೇಶಾ, ಧ್ಯಾನವು ಮೌನದಿಂದ ಕೂಡಿದ್ದೂ ನಿಶ್ಚಲವಾದದ್ದೂ ಆಗಿರುವದು.

ಅಂತೇ ಶಿವಪಂಚಾಕ್ಷರಿ ಮಂತ್ರವನ್ನು ಮೌನದಿಂದ ಧ್ಯಾನಿಸಬೇಕು. ಧ್ಯಾನಾಸಕ್ತನಲ್ಲಿ ಇಂದ್ರಿಯ ಚಾಂಚಲ್ಯವಿರಬಾರದು. ಇದನ್ನೆಲ್ಲ ತ್ಯಜಿಸಿ ತಾಳವನ್ನು ಕಟೆಯುತ್ತ ಅಂಗಚೇಷ್ಟೆಗಳನ್ನು ಮಾಡುತ್ತ ಕಂಡಕಂಡಂತೆ ಬಹಿರಂಗವಾಗಿ ಮಂತ್ರವನ್ನು ಕೂಗುವದು ಧ್ಯಾನವೆನಿಸಬಹುದೇ? ಇದು ಕೇವಲ ಮೂರ್ಖತನದ ಆಡಂಬರವು ಅಂಥಾ ಕೂಗಾಟದಿಂದ ಕಂಠಶೋಷಣ ಮಾತ್ರವಾಗಿ ಯಾವ ಪ್ರಯೋಜನವೂ ಆಗಲಾರದು.

ಬಸವೇಶ: ದೇವಾ, ಯಾವ ವಸ್ತುವನ್ನೇ ಆಗಲಿ, ಗುಪ್ತವಾಗಿಟ್ಟರೆ ಅದಕ್ಕೆ ಮಹತ್ವವು ಬಂದೇ ಬರುವದು. ಹೀಗಿದ್ದು ಪರಶಿವನಾದ ನಿನ್ನನ್ನು ಸ್ಮರಿಸುವ ಪರಮ ಪವಿತ್ರವಾದ ಪಂಚಾಕ್ಷರೀ ಮಂತ್ರವನ್ನು ಬಹಿರಂಗಕ್ಕೆ ಸಾರುವದೇ? ಹಾವು, ಚೇಳುಗಳಂಥ ಕ್ಷುದ್ರ ಮಂತ್ರಗಳೇ ಬಹು ಗುಪ್ತವಾಗಿಯೂ, ವಿಧಾನಪೂರ್ವಕ ವಾಗಿಯೂ ಉಚ್ಚರಿಸಲ್ಪಡುತ್ತಿರಲು ಸರ್ವ ಮಂತ್ರಾಧಿದೇವತೆ ಯಾದ ಪಂಚಾಕ್ಷರಿಯನ್ನು ಬಹಿರಂಗಕ್ಕೆ ಕೂಗಿದರೆ ಮಂತ್ರದ ಮಹತ್ವವೇನುಳಿಯಿತು? ದೇವಾ, ಇಂಥ ಬಹಿರಂಗ ಮಂತ್ರವಾದಿಗಳ ಸಂಗವು ಮಾತ್ರ ನನಗೆ ದೊರೆಯದಂತೆ ಕರುಣಿಸು. ಇನ್ನು ರುದ್ರಾಕ್ಷಿ ಪಾದೋದಕ, ಪ್ರಸಾದಗಳ ಮಹತ್ವವನ್ನು ದಯಪಾಲಿಸು.

ಸಂಗಮೇಶ್ವರ: ಬಸವೇಶಾ, ಗುರು, ಲಿಂಗ, ಜಂಗಮ, ಭಸ್ಮ ಮಂತ್ರಗಳ ಮಹತ್ವವು ಎಂತಿರುವದೋ ಅಂತೇ ರುದ್ರಾಕ್ಷಿ, ಪಾದೋದಕ, ಪ್ರಸಾದಗಳ ಮಹತ್ವವೂ ಇರುವದು. ಇವುಗಳ ಮಹತ್ವನ್ನು ನೀನು ಅರಿಯದವನೋ ಹ್ಯಾಗೆ? ಈ ಅಷ್ಟಾವರಣಗಳನ್ನು ಕ್ರಮವರಿತು ಧರಿಸಿದವರಿಗೆ ಇಷ್ಟಾರ್ಥವು ಲಭಿಸುವದು.

ಬಸವೇಶ:

ಪದ

ಉಮಾಧವ ಪಾಹಿಮಾಂ ।ಅಮಿತಗುಣಾರ್ಣವ॥
ಕಮಲನಯನನುತ । ವಿಮಲಪದಾಂಬುಜ ।
ಕುಮತಿಯಾದೆನಗೆ । ಸುಮನಸವೀಯುತೆ ॥ ೧ ॥

ದೇವಾ, ಇಂಥ ಶ್ರೇಷ್ಠವಾದ ಅಷ್ಟಾವರಣಗಳ ಮಹತ್ವವನ್ನರಿ ಯದೆ, ಪ್ರತಿಯೊಂದು ಜಾತಿಯವರೂ ತಮ್ಮ ತಮ್ಮ ಜಾತಿಯ ನೇಮಗಳಂತೆ ನಡೆಯದೆ, ಸರ್ವೇಶನಾದ ನಿನ್ನನ್ನು ಸ್ಮರಿಸದೆ ಇರುವ ಮದಾಂಧರಿಗೆ ಯಾವ ಗತಿಯು ದೊರಕುವದೊ ನಾ ಕಾಣೆ. ಶಂಕರಾ, ಇಂಥ ನಿನ್ನ ಮಹತ್ವವನ್ನರಿಯದ ಅಧಮಾಧಮರಾದ ಚಂಚಲವೃತ್ತಿಯ ಮರುಳು

ವೇದಾಂತಿಗಳು ಮಾಡುವ ಕೃತಿಗಳನ್ನು ನೋಡಿದರೆ ನಗೆ ಬರುತ್ತದೆ. ಅವರು ಕೃತಿಯಿಂದ ಮಾಡಿ ತೋರಿಸದೆ ಬರೇ ಬಾಯಿಯಿಂದ ವೇದಾಂತ ಹೇಳುವವರೂ, ಕೈಲಾಗದವರೂ, ಚಂಚಲರೂ, ವಂಚಕರೂ, ದುರಾಚಾರಿಗಳೂ ಆಗಿರುತ್ತಾರೆ. ಇವರ ಮಾತುಗಳನ್ನು ನಂಬಲಾಗದು. ಇವರಲ್ಲಿ ಸ್ವನಿಷ್ಠೆ, ಸ್ವಕರ್ತವ್ಯನಿಷ್ಠೆ ಇವೆರಡೂ ಇರುವದಿಲ್ಲ. ಇದರ ಹುಳುಕನ್ನು ಮುಚ್ಚಿಕೊಳ್ಳುವದಕ್ಕಾಗಿ ಅವರು ಸಾಧುಗಳ ಸೋಗು ಹಾಕಿಕೊಂಡು ಇಲ್ಲದ ನೂರಾರು ಹಾಳು ವೇದಾಂತದ ಮಾತುಗಳನ್ನಾಡುತ್ತಾ ದುಡಿಯಲಾರದೆ ಹಚ್ಚಗಿದ್ದಲ್ಲಿ ಮೇದು ಬೆಚ್ಚಗಿದ್ದಲ್ಲಿ ಮಲಗುತ್ತ ವಿಧಿ ನಿಷೇಧಗಳಿಲ್ಲದೆ ಬಾಯಿಗೆ ಬಂದ ಹಾಗೆ ಮಾತಾಡುತ್ತ ಕ್ರಿಮಿಕೀಟಕಗಳಂತೆ ಕಾಲಹರಣ ಮಾಡುವರೆ ಹೊರತು ಯಾವ ಪುರುಷಾರ್ಥವನ್ನೂ ಸಾಧಿಸಲಾರರು. ಗುರುಹಿರಿಯರು ಆಪ್ತೇಷ್ಟರುಗಳು ಸೇರಿ ವಿಧಿಪೂರ್ವಕವಾಗಿ ಗಂಡನನ್ನು ಮಾಡಿರಲು, ಬಾಹ್ಯಾಡಂಬರಕ್ಕೆ ಮರುಳಾಗಿ ಪರಪುರುಷನಲ್ಲಿ ಸೇರಿ ಇಂದ್ರಿಯ ತೃಪ್ತಿಯ ಹೊಂದುವಂತೆ ತಮ್ಮ ಕುಲಗುರುಗಳಂ ಬಿಟ್ಟು ವಾಗಾಡಂಬರ ವಸ್ತ್ರಾಡಂಬರದಿಂದ ತಿರುಗುವವರನ್ನು ಗುರುಗಳೆಂದು ಭಾವಿಸುವರು. ದೇವಾ, ತಂದೆಯ ವೀರ್ಯಕ್ಕೆ ಹುಟ್ಟಿ ಅನ್ಯರ ಹೆಸರು ಹೇಳುವಂತೆ ಕುಲಗುರುವನ್ನು ತ್ಯಜಿಸಿ ಅನ್ಯ ಗುರುವನ್ನು ಸೇವಿಸುವದಾಗಿರುವದು. ದುರ್ವ್ಯಸನದಿಂದ ತನ್ನ ಗಂಡನನ್ನು ಬಿಟ್ಟು ಅನ್ಯನನ್ನು ಪುನರ್ವಿವಾಹದಿಂದ ವರಿಸುವಂತೆ ಈ ದುರಳ ವೇದಾಂತಿಗಳ ಸ್ಥಿತಿಯಾಗಿರುವದು. ಸಚ್ಚಿದಾನಂದ ಇಂಥ ನಿರ್ಗಂಧ ಕುಸುಮಗಳ ಸಹವಾಸವು ನನಗೆ ಎಂದೆಂದೂ ಕನಸುಮನಸಿನಲ್ಲಿ ಕೂಡ ದೊರೆಯದೆ ಸದಾ ನೀನೇ ನನಗೆ ಗುರುವಾಗುವವರನ್ನು ಕರುಣಿಸು. ಶಂಭೋ.

॥ **ಶ್ಲೋಕ** ॥

ಮನಸ್ತೇ ಪಾದಾಬ್ಜೇ ನಿವಸತುವಚಸ್ತೋತ್ರ ಫಣಿತೌ।
ಕರೌಚಾಭ್ಯರ್ಚಾಯಾಂ ಶೃತಿರಪಿಕಥಾಕರ್ಣನವಿಧೌ ॥
ತವಧ್ಯಾನೇಬುದ್ಧಿರ್ನಯನಯುಗಳಂ ಮೂರ್ತಿವಿಭವೇ ।
ಪರಗ್ರಂಥಾನ್‌ಕೈರ್ವಾ ಪರಮಶಿವಜಾನೇ ಪರಮತಃ ॥

ದೇವಾ, ನನ್ನ ಮನಸ್ಸು ನಿನ್ನ ಪಾದದಲ್ಲಿ, ಬಾಯಿಯು ನಿನ್ನನ್ನು ಸ್ತೋತ್ರ ಮಾಡುವದರಲ್ಲಿ, ನನ್ನ ಹಸ್ತಗಳು ನಿನ್ನನ್ನು ಅರ್ಚಿಸುವದರಲ್ಲಿ, ಕಿವಿಗಳು ನಿನ್ನ ಕಥೆಗಳನ್ನು ಕೇಳುವದರಲ್ಲಿ, ನನ್ನ ಬುದ್ಧಿಯು ನಿನ್ನ ಧ್ಯಾನ

ಮಾಡುವವರಲ್ಲಿ, ನೇತ್ರಗಳು ನಿನ್ನ ಮೂರ್ತಿಯ ಸೊಬಗನ್ನು ನೋಡುವವರಲ್ಲಿ ಹೀಗೆ ಸರ್ವ ಅವಯವಗಳೂ ನಿನ್ನ ಧ್ಯಾನ ಸಂಬಂಧದ ಕೃತ್ಯಗಳಲ್ಲಿ ತೊಡಗಿರುವಂತೆ ವರವನ್ನು ಕರುಣಿಸು. ಅಂದರೆ ಉಳಿದ ನಿಸ್ಸಾರ ಶಾಸ್ತ್ರಗಳ, ಆಡಂಬರಿಗಳಾದ ಗುರುಗಳ ಸಾನಿಧ್ಯವು ನನಗೆ ದೊರೆಯಲಾರದು. ಶಂಕರಾ ಸನ್ನುತನಾದ ನೀನು ಉನ್ನತ ಸ್ಥಳವನ್ನುಳಿದು ನನ್ನನ್ನು ಕಷ್ಟದಿಂದ ದೂರ ಮಾಡುವದಕ್ಕಾಗಿ ಸಂಗಮನಾಥನಾಗಿ ಅವತರಿಸಿದಿ ! ಅಷ್ಟಾವರಣಗಳ ಮಹಿಮೆಯನ್ನರುಹಿ ಧನ್ಯನನ್ನಾಗಿ ಮಾಡಿದಿ. ಶಂಭೋ, ನನ್ನ ಸಂರಕ್ಷಣೆಗಾಗಿ ನಿನಗಿಷ್ಟು ಕಷ್ಟವೇ? "ಪೊರೆವಂಗಿನಿತಿಲ್ಲವಿಶ್ರಮಂ" ಎಂಬಂತೆ ರಕ್ಷಕನಾದ ನಿನಗೆ ವಿಶ್ರಾಂತಿಯೆಲ್ಲಿರುವುದು? ದೇವಾ, ಮುಂದೆ ನಾನು ಮಾಡುವ ಕಾರ್ಯಕ್ಕೆ ನೀನು ಸದಾ ಅನುಕೂಲನಾಗಿರಬೇಕೆಂದು ಬೇಡುವೆನು.

ಸಂಗಮೇಶ್ವರ: ಬಸವೇಶಾ, ನೀನು ಈ ಮಾರ್ಗವನ್ನು ಹಿಡಿ. ಶಿವಮತವನ್ನು ಉದ್ಧಾರ ಮಾಡು. ವಿಘ್ನ ಮಾಡುವವರನ್ನು ನಾಶ ಮಾಡು. ಶ್ರೇಷ್ಠವಾದ ಶಿವಮಹಿಮೆಯನ್ನು ಭೂಮಿಯಲ್ಲಿ ಪಸರಿಸು. ಜಂಗಮ ಲಿಂಗವು ನಿನ್ನನ್ನು ಏನು ಕೇಳಿದಾಗ್ಯೂ ಅನುಮಾನಿಸದೆ ದೊರಕಿಸಿ ಕೊಡು. ನಿನ್ನನ್ನು ಹೊಡೆದು ಬಡಿದು ಬಾಧಿಸಿದರೂ ಆ ಜಂಗಮ ಪಾದವನ್ನು ಬಿಡಬೇಡ. ಇದೇ ನಿನಗೆ ಸನ್ಮಾರ್ಗವು. ವೀರಶೈವ ಮತೋದ್ಧಾರಕನಾದ ನೀನು ಪ್ರತಿದಿನವೂ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಗುರುಪಾದ ಸೇವೆಯನ್ನು ಮಾಡಿ ಅವರ ತೀರ್ಥ ಪ್ರಸಾದವನ್ನು ಪರಿಗ್ರಹಿಸಿ, ತಪ್ಪದೆ ಮಂತ್ರವನ್ನು ಜಪಿಸುತ್ತಿರು. ಇದೇ ನಿನಗೆ ಉಪದೇಶವು. ಮರೆಯಬೇಡ. ಮತ್ತೊಂದು ಮಾತೇನೆಂದರೆ ನಿನ್ನ ಸೋದರ ಮಾವನಾದಂಥ, ಬಿಜ್ಜಳ ಭೂಪಾಲನ ಮಂತ್ರಿಯಾದಂಥ ಬಲದೇವನಿಗೆ ಗಂಗಾಂಬಿಕೆ ಎಂಬೋರ್ವ ಪುತ್ರಿಯಿರುವಳು. ಅವಳನ್ನು ನಿನಗೆ ಕೊಟ್ಟು ವಿವಾಹವಂ ಮಾಡುವದಕ್ಕೆ ಬಲದೇವನು ಇಲ್ಲಿಗೆ ಬರುವನು. ಆತನ ಅಭಿಮತದಂತೆ ನೀನು ಹಿತದಿಂದ ಆತನ ಸುತೆಯನ್ನು ವಿವಾಹ ಮಾಡಿಕೋ. ಮುಂದೆ ನಿನಗೆ ಅನುಪಮವಾದ ಯಶಸ್ಸು ದೊರಕೊಳ್ಳುವುದು. ಇದೆಲ್ಲವಂ ಜ್ಞಾಪಕದಲ್ಲಿಟ್ಟುಕೋ ಮರೆಯಬೇಡ.

(ಸಂಗಮೇಶ್ವರನು ಅಂತರ್ಧಾನನಾಗುವನು.)

ಬಸವೇಶ: ಅಹಾ, ಅಂತಕಾಂತಕನು ಅಂತರ್ಧಾನನಾದನು. ಆದರೆ ಇಂದಿನ ದಿವಸವನ್ನು ಅಜ್ಞಾನಂಧಕಾರವಿದೂರನಾದ ಈತನ ಸನ್ನಿಧಿಯಲ್ಲಿಯೇ ಕಾಲ ಕಳೆಯುವೆನು.

ಪದ

ಶ್ರೀಶಸನ್ನುತಚರಣಾ । ಪೊರೆಯೆನ್ನಸತತ ।
ಒಸೆದು ನೀಂ ಕರುಣಾ ॥ ಪಲ್ಲ ॥
ಬಿಸಜಭವಾಂಡದೊಳ್ ।ಪಸರಿಸಿದೀಖಿಲ ।
ವಿಸರವನಳಿಯುವೆನ್ನೈ । ಪರವಸುನೀಡೈ ॥ ೧ ॥
ಸನ್ನುತಾಂಗನೆ ಬಿಡ । ದೆನ್ನ ರಕ್ಷಿಸಲೆಂದು ।
ಉನ್ನತಸ್ಥಾನವನೇ । ಚನ್ನನೆ ತೊರೆದಿ ॥ ೨ ॥

(ನೋಡಿ) ಅಹಾ, ಇದೇನು ! ಮಾವನಾದ ಬಲದೇವ ಮಂತ್ರಿಯು ಬರುತ್ತಿರುವನು (ಇಷ್ಟರಲ್ಲಿ ಬಲದೇವನು ಬರಲು) ಮಾವನವರೇ, ಬಾಲನಾದ ಬಸವನು ವಂದಿಸುವನು.

ಬಲದೇವ: ಬಸವೇಶ, ಸದಾಸುಖಿಯಾಗಿ ಬಾಳು. ಬಸವೇಶ, ನಿನ್ನ ಕುಶಲ ವಾರ್ತೆಯನ್ನು ಕೇಳಲು ಇಚ್ಛಿತನಾಗಿರುವೆನು.

ಬಸವೇಶ: ಮಹಾತ್ಮರ, ಗಂಗಾರಮಣನಾದ ಈ ಸಂಗಮನಾಥನ ಕೃಪೆಯಿಂದ ನಾನು ಕುಶಲನಾಗಿರುವೆನು. ಆದರೆ ತಮ್ಮ ಕ್ಷೇಮವನ್ನು ಕೇಳಲು ಆತುರ ಪಡುವೆನು.

ಬಲದೇವ: ಬಸವೇಶಾ, ಅಸಮಾಕ್ಷನ ದಯದಿಂದ ನಾನೂ ಕುಶಲನೇ.

ಬಸವೇಶ: ಮಹಾತ್ಮರೇ, ರಾಜ್ಯಕಾರ್ಯ ಧುರೀಣರಾದ ತಾವು ಆಗಮಿಸಿದ್ದು ಯಾಕೆ?

ಬಲದೇವ: ಬಸವೇಶ, ನನ್ನದೊಂದು ವಿಜ್ಞಾಪನೆಯುಂಟು. ಏನಂದರೆ–ನನ್ನ ಪ್ರಿಯ ಪುತ್ರಿಯಾದ ಗಂಗಾಂಬಿಕೆಯು ಪ್ರಾಪ್ತವಯಸ್ಕಳಾಗಿಯೂ ಗುಣಗಣವಿಭೂಷಿತೆಯಾಗಿಯೂ ಇರುವದರಿಂದ ಆಕೆಯನ್ನು ಶಿವಭಕ್ತಿಧುರಂಧರನಾದ ನಿನಗೆ ಕೊಟ್ಟು ವಿವಾಹಮಂ ಮಾಡಬೇಕೆಂಬ ಆಶೆಯುಳ್ಳವನಾಗಿ ಬಂದಿರುವೆನು. ಆದರೆ ಎನ್ನ ಮನೋಭಿಲಾಷೆಯನ್ನು ಪೂರ್ತಿ ಮಾಡುವ ಭಾರವು ನಿನ್ನನ್ನೇ ಕೂಡಿರುವದು.

ಬಸವೇಶ: ಮಹನೀಯರೇ, ಶಿವನಲ್ಲಿ ನಂಬಿಗೆಯುಳ್ಳವರಾಗಿ ಶಿವಭಕ್ತಿ ಯೆಂಬ ಗಂಗೆಯನ್ನು ಪಾನ ಮಾಡಿ ಶಿವಾನಂದವೆಂಬ ಸುಖವನ್ನು ಅನುಭವಿಸುವ ತಮ್ಮ ಮಾತಿಗೆ ಪ್ರತಿಯುಂಟೇ? ತಮ್ಮ ಅಭಿಲಾಷೆಯಂತೆ ನಡೆಯಲು ಸಿದ್ಧನಾಗಿರುವೆನು.

ಬಲದೇವ: ಬಸವೇಶಾ, ಇಂದಿಗೆ ನಾನು ಧನ್ಯನಾದೆ. ನನ್ನ ಕುಲವು ಪವಿತ್ರವಾಯಿತು. ನನ್ನ ಪುತ್ರಿಯು ಧನ್ಯಳಾದಳು. ನಿನ್ನ ಆಗಮನದಿಂದ ಕಲ್ಯಾಣಪಟ್ಟಣವನ್ನು ಪವಿತ್ರ ಮಾಡು ನಡೆ. (ಎಂದು ಹೋಗುವರು).

===

೩ನೇ ಅಂಕವು

(ಬೀದಿಯಲ್ಲಿ ಓರ್ವನು ಪ್ರವೇಶಿಸಿ)

ಅಹಾ ! ವಿಷಮ ಸಂಸಾರವೆಂದು ಜ್ಞಾನಿಗಳು ಹೇಳುವ ಮಾತು ಅಕ್ಷರಶಃ ನಿಜವಾದದ್ದೇ ಇರುವದು. ಪಾಪಮಯವಾದೀ ಪ್ರಪಂಚದಲ್ಲಿ ಸಮುತ್ವವೆಂಬದು ಇಲ್ಲವೇ ಇಲ್ಲ. ಸರ್ವಾನುಕೂಲದಿಂದ ಶೋಭಿಸುತ್ತಿದ್ದುದರಲ್ಲಿ ಏನಾದರೊಂದು ಅನಾನುಕೂಲ ಪ್ರಸಂಗವು ನಿಶ್ಚಯವಾಗಿ ಸಂಭವಿಸುವದೆಂಬುದು ಈ ಬಲದೇವ ಸಚಿವರ ಮರಣದಿಂದ ಅನುಭವಕ್ಕೆ ಬಂದಿತು. ಅಯ್ಯಾ! ಬಲದೇವ ಸಚಿವರೆ, ನಿನ್ನಂಥ ಪ್ರಜಾವತ್ಸಲನೂ, ಕಾರ್ಯದಕ್ಷನೂ ಇನ್ನೊಬ್ಬನುಂಟೇ? ನೀನು ದಿವಂಗತನಾದ್ದರಿಂದ ಬಿಜ್ಜಳ ಭೂಪಾಲನ ಬಹು ಶಕ್ತಿಯುಕ್ತವಾದ ಬಲಹಸ್ತವೇ ಮುರಿದು ಹೋದಂತಾಯಿತು. ಪ್ರಜೆಗಳ ಕ್ಷೇಮಚಿಂತನೆಯೇ ನಿನ್ನ ಆದ್ಯ ಕರ್ತವ್ಯವಾಗಿತ್ತು. ಇಂಥ ನೀನು ಮರಣ ಪಟ್ಟದ್ದರಿಂದ ಭೂಲಲನೆಯ ಮುಕುಟಮಣಿಯೊಂದು ಒಡೆದು ಹೋದಂತಾಯಿತು. ಉಪಾಯವಿಲ್ಲ. ನೀನೊಬ್ಬನಗಲಿಹೋಗಿ ಸಕಲರನ್ನೂ ದುಃಖಕ್ಕೀಡು ಮಾಡಿದಿ. ಇದು ನಿನಗೆ ನ್ಯಾಯವೇ? ಪಾಪ ! ನೀನೇನು ಮಾಡಿ; ಸೃಷ್ಟಿಕರ್ತನ ನೇಮವೇ ಇಂತಿದ್ದ ಮೇಲೆ ಅದಕ್ಕೆ ಯಾರ ಉಪಾಯವೂ ಇಲ್ಲ. ದೇವರು ಯಾವಾಗಲೂ ಸದ್ವಸ್ತುಗಳನ್ನೇ ಅಪೇಕ್ಷಿಸುವನು. ಅಂತೇ ನಿನ್ನನ್ನು ಅಪೇಕ್ಷಿಸಿ ಬರಮಾಡಿಕೊಂಡನು.

(ಇಷ್ಟರಲ್ಲಿ ಮತ್ತೊಬ್ಬನು ಬಂದು)

೨ನೆಯವನು: ಏನಯ್ಯಾ, ಈ ಕಡಿಗೆ ಹೊರಟು ಬಂದೆಯಲ್ಲ? ರಾಜ್ಯಸೂತ್ರ ಧಾರಿಯಾದ ಬಲದೇವ ಸಚಿವ ಶಿರೋಮಣಿಯ ಮರಣ ವಾರ್ತೆಯೇ ನಿನಗೆ ಗೊತ್ತಿಲ್ಲವೆಂಬಂತೆ ಕಾಣುತ್ತದೆ?

೧ನೇ: ಗೊತ್ತಿರದೇನು ! ಆತನ ಸ್ಮಶಾನಯಾತ್ರೆಯನ್ನು ಮುಗಿಸಿಕೊಂಡೇ ಈ ಕಡೆಗೆ ಬಂದೆನು.

೨ನೇ: ಓಹೋ ! ಮುಗಿದೇ ಹೋಯಿತೆ? ಉಪಾಯವಿಲ್ಲ. ಪಾಪಿಯಾದ

ನನಗೆ ಆತನ ಸ್ಮಶಾನಯಾತ್ರೆಗೆ ಕೂಡ ಒದಗುವ ಯೋಗವು ಇಲ್ಲದಾಯಿತೆ? ನನ್ನಂಥ ನಿರ್ಭಾಗ್ಯನು ಇನ್ನೊಬ್ಬನಿರಲಿಕ್ಕಿಲ್ಲವೆಂದರೆ ತಪ್ಪಾಗಲಾರದು.

೧ನೇ: ನೀನೊಬ್ಬನೇ ಏಕೆ? ಇಂಥ ಅಪೂರ್ವ ವಸ್ತುವನ್ನು ಕಳೆದುಕೊಂಡದ್ದರಿಂದ ಸರ್ವ ಪ್ರಜರೂ ನಿರ್ಭಾಗ್ಯರೇ !

೨ನೇ: ಅಹಾ ! ಏನು ಆತನ ಪ್ರಜಾವಾತ್ಸಲ್ಯ? ಏನು ಆತನ ಕಾರ್ಯದಕ್ಷತೆ? ಏನು ಆತನ ಸೌಜನ್ಯ? ಇಂಥ ಸದ್ಗುಣ ಪೂರಿತನಾದುದರಿಂದಲೇ ದೇವರು ಆಶೆಯಿಂದ ಆತನನ್ನು ಕರೆದುಕೊಂಡನು.

೧ನೇ: ಈ ಗುಣವು ದೇವರಲ್ಲಿಯೇ ಇರುವದಂತಲ್ಲ ! ಮಾನವರಾ ದಿಯಾಗಿ ಸಕಲ ಪ್ರಾಣಿಗಳಲ್ಲಿಯೂ ಈ ಗುಣವು ಹೆಚ್ಚು ಕಡಿಮೆ ಪ್ರಮಾಣದಿಂದ ಇದ್ದೇ ಇರುವದು. ಅದರಿಂದ ಸಕಲ ಲೋಕನಾಯಕನಾದ ಪರಮಾತ್ಮನು ತಾನು ಕೊಟ್ಟಿದ್ದನ್ನು ತಾನೇ ಕರಕೊಂಡನು. ಅಂದಮೇಲೆ ಅದಕ್ಕೆ ಯಾರೂ ಏನೂ ಮಾಡಲು ಶಕ್ತರಲ್ಲ.

೨ನೇ: ಅದೇನೋ ಸರಿ. ಆದರೆ ಬಿಜ್ಜಳ ಭೂಪಾಲನು ಮುಂದೆ ಮಂತ್ರಿತನಕ್ಕೆ ಏನು ಆಲೋಚನೆ ಮಾಡಿರುವನು?

೧ನೇ: ಯಾವ ಆಲೋಚನೆಯನ್ನು ಮಾಡಿರುವನೋ ನಾನರಿಯೆ. ಅಕಸ್ಮಾತ್ತಾಗಿ ಒದಗಿದ ಈ ಪ್ರಸಂಗದಿಂದ ಆತನಿಗೆ ಯಾವ ದಾರಿಯೂ ತೋರದೆ ತೀರ ಭ್ರಮಿಷ್ಟನಂತಾಗಿರುವನು.

೨ನೇ: ಹೌದು ! ಸಾಯುವವರ ಜತೆಯಲ್ಲಿ ಯಾರು ಸಾಯುವರು? ಏನಾದರೊಂದುಪಾಯದಿಂದ ಬಂದಿರುವ ಎಡರನ್ನು ದಾಟ ಬೇಕಲ್ಲದೆ ವ್ಯರ್ಥವಾಗಿ ದುಃಖಿಸುವದರಿಂದ ಯಾವ ಫಲವೂ ಇಲ್ಲ.

೧ನೇ: ಅದೇನೋ ಸರಿಯಾದ್ದೇ; ಆದರೆ ಪರಮಾತ್ಮನ ನೇಮವು ಎಂತಿರುವುದೋ ಕಂಡವರಾರು? ಇನ್ನುಮೇಲೆ ಈ ಮಂತ್ರಿ ಪದದ ಆಲೋಚನೆಗಾಗಿಯೇ ಮಹಾರಾಜನು ದರ್ಬಾರ ನೆರೆಯಿಸಬಹುದು. ಆಗ ಏನು ನಡೆಯುವದೋ ನೋಡಬೇಕು.

೨ನೇ: ಒಳ್ಳೇದು, ಯಾರ ಯಾರ ಯೋಚನೆಯು ಏನಿದೆಯಂಬುದೇನಾದರೂ ನಿಮಗೆ ತಿಳಿದಿದೆಯೇನು?

೧ನೇ: ನನಗೇನೂ ಗೊತ್ತಿಲ್ಲ. ಆದರೆ ತಮಗೆ ತಿಳಿದಿದ್ದರೆ ಹೇಳಬೇಕು.

೨ನೇ: ಮತ್ತೇನೂ ಇಲ್ಲ. ಬಲದೇವ ಸಚಿವನ ಸೋದರಳಿಯನಾದ ಬಸವೇಶನನ್ನು ಬಲ್ಲೆಯಷ್ಟೇ? ಆತನು ಸರ್ವ ವಿದ್ಯಾನಿಪುಣ ನಾಗಿಯೂ ಗುಣಗಣವಿಭೂಷಿತನಾಗಿಯೂ ಇರುವದರಿಂದ ಆತನನ್ನೇ ಸಚಿವತನಕ್ಕೆ ನೇಮಿಸಿಕೊಳ್ಳಬೇಕೆಂದು, ಬಲದೇವ ನಾಪ್ತರುಗಳು ಬಿಜ್ಜಳ ಭೂಪಾಲನ ಪರಮಾಪ್ತನಾದ ಮಂಚಣಾರ್ಯನ ಮುಖಾಂತರವಾಗಿ ರಾಜನಿಗೆ ಅರಿಕೆ ಮಾಡಿಕೊಳ್ಳುವರಂತೆ. ಇದಿಷ್ಟೆ ನನಗೆ ತಿಳಿದ ಸಂಗತಿಯು.

೧ನೇ: ಆನಂದ, ಆನಂದ, ಬಸವೇಶನನ್ನು ಸಚಿವತನಕ್ಕೆ ನೇಮಿಸು ವದು ಸರ್ವರಿಗೂ ಆನಂದ. ಇನ್ನು ಮೇಲೆ ಈ ಬಸವೇಶನು ಬಲದೇವ ಸಚಿವರನ್ನು ಮರೆಯಿಸುವನೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಡೆಯಿರಿ, ನಿತ್ಯಕರ್ಮಾದಿಗಳನ್ನು ತೀರಿಸಿಕೊಂಡು ಆಸ್ಥಾನದೆಡೆಗೆ ತೆರಳೋಣ (ಎಂದಿಬ್ಬರೂ ಹೋಗುವರು.)

ಬಿಜ್ಜಳರಾಜ: (ಏರೇ) (ಬಿಜ್ಜಳನೋರ್ವನೇ ಪ್ರವೇಶಿಸಿ,)

ಪದ

ಸಚಿವಾ ಪೋಗುವರೇ । ತೊರೆದು ನೀನೆನ್ನ ।
ಎಲೆಗುಣಸಾಗರಾ॥
ಪಗಲಿರುಳೆನ್ನದೆ । ಸ್ಮರಿಪೆಂ ಮನೋಹರ ।
ಸಾರಿಮನೋಲ್ಹಾದವನು ನೀಡದಲೆ ॥ ೧ ॥

ಹಾ ! ಬಲದೇವ ಸಚಿವರ, ಜಾಗ್ರತ–ಸ್ವಪ್ನ–ಸುಷುಪ್ತಿಗಳಲ್ಲಿ ಯಾದರೂ ನಿನ್ನನ್ನು ಕಾಣಬೇಕೆಂದು ಹಲವು ಪರಿಯಾಗಿ ಹಂಬಲಿಸುವ ನನ್ನಲ್ಲಿ ಸ್ವಲ್ಪವಾದರೂ ನಿನಗೆ ಕರುಣ ಬರಲೊಲ್ಲದೇ? ಜೀವವು ಒಂದೇ ಆಗಿದ್ದು ದೇಹವು ಮಾತ್ರ ಬೇರೆಯಾಗಿದ್ದ ನನ್ನಂಥವನಲ್ಲಿ ಸಹ ನೀನು ನಿರ್ಧಯನಾಗ ಬಹುದೇ? ಇದು ನಿನಗೆ ನ್ಯಾಯವೇ? ನೀನೇ ನನ್ನ ಪಂಚ ಪ್ರಾಣಗಳೆಂದು ಭಾವಿಸಿಕೊಂಡಿದ್ದೆನು. ಆ ನನ್ನ ಭಾವನೆಯು ನಿರಾಧಾರವಾದದ್ದೆಂದು ಹೇಳಿ ಹೊರಟು ಹೋದೆಯಾ? ನಿನ್ನಂಥ ಸುಜ್ಞಾನಿಯನ್ನೂ, ಕಾರ್ಯದಕ್ಷನನ್ನೂ ಇನ್ನೆಲ್ಲಿ ಕಾಣಲಿ? ಪರಸ್ಪರಾನುಕೂಲವಾಗಿದ್ದ ನೇತ್ರಗಳಲ್ಲಿ ಒಂದು ಹೋದರೆ ಹೇಗೆ ಅಮಂಗಳವೋ ಹಾಗೆ ಅನುಕೂಲರಾಗಿದ್ದ ನಮ್ಮೀರ್ವರಲ್ಲಿ ನೀನು ತೆರಳಿದ್ದರಿಂದ ನನ್ನ ರಾಜ್ಯವೂ ಅಮಂಗಳವಾಗಿ ಕಾಣಹತ್ತಿತು. ಹಾ ! ನಿನ್ನ ವಿಚಾರಸಾಮರ್ಥ್ಯವನ್ನು ವರ್ಣಿಸಲು ನನಗೆ ಸಾಧ್ಯವೇ?

ಹಗಲಿರುಳು ಹಂಬಲಿಸುವ ನನಗೆ ಒಮ್ಮೆಂಗಾದರೂ ದರ್ಶನವೀಯಬಾರದೇ? ಉಪಾಯವಿಲ್ಲ.

ಸೇನಾಪತಿ: (ಸೇನಾಪತಿಯು ಪ್ರವೇಶಿಸಿ)

ಇದೇನು? ಮಹಾರಾಜನು ಏಕಾಕಿಯಾಗಿ ಸಚಿವ ಶಿರೋಮಣಿಯ ಹಂಬಲದಲ್ಲಿಯೇ ಇರುವನು. ಆಗಲಿ, ಇದೇ ಸಮಯದಲ್ಲಿ ಆತನನ್ನು ಕಾಣುವೆನು. (ಮುಂದೆ ಬಂದು) ಜಯವಾಗಲಿ ಮಹಾರಾಜನಿಗೆ.

ಬಿಜ್ಜಳರಾಜ: ಸೇನಾಪತಿ, ಬಲದೇವನು ನಿನಗೆಲ್ಲಿಯಾದರೂ ಭೆಟ್ಟಿಯಾದನೇ?

ಸೇನಾಪತಿ: ರಾಜನೆ, ನೀನು ಜ್ಞಾನಿಯಾಗಿ ಹೀಗೇಕೆ ಮಾಡುವೆ? ಅಸ್ಥಿರವಾದೀ ಪ್ರಪಂಚದಾಟವೇ ಹೀಗೆಂಬುದು ನೀನರಿಯದ ಸಂಗತಿಯೆ? ನೀನೇ ಹೀಗೆ ದುಃಖಿತನಾದರೆ ರಾಜ್ಯದ ಮುಂದಿನ ವ್ಯವಸ್ಥೆಯೇನು? ಈಗಂತೂ ಸರ್ವ ಪ್ರಜರೂ ಮಹಾರಾಜನು ದರ್ಬಾರ ನೆರೆಯಿಸಿ ನೂತನ ಮಂತ್ರಿಯನ್ನು ಆರಿಸಬೇಕೆಂಬ ಆಶೆಯುಳ್ಳವರಾಗಿರುವರು. ಅದರಿಂದ ತಾವು ಶಾಂತಚಿತ್ತರಾಗಿ ದರ್ಬಾರ ನೆರೆಯಿಸಬೇಕೆಂದು ಬೇಡುವೆನು.

ಬಿಜ್ಜಳರಾಜ: ಸೇನಾಪತೇ, ಸರ್ವ ಪ್ರಜರ ಆಲೋಚನೆಯೇ ನನ್ನದಲ್ಲವೇ? ಅವರ ಆಲೋಚನೆಯಂತೆ ಮಾಡಿದರೂ ಬಲದೇವ ಮಂತ್ರಿಯನ್ನು ಮರೆಯಿಸುವವರು ದೊರೆಯಲಾರರೆಂದು ನಿಶ್ಚಯ ಮಾಡಿಕೋ. ಆಗಲಿ, ಮಂಚಣಾರ್ಯ ಮೊದಲಾದ ಸರ್ವ ಪ್ರಜರನ್ನೂ ಆಸ್ಥಾನಕ್ಕೆ ಬರಹೇಳು. ಅಷ್ಟರಲ್ಲಿ ನಾನೂ ಸಿದ್ಧನಾಗಿ ಬರುವೆನು.

ಸೇನಾಪತಿ: ಆಜ್ಞೆ ಮಹಾನ್. (ಎಂದಿಬ್ಬರೂ ಹೋಗುವರು.)

(ಆಸ್ಥಾನದೆಡೆಯಲ್ಲಿ ಸೇನಾಪತಿ, ಮಂಚಣಾರ್ಯ ಮೊದಲಾದವರು ಪ್ರವೇಶಿಸಿ,)

ಮಂಚಣಾರ್ಯ: ಸೇನಾಪತೆ, ಮಹಾರಾಜರು ಇನ್ನೂ ಬರಲಿಲ್ಲ. ಬಲದೇವ ಮಂತ್ರಿಯ ಸ್ಮರಣೆಯಲ್ಲಿಯೇ ಮಗ್ನರಾದರೋ ಏನೋ?

ಸೇನಾಪತಿ: ಹಾಗೇನೂ ಇಲ್ಲ. ಆತನ ದುಃಖವನ್ನು ಶಾಂತ ಮಾಡಿಯೇ ಈ ಕಡೆಗೆ ಬಂದೆನು. ಇನ್ನು ಮೇಲೆ ಬರಬಹುದು.

(ಬಿಜ್ಜಳನು ಪ್ರವೇಶಿ)

ಸರ್ವರೂ: ಜಯವಾಗಲಿ ಮಹಾರಾಜರಿಗೆ.

(ಸರ್ವರೂ ತಮ್ಮ ತಮ್ಮ ಸ್ಥಾನದಲ್ಲಿ ಮಂಡಿಸಿದ ನಂತರ)

ಬಿಜ್ಜಳರಾಜ: ಸಭಿಕರೇ, ಹಿತೋಪಕಾರಿಯಾದ ಮಂಚಣಾರ್ಯ, ನಮ್ಮ ಬಲಭುಜಪ್ರಾಯನಾದ ಬಲದೇವ ಸಚಿವನು ಭೂಲೋಕವನ್ನು ತ್ಯಜಿಸಿ ಸ್ವರ್ಗಲೋಕದಲ್ಲಿ ವಿಹರಿಸುವದಕ್ಕೆ ತೆರಳಿದನು. ಇನ್ನು ಮೇಲೆ ಈ ನನ್ನ ಪ್ರಬಲವಾದ ರಾಜ್ಯವನ್ನು ಬಲದೇವನಂತೆ ನಿಷ್ಕಂಟಕವಾಗಿ ಸಾಗಿಸತಕ್ಕ ಸಮರ್ಥರು ಇನ್ನಾರಿರುವರು? ಈ ಆಲೋಚನೆಗಾಗಿಯೇ ನಿಮ್ಮೆಲ್ಲರನ್ನು ಇಲ್ಲಿಗೆ ಕರೆಯಿಸಿದೆನು. ಇದಕ್ಕೆ ನಿಮ್ಮೆಲ್ಲರ ಯೋಚನೆಯು ಹ್ಯಾಗಿರುವದು?

ಮಂಚಣಾರ್ಯ: ಮಹಾರಾಜನೆ, ನನ್ನದೊಂದು ವಿಜ್ಞಾಪನೆಯನ್ನು ಆಲಿಸಬೇಕು. ಏನೆಂದರೆ, ಆ ಬಲದೇವ ಮಂತ್ರೀಶ್ವರನಿಗೆ ಪುತ್ರಿಯೋರ್ವಳಿ ರುವಳು. ಆ ಯುವತಿಯ ಪತಿಯಾದ ಬಸವೇಶನೆಂಬವನು ವಿದ್ಯಾವಿಶಾರದನೂ, ಕೀರ್ತಿವಂತನೂ, ಸಕಲ ಕಾರ್ಯದಲ್ಲಿ ದಕ್ಷನೂ ಆಗಿರುವನು. ಈಗ ಆತನು ಕಪ್ಪಡಿಯಲ್ಲಿ ವಾಸವಾಗಿರುವನು. ಈ ಸಂಗತಿಯನ್ನು ಬಲದೇವನಾಪ್ತ ರುಗಳು ನನ್ನೊಡನೆ ಅರುಹಿದ್ದರಿಂದ ಆ ಬಸವೇಶನನ್ನು ಸಚಿವತನಕ್ಕೆ ನೇಮಿಸಿಕೊಂಡರೆ ನಿನ್ನ ಸಾಮ್ರಾಜ್ಯಕ್ಕೆ ಯಾವ ಕೊರತೆಯೂ ಇಲ್ಲದಂತಾದೀತು.

ಬಿಜ್ಜಳರಾಜ: ಮಂಚಣ್ಣ, ಬಲದೇವನಿಗೂ ಬಸವೇಶನಿಗೂ ಈಗ ನಡೆದಿರುವ ನೂತನ ಸಂಬಂಧವಷ್ಟೇನೋ, ಇದಕ್ಕೂ ಮೊದಲೇನಾದರೂ ಸಂಬಂಧವಿದ್ದೀತೋ.

ಮಂಚಣ್ಣ: ಈ ನೂತನ ಸಂಬಂಧವಲ್ಲದೆ ಪೂರ್ವಾಪರ ಸಂಬಂಧವೂ ಉಂಟು. ಹ್ಯಾಗಂದರೆ, ಆ ಬಲದೇವ ಸಚಿವನ ಅನುಜೆಯೇ ಬಸವೇಶನ ಮಾತೆಯು. ಅಂತೇ ಸೋದರಳಿಯನಾದಂಥ, ವಿದ್ಯಾವಿಶಾರದನಾದಂಥ ಆ ಬಸವೇಶನಿಗೆ ತನ್ನ ಪ್ರಿಯ ಪುತ್ರಿಯಂ ಕೊಟ್ಟು ವಿವಾಹಮಂ ಬೆಳೆಸಿದನು.

ಬಿಜ್ಜಳರಾಜ: ಸರಿ, ಸರಿ. ಹೀಗಿದ್ದ ಮೇಲೆ ಬಸವೇಶನೇ ಮಂತ್ರಿತನಕೆ ಯೋಗ್ಯನಾಗುವನು. ಒಳ್ಳೇದು ! ಸೇನಾಪತೇ ನೀನು ಸಕಲ ವೈಭವದೊಂದಿಗೆ ಕಪ್ಪಡಿಗೆ ತೆರಳಿ ಗಣ ಸಭೆಯೊಳ್ ವಿರಾಜಮಾನನಾಗಿರುವ ಬಸವೇಶನಿಗೆ ನನ್ನ ವಿಜ್ಞಾಪನೆಯನ್ನು ತಿಳಿಸು. ಆನಂತರ ಆತನನ್ನು ವಸ್ತ್ರಾಲಂಕಾರಗಳಿಂದ ಶೃಂಗರಿಸಿ, ಪಟ್ಟದಾನೆಯ ಮೇಲೆ ಕುಳ್ಳಿರಿಸಿ, ಸಕಲ ಸಡಗರದೊಂದಿಗೆ ಎದುರ್ಗೊಂಡು ಆತನನ್ನು

ಕರೆತರತಕ್ಕದ್ದು. ಯಾಕೆಂದರೆ, ಆತನಿಂದ ನಮ್ಮ ರಾಜ್ಯವು ನಿಷ್ಕಂಟಕವಾಗಬೇಕಾಗಿದೆ. ಅದರಿಂದ ತೀವ್ರ ಪ್ರಯಾಣ ಮಾಡಿ ಕರತಾ.

ಸೇನಾಪತಿ: ಆಜ್ಞೆ ಮಹಾನ್. (ಹೋಗುವನು.)

ಬಿಜ್ಜಳರಾಜ: ಇನ್ನು ಸಭೆಯ ಕಾರ್ಯವಂತೂ ಮುಗಿಯಿತು. ಅದರಿಂದ ಸರ್ವರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಬಹುದು. (ಸರ್ವರೂ ಹೋದನಂತರ.) ಪರಮಾಪ್ತನಾದ ಮಂಚಣಾರ್ಯ, ಇಂಥ ಸದ್ಗುಣಯುಕ್ತ ನಾದ ಬಸವೇಶನು ನಮ್ಮ ಸಚಿವನಾಗುವದರಿಂದ ನಮ್ಮ ಪ್ರಜಾನಿಚಯಕ್ಕೆ ಸುಖವಾಗಬಹುದಲ್ಲವೇ?

ಮಂಚಣಾರ್ಯ: ರಾಜಕುಲತಿಲಕನೇ, ಸದಾ ನಿನಗೆ ಹಿತವನ್ನು ಬಯಸುವ ನಾನು ಈಗಾದರೂ ಹಿತವನ್ನು ನುಡಿಯುತ್ತೇನೆ, ಕೇಳಬೇಕು. ಈಗ ಸಭೆಯಲ್ಲಿ ನೆರೆದಿದ್ದ ಬಲದೇವನಾಪ್ತರುಗಳು ಬಸವೇಶನಲ್ಲಿ ಭಕ್ತಿ, ವಿಶ್ವಾಸಪೂರಿತನಾಗಿರುವದು ಸ್ವಾಭಾವಿಕವಾದದ್ದು; ಮತ್ತು ಬಲದೇವನ ಮಂತ್ರಿತ್ವದಿಂದ ಆ ಜನರುಗಳ ವರ್ಚಸ್ವವು ಸರ್ವೆಡೆಯಲ್ಲಿ ಪಸರಿಸಿರುವದೂ ಸಹಜವಾದದ್ದು. ಆ ಕಾರಣದಿಂದ ನಾನು ಸರ್ವಜನ ಸಮ್ಮತಕ್ಕೋಸುಗ ಬಸವೇಶನ ಪ್ರತಿಷ್ಠೆಯನ್ನು ನೆರೆದ ಸಭೆಯಲ್ಲಿ ವಿಸ್ತಾರ ಪಡಿಸಿದೆನು. ಆದರೆ ಈಗ ಗೌಪ್ಯವಾಗಿ ಉಪದೇಶೀಸುವದೇನಂದರೆ, ಶಿವಮತದವನಾದಾ ಬಸವನಿಂದ ನಮ್ಮ ಸವಣಮತಕ್ಕಾಗುವ ಹಿತವೇನು? ಆ ಬಸವೇಶನು ವಿದ್ಯಾವಿಭೂಷಿತನೂ ಸ್ವಮತಾಭಿಮಾನಿಯೂ ಇರುವದರಿಂದ ಜೈನಮತದ ಪ್ರತಿಷ್ಠೆಯನ್ನು ನಷ್ಟಗೊಳಿಸಿ, ಶಿವಮತಾಧಿಕ್ಯವಂ ಮಾಡಬಹುದು. ಆದರೆ ಅಲ್ಪರಾದ ನಾವು ನೆರೆದ ಸಭೆಯಲ್ಲಿ ಬಲದೇವನಾಪ್ತರುಗಳ ವಿರುದ್ಧವಾಗಿ ಹೇಳುವುದು ಸರಿಯಲ್ಲವೆಂದು ಅವರಂತೆ ಹೂಂಕಾರಮಂ ಮಾಡಿದೆನು. ಈ ನನ್ನ ವಿಚಾರದಿಂದ ಬಸವೇಶನನ್ನು ಸಚಿವತನಕ್ಕೆ ನೇಮಿಸುವದು ಉಚಿತವೋ ಅನುಚಿತವೋ ತಾವೇ ತಿಳಿದು ನೋಡಿರಿ.

ಬಿಜ್ಜಳರಾಜ: **ಪದ (ಏನಿದುಘನ)**

ಏನಿದುಸಖ ಮಂಚಣನೇ । ಏನ ಪೇಳುವೇ ।

ಜ್ಞಾನಿಬಸವ ತಾನು ಸಚಿವ । ಪದಕೆ ಹೀನನೇ ॥ ಏನಿದು ॥ ೧ ॥
ಅರಿತಿಹೆನ್ನೆ ಪ್ರಥಮದಲ್ಲಿ । ಬಸವರಾಜನ । ಉರುತರ
ಚರಿತೆಯನು ನಾನು । ಒರೆವೆ ಯೇತಕೆ ॥ ೨ ॥

ಮಂಚಣಾರ್ಯ, ನೀನನ್ನುವದಾದರೂ ನಿಜವೇ? ಆದರೆ ಆ ಬಸವೇಶನು ಸುಜ್ಞಾನಿಯೂ, ಸುವಿಚಾರಿಯೂ; ಪರಮತ ಸಹಿಷ್ಣುವೂ ಆಗಿರುವನೆಂದು ಈ ಮೊದಲೇ ಹಲವು ಜನರ ಮುಖದಿಂದ ಕೇಳಿರುವೆನು. ಅಂದ ಮೇಲೆ ಅಂಥವನೇ ನಮ್ಮ ಪದಪಿಗೆ ಯೋಗ್ಯನಾಗುವನು. ಒಂದು ವೇಳೆ ಆತನು ಸ್ವಮತಾ ಭಿಮಾನಿಯಾಗಿ ಸ್ವಹಿತೇಚ್ಛೆಯುಳ್ಳವನಾದರೆ ಅವನನ್ನು ಸಚಿವ ಪದದಿಂದ ನಿವೃತ್ತಿಗೊಳಿಸಿ ಯೋಗ್ಯ ನೊಬ್ಬನನ್ನು ನಿಯೋಜಿಸಿಕೊಳ್ಳಬಹುದು. ಇದರ ಪ್ರಾಯಶ್ಚಿತ್ತಕ್ಕಾಗಿ ಚತುರೋಪಾಯಂಗಳಲ್ಲಿ ಅಂತ್ಯದ ದಂಡೋಪಾಯದಿಂದ ಆ ಬಸವೇಶನನ್ನೂ ಆತನ ಅನುಯಾಯಿಗಳನ್ನೂ ಸಂಹರಿಸಿ ಶಿವಮತದ ಮೂಲವನ್ನೇ ಕಿತ್ತು ಬೀಸಾಡಲಿಕ್ಕೆ ಬರುವದಿಲ್ಲವೇ? ಯಾವ ಮತವಾದರೇನು? ನಮ್ಮ ರಾಜಕಾರ್ಯವು ಸಾಗಿದರೆ ಸಾಕು. ಅದರಿಂದ ಆತನನ್ನೇ ನಿಯೋಜಿಸಿಕೊಳ್ಳುವದು ಯೋಗ್ಯವಾಗಿ ತೋರುವದು.

ಮಂಚಣಾರ್ಯ: ಪ್ರಭೋ, ಸರ್ವ ಪ್ರಜರೂ ರಾಜನಿಗೆ ಹಿತಮಾಡುವರೆಂದು ತಿಳಿಯಬೇಡ. ಅಂಥ ಹಿತ ಬಯಸುವವನು ಸಾವಿರಕ್ಕೋರ್ವ ನಾದರೂ ದೊರಕುವನೋ ಇಲ್ಲವೋ ನಾಕಾಣೆ. ಆದರೆ ಅಂಥ ಹಿತ ಬಯಸುವವನು ನಾನೋರ್ವನಾಗಿರುವೆನು. ಇಲ್ಲಿಯವರೆಗೆ ನಾನು ಹೇಳತಕ್ಕ ಹಿತೋಕ್ತಿಗಳನ್ನು ನಿನ್ನೊಡನೆ ಹೇಳುವದಾಯಿತು. ಶಿವಮತದವರು ಪಾದವಿಟ್ಟ ಸ್ಥಳದಿಂದ ಪದಭ್ರಷ್ಟರಾದರೆಂಬ ಮಾತನ್ನು ಕನಸುಮನಸಿನಲ್ಲಿಯೂ ಕೂಡ ತರಬೇಡ. ಅಂತ್ಯಕ್ಕೆ ನನ್ನ ಮಾತಿನ ನಿಜತ್ವವು ನಿನಗೆ ತೋರುವದು. ಈಗೇಕೆ?

ಬಿಜ್ಜಳರಾಜ: ಮಂಚಣ್ಣ, ನೀನು ಹೇಳುವದು ಸರಿಯಾದದ್ದೇ; ಆದರೆ ಕಾರ್ಯ ಸಾಧನೆಗೋಸುಗ ಆ ಬಸವೇಶನ ಕೈಯನ್ನೇ ಕಾಯಬೇಕಾಗಿದೆ. ಇರಲಿ ಮುಂದೆ ಬಂದದ್ದನ್ನು ನೋಡಿಕೊಳ್ಳೋಣ.

ಮಂಚಣಾರ್ಯ: ಪ್ರಭುವೇ, ನಾನೆಷ್ಟು ಬೋಧಿಸಿದರೂ ನಿಮಗೆ ಜ್ಞಾನೋದಯ ವಾಗಲೊಲ್ಲದು. ಅ ಶಿವಮತದವರು ಸವಣವರ್ಗಕ್ಕೆ ಭವಿಗಳೆಂದು ಆಡುವದನ್ನು ನೀನು ಕೇಳಿಲ್ಲವೆ? ಹೀಗೆ ಭವಿಗಳನ್ನುವದಕ್ಕೂ ಸವಣವರ್ಗವನ್ನು ನಿಂದಿಸುವದಕ್ಕೂ ಶಿವಮತದವರಿಗೆ ಆ ಬಲದೇವ ಮಂತ್ರಿಯ ಪ್ರತಿಷ್ಠೆಯೇ ಮೂಲ ಕಾರಣವಾಗಿತ್ತು; ಆದರೆ ದೈವಯೋಗದಿಂದ ಅದು ದೂರವಾದಾಗ್ಯೂ ದುರ್ದೈವದಿಂದ ನೀನು

ಮತ್ತೆ ಅದಕ್ಕೆ ಅವಕಾಶಮಂ ಕೊಡುತ್ತಿರುವೆ. ಇದಕ್ಕೆ ಉಪಾಯವಿಲ್ಲ. ಸಾಕು, ಇನ್ನು ನಾನು ಯಾವ ಮಾತನ್ನೂ ಆಡೆನು.

ಬಿಜ್ಜಳರಾಜ: ಮಂಚಣ್ಣ, ನೀನು ಯಾವ ಅನುಮಾನವನ್ನೂ ತೆಗೆದುಕೊಳ್ಳ ಬೇಡ. ಯಾವ ಆತಂಕವೂ ಬಾರದಂತೆ ಕಾರ್ಯದ ವ್ಯವಸ್ಥೆಯನ್ನು ಮಾಡುವೆನು.

ಮಂಚಣಾರ್ಯ: ದೊರೆಯೇ, ಇಂದಿಗೆ ಸವಣವರ್ಗದ ವಿನಾಶಕಾಲವು ಪ್ರಾಪ್ತವಾಗಿ ಶಿವಮತಾಧಿಕ್ಯದ ಕಾಲವು ಅನುಕೂಲವಾಗಿ ಬಂದಿತೆಂದು ತಿಳಿ.

ಬಿಜ್ಜಳರಾಜ: ಒಳ್ಳೇದು, ಮುಂದೆ ಬಂದದ್ದನ್ನು ನೋಡಿಕೊಳ್ಳೋಣ.

(ಸೇನಾಪತಿಯೂ ಬಸವೇಶ್ವರನೂ ಪ್ರವೇಶಿಸುವರು)

ಬಸವೇಶ, ಸೇನಾಪತಿ: ಜಯವಾಗಲಿ ಮಹಾರಾಜರಿಗೆ

ಬಿಜ್ಜಳರಾಜ: ಒಳ್ಳೇದು.

ಸೇನಾಪತಿ: ಮಹಾರಾಜರೇ, ತಮ್ಮ ಅಪ್ಪಣೆಯಂತೆ ಕಪ್ಪಡಿಗೆ ಪ್ರಯಾಣ ಮಾಡಿ ಸಕಲ ವೈಭವದೊಂದಿಗೆ ಬಸವೇಶನನ್ನು ಕರೆತಂದಿರುವೆನು. ಆ ಕಡುಮಹಿಮನಾದ ಬಸವೇಶನನ್ನು ಅವಲೋಕಿಸಬೇಕು.

ಬಿಜ್ಜಳರಾಜ: ಬಸವೇಶ, ನಿನ್ನ ಸಚ್ಚರಿತ್ರ ಶ್ರವಣದಿಂ ಆನಂದಿತನಾದ ನಾನು ನಿನ್ನ ಕುಶಲವನ್ನು ತಿಳಿಯಲು ಹಾತೊರೆಯುವೆನು.

ಬಸವೇಶ: ಬಿಜ್ಜಳ ಭೂಪಾಲನೇ, ಶಿವಪಾದ ಧ್ಯಾನಾಮೃತದಿಂದ ತುಷ್ಟನಾಗಿರುವ ನಾನು ಸರ್ವವಿಧದಿಂದಲೂ ಕ್ಷೇಮಿಂತಾ ಗಿರುವೆನು; ಆದರೆ ಉರ್ವಿಪಾಲನೂ, ಕಾರ್ಯದಕ್ಷನೂ ಆದ ನಿನ್ನ ಕುಶಲವನ್ನು ಆಲಿಸುವ ಇಚ್ಛೆಯು ನನಗಾಗಿರುವದು.

ಬಿಜ್ಜಳರಾಜ: ನಾನೂ ನಿಮ್ಮಂಥ ಹಿತೇಚ್ಛುಗಳ ಪುಣ್ಯಪ್ರಭಾವದಿಂದ ಕುಶಲನೇ. (ಅಷ್ಟರಲ್ಲಿ ಒಂದು ಪತ್ರಿಕೆಯು ಬೀಳುವದು.) (ನೋಡಿ) ಇದೇನು? ಈ ಪತ್ರಿಕೆಯು ಎಲ್ಲಿಂದ ಪತನವಾಯಿತು. (ತೆಗೆದುಕೊಂಡು ನೋಡಿ) ಅಹಾ, ಇದೇನು? ಈ ಪತ್ರಿಕೆಯೋಳ್ ಲಿಖಿಸಿರ್ಪ ಲಿಪಿಯು ಯಾರೂ ಎಂದೂ ಕಾಣದಂಥಾದ್ದಾಗಿದೆ. ಇದರಲ್ಲಿ ಬರೆದಿರುವ ಬರಹವು ಸ್ವಲ್ಪಾದರೂ ತಿಳಿಯಲೊಲ್ಲದು. ಇರಲಿ. ವಿದ್ವಾಂಸರ ಕಡೆಯಿಂದ ಇದರ ಅಭಿಪ್ರಾಯವನ್ನು ತಿಳಿದುಕೊಳ್ಳುವೆನು. (ವಿದ್ವಾಂಸರಿಗೆ) ವಿದ್ವನ್ಮಣಿಗಳೇ, ಈ ಪತ್ರಿಕೆಯನ್ನು ಓದಿ ಇದರ ಅಭಿಪ್ರಾಯವನ್ನು ಹೇಳಬೇಕು.

ಗಜಾನನಶಾಸ್ತ್ರಿ: ರಾಜಶಿಖಾಮಣಿ, ಈ ಪತ್ರಿಕೆಯ ಅರ್ಥವನ್ನು ನಮ್ಮಂಥ ಪಂಡಿತರು ಹೇಳದೆ ಇನ್ನಾರು ಹೇಳಬೇಕು. ಇಲ್ಲಿ ಕೊಡಿರಿ. (ತೆಗೆದುಕೊಂಡು ನೋಡಿ) ಏನು ಗುಂಡಾಶಾಸ್ತ್ರಿ, ಈ ಬರಹದ ಪ್ರಾರಂಭವು ಈ ಕಡೆಯಿಂದಲೋ ಅಥವಾ ಈ ಕಡೆಯಿಂದಲೋ? ಈ ಮಗ್ಗಲಿಗೆ ನೋಡಿದರೆ ಸ್ವಚ್ಛವಾಗಿ ಬೆಳ್ಳಗಿರುವದು. ಏನು ವಿಚಿತ್ರವಿದು?

ಗುಂಡಶಾಸ್ತ್ರಿ: ಇಲ್ಲಿ ಕೊಡಿ. ನಾನಷ್ಟು ನೋಡುವೆನು. (ನೋಡಿ) ಏನು ಗಜಾನನಶಾಸ್ತ್ರಿಗಳೇ, ಇದೇನು? ತುದಿ ಬುಡಗಳೇ ಗೋಚರಿಸ ದಾಗಿವೆ. ಇದಾವಕಡೆಯ ಬರಹವಯ್ಯಾ? ಗೀರ್ವಾಣ ಭಾಷೆಯಲ್ಲಿ ಪ್ರವೀಣರಾದ ನಮಗೇ ಗೊತ್ತಾಗಲೊಲ್ಲದಲ್ಲ?

ಪೆದ್ದಶಾಸ್ತ್ರಿ: ಏನಿರಯ್ಯಾ, ನಿಮ್ಮಿಬ್ಬರಿಗೂ ಗೊತ್ತಾಗಲೊಲ್ಲದೇನು? ಇಲ್ಲಿ ಕೊಡಿರಿ. ಕೈಲಾದಷ್ಟು ನೋಡುವೆನು.

ಗಜಾನನಶಾಸ್ತ್ರಿ: ಏನು? ಪೆದ್ದಶಾಸ್ತ್ರಿಗಳೇ, ನೀವು ನೋಡುವಿರೇನು? ನಿಮ್ಮ ಹೆಸರಿನ ಮೇಲಿನಿಂದಲೇ ನಿಮ್ಮ ಪಾಂಡಿತ್ಯವು ತಾನೇ ತಿಳಿಯುವುದು.

ಪೆದ್ದಶಾಸ್ತ್ರಿ: ಹೆಸರಿನಿಂದಲೇ ಪಾಂಡಿತ್ಯವು ತಿಳಿದ ಮೇಲೆ ಇಂದಿನಿಂದ ನಾನು ಕಾಳಿದಾಸನೆಂದು ಹೆಸರಿಟ್ಟುಕೊಳ್ಳುವೆನು. ಆಮೇಲೆ.

ಗಜಾನನಶಾಸ್ತ್ರಿ: ಆಮೇಲೆ ಏನು? ಕಾಗೆಗೆ ಕೋಗಿಲೆಯಂದಂತಾಗುವದು.

ಪೆದ್ದಶಾಸ್ತ್ರಿ: ಕೊಟ್ಟು ನೋಡಿದರೆ ತಾನೇ ತಿಳಿಯುವದು.

ಗುಂಡಶಾಸ್ತ್ರಿ: ಇಕೋ ತೆಗೆದುಕೊಳ್ಳಿರಿ.

ಪೆದ್ದಶಾಸ್ತ್ರಿ: (ನೋಡಿ) ಇದೇನು? ಯಾವನೋ ಗೀಚಾಡಿದಂತೆ ಕಾಣುವದು.

ಗಜಾನನಶಾಸ್ತ್ರಿ: ಬರಹವು ಗೀಚಾಡಿಲ್ಲ. ನಿನ್ನ ಬುದ್ಧಿಯೇ ಗೀಚಾಡಿದೆ. ಇರಲಿ ಗುಂಡಶಾಸ್ತ್ರಿ, ಹ್ಯಾಗೆ ಮಾಡೋಣ? ಇದನ್ನು ಹೇಳದಿದ್ದರೆ ಈ ಲಿಂಗಧಾರಿ ಬಸವೇಶನ ಮುಂದೆ ನಾವು ಮುಖಭಂಗಿತರಾಗುವೆವು. ಹ್ಯಾಗೆ ಮಾಡೋಣ?

ಗುಂಡಶಾಸ್ತ್ರಿ: ಗಜಾನನಶಾಸ್ತ್ರಿ, ಹ್ಯಾಗೆ ಮಾಡೋಣ? ಇದನ್ನು ಹೇಳದಿದ್ದರೆ ರಾಜನು ಭೂಮಿ ಮಾನ್ಯಗಳಿಗೆ ಮಾತ್ರ ನೀರು ಬಿಡುವನು. ಏನು ಮಾಡೋಣ.

ಪೆದ್ದಶಾಸ್ತ್ರಿ: ಯಾಕಷ್ಟು? "ಬ್ರಾಹ್ಮಣೋ ಭೋಜನಪ್ರಿಯಃ" ಅಂತೇ ನಾವು ಭೋಜನದಲ್ಲಿ ಆಸಕ್ತಿಯುಳ್ಳವರಾದುದರಿಂದಲೇ ಇಂಥ ಬರಹದ ಪರಿಚಯವನ್ನು ಮಾಡಿಕೊಳ್ಳಲಿಲ್ಲ. ಆದರೇನು? ಬ್ರಾಹ್ಮಣರನ್ನು ವಿಶೇಷ

ಪರೀಕ್ಷಿಸಿವರೆ ಬಹು ಪಾಪ ಬರುವದೆಂದು ರಾಜನಿಗೆ ಮಂಕುಬೂದಿಯನ್ನು ಹಾಕಿಬಿಟ್ಟು, ಆ ಲಿಂಗಧಾರಿ ಬಸವೇಶನನ್ನು ಪರೀಕ್ಷಿಸೋಣ. ಇದರಲ್ಲಿ ಅಂಜಿಕೆ ಏನು?

ಬಸವೇಶ: ಮಹಾರಾಜನೆ, ಅಲ್ಪಕಾರ್ಯಕ್ಕೆ ವಿಲಂಬವೇಕೆ? ಘನ ಪಂಡಿತರಾದ ಇವರು ವ್ಯರ್ಥ ಗಲಭೆಯನ್ನು ಮಾಡುತ್ತ ನಿಂತಿರುವರಲ್ಲ?

ಗಜಾನನಶಾಸ್ತ್ರಿ: ಏನಯ್ಯ ಬಸವೇಶ, ಪಂಡಿತರು ಗಲಭೆಯನ್ನು ಮಾಡುವರೆಂದು ಚಾಡಿ ಹೇಳುವಿಯೋ? ಈ ಲೇಖನವನ್ನು ನೋಡಿದರೆ ತಿಳಿದೀತು. !

ಗುಂಡಶಾಸ್ತ್ರಿ: ಗಜಾನನಶಾಸ್ತ್ರಿ, ಈ ಬಸವೇಶನಿಗ ಮಂತ್ರಿಪದವು ದೊರಕಿದ್ದು ತಿರುಕನಿಗೆ ಅರಸೊತ್ತಿಗೆಯು ದೊರೆತಂತಾಗಿದೆ. ರಾಜನು ಸುಮ್ಮನಿದ್ದರೂ ಇವನೇಕೆ ಕೆಣಕುವನು.

ಪೆದ್ದಶಾಸ್ತ್ರಿ: ಹೂ ! ಇನ್ನೂ ಬ್ರಾಹ್ಮಣ ಕೈಯನ್ನು ನೋಡಿಲ್ಲ ! ಅದಕ್ಕೆ ಹಾಗೆ ಮಾತಾಡುವನು.

ಬಸವೇಶ: ಜ್ಞಾನವಿಲ್ಲದವನು ಬ್ರಾಹ್ಮಣನೇ ! ಜನಿವಾರ, ಚಂಡಿಕೆಯುಕ್ತ ನಾದವನು ಬ್ರಾಹ್ಮಣನೇ? ನಿಮ್ಮಂಥ ಶತಮೂರ್ಖರಿಗೆ ಬ್ರಾಹ್ಮಣ ರೆನ್ನುವದಕ್ಕಿಂತ ಬ್ರಾಹ್ಮಣ ವೇಷಧಾರಿಗಳೆನ್ನಬೇಕು.

ಗಜಾನನಶಾಸ್ತ್ರಿ: ರಾಜನೇ, ಬಸವೇಶನ ಬಾಯಿಯು ಬಹು ದೂರ ಹೋಗುವದು ನೋಡಿರಿ !

ಬಸವೇಶ: ಹರದಾರಿಯವರೆಗೆ ಹೋಗಿಲ್ಲ.

ಪೆದ್ದಶಾಸ್ತ್ರಿ: ಇಪ್ಪತ್ತು ಹಾರಿಕೆ ಹೋಗಿದೆ.

ಬಸವೇಶ: ನಿಜವನ್ನು ನುಡಿದರೆ ಕೋಪವೇಕೆ? ಬಾಯಿ ಬಡಿದು ರಾಜದತ್ತ ಭೋಜನಗಳನ್ನುಣ್ಣುತ್ತ ಅಹಂಕಾರವನ್ನು ತೋರಿಸಿದರೆ ಪ್ರಯೋಜನವೇನು?

ಗಜಾನನಶಾಸ್ತ್ರಿ: ಬಸವೇಶ, ಬಾಯಿಬಡುಕತನದಿಂದ ಪ್ರಯೋಜನವಿಲ್ಲ. ಇದನ್ನು ನೋಡಿ ಇದರ ಅರ್ಥವನ್ನು ಹೇಳಿದರೆ ನೀನೇ ಶ್ರೇಷ್ಠನೆಂದು ತಿಳಿದು ನಿನ್ನ ಹೇಳಿಕೆಯಂತೆ ನಡೆಯುವೆವು.

ಬಸವೇಶ: ನಾನು ಹೇಳಿದರೆ ಸರ್ವರೂ ಲಿಂಗಧಾರಿಗಳಾಗಬೇಕು. ಶಿವಲಾಂಛನಗಳನ್ನು ಧರಿಸಬೇಕು. ಶಿವಶರಣರಿಗೆ ಶರಣಾಗತ ರಾಗಬೇಕು.

ಪೆದ್ದಶಾಸ್ತ್ರಿ: ನೀನು ಹೇಳದಿದ್ದರೆ ನಿನ್ನ ಲಿಂಗಪ್ಪನನ್ನು ಹಳ್ಳದಲ್ಲಿ ಒಗೆದು ಜನಿವಾರವನ್ನು ಹಾಕಿಕೊಳ್ಳುವೆಯಾ?

ಬಸವೇಶ: ಆಗಲಿ. (ತೆಗೆದುಕೊಂಡು ತಲೆಯಮೇಲಿಟ್ಟುಕೊಂಡು) ಓಂ ಶಿವಲಿಂಗಾಯನಮಃ

ಗುಂಡಶಾಸ್ತ್ರಿ: ಆಹ ! ಗಜಾನನಶಾಸ್ತ್ರಿ, ಅದರಲ್ಲಿ ಶಿವಲಿಂಗಾಯನಮಃ ಎಂದು ಬರೆದಿದೆಯಂತೆ ! ತಿಳಿಯಿತು, ತಿಳಿಯಿತು; ಇವನ ಘನಪಾಂಡಿತ್ಯವು ತಿಳಿಯಿತು.

ಪೆದ್ದಶಾಸ್ತ್ರಿ: ಇವನಿಗೆ ನನ್ನ ಹೆಸರಿಗಿಂತ ಕೆಟ್ಟ ಹೆಸರನ್ನಿಟ್ಟರೆ ನೆಟ್ಟಗೆ ತೋರುವದು ಅಯ್ಯಾ, ಇವನು ಶಿವಲಿಂಗಣ್ಣ.

ಬಸವೇಶ: ವ್ಯರ್ಥ ಬಡಬಡಿಸುವದೇಕೆ? ಅಂತ್ಯದಲ್ಲಿ ತಾನೇ ತಿಳಿಯುವದು.

ಪೆದ್ದಶಾಸ್ತ್ರಿ: ಆಗಲಿ ಹೇಳು

ಬಸವೇಶ:

ಪದ

ಸದಯಾತ್ಮ ಗಿರಿಜಾವರನೆ । ಇದುನಿನ್ನ ಮಹಿಮೆಯು ತಾನೇ ॥ ಪಲ್ಲ ॥
ಕರುಣಾಂಬು ನಿಧಿ ನೀಯನ್ನ ।
ಲಿರಿಸುತ್ತ ಕಾರುಣ್ಯವನೇ । ॥ ೧ ॥
ವರಜ್ಞಾನವೀಯುತಲಿನ್ನ । ಪೊರೆಯೆಂದು
ಬೇಡುವೆ ನಿನ್ನ ॥ ೨ ॥

ಹೇ ಗಜಾವರ, ಜಗದೀಶ್ವರ, ಇದೆಲ್ಲ ನಿನ್ನ ಮಹಿಮೆಯು (ಎಂದು ಪತ್ರಿಕೆಯನ್ನು ನೋಡಿ, ರಾಜನಿಗೆ) ರಾಜನೇ, ನೀನು ಮಂಡಿಸಿರುವ ಸಿಂಹಾಸನದದೋಭಾಗದಲ್ಲಿ ಖಂಡಿತವಾಗಿ ದೊಡ್ಡ ನಿಕ್ಷೇಪವಿರುವದೆಂದು ಈ ಪತ್ರಿಕೆಯ ಅಬಿಪ್ರಾಯವಿರುವದು. ಈ ಧನನಿಚಯವು ಪೂರ್ವದಲ್ಲಿ ಪ್ರಭುತ್ವವಂ ಮಾಡಿದ ಚಾಲುಕ್ಯ ಮಹೀಪಾಲರದಾಗಿರುವದಂತೆ ! ಇದರ ಸತ್ಯಾಸತ್ಯತೆಯನ್ನು ಸ್ವತಃ ನೋಡಬಹುದು.

ಬಿಜ್ಜಳರಾಜ: ಹಾಗೇ ಆಗಲಿ. ಸೇನಾಪತೇ, ಈ ಸಿಂಹಾಸನವನ್ನು ತೆಗೆಯಿಸು.

ಸೇನಾಪತಿ: ಆಜ್ಞೆ ಮಹಾನ್, (ಸಿಂಹಾಸನವನ್ನು ತೆಗೆಯಿಸಿದ ನಂತರ ಧನನಿಧಿಯನ್ನು ನೋಡಿ).

ಬಿಜ್ಜಳರಾಜ: ಅಹಾ ! ಇದೋ ಧನನಿಧಿಯು. ಇಲ್ಲಿಯೇ ಇರುವದು.

ಬಸವೇಶ: ಮಹಾರಾಜನೆ, ಈ ಪತ್ರಿಕೆಯ ಅಭಿಪ್ರಾಯವು ನಿಜವಾಯಿತೆ? (ಎಂದು ಸ್ವರ್ಶ ಮಾಡುವನು).

ಬಿಜ್ಜಳರಾಜ: ಬಸವೇಶಾ, ಪ್ರತ್ಯಕ್ಷ ನೋಡಿಯೂ ಇನ್ನೂ ನಿಜವೆಂದು ಬೇರೆ ಹೇಳಬೇಕೆ? (ದ್ರವ್ಯವನ್ನು ನೋಡಿ) ಅಹಾ ! ಇದೇನು? ಈ ಧನ ನಿಧಿಯು ಮೊದಲಿದ್ದದ್ದರ ಇಮ್ಮಡಿಯಾಯಿತಲ್ಲ? ಸಭಿಕರೇ, ಹಿತೋಪಕಾರಿಯಾದ ಮಂಚಣಾರ್ಯ, ಸರ್ವರೂ ಈ ಮಹಾಮಹಿಮನಾದ ಬಸವೇಶನ ಅತ್ಯಗಾಧವಾದ ಲೀಲೆಯನ್ನು ನೋಡಿದಿರಾ? ಈ ಪುಣ್ಯ ಪುರುಷನ ಹಸ್ತಸ್ಪ ರ್ಶವಾದೊಡನೆ ಈ ಧನವು ಇಮ್ಮಡಿಯಾಗಿರುವದು. ಈ ಮಹಿಮನ ಆಗಮನವಾದೊಡನೆ ಅಪರಿಮಿತವಾದ ಐಶ್ವರ್ಯವು ಪ್ರಾಪ್ತವಾಯಿತು. ಮುಂದೆ ನಮಗೆ ಇದಕ್ಕೂ ಹೆಚ್ಚಿನ ಶುಭೋದಯುವಾಗುವದು ನಿಜವು. (ಬಸವೇಶನಿಗೆ) ಹೇ, ಲೀಲಾಮೂರ್ತಿಯೇ, ನೀನು ಜಗದುದ್ಧಾರಕ್ಕಾಗಿ ಅವತರಿಸಿದ ದೇವಾಂಶ ಪುರಷನೇ ಹೊರತು ಸಾಮಾನ್ಯನಲ್ಲ. ನೀನು ನನ್ನ ಪುರಾಕೃತ ಪುಣ್ಯವಿಶೇಷದಿಂದ ನನಗೆ ದೊರಕಿರುವೆ. ಅದು ಕಾರಣ ನನ್ನ ಸರ್ವ ಸಾಮ್ರಾಜ್ಯವು ನಿರಾತಂಕವಾಗಿ ಸಾಗುವಂತೆ ದಂಡನಾಯಕ ಪದವನ್ನು ತಾವು ಪರಿಗ್ರಹಿಸಬೆಕೆಂದು ನನ್ನ ಇಚ್ಛೆಯಿದೆ.

ಬಸವೇಶ: ದೊರೆಯೇ, ನಿನ್ನ ಇಷ್ಟವಿದ್ದರೆ ಹಾಗೇ ಆಗಲಿ.

ಬಿಜ್ಜಳರಾಜ: ಅಮಾತ್ಯ ಶ್ರೇಷ್ಠನೆ, ನನ್ನ ರಾಜ್ಯದಾಡಳತೆಯಲ್ಲಿ ಏಳುಸಾವಿರ ಆನೆಗಳೂ, ಹನ್ನೆರಡುಸಾವಿರ ಅಶ್ವಗಳೂ, ಕಾಲಾಳು ರಥ ಧನ ಧಾನ್ಯ ಇತ್ಯಾದಿ ಸರ್ವ ಸಾಹಿತ್ಯಗಳೂ ಇರುವವು. ಇಂದು ಈ ಸರ್ವವನ್ನೂ ನಿನ್ನ ಸ್ವಾಧೀನ ಪಡಿಸಿದ್ದೇನೆ. ನಿಮ್ಮ ಮಾವನಾದ ಬಲದೇವನು ಹ್ಯಾಗೆ ಪರಿಪಾಲಿಸುತ್ತಿದ್ದನೋ ಹಾಗೆ ನನ್ನ ರಾಜ್ಯವನ್ನು ಸರಿಗೊಳಿಸಿ ನನ್ನ ಮನೋಭೀಷ್ಟವಂ ಪೂರ್ಣ ಮಾಡಬೇಕೆಂದು ಬಯಸುವೆನು.

ಬಸವೇಶ: ರಾಜನೆ, ಸಕಲ ಲೋಕವನ್ನು ಪರಿಪಾಲಿಸುವ ಪರಮೇಶ್ವರನಿಗೆ ನಿನ್ನೋರ್ವನನ್ನು ಸಂರಕ್ಷಿಸುವದು ಭಾರವೇ? ಶಿವಭಕ್ತರಲ್ಲಿ ನೀನು ಭಯ ಭಕ್ತಿಯಿಂದಿರು; ಅಂದರೆ ನಿನ್ನನ್ನು ಪರಮೇಶ್ವರನು ಕಾಪಾಡುವನು. ಶಿವಭಕ್ತರ ಮಹಿಮೆಯು ಎಂತಹದೆಂದರೆ, ಅವರು ಸಪ್ತಸಾಗರಗಳನ್ನಾದರೂ ಒಂದೇ ಬಾರಿಗೆ ಕುಡಿದು ಬಿಡುವರು;

ಬಡಬಾಗ್ನಿಯನ್ನಾದರೂ ತುತ್ತು ಮಾಡಿ ನುಂಗುವರು; ಕುಲಪರ್ವತಗಳನ್ನಾದರೂ ಮೇಲೆ ಬಿದ್ದು ಒಡೆಯುವರು; ಭೂಮ್ಯಾಕಾಶಗಳನ್ನಾದರೂ ಮೇಲೆ ಕೆಳಗೆ ಮಾಡಬಲ್ಲರು; ಬ್ರಹ್ಮ, ವಿಷ್ಣು, ದೇವೇಂದ್ರಾದಿಗಳನ್ನು ಸಹ ಗಣನೆ ಮಾಡತಕ್ಕವರಲ್ಲ; ಬಹು ಸಾಮರ್ಥ್ಯವಂತರು. ಅದುಕಾರಣ ಅವರೋಳ್ ನೀನು ಅಹಂಕಾರವನ್ನು ತೋರಿಸಬೇಡ. ಪ್ರಜಾಪಾಲನೆಯಲ್ಲಿ ಕೃಪೆಯನ್ನೂ, ಶತ್ರುಗಳಲ್ಲಿ ಕೋಪವನ್ನೂ, ಸತ್ಪುರುಷರಲ್ಲಿ ಪ್ರೀತಿಯನ್ನೂ, ಯುದ್ಧದಲ್ಲಿ ಪರಾಕ್ರಮವನ್ನೂ, ವಿದ್ವಾಂಸರಲ್ಲಿ ಮರ್ಯಾದೆಯನ್ನೂ, ಶಿವಭಕ್ತರಲ್ಲಿ ಭಕ್ತಿಯನ್ನೂ ಇಟ್ಟಿರು. ಇಂತಿದ್ದ ಮೇಲೆ ನಿನ್ನ ಸಾಮ್ರಾಜ್ಯಕ್ಕೆ ಅದಾವ ಕೊರತೆಯು ಬರುವದು?

ಬಿಜ್ಜಳರಾಜ: ಸಚಿವಶ್ರೇಷ್ಠ, ನಿನ್ನ ಅಂಬೋಣದಂತೆಯೇ ನಡೆದುಕೊಳ್ಳುವೆನು. ಇನ್ನು ದರ್ಬಾರವನ್ನು ಬಂದು ಮಾಡಿ ನಿತ್ಯಕರ್ಮಾಚರಣೆಗೆ ತೆರಳುವಾ. (ಹೋಗುವರು.)

(ಇಬ್ಬರು ಕುರುಬರು ಪ್ರವೇಶಿಸಿ)

ಕಂಟ್ಯಾ: ಎಲೆ ಬೀರ, ಈ ಲೋಕದಾಟ ಎಂಗೆಂಗಾತು ನೋಡಿದ್ಯಾ.

ಬೀರ: ಮತ್ತೇನಾಗೇತಲೆ ಕಂಟ್ಯಾ.

ಕಂಟ್ಯಾ: ಏನೇಳೆಪ್ಪ, ದೇಶದ ಮೇಲೆ ನಿಂಗಾಯತರು, ಬರಾಂಬರದವರು ಎಚ್ಚಾಗಿ, ನಮ್ಮನ್ನು ಕಂಡರೆ ಮುಟ್ಟಬ್ಯಾಡರಿ, ಇಂಗೆಲ್ಲ ಅಂದದ್ದಕ್ಕಾಗಿ ತಿಂದ ಎಲೆಯಂಗೆ ನಮ್ಮನ್ನೂ, ಉಳಿದವರನ್ನೂ ಮುಟ್ಟುವುದಿಲ್ಲ. ಮತ್ತು ಅವರ ನೆಳ್ಳಿಗೆ ಸಹ ನಿಲ್ಲೋದಿಲ್ಲ. ನಿಂಗಾಯತರಂತೂ ಕೊರಳಿಗೆ ಕಲ್ಲುಕಟ್ಟಿಕೊಂಡು ಮಾರಿಗೆಲ್ಲ ಬೂದಿ ಬಡಕೊಂಡು ನಾವು ಶಿವಭಗತರು; ನಾವು ಎಚ್ಚಿನೋರು, ಅಂತಾ ಹೇಳತಾ, ಐನೋರ ಕಾಲ ತೊಳದ ನೀರು ಕುಡಕೊಂತ ಎಂಗೆಂಗೋ ಮಾಡತಾರೆ. ಆರುವರದಂತೂ ಏಳಂಗಿಲ್ಲ. ರಂಡೇಗಂಡ, ಮುಟ್ಟಬ್ಯಾಡ ಅಂತಲೇ ಮೈಮ್ಯಾಗೆ ಬರತಾರೆ. ಅವರೆಲ್ಲ ನಮ್ಮನ್ನೆಲ್ಲ ಕೀಳಜಾತಿಯವರಂತ ತಿಳದರೋ ಏನೋ? ನಮ್ಮ ಕುರಬರಂತ ಭಗತಿ ಇಸವಾಸ ಎಲ್ಲರಲ್ಲಿದ್ದರೆ ಇಂಗ್ಯಾಕಾದೀತು? ನಮ್ಮಂಗೆ ಗೊಂಗಡಿ ಬೀಸಿ ಮಳೆ ತರೋ ಕಸುವು ಇವರಲ್ಲಿದೆ ಏನು? ಸುಂಕೆ ಮಂಗನಂಗೆ ಏನೋನೋ ಮಾಡತಾರ ಹೂಂ.

ಬೀರ: ಎಲೆ ಕಂಟ್ಯಾ, ನಿಂಗಾಯತರು ನಮ್ಮನ್ನ ಸುಮಾರ ಮಾಡತಾರೇನು?

ನಾವು ಅವರಂತೆ ಮನಶರಲ್ಲಂತೇನು? ಅವರು ಮಾಡೋ ಮಂಗತನ ನೋಡಿದರೆ ಅವರೆಂಗೆ ಎಚ್ಚಿನೋರು? ಬಿಡಲೆ, ಅವರದ್ದೇಳಬ್ಯಾಡ. ನಿನ್ನಂಗೆ ಅತಗಂತ ಕುಂತರೆ ಆಗೋದೇನು? ಅವರ ಸಂಗಡ ಕಾಲ ಕೆದರಿ ನ್ಯಾಯಾ ತಗದರೆ ಅವರು ಎಚ್ಚಿನೋರು, ಕಡಿಮೆಯೋರು ಅನ್ನೋದು ತಿಳೀತೈತಿ.

ಕಂಟ್ಯಾ: ಹಾಂಗಾರ ಸುಂಕಿರಲೆ, ಈ ಊರಾಗೆ ಮಡಿವಾಳ ಮಾಚಿದೇವ ಅಂತ ಒಬ್ಬ ಅಗಸ ಶಿವಭಗತ ಅಂತ ಏಳಿಕಂತ ಬಲು ಬಿಂಕ ಮಾಡಿಕಂತ ಬರತಾನೆ. ಇವತ್ತ ಅವನ ಸಂಗಡ ನ್ಯಾಯ ತಗದೇ ಬಿಡಾನ ನಿಲ್ಲು.

(ಇಷ್ಟರಲ್ಲಿ ಮಾಚಿದೇವನು ಪ್ರವೇಶಿಸಿ)

ಮಾಚಿದೇವ: (ಬೀದಿಯಲ್ಲಿ ಸರ್ವರಿಗೂ) ನಾನು ಮಾಡುವ ಕರ್ತವ್ಯವೇನು? ಗುರು, ಲಿಂಗ, ಜಂಗಮ ಸೇವೆಯನ್ನು ಮಾಡಿ ಧನ್ಯನಾಗುವದೇ ನನ್ನ ಕರ್ತವ್ಯವು. ಅಂತೇ ನನ್ನ ಗ್ರಾಮವಾದ ಹಿಪ್ಪರಿಗಿಯನ್ನು ಬಿಟ್ಟು ಬಸವೇಶನ ಮಹಿಮೆಯನ್ನು ಕೇಳಿ ಇಲ್ಲಿಗೆ ಬಂದೆನು. ಈಗಲಾದರೋ ನನ್ನಿಂದ ಸೇವೆಯನ್ನು ತೆಗೆದುಕೊಳ್ಳುವ ಶಿವಶರಣರ ಬಟ್ಟೆಗಳನ್ನು ಮಡಿ ಮಾಡಿ ಮಟ್ಟೆಯನ್ನು ಕಟ್ಟಿ ತಂದಿರುವೆನು. ಈ ಮಟ್ಟೆಯನ್ನು ಹೊತ್ತಿರುವ ನನ್ನನ್ನು ಶಿವಶರಣರನ್ನುಳಿದು ಉಳಿದವರಾರಾದರೂ ಸ್ಪರ್ಶ ಮಾಡಿದರೆ ಅವರನ್ನು ನಿಶ್ಚಯವಾಗಿ ಯಮಸದನಕಟ್ಟುವೆನು. ಶಿವಶರಣರಲ್ಲಿ ದ್ರೋಹವನ್ನೆಣಿಸುವವರಿಗೆ ನಾನೇ ಯಮನು. ಇದನ್ನು ತಿಳಿದೂ ಸೊಕ್ಕಿನಿಂದ ಬಂದು ಮುಟ್ಟಿದವರನ್ನು ಒಕ್ಕಲಿಕ್ಕದೆ ಎಂದೂ ಬಿಡೆನು. ಇದೇ ನನ್ನ ಪ್ರತಿಜ್ಞೆಯು.

ಕಂಟ್ಯಾ: ಕೇಳಿದೇನಲೆ ಬೀರ, ನೆನಿಸದವರ ಮನಸಿನಾಗೆ ಅನ್ನೋ ಹಾಂಗೆ ಬಂದೇ ಬಿಟ್ಟ, ಇವನು ಶಿವಭಗತರ ಬಟ್ಟೇ ಒಗೆಯೋ ಅಗಸ, ಇವನೇ ಮಡಿವಾಳ ಮಾಚಿದೇವ. ಆ ಅರಿವೆ ಮಟ್ಟಿ ಮುಟ್ಟಿದರೆ ಕುಟ್ಟಿ ಆಕ್ತಾನಂತ, ಒಕ್ಕಲಿಕ್ಕತಾನಂತೆ. ನಾವು ಭವಿಗಳಂತ, ಇಂಗೆಲ್ಲ ಮಾಡಾಕೆ ಇವನೇನು ಶಿವನ ಮಮ್ಮಗನೇನೋ ತರಬಿಹಾಕಲೆ, ಅವನ್ನ ಕೇಳಾನ.

ಮಾಚಿದೇವ: ಎಲೇ ಭವಿಗಳಿರಾ, ಶಿವಶರಣರ ಬಟ್ಟೆಗಳನ್ನು ಮಡಿ ಮಾಡಿ ಮಟ್ಟೆಗಟ್ಟಿ ಹೊತ್ತು ಮುಟ್ಟಬೇಡವೆಂದು ಸಾರಿ ಹೇಳುವದು ಗೊತ್ತಾಗುವದಿಲ್ಲವೇ? ಮೂರ್ಖ, ಒರೆಯಾಗಿನಿಂತು ಮಾತನಾಡು. ಇಲ್ಲದಿದ್ದರೆ ಈ ನನ್ನ ಹದನಾದ ಖಡ್ಗಕ್ಕೆ ನಿನ್ನನ್ನು ಆಹುತಿಯನ್ನು ಕೊಟ್ಟೇನು !

ಕಂಟ್ಯಾ: ಒಲೆ ಅಗಸ. ಹೊಲಸು ಅರಿವೆ ತೊಳಿಯೋ ನಿನಗೆ ಬಲು ಬಿಂಕಪ್ಪ! ರಾಜಬೀದ್ಯಾಗ ಅಡ್ಡಾಡೋರು ನಿನ್ನಂಥ ಮೂಳಗೆಲ್ಲ ಎದರಿ ದಾರಿ ಬಿಟ್ಟರೆ ತೀರ್‍ಲ್ಹೋತು. ಶಿವಶರಣರಂತೆ ! ಅವರ ಮ್ಯೆಲಿಗೆ ಇವ ಒಗಿತಾನಂತೆ ! ಇವನ್ನ ಮುಟ್ಟಬಾರದಂತೆ. ಮುಟ್ಟಿದರೆ ಕೊಂದಾಕ್ತಾನಂತೆ !! ರೊಟ್ಟೆಲ್ಲೇಳು. ಮಂಗಾ, ಸುಮ್ಮನ್ಹೋಗು ದಾರೀ ಹಿಡಿದು.

ಮಾಚಿದೇವ: ಎಲೇ ತಿಳಿಗೇಡಿಯೇ, ಮಲಹರನ ಭಕ್ತರು ಒಲಿದುಡುವ ಮಡಿಗಳನ್ನು ನಿಮ್ಮಂಥ ಖಲರು ಮುಟ್ಟಬಾರದು. ಇದನ್ನು ಸರ್ವರಿಗೂ ತಿಳಿಸುತ್ತ, ಅವರನ್ನು ಎಚ್ಚರಗೊಳಿಸುತ್ತ ನಾನು ಬರುತ್ತಿರಲಿಕ್ಕೆ ತಲೆ ತಿರುಗಿದವರಂತೆ ಬಲವಾಗಿ ಹರಟುತ್ತ ಅಡ್ಡಗಟ್ಟುವೆಯಾ? ಒಳ್ಳೆಯ ರೀತಿಯಿಂದ ಮಾರ್ಗವನ್ನು ಬಿಟ್ಟರೆ ನೆಟ್ಟಗಾಯಿತು ಇಲ್ಲವಾದರೆ ಕಾಲನ ವಶಕ್ಕೆ ನಿನ್ನನ್ನು ತಲುಪಿಸುವೆನು ತಿಳಿಯಿತೇ.

ಬೀರ: ಎಲೇ ಕಂಟ್ಯಾ, ನೀ ಸುಂಕಿರಲೆ. ಇವನ್ನ ತಗೊಂತೇನಿ. ಎಲೇ ಅಗಸ, ಯಾಕೆ? ಎಂಗ ಕಾಣತೈತೆ. ನಿನಗ್ಹೆದರಿ ದಾರೀ ಬಿಡಬೇಕೇನಲೆ. ಹೋಗು, ನೀನೇ ದಾರೀ ಬಿಟ್ಟು, ನಿನ್ನ ಗಂಟು ವಡೆಯಂಗೆ ಬಡದೇನು. ಇವನು ಶಿವಭಗತನಂತೆ ! ನಾವು ಭವಿಗಳಂತೆ !! ಇವನು ಹೆಚ್ಚಿನೋನಂತೆ ! ನಾವು ಕಡಿಮೇರಂತೆ !! ಅದ್ಹ್ಯಾಂಗೆ ನೀವು ಹೆಚ್ಚಿನೋರಲೇ?

ಮಾಚಿದೇವ: ಅವಿಚಾರಿ, ಭವರಹಿತನ ಭಕ್ತರಲ್ಲಿ ಅವಿವೇಕವನ್ನು ಆಚರಿಸುವೆಯಾ? ಅವರು ಹ್ಯಾಗೆ ಹೆಚ್ಚಿನವರೆಂದು ಕೇಳುವೆಯಾ? ನೀಬಲ್ಲೆಯಾ? ಶಿವಭಕ್ತರು ಕುಲಪರ್ವತಗಳನ್ನು ತೆಗೆದುಕೊಂಡು ಆಣೇಕಲ್ಲಾಡುವಷ್ಟು ಸಾಮರ್ಥ್ಯವಂತರು. ಅಂಥ ಮಹಿಮರ ಮಡಿಗಳನ್ನು ದುಡುಕಿನಿಂದ ಮುಟ್ಟಲು ಪ್ರಾರಂಭ ಮಾಡಿರುವೆಯಾ? ಮತ್ತು ಅವರು ಹ್ಯಾಗೆ ಹೆಚ್ಚಿನವರೆಂದು ಕೇಳುವೆಯಾ? ಮೂಢಾ, ಬೆಳಕಿನ ಮಹಿಮೆಯನ್ನರಿಯದ ಗೂಗೆಯಂತಿರುವ ನಿನ್ನ ಮುಂದೆ ಹೇಳಿಯಾದರೂ ಪ್ರಯೋಜನವೇನು? ಹುಟ್ಟುಗುರುಡನ ಮುಂದೆ ನರ್ತನವನ್ನು ಮಾಡಿದಂತೆ, ಹುಟ್ಟುಕಿವುಡನ ಮುಂದೆ ಸರಸಾಗ್ನಿ ಗಾಯನವನ್ನು ಮಾಡಿದಂತೆ, ಗುಡ್ಡದ ಮುಂದೆ ನಿಂತು ಅತ್ತಂತೆ, ನಿನ್ನಂಥ ಶತಮೂರ್ಖನಿಗೆ ನಾನು ಶಿವಭಕ್ತರ ಮಹಿಮೆಯನ್ನು ಹೇಳಲಾರೆ. ವ್ಯರ್ಥವಾಗಿ ಪ್ರಾಣವನ್ನು ಕಳಕೊಳ್ಳದೆ ದಾರಿಯನ್ನು ಬಿಟ್ಟು ದೂರ ಹೋಗು.

ಬೀರ: ಅಲಲ, ನಮ್ಮನ್ನು ಗೂಗಿ ಮಾಡಿದೇನು? ನೀನ್ಹೇಳೋದು ನಮಗೆ

ತಿಳಿಯಾಕಿಲ್ಲೇನು? ನೀನ್ಹೇಳೋದು ಆರೆ ಅಲ್ಲ, ಮುಸಲಮಾನಿ ಅಲ್ಲ. ಕಸ್ನೆಷು. ಛೀ ಬಿಡೋ ಮಂಗ, ನಿನ್ನ ಹರಭಗತರು ಎಚ್ಚೆನೋರಾದರೆ ಅವರೇನು ಮಾಡತಾರೋ ನೊಡತೇನಿ. ನೀನೇನು ಮಾಡ್ತೀಯೋ ಅದನ್ನೂ ನೋಡತೇನಿ. ನಿನ್ನ ಗಟ್ಟುಳ್ಳತನ ತಿಳಿಲೇಳು. ಇಕೋ ನೋಡು ಮುಟ್ಟತೇನಿ. (ಮುಟ್ಟುವನು.)

ಮಾಚಿದೇವ: ಪಾತಕಿ, ದುಷ್ಟವಾಸನೆಯಿಂದ ನನ್ನನ್ನು ಮುಟ್ಟಿದೆಯಾ? ಸೃಷ್ಟಿಗೀಶನ ಭಕ್ತಶ್ರೇಷ್ಠರ ಮಡಿಗಳ ಮುಟ್ಟೆಯನ್ನು ಮುಟ್ಟಿದವರ ಶಿರವನ್ನು ತರಿದು ಹಾಕುವೆನೆಂಬ ನನ್ನ ಪ್ರತಿಜ್ಞೆಯನ್ನು ಈಡೇರಿಸುವೆನು. ನೀಚಾ, ಭಂಡಾ, ಚಾಂಡಾಲ ಬಿದ್ದುಕೊಂಡಿರು. (ಮುಂದೆ ಬಂದು, ನೆರೆದವರಿಗೆ) ಶಿವಭಕ್ತರ ವಿಷಯದಲ್ಲಿ ದ್ರೋಹವನ್ನು ಆಚರಿಸುವವರ, ಅಥವಾ ಯಾರ ವಿಷಯದಲ್ಲಿಯೇ ಆಗಲಿ, ಅವರ ಮನ ನೋಯುವಂತೆ ನಿಂದ್ಯವನ್ನು ಆಚರಿಸುವ ದುಷ್ಟರ ಗತಿಯೇ ಹೀಗಾಗುವದು. ನಾನು ಸಾರಿಡೂರಿ ಹೇಳಿದರೂ ಈ ಪಾಮರನು ಮಾಡಿದ ಕ್ರೂರ ವ್ಯಾಪಾರವನ್ನು ನೆರೆದವರೆಲ್ಲರೂ ನೋಡಿದಿರಿ. ಅಭಿಮಾನದಿಂದ ಅನ್ಯರ ವ್ರತಭಂಗವನ್ನೂ ನಿಂದೆಯನ್ನು ಮಾಡುವ ಜಡಮತಿಗಳ ಅವಸ್ಥೆಯು ಹೀಗೇ ಆಗುವದೆಂಬುದನ್ನೂ ನೀವು ಶುದ್ಧಮನಸಿನಿಂದ ತಿಳಿದರೆ ನಾನೇ ಧನ್ಯನು. ನ್ಯಾಯಾನ್ಯಾಯ ಪರೀಕ್ಷೆಯಲ್ಲಿ ಕುಶಲರಾದ ತಾವು ಈ ಸಂದರ್ಭದಲ್ಲಿ ಯಾರದು ಅನ್ಯಾಯವೆಂಬದನ್ನು ತಿಳಿದುಕೊಂಡರೆ ನಾನು ಕೃತಾರ್ಥನಾಗುವೆನು. ಈಗ ಈ ಚಾಂಡಾಲನಿಂದ ಮೈಲಿಗೆಯಾಗಿರುವ ಈ ಬಟ್ಟೆಗಳನ್ನು ಮತ್ತೆ ಶುದ್ಧಮಾಡಲು ನದಿಗೆ ತೆರಳುವೆನು. (ಹೋಗುವನು.)

ಕಂಟ್ಯಾ: ಅಯ್ಯಪ್ಪ, ಈ ಅಗಸ ನಮ್ಮ ಬೀರನ್ನ ಕೊಂದ, ನನ್ನನ್ನೂ ಕೊಂದುಗಿಂದಾನು. ನಾನೂ ಈ ಬೀರನ್ಹಾಂಗ ಅರ್ಮೆಗುರ್ಮೆ ಮಾಡಿದ್ದರೆ ನನ್ನ ಗತೀನೂ ಇಂಗೆ ಆಗತಿತ್ತು. ನನ್ನೇಣತಿನೂ ರಂಡ್ಯಾಗುತ್ತಿದ್ದಳು. ನನ್ನ ಮಗ ಪರದೇಶಿ ಆಗುತ್ತಿದ್ದ. ನನ್ನೇಣತಿಗೆ ನಾನೊಬ್ಬನೇ ಗಂಡಾಗಿದ್ದೆ. ನನ್ನ ಮಗಗಾದರೂ ನಾನೊಬ್ಬನೇ ತಂದೆ ಆಗಿದೇನಿ. ಈ ಬೀರನ ಎಣಾದ ಗತಿಯೇನು? ಆ ! ಈ ಎಣಾ ನೋಡಿಕಂತ ಕುಂತರೆ ನನ್ನೂ ಕೊಂದಗಿಂದಾನು. ಈಗಲೇ ಓಡ್ಹೋಗಿ ಬಿಜ್ಜಳರಾಜನಿಗೆ ಈ ಸುದ್ದೀ ಹೇಳಿ ಆ ಅಗಸನ ಗತಿ ಮಾಡಸತೇನಿ. ಆ ! ಇದೇ ಬರಾಬರಿ ಕಾಣತೈತಿ. (ಹೋಗುವನು.)

(ದರ್ಬಾರ)

(ಪ್ರವೇಶಿಸಿ) ಸ್ವಾಮೀ, ದೇವರು, ಈ ಬಡವನ ಮೊರೆ ಕೇಳು. ನಾನು ಮತ್ತು ಬೀರ ಅಂಬೋ ಹುಡುಗ ದಾರೀ ಹಿಡಿದು ಓಗತಿದ್ದಿವಿ. ಆಗ ಮಡಿವಾಳ ಮಾಚಿದೇವನೆಂಬ ಶಿವಭಗತನು ಶಿವಶರಣರ ಅರಿವಿ ವಕ್ಕೊಂಡು ಮಟ್ಟಿ ಕಟ್ಟಿಕೊಂಡು ಬರತಿದ್ದ. ಅವನ್ನ ನೋಡದೆ ನಮ್ಮ ಹುಡುಗ ಬೀರ ಅವನ ಗಂಟು ಮುಟ್ಟಿದ. ಅಷ್ಟಕ್ಕೆ ಆ ಅಗಸನು ನಮ್ಮ ಬೀರನ್ನ ಕೊಂದಿರುವನು. ಇಂಗೆ ಶಿವಭಗತರು ಕೊಲ್ಲಹತ್ತಿದರೆ ಬಡವರಾದ ನಾವು ಹ್ಯಾಂಗೆ ಬದಕೋನು.

ಬಿಜ್ಜಳರಾಜ: **ಪದ**

ನೋಡಿದೇನೋ ಸಚಿವಮಣಿಯೆ ಮಾಚೀದೇವನು।
ರೂಢಿಗೀಶನೆನ್ನಗಣಿಸದಾದನೀಚನು ॥ ೧ ॥
ಮುಟ್ಟಿದರೇನಾಯಿತಯ್ಯ ಬಟ್ಟೆಗಂಟನು । ಕುಟ್ಟಬಹುದೆ
ನೃಪನಿಗಂಜದಂತೆ ತುಂಟನು ॥ ೨ ॥

ಬಸವೇಶಾ, ಎದದುರಿಗೆ ಬಂದ ನಿರಪರಾಧಿಯನ್ನು ಕ್ರೂರತನದಿಂದ ಕೊಂದ ನಿನ್ನ ಹರಭಕ್ತರ ಘೋರ ಕೃತ್ಯವನ್ನು ಕೇಳಿದೆಯಾ ? ಹೀಗೆ ನಿರಪರಾಧಿಗಳನ್ನು ಕೊಲ್ಲುವ ಆ ಮಾಚಿದೇವನೆಂಬ ಅಗಸನು ರಾಕ್ಷಸನೋ ಅಥವಾ ಮಾರಿಯೋ? ಇಲ್ಲವೆ ಮಾನವ ರೂಪದಿಂದ ಸಂಚರಿಸುವ ಹುಲಿಯೋ? ಹರಭಕ್ತರು ದುರಿತ ಕೃತ್ಯವನ್ನು ಮಾಡುವವರಲ್ಲವೆಂದು ಸಾರಿ ಹೇಳುವ ನಿನ್ನ ಮಾತಿನ ನಿಜತ್ವವು ಇದೇ ಏನು? ಶಿವಶಿವಾ, ರಾಜನಿಗೆ ತಿಳಿದರೆ ದಂಡಿಸುವನೆಂಬ ಅಂಜಿಕೆಯಿಲ್ಲದೆ, ಮನಬಂದಂತೆ ನಡೆಯುವ ಅಗಸನ ಅಹಂಕಾರವನ್ನು ಎಷ್ಟೆಂದು ಹೇಳಲಿ? ಮೈಲಿಗೆ ಬಟ್ಟೆಯನ್ನು ಒಗೆದು ಜೀವಿಸುವ ಅಗಸನಿಗೆ ಕತ್ತಿಯ ಸಾಧನೆಯು ಗೊತ್ತುಂಟೆ? ಛಪ್ಪನ್ನದೇಶದ ರಾಜರು ನನಗಂಜಿ ನಡೆಯುವದನ್ನು ತಿಳಿದೂ ತಿಳಿದೂ ಆ ಮಡಿವಾಳನು ತನ್ನ ಮದೋದ್ರೇಕವನ್ನು ನನ್ನ ಪಟ್ಟಣದಲ್ಲಿ ತೋರಿಸಬೇಕೆ? ತಿಳಿದೋ ತಿಳಿಯದೋ ಬಟ್ಟೆಗಳ ಮಟ್ಟೆಯನ್ನು ಮುಟ್ಟಿದರೆ ದೋಷವೇನು? ಬಟ್ಟೆಗಳೇನು ಕೆಟ್ಟು ಹೋಗುವವೇ? ಇನ್ನೊಮ್ಮೆ ಒಗೆದರೆ ಮಡಿಯಾಗುವದಿಲ್ಲವೇ? ಸೋಂಕಿದ ಮಾತ್ರದಿಂದ ಅವನನ್ನು ಕೊಲ್ಲಬಹುದೇ? ಆತನ ಇಂಥ ದುಷ್ಕ ೃತ್ಯಕ್ಕೆ ನಿನ್ನ ಬಲವೇ

ಕಾರಣವಾಗಿರಬಹುದಾಗಿ ತೋರುತ್ತದೆ. ಉಪಾಯವಿಲ್ಲ. ಆ ದುಷ್ಟನ ಸೊಕ್ಕನ್ನು ಮುರಿಯದಿದ್ದರೆ ನಾನು ಬಿಜ್ಜಳ ಭೂಪಾಲನೇ?

॥ ಪದ ॥ (ಕೇಳಲಹುದೆ ಜನನಿ)

ಏನಿದವನಿಪಾಲ । ಗುಣಲೋಲ ।
ನೀತಿಪಥವನುಳಿಯು ವರೆ ದಯಾಲ ॥ ಪಲ್ಲ ॥
ಶ್ರೀಮಡಿವಾಳ ಮಾಚೀದೇವ । ಸಾಮಾನ್ಯನೆ
ಬಿಡುಘನ ತರಕೋಪ ।
ಭೂಮಿಯಬಂಧವನೀಡಾಡಲ್ ।
ಪ್ರೇಮದಲವತರಿಸಿ ದನುದಯಾಲ ॥ ೧ ॥

ಬಸವೇಶ: ರಾಜನೇ, ನಿನಗೆ ಲೋಕದ ವ್ಯವಹಾರವೇ ಗೊತ್ತಿಲ್ಲವೆಂಬಂತೆ ಕಾಣುತ್ತದೆ. ಯೋಗ್ಯಾಯೋಗ್ಯ ವಿಚಾರವಿಲ್ಲದೆ ಮಾತಾಡಿದರೆ ಪ್ರಯೋಜನವೇನು? ಶಿವಭಕ್ತರ ಮಹಿಮೆಯನ್ನರಿಯದೆ ನೀನು ಬಡಬಡಿಸುವದು ತರವಲ್ಲ. ಮಾಚಿದೇವನು ಅಗಸನಾದರೂ ಆತನು ಸಾಮಾನ್ಯನಲ್ಲ. ಆತನು ಲೋಕದಲ್ಲಿಯ ಭವಬಂಧನವೆಂಬ ಮಲವನ್ನು ತೊಳೆದು ಭೂಮಿಯನ್ನು ಪವಿತ್ರವಾಗಿ ಮಾಡಲು ಬಂದಿರುವ ವೈಶ್ಯನಂತಿರುವನು. ಅಲ್ಲದೆ ಚತುರ್ಮುಖನ ಜಡೆಗೂದಲಿನ ಜನಿವಾರವನ್ನು ಹಾಕಿ, ಬ್ರಹ್ಮಶಿರಃ ಕಪಾಲವನ್ನು ಹಿಡಿದು ಜೀವಿಸುವ ಬ್ರಾಹ್ಮಣನೂ ಆಗಿರುವನು. ಮತ್ತು ಕೈವಲ್ಯರಾಜ್ಯವನ್ನಾಳುವ ಕ್ಷತ್ರಿಯನೂ ಆಗಿರುವನು. ರಾಜನೇ, ಬಹಳ ಹೇಳುವದೇನು? ಆತನ ಮಹಿಮೆಯನ್ನರಿಯಲು ವಿಷ್ಣು, ಬ್ರಹ್ಮೇಂದ್ರಾದಿಗಳಿಗೂ ಅಸಾಧ್ಯವಾಗಿರುವದು. ಇಂಥ ಮಹಾ ಮಹಿಮನು ಅನ್ಯಾಯವನು ಆಚರಿಸಬಹುದೇ? ಎಂದಿಗೂ ಇಲ್ಲ. ಆದಕಾರಣ ವ್ಯರ್ಥವಾದ ಸಂದೇಹಕ್ಕೂ, ಅಭಿಮಾನಕ್ಕೂ ಕೋಪಕ್ಕೂ ಈಡಾಗಬೇಡ.

ಮಂಚಣಾರ್ಯ: ರಾಜನೆ, ಬಸವೇಶನ ಅಭಿಮಾನವನ್ನು ನೋಡಿದೆಯಾ? ಆ ಅಗಸನು ಈ ಬಸವೇಶನ ವಸ್ತ್ರಗಳನ್ನು ಒಗೆದುಕೊಡುವ ದರಿಂದಲೂ, ಲಿಂಗಾಂಗಿಯಾಗಿರುವದರಿಂದಲೂ ಆ ಅಗಸನ ತಪ್ಪುಗಳೆಲ್ಲ ಒಪ್ಪತಕ್ಕಂಥವಂತೆ ! ಅವರು ಮಾಡಿದ್ದೇ ಪ್ರಾಧಾನ್ಯವಂತೆ !! ಅನ್ಯಾಯವಲ್ಲವಂತೆ !!! ರಾಜನೇ, ಏನು ಹೇಳಲಿ? ರಾಜಾಧಿರಾಜನಾದ ನಿನ್ನ ಬಾಯಿಯನ್ನೇ ಬಡಿಯಲು ಸಮರ್ಥನಾಗಿರುವ ಈ ಬಸವನ ಮುಂದೆ ಯಾರ ಆಟವು ನಡದೀತು? ತನ್ನ ಛಲವನ್ನು ಗೆಲ್ಲಿಸುವನೇ

ಹೊರತು ಶಿವಮತದವರ ತಪ್ಪನ್ನು ಒಪ್ಪುವದಿಲ್ಲ. ಇಂಥ ಕಾರ್ಯಸಾಧಕರ ಮುಂದೆ ನಿನ್ನ ಆಟವೇನು ನಡೆಯುವದು? ಈ ಬಗೆಯ ಗೋಮುಖ ವ್ಯಾಘ್ರಗಳಂತಿದ್ದ ಶಿವಮತದವರಿಗೆ ನಿನ್ನ ಶುದ್ಧವಾದ ಆಚರಣೆಯು ಈಡಾಗುವದೇ? ಕಷ್ಟ, ಕಷ್ಟ, ಬಹು ಕಷ್ಟ.

ಬಸವೇಶ: ಮಂಚಣಾರ್ಯ. ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ ಮಾತಾಡಿದಲ್ಲಿ ಫಲವೇನು? ಮುತ್ತು ಕೊಳಕು ಶಿಂಪಿನಲ್ಲಿ ಹುಟ್ಟಿದರೂ, ಅದರ ಹೊಳಪೇನಾದರೂ ಕಡಿಮೆಯಾಗುವದೇ? ಅಂತೇ ಆ ಮಾಚಿದೇವನು ಅಗಸನಾದರು ಆತನ ಯೋಗ್ಯತೆಯು ಈ ಅರಸನಿಗಿಂತ ಸಾವಿರಾರು ಪಾಲು ಹೆಚ್ಚಿನದಿರುವದು. ಶಿವಶರಣರೇನು ಸಾಮಾನ್ಯರೇ? ಅವರು ತೋರಿಕೆಯಲ್ಲಿ ಕುರೂಪಿಗಳಾಗಿದ್ದರೂ ಅಂತರಂಗದಲ್ಲಿ ಸುರೂಪಿಗಳಾಗಿರುವರು. ಅಜ್ಞಾನಾಂಧರಾದ ನಿಮ್ಮಂಥವರಿಗೆ ಆ ಮಹಾ ಮಹಿಮರ ರೂಪವು ಕಾಣಬರುವುದು ಹ್ಯಾಗೆ? ಹಗಲಿನ ಮಹತ್ವವನ್ನರಿಯದ ಗೂಗೆಯಂತೆ ಗುರುಗುಟ್ಟಿದರೆ ಆಗುವದೇನು?

ಮಂಚಣಾರ್ಯ: ಬಸವೇಶಾ, ನಾವು ಗೂಗಿಗಳು, ಅಜ್ಞಾನಿಗಳು, ನೀವು ಮಾತ್ರ ಜ್ಞಾನಿಗಳು. ಯಾಕೆ? ಕಂಡದ್ದನ್ನು ಹೇಳುವವರೂ, ನಿಜವನ್ನು ನುಡಿಯುವವರೂ ಆದ ನಾವು ಅಜ್ಞಾನಿಗಳಾದೆವು; ಆದರೆ ರಾಕ್ಷಸ ಕೃತಿಯನ್ನೂ ಪೈಶಾಚಕ ವೃತ್ತಿಯನ್ನೂ ಆಚರಿಸುವ ನೀವು ಮಾತ್ರ ಜ್ಞಾನಿಗಳೋ? ಇಂಥಾ ಬಾಯಿಬಡಕತನವನ್ನು ಎಲ್ಲಿ ಕಲಿತೆ. ರಾಜಾಧಿರಾಜನ ನ್ಯಾಯಸ್ಥಾನದಲ್ಲಿ ಸಹ ನಿನ್ನ ಮೋಸವೇ? ಇಂಥಾ ನಿನ್ನ ಕೃತಘ್ನತೆಗೆ ಯಾವ ಫಲವು ದೊರೆಯುವುದೋ ನಾಕಾಣೆ.

ಬಸವೇಶ: ಮಂಚಣ್ಣಾ, ಅಂತರಂಗದಲ್ಲಿ ದುರಭಿಮಾನವನ್ನೂ ಬಹಿರಂಗ ದಲ್ಲಿ ಸದಾಚಾರವನ್ನು ತೋರ್ಪಡಿಸುವ ನಿಮ್ಮಂಥ ವಂಚಕ ರಿಗೆ ಏನೆಂದು ಹೆಸರಿಡಬೇಕೋ ನಾನರಿಯೆ. ದುಷ್ಟರನ್ನು ಶಿಕ್ಷಿಸುವದು ರಾಕ್ಷಸ ಕೃತ್ಯವಾದ ಮೇಲೆ ಶ್ರೀ ರಾಮಚಂದ್ರನು ರಾವಣನನ್ನೇಕೆ ನಾಶ ಮಾಡಿದನು? ಪರಶಿವನು ಅಸುರರನ್ನೇಕೆ ನಾಶ ಮಾಡಿದನು? ಇಂಥಾ ದೋಷೈಕದೃಷ್ಟಿಗಳಾದ ನಿಮ್ಮ ವಿಚಾರಕ್ಕೆ ನನಗೆ ಬಹು ನಗೆ ಬರುತ್ತದೆ.

ಮಂಚಣಾರ್ಯ: ರಾಜನೇ. ನಿಮ್ಮ ಸಚಿವಶಿರೋಮಣಿಯಾಡುವ ನಿಂದಾಯುಕ್ತ ಮಾತುಗಳನ್ನು ಕೇಳಿದೆಯಾ? ಸಾಧು ಕವಚವನ್ನು ಹಾಕಿ ಕೊಂಡು ಕಂಡವರನ್ನು ಕೊಲ್ಲುವ ಇಂಥಾ ಕಟುಕರಿಗೆ ಆಶ್ರಯವೇ? ಈ ಸಂಗತಿಯನ್ನು ನಾನು ಪ್ರಾರಂಭದಲ್ಲೇ ಹೇಳಲಿಲ್ಲವೇ? ಅಯ್ಯೋ !

ನಿನ್ನ ಹಾಗೂ ನಿನ್ನ ಜೈನಮತದ ಪ್ರತಿಷ್ಠೆಯು ಎಲ್ಲಿ ಉಳಿಯಿತು? ನಾನು ಬೇಡವೆಂದರೂ ನಿನ್ನ ಕುಲನಾಶಕ್ಕೆ ಕೊಡಲಿಯ ರೂಪವಾದ ಬಸವೇಶನನ್ನು ಸಚಿವತನಕ್ಕೆ ನೇಮಿಸಿಕೊಂಡಿ. ಮೀರಿ ಹೋದದ್ದಕ್ಕೆ ಯಾರೇನು ಮಾಡುವರು? ಆಗುವದನ್ನು ಅನುಭವಿಸು.

ಬಿಜ್ಜಳರಾಜ: ಮಂಚಣಾರ್ಯ, ಬಂಜೆ ಭೂಮಿಯಲ್ಲಿಯ ನಂಜಿನಿಂದ ಬೀಜವು ಮೊಳೆಯದಂತೆ ನಿನ್ನ ಹಿತವಚನವು ಮೊದಲೇ ನನಗೆ ಸೇರಲಿಲ್ಲ; ಆದರೆ ನಾನು ಪ್ರಾರಂಭದಲ್ಲೇ ಹೇಳಿರುವೆನು. ಚತುರೋಪಾಯಂಗಳಲ್ಲಿ ಕಡೆಯದಾದ ದಂಡೋಪಾಯದಿಂದ ಈ ಶಿವಾನುಯಾಯಿಗಳನ್ನು ಸಂಹರಿಸದಿದ್ದರೆ ನನಗೆ ರಾಜನೆಂಬ ನಾಮವಾದರೂ ಯಾಕೆ? ಇಂಥಾ ದುರಾತ್ಮರ ಕುಲನಾಶಕ್ಕೆ ಕುಠಾರವನ್ನು ಸಜ್ಜುಗೊಳಿಸುವೆನು.

ಬಸವೇಶ: ರಾಜನೇ, ಕುಲವನ್ನು ನಾಶ ಮಾಡುವದೆಂದರೆ ಏನೆಂದು ತಿಳಿದಿರುವೆ? ಅನ್ಯಾಯಪಪ್ರವರ್ತಕರನ್ನು ದೇವರು ತಾನಾಗಿಯೇ ನಾಶ ಮಾಡುವನು. ನ್ಯಾಯದಿಂದ ನಡೆಯುವವರನ್ನು ನೀನೇಕೆ? ನಿನ್ನಂಥ ಲಕ್ಷಾವಧಿ ರಾಜರು ಕೂಡಿ ನಾಶ ಮಾಡಿದರೂ ಆಗದು. ಯಾಕಂದರೆ ಸತ್ಯಕ್ಕೆ ಸಾವಿಲ್ಲವಷ್ಟೇ? ಅಂತೇ ಸತ್ಯಪರಾಯಣರಾದ ನಿತ್ಯಪರಿಪೂರ್ಣ ಸದ್ಭಕ್ತರನ್ನು ಕತ್ತರಿಸುವೆನೆಂಬ ನಿನ್ನ ಮಿಥ್ಯಾ ವಾದಕ್ಕೆ ಸರಿರಾಜರು ನಕ್ಕಾರು. ಯುಕ್ತಾಯುಕ್ತಗಳನ್ನು ಪರಿಶೀಲಿಸಿ ನಡೆಯುವದೇ ರಾಜರಾದ ತಮಗೆ ಭೂಷಣವು.

ಬಿಜ್ಜಳರಾಜ: ಬಸವೇಶ, ನೀವು ಮಾತ್ರ ಸತ್ಯಪರಾಯಣರು. ನಾವು ಮಾತ್ರ ಮೂರ್ಖರಾದೆವು. ಆಗಲಿ, ಯಾರಲ್ಲಿ

ಸೇವಕನು: ಜೀಯಾ, ಏನಪ್ಪಣೆ.

ಬಿಜ್ಜಳರಾಜ: ಪ್ರಸಿದ್ಧ ಜಟ್ಟಿಗಳಾದ ಮಲ್ಲಜಟ್ಟಿಯನ್ನೂ ಜಯಜಟ್ಟಿಯನ್ನೂ ಕರೆದುಕೊಂಡು ಬಾ. (ಸೇವಕನು ಹೋಗುವನು.) ಬಸವೇಶ, ಒಳಗೆ ಹೆಗ್ಗಣವನ್ನಿಟ್ಟು ಮೇಲೆ ಮಣ್ಣು ಮುಚ್ಚಿ ಸರಿಮಾಡುವಂತೆ ತಪ್ಪನ್ನು ಮುಚ್ಚಿಕೊಳ್ಳುವೆಯಾ? ಇಂಥಾ ನಿನ್ನ ವಂಚಕತನವನ್ನು ದೂರ ಮಾಡದಿದ್ದರೆ ನಾನು ಬಿಜ್ಜಳ ಭೂಪಾಲನೇ?

ಬಸವೇಶ: ರಾಜನೇ, ಜ್ಞಾನವಿಲ್ಲದೆ ಮಾತಾಡಿದಲ್ಲಿ ಪ್ರಯೋಜನವೇನು? ಕಪಟಿಗಳಾದ ಚಾಡಿಕೋರರ ಮಾತುಗಳನ್ನು ಕೇಳಿ ವ್ಯರ್ಥವಾಗಿ ಏಕೆ

ಕೋಪ ಮಾಡುವೆ? ನೀನು ಹೀಗೆ ಅವಿವೇಕತನದಿಂದ ಕುಪಿತನಾದರೆ ತಕ್ಕ ಪ್ರತಿಫಲವು ನಿನಗೆ ದೊರೆಯುವದು.

(ಜಟ್ಟಿಗಳು ಪ್ರವೇಶಿಸಿ)

ಇಬ್ಬರೂ: ಮಹಾರಾಜನಿಗೆ ವಂದಿಸುವೆವು.

ಬಿಜ್ಜಳರಾಜ: ಜಟ್ಟಿಗಳೇ, ನಿಮಗೆ ಶುಭವಾಗಲಿ.

ಮಲ್ಲಜಟ್ಟಿ: ಮಹಾರಾಜನೇ, ಮದವೇರಿದಾನೆಯಂತೆ ಶೌರ್ಯಮದ ದಿಂದ ಮೆರೆಯುವ ನಮ್ಮನ್ನು ಅತಿ ತ್ವರೆಯಿಂದ ಕರೆಯಿಸಿದ ಕಾರಣವಾವುದು?ನಿಮಗೆ ಮೀರಿ ನಿಂತವರಾರಾದರೂ ಇದ್ದರೆ ಅತಿ ತ್ವರೆಯಿಂದ ಅಪ್ಪಣೆ ಕೊಡು. ಅವರನ್ನು ಕ್ಷಣಾರ್ಧದಲ್ಲಿ ಯಮಸದನಕ್ಕಟ್ಟುವೆವು ಪ್ರಭೋ.

ಬಿಜ್ಜಳರಾಜ: ಜಟ್ಟಿಗಳೇ, ನೀವು ಅಂಥಾ ಶೂರರೇ ಅಹುದು. ಅದಕ್ಕಾಗಿಯೇ ಸರ್ವ ಜಟ್ಟಿಗಳನ್ನುಳಿದು ನಿಮ್ಮಿರ್ವರನ್ನು ಕರೆಯಿಸಿರುವೆನು. ಆದರೆ ಈಗ ನಮ್ಮ ರಾಜ್ಯದಲ್ಲಿ ವಾಸಿಸುವ ಶಿವಮತದವರು ಕ್ರೂರ ರಾಕ್ಷಸರಂತೆ ನಿರಪರಾಧಿಗಳನ್ನು ಬಹುಪೀಡಿಸುವರು; ಅವರಲ್ಲಿ ಮಾಚಿದೇವನೆಂಬ ಅಗಸನು ಇಂದು ಕಾರಣವಿಲ್ಲದೆ ಒಬ್ಬ ಮನುಷ್ಯನನ್ನು ಕೊಂದಿರುವನು. ಆ ಕಾರಣ ನೀವು ತೀವ್ರ ಹೋಗಿ ಆತನ ಟೊಂಕದ ಮೇಲೆ ಒದೆದು, ನಿಮ್ಮ ಬಿಚ್ಚುಗತ್ತಿಯಿಂದ ಆತನ ತಲೆಯನ್ನು ತರಿದು ಬರಬೇಕು. ಇದಕ್ಕಾಗಿಯೇ ನಿಮ್ಮನ್ನು ಕರೆಯಿಸಿದೆನು.

ಮಲ್ಲಜಟ್ಟಿ: ಅಂಯ್ಯೋ ! ಮಂಡಲಾಧಿಪನಾದ ನಿನ್ನನ್ನು ಲಕ್ಷಕ್ಕೆ ತಾರದೆ ಕಂಡಕಂಡವರನ್ನು ತುಂಡರಿಸುವ ಆ ಪುಂಡನ ರುಂಡವನ್ನು ಚಂಡಾಡಿಬಿಡುವೆವು. ಪುಂಡರಾದ ನಮ್ಮ ಕೈಯಿಂದ ಗಂಡುಗಲಿಯಾದರೆ ಉಳಿದುಕೊಳ್ಳಲಿ.

ಜಯಜಟ್ಟಿ: ಮಹಾನ್, ಈ ಜಗತ್ತಿನಲ್ಲಿ ಶಿವಮತದವರ ನಾಮವೇ ಮಾಜಿ ಹೋಗುವಂತೆ ಮಾಡುವೆವು. ಈ ನಮ್ಮ ಹದನಾದ ಖಡ್ಗದಿಂದ ಬದುಕಿ ಉಳಿದರೆ ಅವರ ಪೂರ್ವಾರ್ಜಿತ ಪುಣ್ಯವೆಂದು ಭಾವಿಸು, ಪ್ರಭೋ.

ಬಿಜ್ಜಳರಾಜ: ವೀರರೇ, ಬೇಗ ತೆರಳಿ, ಆ ಮಡಿವಾಳನ ಶಿರಚ್ಛೇದನವನ್ನು ಮಾಡಿ ಶಿವಮತದವರ ಉದ್ಧಾಮತನವನ್ನು ಅಡಗಿಸಿ ಬನ್ನಿರಿ. ತಿಳಿಯಿತೆ?

ಜಟ್ಟಿಗಳು: ಆಜ್ಞೆ ಮಹಾನ್. (ಹೋಗುವರು.)

ಬಸವೇಶ : **ಪದ**

ನೃಪಾಲ ಪೇಳಲೇನು? ಇಂತು ಮೂರ್ಖನಾದೆಯಾ
ದಾನವಾಕ್ಯವ । ಪಿಶುಣನಾದವ । ತಾನು
ತೊರೆವವೋಲ್ ॥ ೧ ॥
ಶಾಂತಿಯನ್ನು । ಕಟುಕತಾನು । ತ್ಯಜಿಸುವಂದದಿ ॥ ೨ ॥

ರಾಜನೇ, ದಾನವಾಕ್ಯವನ್ನು ಪಿಶುಣನೂ ಶಾಂತಿಯನ್ನು ಕಟುಕನೂ ವೈರಾಗ್ಯವನ್ನು ಕಾಮುಕನೂ ತೊರೆಯುವಂತೆ, ವಿವೇಕತನಕ್ಕೆ ಲಕ್ಷಗೊಡದೆ ದುಷ್ಟತನಕ್ಕೆ ಆರಂಭಿಸಿದೆ. ಆದರೆ ನನ್ನ ಮಾತಿನ ಸತ್ಯತನವು ತಾನೇ ತಿಳಿಯುವದು. ಈಗೇಕೆ?

ಜಯಜಟ್ಟಿ: (ಜಯಜಟ್ಟಿ ಓಡಿ ಬಂದು) ಮಹಾರಾಜನೇ, ಮಲ್ಲಜಟ್ಟಿಯೂ ನಾನೂ ಆ ಮಾಚಿದೇವನ ಮೇಲೇರಿ ಹೋಗಲು ಆತನು ಕೆರಳಿದ ಸಿಂಹನಂತೆ ನಮ್ಮೀರ್ವರನ್ನೂ ಎದುರಿಸಿದನು. ಯುದ್ಧವಾಗುತ್ತಿರಲಿಕ್ಕೆ ತನ್ನ ಬಲವಾದ ಒಂದೇ ಹೊಡತದಿಂದ ಮಲ್ಲಜಟ್ಟಿಯನ್ನು ಕಡಿದು ಹಾಕಿದನು. ರಾಜಾಧಿರಾಜನೆ, ಆತನ ಪರಾಕ್ರಮವು ಮಿಗಿಲಾದದ್ದು. ಪ್ರತ್ಯಕ್ಷ ಯಮನಿಗೂ ಕೂಡ ಬೆದರತಕ್ಕವನಲ್ಲ. ಕಾರಣ ಅಂಜಿ ಜೀವವನ್ನು ಉಳಿಸಿಕೊಂಡು ಬಂದೆನಯ್ಯಾ ಮಹಾರಾಜನೆ.

ಬಿಜ್ಜಳರಾಜ: ಅಯ್ಯೋ ! ಜಗಜಟ್ಟಿಯೆನಿಸಿದ ಮಲ್ಲನನ್ನು ಆ ನೀಚನು ಕಡಿದನೇ? ಇಂಥಾ ಕ್ರೂರರನ್ನು ಯೋಗಿಗಳೂ ತೇಜಸ್ವಿಗಳೆಂದು ಬಸವೇಶನು ಕೈಯೆತ್ತಿ ಹೇಳುವನಲ್ಲ? ಬಸವೇಶಾ, ಇಂಥಾ ವೇಷಧಾರಿಗಳನ್ನು ಸಂಪಾದಿಸಿ ಏನು ಮಾಡಬೇಕೆಂದಿರುವೆ? ನೀನಿಷ್ಟು ವಂಚನೆಯಿಂದ ರಾಜದ್ರೋಹವನ್ನು ಮಾಡುವದಕ್ಕಿಂತ ನಾನೇ ರಾಜ್ಯವನ್ನು ನಿನಗೊಪ್ಪಿಸುವೆನು. ಸುಖದಿಂದ ನಿರಾತಂಕವಾಗಿ ರಾಜ್ಯವನ್ನಾಳು.

ಬಸವೇಶ: ರಾಜನೇ, ಪರರ ಮನಸ್ಸನ್ನು ನೋಯಿಸುವ ಮಾತುಗಳಿಂದ ಪ್ರಯೋಜನವೇನು? ಕಾರಣವಿಲ್ಲದೆ ಮನಸ್ಸನ್ನು ನೋಯಿಸಿದರೆ ಅದರ ಪ್ರಾಯಶ್ಚಿತ್ತವು ನಿನಗೆ ತಾನಾಗಿಯೇ ಆಗುವದು. ಮನುಷ್ಯನ ಮನಸ್ಸಿನಲ್ಲಿ ದುಷ್ಟ ಭಾವನೆಗಳು ತಡವಿಲ್ಲದೆ ಉತ್ಪನ್ನವಾಗುವವು ಆದರೆ ಸದ್ಭಾವನೆಗೆ ಕೆಲವು ಅವಕಾಶವೂ ಶ್ರಮವೂ ಹತ್ತುವದು. ಅಂತೇ ನೀನು ದುಷ್ಟರ ಚಾಡಿಗೆ ಕಿವಿಗೊಟ್ಟು ಬಾಯಿಗೆ ಬಂದಂತೆ ಬಡಬಡಿಸಿದರೆ ಆಗುವದೇನು? ಇದನ್ನೆಲ್ಲ ತಿಳಿದು ನೋಡು.

ಬಿಜ್ಜಳರಾಜ: ಬಸವೇಶಾ, ನಾವು ದುಷ್ಟರು, ದುಷ್ಟರ ಮಾತಿಗೆ ಕಿವಿಗೊಡುವವರು ಆಗಲಿ, ಆ ನನ್ನ ದುಷ್ಟತನಕ್ಕೆ ತಕ್ಕಂತೆ ಆ ಮಾಚಿದೇವನಿಗೆ ತಕ್ಕ ಶಿಕ್ಷೆಯನ್ನು ಮಾಡಿ ಬಿಡುವೆನು. ಬಸವೇಶಾ, ನಾನೆಷ್ಟು ಸತ್ಯತನದಿಂದ ನಡೆದರೂ ಅದೆಲ್ಲ ಅಸತ್ಯವೇ. ಆದಮೇಲೆ ಮಾಡುವುದೇನು? ಕೊಂಡಿ ಮಂಚಣ್ಣನು ನನ್ನ ಪರಮಾಪ್ತನು ! ಆತನ ಮಾತನ್ನು ಮೀರಿದ್ದರಿಂದಲೇ ನನಗಿಷ್ಟು ಸಂಕಟ ಒದಗಿರುವದು. ಆಗಲಿ, ಆ ಮಾಚಿದೇವನ ಪಾರುಪತ್ಯವನ್ನು ಮಾಡೇತೀರುವೆನು. ಸೇನಾಪತೇ, ನೀನು ಹೋಗಿ ನೀಲಗಿರಿಯನ್ನು ಹೋಲುವ ನಮ್ಮ ಮದ್ದಾನೆಯನ್ನು ಆ ನೀಚನೂ, ಕಟುಕನೂ, ವೇಷಧಾರಿಯೂ ಆದ ಮಾಚಿದೇವನ ಮೇಲೆ ಬಿಟ್ಟುಬಿಡು. ಆಮೇಲೆ ಆತನ ಶೂರತನವು ವ್ಯಕ್ತವಾಗಲಿ.

ಸೇನಾಪತಿ: ಪ್ರಭುವೇ, ಆ ನಮ್ಮ ಮದ್ದಾನೆಯ ಪಾದಹತಿಗೆ ಶಿಲ್ಕಿದನೆಂದರೆ ಪುನಃ ಜೀವಿಸುವದೆಂದರೇನು? ಆ ಖುಲ್ಲ ಮಾಚಿದೇವನನ್ನು ಎಲ್ಲೆಲ್ಲಿಯೂ ಬಿಡದೆ ಕೊಲ್ಲುವದು. ಪ್ರಭುಗಳ ಅಪ್ಪಣೆಯಂತೆ ಈಗಲೇ ಆನೆಯನ್ನು ಬಿಡಿಸಲಿಕ್ಕೆ ತೆರಳುವೆನು. (ಹೋಗುವನು.)

ಬಿಜ್ಜಳರಾಜ: ಬಸವೇಶಾ, ಇನ್ನು ದರ್ಬಾರನ್ನು ಬಂದು ಮಾಡಿ ನಿತ್ಯ ಕರ್ಮಾಚರಣೆಗೆ ತೆರಳುವಾ. (ಎಂದೆಲ್ಲರೂ ಹೋಗುವರು.)

(ಮಾಚಿದೇವನೋರ್ವನೇ ಪ್ರವೇಶಿಸಿ)

ಮಾಚಿದೇವ: ಅಯ್ಯೋ ! ಶಿವಶರಣರ ಬಟ್ಟೆಗಳನ್ನು ಮುಟ್ಟಿದ ಆ ಪಾಪಿಯನ್ನು ನಾನು ಕೊಂದದ್ದು ಅನ್ಯಾಯವೆಂದು ಬಗೆದು ಬಿಜ್ಜಳ ಭೂಪಲನು ನನ್ನನ್ನು ಸಂಹರಿಸಲು ಜಟ್ಟಿಗಳನ್ನು ಕಳುಹಿಸಬಹುದೇ? ದೇವಾ, ಯಾವ ಜಾತಿಯವರೇ ಆಗಲಿ, ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲವಷ್ಟೇ? ಅನ್ಯಾಯದಿಂದ ನಡೆದ ಬ್ರಹ್ಮನು ತನ್ನ ತಲೆಯನ್ನು ಈಶ್ವರನಿಂದ ಕಡಿಸಿಕೊಂಡನು. ಅನ್ಯಾಯದಿಂದ ವರ್ತಿಸಿದ ರಾವಣನನ್ನು ಶ್ರೀರಾಮಚಂದ್ರನು ಸಂಹರಿಸಿದನು. ಅನ್ಯಾಯವನ್ನು ಮಾಡುವ ಆ ಪಾಪಿ ಕಾಮನನ್ನು ಪರಶಿವನು ಸುಟ್ಟು ಭಸ್ಮ ಮಾಡಿದನು. ಅಂತೇ ಬಟ್ಟೆಯನ್ನು ಮುಟ್ಟಿದ ಆ ಪಾಪಿಯನ್ನೂ, ಜಟ್ಟಿಯನ್ನೂ ತರಿದೆನು ! ಸಚ್ಚಿದಾನಂದ, ಇದರಲ್ಲಿ ನನ್ನದು ಅನ್ಯಾಯವಿದ್ದರೆ ಕ್ಷಮಿಸದೆ ನನಗೆ ಕ್ರೂರ ಶಿಕ್ಷೆಯನ್ನು ವಿಧಿಸು. ಆ ಬಿಜ್ಜಳ ಭೂಪಾಲನು ಇನ್ನೂ ಏನೇನು ಮಾಡುವನೋ ತಿಳಿಯದು. (ಸುತ್ತಲೂ ನೋಡಿ) ಓಹೋ, ಅರಸನು ಆನೆಯನ್ನು ಸಿದ್ಧಗೊಳಿಸಿ ಅದನ್ನು ನನ್ನಮೇಲೆ ಬಿಟ್ಟು ತುಳಿಸಿ

ಕೊಲ್ಲುವದಕ್ಕೆ ಸೇನಾಪತಿಯನ್ನು ಕಳಿಸಿರುವನು. ಆಗಲಿ, ನಾನು ಹಿಡಿದಿರುವ ವ್ರತಕ್ಕೆ ಭಂಗ ಬಂದರೆ ಪ್ರಾಣ ಹೋದರೂ ನೆಟ್ಟಗೆ.

(ಸೇನಾಪತಿಯು ಪ್ರವೇಶಿಸಿ)

ಸೇನಾಪತಿ: **ಪದ**

ಬಿಡುಬಿಡುಕಡುಮೂರ್ಖ । ಜಡಮತಿಯೆ ಯಾಕೆ ತರ್ಕ।
ಒಡೆಯರಿಲ್ಲವೆನುತೆ । ಕಡುಶಡಕಿನಿಂದ ನಿಂತೆ ॥ ೧ ॥
ನಿನ್ನಹರನು ತಾನು । ಹಿರಣ್ಯಕಶ್ಯಪನನ್ನು ।
ಸನ್ನುತನರಹರಿತಾ । ಕೊಲ್ಲುವಾಗಳೆಲ್ಲಿಪೋದ ॥ ೨ ॥

ಎಲೆ, ಕಟುಕನೆ, ಈ ಕಲ್ಯಾಣ ಪಟ್ಟಣವನ್ನು ರಾಜನಿಲ್ಲದ ಪಟ್ಟಣವೆಂದು ಭಾವಿಸಿದೆಯಾ? ಮೂರ್ಖಾ, ನಿನಗಿಷ್ಟು ಸ್ವಾತಂತ್ರ್ಯವು ಬಂದಿತೇ? ನಿರಪರಾಧಿಗಳನ್ನು ಕೊಲ್ಲಲು ನಿನ್ನ ಕೈಗಳಾದರೂ ಹ್ಯಾಗೆ ಬಂದವೊ? ನೀನು ಹರಭಕ್ತನೆಂದಿಷ್ಟು ಅಹಂಕಾರವೇ? ನಿನ್ನ ಕೃತ್ಯಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಿದರೆ ಆ ನಿನ್ನ ಹರನೇನಾದರೂ ಉಳಿಸಿಕೊಳ್ಳುವನೇನೋ? ಆತನಷ್ಟು ಬಲಿಷ್ಠನಾದರೆ ತನ್ನ ಭಕ್ತನಾದ ಹಿರಣ್ಯಕಶ್ಯಪನನ್ನು ನಾರಸಿಂಹನು ಕೊಲ್ಲುವಾಗ್ಗೆ ಎಲ್ಲಿ ಅಡಗಿದ್ದನು? ಇಂಥಾ ಹೇಡಿಯನ್ನವಲಂಬಿಸಿದ ನಿನಗಿಷ್ಟು ಅಂಹಕಾರವೇ?

ಮಾಚಿದೇವ: ಎಲೋ ನೀಚಾ, ನನ್ನ ಪರಶಿವನನ್ನು ಜರೆಯುವೆಯಾ? ಆ ನನ್ನ ಪರಶಿವನು ಹೇಡಿಯಾದರೆ, ಹಿರಣ್ಯಕಶ್ಯಪನನ್ನು ಕೊಂದ ನಾರಸಿಂಹನನ್ನು ಸಂಹರಿಸುತ್ತಿದ್ದನೇ? ಸರ್ವಜನಮನ ಸಂಚಾರಿಯಾಗಿ ಯಶಸ್ಸನ್ನು ಸೂರೆಗೊಳ್ಳುವ ಕಾಮನನ್ನು ಗೆಲ್ಲುತ್ತಿದ್ದನೇ? ಮೂಢಾ, ಇಂಥಾ ದೈವದ್ರೋಹದ ಮಾತುಗಳನ್ನಾಡಿದರೆ ನಿನ್ನ ತಲೆಯನ್ನು ಚಂಡಾಡಿ ಬಿಡುವೆನು. ವ್ಯರ್ಥ ಜೀವಕ್ಕೆ ಎರವಾಗಬೇಡ ಕಂಡೆಯಾ !

ಸೇನಾಪತಿ: ಎಲೋ, ಆ ನಿನ್ನ ಪರಶಿವನ ಪೌರುಷವನ್ನು ಹೇಳಿ ಬೆದರಿಸ ಬಂದರೆ ನಾನು ಬೆದರುವವನಲ್ಲ. ಆ ನಿನ್ನ ಪರಶಿವನು ಗಂಡುಗಲಿಯಾದರೆ ತನ್ನಿಂದ ಉತ್ಪನ್ನವಾದ ಭಸ್ಮಾಸುರನನ್ನು ಸಂಹರಿಸಲಾರದೆ ಹರಿಯ ಸಹಾಯವನ್ನು ಬಯಸಿ ಯಾಕೆ ಓಡಿ ಹೋದನು? ಅಂಜಿ ಗಿಡದ ಮರೆಯಲ್ಲೇಕೆ ನಿಂತನು? ಹರಿಯು ಸಹಾಯಕನಾಗದಿದ್ದರೆ ಆ ನಿನ್ನ ಹರನ ಹರಣವೇ ಹಾರಿಹೋಗುತ್ತಿತ್ತು. ಹೀಗೆ ನೀನೂ ಆ ಬಡಹರನಂತೆ ನಟಿಸಿದರೆ ನಾನು ಬಿಡುವೆನೇ? ನಿನ್ನ ಇಷ್ಟದೈವವಾದ ಹರನನ್ನು ನೆನೆ.

ಮಾಚಿದೇವ: ಎಲೋ ಸ್ವಾಮಿನಿಂದಕ, ಹರನನ್ನು ಜರೆದು, ಹರಿಯನ್ನು ಹೊಗಳುವೆಯಾ? ಹರಿಯು ಯಾರೆಂದು ಭಾವಿಸಿರುವೆ? ಪರಶಿವನ ಅರ್ಧಾಂಗಿಯಾಗಿರುವದೂ, ಆ ಹರಿಗೆ ನಾರಿಯೆಂಬ ನಾಮವಿರುವದೂ ನಿನಗೆ ಗೊತ್ತಿಲ್ಲವೆಂಬಂತೆ ತೋರುತ್ತದೆ. ತಿಳಿಸಿ ಹೇಳಿದರೂ ಕೇಳದೆ ಬಲುಮೆಯನ್ನು ಮಾಡಲು ಬಂದಿರುವೆಯಾ? ಇಕೋ, ಈ ನಿಶಿತವಾದ ಖಡ್ಗಕ್ಕೆ ನಿಶ್ಚಯವಾಗಿ ನಿನ್ನನ್ನು ಆಹುತಿ ಕೊಡುವೆನು. ಬೇಗ ಎದುರಾಗು.

ಸೇನಾಪತಿ: ಮೂಢಾ, ನಿನಗೇತಕ್ಕೆ ಇಷ್ಟು ಶೌರ್ಯ? ಹನುಮಂತನ ಮುಂದೆ ಹಾರುವ ಗುಬ್ಬಿಯು ಶೆಟೆದಂತೆ ನಿನ್ನ ಪರಾಕ್ರಮದ ರೀತಿಯಾಗಿರುವದು. ಇಕೋ, ಈ ನನ್ನ ಮದ್ದಾನೆಯನ್ನು ಬಿಟ್ಟಿರುವೆನು. ಇದರಿಂದ ನೀನು ಪಾರದರೆ ನೀನೇ ಸುಕೃತ ಶಾಲಿಯೆಂದು ಭಾವಿಸು.

ಮಾಚಿದೇವ: (ದೇವರಿಗೆ) ದೇವಾ, ನೀಲಮೇಘದಂತಿರುವ ಈ ಮದಿಸಿದಾನೆಯನ್ನು ಈ ಮದಾಂಧನು ನನ್ನನ್ನು ವಧಿಸಲಿಕ್ಕೆ ಬಿಟ್ಟಿರುವನು. ನಾನು ನಿರಪರಾಧಿಯಿದ್ದದ್ದೇ ನಿಜವಿದ್ದರೆ ಈ ಮದವೇರಿದಾನೆಯನ್ನು ವಧಿಸುವಷ್ಟು ಬಲವನ್ನು ಕೊಡು. (ಆನೆಗೆ) ಎಲೋ ಗಜರಾಜನೇ, ನಿರಪರಾಧಿಯಾದ ನನ್ನನ್ನು ಕೊಲ್ಲಲು ಬಂದೆಯಾ? ಪಾಪ ! ನೀನೇನು ಮಾಡಿ? ನಿನ್ನ ದುಷ್ಟ ಒಡೆಯನ ಆಜ್ಞಾಪಾಲನಕ್ಕಾಗಿ ಇಂಥಾ ಕೃತ್ಯಕ್ಕೆ ಅಣಿಯಾಗಿ ನಿಂತಿರುವಿ. ನೀನಿಷ್ಟು ಸ್ವಾಮಿಭಕ್ತನಾದುದರಿಂದಲೇ ದೇವರು ನಿನಗೆ ಇಂಥಾ ಶರೀರಸೌಭಾಗ್ಯವನ್ನು ಕೊಟ್ಟಿರುವನು. ನೀನು ಪಶುವಾದರೂ ಯುಕ್ತಾಯುಕ್ತವನ್ನು ವಿಚಾರ ಮಾಡು. ಆ ಮೇಲೆ ನಿನ್ನ ಸ್ವಾಮಿಕಾರ್ಯದಲ್ಲಿ ಕೈ ಇಡು. (ಆನೆಯು ನಿಲ್ಲುವದು.)

ಸೇನಾಪತಿ: ದುಷ್ಟ ಗಜವೇ, ನಿನ್ನನ್ನು ಸಲಹಿ ವೈರಿಗಳ ಮೇಲೆ ಬಿಟ್ಟರೆ ವೈರಿಯ ಮೋಸದ ಮಾತಿಗೆ ಮರುಳಾಗಿ ಮೋರೆಯನ್ನು ತಿರುಗಿಸುವೆಯಾ? ನೀನು ಹೀಗೆ ಕೃತಘ್ನತೆಗೆ ಗುರಿಯಾದರೆ ನಿನ್ನನ್ನು ತೋಫಿನ ಬಾಯಿಗೆ ಕೊಡುವೆನು. ಇದನ್ನು ಗ್ರಹಿಸಿ ನಿನ್ನ ಕರ್ತವ್ಯವನ್ನು ಮಾಡು.

(ಆನೆಯು ಮಾಚಿದೇವನ ಮೇಲೆ ಬರಲು ಮಾಚಿದೇವನು ಅದನ್ನು ಹಿಡಿದು ಕೆಡವಿ ಕೊಲ್ಲುವನು)

ಮಾಚಿದೇವ: ಎಲೋ ಕ್ರೂರ ಜಂತುವೇ, ಅಜ್ಞಾನಿಯಾದ ನಿನ್ನ ಒಡೆಯನ ಋಣಮುಕ್ತತೆಗಾಗಿ ಸಾವಿಗೀಡಾದೆಯಾ? ನೀನು ಧರ್ಮಾಧರ್ಮ ವಿಚಾರವುಳ್ಳ ಪ್ರಾಣಿಯಾದದ್ದರಿಂದಲೇ ಮೊದಲಿಗೆ ಧರ್ಮಕ್ಕೆ ಕಟ್ಟು ಬಿದ್ದಿ. ಆಮೇಲೆ ಒಡೆಯನ ನಿಷ್ಠುರಕ್ಕೆ ಈಡಾಗಿ ಅಸುವಂ ತೊರೆದಿ.

ಆದರೆ ಪಾಪಪುಣ್ಯ ವಿಚಾರವುಳ್ಳ ನಿನಗೆ ಸದ್ಗತಿಯಾಗಲಿ. (ಸೇನಾಪತಿಯನ್ನು ನೋಡಿ) ಆ ಕಳ್ಳನು ಎಲ್ಲಿಯೋ ಓಡಿಹೋದನು. ಆದರೆ ಶಿವಶರಣರ ಬಟ್ಟೆಗಳನ್ನು ಕೊಡುವ ಕಾಲವು ಸಮೀಪಿಸಿದ್ದರಿಂದ ಈಗಲೇ ತ್ವರೆ ಮಾಡಿ ತೆರಳುವೆನು. (ಹೋಗುವನು.)

(ದರ್ಬಾರಿನಲ್ಲಿ ರಾಜನೂ, ಬಸವೇಶನೂ ಪ್ರವೇಶಿಸುವರು)

(ಸೇನಾಪತಿಯು ಬಂದು)

ಸೇನಾಪತಿ: ಮಹಾರಾಜನೇ, ವಂದಿಸುವೆನು. ಮಹಾನ್, ತಮ್ಮ ಆಜ್ಞಾನು ಸಾರವಾಗಿ ನಮ್ಮ ಮದ್ದಾನೆಯನ್ನು ಆ ಮಾಚಿದೇವನ ಮೇಲೆ ಬಿಡಲು, ಆತನು ಕಾಲನಂತೆ ಕುಪಿತನಾಗಿ ಆನೆಯನ್ನು ಹಿಡಿದೆಳೆದು ಕೆಡವಿ ಅದನ್ನು ಕೊಂದು ಹಾಕಿದನು. ಆತನ ಉಪಟಳಕ್ಕೆ ತಡೆಯದೆ ನಾನು ಜೀವವನ್ನು ಉಳಿಸಿಕೊಂಡು ಬಂದೆನು. ಪ್ರಭುವೇ, ಆ ಮಾಚೀದೇವನು ಸಮಾನ್ಯನಲ್ಲ. ಆತನು ಮಹಾ ಮಹಿಮಾವಂತನು. ಬೆಂಕಿಯನ್ನು ಪರೀಕ್ಷಿಸಿದಂತೆ ಆತನನ್ನು ಪರೀಕ್ಷಿಸಿದಂತಾಯಿತು. ಆ ಕಡು ಮಹಿಮನ ಕೋಪಕ್ಕೆ ಪಾತ್ರರಾದವರು ಪ್ರಾಣಕ್ಕೆ ಸಂಚುಗಾರವನ್ನು ಕೊಟ್ಟಂತೆಯೇ ಸರಿ. ಅದರಿಂದ ಆತನೊಡನೆ ಉದ್ದಾಮತನವು ತರವಲ್ಲವೆಂದು ತೋರುವದು.

ಬಸವೇಶ: **ಪದ**

ಜನಪಾಲಮನ ನಮದಾಯ್ತೆ ॥ ಪಲ್ಲ ॥
ಅನುಜವಿಭೀಷಣ । ಗನುಮತಿಕೊಡದಲೆ ।
ಘನಜಡಮತಿರಾ । ವಣನಳಿದ ॥ ೧ ॥
ಖ್ಯಾತನೆ ಚಾಡಿಯ । ಮಾತನುಕೇಳುತೆ ।
ಪಾತಕಿಯಾದೆನೀ । ನೀತೆರದೆ ॥ ೨ ॥

ರಾಜನೇ ತಮ್ಮನಾದ ವಿಭೀಷಣನ ಮಾತುಗಳನ್ನು ಲಾಲಿಸದೆ ಕೆಟ್ಟ ರಾವಣನಂತೆ, ಗುರುಗಳಾದ ಭೀಷ್ಮ, ದ್ರೋಣರ ಮಾತುಗಳನ್ನು ನಂಬದೆ ಕೆಟ್ಟ ಕೌರವನಂತೆ ನೀನು ವಿಷವನ್ನು ಪರೀಕ್ಷಿಸಿದಂತೆ ಪರೀಕ್ಷಿಸಿ, ಕಡೆಗೆ ಅವಮಾನಕ್ಕೆ ಗುರಿಯಾದಿ. ನೀಚರಾದ ಚಾಡಿಕೋರರ ಮಾತುಗಳಿಂದ ಯಾವ ಕೇಡು ಸಂಭವಿಸುವದೆಂಬದು ಈಗ ನಿದರ್ಶನಕ್ಕೆ ಬಂದಿತೇ? ಲೋಕದಲ್ಲಿ ಅಜ್ಞಾನಾಂಧರಾದವರಿಗೆ, ವಿದ್ವಾಂಸರು ಹೇಳುವ ಬುದ್ಧಿವಾದವನ್ನು ತೊರೆದವರಿಗೆ ಸುಖವುಂಟೆ? ಗೂಬೆಗಳಿಗೆ

ಸೂರ್ಯಕಿರಣಗಳು ವಿಷರೂಪವಾಗಿ ಹಗೆಯಾಗಿರುವ ಹಾಗೆ, ಮದಾಂಧರಾದ ಕುಜನರಿಗೆ ಶಿವಶರಣರ ಮಹಿಮೆಯು ತಿಳಿಯಬರುವದೆಂತು? ರಾಜನೇ, ಹಿಂದು ಮುಂದು ಯೋಚಿಸದೆ ಅನ್ಯಾಯವಾಗಿ ಅವಮಾನಕ್ಕೆ ಗುರಿಯಾದೆಯಲ್ಲ? ಶಿವಭಕ್ತರ ಮಹಿಮೆಯನ್ನು ತಿಳಿದವರಾರುಂಟು? ಬಿಜ್ಜಳರಾಜನೆ, ಇನ್ನುಮೇಲಾದರು ಸತ್ಪುರುಷರಲ್ಲಿ ಅಹಂಕಾರವನ್ನು ವ್ಯಕ್ತಪಡಿಸಬೇಡ. ಯಾವ ಜಾತಿಯವರೇ ಆಗಲಿ, ಜ್ಞಾನಕ್ಕೂ ಭಕ್ತಿಗೂ ಜಾತಿಯಿಲ್ಲವೆಂಬದನ್ನೂ, ಅವಿವೇಕಕ್ಕೆ ಕ್ಷಮೆ ಇಲ್ಲವೆಂಬದನ್ನೂ ತಿಳಿದು, ನ್ಯಾಯ ರೀತಿಯಿಂದ ನಡೆದರೆ, ನಿನಗೆ ಯಾರ ಭಯವೂ ಇಲ್ಲ.

ಬಿಜ್ಜಳರಾಜ: ಬಸವೇಶಾ, ಅರಿಯದೆ ಮಾಡಿದ ನನ್ನ ತಪ್ಪನ್ನು ಕ್ಷಮಿಸು. ಮಾಚಿದೇವನು ಸಾಮಾನ್ಯನಲ್ಲ. ಅಲ್ಪರ ಬುದ್ಧಿಯು ಅಲ್ಪವೇ ಎಂಬಂತೆ ಅಲ್ಪನಾದ ನಾನು ಅವಿವೇಕಕ್ಕೆ ಈಡಾದೆನು. ನನ್ನನ್ನು ಕ್ಷಮಿಸುವೆಯಾ?

ಬಸವೇಶ: ರಾಜನೇ, ನಿನ್ನ ಆಜ್ಞೆಯಂತೆ ನಡೆಯುವ ನನ್ನ ಕ್ಷಮೆಯನ್ನು ಬೇಡುವದಕ್ಕಿಂತ ಆ ಪರಶಿವನ ಕ್ಷಮೆಯನ್ನು ಬೇಡು. ಶಿವನೂ ಆತನ ಭಕ್ತರೂ ದಯಾಳುಗಳು. ತಪ್ಪನ್ನು ಒಪ್ಪಿದರೆ ಅವರು ಕ್ಷಮಿಸುವರು. ಇದೇ ಸದ್ಭಾವನೆಯು ನಿನ್ನಲ್ಲಿ ಸದಾ ಸ್ಥಿರವಾಗಿರಲಿ.

ಬಿಜ್ಜಳರಾಜ: ಬಸವೇಶಾ, ಇನ್ನು ದರ್ಬಾರನ್ನು ಬಂದು ಮಾಡಿ ನಿತ್ಯ ಕರ್ಮಾಚರಣೆಗೆ ತೆರಳೋಣ ನಡೆ. (ಎಂದೆಲ್ಲರೂ ಹೋಗುವರು.)

===***===***===

೪ನೇ ಅಂಕವು.

(ಕಲಾವತಿ ವೇಶ್ಯೆಯೂ, ಇಬ್ಬರು ದಾಸಿಯರೂ ಪ್ರವೇಶಿಸುವರು.)

ದಾಸಿಯರು: **ಪದ**

ಮಂಜುಲವಾಣಿ । ಮಂಗಲವೇಣಿ । ಬಾರೆಭಾಮಿನಿ ॥
ವಾರಿಜನೇತ್ರೆ । ಸುರಚಿರಗಾತ್ರೆ । ಪರಮಪವಿತ್ರೆ ॥ ಬಾರೆ ॥
ಇಂದು ಸುಶೋಭಿಪ । ಸುಂದರಿ ನಿನ್ನಯ ।
ಇಂದೀ ವರಾನನ । ಕಂದಿದೇತಕೆ ॥
ಮನಸಿಜನಂ ಘನಸತಿರತಿಸಮಸುರೂಪಳೆ । ರತಿ ।
ಸಮಸುರೂಪಳೆ । ಬಿನದವನೀಪೊಂದದಲಿಂತು ।
ನೊಂದಿದಪರಿ । ಪೇಳೆಮೋದದಿ ॥ ೧ ॥

ಕಮಲೆ: ಸಖಿ, ಕಲಾವತಿ, ಮೌನವೇಕೆ? ತಾವರೆಯಂಥ ನಿನ್ನ ಮುಖವು ಇಂದು ಯಾಕೋ ಕಂದಿದಂತಾಗಿರುವದು. ಇದಕ್ಕೆ ಕಾರಣವೇನು?

ಕಲಾವತಿ: **ಪದ**

ಪೇಳಲೇನು ಸಖಿಯೆ ಯನ್ನ ಮನದದುಃಖವ ।
ಹಾಳುಲಜ್ಜೆ ಬಹಳಪಿಧದಿ । ಬಾಧೆಗೈವುದು ॥ ೧ ॥
ವಾರನಾರಿ ಬನಕೆಬಂದ ಘೋರದುಃಖವ ।
ದೂರಗೈವರಾರಕಾಣೆ । ಎಂತು ಸಹಿಸಲಿ ॥ ೨ ॥

ಸಖೀ, ನನ್ನ ಚಿಂತೆಗೆ ಕಾರಣವಾಗಿರುವ ಸಂಗತಿಯನ್ನು ಹೇಳಲಿಕ್ಕೆ ಲಜ್ಜೆಯು ಬಹು ಬಾಧಿಸುವದು. ಮಾಡಲೇನು?

ಚಪಲೆ: ಕಮಲೇ, ಚಿಂತೆಯ ಕಾರಣವು ಗೊತ್ತಾಗಲೊಲ್ಲದೇನು?

ಕಮಲೆ: ಚಪಲೆ, ಚಪಲಳಾದ ನೀನೇ ಹೇಳು.

ಚಪಲೆ: ಕಮಲೇ, ವಾರನಾರಿಯರ ಚಿಂತೆಗೆ ವಿಟಪುರುಷರ ಅಭಾವವೇ ಕಾರಣವಲ್ಲವೇ? ಅಂತೇ ಇವಳಿಗೆ ಕಾಮಬಾಧೆಯು ತಲೆಗೇರಿದೆ. ಅದಕ್ಕಾಗಿಯೇ ಇಷ್ಟು ಚಿಂತೆಗೀಡಾಗಿರುವಳು.

ಕಮಲೆ: ಚಪಲೆ, ನೀನು ನಿನ್ನ ಹೆಸರಿಗೆ ತಕ್ಕಂತೆ ಇರುವೆ ನೋಡು ! ನೀನಿಷ್ಟು ಚಾಪಲ್ಯವುಳ್ಳವಳಾಗಿರುವದರಿಂದಲೇ ನಿನ್ನ ತಾಯಿ ತಂದೆಗಳು ನಿನಗೆ ಚಪಲೆಯೆಂಬ ಬಹು ಯೋಗ್ಯವಾದ ಹೆಸರನ್ನಿಟ್ಟಿರುವರು.

ಕಲಾವತಿ: ಚಪಲೆ, ಹೊತ್ತಲ್ಲದ ಹೊತ್ತಿನಲ್ಲಿ ಸಹ ನಿನ್ನ ಹುಡುಗಾಟಿಕೆ ಯೇನೇ? ಸಾಕು, ಸುಮ್ಮನೆ ಬಾಯಿ ಮುಚ್ಚು.

ಚಪಲೆ: ಸಖಿ ಕಲಾವತಿ, ನಿಜವನ್ನು ನುಡಿದರೆ ಕೋಪವೇಕೆ? ನನ್ನ ಮಾತು ನಿಜವಿದ್ದರೇ ನನ್ನ ಹೆಸರು ಚಪಲೆಯೆಂದು ಕರಿ.

ಕಮಲೆ: ಚಪಲೆ, ನೀನು ಈ ಸಖಿಯ ಮನಸಿನ ಮರ್ಮವನ್ನು ತಿಳಿದೆಯಾದ್ದರಿಂದ ನಿನಗೆ ಸರಸ್ವತಿಯೆಂಬ ಬಿರುದು ಬಹು ಚನ್ನಾಗಿ ಒಪ್ಪುತ್ತದೆ. ಆದರೆ ಇದರ ಸಂತೋಷಕ್ಕಾಗಿ ನಿನಗೆ ಯಾವ ಪಾರಿತೋಷಕವನ್ನು ಕೊಡಲಿ?

ಚಪಲೆ: ನಿನ್ನ ಮನಸು ಮೆಚ್ಚಿದ್ದಾದರೆ ಈ ಸಖಿಯ ಕಂಠದೊಳಗಿನ ಮುತ್ತಿನ ಹಾರವನ್ನು ಕೊಡಿಸು.

ಕಲಾವತಿ: ಸಖಿ ಚಪಲೆ, ನನ್ನ ಮನೋಬಯಕೆಯು ಪೂರ್ಣವಾದರೆ ಒಂದೇಕೆ, ಇಂಥಾ ನೂರು ಮುತ್ತಿನ ಸರಗಳನ್ನು ಕೊಡುವೆನು.

ಕಮಲೆ: ಸಖಿ ಕಲಾವತಿ, ಹೀಗೆ ನಿಮಗೆ ವಿಟರಾಜರ ಅಭಾವವಾಗಲಿಕ್ಕೆ ಯಾವ ಕಾರಣವಿರಬಹುದು? ನೀವು ವೇಶ್ಯೆಯರಿದ್ದು, ನಿಮ್ಮ ಚಿಂತೆಯು ಪುರುಷರಿಗಿರಬೇಕು; ಹೀಗಿದ್ದು ನೀವೇ ಪುರಷರ ಸಲುವಾಗಿ ಚಿಂತೆ ಮಾಡುವಿರಲ್ಲ? ಇದನ್ನು ನೋಡಿದರೆ ಕಾಲಗತಿಯೇ ವಿಚಿತ್ರವಾದಂತೆ ಕಂಡುಬರುತ್ತದೆ.

ಚಪಲೆ: ಕಮಲೇ, ಕಾಲವೇನು ಮಾಡೀತು? ಬಸವೇಶನು ಬಿಜ್ಜಳ ರಾಜನಿಗೆ ಮಂತ್ರಿಯಾದದ್ದೇ ಇದಕ್ಕೆ ಮೂಲ ಕಾರಣವಾಗಿರುವದು. ಆತನು ಈ ಪಟ್ಟಣಕ್ಕೆ ಬಂದನಂತರ ಇಂಥಾ ದುರ್ವಿಲಾಸಗಳಿಗೆ ಸ್ಥಳವೆ ಇಲ್ಲದಾಗಿದೆ. ಮಾಡುವದೇನು?

ಕಲಾವತಿ: ಚಪಲೇ, ನೀನು ಬಹು ಬುದ್ಧಿವಂತಳು. ನನ್ನ ಮನಸ್ಸಿನಲ್ಲಿ ಬಂದ ಸಂಶಯವನ್ನೇ ಕಂಡು ಹಿಡಿದಿ. ಅದರಿಂದ ಕಮಲೆಯು ಕೊಟ್ಟ ಸರಸ್ವತಿಯೆಂಬ ಬಿರುದು ನಿನಗೆ ಬಹು ಚನ್ನಾಗಿ ಒಪ್ಪುತ್ತದೆ. ಸಖಿ, ನಮ್ಮಂಥ ವೇಶ್ಯೆಯರ ಸುಖದಲ್ಲಿ ಮಣ್ಣುಗೂಡಿಸುವುದಕ್ಕೆ ಆ ಬಸವೇಶನು

ಮಂತ್ರಿಯಾದದ್ದೇ ಕಾರಣವಾಯಿತಲ್ಲವೇ? ನಮ್ಮಂಥ ಅಬಲೆಯರ ಗೋಳನ್ನು ಕಟ್ಟಿಕೊಳ್ಳುವ ಆ ಬಸವನು ಹಾಳಾಗಿ ಹೋಗಲಿ.

ಚಪಲೆ: ಸಖೀ, ಸೊಗಸುಗಾರರಾದ ನೀವು ಪುರುಷರನ್ನು ವಶಪಡಿಸಿಕೊಳ್ಳುವ ಕಸಬನ್ನು ತೋರಿಸದೆ ಸುಮ್ಮನೆ ಬಸವೇಶನನ್ನು ಶಪಿಸಿದರೆ ಆಗುವದೇನು? ನಿನ್ನ ಓರೆ ನೋಟವೆಂಬ ಬಾಣದಿಂದ ಪುರುಷರೆಂಬ ಮೃಗಗಳನ್ನು ಹೊಡೆದು ಕೆಡಪಿದರಾಯಿತು. ಇದಕ್ಕೇಕೆ ಚಿಂತೆ?

(ಕುಶಲಮತಿಯೆಂಬ ವಿಟನು ಪ್ರವೇಶಿಸಿ,)

ವಿಟ: (ಆತ್ಮಗತಂ) ಆಹಾ ! ಈ ಗೃಹವು ಯಾರದಾಗಿರಬಹುದು? ವೇಶ್ಯಾಗೃಹವೇ ಇರಬಹುದು; ಯಾಕಂದರೆ ಇಂಥಾ ಅಂದಕ್ಕೆ ಮನೆತನಸ್ಥರಾದವರು ಅನುವು ಕೊಡುವರೇ? ಇರಲಿ. ಅರಿಯದವನಂತೆ ಇಲ್ಲಿಯೇ ತಿರುಗಾಡುತ್ತ ನಿಜ ಸಂಗತಿಯನ್ನು ತಿಳಿದುಕೊಳ್ಳುವೆನು. (ಎಂದು ತಿರುಗಾಡುವನು.)

॥ **ಪದ** ॥

ಈತನ್ಯಾರೆ ಸುಂದರಾಂಗಿ ನಾರೀಮಣಿ ॥ ಪಲ್ಲ ॥
ಮಾರಮದನ ತಾನು । ಘೋರ ಕದನಗೈದು ।
ಮೀರಿದ ಶ್ರಮವ । ನಿವಾರಿಸುವಳೋ ॥ ೧ ॥

ಕಲಾವತಿ: ಅಹಾ ! ಸಖಿಯರೆ, ಇಲ್ಲಿ ಯಾವನೋ ಸುಂದರ ಪುರುಷ ನೋರ್ವನು ಬಂದಿರುವನು. ಅಹಾ ! ಈತನನ್ನು ನೋಡಿದರೆ ಕಾಮನು ಮಾನವ ರೂಪವನ್ನು ಧರಿಸಿ, ಭೂಮಿಯ ಮೇಲಿನ ಕಾಮಿನಿಯರ ಮನಸ್ಸನ್ನು ಸೂರೆಗೊಳಿಸುವದಕ್ಕಾಗಿ ಬಂದಿರುವನೋ ಏನೋ ಎಂಬಂತೆ ತೋರುವದು. ಅಹಾ ! ಏನು ಸುಂದರ ರೂಪವು? ಸಖಿಯರೇ, ಈತನು ವಿಟರಾಜ ನಾದರೆ ನಾನು ಭಾಗ್ಯವಂತಳೇ ಸರಿ. ಇರಲಿ, ಮಾತಾಡಿಸಿ ನೋಡುವೆನು. (ಮುಂದೆ ಬಂದು) ಪುರುಷಶ್ರೇಷ್ಠ, ನೀನು ಯಾರು? ಯಾವ ಕಾರ್ಯಕ್ಕಾಗಿ ತೆರಳುವೆ? ಮತ್ತು ತಮ್ಮ ಪವಿತ್ರವಾದ ನಾಮಧೇಯವಾವುದು? ಈ ದಾಸಿಗೆ ಅಪ್ಪಣೆಯಾಗಬೇಕೆಂದು ಬೇಡುವೆನು.

ವಿಟ: ನಾರೀಮಣಿ, ಸಕಲ ಸಂಪತ್ತಿನಿಂದಲೂ ಕುಬೇರನಿಗೆ ಸಮಾನನಾದ ನಾನೋರ್ವ ಶ್ರೀಮಂತನು. ಬಾಗೇವಾಡೀ ನಗರ ವಾಸಸ್ಥನು. ನನ್ನ

ಹೆಸರು ಕುಶಲಮತಿಯೆಂದು ಕರೆಯುವರು. ಸದಾಶಿವನ ಅಂಶದಿಂದುದ್ಭವಿಸಿದ ಬಸವೇಶ್ವರನ ದರ್ಶನಕ್ಕೆಂದೇ ಆಗಮಿಸಿದೆನು. (ಆತ್ಮಗತಂ) ಅಹಾ ! ಕಾಮುಕನಾಗಿ ಕಾಮಿನಿಯರನ್ನು ಅರಸುತ್ತ ಬಂದ ನನಗೆ ನಿರಾಯಾಸವಾಗಿ ಈ ನಾರೀಶಿರೋಮಣಿಯು ದೃಷ್ಟಿಗೆ ಬಿದ್ದಳು. ಇವಳು ವಾರನಾರಿಯೆಂದು ಬೇರೆ ಹೇಳುವ ಕಾರಣವೇ ಇಲ್ಲ. ಯಾಕಂದರೆ, ಈ ಬಗೆಯ ಒನಪು ವಯ್ಯಾರಗಳು ಮನೆತನಸ್ಥರಾದ ಸ್ತ್ರೀಯರಿಗಿರುವವೇ? ಅಹಾ ! ಈ ನರಮೋಹನಾಂಗಿಯನ್ನು ಏನೆಂದು ವರ್ಣಿಸಲಿ? ಸರಸವಾದ ಸೀದೊಂಡೆಯ ಹಣ್ಣುಗಳಂತೊಪ್ಪುವ ತುಟಿಗಳು, ದಾಳಿಂಬರ ಬೀಜಗಳಂತೊಪ್ಪುವ ದಂತಪಂಕ್ತಿ, ವೀಣಾ ನಾದವನ್ನು ತಿರಸ್ಕರಿಸುವ ಧ್ವನಿ, ಸಂಪಿಗೆಯ ಸೊಂಪನ್ನಡಗಿಸುವ ನಾಶಿಕ, ಪೂಗಣೆಯನಾದ ಕಾಮನ ಬಿಲ್ಲಿನ ಕೊಂಕನ್ನಡಗಿಸುವ ಹುಬ್ಬುಗಳು, ಹುಣ್ಣಿಮೆಯ ಚಂದ್ರನನ್ನು ತಿರಸ್ಕಾರಂಗೈಯ್ವ ಮುಖಮಂಡಲ, ಇವುಗಳನ್ನೆಲ್ಲ ಮನವಿಟ್ಟು ವಿಚಾರ ಮಾಡಿ ನೋಡಿದರೆ, ಬ್ರಹ್ಮನು ಸರ್ವ ಲೋಕದೊಳಗಿನ ಸುಂದರಿಯರ ಸೌಂದರ್ಯವನ್ನೆಲ್ಲ ಒಂದುಗೂಡಿಸಿ ಈ ಸುಂದರಿಯಲ್ಲಿಯೇ ಇಟ್ಟಿರುವನೋ ಏನೋ ಎಂದು ಶಂಕೆಯು ಬರುವದು. ಬ್ರಹ್ಮನೇ, ನಿನ್ನಂಥ ಚಿತ್ರಗಾರನು ಇನ್ನೊಬ್ಬನುಂಟೇ? ನಿನಗೆ ಸಮಾನರು ಯಾರೂ ಇಲ್ಲ. ಈಗ ಇವಳು ಮಾತಾಡಿಸಿದ್ದಕ್ಕೆ ಸಂಭಾವಿತನಂತೆ ಉತ್ತರ ಕೊಟ್ಟೆನು. ಸದ್ಯದಲ್ಲಿ ನಾರಿಯರ ಸಂಗದಿಂದ ದೂರಿರುವವನಂತೆ ಮಾರವಿಲಾಸವನ್ನು ತಿರಸ್ಕರಿಸಿ, ಇವಳ ಮನಸ್ಸನ್ನು ಪರೀಕ್ಷಿಸಿ, ಅಂತ್ಯಕ್ಕೆ ಈ ನಾರಿ ಮಣಿಯಲ್ಲಿ ಸೇರಿ, ಸುರತ ಸುಖವನ್ನನುಭವಿಸುವೆನು. (ವೇಶ್ಯೆಗೆ) ನಾರೀಮಣಿ, ಪಾಂಥಸ್ಥರಂ ವಿಚಾರಿಸುವವಳು ನೀನಾರು? ಮತ್ತು ನಿನ್ನ ಮನೋಭಿಲಾಷೆಯೇನು?

ಕಲಾವತಿ: ನರವೀರನೇ, ನಾನೋರ್ವ ವೇಶ್ಯೆಯು, ನಿನ್ನಲ್ಲಿ ಅನುರಕ್ತಳಾದ ವಿರಹಿಣಿಯು. ನಿನ್ನೊಡನೆ ಕಾಮನಾಟದಲ್ಲಿ ಶಾಂತಿಯನ್ನು ಪಡೆಯಬೇಕೆಂಬುದೇ ನನ್ನ ಮನೋಭಿಲಾಷೆಯು.

ವಿಟ: ಸುಂದರಿ, ನಿನ್ನ ಮನೋಗತವು ನನಗೆ ಗೋಚರಿಸಿತು; ಆದರೆ ನಾವು ಗೃಹಸ್ಥಾಶ್ರಮಿಗಳು. ಕೂಡಿದ ಮಡದಿಯುಂ ತ್ಯಜಿಸಿ ನಿಮ್ಮಂಥವರೊಡನಾಡಿದರೆ ಕಡುಪಾಪಕ್ಕೀಡಾಗುವದಿಲ್ಲವೇ? ಈಶಭಕ್ತನಾದ ಬಸವೇಶನ ಪಾದಸೇವೆಯನ್ನು ಮಾಡಿ ಧನ್ಯನಾಗಬೇಕೆಂದು

ಆಶಿಸಿ ಬಂದಿರುವ ನಮ್ಮಂಥ ಪಾಂಥಸ್ಥರನ್ನು ಕಂತುಪಿನಾಟಕ್ಕಾಗಿ ವಿಚಾರಿಸುವದು ವಿಹಿತವಲ್ಲ. ಇಂತಿರುವ ನಿನ್ನ ಮನದ ದುಗುಡವನ್ನಡಗಿಸಿ ಸ್ವಸ್ಥಚಿತ್ತಳಾಗಿರು ಕಂಡೆಯಾ.

ಕಲಾವತಿ: **ಪದ**

ಮನ ಮೋಹನಾಂಗ ಬಾಬಾ । ಘನಕಾಮಕೇಳಿಗೆ ಬಾಬಾ॥
ವರನಾರಿಸಮುದಾಯಕ್ಕೆ । ಉಪಕಾರವನೆ ಮಾಳ್ಪುದಕೆ ।
ಪರಮೇಶ ವರಪುರುಷರನು । ಸ್ಥಿರವಾಗಿ ಸೃಜಿಸಿದ ತಾನು ॥ ೧ ॥
ಸತಿಯಾದ ಎನ್ನಗಿಂದು । ರತಿಯನ್ನು ನೀಡುವುದೆಂದು ।
ಹಿತದಿಂದ ಬೇಡುವೆನಿಂದು । ಮತಿವಂತಕೇಳಿಗೆ ಸಂದು ॥ ೨ ॥

ಮನೋಹರನೇ, ನೀನಷ್ಟು ನಯಶಾಲಿಯಾದರೆ, ಪರರ ಕಷ್ಟವನ್ನು ಪರಿಹರಿಸಬೇಕಲ್ಲವೇ? ಪರಮೇಶ್ವರನು ನಾರಿಯರ ಉಪಕಾರಕ್ಕಾಗಿಯೇ ಪುರುಷರನ್ನು ನಿರ್ಮಿಸಿರುವನು. ಇಂತು ಪರಮೇಶನ ನೇಮವನ್ನು ಮೀರಿ ತೆರಳುವದು ಸರಿಯೇ? ಇದಲ್ಲದೆ ಈಗ ನಾನು ಭಿಕ್ಷಾರ್ಥಿಯು, ತಾವು ದಯಪಿಟ್ಟು ಭೋಗಭಿಕ್ಷೆಯನ್ನೀಯದೆ ತೆರಳಬಾರದೆಂದು ಬೇಡುವೆನು.

ವಿಟ : **ಪದ**

ಕಾಮಪೀಡಿತೆ । ಭಾಮಿನಿಮಣಿ । ನುಡಿಯುವೆ ಕಡು
ಜಡಮತಿಗಳ ಪರಿಯಲಿ ॥
ಗುಣಗಣರಹಿತೆಯರಿರುವಿರಿನಿಜದಲಿ ॥ ಕಾಮಪೀಡಿತೆ ॥ ೧ ॥
ಸುಮಶರನರಗಿಳಿ ಪಥವನುಬಿಡುಬಿಡು ॥ ಕಾಮಪೀಡಿತೆ ॥ ೨ ॥

ಸುಂದರಿ, ನಾರಿಯರ ಉಪಕಾರಕ್ಕಾಗಿ ಪುರಷರು ನಿರ್ಮಿಸಲ್ಪಟ್ಟಿರುವದು ನಿಜವು. ಆದರೆ ಎಂತಹ ಉಪಕೃತಿಗೆಂದರೆ, ನಾರಿಯರ ಪಾತಿವ್ರತ್ಯವಂ ರಕ್ಷಿಸುವ ಮಹತ್ಕಾರ್ಯಕ್ಕಾಗಿಯೇ ಹೊರತು, ಇಂಥ ಪಾಪಕಾರಿಯಾದ ಉಪಕಾರಕ್ಕಾಗಿ ದೇವರು ಪುರುಷರನ್ನು ನಿರ್ಮಿಸಿಲ್ಲ. ನಿನಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ, ಚಿತ್ತಪಿಟ್ಟು ಕೇಳು. ನಿಮ್ಮ ಸೂಳೆಯರೊಳ್ ವಿಚಾರ ಮಾಡಿ ನೋಡಿದರೆ ತಿಲಾಂಶವಾದರೂ ಸಾರಮುಂಟೇ? ಆ ಸೂಳೆಯರು ಸದ್ಗುಣ ಹೀನೆಯರು, ಸಮಯದಲ್ಲಿ ಶಿರಚ್ಛೇದನಂಗೈಸುವವರು, ಅನ್ಯಾಯಮಾರ್ಗ ಪ್ರವರ್ತಕರು, ಉಪಾಯದಿಂದ ವಶಪಡಿಸಿಕೊಂಡು ಕಡೆಗೆ ಪ್ರಾಣಧನಗಳನ್ನು

ಸೂರೆಗೊಳ್ಳುವ ರಾಕ್ಷಸಿಯರು, ಮತ್ತು ನೀವೇ ನರಕಕ್ಕೆ ಮೂಲ ಕಾರಣರು. ನಾರೀಮಣಿ, ಇಂತಿದ್ದು ನೀನು ಮಾರನಾಟಕ್ಕೆ ನನ್ನನ್ನು ಕರೆದು ಘೋರ ನರಕಕ್ಕೆ ಗುರಿಯಾಗುವಂತೆ ಮಾಡಬೇಡ. ಓರೆಯಾಗು. ನಾನು ಮುಂದಕ್ಕೆ ಸಾಗುವೆನು.

ಕಲಾವತಿ: **ಪದ**

ಏನನುಡಿವೆನೀ । ಶಾಮಸುಂದರ । ಕಾಮಿನಿರತಿಸುಖ
ವಿರಹಿತಪುರುಷನೆ ॥ ಸುದತಿಯ
ಅಧರವ ಸವಿಸದೆ ಮುದದಲಿ ॥ ೧ ॥
ವಾರಿಜಮುಖಿಯರ ನೀಪರಿಜರೆಯುತೆ ॥ ೨ ॥

ಸುಂದರಾಂಗನೆ, ಅಂಗನಾಸಂಗವಿರಹಿತನು ಪುರುಷನೆನಿಸು ವನೆ? ಪ್ರಿಯನೆ, ಈ ಹೇಮಕಲಶಂಗಳಂ ಮರ್ದಿಸಿ, ಅಧರಾಮೃತಮಂ ಪಾನಮಾಡಿ, ಈ ಮೋಹಕರಮಾದ ಶರೀರಮಂ ಅಪ್ಪಿ ಮಾರನಾಟದಲ್ಲಿ ಎನ್ನ ಮನಸ್ಸನ್ನು ದಣಿಸಬೇಕೆಂದು ಬೇಡುವೆನು.

ವಿಟ: **ಪದ**

ವಾರನಾರಿಯೆ । ಮರುಳೇ । ಮಾರನಾರಿಯೇ ॥
ನಾರಿದೇಹಪಿವರವನ್ನು । ಸಾರಿಪೇಳ್ವೆ ಗ್ರಹಿಸೆ ಮನದಿ ॥
ವಿಧಿಯು ಮೂಳೆಗಳನು ನರದಿ । ಚುದರದಂತೆ ಬಿಗಿ
ದು ಮಾಂಸವ । ನದಕೆ ಸವರಿ ಮರೆಯಮಾಡಿ ।
ಸುದತಿಯರನು ವಚನಗೈದ ॥ ೧ ॥
ಭಾಸುರಾಂಗಿನಾರಿದೇಹದೆ । ದೋಷವಿರುವ
ದೆಂಬದರಿದು । ಹೇಶಿಪುರುಷರೇತಕಿಂತು ಆಶೆಯನ್ನು
ಮಾಳ್ಪರಯ್ಯೋ ॥ ೨ ॥

ಕಾಮುಕಿಯೇ, ನಿಮ್ಮ ಸ್ತ್ರೀ ಶರೀರದ ವಿವರನ್ನು ಹೇಳುತ್ತೇನೆ ಕೇಳು. ಬ್ರಹ್ಮನು ಮೂಳೆಗಳ ಪಂಜರವನ್ನು ಸರದಿಂದ ಕಟ್ಟಿ, ಅದಕ್ಕೆ ಮಾಂಸವನ್ನು ಮೆತ್ತಿ, ಚರ್ಮದಿಂದ ಮರೆಮಾಡಿ, ಅದರೋಳ್ ಮೂತ್ರ ಪುರೀಷಾದಿಮಲಗಳಂ ತುಂಬಿ ಅದನ್ನು ಸ್ತ್ರೀಯರ ದೇಹವೆಂಬ ಒಂದು ಚಮತ್ಕಾರಿಕ ವಸ್ತುವನ್ನಾಗಿ ನಿರ್ಮಿಸಿರುವನು. ಸ್ತನಗಳು ಕೊಬ್ಬು ಮಾಂಸ

ತುಂಬಿದ ಗಂಟು; ಅದಕ್ಕೆ ಹೇಮಕಲಶವೆಂದು ಹೇಳುವೆಯಲ್ಲ? ತುಟಿಯು ರಕ್ತಮಾಂಸ ಪೂರಿತವಾದ ಕಳಿತಹಣ್ಣು, ಅದಕ್ಕೆ ಅಮೃತಸಾಮ್ಯವನ್ನು ಕೊಡುವೆಯಲ್ಲ? ಇಂಥ ಟಕ್ಕುಗಾರಿಕೆಯ ವಾಕ್ಕನ್ನು ನನ್ನಲ್ಲಿ ಏಕೆ ನುಡಿಯುವೆ.

ಕಲಾವತಿ: **ಪದ**

ಪ್ರಿಯಮನೋಹರ ನೀ । ಏನ ನುಡಿವೆ । ಪ್ರಿಯ ॥
ಕಾಮಿನಿರತಿಯ । ನುಳಿದವಪ್ರಿಯ ।
ಪೌರುಷರಹಿತ ನೆನಿಪನು ಕೇಳ್ ॥ ೧ ॥
ವಾರಿಜಮುಖಿಯ । ಪರಿಯಲಿ ಪ್ರಿಯ ।
ಉಡುಪನು ಧರಿಸಿ ನಡೆಜವದೆ ॥ ೨ ॥

ಪುರುಷಶ್ರೇಷ್ಠ, ಮದನನ ಕದನಕ್ಕೆ ಒದಗೆಂದು ಕರದರೆ, ಗರ್ವದಿಂದ ನನ್ನನ್ನು ಹೋಗೆಂದು ತಿರಸ್ಕರಿಸುವದು ನ್ಯಾಯವೇ? ನೀನು ಪುರುಷನಾಗಿ ತರುಣಿಯೂ, ಮನಮೋಹಿನಿಯೂ ಆದ ನನ್ನನ್ನು "ಒಲ್ಲೆ" "ಹೋಗು" ಎಂದು ತಿರಸ್ಕರಿಸಿದರೆ ಪುರುಷರು ನಿನಗೆ ಪರಿಹಾಸವನ್ನು ಮಾಡಲಿಕ್ಕಿಲ್ಲವೇ? ನಿನ್ನಲ್ಲಿರುವ ಗುಣಾತಿಶಯಗಳು ವ್ಯರ್ಥವಾದವುಗಳೇ ಸರಿ. ಇಂತು ನೀನು ನನ್ನನ್ನು ಕೂಡದಿದ್ದರೆ ಮತ್ತಾವ ನಾರಿಯನ್ನೂ ಕೂಡೆನೆಂದು ಪ್ರತಿಜ್ಞೆಯನ್ನಾದರೂ ಮಾಡು. ಇಲ್ಲವೆ ಜಡಜನೇತ್ರೆಯರಂತೆ ಉಡುಪನ್ನಾದರೂ ಧರಿಸಿಕೋ. ಮಾರನಾಟಕ್ಕಾಗಿ ನಾರಿಯರನ್ನೇ ಪುರಷರು ಅರಸುತ್ತ ಬರುವರು. ಇದಕ್ಕೆ ವಿಪರೀತವಾಗಿ ನಾರಿಯೇ ನಿನ್ನನ್ನು ಕರೆದರೆ ಮೋರೆಯನ್ನು ತಿರುಗಿಸಲು ಪ್ರಾರಂಭಿಸಿದೆಯಲ್ಲ. ಈ ನಿನ್ನ ಕಡು ಬೆಡಗಿನ ನಡತೆಗೆ ಪರರು ನಕ್ಕಾರು. ಒಂದು ವೇಳೆ ನೀನು ಬಲಾತ್ಕಾರದಿಂದ ತೆರಳಲುಪಕ್ರಮಿಸಿದರೆ ನಿನ್ನ ಮಾರ್ಗಕ್ಕೆ ಪ್ರತಿಬಂಧ ಮಾಡುತ್ತೇನೆ.

ವಿಟ: ಅವಿನೀತೆ, ಮನ್ಮಥಶಾಸ್ತ್ರ ಪಾರಂಗತೆ, ಪುರುಷರನ್ನು ಬಲಾತ್ಕರಿಸಿ ಪ್ರೀತಿಯನ್ನು ಹುಟ್ಟಿಸಬೇಕೆಂದು ಪ್ರಯತ್ನಿಸುವ ಜಾಣೆ, ಮದನಕದನದೋಳ್ ಮನನಾಟದಿರುವ ನನ್ನನ್ನು ಮೋಸಗೊಳಿಸಬೇಕೆಂಬ ಈ ಜಾಣತನವನ್ನು ಎಲ್ಲಿಂದ ಕಲಿತೆ ! ನಾನು ನಿನಗೇನು ಗಂಡನೋ? ಮೋಹದ ಮಿಂಡನೋ? ನಿನಗೆ ಬೇಕಾದದ್ದನ್ನು ಕೊಟ್ಟು ಮಡಗಿಕೊಂಡಿರುವವನೋ? ಸುಮ್ಮನೆ

ಬಲಾತ್ಕಾರವನ್ನು ತೋರಿಸಿದರೆ ಅದಕ್ಕೆ ಯಾರು ಮೆಚ್ಚುವರು? ನಾನು ಪರಪುರುಷನು. ಮನವೊಲಿದರೆ ಬರುವೆನು. ಇಲ್ಲದಿದ್ದರೆ ನನ್ನ ದಾರಿಯನ್ನು ಹಿಡಿದು ಸಾಗುವೆನು. ಇದಕ್ಕೆ ಪ್ರತಿಬಂಧ ಮಾಡಲು ಕಾರಣವಿಲ್ಲ.

ಕಲಾವತಿ: **ಪದ**

ಬಾಮನೋಹರ । ಮನೋಹರಾ । ನರವೀರಾ ॥
ಕಂದರ್ಪನಾಟದಲಿ ಸಂದು । ಸುಂದರಿಯು ಕರಯೆ
ನಾನಿಂದು । ಕುಂದುಗಳನೆಪೇಳುವೆಯಾ ॥ ೧ ॥
ಸುಮಬಾಣನಲ್ಪತಾನಲ್ಲ । ಶಮಿಸುವನು ಭುವನ
ದೊಳಗೆಲ್ಲ । ಕುಮತಿಗಳೊಲು ಮಾಡದೆನೀ ॥ ೨ ॥

ಅನಂಗಸ್ವರೂಪನೆ, ಇಂದುವದನೆಯರು ಕಂದರ್ಪನಾಟಕ್ಕೆ ಮನದಂದು ಮಂದಹಾಸದಿಂದ ಬಾರೆಂದು ಕರೆದರೆ, ಒಲ್ಲೆನೆಂದು ಕಂದರ್ಪನಿಂದಾಗುವ ಕುಂದುಗಳನ್ನೇ ಹೊಂದಿಸಿ ಹೇಳುವದು ಇದೇನು ಚಂದ ! ಕಾಮನೇನು ಸಾಮಾನ್ಯನಲ್ಲ. ಪರಶಿವನ ವೈರಿಯಾಗಿ ಆತನ ತಪಸ್ಸನ್ನು ನಾಶ ಮಾಡಲಿಲ್ಲವೆ? ಮತ್ತು ಕಠೋರ ಮನಸ್ಸಿನವನಾದ ವಿಶ್ವಾಮಿತ್ರನ ತಪಸ್ಸನ್ನು ರಂಭೆಯನ್ನು ಕಳಿಸಿ ಹಾಳು ಮಾಡಲಿಲ್ಲವೆ? ಸುಂದರನೇ, ಮಾರನ ಪರಾಕ್ರಮದಂತೆ ನಾರಿಯರ ತಾಪವಾದರೂ ಕ್ರೂರತರದ್ದಾಗಿರುವದು. ಅಂತೇ ಮಾರನಾಟಕ್ಕೆ ಸೇರದ ಅರ್ಜುನನು ಊರ್ವಸಿಯ ಶಾಪದಿಂದ ಷಂಡನಾದನು. ಅದಕ್ಕಾಗಿ ನೀನು ಮಾರನ ಕೋಪಕ್ಕೂ, ನಾರಿಯಾದ ನನ್ನ ಕೋಪಕ್ಕೂ ಈಡಾಗಬೇಡ. ವ್ಯರ್ಥವಾದ ಹಟವು ಸಾಕು. ಮಾರನಾಟಕ್ಕೆ ಒದಗಬೇಕು.

ವಿಟ: **ಪದ**

ವಂಚಕಿಯಾದೆಲೆನಾರಿ ಮನೋಹರಿ ।
ವಂಚಕಿ ಯಾದೆಲೆನಾರಿ ॥ ಪಲ್ಲ ॥
ಚಂಚಲನೇತ್ರೆ । ವಂಚಕನಾದಾ ।
ಪಂಚಬಾಣನನು ಪೇಳದಿರೆನ್ನೊಳು ॥ ೧ ॥
ಭಾವಜನಿಂದೆ । ರಾವಣತಾನು ।
ಜೀವವನುಳಿದುದನ ರಿನೀಮನದೊಳು ॥ ೨ ॥

ಹರಿಣಾಕ್ಷಿ, ವಿಷಪೂರಿತಕುಕ್ಷಿ, ಪಂಚಶರನ ಪ್ರಚಂಡತನದ ಕಿಂಚಿದ್ಭಾಗವನ್ನಾದರೂ ನನ್ನೊಡನೇ ಹೇಳಬೇಡ. ಮಿಂಚಿನಂತೆ ಚಂಚಲಾಕ್ಷಿಯರಾಗಿ ಪರಧನವನ್ನು ವಂಚಿಸಬೇಕೆಂದು ಹೊಂಚಿ ಕುಳಿತಿರುವ ವಂಚಕಿಯರಾದ ನಿಮ್ಮಂಥ ಅಂಚೆಗಮನೆಯರ ಮುಂದೆಯೇ ಆ ಪಂಚಶರನ ಪ್ರಚಂಡತನವು. ಚಂಚಲಾಕ್ಷಿ, ಆ ನೀಚ ಶ್ರೇಷ್ಠತ್ವವನ್ನೇಕೆ ಹೇಳುವೆ? ಅಂಥ ನಿಮ್ಮ ಮಾರನು ಪರಾಕ್ರಮಿಯಾದರೆ ಪುರಹರನ ಉರಿಗಣ್ಣಿನಿಂದ ಯಾಕೆ ಉರಿದನು? ಆ ದುರಳನು ಹರನ ಕರುಣದಿಂದ ಶರೀರರಹಿತನಾಗಿ ನಿಮ್ಮಂಥ ಅಬಲೆಯರ ಶರೀರದೊಳ್ ಶೇರಿ ತನ್ನ ಶೂರತನವನ್ನು ತೋರಿಸುವನೇ ಹೊರತು ನಮ್ಮಂಥವರಲ್ಲಿ ತೋರಿಸಿದರೆ ಉರುತರ ಭಾಗ್ಯವನ್ನುಂಡಾನು. ಆ ನಿಮ್ಮ ಕಾಮನ ವಶಕ್ಕೆ ಬಿದ್ದು ಕುಣಿದಾಡಿದ ರಾವಣನು ಶ್ರೀ ರಾಮಚಂದ್ರನ ಪತ್ನಿಯಾದ ಸೀತೆಯನ್ನು ಅಪಹರಿಸಿ ಪ್ರಾಣಕ್ಕೆ ಎರವಾಗಲಿಲ್ಲವೇ? ಚಂದ್ರನು ಗುರುವಿನ ಹೆಂಡತಿಯನ್ನು ಭೋಗಿಸಿದ್ದರಿಂದಲೇ ಅವನಿಗೆ ಕ್ಷಯರೋಗವು ಪ್ರಾಪ್ತವಾಯಿತು. ಕೀಚಕನು ಪಾಂಡವರ ಪತ್ನಿಯಾದ ದ್ರೌಪದಿಯನ್ನು ಆಶಿಸಿ, ಗಂಡುಗಲಿಯಾದ ಭೀಮನ ಹೊಡತದಿಂದ ಜೀವವನ್ನು ಕಳಕೊಂಡನು. ಹೀಗೆ ಕಾಮವಶರಾದವರು ಕೆಟ್ಟದ್ದನ್ನು ಎಷ್ಟು ಹೇಳಿದರೂ ತೀರದು. ಇನ್ನು ನಿನ್ನ ಕಾಕುನುಡಿಯನ್ನು ಸಾಕು ಮಾಡು.

ಕಲಾವತಿ: **ಪದ**

ಮಾರಸುಂದರ ಬಿಡು ತರವಲ್ಲ ।
ಬಿಡದಾಲಿಸುವುದೆನ್ನ ಯ ಸೊಲ್ಲ ॥
ತರುಣಿಯ ವಿರಹ ವ್ಯಥೆಯನ್ನು ।
ಪರಿಹರಿಸುತ ಪೊರೆಯುವುದಿನ್ನು ॥
ಕರುಣಾಬ್ಧಿ । ಕರುಣಾಬ್ಧಿ ।
ಸ್ಥಿರಮೋದವನನುಗ್ರಹಿಸುವುದು ॥ ೧ ॥

ಧೀರಾ, ಮದನವೀರ, ಭಿಕ್ಷೆ ಬೇಡುವವರನ್ನು ನೂಕುವದು ಯಾವ ಧರ್ಮ? ಹಾಗೆ ಛಲ ಹಿಡಿಯಬೇಡ. ಪ್ರಿಯನೇ, ಈ ದಾನಿಯಲ್ಲಿ ಕರುಣವಿಟ್ಟು ಕಡು ಮಮತಾ ಪೂರ್ಣವಾದ ಗಾಢಾಲಿಂಗನವನ್ನು ಕೊಡು. ರತಿಸುಖವನ್ನು ನೀಡು. (ಎಂದು ಹಸ್ತಸ್ಪರ್ಶ ಮಾಡುವಳು).

ವಿಟ: (ತನ್ನೊಳಗೆ) ಅಹಾ ! ಇದೇನು? ಈ ನಾರಿಯು ಎನ್ನ ಕರಸ್ಪರ್ಶ

ಮಾಡಿದೊಡನೆ ಮಾರವಿಕಾರವು ಬಲವಾಗಿ ತೋರಹತ್ತಿತು. ಎನ್ನ ಮನವು ಮೋಹಾದಿ ವಿಕಾರಗಳಿಗೆ ಸಂಪೂರ್ಣ ವಶವಾಯಿತು ಮದನ, ಬಾವು, ಭಾಮು. ಶರೀರವಿಲ್ಲದ ನೀನು ಇಷ್ಟು ಶೂರತನವನು ತೋರಿಸಿದ ಮೇಲೆ ಶರೀರವಿದ್ದವನಾಗಿದ್ದರೆ ಏನು ಮಾಡುತ್ತಿದ್ದೆಯೋ ನಾನರಿಯೆ. (ಸಭೆಗೆ) ಈ ಕಾಮನು ಸ್ವಭಾವದಿಂದ ಚಪಲನು, ಶರೀರವೇ ಇಲ್ಲ, ಹೂವಿನಬಿಲ್ಲು, ಭ್ರಮರಗಳ ಹೆದೆ, ನಾರಿಯರ ಓರೆ ನೋಟವೇ ಬಾಣ, ಹಿಮಕಿರಣನು ಸ್ನೇಹಿತನು, ಇದಲ್ಲದೆ ಏಕಾಕಿಯು, ಹೀಗಿದ್ದು ಲೋಕವನ್ನೆಲ್ಲ ತಲ್ಲಣಗೊಳಿಸುವನು. ಅವನೇ ಧೀರನು; ಅವನೇ ಶೂರನು; (ಕಾಮನಿಗೆ) ಹೇ ಮದನವೀರಾ, ನಾನು ನಿಜವಾಗಿಯೂ ನಿನ್ನ ಸ್ವಾಧೀನನಾಗಿರುವೆನು. ಇನ್ನು ನಿನ್ನ ಕೂರಂಬುಗಳನ್ನು ಕಿತ್ತುಕೋ. (ವೇಶ್ಯೆಗೆ) ಪ್ರಿಯೆ, ನಾನೆಷ್ಟು ಛಲವಿಡಿದರೂ ನೀನೇ ಜಯಶಾಲಿಯಾದೆ. ಇನ್ನು ತಡವೇಕೆ? ವೇಶ್ಯಾ ಸಂಗವು ನಿಂದ್ಯವೆಂದು ಅರಿಯದ ಮೂಢರು ಹೇಳುವದನ್ನು ಕೇಳಿದರೆ ನಗೆ ಬರುತ್ತದೆ. ಅನುಭವವಿಲ್ಲದ ಮೂಢಂಗೆ ಗೊತ್ತೇನು? ವೇಶ್ಯಾಸ್ತ್ರೀಯರ ದರ್ಶನವೇ ಪುಣ್ಯ ಸ್ಪರ್ಶದಿಂದ ಪಾಪನಾಶವಾಗುವದು. ಹೀಗಿದ್ದು ವೇಶ್ಯಾ ಸಂಗವನ್ನು ತಿರಸ್ಕರಿಸುವ ಮೂಢರಿಗೆ ಏನೆನ್ನಬೇಕು? ಇಂಥಾ ಸುಖದಾಯಕವಾದ ಸ್ತ್ರೀ ಮೂರ್ತಿಯ ಸಲುವಾಗಿ ಎಷ್ಟು ದ್ರವ್ಯವು ವೆಚ್ಚವಾದರು ಕಡಿಮೆಯೇ (ಸೇವಕನಿಗೆ) ಸೇವಕನೇ, ಈ ಎನ್ನ ಸ್ತ್ರೀಯಳ ಸುಖಕ್ಕೆ ಕಡಿಮೆಯಾಗದಂತೆ ಏನು ಬೇಕಾದರೂ ಬೇಡು. ಯಾವ ಅನುಮಾನವನ್ನೂ ತೆಗೆದುಕೊಳ್ಳಬೇಡ. ಹಿಡಿ, ಈ ಒಂದು ರೂಪಾಯಿಗೆ ಪಾನಸುಪಾರಿ, ಈ ಒಂದು ರೂಪಾಯಿಗೆ ಚುಟ್ಟ, ಈ ಎರಡು ರೂಪಾಯಿಗಳ ಅತ್ತರ ಮೊದಲಾದ ಸಾಮಾನುಗಳನ್ನು ತೆಗೆದುಕೊಂಡು ಬಾ. ಈ ಸುರತಸುಖಕ್ಕಾಗಿ ಎಷ್ಟು ದ್ರವ್ಯವನ್ನು ವೆಚ್ಚ ಮಾಡಿದರೂ ಕಡಿಮೆಯೇ. ಬೇಗ ಹೋಗು. (ವೇಶ್ಯಗೆ) ಪ್ರಿಯೆ, ತಡವೇಕೆ? ಏಕಾಂತ ಸ್ಥಳಕ್ಕೆ ತೆರಳೋಣ ನಡಿ.

ಕಲಾವತಿ: (ಆತ್ಮಗತಂ) ನಾನಾಬಗೆಯ ಮೋಹಜಾಲದಿಂದ ಈ ನರಪಶುವನ್ನು ವಶಪಡಿಸಿಕೊಂಡೆನು. ಇನ್ನು ಧನವನ್ನು ಸೆಳೆಯುವ ಕಾರ್ಯವನ್ನು ಕೈಕೊಳ್ಳುವೆನು. (ವಿಟನಿಗೆ) ಪ್ರಿಯನೆ, ನಡೆ. (ಶಯನ ಗೃಹಕ್ಕೆ ಹೋಗುವರು.)

(ಕಲಾವತಿಯ ಸೇವಕನು ಪ್ರವೇಶಿಸಿ)

ಸೇವಕ: ನಮ್ಮಕ್ಕ ಏನು ದುಡ್ಡು ಎಳಿತಾಳಪ್ಪ ! ಮಂತ್ರಗಿಂತ್ರ ಹಾಕತಾಳೋ ಏನೋ? ಬಂದ ಗಂಡಸರೆಲ್ಲ ಸುರುವದರಾಗ ಅದಾರೆ; ನಮ್ಮಕ್ಕಗೆ ಎಷ್ಟು ಹಾಕಿದರೂ ಸಾಕಿಲ್ಲ. ಮೊನ್ನೆ ಒಬ್ಬನ್ನ ಅವ ಒಲ್ಲೆ ಅಂದರೂ ಕಣ್ಣು ತಿರವಿಕಾಲ ತಿರವಿ ಮಂಚಕೆ ಎಳಕಂಡು ಹೋಗಿ ಬಿಟ್ಲು. ಅವ ಮಾವ ಆದವನು ಅಕಿ ಮುರಕಕ್ಕೆ ಮಳ್ಳಾಗಿ ಬಿಟ್ಟಾನೆ. ಬೇಡಿ ಬೇಡಿದಷ್ಟು ದುಡ್ಡು ಸುರವೇ ಸುರುವುತಾನೆ. ಎಷ್ಟು ಸುರುಪಿದರೂ ನಮ್ಮಕ್ಕಗೆ ಸಾಕೇ ಇಲ್ಲ. ಆಕೀ ಮರೀಲೆ ನಾನೂ ಅವನ ಮೈಮ್ಯಾಗಳ ಅಂಗೀಪಂಗಿ ಎಲ್ಲಾ ಕಸಕೊಂಡೇನಿ. ಹಿಂಗಾಗಿ ಎಲ್ಲ ದುಡ್ನು ನಮ್ಮ ಮಾವ ಕೊಟ್ಟು ಬಿಟ್ಟ. ಅದರಾಗೆ ನನಗೂ ತುಸುತೋಡೆ ಕೊಟ್ಟ, ಅದಕ ಮಾವಾ ಅಂತ ಕರಿತೇನಿ. ನನಗೇನು? ಯಾವನಾದರೇನು? ನಮ್ಮಕ್ಕನ ಹತ್ತರಕ್ಕೆ ಬಂದ ಕೂಡಲೇ ಮಾವಾ ಅಂತ ಕರೆದರೆ ಸಾಕು, ದುಡ್ಡು ಸಿಗತಾವೆ. ನನ್ನ ಗಂಟು ಹೋದದ್ದೇನು.

(ಇಷ್ಟರಲ್ಲಿ ವೇಶ್ಯೆಯು ಬರುವಳು.)

ಕಲಾವತಿ: **ಪದ**

ವರವೇಶ್ಯೆಯ ಸರಿ । ಗಾಣೆನು ನಾ ॥ ವರ ॥
ಸಿರಿವಂತನಲಿ । ಪರಿಪರಿಯಿಂದಲೆ ।
ಬೆರೆಯುತ ಧನವನು ಪೊಂದಿದೆನ್ನೈ ॥ ವರ ॥ ೧ ॥
ಇನ್ನಿರಲೀತನು । ಎನ್ನಯ ಬಳಿಯಲಿ ।
ಚನ್ನಿಗವಿಟಜನ ಮನ್ನಿಸರೈ ॥ ವರ ॥ ೨ ॥

(ಆತ್ಮಗತಂ) ಅಹಾ ! ವೇಶ್ಯೆಯರ ಕಸಬಿಗೆ ಸಾಟಿಯುಂಟೇ? ನಾನಾಬಗೆಯ ಮೋಹಜಾಲದಿಂದ ಶ್ರೀಮಂತನಾದ ಕುಶಲಮತಿಯನ್ನು ವಶಪಡಿಸಿಕೊಂಡು, ಅವನಲ್ಲಿರುವ ಸರ್ವ ಧನವನ್ನೂ ಸೆಳದೆನು. ಇನ್ನು ಅವನಲ್ಲಿ ಉಳಿದವುಗಳೆಂದರೆ ಎಲವು, ತೊಗಲು ಇವೆರಡೇ; ಹೀಗೆ ಅವನು ಬಡವನಾದರೂ ನನ್ನನ್ನು ಬಿಡಲೊಲ್ಲನು. ಅವನು ಇನ್ನು ಮೇಲೆ ನನ್ನಲ್ಲಿರುವ ದಾದರೆ, ಬೇರೆ ವಿಟಪುರಷರು ನನ್ನಲ್ಲಿಗೆ ಬರಲು ಮಾರ್ಗವೇ ಇಲ್ಲ; ಅವರು ಬರದಿದ್ದರೆ ಹಣವು ದೊರೆಯುವ ಮಾರ್ಗವೇ ಇಲ್ಲ. ಅದರಿಂದ ಕುಶಲಮತಿಯನ್ನು ಚಾಕರಿಗೆ ಸೇರಿಸಿಕೊಂಡರೆ ರೊಕ್ಕಿಲ್ಲದಾಳು ದೊರೆದಂತಾಗುವದು: ಅಂದರೆ ಬೇರೆ ಪುರಷರು ಬರಲಿಕ್ಕೆ ಆತಂಕವೂ ಇಲ್ಲ. (ಸೇವಕನಿಗೆ) ಎಲೋ, ಆ

ಕಳೆಗೇಡಿಯಾದ ಕುಶಲಮತಿಯನ್ನು ಕರೆತಾ. (ಸೇವಕನು ಹೋಗುವನು) ಕುಶಲಮತಿಗೆ ಇನ್ನು ಮುಂದೆ ಅಪಮಾನಕರವಾದ ಸೇವೆಯನ್ನೇ ಹೇಳುವೆನು; ಅಂದರೆ ತಾನಾಗಿಯೇ ನನ್ನನ್ನು ಬಿಟ್ಟು ತೊಲಗುವನು.

(ಇಷ್ಟರಲ್ಲಿ ಕುಶಲಮತಿಯು ಬಂದು)

ವಿಟ: ಪ್ರಿಯೇ, ನನ್ನನ್ನು ಕರೆಯಿಸಿದ್ದು ಯಾಕೆ? ನೀನು ಕರದದ್ದೇ ನನಗೆ ಭಾಗ್ಯ; ಬೇಗ ಹೇಳು.

ಕಲಾವತಿ: ಏತಕ್ಕೆ ಹಾಗೆ ಪ್ರಿಯೆಯೆಂದು ಕರೆಯುವೆ? ನಿನ್ನಲ್ಲಿ ಧನವಿರುವವರೆಗೆ ಪ್ರಿಯೆಯೆಂದು ಕರೆಯುವುದು ನನಗೆ ಒಪ್ಪುತ್ತಿತ್ತು. ಈಗ ನಾನು ನಿನ್ನ ಪ್ರಿಯಳಲ್ಲ. ನಿನ್ನಿಂದ ಸೇವೆ ತೆಗೆದುಕೊಳ್ಳುವ ಒಡೆಯಳಿದ್ದೇನೆ.

ವಿಟ: ಸುಂದರಿ ನಿನ್ನ ಸೇವೆಗಾದರೂ ಸೇರಿಸಿಕೋ. ಅಂತೂ ನಿನ್ನನಗಲಿ ನಾನು ದೂರಿರುವಂತೆ ಮಾಡಬೇಡ; ಯಾಕೆಂದರೆ ನಿನ್ನ ಮೋರೆಯನ್ನು ನೋಡದೆ ಅರೆ ಘಳಿಗೆಯಾದರೂ ಜೀವಿಸಿರಲಾರೆ.

ಕಲಾವತಿ: ಆಗಲಿ, ಮೊದಲಿನ ಹೆಮ್ಮೆಯಿಂದ ನನ್ನ ಸೇವೆಯಲ್ಲಿ ಕೊರತೆಗಳುಂಟಾದಾವು. ಬಹು ಎಚ್ಚರಿಕೆ.

ವಿಟ: ಸುಂದರಿ. ನಿನ್ನ ಸೇವೆಯ ಸಲುವಾಗಿ ಜೀವ ಹೋಗಲಿ; ಮತ್ತೇಕೆ?

ಕಲಾವತಿ: ಇಂದು ನೀನು ನನ್ನ ಹಿರಿಯರ ಶ್ರಾದ್ಧಕ್ಕೆ ಕುರಿಯೊಂದನ್ನು ಕೊಂಡು ತರಬೇಕು. ಇಕೋ ಈ ನಾಲ್ಕು ರೂಪಾಯಿಗಳನ್ನು ತೆಗೆದುಕೊಂಡು ನಡೆ.

ವಿಟ: ಮಹಾತ್ಮಳೆ, ಕೈ ಮುಗಿಯುವೆನು. ಇದೊಂದು ಕಾರ್ಯವನ್ನು ಬಿಟ್ಟು ಬೇಕಾದದ್ದನ್ನು ಹೇಳು. ಯಾಕಂದರೆ, ಶ್ರೀಮಂತನಾಗಿದ್ದ ನಾನು ಇಂಥ ನೀಚ ಕೆಲಸವನ್ನು ಮಾಡುತ್ತ ಮಂದಿಗೆ ಮೋರೆಯನ್ನು ತೋರಿಸಲಾರೆ.

ಕಲಾವತಿ: (ಸಿಟ್ಟಿನಿಂದ) ಮೂರ್ಖಾ, ನನ್ನ ಹಿರಿಯರ ಶ್ರಾದ್ಧಕ್ಕೆ ಕುರಿಯನ್ನು ತರುವದು ನೀಚನ ಕೆಲಸವಾಯಿತೇ? ಇಂಥ ಹೆಮ್ಮೆಯುಳ್ಳವನಾದರೆ, ನನ್ನ ಮನೆಯನ್ನು ಬಿಟ್ಟು ನಡೆ. (ಎಂದು ನೂಕುವಳು.)

ವಿಟ: ಪ್ರಿಯೆ, ಅಲ್ಲಲ್ಲ (ಗಲ್ಲವನ್ನು ಬಡಿದುಕೊಂಡು) ಸುಂದರಿ, ಹಾಗೆ ಕೋಪ ಮಾಡಬೇಡ. ಕೇಳಬಹುದೆಂದು ತಿಳಿದು ಹಾಗೆ ಹೇಳಿದೆನು; ಆದರೆ ಈಗ ನಿನ್ನಾಜ್ಞೆಯಂತೆ ಕುರಿಯನ್ನು ತರಲು ತೆರಳುವೆನು. ಇನ್ನಾದರೂ

ಮನಸ್ಸು ಶಾಂತವಾಯಿತೇ?

ಕಲಾವತಿ: ಮನ ಬಂದಂತೆ ನಿಂದೆಯನ್ನಾಡಿ ಶಾಂತವಾಗೆಂದು ಹೇಳು ವೆಯಾ? ಇಂಥ ನಿಂದೆಯನ್ನಾಡಿದ್ದಕ್ಕೆ ಇಂದಿನಿಂದ ನನ್ನ ಎಂಜಲವನ್ನು ತಿನ್ನಲಿಕ್ಕೆ ಕೊಡುವೆನು. ಹೀಗಿದ್ದರೆ ನನ್ನ ಮನೆಯಲ್ಲಿರು. ಇಲ್ಲವಾದರೆ ನನ್ನ ಮನೆಯನ್ನು ಬಿಟ್ಟು ತೆರಳು.

ವಿಟ: ಸುಂದರಿ, ನಿನ್ನಿಷ್ಟದಂತೆಯೇ ಆಗಲಿ. ಕುರಿಯನ್ನು ತರಲಿಕ್ಕೆ ತೆರಳುವೆನು. ಇನ್ನಾದರೂ ಆಯಿತೇ?

ಕಲಾವತಿ: ಹೋಗು ಜಾಗ್ರತೆಯಿಂದ ತೆಗೆದುಕೊಂಡು ಬಾ (ವಿಟನು ಹೋಗುವನು).

ಸೇವಕ: ಅಕ್ಕ, ಆ ಮೂಳಗೆ ಬೇಶ ಹೋರೆ ಹಚ್ಚಿದೆ ನೋಡು. ಮೂಳ ಕೈಯಾಗಿಲ್ಲದ ಮೇಲೆ ಯಾಕಿರಬೇಕೇ? ಇನ್ನುಮೇಲೆ ಮಾತ್ರ ಅದು ನಿಲ್ಲೋದಿಲ್ಲ ನೋಡು. ಹೇಳಾಕೆ ಹೆಸರಿಲ್ಲದ್ಹಾಂಗೆ ಹೋಗತಾನೆ.

ಕಲಾವತಿ: ಸರಿ, ಪೀಡೆಯು ಕಡಿದಂತಾಯಿತು. ಇನ್ನು ಸುಖವಾಗಿ ನಿದ್ರಿಸೋಣ ನಡೆ (ಎಂದಿಬ್ಬರೂ ಹೋಗುವರು.)

(ತ್ರಿಪುರಾಂತಕನ ದೇವಾಲಯ, ಕಿನ್ನರಿ ಬ್ರಹ್ಮಯ್ಯನು ಕುಳಿತುಕೊಂಡು)

ಪದ

ಪೊರೆ ಪರಮೇಶ । ಪೊರೆ ಗುಣಕೋಶ ।

ಪೊರೆ ಭವನಾಶ । ಈಶ ಮಹೇಶ ॥ ಪಲ್ಲ ॥
ಹರಿನಯನಾರ್ಚಿತ । ಘನಪದ ಸಾರಸ ।
ಕರುಣಿಪುದೆನ್ನೊಳು ವರದಗಿರೀಶ ॥ ಪೊರೆ ॥ ೧ ॥
ಅನುದಿನ ನಿನ್ನಯ । ಘನಶರಪದವ ।
ಅನುನಯದಿಂದಲಿ ಸ್ಮರಿಪೆನು ಮಾಧವ ॥ ೨ ॥

ದೇವಾ ತ್ರಿಪುರಾಂತಕೇಶ್ವರ, ಇಂದಿನವರೆಗೆ ಗುರು, ಲಿಂಗ, ಜಂಗಮಾದಿಗಳ ಸೇವೆಯನ್ನೂ, ನಿನ್ನ ಪಾದ ಧ್ಯಾನವನ್ನೂ ಕುಂದು ಕೊರತೆಯಿಲ್ಲದಂತೆ ಮಾಡಿದೆನು. ಮುಂದಾದರು ನಿನ್ನ ಪಾದ ಭಕ್ತಿಯಲ್ಲಿಯೇ ನನ್ನ ಮನವು ಸದಾ ನಟ್ಟಿರುವಂತೆ ಕಾರುಣ್ಯವನ್ನು ತೋರು.

(ಓರ್ವ ದಾರಿಕಾರನು ಪ್ರವೇಶಿಸಿ)

ದಾರಿಕಾರ: (ನೋಡಿ) ಓಹೋ ಈ ಶಿವಾಲಯದಲ್ಲಿ ಬಹು ತೇಜಸ್ವಿಯಾದ ಶಿವಯೋಗಿಯೋರ್ವನು ಕುಳಿತಿರುವನು. ಇಂಥ ಮಹಾತ್ಮರ ದರ್ಶನವೇ ಪುಣ್ಯ. (ಮುಂದೆ ಬಂದು) ಏನು ಸ್ವಾಮಿಗಳೇ, ತಾವು ಯಾರು? ಮತ್ತು ತಮ್ಮ ಪವಿತ್ರವಾದ ನಾಮಧೇಯವಾದರೂ ಯಾವದು?

ಕಿನ್ನರಯ್ಯ: ಅಯ್ಯಾ, ನಮ್ಮದು ಒಂದೂರೆಂದು ಹೇಳಲಿಯಾ? ಸರ್ವ ಜಗತ್ತೇ ನನ್ನದು. ನನ್ನನ್ನು ಕಿನ್ನರಿ ಬ್ರಹ್ಮಯ್ಯನೆಂದು ಕರೆಯುವರು. ಅಪ್ಪಾ ನೀನೆಲ್ಲಿ ತೆರಳುವೆ?

ದಾರಿಕಾರ: ಸ್ವಾಮೀ, ನಾನು ಆಪ್ತರೂರಿಗೆ ತೆರಳುವೆನು. ಮಹಾತ್ಮರಾದ ತಮ್ಮ ಪಾದ ದರ್ಶನಕ್ಕಾಗಿ ಇಲ್ಲಿಗೆ ಬಂದೆನು. ಇನ್ನು ನನಗೆ ದಯವಿಟ್ಟು ಅಪ್ಪಣೆಯನ್ನು ಕೊಟ್ಟರೆ ತೆರಳುವೆನು.

ಕಿನ್ನರಯ್ಯ: ನಿನಗೆ ಎಲ್ಲೆಲ್ಲಿಯೂ ಶುಭವಾಗಲಿ, ಸಂತೋಷದಿಂದ ಹೋಗಿ ಬಾ (ದಾರಿಕಾರನು ಹೋಗುವನು). ದೇವಾ ಉಮಾಧವ, ಧರೆಯೊಳಿರುವ ಸವಣರು ಪರಶಿವ ಮತಕ್ಕೆ ತೋರುವ ನಿಷ್ಕಾರುಣ್ಯವನ್ನು ಈಕ್ಷಿಸುತ್ತ ಸ್ವಸ್ಥಚಿತ್ತನಾಗಿಯೇ ಕುಳಿತಿರುವೆಯಲ್ಲ? ಈ ಶಿವಮತದ ಪ್ರತಿಷ್ಠೆಯನ್ನು ಬಸವೇಶನೋರ್ವನೇ ಏನು ಮಾಡ್ಯಾನು? ಶಂಕರಾ, ಇದಕ್ಕೆ ನೀನೂ ಸಹಾಯಕನಾಗು. (ಎಂದು ಧ್ಯಾನಸ್ಥ ನಾಗುವನು).

(ಇಷ್ಟರಲ್ಲಿ ವಿಟನು ಕುರಿಯೊಡನೆ ಪ್ರವೇಶಿಸಿ)

ಪದ

ಮಾನಗೇಡಿಯಾದೆನು ನಾ । ಬಲು । ಧನಹೀನನಾದೆನು ನಾ ॥ ಪಲ್ಲ ॥
ಪಾಪಿಸೂಳೆ ತಾ । ಮೋಹವ ತೋರಿಸಿ । ಈ
ಪರಿಯನ್ನಗೆ ಮಾಡಿದಳು ।
ಕುಲಗೇಡಿಯ ಮನೆ ಕಸವಗುಡಿಸುತಲಿ ಕಾಲವನ್ನು
ನಾ ಕಳೆಯುವೆನು ॥ ೧ ॥
ಕೋಪದಲೀ ಪರಿ ಬಾಧೆಯಗೈಯುತ
ಧಪಧಪ ಬಡಿಯುತಲೊದೆಯುವಳು ।
ಈಪರಿಯನು ತಾ । ವರಿಯುತ ಮನುಜರು
ಏಕೆ ವೇಶ್ಯೆಯಲಿ ಸೇರುವರು ॥ ೨ ॥
ಮಾನಗೇಡಿಯಾದೆನ್ನಯ ಭವಣಿ
ಮಾನವರೆಲ್ಲರು ಮನಸಿನಲಿ ।

ನೀಪಿದನರಿಯುತಲೆನ್ನಯ
ಪರಿಯಲಿ ಹೋಗಬೇಡಿರೀ ಕಾರ್ಯಕ್ಕೆ ॥ ೩ ॥

ಅಹಾ ! ಏನು ನನ್ನ ಅವಸ್ಥೆಯಾಯಿತು? ಮೊದಲು ನನ್ನೊಳ್ ದಾಸತ್ವಕ್ಕೆ ಅನೇಕರು ಸೇರುತ್ತಿದ್ದರು; ಆದರೆ ಈಗ ನಾನು ಪರರ ದಾಸನಾಗಬೇಕಾಯಿತು. ಪುರುಷರ ದಾಸತ್ವವನ್ನು ಹ್ಯಾಗಾದರೂ ಸ್ವೀಕರಿಸಬಹುದು; ಆದರೆ ಈಗ ಈ ದುರಳ ವಾರನಾರಿಯ ದಾಸತ್ವವನ್ನು ಸ್ವೀಕರಿಸಿದ್ದು ಎಂಥ ನಾಚಿಕೆಗೇಡಿತನವು? ಇದೆಲ್ಲ ಆ ದುಷ್ಟ ಕಾಮವಾಸನೆಯ ಫಲವಾಗಿರುವದು. ಪೂರ್ವದಲ್ಲಿ ಆ ನಾರಿಯು ಪರಿಪರಿಯ ಮೋಹಜಾಲದಿಂದ ನನ್ನನ್ನು ಮಾರನಾಟಕ್ಕೆ ಮನಪ್ರೊಲಿಸಿ ನನ್ನಲ್ಲಿರುವ ಸರ್ವ ಧನವನ್ನೂ ಸೆಳೆದಳು. ಡೊಂಬರು ವೃದ್ಧರಾದ ಮೇಲೆ ಗಾರ್ದಭಗಳನ್ನು ಕಾಯಲಿಕ್ಕೆ ನೇಮಿಸುವಂತೆ, ಈಗ ಧನಹೀನನಾದ ನನ್ನನ್ನು ದಾಸತ್ವಕ್ಕೆ ಸೇರಿಸಿಕೊಂಡಳು. ಹೀಗೆ ಮಾನಗೇಡಿಯಾದರೂ ದಿನಕ್ಕೊಂದಾವರ್ತಿ ಅವಳ ಮುಖದರ್ಶನವಾಗದೆ ಜೀವಕ್ಕೆ ಸೊಗಸಾಗುವದಿಲ್ಲ. ಸರ್ವಾಭರಣ ವಸ್ತ್ರವಿಭೂಷಿತನಾದ ನಾನು ಈಗ ಮಲಿನಾಂಬರಧಾರಿಯಾಗಿ ಕುರೂಪಿಯಂತೆ ಕಾಲ ಕಳೆಯಬೇಕಾಯಿತು. ಇಷ್ಟಾದರೂ ಸುಖದಿಂದಿದ್ದಿದ್ದೇನಂದರೆ "ಮೇಲೆ ಮೇಲೆ ಒದಿಕೆ, ಕಸಬರಿಗೆಯ ಬಡತ" ಇವುಗಳು ಪ್ರಸಾದ ರೂಪವಾಗಿ ದೊರೆಯುವವು. ಪಂಚಾಮೃತ ಭೋಜನ ಮಾಡುತ್ತಿದ್ದ ನಾನು ಈಗ ಆ ಸೂಳೆಯ ಎಂಜಲಕ್ಕೆ ಜೋತುಕೊಂಡು ಕೂಡ್ರಬೇಕಾಯಿತು. ಇದನ್ನೆಲ್ಲ ಪರಿಶೀಲಿಸಿದರೆ ಕಾಮವಿಕಾರಿಗಳ ಮೋರೆಯನ್ನು ಸಹ ನೋಡಬಾರದು. ಈ ವನಿತೆಯರ ಸಂಗದಿಂದ ತನುಮನಧನಗಳ ನಾಶವಾಗುವವಲ್ಲದೆ, ಜನರಲ್ಲಿ ಅಪಹಾಸ್ಯಕ್ಕೆ ಗುರಿಯಾಗಬೇಕಾಗುವದು. ಇದನ್ನು ನೋಡಿದಾಗ್ಯೂ ಮೂಢರು ವೇಶ್ಯಾಗಮನವನ್ನು ತಿರಸ್ಕರಿಸುವದೇ ಇಲ್ಲವಲ್ಲ? ಮಂದಿಗೆ ಮೂಢರೆಂದು ಯಾಕೆ ಅನ್ನಬೇಕು ! ಮೊದಲು ನಾನೇ ಮೂಢನಿದ್ದೇನೆ. ಈ ನನ್ನ ಬವಣೆಯನ್ನು ನೋಡಿರಿ. ಈಗ ಆ ಸೂಳೆಯು ಹಿರಿಯರ ಶ್ರಾದ್ಧಕ್ಕೆ ಕುರಿಯನ್ನು ತಾರೆಂದು ಹೇಳಿದಂತೆ ಈಗೇನೋ ತಂದಿರುವೆನು. ಈಗಲೇ ಇದನ್ನು ತೆಗೆದುಕೊಂಡು ಹೋಗುವೆನು. ತಡಮಾಡಿದರೆ ಪೂಜೆಯ ಸಾಹಿತ್ಯಗಳಂತೂ ಸಿದ್ಧವಾಗಿಯೇ ಇರುವವು. (ಇಷ್ಟರಲ್ಲಿ ಕುರಿಯು ಜಾರಿಕೊಂಡು ತ್ರಿಪುರಾಂತಕೇಶ್ವರನ ಗುಡಿಯನ್ನು ಹೊಗುವದು.) ಇದೇನು? ಈ ಕುರಿಯು ಗುಡಿಯನ್ನು ಪ್ರವೇಶಿಸಿತಲ್ಲ?

ಇದನ್ನು ತೆಗೆದುಕೊಂಡು ಹೋಗುವದೆಂತು? ಇಲ್ಲಿ ಕುಳಿತಿರುವ ಪುರುಷನಾವರೋ ಬಹು ತೇಜಸ್ವಿಯಾಗಿರುವನು. ಹ್ಯಾಗೆ ಮಾಡಲಿ? (ವಿಚಾರಿಸಿ) ಮಾಡುವದೇನು? ನನ್ನ ಒಡವೆಯು ಆವ ಎಡೆಯಲ್ಲಿದ್ದರೂ ಅದನ್ನು ನಾನು ತೆಗೆದುಕೊಳ್ಳಲಿಕ್ಕೆ ಅಡ್ಡಿಯಾದರೂ ಏನು? (ಎಂದು ಹಿಡಿಯಲಿಕ್ಕೆ ಹೋಗುವನು).

ಕಿನ್ನರಯ್ಯ: (ಸಿಟ್ಟಿನಿಂದ ಎಲೋ) ಎಲೋ ಅವಿವೇಕಿ, ಮೃಡನಡಿಯ ಸಾನಿಧ್ಯವಂ ಹೊಂದಿರುವ ಈ ಕುರಿಯನ್ನು ಹಿಡಿಯಬೇಡ ಕಂಡೆಯಾ ! ಇದು ಮರಣಕ್ಕೆ ಬೆದರಿ ಈ ತ್ರಿಪುರಾಂತಕನ ಮೊರೆಯನ್ನು ಹೋಗುವದಕ್ಕಾಗಿ ಈ ಗುಡಿಯನ್ನು ಪ್ರವೇಶಿಸಿರುವದು. ನೀಚನೇ, ನಿನ್ನ ವೃತ್ತಾಂತವನ್ನು ನಾನರಿಯೆನೆಂದು ತಿಳಿದಿರುವೆಯಾ? ಪಾಪೀ, ಶ್ರೀಮಂತನಾಗಿದ್ದ ನೀನು ದುರ್ವಾಸನೆಯಿಂದಲೇ ಈ ಬವಣಿಗೆ ಬಂದು, ಇನ್ನೂ ಲಜ್ಜಾಹೀನನಾಗಿ ಇಂಥ ನೀಚ ಕಾರ್ಯಕ್ಕೆ ಪ್ರವೃತ್ತನಾಗಿರುವೆಯಾ? ಪಾಮರನೇ, ಲೋಕದಲ್ಲಿ ಮರಣದ ಭಯವೆಂಬುವದು ಸಕಲ ಪ್ರಾಣಿಗಳಿಗೂ ಒಂದೇ ಸಮನಾಗಿರುವದು. ಆದಕಾರಣದಿಂದಲೇ ಈ ಪ್ರಾಣಿಯು ಪುರಹರನ ಮೊರೆ ಹೊಕ್ಕಿರುವದು. ಹೀಗೆ ಪ್ರಾಣಕ್ಕಂಜಿದೀ ಬಡ ಪ್ರಾಣಿಯನ್ನು ದುರಾಶೆಯಿಂದ ಏತಕ್ಕೆ ಹಿಡಿಯಲೆತ್ನಿಸುವೆ? ಪರತೊಂದು ಕುರಿಯನ್ನು ಕೊಂಡೊಯ್ದರೆ ನಿನ್ನ ದಾರಿದ್ರ್ಯ ಗಂಟಲದಲ್ಲಿಳಿಯುವುದಿಲ್ಲವೇ? ಇಂಥ ಕಾಕುವಿಚಾರಗಳಿಗೆ ಏಕೆ ಮನಗೊಡುವೆ? ಇದನ್ನು ತಿಳಿದು ಸುಮ್ಮನೆ ನಿನ್ನ ದಾರಿಯನ್ನು ಹಿಡಿದು ನಡೆ?

ವಿಟ: ಎಲೋ ತ್ಯಾಗಿಗಳ ಒಡೆಯನೆ, ನಿನ್ನಂಥಾ ಪ್ರಾಣಿದಯಾಪರನು ಈ ಧರಣಿಯಲ್ಲಿ ಯಾರೂ ಇಲ್ಲವೆಂಬಂತೆ ತೋರುತ್ತದೆ. ಯಾಕಂದರೆ, ಪರರೊಡವೆಯನ್ನು ಬಿಡಿಸಿಕೊಳ್ಳಬೇಕೆಂದು ಯೋಚಿಸುತ್ತಿರುವೆಯಲ್ಲ. ಕೆರೆಯ ನೀರನ್ನು ಹನಿಸಿ ವರವಂ ಪಡೆಯಬೇಕೆಂದು ಹಾರೈಸುವವರು ನಿಮ್ಮಂಥ ಪುಣ್ಯ ಪುರುಷರೇ ಅಲ್ಲವೇ? ಕುರಿಗಳು ಅಕಸ್ಮಾತ್ ಹೆರವರ ಮನೆಯೊಳಗೂ, ದೇವಾಲಯದೊಳಗೂ ಪ್ರವೇಶಿಸುವವು. ಇಷ್ಟರಿಂದಲೇ ಹಿಡಿಯಬಾರದೆಂದು ನುಡಿದರೆ ಬೆಲೆಯಂ ಕೊಟ್ಟು ತಂದಿರುವವರು ಬಿಟ್ಟಾರೆ? ಹೀಗೆ ನೀನು ವಟಗುಟ್ಟಿದರೆ ನಾನು ಬಿಟ್ಟು ಹೋಗುವೆನೇ? ಈಗ ನೀನು ನನ್ನ ಒಡವೆಯನ್ನು ಒಯ್ಯಲಿಕ್ಕೆ ಯಾವ ಕಾರಣದಿಂದಲೂ ನಿರ್ಬಂಧ ಮಾಡಲಾಗದು.

ಕಿನ್ನರಯ್ಯ: ಮೂಢಾ, ಪ್ರಾಣ ಭಯದಿಂದ ಮೃಡನಂ ಬೆನ್ನು ಬಿದ್ದಿರುವ ಈ

ಕಡುಬಡ ಪ್ರಾಣಿಯನ್ನು ಹಿಡಿದುಕೊಂಡೇ ನಡೆಯುವೆನೆಂದು ಛಲ ತೊಡುವೆಯಲ್ಲ? ಆದರೆ ಇದರ ಕ್ರಯವನ್ನು ಇಷ್ಟೇ ಎಂದು ವಿವರವಾಗಿ ಹೇಳು. ಅದನ್ನು ಕೊಡಲು ನಾನು ಸಿದ್ಧನಿರುವೆನು. ಯಾಕಂದರೆ ಶಿವಶರಣರು ಶರಣಾಗತರನ್ನು ಪರರ ಪಾಲು ಮಾಡುವರೇ? ಪಾಪೀ, ಬೇಡಿದಷ್ಟು ಧನವನ್ನು ಕೊಡುವೆನು. ಅದನ್ನು ತೆಗೆದುಕೊಂಡು ಬಂದ ದಾರಿಯನ್ನು ಹಿಡಿದು ನಡೆ.

ವಿಟ: ಎಲೋ ಪಾಮರನೇ, ಪರ ಪ್ರಾಣಿಯ ಮೇಲೆ ನೀನಷ್ಟು ದಯಾಪೂರ್ಣನಾದರೆ ಅದರ ಕ್ರಯದ ವಿವರವನ್ನು ಹೇಳುತ್ತೇನೆ ಕೇಳು. ಏನಂದರೆ ಮಾನವನ ಪ್ರಾಣದ ಕ್ರಯವು ಒಂದು ಸಾಸಿರ ಹೊನ್ನಿರುವದಷ್ಟೇ? ಆದರೆ ನಿನಗೆ ಸಕಲ ಪ್ರಾಣಿಗಳೂ ಸಮನಾಗಿ ತೋರಿದ ಬಳಿಕ ಈ ಕುರಿಯ ಪ್ರಾಣಕ್ಕೂ ಒಂದು ಸಾವಿರ ಹೊನ್ನನ್ನು ಕೊಟ್ಟು ಬಿಡಿಸಿಕೊಳ್ಳ ಬೇಕಾಗುವದು. ಕಂಡ ಮನೆಯಂ ತಿರಿದುಂಡು ಅಂಡಲೆಯುವ ನಿನ್ನಂಥ ಭಂಡನು ಇದರ ಕ್ರಯವನ್ನು ಕೊಡುತ್ತೀ ಏನು? ಇದೆಂದಿಗೂ ಆಗದ ಮಾತು ಕಂಡೆಯಾ?

ಕಿನ್ನರಯ್ಯ: **ಪದ**

ಧನಗ್ರಹಿಸೆಲೆಪರಮಪಾಪಿ । ಹೀನತನದೆ ಪರಶಿವ
ನುರು ನೇಮವ । ಮೀರುತಲಧಮನಶೇರ್ದೆ
ಪಾಪದಿ ॥ ದನ ॥ ಹರಣದ ಭಯದೊಳ್ ।
ಹರನಡಿಯನುತಾ । ನೆರೆನಂಬಿದ ಈಪಶುವನು
ಗ್ರಹಿಸುತೆ । ತೆರಳುವೆನೆಂದುರೆಗೈದೆಪಣವ ॥ ೧ ॥

ಎಲೋ ಕಟುಕನೇ, ಬಲು ಹರಟೆಯನ್ನು ಬಡಿಯಬೇಡ. ನೀನು ನುಡಿದಂತೆ ಸಾಸಿರ ಹೊನ್ನನ್ನೇ ಕೊಡುವೆನು ಹಿಡಿ. ಕುರಿಯನ್ನು ಬಿಟ್ಟು ಬಿಡು.ಇದಕ್ಕೂ ಮೀರಿ ದುರಾಶೆಯಿಂದ ದುಡುಕು ಮಾಡಿದರೆ ಬಿಡುವದಿಲ್ಲ. ಮೃಡನ ಮುದ್ರೆಯನ್ನು ಒತ್ತಿ ಬಿಡುತ್ತೇನೆ ಕಂಡೆಯಾ?

ವಿಟ: (ತನ್ನೊಳಗೆ) ಈ ಮೂಢನು ಬೇಡಿದಷ್ಟು ಧನವನ್ನು ಕೊಡಲೊಪ್ಪಿರುವನು. ಅದನ್ನು ತೆಗೆದುಕೊಂಡು ಪ್ರಿಯಳಾದ ವೇಶ್ಯೆಯ ಸ್ವಾಧೀನಪಡಿಸಿ, ಅವಳಿಗೆ ಮತ್ತೊಂದು ಕುರಿಯನ್ನು ಕೊಂಡೊಯ್ದು ಮುಂಚಿನಂತೆ ಮಾರನಾಟದಲ್ಲಿ ಆನಂದ ಪಡುವೆನು (ಕಿನ್ನರಯ್ಯನಿಗೆ) ಕೊಡು ಧನವನ್ನು.

ಕಿನ್ನರಯ್ಯ: ಪಾಪೀ, ಧನವೇ ದೈವವೆಂದು ತಿಳಿದ ನೀನು ಈ ಸಾಸಿರ ಹೊನ್ನನ್ನು

ತೆಗೆದುಕೊಂಡು ನಡೆ. (ವಿಟನು ಹೋಗುವನು.) ದೇವಾ, ವನಿತೆಯರ ಮನಾನಂದಕ್ಕಾಗಿ ತನು–ಮನ–ಧನಗಳನ್ನು ವಿನಿಯೋಗಿಸುವ ಮಾನವನ ಮದವು ಎಂಥ ನೀಚತಮವಾಗಿರಬಹುದು? ಶಂಕರಾ, ವಾರನಾಟದೋಳ್ ಮನನಾಟದವನು ಎಂಥ ಕ್ರೂರ ಕರ್ಮಗಳನ್ನಾದರೂ ಮಾಡಲಿಕ್ಕೆ ಹಿಂಜರಿಯುವದಿಲ್ಲವಲ್ಲ? ಇಂಥ ಕ್ರೂರ ಕರ್ಮಗಳನ್ನೆಸಗುವ ಮೂಢರಿಗೆ ಯಾವ ನರಕವು ದೊರಕುವದೋ ನಾ ಕಾಣೆ. ಸಕಲ ಪ್ರಾಣಿಗಳಿಗೂ ಸಮಾನನಾಗಿರುವ ಹೇ ಪರಮೇಶ್ವರನೇ, ಇದನ್ನು ನೀನೇ ಪರಿಶೀಲಿಸು. (ಪರದೆ ಬೀಳುವದು.)

(ವೇಶ್ಯೆಯು ಕುಳಿತಿರುವಳು. ವಿಟನು ಪ್ರವೇಶಿಸಿ)

ವಿಟ: (ವೇಶ್ಯೆಯನ್ನು ನೋಡಿ) ಇಕೋ ಎನ್ನ ಮನಾನಂದದಾಯಕವಾದ ಮೂರ್ತಿಯು ವಿರಾಜಮಾನವಾಗಿರುವದು. ಇವಳ ಸಮೀಪಕ್ಕೆ ಹೋಗಿ ನಡೆದ ವೃತ್ತಾಂತವನ್ನು ವಿವರಿಸುವೆನು. (ಮುಂದೆ ಬಂದು ಹಣದ ಚೀಲವನ್ನು ಮುಂದಿಟ್ಟು) ನಾರೀಮಣಿ, ನೀನು ಹಿರಿಯರ ಶ್ರಾದ್ಧಕ್ಕೆ ಕುರಿಯನ್ನು ತಾರೆಂದು ನನ್ನಂ ಕಳುಹಿದಂತೆ ಕುರಿಯನ್ನು ತೆಗೆದುಕೊಂಡು ದಾರಿಯೊಳ್ ಬರುತ್ತಿರೆ, ಆ ಕುರಿಯು ತ್ರಿಪುರಾಂತಕನ ದೇವಾಲಯಮಂ ಪೊಕ್ಕಿತು. ಆ ಮೇಲೆ ಅದಂ ತರಹೋಗಲು, ಅಲ್ಲೋರ್ವ ಶಿವಯೋಗಿಯು ಆ ಕುರಿಯನ್ನು ಬಿಡಿಸಿಕೊಳ್ಳಲು ಯತ್ನಿಸಿದನು. ಆಗ ನನ್ನ ಚಾತುರ್ಯವನ್ನು ಉಪಯೋಗಿಸಿ ಈ ಸಾವಿರ ಹೊನ್ನನ್ನು ತೆಗೆದುಕೊಂಡು ಆ ಕುರಿಯನ್ನು ಬಿಟ್ಟು ಬಂದೆನು. ಹೇ ಎನ್ನ ಪ್ರಾಣ ಪದಕವೇ, ಈ ಧನವನ್ನು ಸ್ವೀಕರಿಸಿ ನನ್ನ ಚಾತುರ್ಯಕ್ಕೆ ತಕ್ಕ ಮೆಚ್ಚಿಗೆಯನ್ನು ಕೊಡು.

ಕಲಾವತಿ:

ಪದ

ಛೀ ದುರಾತ್ಮನೆ । ಜ್ಞಾನರಹಿತನೆ । ಏನಿದನೆಸಗಿದೆ
ಪಶುಗಳಪರಿಯಲಿ ॥ ಪಲ್ಲ ॥
ತೆರಳೆಲೆ ಬಳಿಯಲಿ ನಿಲದಲೆ ಬೇಗನೆ ॥ ಛೀ ॥ ೧ ॥
ಧನವದು ಘನತರವೆನುತಲಿ ತಿಳಿದಿಹೆ ॥ ಛೀ ॥ ೨ ॥

ಎಲೋ ಇದೇನು ಕಾರ್ಯವನ್ನು ಮಾಡಿದಿ? ನಿನ್ನಂಥ ಅಜ್ಞಾನಿಗಳು ಈ ಭೂಮಿಯ ಮೇಲೆ ಅತಿ ವಿರಳವಾಗಿರುವರು. ಮೂಢಾ, ನನ್ನೆದುರಿಗೆ ನಿಲ್ಲಬೇಡ. ಧನದಾಶೆಯಿಂದ ಕುರಿಯನ್ನು ಬಿಟ್ಟು ಬಂದು ಸರಿ

ವೇಶ್ಯೆಯರಲ್ಲಿ ನನ್ನನ್ನು ಹಾಸ್ಯಕ್ಕೆ ಗುರಿ ಮಾಡಿದೆ. ಮೂಢಾ, ಧನವೆಂದರೆ ಅದು ನಿನಗೆ ದೊಡ್ಡದಾಗಿದೆ. ಧನವನ್ನು ಬೀದಿ ಬೀದಿಯಲ್ಲಿ ಬಿತ್ತಿಸುವಷ್ಟು ಸತ್ವವು ನನ್ನಲ್ಲಿ ಅದೆ. ಹೀಗಿದ್ದು ಆ ದುರಳ ಶೈವನಿಗೆ ಬೆದರಿ ಕುರಿಯನ್ನು ತೊರೆದು ಬಂದೆಯಾ? (ಬಡಿದು) ತೀವ್ರ ಹೋಗಿ ಕುರಿಯನ್ನು ತಂದರೆ ಸರಿಯಾಯಿತು. ಇಲ್ಲದಿದ್ದರೆ ನಿನಗಾಗುವ ಗತಿಯೇ ಬೇರೆ ಇರುವದು. ತೀವ್ರ ಹೋಗು.

ವಿಟ: ಹೇ ಮದಗಜಗಾಮಿನಿ, ವಿಧವಿಧದಿಂದ ವಾದ ಮಾಡಿ ಒದಗಿಸಿದ ಈ ದ್ರವ್ಯವನ್ನು ದಯವಿಟ್ಟು ಸ್ವೀಕರಿಸೆಂದರೆ ಪಾದತಲದಿಂದ ಒದೆಯುವೆಯಲ್ಲ. ಮೂಢಳೆ, ಪೆರತೊಂದು ಕುರಿಯನ್ನು ತಂದರೆ ಅದರ ಮಾಂಸವು ನಿನ್ನ ಗಂಟಲದಲ್ಲಿಳಿಯುವುದಿಲ್ಲವೇ? ನಲ್ಲಭಳೇ, ಇಂತು ಛಲವಿಡಿಯದೆ ನಿನ್ನ ಕೃಪಾಕಟಾಕ್ಷವನ್ನು ಎನ್ನ ಮೇಲೆ ಚಲ್ಲು.

ಕಲಾವತಿ: ಎಲೋ ವಾದಿ, ದೇವರ ಸಲುವಾಗಿ ತಂದ ಕುರಿಯನ್ನು ಬಿಟ್ಟು ಇದೇನು ಮಾಡಿದಿ? ವ್ಯರ್ಥ ಮಾತಾಡದೆ ಕುರಿಯನ್ನು ತರುವದಕ್ಕೆ ತೆರಳು, ಬೇಗ ತೆರಳು. (ಎಂದು ಹೊಡೆದು ಹೋಗುವಳು.)

ವಿಟ: (ತನ್ನೊಳಗೆ) ಈ ಅವಿಚಾರಿಯು ಶಿವಯೋಗಿಗೆ ಕೊಟ್ಟ ಕುರಿಯನ್ನು ಆವ ವಿಧದಿಂದಲೂ ಬಿಡನೆಂದು ಭಾವದಲ್ಲಿ ನಿಶ್ಚಯಮಾಡಿಕೊಂಡಳಲ್ಲ, ಏನು ಮಾಡಲಿ? ಆ ಕಿನ್ನರಯ್ಯನು ಮಹಾನುಭಾವನು. ಆತನು ಕುರಿಯು ಮೊದಲೇ ದೊರೆಯಲಾರದೆಂದೂ, ದುರಾಶೆಯಿಂದ ಕರವನ್ನು ಹಚ್ಚಿದರೆ ಶಿರವನ್ನು ತರಿಯುವೆನೆಂದೂ ಖಂಡಿತವಾಗಿ ಹೇಳಿಬಿಟ್ಟಿರುವನು. ಇನ್ನು ಮೇಲೆ ತಿರುಗಿ ಹೋದರೆ ನನ್ನ ಗತಿಯು ನೆಟ್ಟಗಾಗುವದಿಲ್ಲ. ಬಿಟ್ಟರೆ ಇತ್ತಲೂ ನೆಟ್ಟಗಾಗುವದಿಲ್ಲ. ಈ ದುರಳ ವಾರನಾರಿಯ ಕೈಯಿಂದ ಬಡಿಸಿಕೊಳ್ಳುವದಕ್ಕಿಂತ ಆ ಕುರಿಯನ್ನು ತರಲಿಕ್ಕೆ ಹೋಗಿ ಆ ಪರಮ ಪೂಜ್ಯನಾದ ಕಿನ್ನರಯ್ಯನ ಕರದಿಂದ ಮರಣ ಹೊಂದುವದು ನೆಟ್ಟಗೆ ತೋರುವದು. "ಆಗಲಿ ದೇವಾಲಯಕ್ಕೆ ತೆರಳುವೆನು." (ಹೋಗುವನು.)

ಕಿನ್ನರಯ್ಯ: (ಕಿನ್ನರಯ್ಯನು ದೇವಾಲಯದಲ್ಲಿ ಕುಳಿತುಕೊಂಡು,)

(ವಿಟನು ಸುಳಿದಾಡುವದನ್ನು ನೋಡಿ) ಇದೇನು? ಕುರಿಯನ್ನು ಕ್ರಯಕ್ಕೆ ಕೊಟ್ಟು ಹೋದ ಆ ಭ್ರಷ್ಟನು ಈ ಕಡೆಗೇ ಹೊರಟು ಬಂದನು. ಏನಾದರೂ ತನ್ನ ಕಾರ್ಯನಿಮಿತ್ತ ಬಂದಿರಬಹುದು. ಇರಲಿ.

ವಿಟ: (ನೋಡಿ) ಈಗಂತೂ ಆ ಹರಭಕ್ತನಾದ ಕಿನ್ನರಯ್ಯನು ಪ್ರಶಾಂತ ಮುದ್ರೆಯಿಂದ ಅನಂತ ಮೂರ್ತಿಯನ್ನು ಧ್ಯಾನಿಸುತ್ತ ಕುಳಿತಿರುವನು. ಇದೇ ಸಮಯ. ಚೋರತನದಿಂದ ಈ ಕುರಿಯನ್ನು ಹೊತ್ತುಕೊಂಡು ಹೋಗುವೆನು. (ಹಿಡಿಯ ಹೋಗಲು)

ಕಿನ್ನರಯ್ಯ: (ನೋಡಿ) ಎಲೋ ಚೋರನೇ, ಮಾರಿಕೊಂಡ ಕುರಿಯನ್ನು ಮರಳಿ ಚೋರತನದಿಂದ ಒಯ್ಯುವೆಯಾ? ನಿಲ್ಲು ನಿಲ್ಲು, ಖಿಲ್ಲ ನಿನ್ನ ಹಲ್ಲು ಮುರಿದು ಬಿಡುವೆನು. ಮೂಢಾ, ಜಾಗ್ರತೆಯಿಂದ ಕುರಿಯನ್ನು ಬಿಟ್ಟು ತೆರಳು.

ವಿಟ: ಕಿನ್ನರಯ್ಯನೇ, ಈ ಕುರಿಯನ್ನು ಬಿಟ್ಟು ಎನ್ನ ಅರಗಿಳಿಯಂತಿದ್ದ ವಾರನಾರಿಯ ಬಳಿಗೆ ತೆರಳಲು ಅವಳು ತನ್ನ ದೇವರ ಸಲುವಾಗಿ ತಂದ ಕುರಿಯನ್ನೇ ತಾರೆಂದು, ಈ ಧನವನ್ನು ಕೊಟ್ಟು ತಿರುಗಿ ಕಳಿಸಿರುವಳು. ದಯಮಾಡಿ ಇದನ್ನು ಸ್ವೀಕರಿಸಿ ನನ್ನ ಕುರಿಯನ್ನು ನನಗೆ ಬಿಟ್ಟುಕೊಟ್ಟರೆ ಬಹು ನೆಟ್ಟಗಾಗುವದು.

ಕಿನ್ನರಯ್ಯ: ಎಲೋ ವಚನಭ್ರಷ್ಟಾ, ಹೇಳಿದ ಕ್ರಯವನ್ನು ಕೊಟ್ಟು ಅಷ್ಟ ಮೂರ್ತಿಯಾದ ಪರಶಿವನ ಶ್ರೇಷ್ಠವಾದ ಲಿಂಗಮುದ್ರೆಯನ್ನು ಇದಕ್ಕೆ ಇಟ್ಟುಬಿಟ್ಟಿರುವೆನು. ಇಂಥದನ್ನು ಚೋರತನದಿಂದ ಒಯ್ಯಲು ಬಂದಿರುವೆಯಾ? ಪಾಪಿ, ಒಳ್ಳೆಯ ಮಾತಿನಿಂದ ಅದನ್ನು ಬಿಟ್ಟು ಬಿಡು. ಇಲ್ಲದಿದ್ದರೆ ಪ್ರಾಣಕ್ಕೆ ಎರವಾದಿ.

ವಿಟ: ಯೋಗೀಶ್ವರನೇ, ಈ ಕುರಿಯನ್ನು ತೆಗೆದುಕೊಂಡು ಹೋಗದಿದ್ದರೆ ಕ್ರೂರಳಾದ ವಾರನಾರಿಯು ಪರಿಪರಿಯಾಗಿ ಪೀಡಿಸುವಳು. ಅದರಿಂದ ದಯಮಾಡಿ ಇದನ್ನು ತಿರುಗಿ ಕೊಡಬೇಕೆಂದು ಬೇಡುವೆನು. ಬೇಡಿದಿಷ್ಟಾರ್ಥಗಳನ್ನು ಕೊಡುವ ಕಡುದಾತೃಗಳಾದ ನಿಮ್ಮನ್ನು ಬೇಡದೆ ಇನ್ನಾರನ್ನು ಬೇಡಲಿ?

ಕಿನ್ನರಯ್ಯ: ಎಲೋ ಅವಿಚಾರಿಯೇ, ಆವ ವಿಧದಿಂದಲೂ ಈ ಬಡ ಪ್ರಾಣಿಯನ್ನು ಬಿಡುವವನಲ್ಲೆಂದು ನಂಬು. ಇದಕ್ಕೂ ಮೀರಿ ದುರಾಶೆಯಿಂದ ದುಡುಕು ಮಾಡಿದರೆ. ನಡುವಿನ ಮೇಲೆ ಒದೆದು ಬಿಡುವೆನು. ತಿಳಿಯಿತೇ.

ವಿಟ: (ಯೋಚಿಸಿ) ಈತನು ಸಾಮೋಪಾಯದಿಂದ ನಾನೆಷ್ಟು ರೀತಿಯಿಂದ ಕೇಳಿದರೂ ಈ ಕುರಿಯನ್ನು ಕೊಡುವದಿಲ್ಲ. "ಧೈರ್ಯಂ

ಸರ್ವತ್ರಸಾಧನಂ" ಧೈರ್ಯದಿಂದ ಇವನೊಡನೆ ಬಡಿದಾಡಿಯಾದರೂ ಇದನ್ನು ತೆಗೆದುಕೊಂಡೇ ಹೋಗುವೆನು. (ಕಿನ್ನರಯ್ಯನಿಗೆ) ಎಲೋ ಮೂಢ ಕಿನ್ನರಯ್ಯನೇ, ನಾನು ವಿನಯದಿಂದ ನಿನ್ನನ್ನು ಬೇಡಿಕೊಂಡರೆ ಶ್ವಾನನಂತೆ ಗುರುಗುಟ್ಟುವದರಲ್ಲಿಯೇ ಕಾಲಹರಣ ಮಾಡಿದಿ. ಇಕೋ ಈ ಕುರಿಯನ್ನು ದುಡುಕಿನಿಂದ ಒಯ್ಯುವೆನು. ಕಡುಗಲಿಯಾದರೆ ಬಿಡಿಸಿಕೋ (ಎಂದು ಕುರಿಯನ್ನು ಒಯ್ಯಲು ಹವಣಿಸುವನು.)

ಕಿನ್ನರಯ್ಯ: ಎಲೋ ಪಾತಕಿಯೇ, ವ್ಯರ್ಥವಾಗಿ ದುಡುಕಬೇಡ; ಸುಮ್ಮನೆ ನನ್ನ ಕೈಯಿಂದ ಹತನಾಗಬೇಡ. ಮಲ್ಲಿಕಾರ್ಜುನನ ಮುದ್ರೆಯನ್ನು ಒತ್ತಿ ಬಿಟ್ಟಿರುವ ಈ ಪ್ರಾಣಿಯನ್ನು ಒಡಿಯಲಿಕ್ಕೆ ನಿನ್ನಂಥ ಪಾಪಿಯು ಯೋಗ್ಯನಲ್ಲ. ಖಿಲ್ಲಾ ಹುಟ್ಟಿ ಬರಲಿಕ್ಕೆ ಹುಲ್ಲು ಬೀಜವಲ್ಲ. ಸದ್ದಿಲ್ಲದೆ ಅದನ್ನು ಬಿಟ್ಟು ತೆರಳು.

ವಿಟ: ಎಲೋ ಡಾಂಭಿಕನೇ, ಸಾಮೋಪಾಯದಿಂದ ಹೇಳಿದರೆ ನೀನು ಕೇಳುವಂತೆ ಕಾಣುವದಿಲ್ಲ. ಇಕೋ ನಿನ್ನ ಕುತ್ತಿಗೆಯನ್ನು ಹಿಡಿದು ಅತ್ತ ನೂಕುವೆನು. ತಾಳಿಕೋ.

ಕಿನ್ನರಯ್ಯ: **ಪದ**

ಛೀ ದುಷ್ಟ ಚಾಂಡಾಲ ಪಾಪಿಯಧಮ।
ಭೂಧರಾತ್ಮಜೆಯರಸನುರುನೇಮಮೀರ್ದ ॥ ಪಲ್ಲ ॥
ಕಾಮುಕನೆ ನಾನಿಂತು ಪ್ರೇಮದಲಿ ಪೇಳಿದರು ।
ಸೋಮಧರನೇಮಕವಮಾನಗೈದು।
ಈಮಹಾ ಪಾತಕವಗೈಯಲುಪಕ್ರಮಿಸಿದೆಯಾ ।
ತಾಮಸಿಯೆ ದೀರ್ಘನಿದ್ರೆಯ ಪೊಂದು ಜವದಿ ॥ ೧ ॥

ಎಲೋ ತಾಮಸಿಯೇ, ಸಾಮೋಪಾಯದಿಂದ ನಾನೆಷ್ಟು ಹೇಳಿದರೂ ಉಮಾಧವನ ನೇಮಕ್ಕೆ ವಿಪರೀತವಾಗಿ ಈ ಪರಿ ದುಷ್ಟಕೃತ್ಯಕ್ಕೆ ಆರಂಭಿಸಿದೆಯಾ? ಪಾಪೀ ನಿನ್ನ ಮೂರ್ಖತನಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಿರುವೆನು. ಎಂದೂ ಏಳದಂಥ ದೀರ್ಘ ನಿದ್ರೆಯನ್ನು ಹೊಂದು. (ವಿಟನು ಬೀಳುವನು.)

ಸ್ತ್ರೀಯರ ಮೋಹ ಜಾಲದಲ್ಲಿ ಸಿಕ್ಕಿದ ಮಾನವನು ಪಾಪ ಪುಣ್ಯಗಳ ವಿಚಾರವಿಲ್ಲದೆ, ದುಷ್ಟ ಕೃತ್ಯಗಳನ್ನು ಮಾಡಿಲಿಕ್ಕೆ ಒಂದೆ ಮುಂದೆ ನೋಡುವುದಿಲ್ಲವೆಂಬುದನ್ನು ಈ ಕಾಮಾಂಧನಿಂದ ಸಂಪೂರ್ಣವಾಗಿ

ತಿಳಿದುಕೊಂಡೆನು. ದೇವಾ ಸಚ್ಚಿದಾನಂದ, ಇಂಥ ಪಾತಕಿಗಳಿಗೆ ಪಾಪರಹಿತವಾದ ನಿನ್ನ ಪಾದತಲವು ದೊರೆಯುವದೆಂತು? ಅಯ್ಯೋ ! ಸರ್ವಜೀವಿಗಳಲ್ಲಿ ಮಾನವನೇ ಶ್ರೇಷ್ಠನು. ಸರ್ವ ಪದವಿಗಳಲ್ಲಿ ಮೋಕ್ಷ ಪದವಿಯೇ ಹೆಚ್ಚಿನದು. ಆದರೆ ಶ್ರೇಷ್ಠವಾದ ಮಾನವ ಜನ್ಮಕ್ಕೆ ಬಂದು, ಘನತರವಾದ ಮೋಕ್ಷ ಪದವಿಯನ್ನು ದೊರಕಿಸುವದನ್ನು ಬಿಟ್ಟು, ಘೋರ ನರಕವನ್ನು ದೊರಕಿಸಲು ಪ್ರವೃತ್ತರಾಗಬೇಕೇ? ಅಯ್ಯೋ ! ಹಾಲು ಕುಡಿಯುವ ಈ ಬಾಯಿಯಿಂದ ಮದ್ಯವನ್ನು ಸೇವಿಸುವದೇ? ಅಮೃತವಂ ಭುಂಜಿಸುವ ಈ ಬಾಯಿಯಿಂದ ವಿಷಮಂ ಭುಂಜಿಸುವದೇ? ಥೂ, ಇಂಥ ಮೂರ್ಖರ ಜೀವಿತಕ್ಕೆ ಧಿಕ್ಕಾರವಿರಲಿ. ಮಾಯೇ, ನಿನ್ನ ಕೌಶಲ್ಯವು ವರ್ಣಿಸತಕ್ಕಂಥಾದ್ದು. ನಿನ್ನ ವಶನಾದ ಮನುಷ್ಯನನ್ನು ಕೋತಿಯನ್ನು ಆಡಿಸಿದಂತೆ ಆಡಿಸುವೆಯಲ್ಲವೇ? ಅಯ್ಯೋ! ಆ ವಾರನಾರಿಯ ಮೋಹಜಾಲದಲ್ಲಿ ಈ ನರಪಶುವನ್ನು ಶಿಲ್ಕಿಸಿ, ಅದು ಪ್ರಾಣದಿಂದ ಎರವಾದದ್ದನ್ನು ನೋಡಿ ಗಹಗಹಿಸಿ ನಗುವೆಯಾ? ಮಾಯೇ, ನೀನು ನನ್ನ ಕೈಯಲ್ಲಿ ಸಿಗುತ್ತಿದ್ದೆಯಾದರೆ ನಿನ್ನನ್ನು ಕುಟ್ಟಿ ನಾಮಶೇಷವಾಗಿ ಮಾಡಿ ಬಿಡುತ್ತಿದ್ದೆನು; ಉಪಾಯವಿಲ್ಲ. ಇರಲಿ. ಈ ಪಾಪಿಯನ್ನು ವಧಿಸಿದ್ದರಿಂದ ಮಲಿನನಾದ ನಾನು ನಿರ್ಮಲನಾಗಲು ಜಲಾಶಯಕ್ಕೆ ತೆರಳುವೆನು. (ಎಂದು ಹೋಗುವನು.)

(ಪಾಂಥಸ್ಥನೋರ್ವನು ಪ್ರವೇಶಿಸಿ,)

ಪಾಂಥಸ್ಥ: ಅಂಯ್ಯೋ ನಮ್ಮಪ್ಪ ಶಿವಶರಣರು ಹುಚ್ಚರಂತೆ ಬೂದೀ ಬಡಕೊಳ್ಳುವವರೆಂದು ತಿಳಿದು ನಾನು ಹಾಸ್ಯ ಮಾಡುತ್ತಿದ್ದೆನು. ಅವರೊಡನೆ ಕಾಲು ಕೆದರಿ ಜಗಳ ತೆಗೆಯುತ್ತಿದ್ದೆನು. ಸನ್ಯಾಸಿಯನ್ನು ತಡವಿದರೆ ಮೈಯಲ್ಲಾ ಬೂದಿ ! ಆ ಕಿನ್ನರಯ್ಯನು ಅಷ್ಟು ಬಡಕನಾಗಿದ್ದರೂ ಒಂದೇ ಹೊಡತಕ್ಕೆ ಅಂಥಾ ದೊಡ್ಡ ಮನುಷ್ಯನನ್ನು ಕೊಂದನು. ನಾನು ದಾರೀ ಹಿಡಿದು ಬರುವಾಗ ದೂರ ಮರೆಗೆ ನಿಂತಿದ್ದೆನಾದ್ದರಿಂದಲೇ ಉಳಿದುಕೊಂಡೆನು. ಇನ್ನು ಮೇಲೆ ಶಿವಶರಣರ ಗೊಡವೆಗೆ ಎಂದೂ ಹೋಗುವದಿಲ್ಲ. ಈಗಲೇ ಹೋಗಿ ಕುಶಲಮತಿಯ ಆಪ್ತರಿಗೆ ಹೇಳಿ ಮುಂದಾಗುವ ಮೋಜನ್ನು ನೋಡಿದರಾಯಿತು (ಹೋಗುವನು).

(ಸಿಂಹಾಸನಸ್ಥ ಬಿಜ್ಜಳನೂ, ಬಸವೇಶನೂ, ಮಂಚಣ್ಣನೂ ಪ್ರವೇಶಿಸುವರು)

ಸೇವಕ: ಜಯವಾಗಲಿ ಮಹಾರಾಜರಿಗೆ.

ಬಿಜ್ಜಳರಾಜ: ಏನದು.

ಸೇವಕ: ದ್ವಾರದಲ್ಲೋರ್ವನು ಪ್ರಭುಗಳ ಸಂದರ್ಶನಾರ್ಥವಾಗಿ ಬಂದು ನಿಂತಿರುವನು.

ಬಿಜ್ಜಳರಾಜ: ಅವನನ್ನು ಒಳಗೆ ಬರಹೇಳು.

(ಓರ್ವನು ಪ್ರವೇಶಿಸಿ,)

ಪಾಂಥಸ್ಥ: ಮಹಾರಾಜನೇ, ದಂಡಿಸುವೆನು, ರಾಜಕುಲತಿಲಕನೇ, ಈ ದೀನನದೊಂದು ವಿಜ್ಞಾಪನೆಯುಂಟು. ಏನೆಂದರೆ, ನಮ್ಮ ಆಪ್ತನಾದ ಕುಶಲಮತಿ ಎಂಬವನು, ಕುರಿಯೊಂದನ್ನು ಕ್ರಯಕ್ಕೆ ಕೊಂಡು ತರುತ್ತಿರಲು, ಆ ಕುರಿಯು ತನ್ನ ಸ್ವಭಾವಕ್ಕನುಸರಿಸಿ ಈ ಊರ ಹೊರಗಿರುವ ತ್ರಿಪುರಾಂತಕೇಶ್ವರನ ದೇವಾಲಯುವನ್ನು ಹೊಕ್ಕಿತಂತೆ. ಆಗ ಕುಶಲಮತಿಯು ಕುರಿಯನ್ನು ತರಹೋಗಲು ಆ ಗುಡಿಯಲ್ಲಿ ಕುಳಿತಿದ್ದ ಶಿವಭಕ್ತನಾದ ಕಿನ್ನರಯ್ಯನೆಂಬವನು ಆ ನಮ್ಮ ಕುಶಲಮತಿಯ ಶಿರವನ್ನು ತರಿದಿರುವನು. ಹೀಗೆ ನೀಚರಾದ ಶಿವಭಕ್ತರು ಕಟುಕರಂತೆ ಕೊಲ್ಲಹತ್ತಿದರೆ ನಾವು ಭೂಮಿಯಮೇಲೆ ಬಾಳುವದು ಬಹು ಕಠಿಣವಾಗಿ ತೋರುವುದು. ಅಯ್ಯೋ ! ಆ ನೀಚನಾದ ಶಿವಭಕ್ತನಿಗೆ ಇಷ್ಟು ಸ್ವಾತಂತ್ರ್ಯವು ಬಂದಿತೇ? ಆ ಪಾಪಿಗಳನ್ನು ನನ್ನ ರಾಜ್ಯದಲ್ಲಿಟ್ಟುಕೊಂಡದ್ದು ಜಾಲಿಯ ಮರವನ್ನು ಬೆಳಸಿದಂತಾಯಿತು. ವೇಷಧಾರಿಗಳಾಗಿ ಕಟುಕ ಕೃತ್ಯವನ್ನಾಚರಿಸುವ ಆ ನಿಟಿಲಾಂಬಕನ ಭಕ್ತರ ಹಟವು ಇಷ್ಟು ದಿಟವಾಗಿ ನಡೆಯಹತ್ತಿತೇ? ಪರಮ ಯತಿಗಳಂತೆ ದುರಾಭಿಲಾಷೆಯಿಂದ ಕಾಷಾಯ ವಸ್ತ್ರಗಳನ್ನು ಧರಿಸಿ ತಿರುಗುವ ಆ ಹರಮತದ ದುರುಳರ ಶಿರವನ್ನು ತರಿದು ಜೈನ ಮತದ ಮಾರ್ಗವನ್ನು ನಿರುಪಾಧಿಕ ಮಾಡುವೆ. ಇನ್ನು ತಡವೇಕೆ? ನೀನು ನಿನ್ನ ಸ್ಥಳಕ್ಕೆ ತೆರಳು. (ಕುಶಲಮತಿಯ ಆಪ್ತನು ಹೋಗುವನು.)

ಮಂಚಣಾರ್ಯ: (ಆತ್ಮಗತಂ) ಈ ಸಂಧಿಯು ಬಹು ಯೋಗ್ಯವಾದದ್ದು. ಈಗಲೇ ಆ ಅರಸನ ಮನಸ್ಸಿನಲ್ಲಿ ಮತ್ತಿಷ್ಟು ಕೋಪವನ್ನುಂಟು ಮಾಡುವೆನು. (ರಾಜನಿಗೆ) ರಾಜನೇ, "ಪ್ರಾರಬ್ಧಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ" ಎಂಬಂತೆ ನೀನು ಮಾಡಿದ ಕರ್ಮದ ಫಲವನ್ನು ನೀನು ಅನುಭೋಗಿಸಲೇ ಬೇಕು. ಹುಲಿಯ ಮರಿಯನ್ನು ಹಾಲುಣಿಸಿ ಬೆಳೆಸಿದರೆ ಮುಂದೆ ಅದು ತನ್ನ ಕುಲಶೀಲಗಳನ್ನು ಬಿಡುವದೇ?

ಅಂತೇ ನೀನು ಶಿವಮತದವರ ಪ್ರತಿಷ್ಠೆಯನ್ನು ಬೆಳಸುವದಕ್ಕಾಗಿಯೇ ಈ ಬಸವೇಶನನ್ನು ಸಚಿವತನಕ್ಕೆ ನೇಮಿಸಿಕೊಂಡೆ. ಈಗ ಆತನ ಬಲದಿಂದಲೇ ಈ ಪರಿ ಕ್ರೂರ ಕರ್ಮಗಳು ನಡೆಯಹತ್ತಿರುವವು. ಈ ಸಂಗತಿಯನ್ನು ನಾನು ಪ್ರಾರಂಭದಲ್ಲೇ ಹೇಳಿದೆನು. ಆದರೆ ರೋಗಿಗೆ ಅಮೃತವು ಸೇರದಂತೆ ನೀನು ನನ್ನ ಮಾತಿಗೆ ಕಿವಿಗೊಡಲಿಲ್ಲ; ಕಷ್ಟವನ್ನು ಅನುಭೋಗಿಸುವದೂ ತಪ್ಪಲಿಲ್ಲ. ನನ್ನ ಮಾತಿನ ನಿಜತ್ವವು ಈಗಾದರೂ ನಿಮಗೆ ಮನವರಿಕೆಯಾಯಿತೆ !

ಬಿಜ್ಜಳರಾಜ: ಮಂಚಣಾರ್ಯ, ಇನ್ನು ತಡವೇಕೆ? ಇದರ ಪ್ರಾಯಶ್ಚಿತ್ತವನ್ನು ಮಾಡಿಯೇ ತೀರುವೆನು. (ಬಸವೇಶನಿಗೆ) ಬಸವೇಶಾ, ನಿನ್ನ ಹರಭಕ್ತರ ಘೋರ ಕೃತ್ಯವನ್ನು ನೋಡಿದೆಯಾ? ಶಿವಭಕ್ತರು ಮಹಾಮಹಿಮರು; ಸಪ್ತಸಾಗರಗಳನ್ನು ಒಂದೇ ಬಾರಿಗೆ ಕುಡಿದು ಬಿಡುವವರು, ಮೊದಲಾದ ಡಂಭಾಚಾರದ ಮಾತುಗಳನ್ನು ಹೇಳಿ ಕ್ರೂರರಿಗೆ ಇಂಥ ಘೋರ ಕೃತ್ಯಗಳನ್ನು ಮಾಡಲಿಕ್ಕೆ ಆಸ್ಪದ ಕೊಟ್ಟಿರುವೆಯಾ? ಇಂಥ ಕಾರ್ಯ ಸಾಧಕರಾದ ನೀವು ಉರ್ವೀಪಾಲಕನಾದ ನನ್ನನ್ನೂ ಸಹ ಗಣನೆಗೆ ತಾರದಾದಿರಿ. ಇದೇ ಏನು ನಿನ್ನ ಹರಮತದ ಪರಮ ಪವಿತ್ರವಾದ ತತ್ವ? ಛೀ, ನಿನ್ನ ಹರಮತಕ್ಕೆ ಬೆಂಕಿ ಹಚ್ಚು.

ಬಸವೇಶ: ರಾಜನೇ, ಇಷ್ಟಕ್ಕೆ ಜಂಗಮ ಮೂರ್ತಿಯು ಹೀಗೆ ದುಷ್ಟ ಕೃತ್ಯವನ್ನು ಮಾಡಲಾರನು. ಸೃಷ್ಟಿ–ಸ್ಥಿತಿಲಯಾದಿಗಳಿಗೆ ಕರ್ತನಾದ ಅಷ್ಟಮೂರ್ತಿಯ ಭಕ್ತ ಶ್ರೇಷ್ಠರು ದುಷ್ಟ ಕಾರ್ಯವನ್ನು ಎಂದೂ ಮಾಡರೆಂದು ನಂಬು. ಆ ಕುರಿಯನ್ನು ಕೊಂಡವನು ಹರನೇಮಕ್ಕೆ ವಿಪರೀತವಾಗಿ ಆಚರಿಸಿದ್ದರಿಂದ ಆ ಕಿನ್ನರಯ್ಯನು ವಧಿಸಿರಬಹುದು. ಆದರೆ ಹರಭಕ್ತರು ಕರುಣಾಶಾಲಿಗಳು, ಕೋಪವನ್ನು ಜೈಸಿದವರು, ಕಾರಣವಿಲ್ಲದೆ ಪರರ ಮೇಲೆ ಹರಿ ಹಾಯುವವರಲ್ಲ.

ಬಿಜ್ಜಳರಾಜ: ಬಸವೇಶಾ, ಆ ದುಷ್ಟ ಜಂಗಮನ ಕೆಟ್ಟ ವ್ಯಾಪಾರವನ್ನು ಮನಗೊಟ್ಟು ಕೇಳಿಯೂ ಶಿವಭಕ್ತರು ದಯಾವಂತರು, ಕೋಪವನ್ನು ಜೈಸಿದವರೆಂದು ಹೇಳುವೆಯಾ? ಅದೇ ನೀನು ದಯಾವಂತರೆಂದು ಹೇಳುವವರು ಈಗ ಕ್ರೂರರೂ, ದಯಾಶೂನ್ಯರೂ, ಆಯುಧಪಾಣಿಗಳೂ ಆಗಿದ್ದಾರೆ. ಬಸವೇಶಾ, ಹರಭಕ್ತರು ಮಾಡುವ ದುರಿತ ಕೃತ್ಯವನ್ನು ಏನೆಂದು ಹೇಳಲಿ? ಎಂಜಲ ನೀರಿನಿಂದ ಲಿಂಗಕ್ಕೆ ಅಭಿಷೇಕ ಮಾಡುವದು, ಮಾಂಸವನ್ನು ನಿವೇದಿಸುವದು ಮಗನನ್ನು ಕೊಲ್ಲುವದು, ತಂದೆಯನ್ನು

ವಧಿಸುವದು, ಸ್ವಜಾತಿಯನ್ನು ಬಿಡುವದು ಇವೆಲ್ಲ ಮಾಡಬಾರದ ಕಾರ್ಯಗಳಲ್ಲವೇ? ಇಂಥ ಕಾಡು ನಡತೆಯವರಿಗೆ ಮಹಿಮಾಯುತರೆಂದು ಹೇಳುವ ನಿನ್ನ ಬಡಿವಾರದ ಮಾತಿಗೆ ಕೂಡಲೇ ನನಗೆ ನಗೆ ಬರುತ್ತದೆ.

ಬಸವೇಶ: ರಾಜನೇ ! ಧೀರನೂ ಗಂಭೀರನೂ, ಸತ್ಯವಾದಿಯೂ ಆದ ಕಿನ್ನರಯ್ಯನು ಎಂದಿಗೂ ಅಕೃತ್ಯವನ್ನು ಮಾಡಲಾರನು. ಯಾಕಂದರೆ, ಅನ್ಯಾಯದಿಂದ ನಡೆಯುವವರಿಗೆ ಕಡುತರ ವಾದ ಶಿಕ್ಷೆಯು ಕೊಡಲ್ಪಡತಕ್ಕದ್ದು. ಇದನ್ನು ತಿಳಿದೂ ಆ ಕಿನ್ನರಯ್ಯನು ಅನ್ಯಾಯವಾಗಿ ಈ ಕಾರ್ಯವನ್ನು ಮಾಡಿರಲಾರನು. ನ್ಯಾಯವಿದ್ದದರಿಂದಲೇ ಇಂಥ ಕಾರ್ಯ ವನ್ನು ಮಾಡಿರಬಹುದು.

ಬಿಜ್ಜಳರಾಜ: ಬಸವೇಶಾ, ಶಿವಭಕ್ತರ ವಿಷಯದಲ್ಲಿ ಮಾತ್ರ ನ್ಯಾಯ ಅನ್ಯರ ವಿಷಯದಲ್ಲಿ ಮಾತ್ರ ಅನ್ಯಾಯವೋ? ವಿಟನು ತರುತ್ತಿದ್ದ ಕುರಿಗೂ ನಿನ್ನ ಶಿವಯೋಗಿಗೂ ಏನು ಸಂಬಂಧವು? ಪ್ರಾಣಿಗಳ ಬದುಕುವಿಕೆಯನ್ನು ಅಪೇಕ್ಷಿಸದೆ ನಿನ್ನ ಶಿವಯೋಗಿಗಳು ಕ್ರೂರ ರಾಕ್ಷಸನಂತೆ ಅವರನ್ನು ಕೊಲ್ಲುತ್ತಾರೆ. ಇಷ್ಟೆಲ್ಲ ದುಷ್ಕ ೃತ್ಯಗಳಿಗೆ ನಿನ್ನ ಬಲವೇ ಕಾರಣವಾಗಿರುವದು. ಆ ನಿನ್ನ ಬಲದಿಂದ ಶಿವಭಕ್ತರು ಯಾವ ಭಯವೂ ಇಲ್ಲದೆ ಗ್ರಾಮಗಳನ್ನು ಸುಡುತ್ತಾರೆ, ಪ್ರಾಣಿಗಳನ್ನು ಬಾಧಿಸುತ್ತಾರೆ. ಇದೇ ಏನು, ನಿನ್ನ ಶಿವಭಕ್ತರ ಮಹಾ ಮಹಿಮೆಯು? ಅಪರಾಧವಿಲ್ಲದವನು ಅಲ್ಪನಾದಾಗ್ಯೂ ಅವನನ್ನು ಕೊಲ್ಲುವದು ಅರಸನಿಂದಲೂ ಅಸಾಧ್ಯವಾಗಿರುವದು. ಹೀಗಿದ್ದು ನಿರಪರಾಧಿಯನ್ನು ಅನ್ಯಾಯದಿಂದ ಕೊಂದ ಮೇಲೆ ನಿಮಗೆ ರಾಜಾಧಿರಾಜನಾದ ನನ್ನ ಅಂಜಿಕೆಯೂ ಕೂಡ ಇಲ್ಲದಾಯಿತು. ಆ ಕಾರಣ ಈ ರಾಜ್ಯವನ್ನು ನೀವೇ ಆಳಿರಿ. ನಾನು ಅರಣ್ಯ ಪ್ರವೇಶ ಮಾಡುವೆನು, ತಿಳಿಯಿತೇ?

ಬಸವೇಶ: ರಾಜನೇ, ಶಿವಯೋಗಿಗಳು ಅವಿವೇಕವನ್ನು ಎಂದೂ ಆಚರಿಸತಕ್ಕವರಲ್ಲ. ನಡೆದ ಸಂಗತಿಯನ್ನು ನಿಜವಾಗಿ ತಿಳಿಯದೆ ಕಠೋರ ನುಡಿಯನ್ನು ನುಡಿಯಬೇಡ. ಯಾಕೆಂದರೆ, ಕರ್ಮನಿರತರಾದವರು ಒಂದು ವೇಳೆ ಅಧರ್ಮಕ್ಕೆ ಬೀಳಬಹುದು; ಆದರೆ ಶಿವಯೋಗಿಗಳು ಮಾತ್ರ ಎಂದೂ ಬೀಳರೆಂದು ಶರಗಿನಲ್ಲಿ ಗಂಟು ಹೊಡೆದುಕೋ. "ಕೋಣವು ಹಾಲು ಕರೆಯುವದೆಂದರೆ ಬೆಣ್ಣೆಯು ಎಷ್ಟು ಬರುವದೆಂದು ಕೇಳಿದವರುಂಟೇ?" ವಾದಿ ಪ್ರತಿವಾದಿಗಳಿಬ್ಬರನ್ನೂ ಕರೆಯಿಸಿ ವಿಚಾರ ಮಾಡಿದ ಮೇಲೆ

ಕಾರ್ಯವನ್ನು ನಿರ್ಣಯಿಸಬೇಕಲ್ಲದೆ ಹೀಗೆ ಓರ್ವನ ಮಾತಿನಿಂದಲೇ ಹೇಗೆ ನಿರ್ಣಯವಾಗುವದು?

ಬಿಜ್ಜಳರಾಜ: ಬಸವೇಶಾ. ಇನ್ನೂ ನಿನ್ನ ಅಭಿಮಾನವನ್ನು ಬಿಡಲೊಲ್ಲೆಯಾ? ಆಗಲಿ, ವಾದಿ ಪ್ರತಿವಾದಿಗಳಿಬ್ಬರನ್ನೂ ಕರೆಯಿಸುವೆನು ಯಾರಲ್ಲಿ? (ಅಷ್ಟರಲ್ಲಿಯೇ)

ಬಸವೇಶ: ರಾಜನೇ, ಆತನನ್ನು ಕರೆಯಿಸಬೇಡ. ಆತನು ಬರುವದಿಲ್ಲ. ಯಾಕೆಂದರೆ, ಶಿವಯೋಗಿಗಳು ಸ್ವತಂತ್ರರು. ಯಾರ ಹಂಗಿನಲ್ಲಿಯೂ ಇರುವವರಲ್ಲ. ಒಂದು ವೇಳೆ ಯಮನಿಗೂ ಕೂಡ ಬೆದರತಕ್ಕವರಲ್ಲ. ಆ ಕಾರಣ ನಿನ್ನ ರಾಜಾಜ್ಞೆಗೆ ಭಂಗ ಬಂದೀತು. ಅದಕ್ಕಾಗಿ ಮಧ್ಯಸ್ಥನೋರ್ವನನ್ನು ನಿಜವನ್ನು ತಿಳಿದುಕೊಂಡು ಬರಲಿಕ್ಕೆ ಆ ಶಿವಯೋಗಿಯ ಬಳಿಗೆ ಕಳುಹಿಸು. ಅಂದರೆ ತಾನಾಗಿಯೇ ನಿರ್ಣಯವಾಗುವದು.

ಬಿಜ್ಜಳರಾಜ: ಬಸವೇಶಾ, ಹಾಗಾದರೆ ನಿನ್ನ ಶಿವಯೋಗಿಗಳು ಸ್ವತಂತ್ರರೇನು? ಶಿವಯೋಗಿಗಳು ಸ್ವತಂತ್ರದಿಂದ ನಡೆಯುವವರಾದ ಮೇಲೆ ನಾನು ರಾಜನಾಗಿರುವದು ಹೆಸರಿಗೆ ಮಾತ್ರವಾಯಿತಷ್ಟೇ? ಆಗಲಿ, ನಿನ್ನಂತೆ ಮಧ್ಯಸ್ಥನೋರ್ವನನ್ನು ಕಳಿಸಿ ನಿಜವನ್ನು ತಿಳಿದು ಆ ಕ್ರೂರ ಕಿನ್ನರಯ್ಯನಿಗೆ ಕ್ರೂರ ಶಿಕ್ಷೆಯನ್ನು ವಿಧಿಸದಿದ್ದರೆ ನಾನು ಬಿಜ್ಜಳ ಭೂಪಾಲನೇ? ಆಗಲಿ, ಯಾರಲ್ಲಿ?

ಸೇವಕನು: ಜೀಯಾ, ಏನಪ್ಪಣೆ.

ಬಿಜ್ಜಳರಾಜ: ಎಲೋ ಈ ಪಟ್ಟಣದಲ್ಲಿ ವಿವೇಕಿಯೂ, ವಿಖ್ಯಾತನೂ ಆಗಿರುವ ಪಟ್ಟಣಶೆಟ್ಟಿಯನ್ನು ಕರೆ.

ಸೇವಕ: ಆಜ್ಞೆ ಮಹಾನ್.

ಬಿಜ್ಜಳರಾಜ: ಹಿತಕಾರಿಯಾದ ಮಂಚಣಾರ್ಯ, ನಿನ್ನ ಮಾತಿನ ನಿಜತ್ವವು ಇಂದಿಗೆ ನನಗೆ ಮನವರಿಕೆಯಾಯಿತು. ಹರಭಕ್ತರು ಬಹಿರಂಗದಲ್ಲಿ ತೋರಿದಂತೆ ಅಂತರಂಗದಲ್ಲಿರುವದಿಲ್ಲೆಂಬುದು ಈಗ ಗೊತ್ತಾಯಿತು. ಇಂಥ ಗೋಮುಖ ವ್ಯಾಘ್ರಗಳಂಥ ಕಾಕು ಮನುಜರಿಗೆ ಏಕೆ ಸ್ಥಳವನ್ನು ಕೊಟ್ಟಿದ್ದೇನಾದೀತು? ಈ ನನ್ನ ಮೂರ್ಖತನವನ್ನು ಸ್ಮರಿಸಿಕೊಂಡರೆ ನನಗೇ ನಗೆ ಬರುತ್ತದೆ. ಇದಕ್ಕೆ ತಕ್ಕ ಉಪಾಯವೇ ತಿಳಿಯಲೊಲ್ಲದು.

ಮಂಚಣಾರ್ಯ: ರಾಜನೇ ಸಸಿ ಇದ್ದಾಗ್ಗೆ ಸಮೂಲ ನಾಶ ಮಾಡದೆ ದೊಡ್ಡ

ಮರವಾದಾಗ್ಗೆ ಕೀಳಲು ಪ್ರಯತ್ನಿಸಿದರೆ ಸಾಧ್ಯವಾದೀತೇ? ಆದರೂ ಕೊಡಲಿಯ ಹಲವು ಬಲವಾದ ಪೆಟ್ಟುಗಳಿಂದ ಅದನ್ನು ನಾಶ ಮಾಡಲಿಕ್ಕೆ ಬರುವದು. ಅಂತೇ ಆ ದುರಾತ್ಮರನ್ನು ಪರಿಪರಿಯಿಂದ ಪೀಡಿಸಿದರೆ ತಾವಾಗಿಯೇ ನಾಮಶೇಷವಾಗುವರು.

ಬಸವೇಶ: ಮಂಚಣ್ಣ, ದುರಾತ್ಮರೆಂದರೆ ಯಾರೆಂದು ತಿಳಿದಿರುವೆ? ಅನ್ಯ ಪ್ರತಿಷ್ಠೆಯನ್ನು ನೋಡಿ ಸಹಿಸದೆ ಮಾತ್ಸರ್ಯದಿಂದ ಅವರನ್ನು ನಾಶ ಮಾಡಬೇಕೆಂದು ಯೋಚಿಸಿ, ಅದು ತನ್ನಿಂದಾಗದ್ದರಿಂದ ವಿಚಾರಹೀನರನ್ನು ಪ್ರೇರಿಸಿ ದುಷ್ಟ ಕಾರ್ಯಗಳನ್ನು ಮಾಡಿಸುವವರು ಮಾಡುವವರು ದುರಾತ್ಮರು. ಸದಯಾತ್ಮರು ದುರಾತ್ಮರೇ? ಈ ನಿನ್ನ ವಿಚಾರಕ್ಕೆ ಪಶುಗಳು ಕೂಡ ನಗದೇ ಇರಲಾರವು.

ಮಂಚಣಾರ್ಯ: ಬಸವೇಶಾ, ಎಂಥ ಸದಯಾತ್ಮರೋ ನೀವು? ದಯೆಯಿಲ್ಲದೆ ಪ್ರಾಣಿಗಳನ್ನು ಕೊಂದ ನೀವು ಸದಯಾತ್ಮರಾದ ಮೇಲೆ ನಾವು ದುರಾತ್ಮರೇ ಆದೆವು ಅಹುದೋ. ಛೀ, ನಿನ್ನ ವಿಚಾರಸರಣಿಗೆ ಬೆಂಕಿ ಹಚ್ಚಲಿ.

(ಇಷ್ಟರಲ್ಲಿ ಪಟ್ಟಣಶೆಟ್ಟಿಯು ಬರುವನು.)

ಪಟ್ಟಣಶೆಟ್ಟಿ: ಪ್ರಭುವೇ, ವಂದಿಸುವೆನು. ಮಹಾರಾಜನೆ, ತ್ವರೆಯಿಂದ ಕರೆಯಿಸಿದ ಕಾರಣವೇನು?

ಬಿಜ್ಜಳರಾಜ: ವಣಿಗ್ವರನೇ, ಈ ಪುರದ ಬಹಿರ್ಭಾಗದಲ್ಲಿರುವ ತ್ರಿಪುರಾಂತಕೇಶ್ವರನ ದೇವಾಲಯದಲ್ಲಿ ಕಿನ್ನರಯ್ಯನೆಂಬೋರ್ವ ಶಿವಯೋಗಿ ಇರುವನು. ಆತನು ಕುಶಲಮತಿ ಎಂಬುವನು ಏರಿಯನ್ನು ತರುತ್ತಿರುವ ಕಾಲಕ್ಕೆ ಕಾರಣವಿಲ್ಲದೆ ಕದನ ತೆಗೆದು ಆ ಕುಶಲಮತಿಯನ್ನು ಕೊಂದಿರುವನು. ಇದಕ್ಕೆ ಕಾರಣವೇನೆಂಬುದನ್ನು ತಿಳಿದುಕೊಂಡು ಬಾ.

(ಪಟ್ಟಣಶೆಟ್ಟಿಯು ಹೋಗುವನು.)

ಬಸವೇಶಾ, ಈ ಹರಮತದವರನ್ನು ಇಂದಿನವರೆಗೆ ಸಡಿಲು ಬಿಟ್ಟದ್ದು ನನ್ನದು ಬಹು ಮೂರ್ಖತನವಾಯಿತು. ಅಯ್ಯೋ ! ಎಂಥ ಕ್ರೂರತನ, ಎಂಥ ಬಾಯಿಬಡುಕತನ, ಇಂಥ ನೀಚರು ಇನ್ನೊಬ್ಬರುಂಟೇ?

ಬಸವೇಶ: ರಾಜನೇ, ಶಿವಮತದವರನ್ನು ಸಡಿಲು ಬಿಟ್ಟದ್ದು ನಿನ್ನದು ಮೂರ್ಖತನವಲ್ಲ. ಆದರೆ ಇಂಥ ಅಭಿಮಾನದಿಂದ ಕೂಡಿದ ಮೂಢ ತಿಳುವಳಿಕೆಗೆ ಆಶ್ರಯ ಕೊಟ್ಟಿದ್ದು ಮಾತ್ರ ಮೂರ್ಖತನವು. "ರಾಜಾ

ಪ್ರತ್ಯಕ್ಷ ದೇವತಾ". ಅಂತೇ ನೀನು ದೇವರಿಗೆ ಸಮಾನನಾಗಿರುತ್ತೀ. ದೇವರು ಹ್ಯಾಗೆ ನ್ಯಾಯ–ಅನ್ಯಾಯಗಳ ವಿಚಾರವುಳ್ಳವನೊ ಹಾಗೆಯೇ ನೀನಾದರೂ ನ್ಯಾಯಾನ್ಯಾಯಗಳ ವಿಚಾರ ಮಾಡಬೇಕು; ದುಷ್ಟರನ್ನು ಶಿಕ್ಷಿಸಬೇಕು. ಆದರೆ ದುಷ್ಟರನ್ನು ಶಿಕ್ಷಿಸಬೇಕಾದರೂ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕೆಂಬ ತತ್ತ್ವವನ್ನಾದರೂ ಅನುಸರಿಸಬೇಕು. ಇದನ್ನೆಲ್ಲ ಬಿಟ್ಟು ಪಾಪವೆಂದರೆ ಅಂಜಿ ಬಾಯಿ ಬಿಡುವ ಆ ಮಾಚಿದೇವನಿಗೆ ಕ್ರೂರತನದ ಆರೋಪವನ್ನು ವ್ಯರ್ಥವಾಗಿ ಹೊರಿಸಿ ಈ ಮೊದಲೇ ಸಂತಾಪಕ್ಕೆ ಗುರಿಯಾಗಿರುವಿ. ಮುಂದೆ ಈ ಮಾತಿನ ಸತ್ಯತೆಯಾದರೂ ತಾನೇ ತಿಳಿಯುವುದು.

ಮಂಚಣಾರ್ಯ: ರಾಜನೇ, ಸಚಿವ ಶಿರೋಮಣಿಯೆಂದು ನೀನು ನಿತ್ಯವೂ ಹೊಗಳುತ್ತಿರುವ ಈ ಬಸವೇಶನು ಅಸಮಾಕ್ಷನ ಭಕ್ತರ ಅಕೃತ್ಯಕ್ಕೆ ಅನುವು ಕೊಡುವುದನ್ನು ನೋಡಿದೆಯಾ? ಆ ದುಷ್ಟ ಕಿನ್ನರಯ್ಯನು ಮಾಡಿದ ಕೃತ್ಯವು ಕೆಟ್ಟದಿದ್ದರೂ ಶ್ರೇಷ್ಠವಾದದ್ದೆಂದು ಗಟ್ಟಿಯಾಗಿ ಹೇಳುವನು. ಅಯ್ಯೋ ! ನಿನಗೆ ಎಂಥ ಅಪಮಾನ? ಅವನಿಗೆ ಎಂಥ ಅಭಿಮಾನ? ಇನ್ನು ನೀನು ನಾಮಧಾರಿ ರಾಜನಾಗಿ ನಿಂತೆಯೇ ಹೊರತು ನಿಜವಾದ ರಾಜನಾಗಲಿಲ್ಲ. ಇದನ್ನು ಯೋಚಿಸಿ ನೋಡು.

ಬಿಜ್ಜಳರಾಜ: ಮಂಚಣ್ಣ, ಮಿಂಚಿ ಹೋದದ್ದಕ್ಕೆ ಚಿಂತಿಸಿ ಫಲವಿಲ್ಲ. ಅಜ್ಞಾನಿಯಾದ ನಾನು ಸುಜ್ಞಾನಿಯಾದ ನಿನ್ನ ಮಾತಿಗೆ ಮೊದಲೇ ಕಿವಿಗೊಡಲಿಲ್ಲ. ರೋಗಿಗೆ ಅಮೃತವು ವಿಷವಾಗುವಂತೆ ನನಗೆ ನಿನ್ನ ಹಿತವಚನವು ವಿಷವಾಯಿತು. ಅಂತೇ ನಾನು ಈ ಪರಿ ನರಳಬೇಕಾಯಿತು. ಮಾಡಲೇನು?

ಬಸವೇಶ: ರಾಜನೇ, ಈ ಮಂಚಣಾರ್ಯನ ಮಾತಿಗೆ ಮರುಳಾಗಿ ವ್ಯರ್ಥ ಚಿಂತೆಗೀಡಾಗಬೇಡ. ಇವನು ಚಾಡಿಕೋರನು, ಬಾಯಿಬ ಡುಕನು, ತೋಟವನ್ನು ನಾಶ ಮಾಡಲಿಕ್ಕೆ ಹುಟ್ಟಿದ ಮಂಗನ ಮೋತಿಯ ಕಾಯಿಯಂತೆ ಈತನು ನಿನ್ನ ಕುಲನಾಶಕ್ಕೆ ಹುಟ್ಟಿರುವನು. ಈ ವಂಚಕನ ಮಾತಿನಂತೆ ಹೋಗಬೇಡ. ಯುಕ್ತಾಯುಕ್ತಗಳನ್ನು ತಿಳಿದು ನೋಡು.

ಮಂಚಣಾರ್ಯ: ಬಸವೇಶಾ, ನಾವು ಚಾಡಿಕೋರರು, ಬಾಯಿಬಡುಕರು. ಆದರೆ ನೀವು ಮಾತ್ರ ಸಂಭಾವಿತರು ಯಾಕೆ? ನಿಮ್ಮಂಥ ಡಾಂಭಿಕರೂ ಕ್ರೂರರೂ ಇನ್ನಾರಿರಬೇಕು? ರಾಜನನ್ನೂ ಕೂಡ ಗಣನೆ ಮಾಡದ ನೀವು ಅನ್ಯರನ್ನು

ಗಣಿಸೆ ಮಾಡುವಿರಾ? ರಾಜನೇ, ನಿನ್ನ ಸಲುವಾಗಿ ನಾನು ಈ ಸ್ವಾಮಿದ್ರೋಹಿಯಾದ ಬಸವೇಶನಿಂದ ಹೀಗೆಲ್ಲ ಅನ್ನಿಸಿಕೊಳ್ಳಬೇಕಾಯಿತು. ಆದ್ದರಿಂದ ನಾನೆಲ್ಲಿಗಾದರೂ ಹೊರಟು ಹೋಗುವೆನು. ನನಗಪ್ಪಣೆಯನ್ನು ಕೊಡು.

ಬಿಜ್ಜಳರಾಜ: ಮಂಚಣಾರ್ಯ, ಸ್ವಲ್ಪ ತಡೆ. ಈ ಬಸವೇಶನನ್ನು ಮುಖಭಂಗಿತನನ್ನಾಗಿ ಮಾಡುವ ವೇಳೆಯು ಸಮೀಪಿಸಿದೆ. ಆ ಪಟ್ಟಣಶೆಟ್ಟಿಯು ಬಂದ ಮೇಲೆ ಈ ಬಸವೇಶನನ್ನು ಮೂಗುದಾರ ಹಾಕಿದ ಕೋಣನಂತೆ ಎಳೆದಾಡಿ ಬಿಡೋಣ.

ಬಸವೇಶ: ರಾಜನೇ, ಸ್ವಲ್ಪ ತಾಳು, ಈ ಮನೆಮುರಕ ಮಂಚಣ್ಣನ ಚಾಡಿಯ ಮಾತಿನಿಂದ ಸಂಶಯಗೊಂಡಿರುವ ನಿನ್ನ ಮನಸ್ಸು ತಾನಾಗಿಯೇ ಶಾಂತವಾಗುವದು. ವ್ಯಥಾಭಿಮಾನದಿಂದ ಜರ್ಝರಿತನಾಗಬೇಡ.

(ಇಷ್ಟರಲ್ಲಿ ಪಟ್ಟಣಶೆಟ್ಟಿಯು ಪ್ರವೇಶಿಸಿ)

ಪಟ್ಟಣಶೆಟ್ಟಿ: ಮಹಾರಾಜರಿಗೆ ಜಯವಾಗಲಿ, ರಾಜನೇ, ನಿಮ್ಮ ಅಪ್ಪಣೆಯಂತೆ ತ್ರಿಪುರಾಂತಕೇಶ್ವರನ ದೇವಾಲಯಕ್ಕೆ ಹೋಗಿ ಆ ಕಿನ್ನರಯ್ಯನನ್ನು ವಿಚಾರಿಸಲು, ಆತನು ಹೇಳಿದ್ದೇನಂದರೆ – ಕುಶಲಮತಿಯು ಕುರಿಯನ್ನು ಹಿಡಿದುಕೊಂಡು ಬರುತ್ತಿರಲು, ಆ ಕುರಿಯು ಪ್ರಾಣಾದಾಶೆಯಿಂದ ಆತನ ಕರದಿಂದ ಜಾರಿಕೊಂಡು ತ್ರಿಪುರಾಂತಕನ ಗುಡಿಯನ್ನು ಹೊಕ್ಕಿತಂತೆ. ಆಗ ಕುಶಲಮತಿಯು ಕುರಿಯನ್ನು ಹಿಡಿಯ ಹೋಗಲು ಕಿನ್ನರಯ್ಯನು ಸಾವಿರ ಹೊನ್ನನ್ನು ಕೊಟ್ಟು ಆ ಕುರಿಯನ್ನು ಬಿಡಿಸಿಕೊಂಡು, ತಿರುಗಿ ಬಂದರೆ ದೊರೆಯದೆಂದು ಖಂಡಿತವಾಗಿ ಹೇಳಿ ಶಿವಲಿಂಗ ಮುದ್ರೆಯನ್ನು ಆ ಕುರಿಗೆ ಇಟ್ಟು ಬಿಟ್ಟನಂತೆ. ಆಮೇಲೆ ಕುಶಲಮತಿಯು ದುರಾಶೆಯಿಂದ ಕುರಿಯನ್ನು ಚೋರತನದಿಂದ ಒಯ್ಯುವ ಕಾಲಕ್ಕೆ ಕಿನ್ನರಯ್ಯನು ಪರಿಪರಿಯಿಂದ ಹೇಳಿದರೂ ಕೇಳದೆ ಆತನನ್ನು ಹೊಡೆದ ಕಾರಣ ಕುಶಲಮತಿಯನ್ನು ಕಿನ್ನರಯ್ಯನು ಕಡಿದು ಹಾಕಿದನಂತೆ. ಇದು ನಿಜವಾದ ಸಂಗತಿ ಎಂದು ಹೇಳಿದನು.

ಬಿಜ್ಜಳರಾಜ: ವಣಿಗ್ವರನೇ, ಕಿನ್ನರಯ್ಯನು ತನ್ನ ಮಾತಿನ ನಿಜತ್ವಕ್ಕೆ ಸಾಕ್ಷಿಯನ್ನೇನಾದರೂ ಕೊಡುವನಂತೇನು? ಸಾಕ್ಷಿಯಿಲ್ಲದೆ ಆತನ ಪಕ್ಷವು ಹ್ಯಾಗೆ ಗೆಲ್ಲುವದು?

ಪಟ್ಟಣಶೆಟ್ಟಿ: ಮಹಾರಾಜನೇ, ಕಿನ್ನರಯ್ಯನ ಪಕ್ಷಕ್ಕೆ ಸಾಕ್ಷಿಯನ್ನು ನುಡಿಯುವ ದಕ್ಷರಾದ ಪುರುಷರು ಯಾರೂ ಇಲ್ಲವಂತೆ. ಆದರೆ ಅಕ್ಷಿ ಮೂರುಳ್ಳ ವಿರೂಪಾಕ್ಷನೇ

ಆತನ ಪಕ್ಷಕ್ಕೆ ಸಾಕ್ಷಿಯನ್ನು ನುಡಿಯುವನಂತೆ. ಇದು ದಿಟವೆಂದು ನುಡಿದನು.

ಬಿಜ್ಜಳರಾಜ: ಅಯ್ಯೋ ! ಇಂಥ ಬಿಂಕದ ಮಾತಿಗೆ ನಾನು ಕೊಂ...ವವನೆಂದು ತಿಳಿದಿರುವನೇ? ಆತನನ್ನು ಬೊಂಕಿಸದಿದ್ದರೆ ನಾನು ಛಲದಂಕನೆ? ಈ ಜಿನಶ್ರೇಷ್ಠನ ಘನತರವಾದ ಸಾಮರ್ಥ್ಯವು ಆ ಮಂದಮತಿಗೆ ತಿಳಿದಿರಲಿಕ್ಕಿಲ್ಲ ಈ ಮಾತನ್ನು ದಕ್ಷತೆಯಿಂದ ಪರೀಕ್ಷಿಸಿಯೇ ಬಿಡುವೆನು. ಬಸವೇಶಾ. ಇನ್ನು ತಡವೇಕೆ ಹೊರಡು.

ಬಸವೇಶ: ರಾಜಶ್ರೇಷ್ಠ, ಬೆಂಕಿಯನ್ನೂ, ವಿಷವನ್ನೂ ಪರೀಕ್ಷಿಸಿದವರುಂಟೇ? ಅಂತೇ ಆ ಮಹಾ ಮಹಿಮನನ್ನು ಪರೀಕ್ಷಿಸುವದು ಸರಿಯಲ್ಲ. ಶಿವಶರಣರು ಕನಸಿನಲ್ಲಿಯೂ ಕೂಡ ದುಡುಕುವವರಲ್ಲ. ಅದರಿಂದ ವ್ಯರ್ಥವಾದ ಅಭಿಮಾನಕ್ಕೆ ಶಿಲ್ಕಿ ಕೆಡಬೇಡ ಕಂಡೆಯಾ.

ಬಿಜ್ಜಳರಾಜ: ಅಯ್ಯಾ ! ಬಡಿವಾರದ ಮಾತಿನ ಬಸವೇಶ, ಆ ಕಡುಪಾಪಿಯ ಪಕ್ಷಕ್ಕೆ ಮೃಡನು ಸಾಕ್ಷಿಯನ್ನು ನುಡಿವನೇ? ಕಲ್ಲೊಂಬೆಯನ್ನು ನುಡಿಸುವಷ್ಟು ಬಲ್ಲಿದತನವು ಆ ಖುಲ್ಲನಲ್ಲಿರುವುದೇ? ಇಂಥ ಠಕ್ಕುಗಾರಿಕೆಯ ವಾಕ್ಕನ್ನು ನನ್ನಲ್ಲಿ ಏಕೆ ನುಡಿಯುವೆ? ಈ ಮಾತಿನ ನಿಜತ್ವವನ್ನು ನೋಡದೆ ಎಂದಿಗೂ ಬಿಡೆನು. ಮರುಮಾತನ್ನಾಡದೆ ಹೊರಡು.

ಬಸವೇಶ: ರಾಜನೇ, ನಿನ್ನ ಪರೀಕ್ಷೆಯನ್ನೇ ಅರಿಯದ ನೀನು ಅನ್ಯರನ್ನೇನು ಪರೀಕ್ಷಿಸುವೆ? ಸೂರ್ಯನನ್ನು ತಿನ್ನಹೋದ ಹನುಮಂತನು ಹತನಾದಂತೆ ನಿನ್ನ ಗತಿಯೂ ಆಗುವದು. ಖುಲ್ಲಾ, ಮಲ್ಲಿಕಾರ್ಜುನನ ಮೂರ್ತಿಗೆ ಕಲ್ಗೊಂಬೆಯನ್ನುವಿಯಾ? ಖುಲ್ಲಾ, ಅದು ನಿನಗೆ ಕಲ್ಗೊಂಬೆಯೇ ! ಬಲ್ಲಿದನೂ, ಭಕ್ತಿವಂತನೂ ಆದವನಿಗೆ ಆ ಕಲ್ಗೊಂಬೆಯೇ ಮಲ್ಲಿಕಾರ್ಜುನನ ಮೂರ್ತಿಯಾಗುವದು. ನಡೆ ಹೋಗೋಣ. ಅಲ್ಲಿಗೆ ಹೋದರೆ ಬಲ್ಲಿದರಾದ ಶಿವಶರಣರ ಎಲ್ಲ ಮಹಿಮೆಯೂ ತಾನೇ ತಿಳಿಯುವುದು. ತೀವ್ರ ಹೋಗೋಣ ನಡೆ. (ಎಲ್ಲರೂ ಹೋಗುವರು.)

(ತ್ರಿಪುರಾಂತಕನ ದೇವಾಲಯ)

ಕಿನ್ನರಯ್ಯ: ದೇವಾ, ಸಚ್ಚಿದಾನಂದ, ನಿತ್ಯಪರಿಪೂರ್ಣ, ಕಲುಷಿತ ಮನಸಿನ ಖಲರು ಕುಲಾಭಿಮಾನದಿಂದ ಮಾಡುವ ಗಲಭೆಯನ್ನು ನೋಡಿದೆಯಾ? ಆ ಪಾಪಿಯಾದ ವಿಟನು ತನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದಿದನು.

ಆದರೆ ಭೂಪಾಲನು ಆ ಪಾಪಿಯ ಪಕ್ಷವನ್ನು ವಹಿಸಿ ಪಾಪಭೀರುವಾದ ಬಸವೇಶನನ್ನು ನಾನಾಪರಿಯಿಂದ ಪೀಡಿಸುವನು. ತನ್ನಂತೆ ಅನ್ಯ ಪ್ರಾಣಿಗಳ ವಿಷಯದಲ್ಲಿ ಅಭಿಮಾನವುಳ್ಳವನಾದರೆ ಅವನೇ ನಿನ್ನ ದಯೆಗೆ ಪಾತ್ರನಾಗುವನು. ಅಯ್ಯೋ ! ಇಂಥ ದುರಭಿಮಾನಿಗಳಿಗೆ ಪರತರವಾದ ನಿನ್ನ ಪಾದತಲವು ದೊರಕುವದೆಂತು? ನಿನ್ನ ಹಾಗೂ ನಿನ್ನ ಭಕ್ತರ ವಿಷಯದಲ್ಲಿ ಅಯುಕ್ತವನ್ನು ಆಚರಿಸುವವರು ಮುಕ್ತ್ಯಂಗನೆಯ ಪಾಣಿಗ್ರಹಣಕ್ಕೆ ಪಾತ್ರರಾಗುವರೇ? ದೇವಾ, ಇದನ್ನು ನೋಡುತ್ತ ಸುಮ್ಮನೆ ಯಾಕೆ ಕುಳಿತಿರುವೆ? ಕೃಪೆ ಮಾಡೈ ಶಂಕರಾ.

(ಇಷ್ಟರಲ್ಲಿ ಬಿಜ್ಜಳರಾಜನೂ, ಬಸವೇಶನೂ ಪಟ್ಟಣಶೆಟ್ಟಿಯೂ ಬರುವರು.)

ಪಟ್ಟಣಶೆಟ್ಟಿ: ರಾಜನೇ, ಕಿನ್ನರಯ್ಯನಿರುವ ತ್ರಿಪುರಾಂತಕನ ದೇವಾಲಯವು ಇದೇ. ಅಕೋ, ಮೂರ್ತಿಯ ಬಳಿಯಲ್ಲಿಯೇ ಕಿನ್ನರಯ್ಯನು ಧ್ಯಾನಸ್ಥನಾಗಿ ಕುಳಿತಿರುವನು. ಅವಲೋಕನವಾಗಬೇಕು.

ಬಿಜ್ಜಳರಾಜ: ಬಸವೇಶಾ, ನಿನ್ನ ಕಿನ್ನರಯ್ಯನು ತನ್ನ ಪಕ್ಷಕ್ಕೆ ವಿರೂಪಾಕ್ಷನ ಸಾಕ್ಷಿಯನ್ನು ನುಡಿಸಲಿ. ತಡವೇಕೆ? ನಿನ್ನ ಶಿವಶರಣರ ಮಹಿಮೆಯು ಹೊರಬೀಳಲಿ.

ಬಸವೇಶ: ಆಗಲಿ.

ಪದ

ಶ್ರೀ ಶಿವಯೋಗಿ । ಭಜಿಪೆನು ಬಾಗಿ ।
ಅಸಮನೆ ಕರುಣಿಸು । ತೋಷಿತನಾಗಿ ॥
ಕ್ಷಿತಿಪನು ಬಂದು । ಹಿತದಲಿನಿಂದು ।
ವ್ಯಥಿಸಲು ತ್ವರೆಯಲಿ । ಬಂದಿಹನಿಂದು ॥ ೧ ॥
ಶಿವಮತಮಹಿಮೆ । ತೋರಲಿ ಒಮ್ಮೆ ।
ಕರುಣಿಸು ಯನ್ನೊಳು । ಸ್ಮರಿಪೆ ದಯಾಳು ॥ ೨ ॥

ಹೇ, ಮಂಗಲಕಾರ್ಯಗಳಿಗೆ ಆಶ್ರಯನಾದವನೇ, ಯೋಗಕ್ಕೆ ಅವಲಂಬನವಾದವನೇ, ವೈರಾಗ್ಯಕ್ಕೆ ಖಣಿಯಾದವನೇ, ಪಂಚಕ್ಲೇಶಗಳಿಗೆ ದೂರಾದವನೇ, ಕುಶಲಮತಿಯು ಕುರಿಯನ್ನು ತರುವಾಗ್ಗೆ ಆತನಿಗೂ ನಿನಗೂ ಆದ ಕಲಹದಲ್ಲಿ ನೀನು ನಿರಪರಾಧಿಯೆಂಬುದಕ್ಕೆ ಪರಮೇಶ್ವರನೇ ಸಾಕ್ಷಿಯೆಂದು ಹೇಳಿದ್ದಕ್ಕೆ, ನರಪಾಲನು ಇದನ್ನು ಪರೀಕ್ಷಿಸಲು ಬಂದಿರುವನು. ಹರಭಕ್ತರ ಮಹಿಮೆಯನ್ನು ತೋರ್ಪಡಿಸಯ್ಯಾ ಪರಮ ಶಿವಯೋಗಿಯೇ.

ಕಿನ್ನರಯ್ಯ: ಅಸಮ ಭಕ್ತಿವಂತನೇ, ಕ್ಷಿತಿಪಾಲನು ವಿರೂಪಾಕ್ಷನ ಸಾಕ್ಷಿಯನ್ನು ತೆಗೆದುಕೊಳ್ಳುವಷ್ಟು ದಕ್ಷನಾಗಿರುವನೇ? ಆಗಲಿ, ಆತನಿಂದ ಸಾಕ್ಷಿಯನ್ನು ನುಡಿಸುವೆನು. ಚಿತ್ತವಿಟ್ಟು ಕೇಳಲಿ.

(ದೇವರಿಗೆ) ದೇವಾ, ಪಾಪರಹಿತ, ಪುರಮಥನ, ಸತ್ಯಾಶ್ರಯಾ, ಕ್ರೂರನೂ ಕರುಣಾಹೀನನೂ ವೇಶ್ಯಾಲಂಪಟನೂ ಆದ ಕುಶಲಮತಿಯನ್ನು ಕೊಂದದ್ದು ನನ್ನದು ಅಪರಾಧವಲ್ಲ ವೆಂದಿದ್ದಕ್ಕೆ ನಿನ್ನ ಸಾಕ್ಷಿಯನ್ನು ಕೊಟ್ಟಿರುವೆನು. ಕ್ಷಿತಿಪಾಲನು ಕೇಳಲು ದಕ್ಷನಾಗಿರುವನು. ನೀನು ಪಕ್ಷಪಾತವಿಲ್ಲದೆ ನಾನು ನಿರಪರಾಧಿಯೆಂಬುದಕ್ಕೆ ಸಾಕ್ಷಿಯನ್ನು ನುಡಿ. ಶಂಕರಾ, ಸುಂದರನು ಸ್ತನವನ್ನು ಪೀಠವನ್ನಾಗಿಯೂ, ಸ್ತನಾಗ್ರವನ್ನು ಲಿಂಗವನ್ನಾಗಿಯೂ ಮಾಡಿ ನಿನ್ನನ್ನು ಕರೆದನು. ಆಗ ಅವನಿಗೆ ಪ್ರತ್ಯಕ್ಷನಾದಿ. ನಿತ್ಯ ಸಂತುಷ್ಟನಾದ ಬಾವೂರ ಬ್ರಹ್ಮಯ್ಯನು ಭಕ್ತಿಯುತನಾಗಿ ಜೋಳದ ರಾಶಿಯಲ್ಲಿ ನಿನ್ನನ್ನು ಕರೆದನು. ಆಗ ಆತನಿಗೂ ನೀನು ಪ್ರತ್ಯಕ್ಷನಾದಿ. ಹೇ ತ್ರಿಪುರಾಂತಕೇಶ್ವರಾ, ನಾನು ನ್ಯಾಯ ಮಾರ್ಗದಿಂದ ನಡೆದವನಾಗಿದ್ದರೆ ನನ್ನ ಪಕ್ಷಕ್ಕೆ ತಪ್ಪದೇ ಸಾಕ್ಷಿಯನ್ನು ನುಡಿಯೈ ದೇವಾ.

(ಈಶ್ವರನು ಪ್ರತ್ಯಕ್ಷನಾಗಿ)

ಈಶ್ವರ: ಎಲೋ ಮೂರ್ಖನಾದ ಬಿಜ್ಜಳನೇ, ಕಿನ್ನರಯ್ಯನ ಪಕ್ಷದಿಂದ ಸಾಕ್ಷಿಯನ್ನು ನುಡಿಯುತ್ತೇನೆ, ಕೇಳು. ಕ್ರೂರನೂ ಕರುಣಾಹೀನನೂ ವೇಶ್ಯಾಲಂಪಟನೂ ಆದ ಕುಶಲಮತಿಯನ್ನು ಕಿನ್ನರಯ್ಯನು ವಧಿಸಿದ್ದು ಯ್ಯೋಗ್ಯವಾದದ್ದೇ ಇರುವದು. ಪರಮ ಪಾಪಿಯಾದ ಕುಶಲಮತಿಯು ತನ್ನ ಉದ್ಧಟತನಕ್ಕೆ ತಕ್ಕ ಮರ್ದನವನ್ನು ಹೊಂದಿದನು. ಈ ಸಂಗತಿಯನ್ನು ಬಸವೇಶನು ಹೇಳಿದರೂ ಕೇಳದೆ ಬೆಂಕಿಯನ್ನು ಪರೀಕ್ಷಿಸಿದಂತೆ ನನ್ನನ್ನೂ ನನ್ನ ಭಕ್ತರನ್ನೂ ಪರೀಕ್ಷಿಸಲು ಬಂದೆಯಾ? ಬೇಡ. ಇಂಥ ಕೃತ್ಯಕ್ಕೆ ಕೈ ಹಾಕಬೇಡ. ಇದೊಂದು ಸಾರೆ ನಿನ್ನನ್ನು ಕ್ಷಮಿಸಿರುವೆನು. ಇನ್ನು ಮೇಲೆ ಹೀಗೆ ಮಾಡುವದಾದರೆ ನಿನಗೆ ಶಿವಭಕ್ತರಿಂದಲೇ ಮೃತ್ಯುಉಂಟಾಗುವದು. ಶಿವಲಾಂಛನವನ್ನು ಕಂಡಲ್ಲಿ ಅನ್ಯ ಯೋಚನೆಯನ್ನು ಮಾಡದೆ ಭಯಭಕ್ತಿಯಿಂದ ನಡೆದುಕೋ, ತಿಳಿಯಿತೇ.

ಬಿಜ್ಜಳರಾಜ: ದೇವಾಧಿದೇವ, ಅಜ್ಞಾನದ ನನ್ನ ಅಪರಾಧವನ್ನು ಕ್ಷಮಿಸಿದ್ದರಿಂದ ಇಂದಿಗೆ ನಾನು ಧನ್ಯನಾದೆನು. ಅಂತೇ ನಿನಗೆ ಭಕ್ತವತ್ಸಲನೆಂದು ಕರೆಯುವರು. ನಾನು ಇನ್ನು ಇಂಥ ದುರಾಲೋಚನೆಯನ್ನು ಎಂದೂ

ಮಾಡುವದಿಲ್ಲ. ಮಾಡಿದ್ದಾದರೆ ಶಿವಶರಣರಿಂದಲೇ ನನಗೆ ಮರಣವು ಬರಲಿ. ನನ್ನನ್ನು ಕಾಪಾಡು.

ಈಶ್ವರ: ಆಗಲಿ, ಬಿಜ್ಜಳರಾಜಾ ಜಾಗ್ರತೆಯಿಂದ ರಾಜ್ಯಕಾರಭಾರವನ್ನು ಮಾಡು. ಅಜ್ಞಾನದಿಂದ ಅಂಧನಾಗಬೇಡ. ಯುಕ್ತಾಯುಕ್ತ ವಿವೇಚನೆಯನ್ನು ಬಿಡಬೇಡ. (ಅಂತರ್ಧಾನನಾಗುವನು)

ಬಿಜ್ಜಳರಾಜ: (ಕಿನ್ನರಯ್ಯನಿಗೆ) ಹೇ ಮಹಿಮಾಯುತನೇ, ಮೋಕ್ಷಪ್ರದಾಯ ಕನೇ, ಈ ಪಾಪಿಯ ಮೇಲೆ ಕ್ಷಣ, ಮಾತ್ರ ನಿನ್ನ ಕೃಪಾಕಟಾಕ್ಷವನ್ನು ಚಲ್ಲು. ನಾನು ಅಜ್ಞಾನದಿಂದ ಮಾಡಿದ ಅಪರಾಧವನ್ನು ಕ್ಷಮಿಸು. ನಿನ್ನ ಹೊರತು ಶಿಕ್ಷಕರಾಗಲಿ, ರಕ್ಷಕರಾಗಲಿ ಯಾರೂ ಇಲ್ಲ. ಅಪರಾಧಿಯಾದ ನನ್ನಲ್ಲಿ ಕಾರುಣ್ಯವನ್ನು ತೋರು.

ಕಿನ್ನರಯ್ಯ: ರಾಜನೇ, ಪಶುಪತಿಯನ್ನು ಪರೀಕ್ಷಿಸಲು ಬಂದಿದ್ದೆಯಲ್ಲ? ಈಗಾದರೂ ನಿನ್ನ ದುರಾಗ್ರಹವು ದೂರಾಯಿತೇ? ಇದೊಂದು ಸಾರೆ ಪರಶಿವನು ನಿನ್ನನ್ನು ಕ್ಷಮಿಸಿರುವನು. ಇನ್ನು ಮೇಲೆ ಶಿವಭಕ್ತರಲ್ಲಿ ವಿನಯವಂತನಾಗಿರು. ಯೋಗ್ಯಾಯೋಗ್ಯವನ್ನು ತಿಳಿ. ಚಾಡಿಯ ಮಾತುಗಳನ್ನು ಕೇಳಿ ಜಾತಿ ಭೇದಕ್ಕೆ ಬೀಳಬೇಡ. ಚನ್ನಾಗಿ ಜ್ಞಾಪಕದಲ್ಲಿಟ್ಟುಕೋ.

ಬಿಜ್ಜಳರಾಜ: ಆಜ್ಞೆಯನ್ನು ಶಿರಸಾವಹಿಸುವೆನು. ಬಸವೇಶಾ, ದುರಾಗ್ರಹಕ್ಕೆ ತಕ್ಕ ಪ್ರಾಯಶ್ಚಿತ್ತವು ನನಗಾಯಿತು. ಇನ್ನು ನಮ್ಮಾಲಯಕ್ಕೆ ತೆರಳೋಣ ನಡೆ. (ಎಂದೆಲ್ಲರೂ ಹೋಗುವರು.)

===**=====**====

೫ನೇ ಅಂಕವು

(ಬಿಜ್ಜಳನೂ ಮಂಚಣಾರ್ಯನೂ ಪ್ರವೇಶಿಸಿ)

ಮಂಚಣಾರ್ಯ: ರಾಜನೇ, ಬಸವೇಶನು ಹತ್ತೆಂಟು ಸಂಗತಿಗಳನ್ನು ಬಾಯಿಬಡುಕತನದಿಂದ ನಿಜವೆಂದು ಸಿದ್ಧಮಾಡಿ ತೋರಿಸಿ ಅವುಗಳ ಮರೆಯಲ್ಲಿ ಅನೇಕ ಅಸಹ್ಯ ಕೃತ್ಯಗಳನ್ನು ಮಾಡಿಸುತ್ತಿರುವನು. ನಾನು ನಿಜವನ್ನು ಹೇಳಿದರೆ ನನಗೆ ಆ ಬಸವೇಶನು ಚಾಡಿಕೋರ, ಬಾಯಿಬಡುಕ ಇಂತು ಮಾತಾಡುವನು. ರಾಜನೇ, ಏನು ಮಾಡೋಣ? ಶಿವಮತದವರ ಮುಂದೆ ನಮ್ಮ ಆಟವೇ ನಡಿಯದಂತಾಗಿ ಅವರ ತೊತ್ತಿನಂತೆ ಕಾಲಹರಣ ಮಾಡಬೇಕಾಗಿದೆ. ಮಹಾರಾಜನೇ, ಏನು ಹೇಳಲಿ? ಬಾಯಿಬಿಟ್ಟರೆ ಬಣ್ಣಗೇಡು; ನಿನ್ನಿಂದಂತೂ ಆ ನೀಚ ಕೃತ್ಯಗಳನ್ನು ಬಿಡಿಸುವುದು ಆಗುವದಿಲ್ಲ. ನಿನ್ನ ಮುಂದೆ ಹೇಳುವದೂ ಗುಡ್ಡದ ಮುಂದೆ ನಿಂತು ಅಳುವದು ಒಂದೇ ಆಗಿರುವದು.

ಬಿಜ್ಜಳರಾಜ: ಮಂಚಣಾರ್ಯ, ನಿನ್ನ ಮಾತಿನಂತೆ ಆ ಬಸವೇಶನನ್ನೂ ಶಿವಶರಣರನ್ನೂ ನಾನಾಬಗೆಯಿಂದ ಪರೀಕ್ಷಿಸಿದೆನು. ಅವರನ್ನು ನಾಶ ಮಾಡಲೂ ಪ್ರಯತ್ನಿಸಿದೆನು. ಆದರೆ ನಾನೇ ಮುಖಭಂಗಿತನಾದೆನು. ಏನು ಮಾಡಲಿ? ಎಂತಾದರು ಅವರನ್ನು ಮುಖಭಂಗಿತರನ್ನಾಗಿ ಮಾಡಲೇಬೇಕು. ಸದ್ಯಕ್ಕೆ ಆ ಶಿವಮತದವರು ಮುಚ್ಚುಮರೆಯಿಂದ ಮಾಡುವ ಅಸಹ್ಯ ಕೃತ್ಯಗಳಾವುವು?

ಮಂಚಣಾರ್ಯ: ರಾಜನೇ, ಏನು ಹೇಳಲಿ? ಹೇಳಿದ ಕಾರ್ಯವಾದರೆ ಹೇಳಿದವರಿಗೂ ಮಾಡಿದವರಿಗೂ ಯಶವು ಬರುವದು. ಆರಂಭಶೂರರಾದ ತಾವು ಪ್ರಾರಂಭದಲ್ಲಿ ತೋರಿಸಿದಷ್ಟು ಆರ್ಭಟೆಯು ಅಂತ್ಯದಲ್ಲಿ ಉಳಿಯುವುದಿಲ್ಲ. ಬಸವೇಶನ ಬಣ್ಣದ ಮಾತಿಗೆ ಕೌಲೆತ್ತಿನಂತೆ ತಲೆಹಾಕಿ ಬಿಡುವಿರಿ. ಇಂಥ ನಿನಗೆ ಹೇಳಿಯಾದರೂ ಪ್ರಯೋಜನವೇನು? ಆಗಲಿ, ಹತ್ತರಗೂಡ ಹನ್ನೊಂದು. ಇದೊಂದು ಅಸಹ್ಯ ಕೃತ್ಯವನ್ನು ಹೇಳಿಬಿಡುವೆನು ಕೇಳು. ಏನೆಂದರೆ, ಲಿಂಗಧಾರಣ ಮಾಡಿದಾಕ್ಷಣಕ್ಕೆ ಅವನು ಲಿಂಗವಂತನಾದನೆಂಬ ತಿಳುವಳಿಕೆಯಿಂದ

ಜಾತಿ ಕರ್ಮಾದಿಗಳ ಅರಿವು ಇಲ್ಲದೆ ಹೊಲೆಯರೂ ಉಳಿದವರು ಶರೀರಸಂಬಂಧ ಮಾಡುವದೂ, ಒಬ್ಬರೊಬ್ಬರಲ್ಲಿ ಭೋಜನ ಮಾಡುವದೂ, ಇತರರಿಗೆ ಭವಿಗಳೆಂದಾಡುವದೂ, ತಾವೇ ಹೆಚ್ಚಿನವರೆಂಬ ಹೆಮ್ಮೆಯನ್ನು ತೋರಿಸುವದೂ, ನಿನ್ನನ್ನು ಲೆಕ್ಕಿಸದೆ ಆ ಬಸವೇಶನನ್ನೇ ಓಲೈಸುವುದೂ ಇಂಥಾ ರಾಜನಿಗೆ ಅಪಮಾನವಾಗುವ ಕೃತ್ಯಗಳನ್ನು ಮಾಡುವರು. ಅವರಲ್ಲಿ ಹರಳಯ್ಯ, ಮಧುವಯ್ಯರೆಂಬವರು ಈ ಬಗೆಯ ನೀಚ ಕೃತ್ಯಗಳನ್ನು ಮಾಡುತ್ತ ಬಸವೇಶನಲ್ಲಿ ಭಕ್ತಿಯುಳ್ಳವರಾಗಿ ನಿನ್ನನ್ನು ಗಣಿಸದೇ ಇರುವರು. ಇಂಥ ಕೀಳು ಮಾನವರಿಗೂ ಕೂಡ ನಿನ್ನಲ್ಲಿ ಗೌರವವಿಲ್ಲದಾಯಿತು. ಇಷ್ಟೆ ಸಾಕು. ಮುಂದೆ ನಿನಗೆ ತಿಳಿದಂತೆ ಮಾಡು.

ಬಿಜ್ಜಳರಾಜ: ಮಂಚಣಾರ್ಯ, ಅವಿವೇಕಕ್ಕೆ ಆಶ್ರಯವಿಲ್ಲವೆಂಬ ನನ್ನ ಛಲವನ್ನು ನೀನು ತಿಳಿಯದಿರುವೆ ಏನು? ಆ ದುಷ್ಟರು ಜಾತಿಭೇದವನ್ನೆಣಿಸದೆ ಅನ್ಯೋನ್ಯವಾಗಿ ಕೂಡಿದ ಮೇಲೆ ಇದು ಅಸಹ್ಯವಾಗಿಯೇ ಪರಿಣಮಿಸಿತು. ಇದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸಲೇ ಬೇಕು. ಯಾರಲ್ಲಿ?

ಸೇವಕ: ಜೀಯಾ, ಏನಪ್ಪಣೆ?

ಬಿಜ್ಜಳರಾಜ: ಚಾಂಡಾಲರನ್ನು ಕರೆ.

ಸೇವಕ: ಆಜ್ಞೆ ಮಹಾನ್.

(ಚಾಂಡಾಲರು ಬರುವರು.)

ಚಾಂಡಾಲರು: ಮಹಾರಾಜನೆ, ಜಾಗ್ರತೆಯಿಂದ ನಮ್ಮನ್ನು ಕರೆಯಿಸಿದ ಕಾರಣವೇನು? ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಮಾಡಲಿಕ್ಕೆ ಸಿದ್ಧರಾಗಿರುವೆವು. ಬೇಗೆ ಹೇಳಯ್ಯಾ ರಾಜಶಿಖಾಮಣಿ.

ರಾಜನು: ಚಾಂಡಾಲರೇ, ನಮ್ಮ ಪಟ್ಟಣದಲ್ಲಿರುವ ಹರಳಯ್ಯ, ಮಧುವಯ್ಯರೆಂಬರಿಬ್ಬರು ನೀತಿ ಮಾರ್ಗವನ್ನು ತಪ್ಪಿ ನಡೆದಿರುವದರಿಂದ ಅವರನ್ನು ಎಳೆ ಹೂಟಿಯನ್ನು ಕಟ್ಟಿ ಎಳೆಯಿಸಿ, ಅವರ ಕಣ್ಣುಗಳನ್ನು ಕಿತ್ತಿ ಬನ್ನಿರಿ, ತಿಳಿಯಿತೇ.

ಚಾಂಡಾಲರು: ಆಜ್ಞೆ ಮಹಾನ್. (ಹೋಗುವರು.)

ಬಿಜ್ಜಳರಾಜ: ಮಂಚಣಾರ್ಯ, ಇನ್ನು ಸುಖವಾಗಿ ನಿದ್ರಿಸೋಣ ನಡೆ. (ಹೋಗುವರು).

(ಬಸವೇಶನು ಪ್ರವೇಶಿಸಿ.)

ಬಸವೇಶ: ಆಹಾ ! ಇಂದಿನ ದಿವಸ ಮನಸ್ಸಿಗೆ ಸ್ವಸ್ಥತೆಯೇ ಇಲ್ಲ. ಭಯಸೂಚಕಗಳಾದ ಉತ್ಪಾತಗಳು ಜರಗುವವು. ಏನನರ್ಥವಾಗುವದೋ ತಿಳಿಯದು. ದೇವಾ ಸಂಗಮನಾಥ, ಇವನ್ನು ಪರಿಹರಿಸುವವನು ನೀನೇ.

(ಇಷ್ಟರಲ್ಲಿ ಓರ್ವನು ಬಂದು)

ಒಬ್ಬನು: ಮಹಿಮಾಯುತನಾದ ಬಸವೇಶಾ, ಸರ್ವ ನಾಶವಾಯಿತು. ಬಿಜ್ಜಳ ಭೂಪಾಲನು ಚಾಡಿಕೋರರ ಮಾತಿಗೆ ಕಿವಿಗೊಟ್ಟು ಹರಳಯ್ಯ, ಮಧುವಯ್ಯರೆಂಬ ಇಬ್ಬರು ಶಿವಭಕ್ತರನ್ನು ಎಳೆಹೂಟೆಯನ್ನು ಕಟ್ಟಿ ಎಳೆಯಿಸಿ ಅವರ ಕಣ್ಣುಗಳನ್ನು ಕಿತ್ತಿಸಿ ಬಿಟ್ಟಿರುವನು. ಅದರಿಂದ ಇಂಥ ಕ್ರೂರನೂ, ಮದಾಂಧನೂ, ವಿವೇಕಹೀನನೂ ಆದ ಅರಸನ ರಾಜ್ಯದಲ್ಲಿ ಅರಘಳಿಗೆಯಾದರೂ ಇರಬಾರದೆಂದು ಬಗೆದು ಶಿವಭಕ್ತರ ಸರ್ವ ಮಂಡಳಿಯೂ ತಮಗೆ ತಿಳಿಸುವದಕ್ಕಾಗಿ ಕಳಿಸಿರುವದು. ಶಿವಶಿವಾ, ಇನ್ನು ಇರಬಾರದು, ಇರಬಾರದು. ಇದಕ್ಕೆ ಯೋಚನೆಯನ್ನು ಮಾಡಯ್ಯಾ ಕಾರುಣ್ಯಸಿಂಧು.

ಬಸವೇಶ: ಶಿವಶಿವಾ, ಅನ್ಯಾಯವು ಹೆಚ್ಚಾಯಿತೇ, ಸಂಗಮನಾಥ, ಇನ್ನು ಈ ಕಟುಕನ ಪಟ್ಟಣವು ಸಾಕು. ನಿನ್ನಲ್ಲಿ ನನ್ನನ್ನು ಅಡಗಿಸಿಕೋ. ಯಾರೋ ಯಾರಲ್ಲಿ.

ಸೇವಕ: ಜೀಯಾ ಏನಪ್ಪಣೆ?

ಬಸವೇಶ: ಜಗದೇವನನ್ನು ಕರೆ. (ಸೇವಕ ಹೋಗುವನು.)

(ಜಗದೇವನು ಪ್ರವೇಶಿಸಿ)

ಜಗದೇವ: ಅಯ್ಯೋ ! ನಾನೊಂದಾನೊಂದು ದಿನ ಬಸವೇಶನೋಳ್ ಭಕ್ತಿಯುಕ್ತನಾಗಿ ನನ್ನ ಗೃಹಕ್ಕೆ ಭೋಜನಕ್ಕೆ ದಯಮಾಡಿಸ ಬೇಕೆಂದು ವಿಜ್ಞಾಪನೆಯನ್ನು ಮಾಡಿಕೊಂಡೆನು. ಆಮೇಲೆ ನಾನು ಅಜ್ಞಾನವಶದಿಂದುಂಟಾದ ಜಾತಿಯ ಅಭಿಮಾನದಿಂದ ನನ್ನ ಕುಲದವರನ್ನೇ ಪ್ರಾರಂಭದಲ್ಲುಣಿಸಿ ಆಮೇಲೆ ಬಸವೇಶನನ್ನು ಕರೆಯಹೋದೆನು. ಆಗ ಬಸವೇಶನು ನೀನು ಭಕ್ತನಾದರೂ ಜಾತಿಯ ಅಭಿಮಾನವುಳ್ಳವನಾದ್ದರಿಂದ ನಿನ್ನ ಮನೆಗೆ ಊಟಕ್ಕೆ ಬರುವುದಿಲ್ಲೆಂದು

ಹೇಳಿದನು. ಆಗ ನನಗೆ ಪ್ರಾಯಶ್ಚಿತ್ತವನ್ನು ದಯಪಾಲಿಸೆಂದು ಆ ಮಹಾ ಮೂರ್ತಿಯನ್ನು ಪ್ರಾರ್ಥಿಸಲು, ಆಗ ಬಸವೇಶನು ಕರುಣಾಯುತನಾಗಿ ನನ್ನನ್ನು ಕ್ಷಮಿಸಿದನು. ಈಗ ಆ ಕಾರುಣ್ಯಸಿಂಧುವೇ ಕರೆಯಿಸಿರುವದರಿಂದ ಬಂದಿರುವೆನು. ಒಳ್ಳೇದು, ಆ ಮಹಾಮಹಿಮನು ಈಗ ವಿಚಾರಮಗ್ನನಾಗಿರುವನು. ಇದೇ ಸಮಯದಲ್ಲಿ ಆತನನ್ನು ಕಾಣಿಸಿಕೊಳ್ಳುವೆನು. (ಮುಂದೆ ಬಂದು) ಹೇ ಕರುಣಾಬ್ಧಿಯೇ, ಶಿವಮತೋದ್ಧಾರಕನೇ, ಈ ನಿನ್ನ ಪಾದಸೇವಕನಾದ ನನ್ನನ್ನು ಕರೆಯಿಸಿದ ಕಾರಣವೇನು. ಅರುಹಬೇಕೆಂದು ಬೇಡುವೆನು.

ಬಸವೇಶ: ಅಯ್ಯಾ ಜಗದೇವಾ, ಲೋಕದಲ್ಲಿ ಶಿವದ್ರೋಹಿಯಾದವನನ್ನು ಕಂಡಕೂಡಲೆ ಕ್ಷಣಮಾತ್ರವಾದರೂ ವಿಳಂಬ ಮಾಡದೆ ಅವನನ್ನು ಶಿಕ್ಷಿಸಬೇಕು. ಹಾಗೆ ತನ್ನಿಂದ ಶಿಕ್ಷಿಸುವದಾಗದಿದ್ದರೆ ತನ್ನ ಪ್ರಾಣವನ್ನಾದರೂ ಕಳೆದುಕೊಳ್ಳಬೇಕು. ಈ ಎರಡೂ ಕಾರ್ಯಗಳನ್ನು ಮಾಡದೆ ಪ್ರಾಣಲೋಭದಿಂದ ತಟಸ್ಥನಾ ಗಿರುವ ಪಾಪಿಗೆ ಘೋರವಾದ ನರಕವುಂಟಾಗುವದೆಂಬ ಆಗಮ ವಚನವನ್ನು ತಿಳಿದು ನಡೆದುದಕೊಳ್ಳುವದೇ ಶಿವಶರಣರಿಗೆ ಭಕ್ತಿಯ ಮಾರ್ಗವಾಗಿರುವದು. ಈ ತೆರನಾದ ಭಕ್ತಿಯ ಮಾರ್ಗವನ್ನು ಅವಲಂಬಿಸದಿರುವವನನ್ನು ಪರಶಿವನು ಎಂದಿಗೂ ಮೆಚ್ಚಲಾರನು. ಅಂತೇ ಪಾರ್ವತೀ ದೇವಿಯು ತನ್ನ ತಂದೆಯಾದ ದಕ್ಷನು ಯಾಗಕಾಲದಲ್ಲಿ ಮಾಡಿದ ಶಿವದೂಷಣೆಯನ್ನು ಸಹಿಸಲಾರದೆ ಯಜ್ಞಕುಂಡದಲ್ಲಿ ಬಿದ್ದು ಪ್ರಾಣವನ್ನು ನೀಗಿದಳು. ಶಿವನಿಂದೆಯನ್ನು ಕೇಳದೆ ಉಪಮನ್ಯು ಋಷಿಯು ಸತ್ತು ಬೂದಿಯಾಗಲಿಲ್ಲವೇ? ಜಗದೇವಾ, ಏನು ಹೇಳಲಿ? ಈ ಪಟ್ಟಣದರಸು ಬಿಜ್ಜಳನು ಚಾಡಿಕೋರರ ಮಾತುಗಳನ್ನು ಕೇಳಿ, ಹರಳಯ್ಯ, ಮಧುವಯ್ಯರೆಂಬ ಶಿವಭಕ್ತರನ್ನು ಎಳೆ ಹೂಟಿ ಕಟ್ಟಿ ಎಳಿಸಿ ಕಣ್ಣುಗಳನ್ನು ಕಿತ್ತಿಸಿರುವನು. ಶಿವಶಿವಾ, ಶಿವಭಕ್ತರ ವಧೆಯನ್ನು ಕಿವಿಯಿಂದ ಕೇಳಲಾಗದು. ಇನ್ನು ಈ ಕಲ್ಯಾಣ ಪಟ್ಟಣವು ಕಟುಕರ ಓಣಿಯಾಗುವದು. ಇಲ್ಲಿ ನಾವು ಇರಬಾರದು. ಆದಕಾರಣ ನೀನು ಆ ಅರಸನ ಪಾರುಪತ್ಯವನ್ನು ನೋಡಿಕೋ. ನಾವು ಸಂಗಮನಾಥನಲ್ಲಿಗೆ ತೆರಳುವೆವು. ಶಿವದ್ರೋಹವನ್ನು ಕೇಳಲಾರೆ; ಕೇಳಲಾರೆ.

ಜಗದೇವ: ಅಯ್ಯಾ ಬಸವಪ್ರಭೋ ! ಶಿವಶರಣರ ವಧೆಯನ್ನು ಅನ್ಯಾಯದಿಂದ ಮಾಡಿದ ಆ ಕ್ರೂರನನ್ನು ತುಂಡರಿಸಿ ಚಲ್ಲುವೆನು. ಅಯ್ಯೋ ! ಇನ್ನು ತಡವೇಕೆ? ನಾನು ಪೂರ್ವದೋಳ್ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ

ಕಾಲವು ತಾನಾಗಿಯೇ ದೊರೆಯಿತು. ಬಸವೇಶ, ಇಂದಿಗೆ ನಾನೇ ಧನ್ಯನು. (ಎಂದಿಬ್ಬರೂ ಹೋಗುವರು).

(ಬಿಜ್ಜಳನ ಅರಮನೆ)

ಜಗದೇವ: (ಜಗದೇವನು ಪ್ರವೇಶಿಸಿ): ಎಲೋ ಕ್ರೂರನೇ, ನಿರಪರಾಧಿಗಳಾದ ಹರಳಯ್ಯ ಮಧುವಯ್ಯರನ್ನು ವಧಿಸಿದೆಯಾ? ಪಾಪೀ, ನಿನ್ನ ಆಯುಷ್ಯದ ಬರಹವನ್ನು ಅಳುಕಿಸಲಿಕ್ಕೆ ಶಿವದ್ರೋಹಿಗಳ ಗಂಡನಂತಿದ್ದ ಜಗದೇವನು ಬಂದಿರುವೆನು. ಇನ್ನು ಬಲಿಷ್ಠನಾದರೆ ಉಳಿದುಕೋ.

ಬಿಜ್ಜಳರಾಜ: ಎಲೋ ಉದ್ಧಟನೇ, ಹರಳಯ್ಯ ಮಧುವಯ್ಯರಂತೆ ನಿನಗೂ ಪ್ರಾಣದಾಶೆ ಇಲ್ಲದಂತೆ ಕಾಣುತ್ತದೆ. ದುಷ್ಟರಾದ ಶಿವಾನುಯಾಯಿಗಳನ್ನೂ ನಿನ್ನನ್ನೂ ನಾಮಶೇಷ ಮಾಡದೆ ಬಿಡುವೆನೇ? ಮೂಢಾ, ಕಡುಗಲಿಯಾದರೆ ನನ್ನ ಖಡ್ಗದ ಹೊಡತದಿಂದ ಪಾರಾಗು.

ಜಗದೇವ: ಎಲೋ, ಶಿವಮತದವರ ನಾಮಶೇಷವಾಗುವದೋ, ಶಿವ ದ್ರೋಹಿಗಳ ನಾಮಶೇಷವಾಗುವದೋ ಕೃತಿಯ ಅಂತ್ಯದಲ್ಲಿ ಪರಿಣಾಮವನ್ನು ನೋಡು. (ಖಡ್ಗಪ್ರಯೋಗ ಮಾಡುವನು.)

(ಬಿಜ್ಜಳನು ಬೀಳುವನು.)

ಭಂಡಾ, ಚಾಡಿಯ ಮಾತಿಗೆ ಕಿವಿಗೊಡುವ ನಿನ್ನ ಭವಣಿಯನ್ನು ಕಂಡುಕೊಂಡೆಯಾ. ಅಯ್ಯೋ ! ಅನ್ಯಾಯಮಾರ್ಗ ಪ್ರವರ್ತಕರ ಗತಿಯೇ ಹೀಗೆ. ಇನ್ನು ನಾನು ತಡಮಾಡದೆ ಕಪ್ಪಡಿಗೆ ತೆರಳಿ ಬಸವೇಶನ ಪಾದಕಮಲಗಳನ್ನು ಕಂಡು ಧನ್ಯನಾಗುವೆನು. (ಹೋಗುವನು).

(ಕಪ್ಪಡಿ ಸಂಗಮನಾಥನ ದೇವಾಲಯ)

ಬಸವೇಶ: **ಪದ**

ಕರುಣಾಕರನಾದದೇವ । ಪೊರೆಯನ್ನ ನೀಡಿ ಮುದವ ॥
ವರದ ನಿನ್ನ ಚರಣಕಮಲ । ಸ್ಮರಣೆಯಲ್ಲಿ ಮನವನಿಡುತೇ ॥
ಪರಿಪರಿಯಲಿಂತು ಕಾರ್ಯಗೈದ । ತೆರನನಿಂತುಗ್ರಹಿಸಿ ॥
ಮನದಿ ಚರಣತಲದಿ ಸ್ಥಲವ ನೀಡೈ ॥ ೧ ॥

ದೇವಾ ಸಂಗಮನಾಥ, ಕರುಣಾಮೂರ್ತಿ ಜಗದ್ಗುರು ಉಮಾ ನಾಥ, ತಮ್ಮ ಕರುಣದಿಂದ ನಾನು ಜನಿಸಿದಾಗಿನಿಂದಲೂ ಇದುವರೆಗೂ ಶಿವಾಜ್ಞಾನುಸಾರವಾಗಿ ಸಲಿಸಿರುವ ಸೇವಾ ಸತ್ಕಾರ್ಯಗಳಲ್ಲಿ

ಏನಾದರೂ ಕುಂದು ಕೊರತೆಗಳಾಗಿದ್ದರೆ ಅದನ್ನು ಮನ್ನಿಸಿ ದಯೆಯಿಂದ ನನ್ನನ್ನು ಸಂರಕ್ಷಿಸಬೇಕು.

(ಸಂಗಮನಾಥನು ಪ್ರತ್ಯಕ್ಷನಾಗಿ)

ಸಂಗಮೇಶ್ವರ: ಮಗುವೇ, ನಿನಗೆ ನಾನು ಬಹು ಕಷ್ಟವನ್ನು ಕೊಟ್ಟೆನು. ನನ್ನಾಜ್ಞೆಯನ್ನು ಚಲಿಸದ ಮನಸಿನಿಂದ ಮಾಡಿದ ನೀನೇ ಧನ್ಯನು. (ಎಂದು ಆಲಂಗಿಸುವನು.)

(ಇಷ್ಟರಲ್ಲಿ ಜಗದೇವನು ಬಂದು)

ಜಗದೇವ: ದೇವಾ ಸಂಗಮನಾಥ, ಪೂರ್ವದಲ್ಲಿ ನಾನು ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಶಿವದ್ರೋಹವನ್ನು ಮಾಡಿದ ಬಿಜ್ಜಳನನ್ನು ಸಂಹರಿಸಿದೆನು. ಆದರೂ ನನ್ನ ಪಾಪದ ಫಲವು ಇನ್ನೂ ಪೂರ್ಣ ನಾಶವಾಗಿಲ್ಲ. ಶಂಭೋ, ಆ ನನ್ನ ಪಾಪದ ಸಮೂಲ ನಾಶಕ್ಕೆ ಇಕೋ ನನ್ನ ಪ್ರಾಣವನ್ನು ಅರ್ಪಿಸುವೆನು. (ಎಂದು ಖಡ್ಗವನ್ನೆತ್ತುವನು.)

ಸಂಗಮೇಶ್ವರ: ನಿಧಾನಿಸು, ನಿಧಾನಿಸು ಜಗದೇವ, ನಿನ್ನಂಥ ವೀರಾಗ್ರಣಿಯೂ, ಪಾಪಭೀರುವೂ ಆತ್ಮಹತ್ಯಕ್ಕೆ ಅನುಕೂಲನಾಗಬಹುದೇ? ನಿನ್ನ ನಿಷ್ಠೆಗೆ ನಾನು ಮೆಚ್ಚಿರುವೆನು. ನಿನಗೆ ಗಣಪದವನ್ನು ಕೊಟ್ಟಿರುವೆನು. ನಿಶ್ಚಲನಾಗಿ ಶಾಶ್ವತ ಸುಖವನ್ನು ಹೊಂದು.

ಮಂಗಲಂ

ಪರಿಪಾಲಿಸುವದು ತರುಳರನಿರುತವು ಪರಮಕರುಣಾಮೂರ್ತಿ ।
ನಿರುತವು । ಪರಮಕರುಣಾಮೂರ್ತಿ ॥ ಪಲ್ಲ ॥
ತನಯರಮನಸಿನ । ಮಲಿನತೆಯನು ನೀ ।
ನನುನಯದಿಂದಲಿ ತೊಲಗಿಪುದೈ ।
ಘನತರಸನುಮತಿಯನು ಕೊಡು ನಿರುತವು ।
ಪರಮ ಕರುಣಾಮೂರ್ತಿ ॥ ೧ ॥
ಗುಣಗಣಾಭರಣ । ಸುರನುತಚರಣಾ ।
ಶ್ರಿತಜನಮನಭಯ ನಿವಾರಣ । ಕರುಣಾ । ಶರಣಾ ।
ಗತಜನಪಾಲನ ॥ ಪರಮಕರುಣಾಮೂರ್ತಿ ॥ ೨ ॥

ಸಂಪೂರ್ಣ

===***===***===

ಭಕ್ತಿ ಭಂಡಾರಿ ಬಸವಣ್ಣ

ಭಕ್ತಿ ಭಂಡಾರಿ ಬಸವಣ್ಣ

(ಪ್ರಥಮಾಂಕವು)

॥ ಮಂಗಲಾಚರಣ ॥

ರಾಗ : ಯಮನ. ಆದಿತಾಳ

ದೇಹಿ ವಿಘ್ನೇಶ್ವರಾ ವರವಾ ।
ಪಾಹಿ ಸರಾಗದಿ ಸ್ಮರಿಸುವೆ ದೇವಾ ॥ ಪಲ್ಲ ॥
ಜಾಣೆ ಪ್ರಜ್ಞೆ ಖಣಿ ವೀಣಾಪಾಣಿ ।
ವಾಣಿ ದೀಧಿತಿಯಾ ಕರುಣಿಸು ಕರುಣಿ ॥

ರಾಗ : ಯಮನ. ತಾಳ: ದಾದರಾ

ಪಾಹಿ ಪಾಹಿ ಬಸವೇಶ್ವರ। ಕರುಣಾಂಕರ ಭಕುತಿಸಾರ ।
ನಾಗಹಾರ ಅರೆ ಇಂದುಧರ । ಪರಮ ಈಶ ಪರಾವತಾರ ॥ ಪ ॥
ಭಕ್ತೀ ಮಾರ್ಗವನು ತೋರುತ । ಸತ್ಯ ಶೋಧವನು ಗೈಯ್ಯುತ ॥
ಸರ್ವಧರ್ಮದಿ ಸಮನ್ವಯ । ಮನವನು ತಳೆದಾತ ಮಹಿಮ ॥ ೧ ॥

===***====***====

ಪ್ರವೇಶ ೧

ಸ್ಥಳ : ಕೈಲಾಸ ಮಂದಿರ. ಪರಮೇಶ್ವರನು ಸಿಂಹಾಸನಾರೂಢನಾಗಿದ್ದು. ಅಜಹರಿ ಸುರವರಿಂದೊಡಗೂಡಿ ತನ್ನ ಒಡ್ಡೋಲಗಗೂಡಿಸಿದ್ದಾನೆ. ಭೃಂಗೀಶನು ತನ್ನ ಹಾಸ್ಯಮಯವಾದ ಭಾವ ಭಂಗಿಯಿಂದ ನಾಂಟ್ಯವಾಡುತ್ತಾನೆ.

ಭೃಂಗೀಶ: (ರಾಗತಾಳಗಳೊಂದಿಗೆ ಮೇಳೈಸಿ ನಾಂಟ್ಯವಾಡಿ ಕೈಲಾಸಾಧಿಪತಿಗೆ ಬಾಗಿ ಮಣಿಯುವುದು)

ಪರಮೇಶ: ಭಲೆ ಭಲೆ ಭೃಂಗೀಶಾ ನಿನ್ನ ನೃತ್ಯವೆಂದರೆ ಸತ್ಯವಾಗಿಯೂ ಅದೊಂದು ಅಮರ ಕಲೆ. ನಿನ್ನ ಹಾಸ್ಯತಮವಾದ ಭಾವ ಭಂಗಿಯಿಂದ ಒಡ್ಡೋಲಗದ ಸುರಗಣವೆಲ್ಲವೂ ತಣಿದು ಸಂತಸಂದೆಳೆಯಿತು. ಇನ್ನು ನೀನು ವಿಶ್ರಮಿಸಿಕೋ.

ಭೃಂಗೀಶ: ತಮ್ಮ ಚಿತ್ತಾ. (ಎಂದು ಕೂತುಕೊಳ್ಳುವದು).

ಪಾರ್ವತಿ: ದೇವಾ ಆ ಭೃಂಗಿಯ ನೃತ್ಯದಿಂದ ಸುರಗಣವಷ್ಟೇ ತಣಿದಂತಾಯಿತೇನು ?

ಪರಮೇಶ: ಅದೇಕೆ ದೇವಿ, ನನಗಂತೂ ಆತನ ನೃತ್ಯದಿಂದ ಅಮಿತಾನಂದವಾಗಿದೆ. ಇಷ್ಟೇ ಅಲ್ಲ ಚತುರ್ದಶ ಭುವನಗಳ ಲಾಲನೆ ಪಾಲನೆ ವಿಚಾರದಲ್ಲಿ ಸವೆದ ನನ್ನ ಹೃದಯಕ್ಕೆ ನವ ಚೈತನ್ಯವು ಬಂದಂತಾಗಿದೆ.

ಪಾರ್ವತಿ: ನಿಜ. ಆನಂದವು ಆಯುಷ್ಯ ವರ್ಧಿನಿಯು. ಎಲ್ಲರಿಗೂ ಆನಂದವನ್ನುಂಟು ಮಾಡಿ, ಸೊಗಸು ಸ್ಫೂರ್ತಿಗಳನ್ನೀಯುವ ಶಕ್ತಿಯನ್ನಳವಡಿಸಿಕೊಂಡ ಈ ಬೃಂಗಿಯು, ನಿಜವಾಗಿಯೂ ಸಭಾ ಭೂಷಣನಲ್ಲವೆ ? ಇರಲಿ ದೇವಾ ಚತುರ್ದಶ ಭುವನಗಳಲ್ಲಿಯ ವಿಶಿಷ್ಟವಾದ ವಿಚಾರವೇನು ? (ಒಂದು ಪಕ್ಕದ ಕಡೆಗೆ ನೋಡಿ) ಏನಿದು ಗಾನ ನಿನಾದವು !

ಪರಮೇಶ : ಆ ಅದೋ ನೋಡು. ಗಾನವಿಶಾರದನಾದ ಲೋಕಸಂಚಾರಿ ನಾರದನೇ ಬರುತ್ತಿದ್ದಾನೆ. ಚತುರ್ದಶ ಭುವನದ ಬಗ್ಗೆ ವಿಚಾರ ಮಾಡಿದ

ಬಗೆಗೆ ಆತನೇ ಎಲ್ಲ ಸಂಗತಿಯನ್ನು ವಿಶದೀಕರಿಸಬಲ್ಲ. ನಿಧಾನವಾಗಿ ಆತನ ಕರ್ಣ ಮಧುರವಾದ ಗಾನವನ್ನು ತುಸು ಕೇಳು.

ನಾರದ: ಪದ ರಾಗ: ಮಾಂಡ

ಸಲಹು ಭೋ ಶೈಲಜೆಯ ಲೋಲಾ
ಕೃಪಾಲಾ । ಪಾಣಿ ತ್ರಿಶೂಲಾ ॥ ಪಲ್ಲ ॥
ಭಕ್ತರ ಪಾಲಕ ಸುಖದಾತಾ ।
ಸುರನಮಿತ ವಿಶ್ವಾಧಿಪ ಭೋ ದೇವಾ ॥

ನಮಸ್ತೆ ದೇವದೇವೇಶ, ಕರುಣಾರಸ ವಾರಿಧೆ । ತ್ರಾಹಿಮಾಂ ಜಗದೀಶ್ವರ (ಎಂದು ನಮಿಸುವದು).

ಪರಮೇಶ: ಮಂಗಲವಿರಲಿ ಏಳು ನಾರದಾ ।

ಪಾರ್ವತಿ: ಏನಯ್ಯ ಬ್ರಹ್ಮಪುತ್ರ ನಾರದಾ ? ನೀನೀಗ ಸಮಸ್ತ ಲೋಕಗಳನೆಲ್ಲ ಸುತ್ತಾಡಿ ಬಂದಿರುವಿಯಷ್ಟೆ । ಆದರೆ ಆವಾವ ಲೋಕದ ವೈಶಿಷ್ಟ್ಯವು ಏನೆಂಬುದನ್ನು ವಿವರಿಸಬಲ್ಲೆಯಾದೊಡೆ ಸತ್ಯವನ್ನೇ ಅರುಹಬೇಕು ಕಂಡೆಯಾ ?

ನಾರದ: ಅಂದರೆ ದೇವಿಯವರಿಗೆ ನಾನೇನು ಸತ್ಯವಾದಿಯೆಂಬುದು ಕಂಡಂತೆ ತೋರುವದಿಲ್ಲ.

ಪಾರ್ವತಿ: ಹಾಗಲ್ಲ ನಾರದಾ !

ನಾರದ: ಮತ್ತೇನು ತಾಯಿ ?

ಪಾರ್ವತಿ: ಅಂದರೆ ನೀನು ಕಲಹಪ್ರಿಯ. ವಿನೋದಕ್ಕಾಗಿ ಏನಾದರೊಂದು ನಾಟಕವನ್ನು ರಚಿಸಿ ಉಪದ್ವ್ಯಾಪವನ್ನುಂಟು ಮಾಡೀ ಎಂಬ ಹೆದರಿಕೆ.

ಪರಮೇಶ: ಅದುದರಿಂದಲೇ ನಾರದಾ, ದೇವಿಯು ಸತ್ಯವನ್ನುಸುರೆಂದುದ್ದೇಶಿಸಿ ಹೇಳಿದ್ದು. ಇರಲಿ ಲೋಕ ಲೋಕಗಳ ಚರಿತೆಯೇನು ?

ನಾರದ: (ಸ್ವಗತ) ಇಚ್ಛಾ ಮಾತ್ರದಿಂದ ಸೃಷ್ಟಿ ಸ್ಥಿತಿಲಯಗಳನ್ನುಂಟು ಮಾಡಬಲ್ಲ ಈ ಸ್ವಯಂಭುವಿಗೆ ಗೋಚರವಾಗದ ವಿಷಯವು ಆದಾವುದಿರುವದು ? ಲೀಲಾಮಯಿಯಾದ ಇವನು ನನ್ನ ಮುಖದಿಂದ ಕೇಳಿ ವಿನೋದಿಸಬೇಕೆಂಬುದೇ ಇದರ ಗುಟ್ಟು. (ಪ್ರಕಾಶ) ದೇವಾ ಅತಳ

ಪಿತಳಾದಿ ಸಮಸ್ತಲೋಕಂಗಳಂ ಸಂಚರಿಸುವವನಾದೆ. ಮೃತ್ಯುಲೋಕದ ಹೊರತಾಗಿ ಉಳಿದೆಲ್ಲ ಲೋಕಗಳ ಸ್ಥಿತಿಯು, ಎಂದಿನಂತೆಯೇ ಭಕ್ತಿಯುತವಾಗಿ ಯಥಾಸ್ಥಿತವಾಗಿದೆ. ಆದರೆ ?

ಪರಮೇಶ: ಆದರೇನು ಮೃತ್ಯುಲೋಕದವರ ಸ್ಥಿತಿಯು ಚನ್ನಾಗಿರುವದಿಲ್ಲವೆ ?

ನಾರದ: ಇಲ್ಲ ದೇವಾ ಆ ಲೋಕದ ಈಗಿನ ಸ್ಥಿತಿಯ ಪರಿವರ್ತನೆಯಾಗದೇ ಹೋದರೆ, ತುಸು ಕಾಲಾವಧಿಯಲ್ಲಿ ಮೃತ್ಯುಲೋಕವು, ಅಧಃಪತನ ಹೊಂದುವದೇ ನಿಶ್ಚಯ.

ಪರಮೇಶ: ಅಧಃಪತನ ! ಇಷ್ಟೊಂದು ಹೀನ ದಿಶೆಗಿಳಿದಿದೆಯೇ ಆ ಮೃತ್ಯು ಲೋಕ ?

ಪಾರ್ವತಿ: ಅಂದರೆ ಹೀಗಾಗಲಿಕ್ಕೆ ಕಾರಣವೇನು ? ಅಂದರೆ ಅಲ್ಲಿಯ ಜನರೇನಾದರೂ ನೀತಿಗೆಟ್ಟವರಾಗಿರಬೇಕಲ್ಲವೆ ?

ಪರಮೇಶ: ಸರಿ, ಸರಿ, ಮೃಡಾಣಿ ಈ ನಿನ್ನ ಊಹೆಯು ಶತಸಿದ್ಧ. ನೀತಿಯ ನೆಲೆಗಟ್ಟಿಲ್ಲದವನ ಬಾಳು ಹಾಳು. ನೀತಿಯೇ ಧರ್ಮದ ತಳಹದಿಯು. ಧರ್ಮದಿಂದಲೇ ಭಕ್ತಿ ಮುಕ್ತಿಗಳು. ಮಾನವ ಕೋಟಿಯು ಭವಸಾಗರವನ್ನು ದಾಟಬೇಕಾದರೆ ಧರ್ಮವೇ ಸುರಕ್ಷಿತ ಭೈತ್ರ . ಧರ್ಮ ಚ್ಯುತಿಯಾದ ಮರುಕ್ಷಣವೇ ಮಾನವನ ಅಧಃಪತನಕ್ಕಾರಂಭವಾಗುತ್ತ ತದ್ವತ್ ನಾರದಾ ? ಮೃತ್ಯುಲೋಕದವರ ಸ್ಥಿತಿಯು ಹೀಗಾಗಬೇಕಾದರೆ ಅವರಲ್ಲಿ ಧರ್ಮದ ಶಿಥಿಲತೆಯುಂಟಾಗಿರಬೇಕಲ್ಲವೆ ?

ನಾರದ: ಅಹುದಹುದು ಸ್ವಾಮಿನ್ ಅದು ನಿಸ್ಸಂದೇಹ. ಮೃತ್ಯುಲೋಕದಲ್ಲಿ ವೀರಶೈವ ಧರ್ಮದ ಅವಹೇಳನವು ಪರಮಾವಧಿಗೆ ಮುಟ್ಟಿಹೋಗಿದೆ.

ಪರಮೇಶ: ಅಲ್ಲ ?

ನಾರದ: ಅಯ್ಯಯ್ಯೊ ದೇವಾ ? ಏನೆಂದುಸುರಬೇಕು ? ಮೃತ್ಯುಲೋಕದಲ್ಲಿ ಕೆಲವರು ಶೈವಾಚಾರ ತತ್ಪರರಾಗಿದ್ದವರುಂಟು. ಪರರೊಡನೆ ನುಡಿಯದೆ ತಮ್ಮಷ್ಟಕ್ಕೆ ತಾವೇ ಘನತೆಯಲ್ಲಿರ್ದವೆಂದರಿತುಕೊಂಡಿರ್ವರ್ ಕೆಲಶರಣರು. ಲೋಕ ಲೌಕಿಕದಿ ಬೆರಸಿಯುಂ ತಲ್ಲೋಗ ಬೋಧೆಗೆ ಒಳಗಾಗದಿರ್ಪರ್ ಕೆಲರು. ಭೋಗ ಭಾಗ್ಯಾದಿ ಸೌಖ್ಯ ಸಾಗರದಲ್ಲಿ ಮುಳುಗೇಳ್ದು ಅದರಲ್ಲಿಯೇ ಪರವಶರಾಗಿ ಈ ಲೋಕವನ್ನೇ ಮರೆತು ಬಿಟ್ಟಿರ್ವರ್ ಹಲವಾರು ಜನರು. ದೇವಾ ಬಹಳ ಹೇಳುವದೇನು ?

ಈಗ್ಯೆ ಮೃತ್ಯು ಲೋಕದಲ್ಲಿ ನಿಮ್ಮ ಭಕ್ತಿಯೆಂಬುದಕ್ಕೆ ತುದಿಮೊದಲಿಲ್ಲದೆ ಒರ್ಮೆಯುಂ ಅವರಿಗೆ ಭಕ್ತಿ ಮಾರ್ಗದ ರಹಸ್ಯವು ಸಲೆದೋರದಾಗಿದೆ. ತನ್ಮೂಲಕ ಪರಮಾತ್ಮಾ ? ಎಲ್ಲ ಸಂದೇಶಂಗಳನ್ನುಳಿದು, ಸತತಾನಂದಿತ ಅಮಲ ಭಕ್ತಿಯುಕ್ತಾನಂದ ರಸದೊಳಗಾಡುವಂತೆ ನೀವೇ ಕರುಣಾಭಾವದಿಂ ಮನುಷ್ಯ ಲೋಕದೋಳ್ ಬಿಜಯಂಗೈದು ಇದು ಲಿಂಗಸ್ಥಳ, ಇದು ಜಂಗಮಸ್ಥಳ, ಇದು ಪ್ರಸಾದಿ ಸ್ಥಳ ಎಂಬುದಾಗಿರುವ ವಿಮಲ ವೀರಶೈವ ತತ್ವವನ್ನರುಪಿ, ಮೃತ್ಯು ಲೋಕದ ಮನುಜರೆಲ್ಲರಂ ನಿಜಭಕ್ತಿಯಲಿ ಪಾವನತ್ವಮಂ ಪಡೆಯುವ ಹಾಗೆ, ಅನುಗ್ರಹಿಸಬೇಕು ದೇವಾ !

ಪರಮೇಶ: ಸರಿ ನಾರದಾ ? ನಿನ್ನ ಕೋರಿಕೆಯಂತೆ, ಮೃತ್ಯುಲೋಕದ ಮೌಢ್ಯವಂ ಹೋಗಲಾಡಿಸಿ ಅವರಲ್ಲಿ ಗುರುಲಿಂಗ ಜಂಗಮ ಭಕ್ತಿಯು ಬೇರೂರುವಂತೆ ಕಾರ್ಯವೆಸಗುತ್ತೇವೆ. ಮತ್ತಂ ಆ ಕಾರ್ಯನಿರ್ವಹಣೆಗಾಗಿ ಇದೋ ಈ ನಂದೀಶನನ್ನೇ ನೇಮಿಸಿ ಕಳುಹುತ್ತೇನೆ.

ನಾರದ : ದೇವ ದೇವಾ! ಸ್ವಧರ್ಮ ನಿಷ್ಠೆಯಿಲ್ಲದೆ ಪರಮತಾವ ಲಂಬಿಗಳಾಗುತ್ತಿರುವ, ಮತ್ತು ಅನ್ಯಾಯ ಅಸತ್ಯ, ಅಧರ್ಮಗಳಿಗೆಡೆಗೊಡುತ್ತಿರುವ ಆ ಮರ್ತ್ಯರ ಹೃದಯ ಪರಿವರ್ತನೆಗೊಳಿಸಿ ಆವರಲ್ಲಿ ಗುರುಲಿಂಗ ಜಂಗಮ ಭಕ್ತಿಯನ್ನು ಪ್ರಾಸ್ತಾಪಿಸುವ ಕಾರ್ಯವೆಂದರೆ, ಸಾಮಾನ್ಯವಾದುದೆ ? ಈ ಮಹತ್ಕಾರ್ಯಕ್ಕೆ ತಾವಲ್ಲದೆ------

ಪರಮೇಶ: ಬೇರಾರಿಂದ ಸಾಧ್ಯವಿಲ್ಲೆಂಬುದೇ ನಿನ್ನ ಅಭಿಪ್ರಾಯವಲ್ಲವೆ ?

ನಾರದ: ಆಹುದು ಸ್ವಾಮಿನ್. ಈ ಕಾರ್ಯವು ಬೇರೆಯವರಿಂದ ಆಗುವದು ಸಾಧ್ಯಮುಂಟೆ ?

ಪರಮೇಶ: ನಾರದಾ ! ಅದು ನಿನ್ನ ಭ್ರಮೆ. ಈ ನಂದೀಶನಿಗೂ, ಎನಗೂ, ಎನಿತೊಂದೂ ಭೇದವಿರುವದಿಲ್ಲ. ಅವನೆಂದರೆ ನಾನೇ ಎಂದರೂ ಪರವಿಲ್ಲ. ಈತನನ್ನೇ ಮೃತ್ಯು ಲೋಕಕ್ಕೆ ಕಳುಪುವೆವು. ಈ ದ್ವಿತೀಯ ಶಂಕರನಿಂದಲೇ ಮೃತ್ಯು ಲೋಕವು ಬೋಧಿಸಲ್ಪಟ್ಟು ವೀರಶೈವಾಚಾರದಿಂದ ಪರಮ ಪವಿತ್ರೋನ್ನತಿಯಂ ಪಡೆವುದು.

ಪಾರ್ವತಿ: ಹೃದಯೇಶ್ವರಾ! ನಂದಿಗೂ ನಿಮಗೂ ಒಂದಿನಿತೂ ಭೇದವಿರುವದಿಲ್ಲವೆಂದು, ನೀವುಸುರಿದುದು ಭಕ್ತೈಕ ತನುವಾನೆಂದ ಪರಿಯೋ ಅಥವಾ ಆತನಂ ಹೊಂದಿ ನೀವೇ ಆಗಿರ್ದ ಅಂದಮೊ ? ಎಂಬುದು ನನಗೊಂದೂ ಅರ್ಥವಾಗಲಿಲ್ಲ.

ಪರಮೇಶ: ಪರಮೇಶ್ವರಿ! ಅವರಲ್ಲೇನಚ್ಚರಿ ? ಊಹಿಪಡೆಯಾಂ ಭಕ್ತರ್ದೇಹಿಕ ದೇಹನಪ್ಪವಂ ಎಂಬುದರಲ್ಲೆನಿತೂ ಸಂದೇಹಮಿಲ್ಲ. ಈ ನಂದೀಶ್ವರನ ಪವಿತ್ರತಮ ಚರಿತೆಯನ್ನು ವಿಶದವಾಗಿ ಕೇಳು. ಆದಿ ವಿವಿಧ ಯುಗಂಗಳಲ್ಲಿ ಶಿಲಾದನೆಂಬವನು ಆದಿಯೆನಿಪ ಶ್ರೀಗಿರಿಯ ನೈರುತ್ಯ ಭಾಗದೋಳ್ ನಿರಶನ ವ್ರತನಾಗಿ ಇನ ಶಶಿಕಿರಣಪವನೋದಕಾಹಾರಂಗಳಿಂ ತ್ರಿಕೋಟಿ ವತ್ಸರಂಗಳಂ ಕಳೆದು ಮುಂದೆ,

ಪಾರ್ವತಿ: ಮುಂದೇನು ಪರಮಾತ್ಮ ?

ಪರಮೇಶ: ಮುಂದೆ ಶತಕೋಟಿ ವರ್ಷಗಳ ಪರಿಯಂತ ಸಾಸಿವೆಯ ತೋರದ ಶಿಲೆಗಳಂ ಸವೆಯುತ್ತಾ ಉಗ್ರ ತಪವಂ ಮಾಡಿದಾತಂಗೆ ನಾನೊಲಿದು ಪ್ರಸನ್ನನಾಗಿ ನಿನ್ನಭೀಷ್ಟವೇನು ಕೇಳಿಕೋ ಎಂದು ಹೇಳಿದೆ.

ಪಾರ್ವತಿ: ಇಂಥ ಅಫೋರ ತಪವನ್ನಾಚರಿಸಿದ ಶಿಲಾದನು ಅದಾವ ವರವಂ ಕೇಳಿಕೊಂಡನು ದೇವಾ?

ಪರಮೇಶ: ಮಾನಿತೋತ್ತಮ ಭಕ್ತಿ ನಿಷ್ಠಾನೂನ ಮತ್ಪ್ರತಿ ಮಾನನಪ್ಪ ಸುಪುತ್ರನಂ ಕರುಣಿಸೆಂದು ಕೇಳಿಕೊಂಡನು ಅಗ್ಗೆ ನಾನು ಎಮಗೆ ವಾಹನನಾಗಿಯೂ ಗೋಕುಲ ರಮಣನಾಗಿಯೂ ನಾನಾ ಪ್ರಮಥನಾಗಿಯೂ, ಕರಮೆಸೆವ ಆದಿ ನಂದಿಗೆ ಆಜ್ಞಾಪಿಸಿದೆನು.

ಪಾರ್ವತಿ: ಏನೆಂದು ?

ಪರಮೇಶ: ವೃಷಭೋತ್ತಮಾ! ನೀನು ಶಿಲಾದಂಗೆ ವೃಷಭನೆಂಬ ಸುನಾಮ ಧ್ಯೇಯದಿಂದ ಜನಿಸೆಂದು ಅನುಗ್ರಹಿಸಿದೆನು ತದ್ವತ್ ಆತನು ಜನಿಸಲೊಡನೆ ಮದೀಯ ಪಾದಪಂಕೇರುಹಮಂ ತನ್ನಾತ್ಮದೋಳ್ ನೆಲೆಗೊಳಿಸಿ, ಪರಿವ ತೊರೆಗಳ ನಡುವೆ, ದೃತಿಯೋಸರಿಸದೆ ಚಳಿಗಾಲಮೆಲ್ಲಮಂ ನಿರುತದಿಂ ಕೊರಳುದ್ದ ನೀರೋಳ್ ನಿಂದು ಕಾಲೊಂದು ಧರೆಯೊಳೂರಿ, ನಭಕ್ಕೆ ಮುಖಪಂಕರುಹಮಂ ನೀಡಿ ಭೋರನೆ ಸುರಿವ ಪೆರ್ಮಳಿಯೊಳಗೆ ಕಂಪಿಸದೆ ನಿಂದಿರ್ದು.

ಪಾರ್ವತಿ: ಎಂತಹ ಆಫೋರವಾದ ತಪಸ್ಸಿದು ? ಮತ್ತೆ !

ಪರಮೇಶ: ಮತ್ತಂ ಧರಣಿಯೋಳ್ ತಲೆಯೂರಿ ಚರಣಯುಗಮಂ ನೆಗೆಪಿ, ಉರಿಬಿಸಿಲೊಳಂತೆಡೆವಿಡದೆ ನಿಂದಿರ್ದು ಉಗ್ರ ತಪವಾಚರಿಸುತಿರೆ. ಇದೆ ಬ್ರಹ್ಮಾಂಡದಲ್ಲಾದ ಸ್ಥಿತಿಯಂ ಕೇಳು.

ಪಾರ್ವತಿ: ಏನಾಯಿತು ದೇವಾ ?

ಪರಮೇಶ: ಆತನ ಉಗ್ರ ತಪೋಜ್ವಾಲೆಯಿಂದ ಪೊಡವಿ ನಡುಗಿತು. ಚಂದ್ರ
ಸೂರ್ಯರು ಅಸ್ತಮಿಸಿದರು. ದೇಶಿಗಳೊಡೆಯರು ಬೆದರಿದರು .
ಅಜನೆದೆಯು ಬಿರಿಯಿತು. ಮುರರಿಪು ಜರಿದನು. ದಿವಿಜರ್ ಸರಿದರು.
ಬಹಳವೇನು ಸುರಗಿರಿಯು ಕಂಪಿಸಿ ಬ್ರಹ್ಮಾಂಡವು ಅಲುಗಾಡಿತು.
ಈತೆರ ಅಲ್ಲೋಲ ಕಲ್ಲೋಲ ಆಗುತ್ತಿರುವ ಸಮಯದಲ್ಲಿ ಭಯಾ
ಕುಲರಾದ ಅಜಾಚ್ಯುತ ಇಂದ್ರ ಸುರಾಸುರರು ಸಂತಾಪಿಸುತ್ತಾ ನನ್ನೆಡೆಗೆ
ಬಂದು.

ಪಾರ್ವತಿ: ಏನು ಕೇಳಿಕೊಂಡರು ದೇವಾ ?

ಪರಮೇಶ: ಆ ವೃಷಭೋತ್ತಮನ ಉಗ್ರ ತಪೋಬಲದಿಂದ ನಮ್ಮ ಪದವಿಗಳಿಗೆ
ಎಲ್ಲಿ ಚ್ಯುತಿ ಬರುವದೋ ಎಂದು ಭಯಾನಿತ್ವರಾಗಿ ತಮ್ಮ ಸನ್ನಿಧಿಯಂ
ಕಂಡುಕೊಂಡಿದ್ದೇವೆ. ನಿಕಃಳ್ಳೈಕ ರಕ್ಷಣಾಕರ ಕೃಪಾಕರಾ ! ರಕ್ಷಿಸು ರಕ್ಷಿಸು
ಎಂದು ಬೇಡಿಕೊಂಡರು.

ಪಾರ್ವತಿ: ಆಗವರಿಗಾವ ಆಯ ದೊರೆಯಿತು ದೇವಾ ?

ಪರಮೇಶ: ಆಗ್ಗೆ ನಾನು ದಯಾಲೋಕನದಿಂದವರಂ ಈಕ್ಷಿಸಿ ಮರುಳ್ಗಳಿರ ? ಆ
ವೃಷಭೋತ್ತಮನ ತಪಸ್ಸಿಗಾಗಿ ಇಷ್ಟೊಂದು ಸಂತಾಪಿಸಲೇತಕ್ಕೆ ?
ಪಣಿತಲ್ಪ ಎನ್ನ ಅನಘ ವೃಷಭಾಧೀಶನು ನಿನ್ನಯ ಪದವಿಯ
ಸಂಕಲ್ಪಿಸುವನೆ ! ಪದ್ಮಭವ, ಒರ್ಮೆಯಂ ನಿನ್ನ ಪದವಿಯ ಬಗೆವನೆ ?
ಅಮರರು ನಿನ್ನ ಪದವಿಂಯುನ್ನಾದರೂ ಅರ್ಥಿಸುವರೆ ?
ಆ ನಿಸ್ಪೃಹಿಯಾದ ವೃಷಭನು. ನಿಮಗೆ ಬಹಳ ಹೇಳುವದೇನು, ಆ
ವೃಷಭೋತ್ತಮನು ಎನ್ನನಲ್ಲದೆ ಎನ್ನ ಪದವಿಯನಾದೊಡಂ ತನ್ನ
ಮನದೋಳ್ ನೆನೆವನಲ್ಲಂ ಎಂದು ಹೇಳಿ ಅವರ ಭಯ ನಿರಸನಗೊಳಿಸಿ
ಕಳಿಸುವವನಾದೆನು.

ಪಾರ್ವತಿ : ಮುಂದೇನಾಯಿತು ದೇವಾ ?

ಪರಮೇಶ: ಆಮೇಲೆ ತಪೋಜ್ವಾಲೆಯಿಂದ ಬೆಂದು ಬೆಂಡಾದ ವೃಷಭನಂ ಮೈದಡವಿ
ಬೋಳೈಸಿ ಸಂತಸಪಿಟ್ಟು ನಿನ್ನ ತಪೋಪ್ರಭೆಗೆ ಪ್ರಸನ್ನ ಮನಸ್ಕನಾಗಿರುವೆ
ನೀನಾವ ಪದವಿಯಂ ಬೇಡಿದರೂ ಕೊಡುವೆ ಕೇಳಿಕೋ ಎನಲು

ಪಾರ್ವತಿ: ಅದಕ್ಕೆ ವೃಷಭನು ಏನನ್ನು ಕೇಳಿಕೊಂಡನು ದೇವಾ !

ಪರಮೇಶ: ನಿರಪೇಕ್ಷ ಬುದ್ಧಿಯವನಾದ ಆತನು, ದೇವಾ ಪದಪಿಗಿದಪಿಗಳಿವೇತಕೆ ? ನಿಮ್ಮ ಅತುಲವಾದ ಭಕ್ತಸುಪದವಿಯಂ ಪ್ರಸಾದಿಸಿ ಸಲುಹೆಂದು ಬಿನ್ನಹಿಸಿಕೊಂಡ.

ಪಾರ್ವತಿ : ಮುಂದೆ ?

ಪರಮೇಶ: ಮುಂದೆ ನಾನಾತನ ನಿರಿಚ್ಛಾವೃತ್ತಿಗೆ ಪ್ರಮೋದ ಚಿತ್ತಾನಾಗಿ ಆ ನಂದಿಯಂ ಗಾಢಾಲಿಂಗನೋತ್ಸುವೊದಗೆ ಆತನ ತನುವೆನ್ನ ತನುವಿನೊಳಗಪ್ಪಿಕೊಂಡೆ ಮತ್ತು ಆತನಿಗೆ ನಾನು ನಿನ್ನ ಗಾತ್ರ ಸ್ಪರ್ಶನ ಸಮುತ್ಪನ್ನ ಸುಖರಸಮಾಗಿರಲು ನೀನು ನನ್ನ ವಾಹನನಾಗೆಂದವನಿಗೆ ನಿವೇದಿಸಿ. ಆತನಿಗೆ ಪ್ರಮಥೇಂದ್ರ ಪದವಿಯ ಚೆನ್ನ ಪಟ್ಟಮಂಕಟ್ಟಿ ಸರ್ವಜ್ಞತ್ವಮಂ ಕೊಟ್ಟೆ. ಗೊತ್ತಾಯಿತೇ ಶರ್ವಾಣಿ ? ಈ ಮಂಗಲಮಯ ನಂದೀಶನ ಚರಿತೆ.

ಪಾರ್ವತಿ: ದೇವಾ ಆತನ ಅತುಲ ಭಕ್ತಿಯ ದೃಢತೆಯ ಚರಿತೆಯ ಕೇಳಿ ಆನಂದ ತುಂದಿಲಳಾದೆ. ಧನ್ಯಧನ್ಯ, ನಂದೀಶ್ವರಾಂ.

ಪರಮೇಶ: ಯಾಕೆ ನಾರದಾ ? ಈ ನಂದೀಶ್ವರನ ಉತ್ತಮೋತ್ತಮ ಚರಿತೆಯನ್ನು ಕೇಳಿದೆಯಲ್ಲವೆ ?

ನಾರದ: ಕೇಳಿದೆ ದೇವಾ ಕೇಳಿ ಮಂತ್ರ ಮುಗ್ಧನಾದೆ.

ಪರಮೇಶ: ಈಗಲಾದರೂ ಆತನ ಬಗೆಗಿರುವ ಸಂದೇಹ ನಿವಾರಣೆಯಾಯಿತೆ ?

ನಾರದ: ಆಯಿತು ದೇವಾ. ಬ್ರಹ್ಮಾಂಡ ಸೂತ್ರಧಾರಿಯಾದ ನಿನ್ನ ಮುಂದೆ ಗಳಹಿಕೊಂಡದ್ದೇ ನನ್ನ ಪ್ರಮಾದವು.

ಪರಮೇಶ: ಪ್ರಮಾದವೇತರದದರೊಳಗೆ ? ಎನ್ನ ಮೇಲಣ ಭಕ್ತಿಯಾತಿರೇಕದಿಂದ ನೀನೇನೋ ಹಾಗೆ ನುಡಿದಿರುವೆ, ಮೃಡಾಣಿ, ಕೇಳಿದಿಯಲ್ಲವೆ ? ಈ ನಂದಿನಾಥನ ಚರಿತೆಯನ್ನು ? ಈತನ ಚರಿತೆಯನ್ನು ಹೇಳಿಕೇಳಿದ ವರ್ಗೆಲ್ಲ ಸಲ್ಲಲಿತ ಮತಿಭಕ್ತಿ, ಗುಣರತಿ, ದೃಷ್ಟಾದೃಷ್ಟ ಸಿದ್ಧಿಗಳೆಲ್ಲಮುಂ ದೊರೆಕೊಳ್ಳುವು.

ಪಾರ್ವತಿ: ಧನ್ಯ ಧನ್ಯ. ನಂದೀಶ್ವರಾ ! ಈ ಸದಾಚಾರಿತ್ವ ಈ ಮಹಿಮಾ ಸಮಗ್ರತೆ, ಈ ಉದಾರತೆ, ಈ ಸರಸ ಪಾಂಡಿತ್ಯ, ಈ ನಿರಹಂಕರಣ ಭಕ್ತಿ, ಈ ನಿರಂತರ ದಾಸ ಭಾವನೆ, ಈ ಸಮೀಚೀನತ್ವ , ಈ ಘನತೆ ಯಾರಿಗುಂಟು ? ಇದೆಲ್ಲವಂ ಅಳವಡಿಸಿಕೊಂಡ ನೀನು ನಿಜವಾಗಿಯೂ ಧನ್ಯ.

ಪರಮೇಶ: ಕೇಳಿದ್ಯ ನಾರದ ಮುನಿಯೇ ನಂದೀಶ್ವರನ ಘನಮಹಿಮೆಯನ್ನು. ಇನ್ನು ನೀನು ವಿಜ್ಞಾಪಿಸಿಕೊಂಡಂತೆ ಮರ್ತ್ಯರ ಮನದ ಮೈಲಿಗೆಯಂ ಕಳೆದು, ಅವರಲ್ಲಿ ಜ್ಞಾನಜ್ಯೋತಿಂಯಂ ಉಂಟುಮಾಡಿ. ವೀರಶೈವಾಚರಮಂ ಪ್ರಸ್ತಾಪಿಸಲು ಈ ನಂದೀಶ್ವರನಿಗೆ ಆಜ್ಞಾಪಿಸುತ್ತೇನೆ. (ನಂದಿಯ ಕಡೆಗೆ ತೋರಳಿ) ಹೂಂ ನಂದೀಶ್ವರಾ, ಇದೋ ಪ್ರಸಾದವಂ ತೆಗೆದುಕೋ. ಇದುವೆ ಆಗಮ ಮೂಲ ಪದ್ಧತಿ. ಇದುವೆ ಧರ್ಮಾಚಾರ. ಇದುವೆ ಸುವ್ರತ. ಇದುವೆ ಭಕ್ತಮಹತ್ವ ಸಾರಾಯ. ಇದುವೆ ಪರತತ್ವಾನುಭವ ಇದುವೆ ಚರಿತಾರ್ಥತ್ವ ಮಂದಿರ. ಇದುವೆ ತುದಿ ಪದವಿಯೆಂದು ಭೂಲೋಕದೋಳ್ ನಿನ್ನಿಂದ ವಿಧಿತಮಹುದು. ನೀನು ಮೃತ್ಯುಲೋಕದೊಳು ಹೋಗಿ ನಾನಾ ಲೋಕಹಿತವಂಗೈದು ಬಸವನೆಂಬಭಿದಾನದಿಂದ ಮರ್ತ್ಯವನಿಮ್ಮಡಿಸಿ ಪಾವನಗೈದಿಸುವ ನಿಮಿತ್ಯ ನೀನೀಗ ತಳುವದೆ ಭೂಮಿಗವತರಿಸಬೇಕು ಕಂಡಿಯಾ ವತ್ಸ !

ನಂದೀಶ: ಸ್ವಯಂಭುವೆ ನಿನ್ನಾಜ್ಞೆಯಂ ಮುಂಡೆಯೊಳಾಂತು ನಡಿಸುವೆ ನನ್ನಂಭುಲ್ಲೈಸಿ ಸೊಲ್ಲಲೇಕಿನಿತೊಂದನ್ನೆನ್ನಂ ಜಗತ್ರಯ ವಲ್ಲಭನೆ ನೀನಲ್ಲದಿನ್ನೊಬ್ಬಂ ಕರ್ತನಿರ್ದಪನೆ ? ಇಲ್ಲಿ ವರ್ತಿಸುತ್ತಿರ್ದಡೇನು, ಎನಗೆ ಅಲ್ಲಿ ವರ್ತಿಸುತಿರ್ದಡೇನು ? ನಿನ್ನಲ್ಲಿಯೇ ಎನ್ನಿರವು.

ಪರಮೇಶ: ಹಾಗಿರುವ ನಿನ್ನಿರವಂ ನಾನರಿಯೆನೆ ? ನಂದೀಶಾ ಈ ಕೈಲಾಸದಿಂ ಭೂಲೋಕಕ್ಕಟ್ಟಿದನೆಂಬ ಭಾವನೆಯಂ ತಾಳದಿರು. ನಿನ್ನಿಂದ ಆ ಲೋಕವು ಪಾವನತೆಯಂ ಪಡೆಯಬೇಕಾಗಿದೆ. ನಿನ್ನಂ ಅಗಲಿ ನಾನಿರುವೆನೆ ? ನಿಜತತ್ವಾರ್ಥ ಬೋಧೆಯಂ ಗೈಯ್ಯುವ 'ನಿಮಿತ್ಯಂ ಜಂಗಮನಾಗಿ ನಿನ್ನೊಡನಾಡುವೆ. ನೀನು ಎನಿತುಂ ವ್ಯಥೆಗೊಳ್ಳದೆ ನನ್ನಾಜ್ಞೆಯಂ ನೆರವೇರಿಸಿಲು ಭೂಮಿಗವತರಿಸಬೇಕು ತಿಳಿಯಿತೆ.

ನಂದೀಶ: ಆಗಲಿ ದೇವಾ ನಿನ್ನಾಜ್ಞೆಯಂ ಪಾಲಿಸುವದೇ ಮೋಕ್ಷ ಸೋಪಾನ ಅದಕ್ಕಾಗಿ ನಾನೀಗಲೇ ಭೂಮಿಗವತರಿಸುವೆ.

(ರಸ್ತಾ ತೆರೆಯು ಬೀಳುವದು)

===***====***===

(ಪ್ರವೇಶ ೨)

ಸ್ಥಳ: ಬೀದಿ. ಗಂಡ ಹೆಂಡರಿಬ್ಬರು ಪ್ರವೇಶಿಸುವದು

ಹೆಣ್ಣು: (ಹೋಗುವ ಪತಿಯನ್ನು ತಡೆದು) ಯಜಮಾನರೆ ತುಸು ನಿಲ್ಲಿ ನಿಲ್ಲಿ.

ಗಂಡು : (ಹೋಗುತ್ತಿದ್ದವನು ನಿಂತುಕೊಂಡು) ಯಾಕೆ ಮಹಾರಾಯಳೇ ಸುಡುಗಾಡಕ್ಕೆ ಹೋದರೆ ಕಾಗೆಯ ಉಪದ್ರವವೆಂಬಂತೆ, ನಿನ್ನ ಕಾಟ ನನಗೆ. ನಾನೆಲ್ಲಿಯಾದರೂ ನೆಮ್ಮದಿಯಾಗಿ ಕಾಲಹರಣ ಮಾಡಬೇಕೆಂದು ಬಗೆದು ಹೋಗುತ್ತಿದ್ದರೆ, ನನ್ನ ಜೀವ ಹಿಂಡುವ ನಿನ್ನ ಕಾಟವು ಮತ್ತೂ ತಪ್ಪಲೊಲ್ಲದೆ ?

ಹೆಣ್ಣು : ಹೂಂ ಒಳ್ಳೆ ಹಾದೀ ಹುಡುಕಿರುವಿರಿ. ನೆಮ್ಮದಿಯಾಗಿರಲಿಕ್ಕೆ ಹೋಗುವರಂತೆ, ಮಾಡಿಟ್ಟಿರುವಿರಲ್ಲ! ಮನೆತುಂಬ ಉಪವಾಸದಿಂದ ಕಿರಚುತ್ತಿರುವ ಅವಕ್ಕೇನು ಹೇಳುವಿರಿ ?

ಗಂಡು : ಅಲ್ಲ ಹುಚ್ಚೀ ಹೀಗೆಲ್ಲಾ ಮಾತಾಡಬಾರದು. ನಾನೆಂದರೇನೆಂದು ತಿಳಿದಿರುವೆ ? ಪವಿತ್ರ ಅಗ್ರಹಾರವೆನಿಸುವ ಈ ಬಾಗೆವಾಡಿಯಲ್ಲಿಯೇ ನಾನೊಬ್ಬ ಏಕೆಮೇವ ಪಂಡಿತ. ಮಂತ್ರ ಮಾಟಗಾರ, ಭವಿಷ್ಯವಾದಿ ಇಂಥವನ ಹೆಂಡಿರು ಮಕ್ಕಳು ಉಪವಾಸ ಬೀಳುವದೆಂದರೆ ಎಷ್ಟು ಲಾಂಛನಾಸ್ಪದ ! ಹೀಗೆ ಮಾತಾಡಿ ಎಲ್ಲಾದರೂ ನನ್ನನ್ನು ಅವಮಾನಕ್ಕೀಡು ಮಾಡೀ.

ಹೆಣ್ಣು : ಮಾನಿದ್ದರಲ್ಲವೆ ನಿಮಗವಮಾನವಾಗುವದು ? ಮಂತ್ರ ಮಾಟ ಮಾಡಿ ಅಧಮಾಚರಣೆಯಿಂದ ನಡೆದ ಪಾಪಸಂಗ್ರಹದಿಂದಲೇ ಮಕ್ಕಳು ಮರಿಗಳು ತುತ್ತು ಅನ್ನ ಕಾಣದೇ ಉಪವಾಸ ಬೀಳುವ ಹೊತ್ತು ಬಂದದ್ದು.

ಗಂಡು : ಎಲೇ ನೀನು ಎಂಥ ಕೂಳಬಾಕುಳಿಯೇ ? ಉಪವಾಸ ಬಿದ್ದುದಕ್ಕೆ ಇಷ್ಟೊಂದು ಪರಿತಾಪ ಬಡಬೇಕೆ! ಛೀ ಹುಚ್ಚಿ ನನ್ನಂಥ ಉದ್ದಾಮ

ಪಂಡಿತನ ಹೆಂಡತಿಯೆಂದರೆ. ನಿನಗೆ ತುಸುವಾದರೂ ಪುರಾಣ ಪರಿಚಯವಿರಬೇಕಾಗಿತ್ತು. ಹಿಂದೆ ಧರ್ಮರಾಜನು ಅದೆಷ್ಟೊ ಕಾಲ ಉಪವಾಸದಿಂದ ತಿರುಗಿದ. ಅದೇನಾದರೂ ನಿನಗೆ ಗೊತ್ತೇ ? ಅವನೂ ನಿನ್ನಂತೆ ಕೂಳಿಗಾಗಿ ಹರಿದಾಡಿದ್ದರೆ ಇಂದಿಗೂ ಜಗತ್ತು ಅವನನ್ನು ನೆನೆಸುತ್ತಿತ್ತೆ?

ಹೆಣ್ಣು: ಸರಿಸರಿ ದೊಡ್ಡ ವೇದಾಂತಿ. ಪುರಾಣ ಬಲ್ಲ ಜಾಣ. ಮಕ್ಕಳು ಮರಿಗಳ ಹೊಟ್ಟೆ ಹೊರೆಯಲಾರದೆ ಮನೆಬಿಟ್ಟು ಹೋಗುವ ಚತುರ. ನಾಚಿಗೆ ಬರುವದಿಲ್ಲವೆ ನಿಮಗೆ ? ಆಧರ್ಮರಾಜನ ಉದಾಹರಣೆ ತಕ್ಕೊಳ್ಳಲಿಕ್ಕೆ? ಆತನು ಉಪವಾಸ ಬಿದ್ದದ್ದು ಸತ್ಯಸಾಧನೆಗಾಗಿ. ಅದರಿಂದ ಅವನ ಕೀರ್ತಿಯು ಅಜರಾಮರವಾಗಿದೆ. ಜಗತ್ತು ಅವನನ್ನು ಹೊಗಳುತ್ತಿದ್ದುದು. ಆದರೆ ?

ಗಂಡು: ಆದರೇನು ಮತ್ತೆ ?

ಹೆಣ್ಣು: ಏನೆಂದರೆ ದುಡಿಯಲಾರದೆ ಜನರನ್ನು ವಂಚಿಸಿ ಸುಲಿಯುವ ದುರಾಲೋಚನೆಯ ಪಾಪಿಯೆಂದು ನಿಮ್ಮನ್ನು ಲೋಕವು ಉಗುಳುತ್ತಿದೆ.

ಗಂಡು: ಏನೇ ಲೋಕವು ನನ್ನನ್ನು ಪಾಪಿಯೆಂದು ಸಂಬೋಧಿಸಲಿಕ್ಕೆ ನಾನೇನು ದರೋಡೆ ಮಾಡಿರುವೆನೆ? ಕೊಲೆ ಮಾಡಿರುವೆನೆ ?

ಹೆಣ್ಣು: ಅವನ್ನು ನೀವು ಮಾಡದಿದ್ದರೂ ನಿಮ್ಮ ಪಾಪ ಕೃತಿಯು ಅದಕ್ಕೂ ಮೇಲ್ಮಟ್ಟಿನದು. ಮೊನ್ನೆಮೊನ್ನೆ ಒಬ್ಬ ಸಾಧ್ವಿಯು ಮಗನಿಗೆ ಖುಜೆಯಡಿಸಿದ್ದು ಅವನ ಜಡ್ಡು ವಾಸಿ ಮಾಡುವನೆಂದು ಹೇಳಿ ಮಂತ್ರ ತಂತ್ರ ಮಾಡಿಕೊಟ್ಟಿರಿ. ನೀವು ಮಂತ್ರ ಹಾಕಿದ ತಾಸಿನಲ್ಲಿಯೇ ಆಕೆಯ ಮಗನು ಜಿಗಿದು ಬಿದ್ದ. ಇದು ನಿಮ್ಮ ಮಂತ್ರ ಪ್ರಭಾವ. ಮತ್ತೊಬ್ಬ ಹೆಣ್ಣುಮಗಳಿಗೆ – ನೀನು ಉದಯಕಾಲ ಬಂದಿ. ನೀನು ನವಗ್ರಹ ಮಂತ್ರ ಮಾಡಿಸಿ ಕಟ್ಟಿಕೊಂಡರೆ, ನಿನ್ನ ಮೈಯ್ಯಲ್ಲಿಯ ಜಾಡ್ಯವು ತಟ್ಟಾಗಿ ನಿನಗೆ ಸುಖವಾಗುತ್ತದೆ ಎಂದು ಹೇಳಿ ಅವಳಿಂದಲೂ ಹಣ ಸೆಳೆದಿರಿ. ಅವಳೀಗ ಕ್ಷಯ ರೋಗದಿಂದ ಬಳಲುತ್ತಿದ್ದಾಳೆ. ಇದು ನಿಮ್ಮ ನವಗ್ರಹ ಮಂತ್ರದ ಪ್ರಭಾವ. ಅಲ್ಲಾ ನಿಮ್ಮ ಮಂತ್ರ ತಂತ್ರಗಳಿಂದ ರೋಗ ರುಜಿನಗಳು ಹೋಗುವಂತಿದ್ದರೆ, ನಿಮ್ಮ ಮಾಟ ಕೃತಿಯಿಂದ ಭಾಗ್ಯ ಬರುವತಿಂದ್ದರೆ, ನಿಮ್ಮ ಮಕ್ಕಳು ಮರಿಗಳು ಉಪವಾಸದಿಂದ ಏಕೆ ಸಾಯುತ್ತಿದ್ದಾರೆ ಹೇಳಬಾರದೆ ?

ಗಂಡು: ಅಯ್ಯೋ ಹುಚ್ಚೀ ಬಾಯಿ ಮುಚ್ಚು. ಇದನ್ನು ಬೇರೆ ಯಾರಾದರೂ ಕೇಳಿದರೆ ನನ್ನ ಗತಿ ಏನಾದೀತು ? ನೀನು ಈ ಹುಚ್ಚುತನಕ್ಕೆ ಬೀಳಬೇಡ. ಈಗ್ಗೆ ನಾನು ನಮ್ಮ ಬಡತನವೇ ಹಿಂಗುವಂಥ ಒಂದು ಗುರಿಯನ್ನು ಸಾಧಿಸಲು ಕಾಯ್ದುಕೊಂಡಿದ್ದೇನೆ

ಹೆಣ್ಣು: ಅಯ್ಯಯ್ಯೋ ! ಅದಾವ ಗುರಿಯದು ?

ಗಂಡು: ಈ ಬಾಗೇವಾಡಿ ಮಾದಿರಾಜನೇಸಿರುವನಲ್ಲಾ ಆತನಿಗೆ ಗಂಡು ಸಂತತಿ ಇರುವದಿಲ್ಲ. ಅದರಿಂದ ಅವನ ಹೆಂಡತಿಯಾದ ಮಾದಲಾಂಬಿಕೆಗಂತೂ ಅಪಾರವಾದ ಚಿಂತೆಯಾಗಿದೆ. ಆದ್ದರಿಂದ ಆ ಗಂಡ ಹೆಂಡಿರಿಬ್ಬರೂ ಅನೇಕಾನೇಕ ವ್ರತಗಳನ್ನು ಮಾಡುತ್ತಿದ್ದಾರಂತೆ. ಪ್ರಶ್ನೆಗಳನ್ನೂ ಕೇಳುತ್ತಿದ್ದಾರಂತೆ.

ಹೆಣ್ಣು : ಇರಬಹುದು. ಅದರಲ್ಲಿ ನೀವೇನು ಮಾಡತಕ್ಕವರು ?

ಗಂಡು: ಹುಚ್ಚೀ ಇದರಲ್ಲಿ ನನ್ನ ಮುತ್ಸದ್ದಿತನವನ್ನೆಲ್ಲ ಖರ್ಚು ಮಾಡಿ ಬಿಡುವವನಿದ್ದೇನೆ. ಅವರು ನನ್ನ ಹತ್ತಿರ ಬರಬೇಕಾಗಿದೆ ಅಷ್ಟೇ. ಬಂದರೆಂದರೆ ನೋಡಿ ಬಿಡು. ನನ್ನ ವಾಕ್ಚಾತುರ್ಯದಿಂದ ಅವರನ್ನು ಮರುಳುಗೊಳಿಸಿ, ಅವರ ಭವಿಷ್ಯಕಥನವನ್ನು ಸುಳ್ಳು ಸುಳ್ಳೆ ರಚಿಸಿ, ಅವರ ಮನ ಮೆಚ್ಚುವಂತೆ ಹೇಳಿದೆನೆಂದರೆ ತೀರಿತು. ಆಮೇಲೆ ಅವರು ಸಂತುಷ್ಟರಾಗಿ ಅಪಾರವಾದ ಹಣವನ್ನು ನಮಗೆ ಕೊಡುವದೂ ನಿಶ್ಚಯ. ಆಮೇಲೆ ನಾನು ರಾಜ ಮಹಾರಾಜರಲ್ಲಿ ಅಡ್ಡಾಡುವ. ಶ್ರೀಮಂತಾಗುವದೂ ನಿಶ್ಚಯ.

ಹೆಣ್ಣು : ರಾಜ ಮಹಾರಾಜರಲ್ಲಿ ಅಡ್ಡಾಡುವ ಶ್ರೀಮಂತರಾಗುವಿರೋ ? ಅಥವಾ ಕಾರಾಗೃಹವಾಸಿಯಾದ ಕೈದಿಯಾಗುವಿರೋ ಬಲ್ಲವರಾರು ? ಇಲ್ಲಿಯವರೆಗೆ ಜನರನ್ನು ವಂಚಿಸಿ ದುಡ್ಡು ತಿಂದಂತೆ ಆ ಮಾದರಸನಲ್ಲಿಯೂ ಮರೆಮೋಸವನ್ನು ರಚಿಸಹೋದರೆ, ನಿಮ್ಮ ನೂರು ವರ್ಷಗಳು ತುಂಬಿದವೆಂದೇ ಹೇಳಬೇಕು.

ಗಂಡು: ಹಾಗಾದರೆ ನನಗೇನು ಮಾಡಬೇಕೆನ್ನುವೆ ?

ಹೆಣ್ಣು: ಏನು ಮಾಡಬೇಕೆಂದರೆ ಹೇಳುವೆನು ಕೇಳಿ. ಮಾನವನು ತನ್ನ ಜನ್ಮ ಸಾಫಲ್ಯ ಮಾಡಿಕೊಳ್ಳಬೇಕಾದರೆ ದೇವರಿಗೆ ಮತ್ತು ಪಾಪಕ್ಕೆ ಅಂಜಬೇಕು. ನಿಮಗೇನು ಅದರ ಪರಿವೆಯಿಲ್ಲ. ಆದದ್ದು ಆಗಿ ಹೋಯಿತು, ಇನ್ನು

ಮೇಲಾದರೂ ಈ ಸಂಚಿತ ಪಾಪವಿಮೋಚನೆಗಾಗಿ ನೀವು ಜನ ಸೇವೆಯ ಕಾರ್ಯದಲ್ಲಿ ತೊಡಗಬೇಕು ಮತ್ತು ಹೊಟ್ಟೆ ಹೊರೆಯುವದಕ್ಕಾಗಿ ಯಾವುದಾದರೊಂದು ದುಡಿಮೆಯನ್ನು ಕೈಕೊಳ್ಳಬೇಕು.

ಗಂಡು: ಆಗಲಿ ಪುಣ್ಯಾತ್ಮಳೇ ಹಾಗೇ ಮಾಡುವೆ (ಎಂದು ಇಬ್ಬರೂ ಹೋಗುವರು).

===***====***===

(ಪ್ರವೇಶ ೩)

ಸ್ಥಳ – ಮಾದರಸನ ಅಂತಃಪುರ. ಆತನು ಹೆಂಡತಿಯಾದ ಮಾದಲಾಂಬಿ ಕೆಯೊಡನೆ ತಮಗೆ ಗಂಡು ಸಂತತಿ ಇಲ್ಲದಿರುವ ಮೂಲಕ ಚಿಂತೆಗೈಯ್ಯುತ್ತಿದ್ದಾನೆ.)

ಮಾದರಸ : ಪ್ರಿಯೇ ನೀನೇನು ಅಜ್ಞಳಲ್ಲ ಧರ್ಮತಿರುಳನ್ನೆಲ್ಲ ಅರಿತವಳು. ಶಾಸ್ತ್ರ ಸಮ್ಮತವಾಗಿ ನಡೆದರೇನೆ ಸುಖವು ಎಂಬುದನ್ನು ನೀನಾದರೂಬಲ್ಲೆ. ಆದರೂ ನೀನು ಅನಂತ ಚಿಂತಾಕ್ರಾಂತಳಾಗಿ ಅಹರ್ನಿಶಿಯಲ್ಲಿಯೂ ವ್ಯಸನಪಡುತ್ತಿರುವೆ. ಇದಕ್ಕೆ ನಿನಗೇನೆನ್ನಬೇಕು ?

ಮಾದಲಾಂಬಿಕೆ: ನಾಥಾ ನೀವು ನನಗೆ ಎಷ್ಟು ಬಗೆಯಿಂದ ಸಾಂತ್ವನಗೊಳಿಸಿದರೂ ನನಗೆ ಶಾಂತಿಯೆಂಬುವದು ಇಲ್ಲವೇ ಇಲ್ಲ. ವಲ್ಲಭಾ ಏನು ಮಾಡಲಿ? "ಅಪುತ್ರಸ್ಯಗತಿರ್ನಾಸ್ತಿ" ಎಂಬೋಕ್ತಿಯು ನನ್ನ ಕರಳು ಕೊರೆಯುತ್ತಿದೆ. ಮುಟ್ಟುವರ ಮುದ್ದಾಗಿರುವ, ಮುದ್ದಾಡಿಪರ ನಿಜಸುಖವೆನಿಸುವ, ಸುಕುಮಾರನನ್ನು ಅಮರ್ದಪ್ಪಿ ಎತ್ತಿ ಮುದ್ದಾಡಿ ಲಲ್ಲೆಗೈಯ್ಯುವ ಭಾಗ್ಯವು, ಎನಗಿಲ್ಲದಿರುವಾಗ್ಗೆ ಆ ಸರ್ವಶಕ್ತನು ಎಮಗೆ ಕರುಣಿಸಿದ ಈ ಭೋಗ ಭಾಗ್ಯಾದಿ ಸೌಕರ್ಯಗಳೆಷ್ಟಿದ್ದರೇನು? ಅವೆಲ್ಲವೂ ನನ್ನ ಪಾಲಿಗೆ ಶೂನ್ಯ. ಪುತ್ರ ಹೀನಳಾದ ನಾನು ಸೌಖ್ಯವನ್ನು ಕಾಣುವದೆಂದರೆ ಗಾಳಿಗೋಪುರವನ್ನು ಕಟ್ಟಿದಂತೆ. ಇಂಧನವಿಲ್ಲ ವಗ್ನಿಯುನ್ನು ಪ್ರಜ್ವಲಿಸಲಿಚ್ಚಿಸಿದಂತೆ.

ಪದ. ರಾಗ ಜೀವನಪುರಿ. ತ್ರಿತಾಳ.

ಕಾಣೆ ಪ್ರಿಯಾ ಸೌಖ್ಯವ ಕ್ಷೋಣಿಯೊಳು ನಾನೆ ।
ತನುಜಾತನ ನಾ ಕಾಣ್ದುದಸಾಧ್ಯಾ ।
ಸಾರೆಮಪಧನಿ ಸಾರೆಗರೆ ಸಾರೆಸಾನಿಧಪ ॥ ಪ ॥
ಈ ಸಂಸರಣಾ । ಪಾಶಕೆ ತಾಣಾ ।
ವಂಶ ಉದ್ಧಾರಾ ಶೈಶವನು ನಾ ।
ಈಶ್ವರ ದಯದಿ ಮೊಂದದೆ ನಾನು ॥ ೧ ॥

ಮಾದರಸ : ಅಹುದು ಪ್ರೀಯೆ ನೀನೆನ್ನುವದು ನಿಜ. ಆ ಪರಮಾತ್ಮನ ಕೃಪೆಯಾದ ಮಾತ್ರದಲ್ಲಿ ಯಾವುದು ತಾನೆ ಅಸಾಧ್ಯ ? ಕಲ್ಲು ಕನಕಾಗಬಹುದು. ನೆರೆಯದ ವಸ್ತು ನೆರೆಯಬಹುದು.

ಮಾದಲಾಂಬಿಕೆ: ಪ್ರಿಯಾ? ಅಂತಹ ಭಾಗ್ಯವು ನಮ್ಮ ಹಣೆಬರಹದಲ್ಲಿರಬೇಕಲ್ಲವೆ ?

ಮಾದರಸ: ಪ್ರಿಯೆ ಅದು ಇರಲಿ ಇಲ್ಲದಿರಲಿ ಅದಕ್ಕಾಗಿ ನಾವು ಚಿಂತಿಸುವುದು ಬೇಡ. ಈ ಬಾಳು ಬಟ್ಟೆಯಲ್ಲಿ ಎದುರಾಗಿ ಬರುವ ಎಡರು ತೊಡರುಗಳಿಗೆ ಎದೆಗುಂದದೆ ಧೈರ್ಯದಿಂದ ನಡೆಯುವದೇ ಸಾಧುವಾದ ಮಾರ್ಗ.

ಪದ : ರಾಗ ಮಿಶ್ರ ಭೀಮಫಲಾಸ ತ್ರಿತಾಳ

ಆಲಿಸು ನೀ ಸುಮತಿ । ತಳಿ ಭಾವದೊಳಗೆ ಶಾಂತಿ ॥ ಪ ॥
ಸೌಖ್ಯ ದುಃಖದಾ ಭೇದವೆಣಿಸದಲೆ ।
ಲೌಕಿಕ ಸಾಧಿಪುದುಕಾಂತೆ ॥ ೧ ॥

ಮಾದಲಾಂಬಿಕೆ: ಹೃದಯೇಶ್ವರಾ ನೋಡುವವರ ನಯನ ಸುಧೆಯೂ ಮುಟ್ಟುವರ ಪುಳಕತತಿಯೂ ಆಗಿರುವ ತನ್ನ ತೊದಲ್ನುಡಿಗಳಿಂದ ಆನಂದರಸದೋಳ್ ಮುಳುಗಿಸಿ ತಣಿಸುವ ಕಂದನು ನಮ್ಮ ಉದರದಿಂದ ಜನಿಸಿ ಬರದ ಹೊರತು, ಪ್ರಿಯಕರ ಎನಗೆ ಶಾಂತಿಯಿಲ್ಲ. ನೆಮ್ಮದಿಯಿಲ್ಲ. ದೇವಾ ನಮ್ಮ ಪ್ರಾಚೀನ ಕರ್ಮವು ಅದೆಂಥದಿರಬಹುದು? ದೇವಾ ಅದೆಂತು ನಮಗೆ ಸಂತತಿಯಪ್ಪು ದೆಂಬುವ ಮಾರ್ಗದರ್ಶನವನ್ನಾದರೂ ಕರುಣಿಸಬಾರದೆ ?

ಮಾದರಸ: ವಲ್ಲಭೆ ಏನು ಮಾಡುವದು? ನಾವು ವಿಮಲಾಚಾರದಿಂದ ವರ್ತಿಸಿ ಪುತ್ರ ಸಂತತಿ ಪಡೆಯುವದಕ್ಕಾಗಿ ಆ ಜಗನ್ನಿಯಾಮಕನನ್ನು ಕುರಿತು ಹಲವಾರು ನೋಂಪಿಗಳನ್ನಾಚರಿಸುವದಾಯಿತು.

ಮಾದಲಾಂಬಿಕೆ: ಆದರೂ ನಾಥಾ ಆ ದಯಾಘನನಿಗೆ ನಮ್ಮ ಮೇಲೆ ಕರುಣೆಯು ಸಂಜನಿಸಲಿಲ್ಲವಲ್ಲ ! ಇದಕ್ಕೆ ಕಾರಣವೇನಿರಬಹುದು ? ಹಿಂದಣ ಜನ್ಮದಲ್ಲಿ ನಾವೇನಾದರೂ ಪಾಪ ಕರ್ಮಗಳನ್ನೆಸಗಿರಬಹುದೇ ?

ಮಾದರಸ: ಹಾಗೇಕಿರಬಾರದು ? ಪರೋಪಕಾರ ಭಾವನೆಯಿಂದ ದೀನ ದರಿದ್ರರ ಸೇವೆಯಲ್ಲಿಯೇ ನಮ್ಮ ಗತಾಯುಷ್ಯವನ್ನೆಲ್ಲ ತೇಯ್ದು ನಿರ್ವಂಚನೆಯಿಂದ ಅನ್ಯದೈವದ ಭಜನೆಯಿಲ್ಲದೆ ಅನಿರ್ವಚನೀಯ

ಆ ಪರಮಾತ್ಮನನ್ನೇ ನಂಬಿಕೊಂಡಿದ್ದರೂ ನಮ್ಮ ಬಯಕೆ ಈಡೇರಲಿಲ್ಲವೆಂದರೆ ನೀನೆಂದಂತೆ ಪ್ರಾಚೀನ ಕರ್ಮದ ಅಡೆತಡೆಯಿಂದಾಗಿಯೇ ನಾವು ಪುತ್ರಹೀನರಾದೆವೋಏನೋ ಎಂದು ನನಗಾದರೂ ಅನಿಸಹತ್ತಿದೆ.

ಆಕಾಶವಾಣಿ: ಆಹೋ ಮಾದಿರಾಜ ಮಾದಲಾಂಬಿಕೆಯರೇ, ಪುತ್ರ ಸಂತತಿಗಾಗಿ ಕಾತರಗೊಂಡ ನಿಮ್ಮ ಉದಯ ಕಾಲವು ಸಮೀಪಿಸಿರುವದು ನಿಮ್ಮ ಕಾಮ್ಯಾರ್ಥ ಸಿದ್ಧಿಗಾಗಿ ಫಲವಂದದಿಂದಭೀಷ್ಟವನ್ನು ಪೂರ್ತಿ ಮಾಡಬಲ್ಲ ನಂದಿನಾಥನ ವ್ರತವನ್ನು ಭಕ್ತಿಯಿಂದ ಆಚರಿಸಿ. ಅಂದರೆ ನಿಜವಾಗಿಯೂ ನಿಮ್ಮ ಇಷ್ಟಾರ್ಥವು ಸಿದ್ಧಿಯಾಗುವದು.

ಮಾದರಸ: ಏನಿದಚ್ಚರಿ ಪ್ರಿಯೇ ? ಮೃತಪಾಯವಾಗಿ ಬಿದ್ದ ಘನರೋಗಿಗೆ ಮರುಜೀವಣಿಯು ದೊರೆತಂತೆ. ನಮ್ಮ ದುಃಖವಿಮೋಚನೆಗಾಗಿ ಅಶರೀರವಾಣಿಯು ಉಪಾಯವಂ ಕಲ್ಪಿಸಿ ಈತೆರ ಸೂಚಿಸಲ್ಪಟ್ಟಿತಲ್ಲ ಇದರಿಂದ ನಮ್ಮ ಕನಸು ನನಸಾಗುವಂತೆ ತೋರುವದಿಲ್ಲವೆ ?

ಮಾದಲಾಂಬಿಕೆ : ಅಹುದು ನಾಥಾ ದಯಾದ್ರ ಹೃದಯಿಯಾದ ನಮ್ಮ ಮೊರೆಯನ್ನು ಕೇಳಿದನೋ ಏನೋ, ಲೀಲಾಜಾಲನಾದ ಆತನ ಮಾಯದಾಟದ ನೆಲೆಯನ್ನು ಅರಿತವರಾರು ? ಆತನ ಪ್ರೇರಣೆಯಿಂದಲೇ ಈ ತೆರ ಅಶರೀರ ವಾಣಿಯ ಸೂಚನೆ ನಮಗಾಯಿತು.

ಮಾದರಸ : ಸರಿ ಆ ಪರಮಾತ್ಮನ ಕೃಪಾದೃಷ್ಟಿಯು ನಮ್ಮ ಮೇಲೆ ಬಿದ್ದಿರುವದೇ ನಿಶ್ಚಯ ಇರಲಿ. ಆ ಅಶರೀರ ವಾಣಿಯ ಸೂಚನೆಯಂತೆ ನಾವೀಗ ತಳುವದೆ ವ್ರತಾಚರಣೆಗಾಗಿ ನಂದಿನಾಥನ ದರ್ಶನ ತಕ್ಕೊಳ್ಳಲು ಆತನ ದೇವಾಲಯವನ್ನು ಕುರಿತು ತೆರಳೋಣ.

(ರಸ್ತೆ ತೆರೆಯು ಬೀಳುವದು)

===**===**===

(ಪ್ರವೇಶ ೪)

ಸ್ಥಳ: ಬೀದಿ. ಆಕಾಶದಿಂದವತರಿಸಿದ ವೃಷಭೋತ್ತಮನು ಪರಮಾತ್ಮನ ಆಜ್ಞೆಯನ್ನು ನೆರವೇರಿಸುವ ಕುರಿತು, ತನ್ನೊಳಗೆ ಆಲೋಚಿಸುತ್ತಾನೆ.

ವೃಷಭ: ತಿಮಿ ತಿಮಿಂಗಿಲಾದಿ ಮುಖ್ಯ ಜಲಚರ ಪ್ರಖರದಿಂ ಭರಿತವಾದ ದಧಿಕ್ಷೀರಾಬ್ಧಿ ಸಪ್ತಾಬ್ಧಿಗಳಿಂ ವೇಷ್ಠಿತವಾಗಿರುವ, ಈ ಭೂಲೋಕವು ಎಷ್ಟು ರಮಣೀಯವಾಗಿದೆ! ಇದರಲ್ಲಿ ಲವಣದಿಂ ಸುತ್ತುಗಟ್ಟಲ್ಪಟ್ಟ ಜಂಬುದ್ವೀಪವು ಕಾಶಿ, ಕೇದಾರ, ಗಯಾ, ಶ್ರೀಶೈಲ, ಗೋಕರ್ಣ, ಪಂಪಾ ಮೊದಲಾದ ಸುಕ್ಷೇತ್ರಗಳಿಂದ ಪಡೆದವೆಂದು, ಸ್ವರ್ಗೀಯ ಸೌಂದರ್ಯವನ್ನು ಪರಡಿಸುವಂತಿದೆಯಲ್ಲವೆ. ಅದರಲ್ಲಿಯೂ ಈ ಕನ್ನಾಡೊಳಗಿನ ಇಂಗಳೇಶ್ವರ ಬಾಗೇವಾಡಿಯು ಒಂದು ವಿಶಿಷ್ಟವಾದ ಶೋಭೆಯಿಂದ ಶೋಭಿಸುತ್ತಲಿದೆ. ಅದರ ಉಜ್ವಲ ಭವಿಷ್ಯವು ಕಾಯ್ದು ನಿಂತಿರುವದರಿಂದಲೇ ಅದಕ್ಕಿಷ್ಟೊಂದು ಶೋಭೆ ಬಂದಂತಿದೆ. ಅಲ್ಲಿರುವ ಪಿರಿದೆನಿಪ ಶಿವಭಕ್ತಿ ಬೀಜಕ್ಕಿರವೆನಿಸಿದ ಪಾದ ಭೀರುಗಳೂ ಸತ್ಯವಿನೀತರೂ ಸತ್ಕುಲಜಾತರೂ ಪುಣ್ಯಸಮೇತರೂ ಆಗಿರುವ ಮಾದರಸ ಮಾದಲಾಂಬಿಕೆಯರು ತಾವು ಪುತ್ರಸಂತತಿ ಪಡೆಯುವ ಮೂಲಕ ನಂದಿನಾಥನ ವ್ರತಾಚರಣೆ ಕೈಗೊಂಡಿದ್ದು ಅದಕ್ಕಾಗಿ ಈಗಲೇ ಅವರು ನಂದಿನಾಥನ ದೇವಾಲಯಕ್ಕೆ ಹೋಗಿರುವರು. ಇದೇ ತಕ್ಕ ಸಮಯ. ಆ ಪರಮಾತ್ಮನ ಆಜ್ಞೆಯನ್ನು ನೆರವೇರಿಸಲು ಈ ವೃಷಭೋತ್ತಮನು ಆ ಮಾದಲಾಂಬಿಕೆಯ ಜಠರವನ್ನು ಶೇರಲು ಕ್ಷಿಪ್ರದಲ್ಲಿಯೇ ಹೋಗುತ್ತಾನೆ.

===***===***===

(ಪ್ರವೇಶ ೫)

(ಸ್ಥಳ: ನಂದಿಕೇಶ್ವರ ದೇವಾಲಯ ಮಾದರಸ ಮಾದಲಾಂಬಿಕೆಯರು ಆತನ ಅರ್ಚನೆಗೈಯಲು ಬರುತ್ತಾರೆ)

ಮಾದರಸ : **ಪದ : ರಾಗ – ಭಾಗೇಶ್ರೀ, ತ್ರಿತಾಳ**

ಮಾದಲಾಂಬಿಕೆ: ಗೋಕುಲರಮಣಾ । ವಿಕಸಿತವದನಾ ।
ಭಕುತಿ ಭಾವದಿ ಗೈಯ್ವೆವು ಸ್ಮರಣಾ ॥ ॥ ಪಲ್ಲ ॥
ನಂದಿನಾಥಾ । ವಂದಿಪೆತಾತಾ ।
ಕಂದನ ಕರುಣಿಸು ಭೋದಯವಂತಾ ॥ ೧ ॥

ಮಾನನಿಧೆ ಸದ್ಗುಣ ಮಣಿಯುತನಾ ।
ಅನುನಯದೋಳಾಂ ।ಮಣಿದರ್ಥಿಸುವೆ ॥ ೨ ॥

ಮಾದರಸ : ಪ್ರಿಯೆ ನಮ್ಮ ವ್ರತಾಚರಣೆಯು ಪ್ರಾರಂಭವಾಗಿ ಸೋಮವಾರದಾದಿಯಿಂದ ಇಂದಿಗೆ ಒಂಭತ್ತು ದಿವಸಗಳು ಉರುಳಿ ಹೋದವು. ವಲ್ಲಭೆ ಎಂದಿನಂತಲ್ಲದೆ ಇಂದು ನನ್ನ ಮನವು ಒಂದು ಬಗೆಯ ಉತ್ಸುಕ ಭಕ್ತಿಯಿಂದ ಆನಂದ ರಸದೋಳ್ ಲೋಲಾಡುತ್ತಿದೆ.

ಮಾದಲಾಂಬಿಕೆ : ಅಹುದು ಹೃದಯೇಶ್ವರಾ ಅಂತೆಯೇ ನನ್ನ ಮನವಾದರೂ ಇಂದು ನಲವಾಂತು ನಲಿಯುತ್ತಿದೆ. ಇದು ನಮ್ಮ ಉಜ್ವಲ ಭವಿಷ್ಯ ಸೂಚಕ ಚಿಹ್ನವೆಂದೇ ತೋರುವದಲ್ಲವೆ ?

ಮಾದರಸ: ಇರಲಿ ಈತನ ಅನುಗ್ರಹದಂತಾಗಲಿ. ಇಷ್ಟಾರ್ಥವನ್ನು ನೆನೆದು ಅರ್ಚಿಸೋಣ

(ಮಾದರಸ ಮಾದಲಾಂಬಿಕೆಯರು ಅರ್ಚಿಸಿ ಸ್ತೋತ್ರಿಸುವದು)

ಪದ : ರಾಗ : ಭಾಗೇಶ್ರೀ ತಾಳ – ತ್ರಿತಾಳ

ಪರಾವತಾರಕನ್ಯೆ ವೃಷಭಾ ।

ಪರಮಾನಂದದಿ ವರವನು ನೀಡೈ ।
ಹರನರೂಪಿಯೇ ಸ್ಮರಿಸುವೆವಯ್ಯಾ ।
ಚಾರುಚರಿತ ಹರನಿಷ್ಠೆಯಾಲಯಾ ॥ ೧ ॥

ಮಾದಲಾಂಬಿಕೆ : ಬೋ ಅನಾಥ ಬಂಧು ನಂದಿನಾಥಾ ನಿನ್ನಂತೀಶಭಕ್ತಿಯ ಕಂಡನೆನಿಸಿರ್ಪ । ಕಂದನಂ ಎನಗೆ ಕರುಣಿಸಿದೆಯಾದೊಡೆ, ನಾನು ಒಲುಪಿನಿಂದವನಿಗೆ ನಿನ್ನ ಹೆಸರನ್ನೇ ಇಟ್ಟು, ನಲವಾಂತು ನಲಿಯುವೆನು. ದೇವಾ ಮೃಗಜಲದಂತೆ ನಿರಾಶೆಗೊಂಡ ನಮ್ಮ ಕಾಮ್ಯಾರ್ಥಮಂ ಪೂರಿಸಿ, ರಕ್ಷಿಸು ರಕ್ಷಿಸು ದಯಾಳುವೆ (ಎಂದು ನಮಿಸುವದು)

(ಇಲ್ಲಿ ವೃಷಭನ ಮೇಲೆ ಏರಿಸಿದ ಹೂವೊಂದು ಸಿಡಿದು ಬೀಳುವದು)

ಮಾದರಸ : (ಬಿದ್ದ ಹೂವನ್ನು ನೋಡಿ) ಪ್ರಿಯೆ ಧನ್ಯ ಧನ್ಯ. ಇಂದಿಗೆ ನಮ್ಮ ಜನ್ಮ ಸಾಫಲ್ಯವಾದಂತಾಯಿತು. ಅದೋ ತೆಗೆದುಕೋ. ನಂದಿನಾಥನು ಇಂದೆಮ್ಮನ್ನು ಕರುಣಿಸಿದನು.

ಮಾದಲಾಂಬಿಕೆ: (ಹೂವನ್ನು ತೆಗೆದುಕೊಂಡು) ತನ್ನ ಉದರದಲ್ಲಿ ಮತ್ತು ಹಣೆಯಲ್ಲಿ ಸ್ಪರ್ಶಿಸಿಕೊಂಡು ಮಂಡೆಯಲ್ಲಿ ಧರಿಸುತ್ತಾ) ನಾಥಾ ನಿಜವಾಗಿಯೂ ನಾವು ಧನ್ಯರು. ಇಂದಿಗೆ ಪರಮಾತ್ಮನಿಗೆ ಕರುಣೆಯುಂಟಾಗಿ ಈ ನಂದಿನಾಥನು ಇಂದೆಮ್ಮನ್ನು ಕರುಣಿಸುವಂತೆ ಪ್ರೇರೇಪಿಸಿದನು ಇಂದೆಮ್ಮನ್ನು ಕರುಣಿಸಿದ ಈ ನಂದಿನಾಥನನ್ನು ಇನ್ನೊಂದಾವರ್ತಿ ಸ್ತೋತ್ರಗೈಯ್ದು ಮಂದಿರವನ್ನು ಕುರಿತು ತೆರಳೋಣ

(ರಸ್ತಾ ತೆರೆಯು ಬೀಳುವದು)

===***=====***===

(ಪ್ರವೇಶ – ೬)

ಗಂಡು : ಹಾ ಹೀಗೆ ಮಾಡುವದೇ ಉತ್ತಮ. ಆ ಮಾದರಸ ಮಾದಲಾಂಬಿಕೆಯರು ಮಕ್ಕಳಿಲ್ಲೆಂದು ಚಿಂತಿಸುತ್ತಿದ್ದಾರಲ್ಲ ! ಆ ಕಾಲಕ್ಕೆ ಅವರು ನನ್ನಲ್ಲಿ ಬಂದಿದ್ದರೆ, ಅವರಿಂದ ಹಣ ಸುಲಿಯುವ ಯೋಜನೆಯನ್ನು ಹಲವು ಬಗೆಯಿಂದ ಮಾಡಿದ್ದೆ. ಆದರೆ ಅದೆಲ್ಲವೂ ವ್ಯರ್ಥವಾಗಿ ಹೋಯಿತು. ಆ ನನ್ನಲ್ಲಿ ವಿದ್ಯಾ ಇಲ್ಲದ್ದಕ್ಕೆ ವ್ಯರ್ಥವಾಯಿತು ಅಂತ ತಿಳಿದೀರಿ. ಹಾಗಲ್ಲ ಅವರು ನನ್ನ ಕಡೆಗೆ ಬರಲೇ ಇಲ್ಲ. ಬಾರದೇ ಯಾರನ್ನು ಸುಲಿಯುವದು ? ನೋಡುತ್ತಿದ್ದಿರಾ ? ಅವರು ಬಂದಿದ್ದರೆ ಎಷ್ಟು ಚೆನ್ನಾಗಿ ಆಗುತ್ತಿತ್ತು. ಈಗಲಾದರೂ ನಾನೆಲ್ಲಿ ಬಿಡತೇನಿ. ನನ್ನ ಆಶಾಭಂಗ ಮಾಡಿದ ಅವರನ್ನು ಒಂದು ಮಾಟಾ ಮಾಡಿ ನೋಡಿಯೇ ಬಿಡತೇನಿ.

ಹೆಣ್ಣು: ಏನಿದು! ಆ ಬೊಗಳುತ್ತಿರುವದು ? ಈ ಮಾಟ ಮದ್ದು ಯಂತ್ರ ತಂತ್ರಗಳನೆಲ್ಲಾ ಒಕ್ಕೊಟ್ಟು ಹೊಟ್ಟೆಗಾಗಿ ಏನಾದರೊಂದು ಉದ್ಯೋಗ ಮಾಡಿರೆಂದು ನಿಮಗೆ ಹೇಳೀ ಹೇಳಿ ಸಾಕಾಯಿತು. ಆ ಮಾದರಸ ಮಾದಲಾಂಬಿಕೆಯರ ಮೇಲೆ ನಿಮಗೇಕೆ ಇಷ್ಟೊಂದು ಕೋಪ ?

ಗಂಡು: ಅಲ್ಲೇ ಕೋಪಬಾರದೇನು ಮಾಡೀತು ? ಅವರು ನನ್ನಲ್ಲಿ ಪ್ರಶ್ನೆ ಕೇಳಲಿಕ್ಕೆ ಬರುತ್ತೇವೆಂದವರು ಬರಲೇ ಇಲ್ಲ ಇದು ನನಗೆ ಅವ ಮಾನವನಲ್ಲವೆ ?

ಹೆಣ್ಣು : ಅಬ್ಬಾ ಆ ಮಾದರಸ ಮಾದಲಾಂಬಿಕೆಯರು ನಿಮ್ಮಲ್ಲಿ ಪ್ರಶ್ನೆ ಕೇಳಲಿಕ್ಕೆ ಬರಲಿಚ್ಛಿಸಿದ್ದರೇ ?

ಗಂಡು : ಯಾಕೆ? ಅವರೆಂದರೆ ಮುಗಿಲು ಮೇಲಿಂದ ಬಿದ್ದಿರುವರೆ ? ಅವರಪ್ಪ ನಂಥವರು ಬರುತ್ತಾರೆ. ಅವರಪ್ಪನಂಥವರು.

ಹೆಣ್ಣು : ಸರಿ, ಸರಿ. ಬಾರದಿದ್ದಾರೆಯೇ? ನಿಮ್ಮ ಮಂತ್ರಗಳೇನು ಸಣ್ಣವೋ ? ಇರಲಿ. ಅವರು ಬರುವದನ್ನು ನಿಮಗೆ ತಿಳಿಸಿದ್ದರೇನು ?

ಗಂಡು: ಇಲ್ಲ ನನ್ನ ಗೆಳೆಯನೊಬ್ಬ ತಿಳಿಸಿದ್ದ.

ಹೆಣ್ಣು: ಪರವಿಲ್ಲ ಪರವಿಲ್ಲ. ಇದೊಳ್ಳೆ ಲೆಕ್ಕಚಾರ. ಮಜ್ಜಿಗೆ ಒಣಗು ಹಾಕಿ. ಜಗಳ ತೆಗೆದಂತೆ ನಿಮ್ಮದೀ ರೀತಿ. ಅಲ್ಲಾ ನಿಮ್ಮಂಥ ಕಳ್ಳಕಾಕರಬೆನ್ನು ಹತ್ತಲಿಕ್ಕೆ ಅವರೇನು ಹುಚ್ಚರೇ ? ಆನೆ ಹೋಗುತ್ತದೆ ಶ್ವಾ ಬೊಗಳುತ್ತದೆ ಎಂಬ ರೀತಿಯಲ್ಲಿ ನಿಮ್ಮ ನಡತೆ. ಹೂಂ ಅವರನ್ನು ನೋಡಿಯೇ ಬಿಡುತ್ತೇನೆಂದು ಅನ್ನುತ್ತೀರಿ. ಅವರಿಗೆ ನೀವೇನು ಮಾಡತಕ್ಕವರು ?

ಗಂಡು: ಈಗ್ಗೆ ಆ ಮಾದಲಾಂಬಿಕೆಗೊಂದು ಮಾಟಾ ಮಾಡೀನಿ ಅದರಿಂದ ಆವಳೀಗ ಹೊಟ್ಟೆ ಶೂಲೆಯಿಂದ ನರಳುತ್ತಿದ್ದಾಳೆ. ಈಗಂತೂ ಅವರು ನನ್ನಲ್ಲಿ ಬರಲೇಬೇಕೆಂಬುದೇ ನನ್ನ ಸಿದ್ಧಾಂತ.

ಹೆಣ್ಣು: ಅಪ್ಪ ಅಪ್ಪ ಇವರ ಸಿದ್ಧಾಂತ ! ಏನು ಆ ಮಾದಲಾಂಬಿಕೆಯದು ಹೊಟ್ಟೆ ಶೂಲೆಯೇ ?

ಗಂಡು: ಅಹುದು ನಾನು ಇಲ್ಲಿಯೇ ಕೂತು ಒಂದು ಮಾಟಾ ಮಾಡಿ ಅವಳ ಹೆಸರಿನಿಂದ ಮಂತ್ರಿಸಿ ಬಿಟ್ಟಿದ್ದೇನೆ. ಅದರಿಂದಲೇ ಅವಳು ಈಗ ಕಷ್ಟಪಡುತ್ತಿದ್ದಾಳೆ

ಹೆಣ್ಣು : ಭಾಪು ಭಾಪು ನಿಮ್ಮ ಮಂತ್ರ ಪ್ರಭಾವವು ಮಹತ್ವದ್ದು. ಹೀಗಿದ್ದ ಮಾತ್ರದಲ್ಲಿ ನೀವು ದೊಡ್ಡದೊಂದು ಮಾಟಾ ಮಾಡಿ ಮಂತ್ರಿಸಿ ನಿಮ್ಮ ದಾರಿದ್ರ್ಯವನ್ನು ಯಾಕೆ ಕಳೆದುಕೊಳ್ಳಲೊಲ್ಲಿರಿ ? ಆ ಮಾದಲಾಂಬಿಕೆಯದು ಹೊಟ್ಟೆ ಶೂಲೆಯೇ? ನಿಮ್ಮಂಥವರ ಕಪಟ ತಂತ್ರಕ್ಕೆ ಅಜ್ಞ ಜನವು ಮೋಸಹೋಗಿ ಕಷ್ಟಕ್ಕೆ ಗುರಿಯಾಗುತ್ತಾರೆ. ಅಲ್ಲಾ ಆ ಮಾದಲಾಂಬಿಕೆಯು ಗರ್ಭವತಿಯಾಗಿ ಇಂದಿಗೆ ಮೂರು ವರ್ಷಗಳಾಗಿದ್ದು, ಈಗವಳಿಗೆ ಪ್ರಸವ ಕಾಲವು ಬಂದದ್ದರಿಂದ ಆ ಪ್ರಸವ ವೇದನೆಯಿಂದಾಗಿ ಅವಳು ನರಳುತ್ತಿದ್ದುದು ಜಗತ್ತಿಗೆ ಗೊತ್ತಿದೆ. ಹೀಗಿದ್ದು ನೀವು ಅವಳಿಗೆ ಹೊಟ್ಟೆ ಶೂಲೆ ಬರುವಂತೆ ಮಂತ್ರ ಪ್ರಯೋಗ ಮಾಡಿರುವೆನೆಂದು ಹೇಳುವಿರಿ. ಈ ನಿಮ್ಮ ಕುಟಿಲ ತಂತ್ರ ಗೊತ್ತಾದರೆ ಜಗತ್ತು ನಿಮ್ಮನ್ನು ಏನು ಮಾಡೀತು ? ವಿಚಾರ ಮಾಡಿ ನೋಡಿ.

ಗಂಡು: ನನಗೇನು ಮಾಡುವದೇ ಜಗತ್ತು ?

ಹೆಣ್ಣು: ನಿಮಗೇನು ಮಾಡೀತು ಜಗತ್ತು. ಥೂ ಥೂ ಎಂದು ಉಗುಳುವದಿಷ್ಟೇ. ದೇವಾ ಈ ಪಾಪಿಯ ಶರಗಿಗೆ ನನ್ನನ್ನು ಯಾಕೆ ಹಾಕಿದೆ ?

ಗಂಡು: ಹೂಂ .ಯಾಕೆ, ಬಾಯಿ ಬಹಳ ಬಿಡುತ್ತಿರುವೆ ? ನಾನೆಂದರೇನೆಂದು ತಿಳಿದಿರುವೆ ?

ಹೆಣ್ಣು: ನಾನು ತಿಳಿದಿದ್ದೇನೆ. ನೀವೆಂದರೆ ಎರಡು ಕಾಲಿನ ಪಶುವೆಂದು ತಿಳಿದಿದ್ದೇನೆ. ಸಾಕು ಪಾಪಿಯೇ ನಿನ್ನಂಥವನ ಆಶ್ರಯದಲ್ಲಿರುವದಕ್ಕಿಂತಲೂ ಸತ್ತು ಸ್ವರ್ಗ ಸೇರುವದು ಲೇಸು (ಎಂದು ಹೋಗುವಳು).

ಗಂಡು: ಎಲೇ ಸ್ವಲ್ಪು ತಡೆಯೇ, ಒಂದು ಮಾತು ಹೇಳುವೆ. ಎಲೇ ಇವಳು ಹಾಗೇ ಹೋದಳಲ್ಲ! ಹೋಗಲಿ. ಇವಳು ಬಡತನವೆಂದು ನನನ್ನು ಬಹಳ ಹೀಯಾಳಿಸಿ ನುಡಿಯುತ್ತಾಳೇ ನುಡಿಯಲಿ. ಮತ್ತು ನಾನೊಬ್ಬ ಪೆದ್ದನೆಂದೇ ತಿಳಿದಿದ್ದಾಳೆ ತಿಳಿಯಲಿ. ಕಾಯಕವೇ ಕೈಲಾಸ ಅಂತಾ ಹೇಳುವರಲ್ಲಾ ! ಆ ಮಾತಿಗೆ ಹೊಂದಿಕೊಂಡು ಈ ಮಾಟ, ಮದ್ದು, ಮಂತ್ರ ತಂತ್ರ ಮಾಡೋ ಕಾಯಕ ಏನಿದೆ ಅಲ್ಲಾ ? ಇದರಿಂದಲೇ ಅಪಾರವಾದ ದುಡ್ಡು ಗಳಿಸಿ ಇವಳಿಗೆ ನನ್ನ ಕೈ ತೋರಿಸುತ್ತೇನೆ. (ಎಂದು ಹೋಗುವನು).

===***====***===

(ಪ್ರವೇಶ ೭)

ಸ್ಥಳ : ಅಂತಃಪುರ – ಗರ್ಭವತಿಯಾದ ಮಾದಲಾಂಬಿಕೆಯು ಸ್ವಾಸ್ಥ್ಯವಿಲ್ಲದೆ ಉದರವೇದನೆಯಿಂದ ನರಳುತ್ತಾಳೆ.)

ಮಾದಲಾಂಬಿಕೆ : **ಪದ : ರಾಗ : ಭೈರವಿ, ತಾಳ ತ್ರಿತಾಳ**

ಶೈಲಜಾಪತೆ ಕಳೆ ತಾಪ ಭೋ ॥
ನೀಲಕಂದರ ಪರಿತಪಿಸುವೆ ನಾ ಬಲು ।
ದಾರುಣವಾದೀ ಉದರದವ್ಯಾಧೀ ।
ಇರದೆ ಸಹಿಸೆ ನಾ ದೇವಾ ॥ ೧ ॥

ಏನಿದಚ್ಚರಿದೇವಾ ! ಎನ್ನ ಜಠರದುರಿಯನ್ನೆಷ್ಟೆಂದು ಸಹಿಸಲಿ ! ಅಯ್ಯಯ್ಯೊ ಉತ್ತರೋತ್ತರ ಅನುತಾಪವು ಹೆಚ್ಚುತ್ತಲಿದೆ ದೇವಾ. ನಿನ್ನಂ ಮೊರೆಹೊಕ್ಕು ಹಲವು ನೋಂಪಿಗಳನ್ನು ಆಚರಿಸಿದೆನು. ಅದಕ್ಕೆ ದಯಾಳುವಾದ ನೀನು, ನಂದಿನಾಥನಿಂ ಪ್ರಸಾದವಂ ಕರುಣಿಸಿದೆ. ಆ ವರಪ್ರಸಾದದಿಂದೆ ನಾನು ಗರ್ಭವತಿಯೂ ಆದೆ. ಆದರೇನು ದೇವಾ ? ನಿನ್ನ ವರಪ್ರಸಾದದಿಂದ ಧರಿಸಿದ ಗರ್ಭವು ಮುದ ಕರ್ಕಟ ಗರ್ಭವಾಯಿತಲ್ಲ ! ತಂದೇ ಈ ವೇದನೆಯನ್ನೆಂತು ಸಹಿಸಲಿ ! ಪರಮಾತ್ಮಾ ? ನಿನ್ನ ಕೃಪಾಂಬು ಪೂರದಿ, ಈ ನನ್ನ ಒಡಲದುರಿಯನ್ನು ನಂದಿಸಬಾರದೆ ? ಲೋಕದೋಳ್ ಪುಣ್ಯಾಂಗ್ನೆದ ಸತಿಯರು ನವಮಾಸಂಗಳಂ ಪೊತ್ತು ಹಡೆಯುವದನ್ನು ನಾನು ಕೇಳಿಬಲ್ಲೆ. ಅಯ್ಯಯ್ಯೋ ನನ್ನ ಗರ್ಭಕ್ಕಾದರೋ ನಿರುತಂ ಇಂದಿಗೆ, ಮೂರು ವರ್ಷಗಳು ಕಳೆದು ಹೋದವು. ಆದರೂ ನನಗೆ ಇದುವರೆಗೆ ಪ್ರಸವ ಕಾಲವಿಲ್ಲ ದೇವಾ ? ಅಂದರೆ ನನ್ನದಿದು ಗರ್ಭಧಾರಣೆಯೋ ಅಥವಾ ಯಾವುದಾದರೊಂದು ಬಗೆಯ ಉದರರೋಗವೋ ? ಎಂಬುದಿದಾವದೊಂದನ್ನು ನಾನರಿಯೆ ಪರಮಾತ್ಮ ? ಅಯ್ಯೋ ದೇವಾ ಮೂರ್ಛೆ ಮೂರ್ಛೆ (ಎಂದು ಪ್ರಜ್ಞೆ ತಪ್ಪಿ ಬೀಳುವಳು).

(ಇಲ್ಲಿ ಪರಮೇಶ್ವರನು ಪಾರ್ವತಿ ಸಮೇತನಾಗಿ ಬಂದು, ಮಾದಲಾಂಬಿಕೆಯ ಮಗುವಿಗೆ ಲಿಂಗಧಾರಣ ಮಾಡುವದು.)

ಪರಮೇಶ್ವರ: ನೋಡು ಪಾರ್ವತಿ, ಚಿಪ್ಪಿನೊಳು ಮುತ್ತು ಕಾಸಾರದೊಳ್ ಪಂಕಜವು ಜನಿಸುವಂತೆ, ಈ ಮಾದಲಾಂಬಿಕೆಯ ಗರ್ಭದಿಂದ ಅಜ್ಞಾನ ತಿಮಿರ ಚ್ಛೇದಕನಾದ ಅರ್ಭಕನು ಜನಿಸಿದನು !

ಪಾರ್ವತಿ : ಧನ್ಯ ಧನ್ಯ ಮಾದಲಾಂಬಿಕೆ ! ಪುಣ್ಯಾತ್ಮಳೆ ! ತನ್ನ ಜ್ಞಾನ ಜ್ಯೋತಿಯಿಂದ ಲೋಕವನ್ನೇ ಬೆಳಗಬಲ್ಲ ಮಗುವನ್ನು ಹೊತ್ತ ನೀನು, ಎಂಥ ಭಾಗ್ಯಶಾಲಿನಿ ! ದೇವಾ ? ಈಗಲೇ ಕೂಸಿಗೆ ಲಿಂಗ ಸಂಸ್ಕಾರ ಮಾಡಬೇಕಲ್ಲವೆ?

ಪರಮೇಶ : ಅಹುದು ದೇವಿ, ನಾವು ಬಂದ ಉದ್ದುಗವೇ ಅದಾಗಿದೆ. ನಡೆ ಆ ತರುಳನನ್ನು ತೆಗೆದುಕೋ (ಇಲ್ಲಿ ಪಾರ್ವತಿಯು ಮಾದಲಾಂಬಿಕೆಯ ಮಗ್ಗುಲಲ್ಲಿರುವ ಕೂಸನ್ನು ಎತ್ತಿ ಮುದ್ದಾಡುವದು ಮತ್ತು ಪರಮೇಶ್ವರನು ಆ ಕೂಸಿಗೆ ಲಿಂಗಧಾರಣ ಮಾಡುವದು).

ಪರಮೇಶ : ಮಗಳೇ ನಿನ್ನುದರದುಪತಾಪದುರಿಯಂ ಮತ್ತು ನಿನ್ನ ಚಿಂತಾಕ್ರಾಂತ ಮೆಲ್ಲಮಂ ಪರಿಹರಿಸಲ್ಕಾಗಿಯೆ ಆದಿಗಾದಿ ಅನಾದಿ ನಂದಿ ಶಿಲಾದನಣುಗಂ, ಶಿವನ ಬೆಸವನಾಂತು ಭಕ್ತಿ ವರ್ಧನ ಕಾರಣದಿಂದಂ ನಿನ್ನ ಬಸುರಿಂ ಪುಟ್ಟಿದಪಂ ಪುಟ್ಟಿದಾಗಳವನಿಗೆ ಬಸವನೆಂಬ ಭಿದಾನವಿಟ್ಟು ಕರೆ. ಈ ನಮ್ಮ ಸುನೃತ ನುಡಿಗಳಂ ನಂಬಿ ಚಿಂತಿಸದೆ ಪಮುಳದಿಂದಿರು (ಎಂದು ಪಾರ್ವತಿ ಪರಮೇಶ್ವರರಿಬ್ಬರೂ ಮೈಗೆರೆಯುವದು).

ಮಾದಲಾಂಬಿಕೆ: (ಮೂರ್ಛೆ ತಿಳಿದೆದ್ದು) ಏನು ವೈಚಿತ್ರ್ಯವಿದು ! ನಾನು ಕಂಡ ಕನಸು ಎಂಥ ದಿವ್ಯವಾದ ಕನಸು ! ದೇವಾ ನಿನ್ನ ಮಾಯದಾಟದ ನಿಲವನ್ನರಿತವರಾರು? ಕನಸಿನಲ್ಲಿ ನಿನ್ನಂ ಕಂಡಾಗಿನಿಂದ, ನನ್ನೊಡಲದುರಿಯೆಲ್ಲವೂ ನಶಿಸಿ ನನಗೆಷ್ಟು ಶಾಂತಿಯಾಗಿದೆ ! ಕನಸಿನಲ್ಲಿ ಕಂಡ ಆ ದಿವ್ಯ ಮೂರ್ತಿಯನ್ನು ಬಣ್ಣಿಸಲು ನನಗೆ ಸಾಧ್ಯಮುಂಟೆ ? ಬೆಳೆದು ಕವಲಿರಿದು ನೀಳ್ದ ಪ್ರವಾಳ ಜಾಲದಂತೆ ಬೆಂಬಳಿಪಿಳಿದಿಡಿದ, ಕೆಂಜೆಡೆಗಳ ಶೋಭೆಯದೆಷ್ಟು ! ಶಾರದಾಭ್ರ ವಿಭ್ರಮದಂತೆ, ಬಿಸಿತಂ ಮುಸುಂಕಿದ ಬಿಸುಗಣ್ಣಿಂ ಮೆರೆವ ಲಲಾಟಪಟ್ಟದಿಂ ಶೃಂಗಾರದ ತವರ್ಮನೆಯಂತಿರ್ದ, ಭಕ್ತರ ಮನವಂ ಸೂರೆಗೊಳ್ಳುವ ಆತನ ತೇಜಸ್ವಿಯಾದ ಮುಖಮಂಡಲ ! ಸುಲಿಪಲ್ಲುಗುಳ್ನೆಗೆಯಿಂ ಮೇಳೈಸುವ ಮುಖಪ್ರಸನ್ನತೆ ! ವೇದಂಗಳ್

ತನ್ನ ಕಾಣದಂತೆ ಮುಸುಕಿದ ಮಾಯಾ ಪಟಲವೆನಿಪ ಗಜಚರ್ಮ! ಎಳೆವಿಸಲಬೆಳಗಂ. ತರುಣ ತರುಣೆಗೆ ಕಡಂಗೊಡುವ ಪ್ರಭಾ ದುಕೂಲದಂತಿರ್ದ ಸುತ್ತಿರ್ದ ಪುಲಿದೊಗಲಿಂದೊಪ್ಪುತ್ತಿರ್ದ, ಆ ದಿವ್ಯ ಮೂರ್ತಿಯನ್ನು ಎಷ್ಟು ಬಗೆಯಾಗಿ ನೋಡಿದರೂ ಮನ ತಣಿಯಲಿಲ್ಲ. ದಯಾಳುವೇ ಮತ್ತೊಂದಾವರ್ತಿ ಎನಗೆ ಆ ನಿನ್ನ ದಿವ್ಯ ರೂಪವನ್ನು ದರ್ಶಿಸಲಾರೆಯಾ ? (ಪಕ್ಕದಲ್ಲಿ ಜಂಗಮ ಮೂರ್ತಿ ಬರುತ್ತಿರುವದಂ ಕಂಡು,) ಏನಿದು ! ಅನಿರೀಕ್ಷಿತವಾಗಿ ಜಂಗಮ ಮೂರ್ತಿಯ ದರ್ಶನ ! (ಜಂಗಮ ಮೂರ್ತಿಯು ಬಂದ ನಂತರ ಆತನಿಗೆ ವಂದಿಸಿ) ಗುರುದೇವಾ ? ನಿಮ್ಮ ಕಂಡ ನನಗೆ, ಹಸಿದ ಹಂಸೆಗೆಹಾಲ್ಗಡಲು ದೊರೆತಷ್ಟು ಸಂತಸವಾಯಿತು. ದಯಾಳುವೇ ತಮ್ಮ ಪರಿಚಯ ಮಾಡಿಕೊಳ್ಳಬೇಕೆಂಬ.......

ಜಂಗಮ : ಕುತೂಹಲವುಂಟೆ ನಿನಗೆ ?

ಮಾದಲಾಂಬಿಕೆ : ಅಹುದು ಸ್ವಾಮಿ,

ಜಂಗಮ : ತಂಗಿ ಕೇಳು. ನಾವು ಅನುದಿನ ಕಪ್ಪಡಿ ಸಂಗಮೇಶ್ವರನಲ್ಲಿ ಇರುತ್ತಿರುವೆವು. ಅಮ್ಮ ನೋಡು (ಆಕೆಯ ಮಗ್ಗಲಲ್ಲಿರುವ ಕೂಸನ್ನು ಎತ್ತಿಕೊಂಡು) ಈತನು ನನ್ನ ಮಗನು. ಒಂದಂಗದಿಂ ಮನುಷ್ಯ ಭವನೀತಂಗೆ, ಜಗದ್ಹಿತಾರ್ಥವಾಗಿ ನಿನ್ನ ಬಸರೋಳ್ ಜನಿಸಲಾಯಿತು. ಇದು ನಿಮಿತ್ತ ನಾವು ನೋಡಬಂದೆವು. ಈ ವಿಧಿತ ಜನ್ಮದೋಳ್ ಉತ್ತಮೋತ್ತಮನಾದ ಈ ನಂದನಂಗೆ ನಾನು ಉಪದೇಶ ಗುರುವು. ಇನ್ನು ನೀನು ಇವನಿಗೆ ಶಿವಾರ್ಪಿತವಲ್ಲದೆ ಅರ್ಪಿತ ಮಾಡದಿರು. ಇದೋ ತೆಗೆದುಕೋ ಮಗುವನ್ನು ! (ಎಂದು ಮಗುವನ್ನು ಕೊಟ್ಟು ಮೈಗರೆಯುವದು).

ಮಾದಲಾಂಬಿಕೆ : ಬಾ ನನ್ನ ಭಾಗ್ಯರವಿಯೇ (ಎಂದು ಮುದ್ದಾಡುಷ್ಟರಲ್ಲಿ ಜಂಗಮ ಮೂರ್ತಿಯು ಮೈಗರೆದದ್ದು ನೋಡಿ) ಎಲ್ಲ ಆ ಜಂಗಮ ಮೂರ್ತಿ! ಅದೃಶ್ಯವಾಯಿತೆ !! ದೇವಾ ಲೀಲಾ ಮಯಿಯಾದ ನಿನ್ನ ಮಾಯದಾಟದ ಇರವನ್ನು ವರ್ಣಿಸಲು ನಾನೆಷ್ಟರವಳು ? ಧನ್ಯ ಧನ್ಯ ಮಗು ಅಳುವೆಯಾ ? ಸುಮ್ಮನಿರು. ಪರಿಚಾರಕಿ ?

ಪರಿಚಾರಕಿ : ಏನಪ್ಪಣೆ ತಾಯಿಯವರೆ ?

ಮಾದಲಾಂಬಿಕೆ : ನೀನು ತಳುವದೆ ಅವರ ಸನ್ನಿಧಿಯಂ ಕಂಡುಕೋ. ವಂಶೋದ್ಧಾರಕ ಕುವರನು ಜನಿಸಿದನೆಂಬ ಶುಭ ಸಂದೇಶವನ್ನ ವರಿಗರುಹು.

ಪರಿಚಾರಕೆ : ಆಗಲಿ ತಾಯಿ.

ಮಾದಲಾಂಬಿಕೆ : ಧನ್ಯ ಧನ್ಯ ಮಗೂ, ನೀನೆಂದರೆ ಪುಣ್ಯದ ಪುಂಜ. ಎತ್ತಿದ ಮೈಪುಳಕ ಅಲ್ಲವೆ ನನ್ನಪ್ಪಾ (ಎಂದು ಮುದ್ದಾಡುವದು ಇಷ್ಟರಲ್ಲಿ ಜನನ ವಾರ್ತೆ ಕೇಳಿದ ಮಾದರಸನು ಆನಂದಭರಿತನಾಗಿ ಗೀತೆಯನ್ನು ಹಾಡುತ್ತ ಬರುವದು).

ರಾಗ : ತಿಲಿಂಗ : ತಾಳ: ದಾದರಾ

(ತೆರೆಯ ಮುಂದೆ)

ಚದುರ ಮೋಹಕ ಮುದ್ದು ಮುಖವ ।
ಮುದದಿ ಕಂದ ತೋರೊ ತೋರೊ ।
ಅಧರಾಮೃತನೀಂಟುತ ನಾಂ ತಣಿವೆ ನೋಡೋ ॥
ಬಾಲಲೀಲೆ ಕಂಡು ನಿನ್ನ ನಲವಾಂತು ನೃತ್ಯಗೈಯ್ವೆ ।
ಬಾಲ ನಿನ್ನ ಹಾಡಿ ಪಾಡಿ ಕುಲದ ಭಾಗ್ಯ ಸುಂದನಾಂ ರಮಿಪೆ ಕೇಳೋ॥

ಪ್ರಿಯೆ ಸುರ ಕುಜದಂಕುರದಂತೆ, ಮತ್ತು ತರುಣಾರ್ಕ ಮಂಡಲದಂತೆ ಇರುವ ಈ ಸುಕುಮಾರನನ್ನು ಎಷ್ಟು ಬಗೆಯಿಂದ ನೋಡಿದರೂ ಮನಸ್ಸಿಗೆ ತೃಪ್ತಿಯಿಲ್ಲವಲ್ಲಾ ! ಈ ಚಲುವಿನಂಕುರದಲ್ಲಿ ಎಷ್ಟು ಮನೋಹರತೆಯುಂಟು ನೋಡು.

ಮಾದಲಾಂಬಿಕೆ : ಅಹುದು ನಾಥಾ ಉರುತರ ತೇಜದಿಂ ಮೆರೆವ ಈ ಸುಕೃತ ಮೂರ್ತಿಯಂ ಹೆತ್ತ ನಾವು ಧನ್ಯರಲ್ಲವೆ ?

ಮಾದರಸ: ಇರಲಿ ಪ್ರಿಯೆ ಪುಣ್ಯದ ಪುಂಜನಾದ ಈ ನನ್ನ ಮಗುವಿಗೆ, ವಿಜೃಂಭಣೆಯಿಂದ ಜಾತಕರ್ಮ ಸಂಸ್ಕಾರವಂ ಏರ್ಪಡಿಸೋಣ ನಡೆ (ಎಂದು ಹೋಗುವರು).

ಮಾದಲಾಂಬಿಕೆ : ಸಖಿಯರೇ ಬನ್ನಿ. ಜೋಂಪಿನಿಂದ ಜೋಗುಳ ಹಾಡಿ ಎನ್ನ ಮಗುವಿಗೆ ಮುದ್ದಾದ ಹೆಸರಿಡಬೇಕು ಕಾಣಿರೆ ?

ಸಖಿಯರು : ಅಹುದಮ್ಮಾ ನಿನ್ನಿಚ್ಛೆಯಂತೆ ಜೋಗುಳ ಹಾಡುತೇವಿ. ಆದರೆ ಮುದ್ದಾದ ಹೆಸರಿಡಬೇಕೆಂದು ಹೇಳಿದೆಯಲ್ಲ ! ಆ ಮುದ್ದಾದ ಹೆಸರಾವುದೆಂಬುದನ್ನು ಹೇಳಬಾರದೇನಮ್ಮ ?

ಮಾದಲಾಂಬಿಕೆ : ಸಖಿಯರೇ ಆನಂದ ರಸದೋಳ್ ಮುಳುಗಿ ಮೈಮರೆತಿದ್ದೆ.
ಈ ನನ್ನ ಭಾಗ್ಯರವಿಗೆ ಬಸವನೆಂಬ ನಾಮಕರಣ ಮಾಡಿರಿ ತಿಳಿಯಿತೇ ?

ಸಖಿಯರು : ಆಗಲೆಮ್ಮಾ ಹೂಂ ಬನ್ನಿರೇ ಜೋಗುಳ ಹಾಡಿ ಹೆಸರಿಡೋಣ.

(ಜೋಗುಳ ಪದವು)

ಜೋ ಜೋ ಜೋ ಜೋ ॥ ಪ ॥
ಸುಖದ ಸಾಗರ ಮಗುವೆ ಜೋ ।
ಮುಖದಿ ಚಲುವ ಚೆನ್ನಿಗ । ಭಕುತಿ ಮಾರ್ಗತೋರಬಂದ ।
ಬಸವ ಜೋ ಜಸವ ಜೋ ॥ ೧ ॥

ಪತಿತ ಪಾವನ ಮಹಿಮ ಜೋ ।
ಗತಿ ಪ್ರದಾತನ ವಾಹನ ಜೋ।
ಕ್ಷಿತಿಯ ಭಕ್ತಾವ್ರತ ವಂದ್ಯ ।
ಮತಿಯೆ ಜೋ ಗತಿಯೆ ಜೋ ॥ ೨ ॥

ಭಜಿಪ ಜನರ ಭಾಗ್ಯ ಜೋ ।
ಸುಜನ ಸೌಖ್ಯ ನಿಧಿಯೇ ಜೋ ।
ಭುಜಗ ಭೂಷಣ ಭಕ್ತಿವಂತ ।
ಸುಭಗ ಜೋ ವಿಭವ ಜೋ ॥ ೩ ॥

ಬಾಲಲೀಲೆ ಹರುಷ ಜೋ ।
ಲೋಲದಿಂದ ನೀಡು ಜೋ ।
ಕಾಲಕಾಲಕೆ ಸುಖದ ಮುದ್ದು ।
ಸಲಿಲ ಜೋ ನಲಿವೆ ಜೋ ॥ ೪ ॥

ಬಾಗೇವಾಡಿ ಪುಣ್ಯ ಜೋ ।
ಯೋಗಿ ಜನರ ಗಣ್ಯ ಜೋ ।
ರಾಗದಿಂದ ಹಾಡಿ ತೊಟ್ಟಿಲ ।
ತೂಗ್ವೆ ಜೋ ತ್ಯಾಗಿ ಜೋ ॥ ೫ ॥

(ರಸ್ತಾ ತೆರೆಯು ಬೀಳುವದು).

===***=====***===

(ಪ್ರವೇಶ – ೮)

ಸ್ಥಳ : ಬೀದಿ. ಇಬ್ಬರು ಬಾಲಕರು ಬಸವೇಶ್ವರನ ಗುಣಾನುವಾದ ಮಾಡುವದು).

೧ನೇಯವ : ಏನಯ್ಯ ಆ ಬಸವೇಶ್ವರ ಎಂಥ ಜಾಣ ! ಗುರುಗಳು ಒಮ್ಮೆ ಪಾಠ ಹೇಳಿದರಾಯಿತು. ತತ್‌ಕ್ಷಣದಲ್ಲಿಯೇ ಅವನಿಗೆ ಆ ವಿಷಯ ಮುಖೋದ್ಗತ.

೨ನೇಯವ : ಅಹುದು ಗೆಳೆಯಾ ಆ ಬಸವನಿಗೆ ಶಿವಾಗಮ ಮೊದಲಾದ ವೇದಕಲೆಗಳು ಕೂಡ ಅವನಿಗೆ ಸ್ಮರಿಸಲೊಡನೆ ಮುಖೋದ್ಗತವಾಗಿವೆಯಂತೆ.

೧ನೇಯವ : ಅಲ್ಲದೆ ಅವನಿಗೆ ಸಂಗೀತ ಸಾಹಿತ್ಯ ಕಲೆಯೂ ಕೂಡ ಬರುತ್ತದೆ.

೨ನೇಯವ : ಅಹುದಯ್ಯಾ ಈಗಾಗಲೇ ಅವನದಿಷ್ಟು ಖ್ಯಾತಿ. ಆಡು ಮುಟ್ಟದ ಗಿಡವಿಲ್ಲ. ಆ ಬಸವಗೆ ಬಾರದ ವಿದ್ಯೆಯಿಲ್ಲ.

೧ನೇಯವ : ಅಂತೆಯೇ ಅವನ ಮುಖಮಂಡಲದ ಮೇಲೆ ಅಂತಹ ತೇಜಸ್ಸಿದೆ ಕಾಣಯ್ಯ.

೨ನೇಯವ : ಅದೆಲ್ಲವೂ ನಿಜ. ಈಗ್ಗೆ ಮತ್ತೊಂದು ವಾರ್ತೆ ಹಬ್ಬಿದೆ.

೧ನೇಯವ : ಅದೇನು ?

೨ನೇಯವ : ಅಂದರೆ ಆತನ ತಂದೆಯಾದ ಮಾದರಸನು, ಅವನಿಗೆ ಉಪನಯನ ಸಂಸ್ಕಾರವನ್ನು ಮಾಡುತ್ತಾನಂತೆ. ಗೆಳೆಯಾ. ಉಪನಯನವೆಂದರೇನು ?

೧ನೇಯವ : ಉಪನಯನ ಅಂದರೆ ಮುಂಜಿ. ಆ ಬಸವನ ತಂದೆಯು ಮುಂಜಿ ಮಾಡುವ ಸಮಾರಂಭವನ್ನು ಏರ್ಪಡಿಸಿದ್ದಾನೆ. ಅದಕ್ಕಾಗಿ ಆಪ್ತೇಷ್ಟರು ಬರುತ್ತಿದ್ದಾರೆ. ಈ ಮಾತು ನಿಜ. ಆದರೆ ?

೨ನೇಯವ : ಆದರೇನು ಮತ್ತೆ ?

೧ನೇಯವ : ಅಂದರೆ ಆ ಬಸವನು ಮುಂಜಿಕಾರ್ಯಕ್ಕೆ ಒಪ್ಪಲೊಲ್ಲನಂತೆ. ಮತ್ತು ಬ್ರಾಹ್ಮಣ್ಯವನ್ನೂ ನಿರಾಕರಿಸಿ ವೀರಶೈವ ಧರ್ಮದ ವರ್ಣನೆ ಮಾಡುತ್ತಿದ್ದಾನಂತೆ.

೨ನೇಯವ : ಹಾಗಾದರೆ ಆ ಬಸವನ ತಂದೆಗೆ ವಿವಂಚನೆಯಾಗಿರಬಹುದಲ್ಲವೆ ?

೧ನೇಯವ : ಅಹುದು ಗೆಳೆಯಾ ಅದರಿಂದಾಗಿ ಮಾದರಸನಿಗೆ ಅಪಾರವಾದ ಚಿಂತೆಯಾಗಿದೆಯಂತೆ ಮತ್ತು ಆ ಉಪನಯನ ಸಂಸ್ಕಾರ ಹೊಂದುವ ಹಾಗೇ ಬಸವನಿಗೆ ಬುದ್ಧಿವಾದ ಮಾಡಿ ಒಡಂಬಡಿಸಲು ಪ್ರಯತ್ನಿಸುತ್ತಿದ್ದಾನಂತೆ.

೨ನೇಯುವ :– ಓಗೋ ? ಹಾಗಾದರೆ ಅಲ್ಲಿ ಏನೇನು ನಡೆಯುವದೋ ಅದನ್ನು ನೋಡಲು ನಾವು ಹೋಗೋಣ ನಡೆ.

೧ನೇಯುವ :– ನಡೆ ಗೆಳೆಯಾ, ಆ ಬಸವನದು ತಂದೆಯಗೂಡ ಏನೇನು ವಾದ ನಡೆಯುವದೋ ನೋಡೋಣ ನಡೆ (ಎಂದು ಇಬ್ಬರೂ ಹೋಗುವರು).

===***====***===

(ಪ್ರವೇಶ – ೯)

ಸ್ಥಳ : ಅಂತಃಪುರ. ಮಾದರಸನು ಮುಂಜಿ ಸಂಸ್ಕಾರ ಹೊಂದುವ ಹಾಗೇ ಉಪದೇಶಿಸುವದು).

ಮಾದರಸ: ಮಗು ಬಸವೇಶಾ ತಾಯ್ತಂದೆಗಳು ಹೇಳಿದ ಮಾತನಾಲಿಸಿ ಮಾಡಬೇಕಾದುದು, ಮಕ್ಕಳಾದವರ ಕರ್ತವ್ಯ. ನೀನಾದರೊ ನಮ್ಮನ್ನು ಮೀರಿ ನಡೆಯುತ್ತಿರುವೆ.

ಬಸವೇಶ : ತಾತಾ ಮಾತಾಪಿತೃಗಳನ್ನು ದೈವಿ ಸ್ವರೂಪದಲ್ಲಿ ಕಂಡುಕೊಳ್ಳುವ ನಾನು ನಿಮ್ಮನ್ನೆಂದಿಗೂ ಮೀರುವವನಲ್ಲ.

ಮಾದರಸ : ಅಲ್ಲವೆ ? ಹಾಗಾದರೆ ಪ್ರಮೋದ ಚಿತ್ತನಾಗಿ ಈ ಮುಂಜಿ ಸಂಸ್ಕಾರವನ್ನು ಸ್ವೀಕಾರ ಮಾಡು ವಿರೋಧಿಸಬೇಡ.

ಬಸವೇಶ್ವರ : ಊಹುಂ ತಾತಾ ಅದು ಸಾಧ್ಯವಿಲ್ಲ.

ಮಾದರಸ : ಇದೇನಿದು ನಮ್ಮನ್ನೆಂದು ಮೀರುವದಿಲ್ಲೆಂದು ಹೇಳುವವರ ಅರ್ಥವೇನು ಇದು ನಮ್ಮನ್ನು ಮೀರಿದಂತಾಗುವದಿಲ್ಲವೆ ?

ಬಸವೇಶ್ವರ : ತಾತಾ ನಿಮ್ಮನ್ನು ಮಾತ್ರ ಮೀರಲೇ ಇಲ್ಲ.

ಮಾದರಸ : ಹಾಗಾದರೆ ಮತ್ತೇನನ್ನು ?

ಬಸವೇಶ್ವರ : ನಿಮ್ಮ ಧರ್ಮಾಚಾರಗಳನ್ನು.

ಮಾದರಸ : ಅದೇಕೆ ಬಸವೇಶಾ ? ನಮ್ಮ ಧರ್ಮಾಚಾರಗಳನ್ನು.

ಬಸವೇಶ್ವರ : ಅಹುದು ತಾತಾ ಸತ್ಯವಾಗಿಯೂ ನಿರಾಕರಿಸುವೆ. ನಾನು ಜನಿಸಿದಾಗಲೇ ಸಂಗಮೇಶ್ವರನು ಬಂದು ಸದ್ಗುರುವಾಗಿ ಬೋಧಿಸಿ ವಿನುತ ಶೈವಾಚಾರ ಮಾರ್ಗದೋಳ್ ಇರಿಸಿ ಸಲಹಿದ್ದಾನೆ. ಸದಮಳಾಚಾರದ ಸದ್ಗುರುವಿನ ಕರಾಬ್ಜದೋಳ್ ಜನ್ಮನಾದಂಗೆಯೆ ಈ ಮುಂಜಿ ಯೆಂಬುದನೊರೆಯುದಿರು.

ಶಿವದೀಕ್ಷೆಯಿಲ್ಲದವನಂತೆ ನನ್ನ ಮುಂಜಿಗಟ್ಟುವ ಮನವು ಅವಿವೇಕಿಯಂತೆ ನಿನ್ನಲ್ಲಿ ಹೇಗೆ ಜನಿಸಿತು ಜನಕಾ ?

ಮಾದರಸ : ಬೇಡ ಬೇಡ ಮಗು ಇಷ್ಟೊಂದು ಮಾತುಗಾರಿಕೆ ಏಕೆ ಚಿಕ್ಕವನಾದ ನಿನಗೆ ? ನೀನು ಮುಂಜಿಯನ್ನು ಮಾಡಿಕೊಳ್ಳುವದಿಲ್ಲವೆ ?

ಬಸವೇಶ್ವರ : ಇಲ್ಲ.

ಮಾದರಸ : ಹಾಗನ್ನಕೂಡದು ನನ್ನ ಮುದ್ದುಗುವರಾ. ನೀನೆಂದರೆ ನಿರುಪಮ ನಿಷ್ಕಲಂಕ. ಹೀಗೆ ವರ್ತಿಸಿ ಕುಲಕ್ಕೆ ಕಳಂಕ ತರಬೇಡ

ಪದ : **ರಾಗ : ಜೀವನಪುರಿ, ತ್ರಿತಾಳ**

ಅಕಲಂಕನೆ ಛಲವು ಬೇಡಯ್ಯ ।
ಕೀರ್ತಿಶಾಲಿ ಸದಾಚಾರಿ ತವ ಪರಾವತಾರಿ ಕೇಳಯ್ಯಾ ॥ ಪಲ್ಲ ॥

ಆದರದಿ ನಿನ್ನೆಲ್ಲರು ಸನ್ಮಾನಿಸರ್ರೈ ।
ಸಮಾಜ ವಿರೋಧಿಯಾಗ್ವೆ ।
ಸಾಸಾ, ಸಾರೆಮ, ರಿಮಪ, ಪಧಮ ಪಧನಿ, ಧನಿಸಾ ।
ರಕ್ಷೆಯೋ ಈ ಮುಂಜಿ ಕಾರ್ಯ ।
ಬ್ರಹ್ಮ ಧರ್ಮಕೆ ಮಗು ।
ಕಂದಾ ನೀ ಸುವಿಚಾರದಿ ।
ಸಂಸ್ಕಾರಕೆ ಕೊಡುಸನ್ಮತಂ ॥ ೧ ॥

ಬಸವೇಶ್ವರ : ತಾತಾ ಎನಗೆ ವಿರಸವಾದ ಈ ಮುಂಜಿ ಮಾತು ಕಾಲತ್ರಯದಲ್ಲೂ ಸಾಧ್ಯವಿಲ್ಲ.

ಮಾದರಸ : ಬೇಡ ಬಸವಾ ಹಠ ಹಿಡಿಯಬೇಡ. ಜಾತಿಗೋತ್ರ ಉತ್ತಮ ಕುಲದೊಳೊಗೆದು ಪುನೀತನಾಗಿ ಸಮಸ್ತ ವರ್ಣಾ ವ್ರಾತದೊಳಗೇ ಅಗ್ರಜ ಕುಲಾಗ್ರಣಿಯೆನಿಸಿ ಈ ತೆರ ನಡೆಯುವದು ಲಾಂಛನಾಸ್ಪದವಲ್ಲವೇ?

ಬಸವೇಶ್ವರ : **ಪದ : ರಾಗ: ಜಯ ಜಯಮತಿ. ತ್ರಿತಾಳ.**

ಮಿಗಿಲೆನಿಸುತಲಿ ಕ್ಷೋಣಿಯೊಳಗೆ ನೀ ।
ನಗೆಗೀಡಾಗುವೆ ನೋಡೀಗ ಜನಕನೆ ॥ ಪಲ್ಲ ॥

ಕುಲದಭಿಮಾನಾ ಅಳಿದೊಗೆ ಇದನಾ ।
ಫಲದೋರದು ಈ ಬ್ರಾಹ್ಮಣ್ಯದೋಳ್ನಿಜ ॥ ೧ ॥

ಮಾದರಸ : ಬೇಡ ಬೇಡ ಮಗು ಸ್ವಧರ್ಮದ ಮೇಲೆ ಹೀಗೆ ಜಿಗುಪ್ಸೆ ತಾಳಬೇಡ. ವೇದ ಮತದಿಂ ಗರ್ಭ ಸಂಸ್ಕಾರ ಮೊದಲೆನಿಪ್ಪ ಆದಿ ಕರ್ಮಂಗಳು ಹದಿನಾರು. ನಮ್ಮ ಬ್ರಹ್ಮ ಧರ್ಮಕ್ಕಾಗಲೇ ಬೇಕು. ಇವುಗಳೊಳಗೆ ಒಂದು ತಪ್ಪಿದರೆ ಬ್ರಾಹ್ಮಣೋತ್ತಮನಾಗಲಾರ. ತಿಳಿಯದೆ ನೀನಿದನ್ನು ಅಲ್ಲಗಳೆದು ಲೋಕನಿಂದೆಗೆ ಗುರಿಯಾಗಬೇಡ.

ಬಸವೇಶ್ವರ : ತಾತಾ ಮರುಳನಂತೇಕೆ ಗಳಹುತ್ತಿರುವೆ ? ಈ ನಿಮ್ಮ ಬ್ರಾಹ್ಮಣ್ಯವೇ ತ್ಯಾಜಕವಾಗಿರುವಾಗ ಅದನ್ನು ತೊರೆದು ಬಿಟ್ಟರೆ; ನಾನು ಲೋಕನಿಂದೆಗೆ ಪಕ್ಕಾಗುವೆನೆ ? ತನ್ನ ಅಮೃತ ವಾಣಿಯಿಂದ ಉಪದೇಶಿಸಿ ಈ ಭವರೋಗವನ್ನೇ ನಾಶಿಸಬಲ್ಲ ಜಂಗಮ ಶ್ರೇಷ್ಠನ ಪದವ ಪಿಡಿದ ನಾನು ಡಾಂಭಿಕ ವೃತ್ತಿಯ ದುರ್ನರರ ಕಾಲಿಗೆರಗಲೆ? ವಿಭೂತಿ ರುದ್ರಾಕ್ಷಿ ಇಷ್ಟಲಿಂಗ ಧಾರಣನಾಗಿ ನಿರ್ಮಲತೆಯಿಂದ ಚರಿಸುವ ನಾನು, ಚರ್ಮ ಮುದ್ರೆಗಳಂ ಧರಿಸಿ, ಕರ್ಮಲತೆಯಂತಿರುವ ಜನಿವಾರವನ್ನು ಹಾಕಿಕೊಳ್ಳಲೆ? ವೀರಶೈವದೀಕ್ಷಾಧಾರಕನಾಗಿ ನಿರ್ಮಲನಾಗಿರುವ ನನ್ನನ್ನು ಘೋರ ಕರ್ಮಾಶ್ರಯದ ಪರಿವಾರದೊಳ್ ಮುಳುಗಿಸುವೆನೆಂದು ವಿಚಾರ ಮಾಡುವದಿದು ನಿನಗೆ ಧರ್ಮವೇ? ತಾತಾ ಬ್ರಹ್ಮನ ಶಿರವರಿದ ಪ್ರಮಥೇಂದ್ರ ವಂಶಜನನ್ನು ಬ್ರಹ್ಮ ವಂಶಜನೆಂದೇಕೆ ಭಾವಿಸುವೆ ?

ಮಾದರಸ : ನೋಡು ಬಸವಾ ವಿಚಾರ ಮಾಡು. ಸನಾತನಿಗಳಾದ ನಾವು ಧರ್ಮ ಕಟ್ಟಳೆಗಳಿಗೆ ಹೊಂದಿಕೊಂಡಿದ್ದರೇನೆ ಭೂಷಣ. ನೀನು ಹರಭಕ್ತನೆಂದು ಹೇಳುವೆ. ಹರಭಕ್ತರಿಗಾದರೂ ಇದರೊಳಗಾವ ವಿರುದ್ಧಮುಂಟು? ಈ ಉಪನಯನಾರ್ಚಂಗಳ್ಗೆ ನಂದಿಯೇ ಮುಖ್ಯನು. ಇದಕ್ಕೆ ಬೀಜಂ ಪ್ರಣವವು. ಮತ್ತು ಇದಕ್ಕೆ ಭರ್ಗನೆಂಬುದು ವಿಧಿತ ಮಂತ್ರವಿರಲ್ಕೆ ಇದಕ್ಕೆ ದೋಷಮನೆಂತು ಕಲ್ಪಿಸುವೆ ?

ಬಸವೇಶ್ವರ : ತಾತಾ ನನ್ನನ್ನು ಮುಂಜಿಗೊಪ್ಪಿಸಲು ಈ ತೆರ ಭ್ರಮೆಗೊಂಡೇತಕ್ಕೆ ನುಡಿವೆ. ನಿಮ್ಮ ಬ್ರಾಹ್ಮಣ್ಯವೆಂಬುದು ಬೇರೆ. ಈಶ ಭಕ್ತಿಯು ಬೇರೆ. ಇವೆರಡಕ್ಕೂ ಬೇರೆ ಬೇರೆ ದೈವ. ಬೇರೆ ಬೇರೆ ಮಂತ್ರ. ಬೇರೆ ಬೇರೆ ವೇಷ. ಬೇರೆ ಬೇರೆ ಆಚಾರ. ಇಂತಿರಲು ಇವೆರಡುಮಂ ನೀಂ ಕೂಡಿ ನುಡಿಯುದಿರು. ಹಿಂಸಾಚಾರವುಳ್ಳ ಯಜ್ಞ ಹೋಮಗಳನ್ನು ಮಾಡಬೇಕೆಂಬುದು ನಿಮ್ಮ ಬ್ರಹ್ಮತತ್ವಗಳು. ಷಟಸ್ಥಲಗಳೆಂಬ ಸೋಪಾನಗಳಿಂದ ಸ್ವರ್ಗಕ್ಕೇರಿಸುವ ಪವಿತ್ರವಾದ ವೀರಶೈವ ಧರ್ಮ ತತ್ವಗಳಿಗೆ ಅದೆಂತು ಸರಿ ಹೋಲುವವು ?

ಮಾದರಸ : ಅಂದರೆ ನಮ್ಮ ಧರ್ಮ ತತ್ವಗಳಿಗೆ ಬೆಲೆಯಿಲ್ಲವೆ ? ಮತ್ತಂ ಈಶ ಭಕ್ತಿಯು ನಮ್ಮ ಬ್ರಾಹ್ಮಣರಿಗೆ ಸಾಧ್ಯವಿಲ್ಲವೆ ?

ಬಸವೇಶ್ವರ : ತಾತಾ ಕೇಳು. ಈ ಧರೆಯೋಳ್ ಈಶ ಭಕ್ತಂಗೆ ಅನ್ಯ ದೈವದ ಸ್ಮರಣೆಯೆಂಬುದಿಲ್ಲ. ನೀವಾದರೋ ಸೂರ್ಯ ಅಗ್ನಿ ಬ್ರಹ್ಮ ವಿಷ್ಣು ಇಂದ್ರಾದಿ ದೇವತೆಗಳನ್ನೂ ಮೂರವಸರದೋಳರ್ಚಿಸಿ, ವಂದಿಸಬೇಕು. ಈ ತೆರ ವಂದಿಸದಿದ್ದರೆ ನಿಮ್ಮ ಪಾರ್ವಿಕೆ ಕೆಡಗುಂ. ವಂದಿಸಿದರೆ ಮೃಡನ ಭಕ್ತಿ ಕೆಡಗು. ಈ ಪ್ರಕಾರ ಎರಡರಿಂದಲೂ ಪಾರ್ವ ಕೆಡುವಂ. ಅಂದ ಮೇಲೆ ತಾತಾ ಪಾರ್ವನು ಮೃಡನ ಭಕ್ತನೆಂತಾಗುವನು ?

ಮಾದರಸ : ಏನು ಬಸವಾ ಇಳೆಗೆ ಕುಲದೀಪಕನುದಯಿಸಲು, ಕುಲವು ವರ್ಧಿಸುವದು. ಕುಲನಾಶಕನು ಹುಟ್ಟಲು ಕುಲವು ಅಳಿದು ಹೋಗುವದು. ಇಂತಿರಲು ನೀನು ಹೀಗೆ ವರ್ತಿಸಿದ್ದಾದರೆ, ಕುಲದ ಬೇರಿಗೆ ಗುದ್ದಲಿಯನ್ನಿಕ್ಕಿದಂತಾಗುವದಿಲ್ಲವೆ ? ಎಂದೂ ಲೋಕಕ್ಕೆ ಬಾರದ ನಂದನಂ ನೀನು, ಎಮ್ಮ ಬಸುರೊಳ್ಬಂದು ಎಮಗೆ ಹರುಷವನ್ನುಂಟು ಮಾಡುವ ಬದಲು, ದುಃಖವನ್ನೇ ಉಂಟು ಮಾಡುತ್ತಿರುವೆಯಲ್ಲ ! ಈ ನಿನ್ನ ಕುಲಗೇಡಿ ವರ್ತನೆಯನ್ನು ಊರೊಳಗಿನ ಅಘ ವಿಪ್ರರ್ಕೇಳಿದರೆ ನಿನ್ನಂ ಊರ ಹೊರಗಿಕ್ಕರೆ ? ನಮ್ಮದೀ ಚಾರುಕುಲಕ್ಕೆ ತಕ್ಕ ಆಚಾರ. ನಮ್ಮೀ ಆಚಾರಕ್ಕೆ ತಕ್ಕ ಮುರಾರಿಯ ಭಕ್ತಿ ಒಳಿತಲ್ಲ ಎಂದು ನಿನಗೆ ವಿಮರ್ಶಾತ್ಮಕವಾಗಿ ಹೇಳಿದೆ. ಕಡೆಗೆ ನೀನು ಇದನೊಲ್ಲದಿರ್ದಡೆ ನಿನ್ನ ಭಕ್ತಿಯೋಳ್ ನೀನಿರಹೋಗು. ನೀನು ಹಾರುವ ಕುಲಕ್ಕೆ ಕಳಂಕ ತಂದೆ.

ಬಸವೇಶ್ವರ : ಜನಕಾ ನಾನು ಹೋಗಿಯೆತೀರುವೆ. ಕಾಗೆ ಸಾಕಿದ ಕೋಗಿಲೆ ಮರಿಯು, ಸುಸ್ವರದಿಂದ ಕೂಗುವದೇ ಹೊರತು, ಕಾವು ಕಾವು ಎಂದು ಅರಚುವದಿಲ್ಲ. ನಾನೆಂದರೆ ನಿಮ್ಮಂಥ ಹಾರುವನಲ್ಲ. ನಾನು ಗುರುಪಾದಾರ್ಚನೆಗೊಲಿದ ಹಾರುವ. ಪರಮಶೈವೋನ್ನತಿಗೆ ಹಾರುವ. ಶರಣು ಸಾನುಭವಕ್ಕೆ ಹಾರುವ. ತತ್ವನಾದಕ್ಕೆ ಹರಿದು ಹಾರುವ. ವೀರಭಕ್ತಿಗೆ ಹಿರಿದು ಹಾರುವನಲ್ಲದೆ, ನಾನೆಂದು ಬೆರಸಿ ಹಾರುವ ಕುಲಕೆ ಹಾರುವನಲ್ಲ ತಿಳಿಯಿತೆ ?

ಮಾದರಸ : ಕುಲಾಂಗಾರನೆ, ನಿನ್ನ ಪಿಡಿದು ಸುಗತಿಯ ಪಡೆದು ಬದುಕುವೆನೆಂದು ನೆರೆ ನಂಬಿರ್ದ ನಮ್ಮ ಬಯಕೆಗಳೆಲ್ಲವೂ ಮೃಗ ಜಲದಂತೆ

ವ್ಯರ್ಥವಾದವು. ನೀನು ನನ್ನನ್ನೀಗ ತಂದೆಯೆಂದು ಕೂಡ ಮನ್ನಿಸಲಿಲ್ಲ.

ಬಸವೇಶ್ವರ : ನೀನು ತಂದೆಯೇ. ಈರೇಳು ಲೋಕದ ತಂದೆಯಂ ಭಜಿಸದೆ ರತೀಶನ ತಂದೆಯಂ ರಪಿಗಳಂ ಭಜಿಸಿ ನಿನ್ನೊಡಲಂ ಕರ್ಮಕ್ಕೆ ತಂದೆ. ನಿನ್ನೊಡಲಂ ಭವಾಳಿಗೆ ತಂದೆ. ಎನಗಿನ್ನು ಈಶ ಭಕ್ತರೇ ತಂದೆ ತಾಯಿಗಳು.

ಮಾದರಸ : ಹಾಗೇ ಆಗಲಿ ಕುಲಕಂಟಕನೆ ನಿನ್ನ ಮುಖಾವಲೋಕನವು ಕೂಡ ಬೇಡ. (ತಿರಸ್ಕಾರದಿಂದ) ಇವನ ಆ ಪವಿತ್ರ ವೀರಶೈವವಂತೆ ಆಚಾರವಂತೆ ಅದರಲ್ಲಿಯೇ ಇರಹೋಗು (ಎಂದು ಹೋಗುವನು).

ಬಸವೇಶ್ವರ : ಅದೂ ನಿಜವಾದ ಮಾತೇ ಹೋಗು ಜನಕಾ. ನಿಮ್ಮ ಆಚಾರದೊಳ್ ನೀವು. ನಮ್ಮ ಆಚಾರದೊಳ್ ನಾವು.

ಪದ : ರಾಗ : ಆನಂದ ಭೈರವಿ. ತಾಳ : ಆದಿತಾಳ.

ಪುನೀತನಾಗುವೆ ಗೃಹ ತ್ಯಜಿಸುವೆ ।
ಶಿವಧರ್ಮವೆ ಬಲುಶ್ರೇಷ್ಠವೈ ॥ ಪಲ್ಲ ॥
ಶಿವನಾಮವು ಭವ ನಾಶವು ।
ನೆನೆದು ಮಣಿದು ನಲಿದಾಡುವೆ ॥ ೧ ॥

ಅಂಕ ತೆರೆ ಬೀಳುವುದು.

===**===**===

॥ ದ್ವಿತೀಯಾಂಕ ॥
(ಪ್ರವೇಶ ೧)

(ಸ್ಥಳ : ಕಾಡುಬೀದಿ ಬಸವೇಶ್ವರನು ಸಂಗಮ ಪುರವನ್ನೀಕ್ಷಿಸಿ ತನ್ನೊಳಗೆ ಆಲೋಚಿಸುತ್ತಾನೆ.)

ಧನ್ಯ ಧನ್ಯ ಈ ಕಪ್ಪಡಿ ಸಂಗಮಪುರ ನಿವಾಸಿಗಳೆಲ್ಲ ನಿಜವಾಗಿಯೂ ಧನ್ಯರು. ಈ ಪುರದ ಮಹಿಮೆಯ ನೆನಿಸುವುದೆ ಪಣಿಪತಿಗೂ ಹವಣಲ್ಲದಿರುವಾಗ್ಯೆ ನನ್ನ ಪಾಡೇನು ? ಈ ಪುರದ ನದಿಗಳೆಲ್ಲ ಪುಣ್ಯ ತೀರ್ಥಂಗಳು ದೇವಾಲಯಗಳು ಹರನಿವಾಸಗಳು. ಮತ್ತಂ ಈ ಪುರವು ಹುಸಿ, ಕಳವು ಹಾದರ ದುರ್ನೀತಿ ದುರಾಚಾರಗಳಿಗೆಡೆಗೊಡದೆ, ಗುರುಸೇವೆ ಸನ್ಮಾರ್ಗ ನೀತಿ ನಿಪುಣತೆ ಸದಾಶಿವಭಕ್ತಿ ಪರಹಿತಧರ್ಮ ವಿವೇಕ ವಿಚಾರಾನ್ವಿತ ಸಜ್ಜನರಿಂದ ಪರಿಪೂರ್ಣವಾಗಿರುವ ಈ ಕಪ್ಪಡಿ ಪುರವನ್ನು ಎಷ್ಟು ಬಣ್ಣಿಸಿದರೂ ಮನತಣಿಯದು. ಇಂತಿರುವ ಕಪ್ಪಡಿಯಲ್ಲಿ ಕೂರ್ಪರ ಕುಲದೈವಂ, ನೋಳ್ಪರ ಕಣ್ಮಣಿಯಂ, ಬೇಳ್ಪರ ಭಾಗ್ಯ ನಿಧಿಯಂ, ಚಿಂತಿಪರ ಚಿಂತಾರತ್ನವೆನಿಪ ಅದೋ ಆ ಸಂಗಮನಾಥನ ದೇವಾಲಯವು ಎಷ್ಟು ಮನೋಹರ ! ಆ ದಿವ್ಯ ಸೌಂದರ್ಯವು ನನ್ನ ಹೃದಯವನ್ನೇ ಸೆರೆ ಹಿಡಿದುದಕೆ ನನಗಿಷ್ಟೊಂದು ಸ್ವರ್ಗೀಯ ಸುಖದ ಅನುಭವ. ಜನನ ಬಳಿವಿಡಿದು ಬಂದಿರುವ ಈ ಜವ್ವನಂ ಶಿವಪೂಜೆಯಲ್ಲಿ ಸವೆದರೇನೆ ಜನ್ಮ ಸಾರ್ಥಕವು. ಮುಕ್ತಿಯ ತವರೆನಿಪ ಈ ಸಂಗಮನಾಥನ ದೇವಾಲಯವನ್ನು ಸೇರಿ, ಜರಾಮರಣ ಬಾಧೆಯನ್ನು ತಪ್ಪಿಸಬೇಕೆಂಬ ನನ್ನ ಗುರಿ ಮುಟ್ಟಲು ಸಾಧನೆ ಗೈಯ್ಯುವೆ (ಎಂದು ಹೋಗುವದು).

===***===***===

(ಪ್ರವೇಶ ೨)

(ಸ್ಥಳ : ಸಂಗಮನಾಥನ ದೇವಾಲಯ – ಈಶ್ವರ ಲಿಂಗದ ಮುಂದೆ ಕುಳಿತು ಬಸವೇಶ್ವರನು ಸ್ತೋತ್ರಿಸುವದು)

ಪದ : ರಾಗ : ಸಾರಾಂಗ, ತಾಳ : ದಾದರಾ.

ಸೋಮ ಸೂರ್ಯ ನೇತ್ರ ದೇವನೆ,
ಉಮೆಯರಸ ಪಾಹಿ ಸುರಿಸಿ ನೀನೇ ।
ವಿಮಲ ಕರುಣ ಸೋನೆ ॥ ಪ ॥

ನೀಲಕಂಠ ಬಾಲಿಹಾಲ ಲೋಲದಿಂದ ।
ಸಲಿಸಿದವನೆ ಶೂಲಿ ಬೇಡೆ ನಾನೆ ॥ ೧ ॥

ಬೋ ಕರುಣರಸ ಘನ ತರಂಗ ಸಂಗಮದೇವ, ಸೊಗಯಿಸುವ ಘನವೃಷಾರೂಢ ಸಂಗಮದೇವಾ ಎನ್ನನತಿ ಕರುಣದಿಂ ನೋಡಿರಕ್ಷಿಸು ರಕ್ಷಿಸು (ನಮಸ್ಕರಿಸುವದು).

ಸಂಗಮನಾಥ : (ಲಿಂಗದ ಹಿಂದೆ ಮೈದೋರಿ) ಏಳು ಏಳು ಬಸವೇಶ ! ಬಂದವರ ಹೋದವರ ಕೈಯಿಂದ ನಿನ್ನ ಸದ್ಗುಣವೃಂದಮಂ ಕೇಳಿ, ನಿನ್ನ ಭೆಟ್ಟಿಗಾಗಿ ತವಕಿಸುತ್ತಿದ್ದೆವು. ನೀನಿಲ್ಲಿ ಪದುಳದಿಂದಿರು. ನೀನು ನಿನ್ನ ಗುರಿ ಮುಟ್ಟಲು ಸಾಧಿಸಲು ಇದುವೆ ನನ್ನ ಉಪದೇಶ. ವಿಭೂತಿ ರುದ್ರಾಕ್ಷಿ ಲಿಂಗಧಾರಿಗಳಾದವರಂ ನಂಬು. ಆರಾದರೂ ಬೈದೊಡೆ ಬಡಿದೊಡಂ ಅವರಡಿಗಳಿಗೆ ಶರಣೆನುತಲಿರು ಬಸವ. ನಿನ್ನ ಪ್ರಾಣದ ಮೇಲೆ ಎಂಥ ಸಂಕಟ ಬಂದರೂ ಹಿಡಿದ ನೇಮವ ಬಿಡದಿರು. ಗಹಗಹಿಸಿ ಭಕ್ತರ ಕುಲಂಗಳಂ ಅರಸದಿರು. ಹೀಗೆ ನಡೆಯುವದೇ ತುದಿಪದ ಬಸವ. ಮತ್ತಂಕೇಳು. ಪರವನಿತೆಯರೊರ್ಮೆಯಂ ನೋಡದಿರು. ಪರರೊಡವೆ ಬಯಸದಿರು. ತನುಕರಣದಿಚ್ಛೆಗೆ ಪಾರದಿರುತಿರು. ಜಂಗಮವೆ ನಾನೆಂದು ತಿಳಿದಿರು. ಭಕ್ತರನ್ನು ಕಂಡು ನೀನಿದಿರೆದ್ದು ನಮಿಸಿ, ಕರಗಳಂ ಮುಗಿದು, ಅವರ ಭಕ್ತಿಗುಣಂಗಳಂ

ಕೊಂಡಾಡಿ ಮುಂಡಾಡುತ್ತಿರಬೇಕು ಬಸವಣ್ಣ. ಓಸರಿಸದಿರಾಗಳುಂ ನಿಜಸತ್ಯ ಭಾಷಣಂಗಳ. ನಿನ್ನವಸರಕೆ ಬೇಕಾದುದನೆ ಬೇಡು. ಬೆರಸಿ ನಾನದೆಲ್ಲವಂ ಪೂರ್ತಿಗೈಯುವೆ. ನೀನೆಲ್ಲಿಗಂ ಪೋಗಬೇಡ. ಮತ್ತು ನಿನಗಾವುದು ಚಿಂತೆಬೇಡ. ಸಂಗಮೇಶ್ವರಂಗೆ ಹೊಸ ಪುಷ್ಪಮಂ ತಿಳಿಯಗ್ಘವಣಿಯಂ ತಂದು ಓಜೆಯಿಂ ಪೂಜೆಗೈದು ಪ್ರಸಾದ ಕಾಯನಾಗಿ ಸುಖದೊಳಿಪ್ಪುದು, ಬಸವಣ್ಣ ಕಂಡಿಯಾ.

ಬಸವೇಶ್ವರ : (ನಮಿಸುತ್ತೆದ್ದು) ಧನ್ಯ ಧನ್ಯ ಇಂದಿಗಾಯಿತು ಎನ್ನ ಜನ್ಮ ಸಾಫಲ್ಯ. ದಯಾಘನನಾದ ಸಂಗಮದೇವನು ನನಗೀತೆರ ಸೂಚಿಸಿದ್ದು, ನಾನು ತುದಿಪದವಿಯಂ ಪಡೆದುಕೊಳ್ಳುವ ದ್ಯೋತಕವಲ್ಲದೆ ಮತ್ತೇನು ?

ಕಂದ ॥ ಅಳಿಯೆರಗದ ರವಿಮುಟ್ಟದ ।
ನಿಲನಲುಗದ ಪುಷ್ಪ ಸಂಚಯವ ಕೊಂಡಾನುಂ ॥
ಮಲ್ಲಿಗೆ ಸಂಪಗೆ ಕೇತಗೆ ।
ಸಲ್ಲಿಸಿ ಓಜೆಯಲಿ ಪೂಜೆಯೋಳ್ನಾನಿರುವೆ ॥

ಶಾಂತಾರ್ಕಕೋಟಿ ಪ್ರಭಾಪುಂಜನೂ ತುದಿಪದವಿದಾತನೂ ಆದ, ಈ ಸಂಗಮನಾಥನ ಸೂಚನೆಯಂತೆ ವ್ಯವಹರಿಸಿ ನನ್ನ ಗುರಿ ಮುಟ್ಟುವೆ.

(ರಸ್ತಾ ತೆರೆ ಬೀಳುವದು).

===***=====***====

ಪ್ರವೇಶ ೩

(ಸ್ಥಳ – ಶೆಟ್ಟರೂ ಭಟ್ಟರೂ ಸಂದರ್ಶಿಸಿ ಸಂಭಾಷಿಸುವದು).

ಶೆಟ್ಟರು : (ಒಂದು ಪಕ್ಕದ ಕಡೆಗೆ ನೋಡಿ) ಇದೇನೊ ಕೃಷ್ಣಪೆದ್ದಿ ಭಟ್ಟರು ಒಳ್ಳೆ ತವಕದಿಂದ ಬರುತ್ತಿದ್ದಾರೆ. ಅದೇಕೊ ಇಷ್ಟೊಂದು ಅವಸರದ ನಡಿಗೆ! (ಭಟ್ಟರು ಸಮೀಪಕ್ಕೆ ಬಂದ ನಂತರ) ಶರಣು ಶರಣು ಭಟ್ಟರೇ ಎತ್ತ ಹೊರಟಿರುವಿರಿ ? ಏನು ವಿಶೇಷ !

ಭಟ್ಟರು : ಏನಿಲ್ಲ ಬಲದೇವ ಮಂತ್ರಿಯೇನಿದ್ದನಲ್ಲಾ ! ಅವನಿಂದ ರಾಜದಾಡಳಿತ ಒಳ್ಳೆ ಚನ್ನಾಗಿ ಸಾಗಿತ್ತು. ಅವನು ಸತ್ತು ಹೋದನಂತರ ಆ ಪ್ರಧಾನ ಮಂತ್ರಿ ಸ್ಥಳಕ್ಕೆ ಇದುವರೆಗೆ ಯಾರನ್ನೂ ಆರಿಸಿಕೊಂಡಿರುವುದಿಲ್ಲ. ಈಗ್ಗೆ ಆ ವಿಷಯದಲ್ಲಿ ವಿಚಾರ ವಿನಿಮಯ ನಡೆದಿದೆಯಂತೆ

ಶೆಟ್ಟರು : ಅಂದರೆ ಆ ಮಂತ್ರಿ ಪದಕ್ಕೆ ನಿಮ್ಮದೇನಾದರೂ ಹೋಗುವ ವಿಚಾರವೋ? ಹೋದರೆ ಅಡ್ಡಿಯೇನಿಲ್ಲ. ಭಟ್ಟರೇ ನೀವು ಆ ಕೆಲಸಕ್ಕೆ ಸಮರ್ಥರೆಂದೇ ನನ್ನ ಅಭಿ ಮತ

ಭಟ್ಟರು : ಯಾಕಯ್ಯಾ ನನ್ನನ್ನು ಗೇಲಿ ಮಾಡುವಂತೆ ಕಾಣುತ್ತೆ ! ಆ ಮಂತ್ರಿ ಕೆಲಸವೆಂದರೇನು ಈ ಭಟ್ಟನಿಗೆ ದೊಡ್ಡ ಮಾತಲ್ಲ. ಮಂತ್ರಿಯ ತತ್ವವೆಂದರೇನು ಕೇಳಿ ಶೆಟ್ಟರೇ. ಮಂತ್ರವೆಂದರೆ ವಿಚಾರ. ವಿಚಾರವು ಯಾವನಲ್ಲಿದೆಯೋ ಅವನು ಮಂತ್ರಿ ಎಂಬ ಅರ್ಥವು ನನಗೆ ಪೂರ್ಣ ಗೊತ್ತುಂಟು. ಶಟ್ಟರೇ ನನ್ನಲ್ಲಿ ವಿಚಾರವಿದೆ ತಲೆಯಿದೆ ಎಂಬುದಕ್ಕೆ ಮೊನ್ನೆ ಒಬ್ಬ ಗೃಹಸ್ಥನ ಮನೆಯಲ್ಲಿ ನೆರವೇರಿದ ಸಮಾರಾಧನೆಯೇ ಇದಕ್ಕೆ ನಿದರ್ಶನ.

ಶೆಟ್ಟರು : ಇದೇನು ಹೇಳುವಿರಿ ಭಟ್ಟರೆ ? ಆ ಸಮಾರಾಧನೆಯೇನೊ ಮೃಷ್ಟಾನ್ನ ಭೋಜನದಿಂದ ಬ್ರಾಹ್ಮಣರನ್ನು ತೃಪ್ತಿಪಡಿಸುವ ಕಾರ್ಯ. ಆ ಕಾರ್ಯಕ್ಕೂ ನಿಮಗೆ ತಲೆಯಿದೆ ಎಂಬುದಕ್ಕೂ ಏನು ಸಂಬಂಧ !

ಭಟ್ಟರು : ಸಂಬಂಧವಿದೆ ಶೆಟ್ಟರೇ. ಆ ಭೋಜನ ಕಾರ್ಯದಲ್ಲಿಯೇ ನನಗೆ ತಲೆಯಿದ್ದದ್ದೂ ನನ್ನ ಮುತ್ಸದ್ದಿತನದ್ದೂ ಬೆಳಕಿಗೆ ಬಂದಿತು.

ಶೆಟ್ಟರು : ಸರಿಭಟ್ಟರೇ, ನೀವು ತೋರಿದ ಮುತ್ಸದ್ದಿತನವೇನು ? ಆ ಭೋಜನ ಕಾರ್ರ್ಯದಲ್ಲಿ !

ಭಟ್ಟರು : ಕೇಳಿ. ಆ ಭೋಜನ ಸಮಾರಂಭವು ಒಳ್ಳೆ ರಭಸದಿಂದ ನಡೆದಿತ್ತು. ರುಚಿಯಾದ ತಿಂಡಿಗಳನ್ನು ತಿನ್ನುವಲ್ಲಿ ಮಗ್ನರಾದ ಬ್ರಾಹ್ಮಣರು, ಹಾಲು ತನ್ನಿ ತುಪ್ಪ ತನ್ನಿ ಎಂದು ಆಗಾಗ್ಗೆ ಒದರುತ್ತಿದ್ದರು. ಅಂಥ ಸಮಯದಲ್ಲಿ ಒಮ್ಮೆಲೇ ಹಾಲಿನ ಕೊರತೆಯಾಯಿತು. ತತ್ ಅಕ್ಕಿಯ ಹಿಟ್ಟನ್ನು ನೀರಲ್ಲಿ ಬೆರಸಿಸಿ ಬೆಳ್ಳಗೆ ಮಾಡಿ ಅದೇ ಹಾಲೆಂದು ನೀಡಿಸಿ ಬಿಟ್ಟೆ.

ಶೆಟ್ಟರು : (ವ್ಯಂಗ್ಯವಾಗಿ) ಸೈ ಸೈ ಎಂಥ ಮೇಧಾವಿಯಪ್ಪ ನೀವು !

ಭಟ್ಟರು : ಮತ್ತೆ ಕೇಳಿ ಶೆಟ್ಟರೇ.

ಶೆಟ್ಟರು : ಮತ್ತೇನು ಭಟ್ಟರೇ ?

ಭಟ್ಟರು : ಮುಂದೆ ಮಿಷ್ಟಾನ್ನದಲ್ಲಿಯೂ ಕೊರತೆಯಾಗುವಂತೆ ಸಂದೇಹ ಬಂದಿತು. ಸಾಮಾನ್ಯ ಮನುಷ್ಯರಾಗಿದ್ದರೆ ಆ ಪ್ರಸಂಗದಲ್ಲಿ ಏನು ಮಾಡುತ್ತಿದ್ದರು ಶೆಟ್ಟರೇ ?

ಶೆಟ್ಟರು : ಎಂಥ ಮಾತರಿ ! ಸಾಮಾನ್ಯರಿಂದ ಆಗುವ ಮಾತೇನರಿ ಇದು ? ಮಿಷ್ಟಾನ್ನದ ಕೊರತೆಯನ್ನು ಹೇಗೆ ಸರಿಪಡಿಸಿದಿರಿ ಭಟ್ಟರೇ.

ಭಟ್ಟರು : ಹೇಗೆಂದರೆ ಆ ಮಿಷ್ಟಾನ್ನದ ರುಚಿಯನ್ನೇ ಕೆಡಿಸಿ ಬಿಟ್ಟರೆ, ಹೆಚ್ಚು ಊಟ ಮಾಡುವವರು ತುಸು ತುಸು ಮಾಡುವದರಿಂದ ಅದು ಎಲ್ಲರಿಗೂ ಸಾಲುವದೆಂದು ಬಗೆದು ಆ ಮಿಷ್ಟಾನ್ನದಲ್ಲಿ ಇಂಗು ಬೆರಸಲು ಹೇಳಿ ಬಿಟ್ಟೆ . ಯಜಮಾನನು ಹಾಗೇ ಮಾಡಲು, ಎಲ್ಲರಿಗೂ ಆ ಆಹಾರವು ಪೂರೈಸಿ ಯಜಮಾನನ ಮಾನವು ಉಳಿಯಿತು ನನ್ನ ಕೀರ್ತಿಯೂ ಬೆಳೆಯಿತು.

ಶೆಟ್ಟರು : ಎಂಥ ಮಾತರೀ ಬೆಳೆಯದೇನು ಮಾಡಿತು? ಇದೇನು ಸಾಮಾನ್ಯ ಮುತ್ಸದ್ದಿತನವೆ? ಸಾಮಾನ್ಯರಾದವರಿಗೆ ಇವೇನು ಬರತಕ್ಕ ವಿಚಾರಗಳೇ? ನೀವು ನಿಜವಾಗಿ ಒಳ್ಳೆ ಬುದ್ಧಿಶಾಲಿಗಳು ಮೇಧಾವಿಗಳು. ಮತ್ತು ಶ್ರೇಷ್ಠತರದ ಮುತ್ಸದ್ದಿಗಳು.

ಭಟ್ಟರು : ನೋಡಿ ಶಟ್ಟರೇ ನಾನೆಂದರೆ ಇಂಥ ಮೇಧಾವಿ, ಮುತ್ಸದ್ದಿ, ವಿಚಾರ ಶೀಲ, ಜ್ಞಾನಿಯಾಗಿರುವ ನನ್ನಿಂದ ಆ ಮಂತ್ರಿ ಕೆಲಸ ಆಗಲಾರದೆ ?

ಶೆಟ್ಟರು : ಆಗದೇನು ಬುದ್ಧಿ ? ಇಂಥ ವಿಚಾರ ಇಂಥ ತಲೆ ಇದ್ದವರಿಗೇನೆ ಪ್ರಧಾನಮಂತ್ರಿ ಪದ ಸಾಧ್ಯ ಆದರೆ ?

ಭಟ್ಟರು: ಆದರೇನು ಶೆಟ್ಟರೇ? ಮತ್ತೇನು ನಿಮ್ಮಸಂಕೋಚ! ಈ ವಿಷಯದಲ್ಲೇನಾದರೂ ನಾನು ಅಸಮರ್ಥನೆಂದು ಕಂಡಿದ್ದರೆ, ಮುಚ್ಚುಮರೆಯಿಲ್ಲದೆ ಹಾಗೇ ಹೇಳಿ ಬಿಡಿ.

ಶೆಟ್ಟರು : ಛೇ ಛೇ ಭಟ್ಟರೇ ನಿಮ್ಮಂಥ ಬುದ್ಧಿ ಶಾಲಿಗಳಲ್ಲಿ ಎಂದಾದರೂ ಅಸಮರ್ಥತೆಯು ಕಂಡುಕೊಳ್ಳಬಹುದೇ ? ನನ್ನ ಸಂಕೋಚವೆಂದರೆ, ಈ ನಿಮ್ಮ ಪೋಷಾಕು ಮಾತ್ರ ಬದಲಾಯಿಸಬೇಕು ಇಷ್ಟೆ .

ಭಟ್ಟರು : ಅದೇಕೆ ಈ ಪೋಷಾಕೇನು ಮಾಸಿರುವವೇ ? ಸ್ವಚ್ಛವಿಲ್ಲವೆ ? ಮೊನ್ನೆ ಮೊನ್ನೆ ಭಟ್ಟಗೆ ಕೊಟ್ಟು ತರಿಸಿಕೊಂಡಿದ್ದೇನೆ.

ಶೆಟ್ಟರು : ಹಾಗಲ್ಲ ಭಟ್ಟರೇ. ನಿಮ್ಮ ಪೋಷಾಕು ಮಾಸಿವೆಯೆಂದು ಬದಲಿಸಲು ನಾ ನಿಮಗೆ ಹೇಳಲಿಲ್ಲ.

ಭಟ್ಟರು : ಹಾಗಾದರೆ ಮತ್ತೆ ?

ಶೆಟ್ಟರು : ಭಟ್ಟರೇ ಕೇಳಿ. ಈ ನಿಮ್ಮ ಸದ್ಯದ ಪೋಷಾಕು. ಅಂದರೆ, ಶ್ರಾದ್ಧ ಪಕ್ಷಗಳಲ್ಲಿ ಗೃಹಸ್ಥರ ಮನೆಗೆ ಹೋಗಿ ಹೂರಣ ಹೋಳಿಗೆ ಪಾಯಸ ಶೆಂಡಿಗೆ ಮಂಡಿಗೆ ಹಾಲು ತುಪ್ಪ ಹೊಡೆಯುವ ಪೋಷಾಕು. ಆದರೆ, ರಾಜಸಭೆಯಲ್ಲಿ ಒಪ್ಪುವಂಥ ಪೋಷಾಕು ಬೇ.ಡವೆ ?

ಭಟ್ಟರು : ನಿಜ ನಿಜ. ನೀವು ಹೇಳಿದ್ದು ಅಕ್ಷರಶಃ ನಿಜ. ನೀವು ಹೇಳಿದಂತೆ ಈ ಪೋಷಾಕು ಬದಲು ಮಾಡುವದೇ ನನ್ನ ನಿರ್ಧಾ್ರ. ಶೆಟ್ಟರೆ ಮಂತ್ರಿ ಪದದ ಪೋಷಾಕು ಹೇಗೆ ಮಾಡೋಣ.

ಶೆಟ್ಟರು : ಅದಕ್ಕೇಕೆ ಚಿಂತೆ ಬಿಡಿ ಭಟ್ಟರೇ. ಮಂತ್ರಿಯ ಕೆಲಸಕ್ಕೆ ಒಪ್ಪುವಂಥ ಪೋಷಾಕು ಅಂದರೆ ಇಷ್ಟೇ ಪಾದದವರೆಗೆ ಉದ್ದಾಗಿರುವ ಒಂದು ನಿಲುವಂಗಿ ತಲೆಯ ಮೇಲೊಂದು ಪಾಗೋಟೆ, ಕೈಯಲ್ಲೊಂದು ಕೋಲು ಆದರಾಯಿತು ನೋಡಿ ಮಂತ್ರಿ ಕೆಲಸದ ಸಿದ್ಧತೆ.

ಭಟ್ಟರು : ಅಲ್ಲವೆ ? ಇಷ್ಟೊಂದು ಮಾಡಿ ಬಿಡಲೇ.

ಶೆಟ್ಟರು : ಮಾಡಿಯೇ ತೀರಬೇಕು ಭಟ್ಟರೇ, ಅದಕ್ಕೆ ವಿಲಂಬವೇ ಬೇಡ.

ಭಟ್ಟರು: ಹಾಗಾದರೆ ನಾನೀಗಲೇ ಹೋಗಿ ವೇಷಾಂತರ ಮಾಡಿ ಮಂತ್ರಿ ಪದ ತಕ್ಕೊಳ್ಳಲು ಯತ್ನಿಸುತ್ತೇನೆ (ಎಂದು ಹೋಗುವವನು).

ಶೆಟ್ಟರು: (ನಗುತ್ತಾ) ನೋಡಿದಿರಲ್ಲವೆ ? ಜ್ಞಾನಶೂನ್ಯರಾದ ಇಂಥವರಲ್ಲಿ ಕೂಡ ಎಷ್ಟೊಂದು ಅಭಿಮಾನ ! ಎಷ್ಟೊಂದು ಸಾಹಸ ! ತಿಂಬುಂಬುವ ಹೊರತಾಗಿ ಮತ್ತೊಂದೇನನ್ನೂ ಅರಿಯದ ಈ ಪ್ರಾಣಿಯು ಇಷ್ಟು ಹಂಬಲಿಸಿ ಮೇಲು ಅಂತಸ್ತಿಗೆ ಬರಬೇಕೆಂದು ಬಯಸುತ್ತಿರುವಾಗ, ಎಲ್ಲ ಕಲೆಗಳಲ್ಲಿ ನುರಿತವರಾಗಿ ಸ್ವಾರ್ಥಲಾಲಸೆಯಿಂದ ಎಂಥ ಅಮಾನುಷ ಕೃತಿಯನ್ನು ಕೂಡ ಮಾಡಲು ಹಿಂಜರಿಯದ ನಾರಣ ಕ್ರಮಿತ, ಸೌರಿಭಟ್ಟಾದಿ ಪಂಡಿತರ ಹಾಗೂ ಸ್ವಾರ್ಥ ಪರಾಯಣತೆಯಲ್ಲಿ ಅಗ್ರೇಸರತ್ವವನ್ನು ಪಡೆದ ಮಂಚಣ್ಣನವರೇ ಮೊದಲಾದ ಮಂತ್ರಿವರ್ಗದವರು ಎಲ್ಲಿಗೆ ನಿಲುಕಿರಬಹುದು ?

ಮಂಚಣ್ಣ: (ಹೊರಗಿಂದ ಪ್ರವೇಶಿಸಿ) ಏನು ಶೆಟ್ಟರೇ ಏನು ಗಳಹುತ್ತಿರುವಿರಿ ? ಯಾರ ವಿಷಯಕ್ಕೆ ಈ ದೀರ್ಘವಾದ ಸಂಭಾಷಣೆ ! ಏನು ಮಂತ್ರಿ ಪದದ ಚರ್ಚೆ ?

ಶೆಟ್ಟರು : ಮಂಚಣ್ಣನವರೇ ? ಆ ಕೃಷ್ಣಪೆದ್ದಿ ಭಟ್ಟರೇನಿದ್ದಾರಲ್ಲಾ ! ಅವರ ವಿಷಯವಾಗಿ ನಾನು ಮಾತಾಡಿದ್ದು, ರಾಷ್ಟ್ರಕಾರ್ಯ ಧುರೀಣರಾದ ತಮ್ಮಂಥ ಗಣ್ಯಪುರುಷರು ಎಲ್ಲಿರುವಿರೋ, ಆ ಕೃಷ್ಣಪೆದ್ದಿ ಭಟ್ಟರು ತೆರವಾದ ಆ ಪ್ರಧಾನ ಮಂತ್ರಿ-----

ಮಂಚಣ್ಣ : ಸ್ಥಾನ ಇಚ್ಛಿಸುತ್ತಾರೆಯೆ ?

ಶೆಟ್ಟರು : ಅಹುದು ಮಂಚಣ್ಣನವರೇ.

ಮಂಚಣ್ಣ: ಮೂರ್ಖ ! ಶತಮೂರ್ಖ ! ನೋಡಿ ಶಟ್ಟರೆ ಆ ಕೃಷ್ಣಪೆದ್ದಿ ಭಟ್ಟನು, ನಿಜವಾಗಿ ಪೆದ್ದನೇ ಸರಿ. (ನಗುತ್ತಾ) ಅಲ್ಲವೇ ನಾನೀ ಮಂತ್ರಿವರ್ಗದಲ್ಲಿಯೇ ಅಗ್ರಗಣ್ಯ. ರಾಜ್ಯ ಸೂತ್ರಗಳನ್ನು ಹಿಡಿದು ಆಡಳಿತ ಸಾಗಿಸುವಲ್ಲಿ ಪ್ರಮುಖ ಪಾತ್ರ ನನ್ನದು. ಅರಸನ ಕಿವಿಯೂದಿ ನನ್ನಿಚ್ಛೆಯನ್ನು ಪೂರ್ತಿಮಾಡಿಕೊಳ್ಳುವಲ್ಲಿಯಂತೂ ನನ್ನದು ಪಳಗಿದ ಕೈ. ಬಹಳ ಹೇಳುವದೇನು ಶೆಟ್ಟರೇ, ಆ ಬಿಜ್ಜಳ ಮಹಾರಾಜನೆಂದರೆ ನನ್ನ ಕೈಗೊಂಬೆ. ವಸ್ತು ಸ್ಥಿತಿಯು ಹೀಗಿರುವಾಗ್ಯೆ ಮಂತ್ರಿಪಟ್ಟವು ನನಗಲ್ಲದೆ-----

ಶೆಟ್ಟರು : ಇನ್ನಾರಿಗೆ ಮಂಚಣ್ಣನವರೇ ಅದು ನಿಮಗೇನೇ ಸಾಧ್ಯ. ಇಂದಿನ ಸಭೆಯಲ್ಲಿ ಮಹಾರಾಜರಿಂದ ಆ ಮಂತ್ರಿ ಪದದ ವಿಷಯವು ಚರ್ಚಿಸಲ್ಪಟ್ಟಿದ್ದೇ ಆದರೆ ನಿಮ್ಮ ಹೊಡೆತ ಆಯಿತೆಂದೇ ತಿಳಿಯಬೇಕು ಮಂಚಣ್ಣನವರೇ.

ಮಂಚಣ್ಣ : ಆ ಮಾತು ಖಂಡಿತವೆಂದೇ ತಿಳಿದುಕೊಳ್ಳಿ ಶೆಟ್ಟರೇ. ನನಗಂತೂ ಆ ಪ್ರಧಾನಮಂತ್ರಿ ಪಟ್ಟವು ದೊರಕುವದು ಸೂರ್ಯ ಪ್ರಕಾಶದಷ್ಟೇ ಸತ್ಯ. ಆಮೇಲೆ ಹೇಳುವೆನಂತೆ ನನಗೆ ಕೊಂಡೆಯ ಮಂಚಣ್ಣನೆಂದು ಹಳಿಯುವ ಜನಂಗಳಿಗೆ.

ಶೆಟರು : ಅಹುದು ಮಂಚಣ್ಣನವರೇ ಅಂದರೇನೆ ಪುರುಷಾರ್ಥ ! ಮಾಡಿದವರಿಗೆ ಮಾಡಿಯೇ ತೋರಿಸಬೇಕು.

ಮಂಚಣ್ಣ : ಶೆಟ್ಟರೇ ನೋಡಿಬಿಡಿ. ನಾನು ಪ್ರಧಾನಿ ಪಟ್ಟವನೇರುವದೊಂದೇ ತಡ ರಾಜ್ಯದಲ್ಲಿ ಕೋಲಾಹಲವೆಬ್ಬಿಸಿ ಬಿಡುತ್ತೇನೆ. ಬನ್ನಿ ಹೋಗೋಣ. ಇದು ಒಡ್ಡೋಲಗ ನೆರೆಯುವ ಸಮಯ. ವಿಳಂಬಿಸದೆ ಒಡ್ಡೋಲಗ ಕುರಿತು ತೆರಳೋಣ.

ಶೆಟ್ಟರು : ನಡೆಯಿರಿ (ಮಂಚಣ್ಣ ಹೋದ ಮೇಲೆ) ಪ್ರಜೆಗಳ ಕಷ್ಟ ನಷ್ಟಗಳನ್ನರಿತು ಅವುಗಳನ್ನು ಪರಿಹರಿಸಲು ಶ್ರಮವಹಿಸಿ ದುಡಿಯಲು ಸಮರ್ಥನಾದವನೇ ಮಂತ್ರಿ ಪದಕ್ಕೆ ಅರ್ಹನಾಗಬಲ್ಲ. ಸ್ವಾರ್ಥ ಲಾಲಸೆಯಿಂದ ಪ್ರಜೆಗಳ ರಕ್ತ ಹೀರಿ ಸುಖೋಪಭೋಗದಲ್ಲಿ ಲೋಲಾಡಬಯಸುವವರಿಗೆ ಅರ್ಥಾತ್ ಮಂಚಣ್ಣನಂಥವರಿಗೆ ಮಂತ್ರಿಪದ ಹೋದರೆ ಗತಿಯೇನು ? ಇಂಥಾ ದುರಾತ್ಮರಿಗೆ ದಿಃಕ್ಕಾರವಿರಲಿ (ಎಂದು ಹೋಗುವನು).

===***===***===

ಪ್ರವೇಶ ೪

ಸ್ಥಳ : (ಬಿಜ್ಜಳ ಮಹಾರಾಜನ ಒಡ್ಡೋಲಗ. ತೆರೆವಾದ ಮಂತ್ರಿ ಸ್ಥಳದ ಬಗ್ಗೆ ಶೆಟ್ಟರು ಭಟ್ಟರು ಮತ್ತು ಮಂಚಣ್ಣಾದಿ ಮಂತ್ರಿಗಳೊಡನೆ ಚರ್ಚಿಸುವುದು).

ಸ್ತುತಿಪಾಠಕರು : ಪರರಾಜ ನಿಸ್ತೇಜ ರಿಪುರಾಯ ಮೇಘ ಜಂಝಾನಿಲ, ಪರ ಪಂಥಿ ಪನ್ನಗ ವೈನಿತೇಯ ಬಿರುದಂಕ ರಾಯಪಣಿಕುಲ ಗರುಡ, ಅದಟರಾಯಗಂಡ, ಬೇಡಿದವರವರ್ಗಿಇವ ಗುರುದಾನರಾಧೇಯ, ಶರನಿಧಿ ಸಮಾನ ಭಾಸುರ ಮಹಾಗಂಭೀರ ಶರಣಾಗತಾನಂದ ಚ್ಯೂತವನಚೈತ್ರ ಭೂವರಶಿಖಾಮಣಿ ಬಿಜ್ಜಳಭೂಪ ನಿನಗೆ ಬ್ರಹ್ಮಾಯು ಜೀಯ ಬಹುಪರಾಕ (ಇಂತು ಸ್ತುತಿಸುವಾಗ್ಯೆ ಬಿಜ್ಜಳನು ಬಂದು ಸಿಂಹಾಸನಾರೂಢನಾಗುವದು).

ಬಿಜ್ಜಳ : ಮಂತ್ರಿ ವರ್ಗವೆ ಮತ್ತು ಪಂಡಿತರೆ ತೆರವಾದ ಬಲದೇವ ಮಂತ್ರಿಯ ಸ್ಥಾನಕ್ಕೆ ಅರ್ಹತೆಯುಳ್ಳ ವ್ಯಕ್ತಿಯನ್ನು ಪರಿಶೋಧಿಸಬೇಕಲ್ಲವೆ ?

ಶೆಟ್ಟರು : ಹೂಂ ಮಂಚಣ್ಣನವರೇ ನಿಮ್ಮ ಕಾರ್ಯ ---

ಭಟ್ಟರು : (ಮಾತಾಡಲು ಹೆದರಿ ನಿರಿಚ್ಛೆಯ ಸೊನ್ನೆಯನ್ನು ಮಾಡುವದು).

ಬಿಜ್ಜಳ : ಏನು ಮಂಚಣ್ಣನವರೇ ನಿಮ್ಮ ವಿಚಾರ ?

ಮಂಚಣ್ಣ : ಏನಿಲ್ಲ ಪ್ರಭೋ (ಎಂದು ಅನುಮಾನಿಸುವದು).

ಬಿಜ್ಜಳ : ಹೇಳಿ ಏನದು ನಿಮ್ಮಭಿಪ್ರಾಯ ? ಸಂಕೋಚವೇಕದಕೆ ?

ಮಂಚಣ್ಣ: ಅಂದರೆ ಆ ಮಂತ್ರಿ ಪದದ ಅರ್ಹತೆಯುಳ್ಳವರು, ನಮ್ಮೀ ಮಂತ್ರಿಮಂಡಲದಲ್ಲಿ ಯಾರು-------

ಬಿಜ್ಜಳ: ಇಲ್ಲವೆಂದೇ ನನ್ನ ಅಭಿಮತ. ಆ ಪ್ರಾಧಾನಿ ಪಟ್ಟವನ್ನು ನೀವು ಬಯಸಿರುವಿರೇನು ?

ಮಂಚಣ್ಣ : ಇಲ್ಲ ಇಲ್ಲ ಮಹಾರಾಜರೇ ಸುಮ್ಮನೆ ನಾನು ಚರ್ಚೆ---

ಶೆಟ್ಟರು: ಅಲ್ಲ ಮಂಚಣ್ಣನವರೇ ಕಾಗೆಯು ಅರಮನೆಯ ಉಪ್ಪರಿಗೆಯ ಮೇಲೆ ಕುಳಿತರೆ ಗರುಡಾಗಬಲ್ಲದೆ ? ಪ್ರಧಾನಮಂತ್ರಿಯ ಕೆಲಸವೆಂದರೆ ಸಾಮಾನ್ಯವಾದುದೆಂದು ತಿಳಿದಿರುವಿರೇನು ?

ಬಿಜ್ಜಳ : ಇರಲಿ ಶೆಟ್ಟರೇ ಕುಳಿತುಕೊಳ್ಳಿ, ಇದೋ ಎಲ್ಲರು ಇತ್ತ ಗಮನ ಕೊಡಿ. ನಮ್ಮ ರಾಜ್ಯದಾಡಳಿತೆಯ ಕಾರ್ಯ ನಿರ್ವಹಣ ಶಕ್ತಿಯುಳ್ಳ ಬಲದೇವನಂಥ ಸಮರ್ಥರು ನಮ್ಮ ಮಂತ್ರಿಮಂಡಲದಲ್ಲಿಲ್ಲ. ಮಳೆಯಿಂದ ಸಕಲ ಸಸ್ಯಾದಿಗಳ, ಕುಸುಮ ಪರಿಮಳದಿಂದ ದುಂಬಿಗಳ ಸುಪುತ್ರರಿಂದ ಇಹ ಪರಂಗಳ ಸುಖವು ಹೆಚ್ಚುವಂತೆ, ರಾಜನೀತಿ ನಿಪುಣತೆಯುಳ್ಳ ಮಂತ್ರಿ ತಿಲಕನಿಂದ ಅವನಿಪಂಗೈಶ್ವರ್ಯವು ವೃದ್ಧಿಂಗತಮಪ್ಪದು. ತನ್ಮೂಲಕ ಅಂತಹ ಮೇಧಾವಿಯನ್ನು ಶೋಧಿಸುವದೇ ನಮ್ಮದೀಗಿನ ಕರ್ತವ್ಯ. ಯಾರದು ?

ಚಾರವ : ಮಹಾಪ್ರಭೋ ?

ಬಿಜ್ಜಳ : ಏನು ವಾರ್ತೆ ?

ಚಾರವ : ತಮ್ಮ ಆಜ್ಞೆಯಂತೆ ಆ ಮಾತಿನ ಬಗ್ಗೆ ಪರಿಶೀಲನೆ ಮಾಡಿತು ಪ್ರಭೋ

ಬಿಜ್ಜಳ : ಅಲ್ಲವೆ ? ಏನಾಯಿತು?

ಚಾರವ: ಪ್ರಭೋ ಬಲದೇವ ಮಂತ್ರಿಯ ವಂಶಜರಲ್ಲಿ ಪ್ರಧಾನಿ ಕೆಲಸ ಮಾಡುವಂಥವರು ಯಾರೂ ಇಲ್ಲವಂತೆ. ಆದರೆ ಅವರ ಅಳಿಯಂದಿರಾದ ಬಸವೇಶ್ವರರು ಮಾತ್ರ ಆ ಕೆಲಸ ನಿರ್ವಹಿಸಲು ಸಮರ್ಥರಿದ್ದಾರಂತೆ. ಈಗ ಅವರು ಇರುತ್ತಿರುವದು ಕಪ್ಪಡಿ ಸಂಗಮನಾಥನಲ್ಲಿ ಅವರು ತಮ್ಮ ಆತ್ಮವಿಕಾಸ ಮಾಡಿಕೊಂಡು ಶ್ರೀ ಸಂಗಮನಾಥನನ್ನು ಸಾಕ್ಷತ್ಕರಿಸಿಕೊಂಡಿದ್ದಾರೆಂದೂ ದಯಾ ಮಯೆಯುಳ್ಳ ಅವರು, ಪ್ರಾಧಾನಿ ಕೆಲಸ ನಿರ್ವಹಿಸಲು ಸಮರ್ಥರಿರುವರೆಂದು ತಿಳಿದು ಬಂದಿದೆ ಪ್ರಭೋ---

ಬಿಜ್ಜಳ: ಅಹುದು ಆ ಬಸವೇಶ್ವರರು ನಿಸ್ವಾರ್ಥಿಗಳು. ಪವಿತ್ರ ನಡೆಯುಳ್ಳುವರು ದಯಾದ್ರ ಹೃದಯಿಗಳು. ಎಂಬುವ ವದಂತಿಯನ್ನು ನಾನಾದರೂ ಕೇಳಿ ಬಲ್ಲೆ. ನಿಜ ಅಂಥವರಿಂದಲೇ ಪ್ರಜೆಗಳ ಪುತ್ರವತ್ಪರಿಪಾಲನೆ ಯಾಗುವದು ಖಂಡಿತ. ಈ ಬಲದೇವ ಮಂತ್ರಿಯ ಸ್ಥಾನಕ್ಕೆ ಆ ಬಸವೇಶ್ವರರನ್ನು ತರಿಸುವದೇ ಸೂಕ್ತವೆಂದು ನನಗನಿಸಹತ್ತಿದೆ. ನಿಮ್ಮದಿದಕ್ಕಭಿಪ್ರಾಯವೇನು ?

ಸಭಿಕರೆಲ್ಲ : ಪರವಾ ಇಲ್ಲ ಪರವಾ ಇಲ್ಲ. ಆ ಬಸವೇಶ್ವರರನ್ನೇ ಪ್ರಧಾನಿ ಪಟ್ಟಕ್ಕೇರಿಸಬೇಕು ಮಹಾಪ್ರಭೋ

ಬಿಜ್ಜಳ : ಇದಕ್ಕೆ ನಿಮ್ಮ ಹೃತ್ಪೂರ್ವಕವಾದ ಒಪ್ಪಿಗೆಯಲ್ಲವೆ ?

ಸಭಿಕರೆಲ್ಲ : ನಿಸ್ಸಂದೇಹ ನಿಸ್ಸಂದೇಹ

ಬಿಜ್ಜಳ : ಚೆನ್ನಾಯಿತು ಈಗ್ಗೆ ಸಭೆಯನ್ನು ವಿಸರ್ಜಿಸಿರಿ. ಮಂಚಣ್ಣನವರೇ ಆ ಬಸವಣ್ಣನವರನ್ನು ಆದರೋಪಚಾರದಿಂದ ಕರೆತರುವ ಹಾಗೆ ಅಪ್ಪಣೆ. ಪಡಿಹಾರಕ್ಕೆ ಕಳುಹಿಕೊಡಿ.

(ತೆರೆಯ ಮುಂದೆ ಬಂದು).

ಪದ : **ರಾಗ : ಶಂಕರಾಭರಣ. ತ್ರಿತಾಳ.**

ವರಮುಕ್ತಿ ಸೌಭಾಗ್ಯದಾತಾ ।
ಪ್ರಾರ್ಥಿಪೆ ತವಪದ ಸಂಗಮನಾಥಾ ॥ ಪಲ್ಲ ॥
ವಿಶ್ವಪಾಲ ಪ್ರೇರೇಪಿಸು ದಯದಿ ।
ಬಸವಾರ್ಯನು ಆಗಮಿಸುವ ತೆರದಿ ।
ಗೈದು ಪ್ರಮುಖ ಅಮಾತ್ಯಾನಾತನಾ ।
ಜಯ ಪಡೆಯುವೆ ಪೊರೆಯುತ ಪ್ರಜೆಗಳನಾ ॥

===*****=====*****====

ಪ್ರವೇಶ ೫

(ಸ್ಥಳ : ಕಪ್ಪಡಿ ಸಂಗಮನಾಥನ ದೇವಾಲಯ ಬಸವಣ್ಣನು ಧ್ಯಾನಮುದ್ರಾ ನಿದ್ರೆಯೊಳಿರುವದು).

ಸಂಗಮದೇವ :– ಎಲೆ ಮಗನೆ ಬಸವಣ್ಣ ಬಸವದೇವ, ನಿನ್ನಂ ಮಹೀತಳದೋಳ್ ಮೆರೆದಪೆವು. ನೀನು ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು ಕಂಡೆಯಾ.

ಬಸವೇಶ್ವರ : (ನಿದ್ರೆ ತಿಳಿದೆದ್ದು) ಇದೇನಚ್ಚರಿ! ನೀನೆಲ್ಲಿಯೂ ಪೋಗಬೇಡ. ನಿನಗಾವುದೂ ಚಿಂತೆಬೇಡ. ನೀನಿಲ್ಲಿ ಪದುಳದಿಂದಿರೆಂದು ನನಗೆ ಅಭಯಪಿತ್ತ ಸಂಗಮನಾಥನು ಈಗ್ಗೆ ನನಗೆ ಮಂಗಳವಾಡಕ್ಕೆ ಪೋಗಬೇಕೆಂದು ಸ್ವಪ್ನ ಸೂಚನೆ ಮಾಡಿದನಲ್ಲ ! ಲೇಸಾಯ್ತು. ಅರ್ಚಿಸಿದ್ದಕ್ಕೆ ಒಳ್ಳೆ ಫಲವಾಯ್ತು ಸಂಗಮನಾಥ. ಹೊದ್ದಿದರಂ ಹೋಗೆಂಬರೆ ? ನಂಬಿದವರ ಗೋಣ ಕೊಯ್ವರೆ ? ನನ್ನಲ್ಲೇನಾದರೂ ಲೋಪದೋಷಗಳಂ ಕಂಡಿರುವೆಯಾ ಹೇಳು. ಕಂಡಿದ್ದರೂ ಕ್ಷಮಿಸುವದು ನಿನ್ನ ಧರ್ಮ.

ವಚನ : **ರಾಗ : ಬಹಾರ, ತ್ರಿತಾಳ**

ಮೇರುಗುಣವನರಸುವುದೆ ಕಾಗೆಯಲ್ಲಿ ।
ಪರುಷ ಗುಣವನರಸುವುದೆ ಕಬ್ಬುನದಲ್ಲಿ ?
ಸಾಧು ಗುಣವನರಸುವದೆ ಅವಗುಣಿಯಲ್ಲಿ ।
ಚಂದನ ಗುಣವನರಸುವುದೆ ತರುಗಳ ।
ಸರ್ವಗುಣ ಸಂಪನ್ನ ಲಿಂಗವೆ? ನೀನೆನ್ನಲ್ಲಿ ।
ಅವಗುಣನರಸುವುದೆ ಕೂಡಲಸಂಗಮದೇವಾ?

ಸಂಗಮನಾಥಾ ನನ್ನಂ ಏಕೆ ತ್ಯಾಜಿಸುತ್ತಿರುವೆ ? ನಿನ್ನಂ ಅಗಲುವದೆಂದರೆ ನನ್ನ ಪಂಚಪ್ರಾಣಗಳು ಹೋದಂತೆಯೇ. ದೇವಾ ಕರುಣಿಸು ಪರಮಾತ್ಮಾ. ನಾನೇನಂಥ ಅಪರಾಧಗೈದಿರುವೆ ? ದಯೆದೋರು ಅನಾಥನಾಥ!

ಗಗನದಿಂದಿಳಿವಂಗೆ ಆಧಾರವಾಗುತ್ತಾ ತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತಾ ಮಾಣ್ಬರೆ ? ಸಹಿಸೆ ಸಹಿಸೆದೇವಾ. ಸಹಿಸೆ ನಿನ್ನ ವಿರಹದಿಂದುಂಟಾಗುವ ಅನುತಾಪ, ನಾನೆಂತು ಸಹಿಸಲಿ ! ದಯಾನಿಧೇ ಹುಟ್ಟಿಸುವ ಅಭವ ನೀನೆ. ರಕ್ಷಿಸುವ ಮೃಢನೀನೆ. ಪುಟ್ಟಿತೆಲ್ಲವನರೆದು ಸಣ್ಣಿಸುವ ಹರನೀನೆ. ದೇವಾ ಹಾಲೊಳದ್ದು ನೀರೊಳದ್ದು.

ವಚನ : **ರಾಗ : ದೇಸ, ತ್ರಿತಾಳ**

ತಂದೆ ನೀನು । ತಾಯಿ ನೀನು ।
ಬಂಧು ನೀನು । ಬಳಗ ನೀನು ।
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ, ।
ಕೂಡಲಸಂಗಮದೇವಾ
ಹಾಲಲದ್ದು, ನೀರಲದ್ದು
(ಎಂದು ನಮಿಸಿರುವದು).

ಸಂಗಮೇಶ : ಎಲೆ ಕಂದ ಬಸವಣ್ಣ ನಿನಗಿನಿತು ನಿರೋಧವೇಕೆ ? ಬೇಡೆನ್ನ ಭಕ್ತಿ ನಿಧಿಯೆ. ನಿನ್ನಗಲಿ ನಾನಿರಲಾರ್ಪೆನು. ನೀನಿಂತಳುತಿರೆನಗರಿದು ನೋಡು ಬಸವಣ್ಣ. ನೀನು ವ್ಯಥೆಪಡದೆ ಕಲ್ಯಾಣಕ್ಕೆ ತೆರಳು. ನಾನುಂ ನಿನ್ನ ಹಿಂದುಗೊಂಡೇ ಬಪ್ಪೆ ಎನ್ನ ಸುಕೃತದ ಸುಧೆಯೇ ಚಿಂತಿಸದೆ ಪೋಗು. ನೀನು ನೆನೆಯೆ ಮುಂದಿರ್ದಪೆಂ. ಕರೆದೊಡೋ ಎಂದಪೆಂ. ನಿನಗಾವುದಂ ಚಿಂತೆ ಬೇಡ. ನಿನಗೆ ನಾನುಮೊಂದು ಸಂಕಟ ಸಮಯ ಬರೆ, ನಾನಾಗಲೆ ಐತಂದು ಅದೆಲ್ಲವಂ ಪರಿಹರಿಸುವೆಂ. ಮನದಳಲಂ ತೊರೆದು ನಡೆಯಯ್ಯ ನಡೆ ಮಗನೆ ಕಂದ ಬಸವಣ್ಣ. ಕಲ್ಯಾಣ ಪುರವಂ ಪ್ರವೇಶಿಸು. ಮತ್ತಂ ನೀನಲ್ಲಿ ಭಕ್ತರ ಬಂಧುವಾಗಿ ಶರಣರ ಪರುಷದ ಖಣಿಯಾಗಿ ನಿತ್ಯ ಸುಖಿಯಾಗಿ ಪ್ರತ್ಯಕ್ಷಂಗಳಂ ತೋರಿ ನಿನ್ನ ಬಾಳನ್ನು ಬೆಳಗಿಸಬೇಕು ಬಸವಣ್ಣ . ಇದು ನನ್ನ ಪರಮಸಂದೇಶ. ಇದು ನಂಬಿ ನೀನೀಗಲೇ ಕಲ್ಯಾಣದತ್ತಭಿಮುಖವಾಗಿ ಬಿಡು ಬಸವ (ಎಂದು ಹೇಳಿ ಮೈಗೆರೆಯುವದು).

ಬಸವಣ್ಣ : ಅಕ್ಕ ಬಾ ! ಸಂಗಮನಾಥ ಮತ್ತೆ ಮತ್ತೆ ಪೋಗೆಂದು ಸೂಚಿಸುತ್ತಾನಲ್ಲ! ಚತುರ್ದಶ ಭುವನಗಳೆಲ್ಲ ಈತನ ಇಚ್ಛಾನುವರ್ತಿಂಯವಾಗಿ ನಡೆಯುತ್ತಿರುವಲ್ಲಿ ನಾನೀತನ ಅನುಜ್ಞೆಯನ್ನು ವಿರೋಧಿಸಲು ಸಮರ್ಥನೆ ? ಉಪಾಯವಿಲ್ಲ ಕರುಣಾಕರಾ ಸಂಗಮಾನಾಥಾ. ಈ ನಿನ್ನ ದಾಸನ ಮೇಲೆ ಕೃಪೆಯಿರಲಿ. ನಿನ್ನಾಜ್ಞಾನುಸಾರವಾಗಿ ನಾನೀಗ ಕಲ್ಯಾಣ ಪುರವಂ ಕುರಿತು ಮಾರ್ಗಸ್ಥನಾಗುವೆ.

ರಾಜಧೂತ: ನಮೋ ನಮೋ ಮಹಾತ್ಮರೇ.

ಬಸವೇಶ್ವರ: ಏಳಿ ಏಳಿ ನಿಮಗೆ ಮಂಗಲವಾಗಲಿ. ನೀವಾರು ಮತ್ತು ನೀವು ಬಂದಿರುವ ಕಾರ್ಯಾರ್ಥವೇನು?

ರಾಜಧೂತರು: ಪೂಜ್ಯರೇ ನಾವು ಕಲ್ಯಾಣಪುರದ ರಾಜಧೂತರು.

ಬಸವೇಶ್ವರ: ಏನು ನೀವು ಆ ಬಿಜ್ಜಳ ಮಹಾರಾಜರ ಕಡೆಯಿಂದ ಬಂದಂಥವರೋ ?

ರಾಜಧೂತರು: ಅಹುದು ಮಹಾಶಯರೇ.

ಬಸವೇಶ್ವರ: ಇರಲಿ ಏನು ವಾರ್ತೆ ?

ರಾಜಧೂತರು: ಮಹಾತ್ಮರೇ ಬಲದೇವ ಮಂತ್ರಿಗಳು ನಿಧಾನವಾದ ನಂತರ ಆ ಪ್ರಧಾನ ಮಂತ್ರಿ ಸ್ಥಳವು ತೆರವಾಗಿದ್ದು, ಇದುವರೆಗೆ ಆ ಸ್ಥಳಕ್ಕೆ ಯಾರು ದೊರೆತಿರುವದಿಲ್ಲ. ಅದಕ್ಕಾಗಿ ಮಂತ್ರಿ ಮಂಡಲದಲ್ಲಿ ಈ ವಿಚಾರವಾಗಿ ಆ ಸ್ಥಳಕ್ಕೆ ತಮ್ಮನ್ನು ನಿಯೋಜಿಸಬೇಕೆಂಬುದಾಗಿ ನಿರ್ಣಯಿಸಿದ್ದಾರೆ. ಮತ್ತು ಅದರಂತೆ ತಮಗೆ ಕರೆಕೊಟ್ಟಿರುವ ಮೂಲಕ ರಾಜಾಜ್ಞೆಯಂತೆ ತಮ್ಮನ್ನು ಆಗಮಿಸಿಕೊಳ್ಳುವ ಉದ್ದೇಶವಾಗಿ ತಮ್ಮ ಸನ್ನಿಧಿಯ ಕಂಡುಕೊಂಡಿದ್ದೇವೆ. ಮಹಾಶಯರೇ (ತೆರೆಯ ಮುಂದೆ ಬಂದು).

ಬಸವಣ್ಣ: ಧನ್ಯ ಧನ್ಯ ಸಂಗಮನಾಥ! ಅಂತೆಯೇ ನನಗೀ ತೆರ ಆಗ್ರಹದ ಅಪ್ಪಣೆಯಾಯಿತಲ್ಲವೆ ? ನಿನ್ನ ಮಾಯದಾಟದ ಲೀಲೆಯನ್ನರಿಯಲಾರಿಗೆ ಸಾಧ್ಯ !

ವಚನ : **ರಾಗ : ಕಾಫಿ. ತ್ರಿತಾಳ.**

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ, ।
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ
ನೀನು ಜಗಕ್ಕೆ ಬಲ್ಲಿದನು, ಆನು ನಿನಗೆ ಬಲ್ಲಿದನು, ಕಂಡಯ್ಯ
ಕರಿಯು ಕನ್ನಡಿಯೊಳಡಗಿದಂತಯ್ಯ ।
ಎನ್ನೊಳಗೆ ನೀನಡಗಿದೆ
ಕೂಡಲಸಂಗಮದೇವಾ ದೇವಾ.

ಕಲ್ಯಾಣ ಪಟ್ಟಣದ ಭವಿಷ್ಯ ಚಿತ್ರವು ಇಂತಿರುವದರಿಂದಲೇ ಕಲ್ಯಾಣಕ್ಕೆ ಹೋಗು ಹೋಗೆಂದು ನೀನು ನನಗೆ ಪೂರ್ವ ಸೂಚನೆ ಮಾಡಿದಿಯಲ್ಲವೆ ? ದೈವಲೀಲೆಯ ವೈಚಿತ್ರ್ಯ. ಕಲ್ಯಾಣ ಪಟ್ಟದ ಕಲಚೂರ್ಯನಾದ ಹೆಸರಾಂತ ಬಿಜ್ಜಳ ಸಾಮ್ರಾಟನ

ಆಸ್ಥಾನದಲ್ಲಿ ಪ್ರಧಾನ ಮಂತ್ರಿ ಪಟ್ಟಕ್ಕೆ ನನ್ನ ಆಯ್ಕೆ ! ಅನಿರೀಕ್ಷಿತವಾಗಿ ಒದಗಿ ಬಂದಿರುವ ಈ ಸನ್ನಿವೇಶದ ಮೇಲಿಂದ ವಿಚಾರಿಸಿದರೆ, ದೇವಕೃಪೆಗೆ ಪಾತ್ರನಾದ ಮಾನವನು ಏನಾಗಲಾರ ! ಮತ್ತು ಏನನ್ನು ಪಡೆಯಲಾರ ! ಎಂಬುವ ಪ್ರಶ್ನೆಯೇ ಉದ್ಭವಿಸುವದಿಲ್ಲವೆ ? ಇರಲಿ ರಾಜಧೂತರೆ ನಿಮ್ಮ ಮಹಾರಾಜರು ನನಗೆ ಕರೆಕೊಟ್ಟಂತೆ, ನಮ್ಮ ಸಂಗಮದೇವರೂ ಕಲ್ಯಾಣ ಪ್ರವೇಶಕ್ಕೆ ಈ ಮೊದಲೇ ಅನುಜ್ಞೆಯಿತ್ತಿದ್ದಾರೆ. ಜಗಚ್ಚಾಲಕನಾದ ಆ ದೇವನ ಇಚ್ಛೆಯಿದ್ದಂತಾಗಲಿ. ನಡೆಯಿರಿ ನಿಮ್ಮ ಮಹಾರಾಜರ ಸನ್ನಿಧಿಯಂ ಕಂಡುಕೊಳ್ಳೋಣ.

===***====***===

ಪ್ರವೇಶ – ೬

(ಸ್ಥಳ : ಬಿಜ್ಜಳ ಮಹಾರಾಜನ ಒಡ್ಡೋಲಗ. ಮಂಚಣ್ಣ, ಮಧುವರಸ ಭಟ್ಟರು ಶೆಟ್ಟರು ಆದಿ ಮಂತ್ರಿವರ್ಗದವರ ಚರ್ಚೆ)

ಮಧುವರಸ : ಯಾಕೆ ಸಭಿಕರೇ ಮಂತ್ರಿ ಪದದ ಬಗ್ಗೆ ಏನಾಯಿತು ತಮ್ಮ ವಿಚಾರ?

ಶೆಟ್ಟರು : ಮಧುವರಸರೇ ಏನು ಹೇಳಬೇಕು, ಮೊನ್ನಿನ ಸಭೆಯಲ್ಲಿ ಆ ವಿಷಯ ಚರ್ಚೆಗೆ ಬಂದಿತ್ತು. ಆದರೆ ಮಂಚಣ್ಣನವರೆ ಮಹಾರಾಜರ ಕೂಡ ವಾದಿಸಲು ಹಿಂದು ಮುಂದಾದರು.

ಮಧುವರಸ : ಅಂದರೆ ಆ ದಿನದ ಚರ್ಚೆಯಲ್ಲಿ ಪ್ರಯತ್ನ ಮಾಡಿದ್ದರೆ ಮಂಚಣ್ಣನವರ ಧ್ಯೇಯ ಸಫಲವಾಗಬಹುದಾಗಿತ್ತೊ ?

ಶೆಟ್ಟರು : ಎಂಥ ಮಾತು ಮಧುವರಸರೆ ಮಂಚಣ್ಣನವರು ಎಂಥೆಂಥ ಕೆಲಸ ಮಾಡಿದ್ದುಂಟು ಇಂಥವರಿಗೆ ಆ ಕೆಲಸ ಅಸಾಧ್ಯವೇನರಿ ?

ಭಟ್ಟರು:– ಅಹುದಹುದು. ಈ ಬಟ್ಟರು ಹೇಳುವಂತೆ ಮಂಚಣ್ಣನವರ ಮುತ್ಸದ್ದಿತನ ಹೇಳತೀರದು. ಯಾಕೆಂದರೆ ಲಂಚರೂಪದಲ್ಲಿ ಪ್ರಜೆಗಳಿಂದ ಅಪಾರವಾದ ಹಣವನ್ನು ಎತ್ತಿ ಹಾಕುತ್ತಿದ್ದರೂ ಇವರ ಮರೆ ಮೋಸದ ಜಾಲದಿಂದಾಗಿ ಮಹಾರಾಜರದು ಇವರ ಮೇಲೆಯೇ ಹೆಚ್ಚಿನ ಪ್ರೇಮ.

ಮಧುವರಸ : ಅಂದ ಮೇಲೆ ಮಂಚಣ್ಣನವರು ಪ್ರಯತ್ನ ಪಟ್ಟಿದ್ದರೆ, ಇವರಿಗೆ ಮಂತ್ರಿ ಪಟ್ಟ ದೊರೆಯುತ್ತಿತ್ತೆಂಬುದು ನಿಮ್ಮ ಗ್ರಹಿಕೆಯೇನು ?

ಸಭಿಕರೆಲ್ಲರು : ಓಹೋ ಅದು ಸತ್ಯವಾಗಿ.

ಮಧುವರಸ : ಇದು ನಿಮ್ಮ ಭ್ರಮೆ.

ಮಂಚಣ್ಣ : ಯಾಕೆ ಮಧುವರಸರೇ ಆ ಮಾತು ನನಗೆ ಸಾಧ್ಯವಿಲ್ಲವೆ ? ನನ್ನಲ್ಲಿ ಮುತ್ಸದ್ದಿತನ ಇಲ್ಲದೆ ಹೋಗಿದ್ದರೆ, ನಾನಿಷ್ಟೊಂದು ಐಶ್ವರ್ಯದ

ಘನತೆಗೇರುತ್ತಿರಲಿಲ್ಲ. ನನ್ನಲ್ಲಿ ಮುತ್ಸದ್ದಿತನವದೆ ಎಂಬುದಕ್ಕೆ ನಾನು ಮಾಡಿಟ್ಟ ಧನ ಸಂಗ್ರಹವೇ ಅದಕ್ಕೆ ನಿದರ್ಶನ ಬಲ್ಲಿರಾ ?

ಶೆಟ್ಟರು : ಹೌದು ಮಂಚಣ್ಣನವರೇ, ನಿಮ್ಮ ಮಾಯಾ ಜಾಲದಲ್ಲಿ ಸಿಲುಕಿದ ಪ್ರಜೆಗಳ ರಕ್ತ ಹೀರಿ ತಿಪ್ಪೆಯು ಉಪ್ಪರಿಗೆಯಾದಂತೆ, ನೀವು ಐಶ್ವರ್ಯದ ಶಿಖರಕ್ಕೆ ಮುಟ್ಟಿದ್ದು ಸತ್ಯ.

ಭಟ್ಟರು : ಶೆಟ್ಟರೆ ಈ ಮಾತು ಎಲ್ಲಾರಿಗೂ ಸಾಧ್ಯವೇನರಿ ? ಅದಕ್ಕೆ ತಲೆಬೇಕು. ಸುಮ್ಮ ಸುಮ್ಮನೆ ಹೀಗೆ ಐಶ್ವರ್ಯ ಬರುವದೇ? ಉಪ್ಪರಿಗೆಯು ತಿಪ್ಪೆಯಾದಂತೆ ಈ ಮಂಚಣ್ಣನವರ ಹೊಡೆತಕ್ಕೆ ಸಿಕ್ಕ ಎಷ್ಟು ಮನೆತನಗಳು ನೆಲಸಮವಾಗಿಲ್ಲ ! ಅದೇನಾದರೂ ನಿಮಗೆ ಗೊತ್ತೆ ?

ಮಧವರಸ : ಅದಿರಲಿ ಬಿಡಿ ಭಟ್ಟರೇ. ಇನ್ನು ಮೇಲೆ ಮಂಚಣ್ಣನವರಿಗೆ ಏನು ಮಾಡಲಿಕ್ಕೆ ಬರುವಂತಿದೆ ! ಆ ಮಂತ್ರಿ ಪದಕ್ಕೆ ಕಪ್ಪಡಿಯಿಂದ ಬಸವೇಶ್ವರರನ್ನು ಕರೆಯಿಸಿಕೊಳ್ಳುವದೂ ಆಗಿ ಹೋಗಿದೆ.

ಶೆಟ್ಟರು : ಮಧುವರಸರೇ ಆ ಬಸವೇಶ್ವರರು ಬಂದರೇನಾಯಿತು ? ಅವರು ಆ ಸಂಗಮನಾಥನಲ್ಲಿದ್ದು ನಾಲ್ಕು ಸ್ತೋತ್ರ ಪದಗಳನ್ನು ಹಾಡಲಿಕ್ಕೆ ಕಲಿತ ಮಾತ್ರದಿಂದ ಮಂತ್ರಿ ಪದಕ್ಕೆ ಸಮರ್ಥರಾಗಬಲ್ಲರೆ ?

ಭಟ್ಟರು : ಏನು ಮಾತರೀ ! ದೇವರ ಪೂಜಾರಿ ಕೆಲಸ ಮಾಡುವ ಆ ಬಸವೇಶ್ವರರು ಮಂತ್ರಿ ಕೆಲಸ ಮಾಡುವದೆಂದರೆ, ಸೂರು ನೀರು ಬೆಂಕಟ್ಟಿಗೇರಿದಂತೆಯೇ ಸೈ. ಯಾಕರಿ ಶಟ್ಟರೆ.

ಶೆಟ್ಟರು : ಕಷ್ಟ ಕಷ್ಟ ಭಟ್ಟರೇ ? ಎಂದಾದರೂ ಸಾಧ್ಯವೇನರಿ ಈ ಮಾತು ! ಆ ಬಸವೇಶ್ವರರಿಗೆ ಏನು ಗೊತ್ತಿದೆ? ತಿಳಿಯಗ್ಗವಣಿ ಪತ್ರಿಪುಷ್ಪ ವಿಭೂತಿ ರುದ್ರಾಕ್ಷಿ ಇವುಗಳು ಮಾತ್ರ ಅವರಿಗೆ ಚನ್ನಾಗಿ ಗೊತ್ತುಂಟು.

ಮಧುವರಸ : ಈ ನಿಮ್ಮ ಚರ್ಚೆಯ ಮೇಲಿಂದ ಆ ಬಸವೇಶ್ವರರಲ್ಲಿ ಮಂತ್ರಿ ಪದಕ್ಕೇರುವ ಅರ್ಹತೆಯೂ, ಕಾರ್ಯನಿರ್ವಹಣ ಶಕ್ತಿಯೂ ಇಲ್ಲವೆಂದೇ ವ್ಯಕ್ತವಾಗುವದಲ್ಲವೆ ?

ಸಭಿಕರೆಲ್ಲ : ಅಹುದಹುದು ಮಧುವರಸರೆ.

ಮಧುವರಸ : ನಿಮ್ಮೆಲ್ಲರಿಗೆ ಪಿಶಾಚಿ ಹಿಡಿದಂತಿದೆ. ಕೇಳಿ ಮೊನ್ನೆ ಮೊನ್ನೆ ಕರಣಿಕರು ಲೆಕ್ಕ ತಪ್ಪಿ ಎಷ್ಟು ಪೇಚಾಡಿದರು. ಅದರ ತಪ್ಪು ಎಲ್ಲಿದೆ ಎಂಬುದನ್ನು ನಿಮಗಾರಿಗೂ ಶೋಧಿಸಲಾಗಲಿಲ್ಲ. ಆದರೆ ಬಸವಣ್ಣನವರು ಆ

ಲೆಕ್ಕವನ್ನೂ ಗಮನಿಸಿದ ನಿಮಿಷ ಮಾತ್ರದಲ್ಲಿ ಕಂಡುಹಿಡಿದು ಲೆಕ್ಕ ಸರಿಪಡಿಸಿ ತೋರಿಸಿದರು. ಆದರೆ---

ಮಂಚಣ್ಣ : ಮಧುವರಸರೆ ನಮಗೆ ಬಾರದ ವಿಷಯ ಅದಾವುದು ? ಆ ಕರಣಿಕರು ತಪ್ಪಿದ ಲೆಕ್ಕವು ನಮಗೆ ತಿಳಿಯದೆ ಹೋಗುವದು ಸಾಧ್ಯವೆ?

ಭಟ್ಟರು : ಅದು ಹೇಗೆ ಹೋಗುತದರಿ ಮಧುವರಸರೆ ? ಇಂಥಿಂಥ ಮೇಧಾವಿಗಳಾದ ನಾವು ಇರುತಿರಲು ಅದು ಹೇಗೆ ಹೋಗತದರಿ ಅದು ಸಾಧ್ಯವೇನರಿ?

ಮಧುವರಸ : ಹಾಗಿದ್ದ ಮಾತ್ರದಲ್ಲಿ ನಿವೇಕೆ ಆ ತಪ್ಪು ಹೇಳಿ ಲೆಕ್ಕ ಸರಿ ಪಡಿಸಲಿಲ್ಲ!

ಮಂಚಣ್ಣ : ಮಧುವರಸರೇ ಈ ವಿಷಯದಲ್ಲಿ ನನ್ನ ಮುತ್ಸದ್ದಿತನ ಪರಮಾವಧಿಗೆ ಮುಟ್ಟುವದಿತ್ತು. ಇದರಲ್ಲಿ ನಾನು ಮಾಡಿದ ಯೋಜನೆಯು ಮಹತ್ವವಾದದ್ದೆ ಇತ್ತು.

ಮಧುವರಸ :– ಹೀಗಿದ್ದಿತಲ್ಲವೆ ? ಏನದು ಅದಾವ ಯೋಚನೆ ಮಾಡಿದ್ದೀರಿ ?

ಮಂಚಣ್ಣ : ಅಂದರೆ ಕರಣಿಕರು ಜಮಾಖರ್ಚಿನಲ್ಲಿ ತಪ್ಪು ಮಾಡಿದ್ದು ಇನ್ನೂ ತುಸು ದಿವಸ ಮಹಾರಾಜರ ಗಮನಕ್ಕೆ ಬಾರದೆ ಹೋಗಿದ್ದರೆ, ಕೆಲವು ಬಾಬತ್ತಿನಲ್ಲಿ ಖರ್ಚು ಹಾಕಿಸಿ ಖಜಾನೆಯಿಂದ ಅಪಾರವಾದ ಹಣವನ್ನು ನನ್ನ ಮನೆಸೇರಿಸಿ ಬಿಡುತ್ತಿದ್ದೆ ಅದಕ್ಕಾಗಿಯೇ ನಾನದನ್ನು ಹೇಳದೆ ಇದ್ದುದು. ಆದರೆ ನನಗೆ ಆ ತಪ್ಪು ತಿಳಿದಿಲ್ಲವೆಂದು. ಮಾತ್ರ ತಿಳಿಯಬೇಡಿ ಮಧುವರಸರೇ.

ಮಧುವರಸ: ಸರಿ ಸರಿ ಒಳ್ಳೆ ವಿಚಾರ. ಇರಲಿ, ಆದರೆ ಮೊನ್ನಿನ ಸಭೆಯಲ್ಲಿ ಬಸವಣ್ಣನವರನ್ನೇ ಮಂತ್ರಿಪದಕ್ಕೆರಿಸಬೇಕೆಂಬುದಾಗಿ ಅಭಿಪ್ರಾಯವನ್ನೇಕೆ ಕೊಟ್ಟಿರಿ ?

ಮಂಚಣ್ಣ: ಮಧುವರಸರೆ ಅದರಲ್ಲಿಯೂ ನನ್ನ ಮುತ್ಸದ್ದಿತನ ಖರ್ಚು ಮಾಡಿಕೊಂಡೇ ಹಾಗೇ ಅಭಿಪ್ರಾಯ ಕೊಟ್ಟಿರುವೆ.

ಭಟ್ಟರು: ಅಹುದು ಮಧುವರಸರೆ, ಮಹಾರಾಜರ ಅಭಿಪ್ರಾಯಕ್ಕೆ ಸಮ್ಮತಿಯನ್ನು ಕೊಟ್ಟು ಅವರ ಪ್ರೇಮ ಸಂಪಾದನೆ ಮಾಡಿ, ಮರೆ ಮೋಸದಿಂದ ಖಜಾನೆಯಿಂದ ಹಣವನ್ನು ಹೊತ್ತು ಹಾಕುವದೇ ಇವರ ಗುರಿಯಾಗಿತ್ತು.

ಮಧುವರಸ : ಏನಾದರೂ ಆಗಲಿ. ಎಣ್ಣಿಯೂ ಇಲ್ಲ ತುಪ್ಪವೂ ಇಲ್ಲ ಎಂಬುವಂತೆ

ನಿಮ್ಮ ವಿಚಾರಗಳೆಲ್ಲವೂ ಗಾಳಿ ಗೋಪುರವಾಗಿ ಪರಿಣಮಿಸಿದವು ಆ ಬಸವೇಶ್ವರರು ಕರಣಿಕರು ತಪ್ಪಿದ ಲೆಕ್ಕ ಸರಿಪಡಿಸಿ ತೋರಿಸಿದ್ದಕ್ಕಾಗಿ, ಅವರ ಬಗೆಗೆ ಮಹಾರಾಜರು ಬಹಳ ಸಂತುಷ್ಟರಾಗಿದ್ದಾರೆ. ಅಲ್ಲದೆ ಅದಕ್ಕಾಗಿ ಅವರನ್ನು ಗೌರವಿಸುವ ನಿಮಿತ್ಯ ಈಗವರನ್ನಲ್ಲಿಗೆ ಬರ ಮಾಡಿಕೊಳ್ಳಲು ಕರೆಕೊಟ್ಟಿದ್ದಾರೆ.

(ಇಲ್ಲಿ ಸ್ತುತಿ ಪಾಠಕರು ಘೋಷಿಸುತ್ತಿರುವಾಗ್ಗೆ ಬಿಜ್ಜಳ ಮಹಾರಾಜನು ಬಂದು ಸಿಂಹಾಸನಾರೂಢನಾಗುವದು).

ಮಂಚಣ್ಣ: ಹೂಂ ಚರ್ಚೆಯನ್ನು ಸಾಕು ಮಾಡಿರಿ. ಅದೋ ಮಹಾರಾಜರ ಆಗಮನವಾಗುತ್ತಲಿದೆ.

ಬಿಜ್ಜಳ : (ಸಿಂಹಾಸನವೇರಿ) ಪಂಡಿತ ಮತ್ತು ಮಂಚಣ್ಣಾದಿ ಮಂತ್ರಿವರ್ಗದವರೆ ನೋಡಿದಿರಲ್ಲವೆ ! ಬಸವೇಶ್ವರರ ಮೇಧಾವಿತನದ ಶಕ್ತಿಯನ್ನು ನೀವೆಲ್ಲರೂ ಬಹುದಿವಸದ ಅನುಭವಿಕರು. ಅದಾಗ್ಯೂ ಕೂಡ ಗಣಕರು ತಪ್ಪಿದ ಲೆಕ್ಕದ ಶೋಧವು ನಿಮಗಾಗಲಿಲ್ಲ. ಅದನ್ನು ಆ ಬಸವೇಶ್ವರರು ನಿಮಿಷಾರ್ಧದಲ್ಲಿ ಶೋಧಿಸಿದರೆಂದರೆ ಅವರ ಪ್ರತಿಭೆಯು ಎಂಥದಿರಬೇಕು ? ಇದರ ಮೇಲಿಂದಲೇ ಅವರು ಪ್ರಧಾನಮಂತ್ರಿ ಪದಕ್ಕೇರಿ ಕಾರ್ಯನಿರ್ವಹಣೆ ಮಾಡಬಲ್ಲರೆಂಬ ಮಾತು ಸ್ಪಷ್ಟೀಕರಿಸುವದಿಲ್ಲವೆ ?

ಸಭಿಕರೆಲ್ಲ : ನಿಸ್ಸಂದೇಹ ನಿಸ್ಸಂದೇಹ.

ಚಾರವರು : ಮಹಾರಾಜರೆ ಬಸವೇಶ್ವರರ ಆಗಮನವಾಗುತ್ತಲಿದೆ.

ಬಿಜ್ಜಳ : (ಸಿಂಹಾಸನದಿಂದೇಳುತ್ತಾ) ಬಂದರೆ ಬಸವೇಶ್ವರರು ! (ಒಂದು ಆಸನವನ್ನು ತೋರಿಸಿ) ಬನ್ನಿ ಬಸವೇಶ್ವರರೇ ಕೂತುಕೊಳ್ಳಿ. ಬಸವೇಶ್ವರರೇ ನಿಮ್ಮ ಮಾವಂದಿರಾದ ಬಲದೇವ ಮಂತ್ರಿಗಳು ನಿಧನವಾದಂದಿನಿಂದ ನಮ್ಮ ಆಸ್ಥಾನವು ಚಂದ್ರನಿಲ್ಲದ ಆಕಾಶದಂತೆ ನಿಸ್ತೇಜವಾಗಿತ್ತು. ಸೂರ್ಯನುಗಮದಿಂದ ಚರಾಚರಾ ವಸ್ತುಗಳೆಲ್ಲವೂ ಚೇತರಿಸಿಕೊಳ್ಳುವಂತೆ, ಈಗ್ಗೆ ತಮ್ಮ ಆಗಮನದಿಂದಾಗಿ ನಮ್ಮೆಲ್ಲರಿಗೆ ನವಚೈತನ್ಯವು ಬಂದು, ನಮ್ಮೊಡ್ಡೋಲಗವೇ ಕಳೆಗೊಂಡಿತು.

ಬಸವೇಶ್ವರ : ಮಹಾರಾಜರೇ ನನ್ನಲ್ಲೇನಷ್ಟೊಂದು ಅರ್ಹತೆಯುಂಟು ! ಇಷ್ಟೊಂದು ನನ್ನನ್ನು ಗೌರವಿಸಲಿಕ್ಕೆ? ನಾನೇನೋ ಭಕ್ತರ ಭಕ್ತ. ಲೆಂಕರ ಲೆಂಕ.

ಬಿಜ್ಜಳ : ಇಲ್ಲ ಬಸವೇಶ್ವರನೆ ನಿಮ್ಮಲ್ಲಿ ಅರ್ಹತೆಯುಂಟು. ನಿಮ್ಮಲ್ಲಿ ಒಂದು

ಬಗೆಯ ದಿವ್ಯ ತೇಜಸ್ಸಿದೆ ಎಂಬುದನ್ನು ನನ್ನ ಅಂತರ್ವಾಣಿಯು ನನಗೆ ವ್ಯಕ್ತಪಡಿಸುತ್ತಿದೆ. (ಇಲ್ಲಿ ಆಕಾಶದಿಂದ ತಾಮ್ರ ಪಟವು ಬೀಳುವದು. ಅದನ್ನು ನೋಡಿ) ಇದೇನಚ್ಚರಿ ! ಆಕಾಶದಿಂದ ಬಿದ್ದುದೇನದು ! ತೆಗೆದುಕೊಳ್ಳಿ ?

ಚಾರವ : (ಆ ಪಟವನ್ನೊಯ್ದು ಅರಸನಿಗೆ ಕೊಡುವದು).

ಬಿಜ್ಜಳ : (ನಿರೀಕ್ಷಿಸಿ) ಇದೊಂದು ಬಗೆಯ ಲಿಖಿತ ಪಟವು. ಇದರೊಳಗಿನ ಲಿಪಿಯನ್ನು ನೋಡಿದರೆ ವಾತ್ರ ಚಿತ್ರ ವಿಚಿತ್ರ. ಇದರ ಬಗ್ಗೆ ಧೀರ್ಘಾಲೋಚನೆ ಮಾಡಿದರೆ, ಇದೇನು ಶಿವಲಿಪಿಯೋ ಎಂದು ಊಹಾಪೋಹ ಮಾಡಬಹುದಾಗಿದೆ. ಒಂದು ಸಮಯ ಇದು ಹಾಗಿದ್ದ ವಾತ್ರದಲ್ಲಿ, ಒಂದು ಬಗೆಯು ನನ್ನ ಉಜ್ವಲ ಭವಿಷ್ಯವು ಕಾಯ್ದುಕೊಂಡಿರುವದೆಂದೇ ಹೇಳಬೇಕು. ಇದೋ ಪಂಡಿತರೇ ತೆಗೆದುಕೊಳ್ಳಿ. ತೆಲಗು ಲಿಪಿ ನಾಗರ ಲಿಪಿ ಹಳಗನ್ನಡ ಲಿಪಿ, ಗ್ರಂಥ ಲಿಪಿ, ದ್ರಾವಿಡ ಲಿಪಿ ಮೊದಲಾದ ಹಲವು ಲಿಪಿಗಳನ್ನು ಓದಬಲ್ಲ ನಿಷ್ಣಾತರು ನೀವು. ನೋಡಿ ಈ ಶಿವಲಿಖಿತವನ್ನು ಪರಿಶೀಲನೆ ಮಾಡಿ (ಎಂದು ಪಂಡಿತರ ಕೈಯಲ್ಲಿ ಕೊಡಿಸುವದು).

೧ನೇ ಪಂಡಿತ: (ಲಿಪಿಯನ್ನು ತಿರುವು ಮುರುವಾಗಿ ನೋಡುತ್ತಾ) ಪ್ರಭೋ ಇದು ದೇವಲಿಪಿಯಿರಬಹುದೆಂದು ಹೇಳಿದಿರಲ್ಲವೆ?

ಬಿಜ್ಜಳ: ಅಹುದು. ಇದಕ್ಕೆ ನಿಮ್ಮದೇನಾದರೂ ಅಕ್ಷೇಪವುಂಟೋ?

೧ನೇ ಪಂಡಿತ: ಅಹುದು ಪ್ರಭೋ ಅದೇನೆಂದರೆ ಈ ಲೇಖವನ್ನು ಒಮ್ಮೆ ನೋಡಿದರೆ ಕನ್ನಡದಂತೆ ಕಾಣುತ್ತದೆ. ಇದನ್ನೇ ಮತ್ತೊಂದಾವರ್ತಿ ನೋಡಿದರೆ ತೆಲಗಿನಂತೆ, ಮಗದೊಂದಾವರ್ತಿ ಮಲಿಯಾಳದಂತೆ ತೋರುತ್ತೆ. ಇದರ ಮೇಲಿಂದ ಪ್ರಭೋ ವಿಚಾರ ಮಾಡಿದರೆ ಇದು ದೇವಲಿಪಿಯಾಗಿರದೆ ದೆವ್ವಿನ ಲಿಪಿಯಾಗಿರಬೇಕೆಂಬುದೇ ನನ್ನ ಸಿದ್ಧಾಂತ.

ಬಿಜ್ಜಳ: ಅಂತೂ ನಿಮಗದರರ್ಥವಾಗುವದಿಲ್ಲವಷ್ಟೆ ?

೧ನೇ ಪಂಡಿತ: ಏನಾಗಬೇಕು ಪ್ರಭೋ ಇದು ದೆವ್ವಿನ ಮಾಯದಾಟ !

ಬಿಜ್ಜಳ ; ಸರಿ ಸರಿ ಒಳ್ಳೆ ದೂರ್ತ ವಿಚಾರ ! ಇದು (ಎರಡನೆ ಪಂಡಿತನಿಗೆ ಸೂಚಿಸಿ), ಪಂಡಿತರೆ ನೀವು ನೋಡಿ ನಿಮಗೇನಾದರೂ ಅರ್ಥವಾಗುವದೋ ಪರಿಶೀಲನೆ ಮಾಡಿ

೨ನೇ ಪಂಡಿತ: (ಲಿಪಿಯನ್ನು ನೋಡುತ್ತಾ) ಅಲ್ಲಾ ! ಇದನ್ನು ಹೇಗೆ ಹಿಡಿದು ಓದಬೇಕೆಂಬುದೇ ಮೊದಲು ನನಗೆ ತಿಳಿಯಲೊಲ್ಲದಲ್ಲ ! ಅಲ್ಲಾ ! ಇದೇನು ಅಕ್ಷರಗಳೋ ? ಅಕ್ಷರಗಳ ಸಾಲುಗಳೋ ? ಏನಿದೆ ಇದರಲ್ಲಿ ಅರ್ಥ? (ವಿಚಾರಿಸಿ) ಹಾ ಇದು ಹೀಗಿರಬೇಕು. ಈ ಓಲೆಯು ಆಕಾಶದಿಂದ ಬಿದ್ದಿರುವದೇನೋ ನಿಜ. ಇದು ಆಕಾಶದಿಂದ ಬೀಳುವಾಗ್ಯೆ ಸೂರ್ಯನ ಕಿರಣಗಳ ಕೊರೆತದಿಂದ ಈತೆರ ಗೀರು ಬಿದ್ದಿರಬೇಕು ಇಷ್ಟೇ. ಇದರಲ್ಲೇನು ತಥ್ಯವಿದೆ ? ಏನೇನೂ ಇರುವದಿಲ್ಲ.

ಬಿಜ್ಜಳ : ಯಾಕೆ ಪಂಡಿತರೆ ? ನಿಮಗೇನೂ ಅರ್ಥವಾಗುವದಿಲ್ಲವೆ ?

ಪಂಡಿತ : ಏನು ಅರ್ಥವಾಗಬೇಕು ಪ್ರಭೋ. ಈ ಪತ್ರವೇ ಮೊದಲು ವ್ಯರ್ಥವಾದದ್ದಿದೆ.

ಬಿಜ್ಜಳ : ತಿಳಿದಂತಾಯಿತು ಇರಲಿ. ಮಧುವರಸರೇ ನೀವು ನೋಡಿ.

ಮಧುವರಸ : (ಲಿಪಿ ತಕ್ಕೊಂಡು ನೋಡಿ) ಇದು ತೆಲಗು ಲಿಪಿಯೇ ಅಲ್ಲಲ್ಲ ಮಲಿಯಾಳ ಲಿಪಿಯೆನ್ನೋಣವೇ ? ಅದೂ ಅಲ್ಲ. ಏನಿದು ? ನಾಗರಲಿಪಿಯಿರಬಹುದೆ ? ಊಹು. ಅದಕ್ಕೂ ಇದು ಸರಿ ಹೋಗುವಂತಿಲ್ಲ. ಏನಿದು ಲಿಪಿಯಿರುವದೋ ಅಥವಾ ಯಾರದಾದರೂ ಕಪಿಚೇಷ್ಟೆಯಿರುವದೋ ಯಾರಿಗೆ ಗೊತ್ತು.

ಬಿಜ್ಜಳ : ನಿಮಗಾದರೂ ಆ ಲಿಪಿಯ ತತ್ವ ಗೊತ್ತಾಗಲಿಲ್ಲವೆ ?

ಮಧುವರಸ : ತತ್ವವಾಗಲಿ, ತಥ್ಯವಾಗಲಿ, ಇದರಲ್ಲಿ ನನಗಂತೂ ಇದ್ದಂತನಿಸುವದಿಲ್ಲ ಪ್ರಭೋ.

ಬಿಜ್ಜಳ : ಪರವಿಲ್ಲ ಪರವಿಲ್ಲ. (ಮಂಚಣ್ಣನನ್ನು ನೋಡಿ) ನೀವು ನೋಡಿ ನಿಮಗೇನಾದರೂ ಆ ಲಿಪಿಯ ಗರ್ಭಿತಾರ್ಥದ ತಿರುಳು ತಿಳಿಯುವದೋ ಹೇಗೆ ?

ಮಂಚಣ್ಣ : (ಲಿಪಿಯನ್ನು ಪರಿಶೀಲಿಸಿ) ಏನಿದೆ ಈ ಲಿಪಿಯಲ್ಲಿ ? ಇದು ಲಿಪಿಯೆ! ಇವು ಅಕ್ಷರಗಳೇ! ಇವರೆಲ್ಲರೂ ಅರಣ್ಯ ಪಂಡಿತರಿದ್ದಂತೆ ತೋರುತ್ತೆ. ಅಲ್ಲಾ ಈ ಲಿಪಿಯನ್ನು ಅಜಹರಿಪಿನಾಕಿಗಳು ಕೂಡ ಓದಿ ಅರ್ಥಮಾಡಲಿ ನೋಡೋಣ! ಇವು ಅಕ್ಷರಗಳಲ್ಲ. ಇದು ಲಿಪಿಯಲ್ಲ. ಎಂದು ನಿರ್ಧಾರವಾಗಿ ಹೇಳಲು ಈ ಪಂಡಿತರಿಗೆ ಬರಲಿಲ್ಲ.

ಬಿಜ್ಜಳ : (ತಿರಸ್ಕಾರದಿಂದ) ಅಂತೂ ನೀವೆಲ್ಲರೂ.....

ಭಟ್ಟರು : ಪಂಡಿತರಿದ್ದಂತಾಯಿತು ಶೆಟ್ಟರೆ.

ಬಿಜ್ಜಳ : ಸರಿ ಸರಿ ನೀವೆಲ್ಲರೂ ಪಂಡಿತರೆ ಕಾಣುತ್ತೆ. ಇಂದಿಗೆ ನಿಮ್ಮ ಬುದ್ಧಿಮತ್ತೆಯ ಆಳ ಗೊತ್ತಾಯಿತು. ನೀವೆಲ್ಲರೂ ಅವಿವೇಕಿಗಳಲ್ಲವೆ? ಆಕಸ್ಮಿಕವಾಗಿ ಆಕಾಶದಿಂದ ಬಿದ್ದಿರುವ ಈ ಶಿವಲಿಪಿಯಲ್ಲಿ ಏನೂ ಅರ್ಥವಿಲ್ಲೆಂದು ಧಾರಾಳವಾಗಿ ಅಭಿಪ್ರಾಯ ಪಡುತ್ತಿರುವ ನಿಮಗೇನೆನ್ನಬೇಕು? ಕೇಳಿ. ಈ ಶಿವಲಿಪಿಯಲ್ಲಿ ತಥ್ಯವಿದೆ. ಇದರಲ್ಲಿ ಯಾವುದೋ ಉಜ್ವಲ ಗರ್ಭಿತಾರ್ಥವು ಹುದುಗಿಕೊಂಡಿದೆ ಎಂಬುದರಲ್ಲಿ ಎಳ್ಳಿನಿತು ಸಂದೇಹವಿಲ್ಲ. ಈಗ ನಾನು ಪ್ರತಿಜ್ಞಾಪೂರ್ವಕವಾಗಿ ಹೇಳುವದೇನಂದರೆ, ಆರಾದೊಡಾಗಲಿ ಈ ಶಿವಲಿಪಿಯನ್ನು ಓದಿ ಅದರ ಅರ್ಥವಂ ನಿದರ್ಶನಕ್ಕೆ ತಂದು ಕೊಟ್ಟುದಾದರೆ ಅವರಿಗೆ ನನ್ನ ಆಸ್ಥಾನದಲ್ಲಿಯ ಪ್ರಧಾನ ಪಟ್ಟದ ಅಮಾತ್ಯಾದಿ ಸಕಲ ನಿಯೋಗದೊಡೆತನವನ್ನು ಒಪ್ಪಿಸಿಕೊಡುವೆ. ಬಸವೇಶ್ವರರೇ ತೆಗೆದುಕೊಳ್ಳಿ. ಆ ಶಿವಲಿಖಿತವು ನಿಮಗೇನಾದರೂ ಅದರ ಅರ್ಥವಾಗುವದೋ ಹೇಗೆ ಪರಿಶೀಲಿಸಿ ನೋಡಿ.

ಬಸವೇಶ್ವರ : (ಲಿಪಿಯನ್ನು ನೋಡಿ) ಮಹಾಪ್ರಭೋ ನೀವು ನೆನೆದಂತೆ, ನಿಮ್ಮ ಉಜ್ವಲ ಭವಿಷ್ಯದ ಕನಸು ನನಸಾಗುತ್ತಲಿದೆ.

ಬಿಜ್ಜಳ : (ಹರ್ಷಿತವದನನಾಗಿ) ಏನು ಬಸವೇಶ್ವರರೇ ? ನನ್ನ ಉಜ್ವಲ ಭವಿಷ್ಯದ ಕನಸು ನನಸಾಗುವದೇ.

ಬಸವೇಶ್ವರ : ಸತ್ಯವಾಗಿ ನಿಸ್ಸಂದೇಹವಾಗಿ.

ಬಿಜ್ಜಳ : ಅಂದರೆ !

ಬಸವೇಶ್ವರ : ಅಂದರೆ ಈ ನಿಮ್ಮ ಸಿಂಹಾಸನದ ಕೆಳಗೆ ನಿಮ್ಮ ಚಾಲುಕ್ಯಾನ್ವಯದ ಪೂರ್ವಜರು ಎಂಭತ್ತೆಂಟು ಕೋಟಿ ಧನವನ್ನು ನಿಕ್ಷೇಪಿಸಿರುವರೆಂಬುದೇ ಈ ಶಿವಲಿಖಿತ ಲೇಖಾರ್ಥ ಗರ್ಭಿತಾರ್ಥ ಪ್ರಭೋ.

ಶೆಟ್ಟರು : ಏನಿದು! ಭಟ್ಟರೆ ಎಂಭತ್ತೆಂಟು ಕೋಟಿ ಧನ ಹೂಳಿಟ್ಟಿರುವರೆಂದರೇನು?

ಭಟ್ಟರು : ಶೆಟ್ಟರೇ ಹರಳು ಹಂಚುಗಳು ಸಿಗಲಿಕ್ಕಿಲ್ಲ ಅಷ್ಟೆ ! ಎಲ್ಲಿಯ ಧನ ಹುಗಿಯುವರು ಶೆಟ್ಟರೆ ಇನ್ನೂ ತಲೆಯ ಮೇಲಿನ ಮಾಂಸ ಹಾರಿಲ್ಲ ಈ ಬಸವೇಶ್ವರರಿಗೆ ! ಶಿವಲಿಪಿಯನ್ನು ಇವರು ಓದುವದೆಂದರೆ ಇದು ಎಂಥ ವಿಚಿತ್ರವಲ್ಲೇ ! ಇದೆಂದಾದರೂ ಸತ್ಯ ಸಂಗತಿಯಾಗಬಹುದೇನ್ರಿ

ಶೆಟ್ಟರು : ಎಂಥ ಮಾತರೀ ಭಟ್ಟರೆ ? ನಾವು ನೀವೇನು ಸಾಮಾನ್ಯ ಪಂಡಿತರೇ? ನಮಗೇ ಆ ಲಿಪಿಯು ತಿಳಿಯದೆ ಹೋಗಿರುವಾಗ ಅದನ್ನು ಈ ಬಸವೇಶ್ವರರು ಓದುವರಂತೆ. ಅದರರ್ಥವಾದರು ಇವರಿಗೆ ತಿಳದೀತೆ ?

ಭಟ್ಟರು : ಏನು ಹೇಳಬೇಕರೆಪ್ಪಾ ಇಂಥಿಂಥ ಉದ್ದಾಮ ಪಂಡಿತರಾದ ನಾವು ಕುಳಿತುಕೊಂಡಿದ್ದೇವೆ. ನಮಗದರರ್ಥವಾಗಲಿಲ್ಲ. ಅಂತಹದನ್ನು ಈ ಬಸವೇಶ್ವರರು ಓದಿ ಅರ್ಥ ಮಾಡುವದೆಂದರೆ, ಮಂಗವು ಪರ್ವತವನ್ನೇರಿದಂತೆಯೇ.

ಮಂಚಣ್ಣ : ಅದೇನಿಲ್ಲ ಭಟ್ಟರೆ, ಈ ಬಸವೇಶ್ವರರಲ್ಲಿ ಅಘಟಿತ ಘಟನಾ ಶಕ್ತಿಯುಳ್ಳವರಂತೆ ಮಾತಾಡುವ ವೈಶಿಷ್ಟ್ಯವಿದ್ದ ಹಾಗೆ ತೋರುತ್ತೆ ಇವರು ಈತೆರ ನುಡಿದು, ಮಹಾರಾಜರನ್ನು ಮರುಳುಗೊಳಿಸಿ ಅವರ ಪ್ರೇಮ ಸಂಪಾದನೆ ಮಾಡುವದಿದೊಂದು ತರದ ಕಲೆಯೆಂದೆ ಹೇಳಬೇಕು.

ಬಿಜ್ಜಳ : ಯಾಕೆ ಈ ಸಂಗತಿಯ ಬಗ್ಗೆ ನಿಮಗೆಲ್ಲರಿಗೆ ಸಂದೇಹವುಂಟೋ ?

ಶೆಟ್ಟರು : ಹೌದು ಪ್ರಭೋ ಬಸವೇಶ್ವರರು ಹೇಳಿದಂತೆ ಆ ಮಾತನ್ನು ನಿದರ್ಶನಕ್ಕೆ ತಂದುಕೊಡಬಲ್ಲರೇ ?

ಬಸವೇಶ್ವರ : ಮಹಾರಾಜರೇ ಅದಕ್ಕೆ ವಿಳಂಬವೇಕೆ ? ಈ ಮಾತಿನ ಸತ್ಯಾಸತ್ಯತೆಯ ನಿರ್ಣಯವಾಗಿ ಹೋಗಲಿ. ಸೇವಕರನ್ನು ಕಳುಹಿ ಸಿಂಹಾಸನದ ಕೆಳಭಾಗವನ್ನು ಅಗಿಸಲು ಪ್ರಾರಂಭ ಮಾಡಿ.

ಮಂಚಣ್ಣ : ಬಸವೇಶ್ವರರೇ ಅಗಿಸಿ ಭಾವಿ ತೋಡಿಸುವಿರೇನು ?

ಬಿಜ್ಜಳ : ಏನಿದು ಗಳಹುತ್ತಿರುವದು ! ಮಂಚಣ್ಣನವರೇ ಈತೆರ ವರ್ತಿಸುವದು ನಿಮಗೆ ಶೋಭಿಸುವದೇ? ಸತ್ಯಸಂಧರಾದ ಬಸವೇಶ್ವರರ ನುಡಿಯಲ್ಲಿ ಹುಸಿ ಬಂದು ಹೊದ್ದುವದು ಸಾಧ್ಯವುಂಟೆ ? ಪಣ್ಯಾಂಗನೆಯು ಪತಿವ್ರತೆಯಂ ನಿಂದಿಸುವಂತೆ ಪ್ರತಿಭಾನ್ವಿತ ಈ ಬಸವೇಶ್ವರರನ್ನು ನಿಂದಿಸಿದರೆ ನಿಮಗೆ ಯೋಗ್ಯತೆಯು ಬಂದಂತಾಯಿತೆ ? ಅವರಾಡಿದ ಮಾತಿನ ನಿದರ್ಶನವನ್ನು ಕ್ಷಣ ಮಾತ್ರದಲ್ಲಿ ಕಂಡುಕೊಳ್ಳುವಿರಂತೆ ಎಲೋ ಯಾರಲ್ಲಿ ?

ಚಾರವ : ಮಹಾಪ್ರಭು ಏನಪ್ಪಣೆ ?

ಬಿಜ್ಜಳ : ನೆಲವನ್ನಗಿಯುವ ಉಪಕರಣಗಳಾದ ಹಾರಿ ಗುದ್ದಲಿಗಳೊಂದಿಗೆ ಕೆಲಜನ ಕೂಲಿಯವರನ್ನು ಇಲ್ಲಿ ಬರಮಾಡುವವನಾಗು.

ಚಾರವ : ಆಜ್ಞಾ ಮಹಾನ್ (ಇಲ್ಲಿ ನಾಲ್ಕಾರು ಜನರು ಕೂಲಿಯವರು ಬಂದು ಬಿಜ್ಜಳನಿಗೆ ನಮಸ್ಕರಿಸುವದು).

ಬಿಜ್ಜಳ : ಇದೋ ಕೇಳಿ ಈ ಸಿಂಹಾಸನದ ಕೆಳಭಾಗವನ್ನು ಅಗಿಯಬೇಕಾಗಿದೆ. ತನ್ಮೂಲಕ ಜಾಗ್ರತೆಯಾಗಿ ಸಿಂಹಾಸನವನ್ನು ಮತ್ತೊಂದು ಬದಿಗಿರಿಸಿ ಜಾಗರೂಕತೆಯಿಂದ ನೆಲವನ್ನಗಿಯಲು ಪ್ರಾರಂಭಿಸಿರಿ

(ನೆಲವನ್ನಗಿಯಲು ಪ್ರಾರಂಭಿಸಿದ ನಂತರ).

೧ನೇಯವ : ಇದು ಏನಪ್ಪ ಸೋಜಿಗ ! ಇಲ್ಲೊಂದು ಭದ್ರವಾದ ಪೆಟ್ಟಿಗೆಯಿದ್ದಂತೆ ತೋರುತ್ತೆ ಕಾಣಿರೋ.

೨ನೆಯವ : ಅಹುದಯ್ಯ ಇದು ನಿಜವಾಗಿ ಪೆಟ್ಟಿಗೆಯ ಮುಚ್ಚಳ: ಇದರಲ್ಲೇನಾದರೂ ಬಚ್ಚಿಟ್ಟಿರುವರೋ ಹೇಗೆ ನೋಡಿರೋ.

೩ನೇಯವ : ಎಲೋ ಮರುಳಗಳಿರಾ ಪೆಟ್ಟಿಗೆಯ ಬಾಯಿ ಮುಚ್ಚಳ ತೆಗೆಯಿರಲ್ಲ! ಏನಿದ್ದದ್ದು ತಾನೇ ಗೊತ್ತಾಗುತ್ತದೆ.

೪ನೇಯವ : ಮುಚ್ಚಳ ತೆಗೆದು, ಅಬ್ಬಾ ! ಏನಿದು? ಏನಾಶ್ಚರ್ಯ ಈ ಪೆಟ್ಟಿಗೆಯಲ್ಲಿರುವದಾದರೂ ಏನು? ಝುಗಝುಗಿಸುವ ಇದರ ಹೊಳಪಿಗೆ ಕಣ್ಣು ಕುಕ್ಕುತ್ತಿವೆ.

೧ನೇಯವ : ಎಲೋ ಹಾಗೆ ಮಿಂಚುತ್ತಿರುವದು ಬಂಗಾರ

೨ನೇಯವ : ಅಷ್ಟೇ ಯಾಕೆ ಮುತ್ತು ರತ್ನಗಳೂ ಕೂಡ, ರಾಶಿರಾಶಿಯಾಗಿ ಕಾಣುತ್ತಿವೆ ಕಾಣಿರೋ.

೩ನೇಯವ : ಮಹಾರಾಜರೆ ಇದೋ ನೋಡಬನ್ನಿ ಮುತ್ತು ರತ್ನಗಳ ರಾಶಿ.

೪ನೇಯವ : ಬಂಗಾರದ ತುಣುಕುಗಳ ಇಕ್ಕಲು.

ಬಿಜ್ಜಳ :– (ದ್ರವ್ಯ ಸಂಚಯ ನೋಡಿ) ಧನ್ಯ ಧನ್ಯ ಬಸವೇಶ್ವರರೇ ನಿಮ್ಮ ಸೌಜನ್ಯ ಶಾಂತಿ ಗುಣಗಳಿಗೆ ಉಪಮೆಯೇ ಇಲ್ಲ ಫಣಿಪೂತ್ಕಾರದಿಂ ವೈನಿತೇಯನೂ ಸಾರಮೇಯ ಕೋಲಾಹಲದಿಂದ ಸಾಮಜವೂ ಅಳುಕದಂತೆ, ಈ ನಿಂದಕರ ನುಡಿಗಳಿಗೆ ನೀವು ಗಮನ ಕೊಡಲಿಲ್ಲ. ಮತ್ತು ನಿಮ್ಮ ಶಾಂತಿರಸಮಳ್ಕಾಡಲಿಲ್ಲ. ನಿಮ್ಮ ಹಿರಿಮೆಯನ್ನು ಬಣ್ಣಿಸಲು ಪಣಿಪತಿಗೂ ಆಗದ ಮಾತು. ನೀವು ಶಿವಲಿಪಿಯ ಅರ್ಥ ಮಾಡಿ ಹೇಳಿದ ನಿದರ್ಶನ ಇದೋ ನೋಡ ಬನ್ನಿ. ಈ ದ್ರವ್ಯದ ಸತ್ಪ್ರಭೆಯಂ

ನೋಡಿ ಎನ್ನ ಕಣ್ಮನಂಗಳು ತಣಿದು ಹೋದವು. ಬನ್ನಿ ಇದೋ ನೋಡ ಬನ್ನಿ.

ಬಸವೇಶ್ವರ: (ಕೈಯಿಂದ ದ್ರವ್ಯ ಹಿಡಿದು ನೋಡಿ) ಎಂಥ ಪ್ರತಿಭೆ ಇದು ! ದಿನಕರನು ಬಂದು ಉದಯವಾದನೋ ಅಥವಾ ಧನದವಂ ಬಚ್ಚಿಟ್ಟ ನಿಧಿಯೋ? ಅಲ್ಲದೆ ಕನಕಗಿರಿಯೇ ಮೂಡಿ ಬಂದುದೋ ಎಂಬಂತಿರುವ ಈ ದ್ರವ್ಯದ ಉಜ್ವಲ ತೇಜಸ್ಸನ್ನು ನೋಡಿದಿರಾ !

ಬಿಜ್ಜಳ : ನೋಡಿದೆ ಬಸವೇಶ್ವರರೆ ನೋಡಿದೆ. ನಿಮ್ಮ ಮಹಿಮೆಯ ದ್ಯೋತಕ.

ಚಾರವ : ಮಹಾರಾಜರೆ ಬಸವೇಶ್ವರರ ಕರಾಬ್ಜ ಸ್ಪರ್ಶವಾದ ನಂತರ ದ್ರವ್ಯ ರಾಶಿಯು, ಮೊದಲಿನಕ್ಕಿಂತಲೂ ನೂರ್ಮಡಿಯೋ ಸಾಸಿರ್ಮಡಿಯೋ ವೃದ್ಧಿಂಗತವಾಗಿ ತೋರುತ್ತಿದೆ ಪ್ರಭೋ.

ಬಿಜ್ಜಳ : ಹೀಗೋ ಸರಿ ಸರಿ. ಈ ಬಸವೇಶ್ವರರ ಹಸ್ತವೆಂದರೆ ಕಾಮಧೇನು ಕಲ್ಪತರು ಪರುಷಮಣಿಗಳೆಂದರೆ ಅತಿಶಯೋಕ್ತಿಯಲ್ಲ. ಸೇವಕರೇ ಆದೆಲ್ಲ ನಿಧಿಯನ್ನು ಕೋಶಾಗರದಲ್ಲಿ ಭದ್ರವಾಗಿ ಇರಿಸುವಂಥವರಾಗಿರಿ ಬಸವೇಶ್ವರರೇ ಮಹಿಮೆವೆತ್ತ ನಿಮ್ಮನ್ನು ಪಡೆದುಕೊಂಡ ನಾನು ನಿಜವಾಗಿಯೂ ಧನ್ಯ. ನೀವೆಂದರೆ ಮಹತ್ತಿಗೆ ಮಹತ್ತಾದವರು.

ಬಸವೇಶ್ವರ : ಮಹಾರಾಜರೇ ಈತೆರ ಕೊಂಡಾಡುವ ಹಾಗೆ ನನ್ನಲ್ಲಿ ಅಂತಹ ದೊಡ್ಡತನವೇನಿದೆ? (ತೆರಯ ಮುಂದೆ ಬಂದು).

ವಚನ :

ಎನಗಿಂತ ಕಿರಿಯರಿಲ್ಲ
ಶಿವಭಕ್ತರಿಗಿಂತ ಹಿರಿಯರಿಲ್ಲ .
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
ಕೂಡಲಸಂಗಮದೇವಾ, ಎನಗಿದೆ ದಿಬ್ಯ.

ಬಿಜ್ಜಳ : ಬಸವೇಶ್ವರರೆ ನೀವು ನಿಮ್ಮ ಸೌಜನ್ಯಕ್ಕನುಗುಣವಾಗಿ ಈ ತೆರ ಹೇಳುವದೊಂದು ನಿಮ್ಮ ಶೀಲ. ಆದರೆ ನಿಜವಾಗಿ ಪರಿಶೀಲನೆ ಮಾಡಿದರೆ ಅಜಹರಿ ಪಿನಾಕಿಗಳ ಚರಿತೆಗಿಮ್ಮಡಿಯೆನಿಸುವ ಮಹಿಮಾನ್ವಿತರು ನೀವು. ತ್ರಿಭುವನ ಸ್ಥಾಪನಾಚಾರ್ಯ ಪುರುಷರಾದ ನೀವು ಭುವಿಯ ಜನವಂ ಸಲುಹಲೆಂದು ಬಂದು, ನಿಮಿತ್ಯ ಮಾತ್ರದಿಂ ಬಸವನೆಂಬಭಿಧಾನವಂ ತಳೆದಿರುವದೇನೊ ನಿಜ. ಇರಲಿ ಬಸವೇಶ್ವರರೆ

ನಮ್ಮ ಒಡ್ಡೋಲಗದಲ್ಲಿರುವ ಪನ್ನಿಬ್ಬರು ಮಹಾಮಾತ್ಯರೊಳಗೆ ಗಿರಿಗಳೊಳು ಕನಕಾದ್ರಿಯಂತೆ ರತ್ನನಿಕರದೋಳ್ ಚಿಂತಾಮಣಿಯಂತೆ ಒಪ್ಪುವ ಪ್ರಧಾನ ಮಂತ್ರಿ ಪದವಂ ಸ್ವೀಕಾರ ಮಾಡಿ ನನ್ನ ಸಕಲ ಸಾಮ್ರಾಜ್ಯಕ್ಕೆ ನೀವೇ ಅರಸರಂತಿದ್ದು ಪ್ರಜಾಪಾಲನೆ ಮಾಡಬೇಕು. ಅಲ್ಲದೆ ಈಗ ದೊರೆತ ಅಪಾರ ದ್ರವ್ಯದೊಡೆತನವು ನಿಮಗಾಗಿಯೇ ಮೀಸಲು. ಅದರ ಸದ್ವಿನಿಯೋಗ ಮಾಡಿಕೊಳ್ಳುವದು ನಿಮ್ಮ ಕರ್ತವ್ಯ. ನನ್ನ ಪ್ರತಿಜ್ಞೆಯಂತೆ ಪ್ರಧಾನ ಅಮಾತ್ಯಾದಿ ಸಕಲ ನಿಯೋಗದೊಡೆತನವನ್ನು ನಿಮಗೆ ಒಪ್ಪಿಸಿದೆನೆಂಬುದಕ್ಕೆ ಇದೋ ಈ ಕಿರೀಟವೇ ಸಾಕ್ಷಿ. ಬಸವೇಶ್ವರರೆ ತೆಗೆದುಕೊಳ್ಳಿ ಇದಂ ಧಾರಣ ಮಾಡಿ ನಿಮ್ಮ ಮಾವಂದಿರ ಸಚಿವಾಗ್ರ ಸ್ಥಾನಮಂ ಅಲಂಕರಿಸಿ ರಾಜ್ಯ ಪರಿಪಾಲನೆ ಮಾಡಿ ನನ್ನಂ ಉದ್ಧರಿಸಬೇಕು. ಕಂಡಿರಾ.

ಬಸವೇಶ್ವರ : ಬಿಜ್ಜಳ ಭೂಪತೇ ಅಖಿಳ ಲೋಕಂಗಳಂ ರಕ್ಷಿಸುವ ಆ ಶಂಭುವಿಗೆ, ನಿಮ್ಮೊಬ್ಬರಂ ರಕ್ಷಿಸುವದು ಘನವಾದ ಮಾತೆ ? ಮಹಾರಾಜರೆ ಇದೊಂದು ಮಾತ್ರ ತಾವು ಲಕ್ಷದಲ್ಲಿಡಬೇಕು. ನಾನೇನೋ ಭಕ್ತಾ ಭಾಕುಳಿ ಅವರಾಗಲಿ, ಜಂಗಮರಾಗಲಿ, ನನ್ನ ಪಂಚಪ್ರಾಣ. ಎಂತಹ ಸನ್ನಿವೇಶಗಳಲ್ಲಿಯೂ ಅವರ ವಿಷಯದಲ್ಲಿ ತಾವು ವೈರವಿಲ್ಲದಿರಬೇಕು ಇಷ್ಟೆ.

ಬಿಜ್ಜಳ : ಬಸವೇಶ್ವರರೆ ಅದೇನು ದೊಡ್ಡ ಮಾತು ! ಆ ಬಗೆಯಲ್ಲಿ ತಮ್ಮ ಇಚ್ಛೆಯಂತೆಯೇ ನಾನಿರುವೆ ಆಯಿತೆ.

ಬಸವೇಶ್ವರ : ಆಯಿತು. ನಾನಾದರೂ ತಮ್ಮಿಚ್ಛೆಯಂತೆ, ಆ ಪರಮಾತ್ಮನ ಅನುಗ್ರಹದಿಂದ ಶರಧಿ ಪರಿಯಂತ ಭೂವಿಸ್ತಾರವಂ ಗೈದು, ದಿಗಂತದಲ್ಲಿ ತಮ್ಮ ಯಶೋದುಂದುಭಿಯನ್ನು ಮೊಳಗಿಸಬೇಕೆಂಬುದೇ ನನ್ನ ಹಾರೈಕೆ.

===**====**====

ಪ್ರವೇಶ ೭

(ಸ್ಥಳ : ಕಳಿಂಗ ದೇಶದ ಮಹದೇವ ಶಟ್ಟಿಯ ಮನೆ)

ಮಹದೇವಶೆಟ್ಟಿ: ಅದಾವನವನು ! ಎಷ್ಟು ಮಧುರವಾಗಿ ಗೀತೆಯನ್ನು ಅನ್ನುತ್ತಿರುವನಲ್ಲ ! (ಬೇಡಿದವರಿಗೆ ಬೇಡಿದ ನೀಡದಿರ್ದಡೆ ತಲೆದಂಡ ಕೂಡಲಸಂಗ ಅವಧಾರು, ಎಂದು ಹಾಡಿದ್ದು ಕೇಳಿ) ಇದು ಕಲ್ಯಾಣದಲ್ಲಿ ಬಸವೇಶ್ವರರು ಹಾಡಿದ ಗೀತೆ. ಬೇಡಿ ಬೇಡಿದ ಶರಣರ್ಗೆ ನೀಡದಿರ್ದಡೆ ತಲೆದಂಡ ಕೂಡಲಸಂಗ ಅವಧಾರು ಎಂಬುದು ಆ ಗೀತೆಯ ಅರ್ಥ. ಹೂಂ (ವಿಚಾರದಲ್ಲಿ ಬಿದ್ದು) ಆ ಗೀತೆಯು ನನ್ನ ಚಿತ್ತವನ್ನೇ ಕದಡಿಸಿಬಿಟ್ಟಿತಲ್ಲ ! ಬೇಡಿದವರಿಗೆ ಬೇಡಿದ್ದನ್ನು ಕೊಡುವೆನೆಂದು ಹೇಳುವದು, ಸುಲಭವಾದ ಮಾತೇ! ಆತ್ಮವಿಕಾಸ ಮಾಡಿಕೊಂಡು ಅಧ್ಯಾತ್ಮ ವಿದ್ಯೆಯನ್ನು ಸಂಪಾದಿಸಿ ಪಾರಮಾರ್ಥಮಂ ಗೆಲೆಯಬೇಕೆಂದು ಬಯಿಸುವವನು ನಿರ್ಮಲನೂ ನಿರಹಾಂಕಾರನೂ ಆಗಿರಬೇಕು. ಈ ತತ್ವಕ್ಕೆ ಆ ಬಸವೇಶ್ವರರ ಗೀತೆಯು ವಿರೋಧವಾಗಿಯೇ ತೋರುತ್ತೆ ಓಹಿಲಯ್ಯ ಉದ್ಭಟಯ್ಯ ಮತ್ತು ಮಳೆಯರಾಜ ದೇವರ್ ಮೊದಲಾದ ಅಘಟಿತ ಘಟನಾಕಾರ್ಯ ಮಾಡಬಲ್ಲ ಮಹಾಶರಣರು ಕೂಡ ಈತೆರ ಬೇಡಿದವರಿಗೆ ಬೇಡಿದ್ದನ್ನು ಕೊಡುತ್ತೇವೆಂದುಸುರಲಿಲ್ಲ. ಇಂತಿರುವಾಗ ಬಸವೇಶ್ವರರು ಹೀಗೆ ನುಡಿಯುವದರಿದಲ್ಲವೆ ? (ವಿಚಾರಿಸಿಕೊಂಡು) ಹೂಂ ಆಗಲಿ. ನಿರಹಂಕರಣ ಭಕ್ತಿಯಿಲ್ಲದ ಆ ಬಸವೇಶ್ವರರ ಡಾಂಭಿಕ ವೃತ್ತಿಯನ್ನು ಕಳಿಂಗದೇಶದ ಈ ಮಹಾದೇವ ಶೆಟ್ಟಿಯು, ಯತ್ಕಿಂಚಿತವೂ ಸಹಿಸಲಾರ. ಅವರು ಹಾಡಿದ ಗೀತಾರ್ಥಮಂ ಪರೀಕ್ಷಿಸಿಯೇತೀರುವೆ. ಈಗಲೇ ನಾನು ಕಲ್ಯಾಣ ಪುರವಂ ಪ್ರವೇಶಿಸಿ, ಹತ್ತೆತ್ತಿನ ಒಜ್ಜೆ ಮುತ್ತುಗಳನ್ನು, ಮಾಣಿಕಗಳನ್ನು, ಮತ್ತು ಹೊನ್ನುಗಳನ್ನು ಬೇಡಿ ಆ ಬಸವನಂ ಮುಂದುಗೆಡಿಸುವೆಂ. ತನ್ಮೂಲಕ ಶರಣ ಸಮೇತನಾಗಿ ಈಗಲೇ ಕಲ್ಯಾಣದತ್ತ ಮಾರ್ಗಸ್ಥನಾಗುವೆ.

===***===***===

ಪ್ರವೇಶ ೮

ಸ್ಥಳ : (ಬೀದಿ ಮಹದೇವಶೆಟ್ಟಿಯು ಶರಣಕುಲ ಸಮೇತನಾಗಿ ಸ್ತೋತ್ರ ಗೈಯುತ್ತಾ ಬರುವದು)

ಮಹದೇವಶಟ್ಟಿ : (ಸ್ತೋತ್ರ ಮುಗಿದ ನಂತರ ಎದುರಿಗೆ ನೋಡಿ) ನೋಡಿದಿರಾ ಶರಣರೇ! ಎದುರಿಗೆ ಬರುತ್ತಿರುವದು ಜಂಗಮಸ್ತೋಮವಲ್ಲವೆ?

ಶರಣರು : ಹೌದು ಮಹದೇವಶೆಟ್ಟರೆ ಇದೋ ನೋಡಿ ಅವರು ಬಂದೇ ಬಿಟ್ಟರು.

ಮಹಾದೇವ ಶಟ್ಟಿ : (ಪರಸ್ಪರರು ನಮಸ್ಕರಿಸಿದ ನಂತರ ತಮ್ಮದೆಲ್ಲಿಂದ ಬರೋಣವಾಯಿತು ಬುದ್ಧೀ ?

೧ನೇ ಜಂಗಮ : ಬಸವೇಶ್ವರರ ಮಹಾಮನೆಯಿಂದ ಸ್ವಾಮಿ

ಮಹಾದೇವಶೆಟ್ಟಿ : ಏನು ! ಈ ಉಡುಪು ತೊಡಪುಗಳನ್ನು ಅಲ್ಲಿಂದಲೆ ಪಡೆದುಕೊಂಡಿರಾ ?

ಜಂಗಮರು : ಅಹುದು ಸ್ವಾಮಿ

ಮಹಾದೇವ ಶೆಟ್ಟಿ : ಹಾಗಾದರೆ ನಾವಲ್ಲಿಗೆ ಹೋದರೆ ನಮಗೂ ಈತರ ಸಂಭಾವನೆಯಾಗಬಹುದೆ ?

ಜಂಗಮರು : ಅದಕ್ಕೆ ಸಂದೇಹವೇ ಬೇಡ ಸ್ವಾಮಿ. ನಿತ್ಯವೂ ಅಸಂಖ್ಯಾತ ಶರಣರು ಜಂಗಮರು ಬಸವೇಶ್ವರರಲ್ಲಿಗೆ ಬಂದು ತಮ್ಮ ಇಚ್ಛಾಪೂರ್ತಿ ಮಾಡಿಕೊಂಡು ಹೋಗುತ್ತಿದ್ದಾರೆ. ಎನಿತು ಸಂಕೋಚವಿಲ್ಲದೆ ತಾವಲ್ಲಿಗೆ ಹೋಗಬಹುದು.

ಮಹಾದೇವಶೆಟ್ಟಿ ; ಸರಿ ತಮ್ಮ ಅಭಿಪ್ರಾಯದಂತೆ ಮನಸ್ಸಿನಲ್ಲಿ ವಿಕಲ್ಪವನ್ನು ನೆನೆಯದೆ ಅಲ್ಲಿಗೆ ನೇರವಾಗಿ ಹೋಗುವೆವು. ತಾವು ದಯ ಮಾಡಿ ಬುದ್ಧೀ (ಎಂದು ಹೋಗುವದು).

೧ನೇ ಜಂಗಮ : (ಮಹಾದೇವಶೆಟ್ಟಿ ಹೋದ ಮೇಲೆ) ಇದೇನಯ್ಯ ನೋಡದು ! ಎದುರಿಗೆ ಬರುವವರು ಸರಕಾರಿ ಅಧಿಕಾರಿಗಳಂತೆ ತೋರುವರಲ್ಲವೆ ?

೨ನೇ ಜಂಗಮ : ಅಧಿಕಾರಿಗಳಷ್ಟೆ ಯಾಕೆ ಸ್ವಾಮೀ ಅದೋ ನೋಡು ಮುಂಭಾಗದಲ್ಲಿದ್ದವರೇ ಮಂತ್ರಿ ಮಂಡಲದಲ್ಲಿಯ ಕೊಂಡಿ ಮಂಚಣ್ಣನವರು ಹಿಂದಿರುವವರು ಮಹಾರಾಜರ ಒಡ್ಡೋಲಗದವರೇ.

(ಇಷ್ಟರಲ್ಲಿ ಅಧಿಕಾರಿಗಳು ಬಂದು ಪರಸ್ಪರರ ಭೆಟ್ಟಿಯಾಗುವುದು)

ಮಂಚಣ್ಣ : ಏನು ಬುದ್ಧಿಯವರೆ ? ತಾವೆಲ್ಲರು ಎಲ್ಲಿಂದ ಬಂದಿರಿ ?

ಜಂಗಮರು: ಯಾರು ನಾವೆ ?

ಭಟ್ಟರು : ಅಹುದರೆಪ್ಪ ನೀವೆ ಮುಂದಿರುವವರೆ ನೀವು ನಿಮ್ಮನ್ನೇ ಕೇಳಿದರೆಂಬ ಅರ್ಥವೇ ನಿಮಗಾಗಲಿಲ್ಲೇನ್ರೀ ?

ಜಂಗಮರು : ನೋಡಿ ಸ್ವಾಮಿ ಈಗ್ಗೆ ನಾವು ಬಸವೇಶ್ವರರ ಮಹಾಮನೆಯಿಂದ ಬರೋಣವಾಯಿತು.

ಭಟ್ಟರು : ಸರಿ, ಸರಿ ಬಸವೇಶ್ವರರು ಒಳ್ಳೆ ಔದಾರ್ಯವುಳ್ಳವರು ಯಾಕೆ ಬುದ್ಧಿ.

ಜಂಗಮರ : ಅಯ್ಯೊ ಅವರ ದೊಡ್ಡ ಮನಸ್ಸಿನ ವಿಷಯಕ್ಕೆ ಎಷ್ಟು ಹೇಳಿದರೂ ತೀರದು. ಸ್ವಾಮೀ ಅವರ ಉದಾರ ಗುಣವನ್ನರಿತು, ನಾಲ್ಕು ನಿಟ್ಟಿನಿಂದ ಜಂಗಮ ಸಂದೋಹ ಬಂದು, ತಮ್ಮ ವಾಛಿತಾರ್ಥಮಂ ದಾನರೂಪದಲ್ಲಿ ಪಡೆದುಕೊಂಡು ನಿತ್ಯವು ಹೋಗುತ್ತಿದೆ.

ಭಟ್ಟರು : ಮಹಾರಾಜರ ಹಣ, ಬಸವಣ್ಣನವರ ದಾನ, ಒಳ್ಳೆ ದೊಡ್ಡ ಮನಸ್ಸು ಬಸವಣ್ಣನವರದು. ಇರಲಿ ಈಗ ನಿವೇನು ಪಡೆದುಕೊಂಡು ಬಂದಿರಿ ಸ್ವಾಮಿ.

ಜಂಗಮ : ಈಗ ನೋಡಿ ಸ್ವಾಮಿ ನಮ್ಮೆಲ್ಲರಿಗೂ ವಸ್ತ್ರಗಳನ್ನು ಕೊಟ್ಟಿದ್ದಾರೆ . ಅಲಂಕಾರಗಳನ್ನು ಕೊಟ್ಟಿದ್ದಾರೆ. ಹಣವನ್ನು ಕೂಡಾ......

ಭಟ್ಟರು : ಕೊಟ್ಟಿದ್ದಾರೆ ಅಲ್ಲವೆ ? ಬಸವೇಶ್ವರರಿಂದ ಈತರ ಅಪಾರವಾದ ಸಂಪತ್ತನ್ನು ಎತ್ತಿಹಾಕುತ್ತಿರುವ ನೀವು ಅವರನ್ನು ಹೊಗಳದೆ ಬಿಟ್ಟಿರಾ?

ಶೆಟ್ಟರು : ನೋಡಿರಿ ಭಟ್ಟರೇ ? ಸ್ವಚ್ಛಂದ ವೃತ್ತಿಯಿಂದ ತಿಂದು ತೇಗಿ ಬೀಗಿ ಬೆಳೆದು ತಿರುಗುತ್ತಿರುವ ಈ ಜಂಗಮರನು ?

ಜಂಗಮರು : ಯಾಕೆ ಸ್ವಾಮಿ ಬಹಳ ತೆಗಳಿ ನುಡಿಯುತ್ತಿರುವಿರಿ. ಆ ಭಕ್ತಿ ಭಂಡಾರಿ ಬಸವಣ್ಣನವರು ಮಾಡುತ್ತಿರುವ ದಾನವು ನಿಮಗೆ ನಿಂದ್ಯವಾಗಿ ಹೋಯಿತೆ ?

ಭಟ್ಟರು : ಅದು ನಿಂದ್ಯವೋ ವಂದ್ಯವೊ ಎಂಬುದು ತುಸು ಕಾಲಾವಧಿಯಲ್ಲಿಯೇ ಪ್ರಚಲೆಗೆ ಬರುತ್ತಿದೆ ಹೋಗಿ. ಆಗಲಿ ತಾವು ದಯಮಾಡಿಸಿ (ಜಂಗಮರು ಹೋಗುವದು).

ಮಂಚಣ್ಣ : ಭಟ್ಟರೇ ಶೆಟ್ಟರೇ ಬಸವಣ್ಣನವರ ಈ ದಾನ ವೃತ್ತಿಯು ಒಂದು ತರಹ ಲೂಟಿಯೆಂದೆ ಪರಿಗಣಿಸುವದಿಲ್ಲವೆ ?

ಶೆಟ್ಟರು : ನಿಜವಾಗಿ ನಿಸ್ಸಂದೇಹವಾಗಿ ಇದು ಲೂಟಿಯೇ. ಇದಕ್ಕೆ ತಡೆ ಹಾಕದೆ ಹಾಗೆಯೆ ಹೋಗಗೊಟ್ಟರೆ, ಬಿಜ್ಜಳ ಮಹಾರಾಜನ ಕೈಯಲ್ಲಿ ನಿಜವಾಗಿಯೂ ಬರುವದು,

ಭಟ್ಟರು : ಭಿಕ್ಷಾ ಪಾತ್ರೆ .

ಶೆಟ್ಟರು : ಹಾಗಾದರೆ ಈಗೇನು ಮಾಡಬೇಕೆನ್ನುವಿರಿ ?

ಮಂಚಣ್ಣ : ಏನಿಲ್ಲ ಎರಡರಲ್ಲೊಂದು ! ಸೋಕ್ಷವಾಗಲಿ ಮೋಕ್ಷವಾಗಲಿ ಆಗಿಯೇ ತೀರಬೇಕು.

ಶೆಟ್ಟರು : ಅಂದರೆ !

ಮಂಚಣ್ಣ: ಅಂದರೆ ನಾವಾದರೂ ಒಡ್ಡೋಲಗ ಬಿಡಬೇಕು. ಇಲ್ಲವೆ ಆ ಬಸವನಾದರೂ ಬಿಡಬೇಕು. ಅವರು ನಡೆಸಿದ ಈ ಲೂಟಿ ಸಮಾಚಾರವನ್ನು ಮಹಾರಾಜರ ಗಮನಕ್ಕೆ ತಂದುಕೊಡೋಣ ಆ ಮೇಲೆ ಮುಂದಿನ ವಿಚಾರ ಮುಂದೆ.

ಭಟ್ಟರು : ಅಹುದು ಸೂಕ್ತ ವಿಚಾರ. ನಡೆಯಿರಿ ಈಗಲೇ ಒಡ್ಡೋಲಗದತ್ತಾ ಸಾಗೋಣ

===***=====***===

(ಪ್ರವೇಶ ೯)

(ಸ್ಥಳ : ಬಸವೇಶ್ವರರ ಮಹಾಮನೆ. ಬಸವೇಶ್ವರರು ನಿದ್ರಿಸುತ್ತಿದ್ದಾಗ ಪರಮಾತ್ಮನು ಸ್ವಪ್ನ ಸೂಚನೆ ಮಾಡುವದು).

ಬಸವೇಶ್ವರ : ಅಖಿಲ ಬ್ರಹ್ಮಾಂಡ ಸೂತ್ರಧಾರಿಯಾಗಿ ಸೃಷ್ಟಿ ಸ್ಥಿತಿ ಲಯಾದಿ ಕರ್ತೃವಾದೆನಗೆ ಭಕ್ತಾಧೀನನೆಂಬುದು ಅನ್ವರ್ಥಕ ನಾಮ. ಆ ಭಕ್ತರ ಸುಖವೇ ನನ್ನ ಸುಖ. ಅವರ ದುಃಖವೆ ನನ್ನ ದುಃಖ. ಅವರ ಆನಂದವೇ ನನ್ನ ಆನಂದ. ನನ್ನ ಪ್ರಾಣವೇ ಆಗಿರುವ ಬಸವನ ಸತ್ವ ಪರೀಕ್ಷೆ ಮಾಡಲು ಕಳಿಂಗ ದೇಶದ ಮಹಾದೇವಶೆಟ್ಟಿಯು ಬರುತ್ತಿದ್ದಾನೆ. ಆತನು ತಾನು ನೆನೆದಂತೆ ನನ್ನ ಕಂದ ಬಸವನಲ್ಲ ಹೇರಳವಾದ ಮುತ್ತು ಮಾಣಿಕಗಳ ರಾಶಿಯನ್ನು ಬೇಡದೆ ಬಿಡತಕ್ಕವನಲ್ಲ. ಈಗ ನಾನು ಈತನ ಕೈ ಹಿಡಿಯದೆ ಹೋದರೆ ಮಹಾದೇವ ಶೆಟ್ಟಿಗೆ ಅಷ್ಟೊಂದು ಸಂಪತ್ತನ್ನು ಹೇಗೆ ಒದಗಿಸಿ ಕೊಡುವನು? ತನ್ಮೂಲಕ ಮೇರುವಿನೊಳಗಚ್ಚೊತ್ತಿ ಹೊಸ ಹೊಸ ಹೊಂಗಳನ್ನೂ ಪದ್ಮರಾಗ ವಮೌಕ್ತಿಗಳನ್ನೂ ಅನುವಮಾಡಿಕೊಂಡು ಈ ಬಸವನ ಮಹಾಮನೆಯಲ್ಲಿರುವಂತೆ ಈಗಲೇ ಹೋಗಿ ಕುಬೇರ ನಿನಗಪ್ಪಣೆ ಮಾಡುವೆ. ಮತ್ತು ಈಗ ಜಂಗಮ ಧ್ಯಾನ ನಿದ್ರಾಮುದ್ರೆಯೊಳಿರುವ ಬಸವನಿಗೆ ವಿನೋದಕ್ಕಾಗಿ ಆತನು ಭಯ ವಿಹ್ವಲನಾಗುವಂತೆ ಸ್ವಪ್ನ ಸೂಚನೆಯನ್ನು ಇಂತು ಮಾಡುವೆ. (ತೆರೆ ಮರೆಯಲ್ಲಿ ನಿಂತು) ಏಳೇಳು ಬಸವ ! ಮುಂದರಿಯದೆ ಗೀತಮಂ ಪಾಡಿ ತೊಡಕಂ ತಂದುಕೊಂಡೆ. ಕಳಿಂಗ ದೇಶದ ಮಹಾದೇವ ಶೆಟ್ಟಿಯೆಂಬ ನಿಚ್ಚಳ ಭಕ್ತ ನಿನ್ನಲ್ಲಿ ಕನಕ ರತ್ನ ರಾಶಿಗಳಂ ಮನವಾರೆ ಬೇಡಲೆಂದು ಬಂದಿರ್ದಪಂ. ಎಂತು ಮಾಡಿದಪೆ ನೋಡಿಕೋ (ಎಂದು ವ್ಯಂಗ್ಯವಾಗಿ).

ಬಸವೇಶ್ವರ :– (ನಿದ್ರೆ ತಿಳಿದೆದ್ದು) ಏನು ಕಳಿಂಗ ದೇಶದ ಶರಣರಾಗಿರುವ ಮಹಾದೇವ ಶೆಟ್ಟರು ನನ್ನಲ್ಲಿ ಹೊನ್ನು ರಾಶಿಯ ದಾನವಾಗಿ ಪಡೆಯಲು ಬರುವರೇ ? ಅಂಜದಿರ್ ಅಂಜದಿರ್ ದೇವ.

ಗಂಗಾಂಬಿಕೆ : ಪತಿದೇವಾ ಪತಿದೇವಾ ಏನಿದು? ಒಮ್ಮೆಲೆ ಅನಿರೀಕ್ಷಿತವಾಗಿ ಇಂತು ನುಡಿಯುತ್ತಿರುವಿರಿ ಏನಿದು

ಬಸವೇಶ್ವರ: ಗಂಗಾಂಬಿಕೆ ನಾನೊಂದು ಅಚ್ಚರಿಯಾದ ಕನಸು ಕಂಡೆ. ಈಗೆ ನಾನು ನುಡಿದ ಪ್ರಕಾರ, ಸಂಗಮನಾಥನು ನನಗೊಂದು ಸ್ವಪ್ನ ಸೂಚನೆ ಮಾಡಿದನು.

ಗಂಗಾಂಬಿಕೆ : ಆದರೆ ಪತಿದೇವಾ ಕೊನೆಗೆ ನೀವು ಅಂಜದಿರ್ ಅಂಜದಿರ್ ದೇವ ಎಂದು ನುಡಿದುದರ ತಾತ್ಪರ್ಯವೇನು ?

ಬಸವೇಶ್ವರ : ಅಂದರೆ ಬೇಡಿ ಬೇಡಿದವರಿಗೆ ನೀಡದಿದ್ದರೆ ತಲೆದಂಡ ಕೂಡಲ ಸಂಗಮದೇವ ಅವದಾರು ಎಂದು ನಾನೊಂದು ವಚನವನ್ನು ಹಾಡಿದ್ದೆ. ಅದಕ್ಕಾಗಿ ಸಂಗಮನಾಥನು, ಈ ವಚನ ಹಾಡಿ ತೊಡಕನ್ನು ತಂದುಕೊಂಡೆ. ಎಂತು ಮಾಡಿದಪೆ ನೋಡಿಕೋ ಎಂದು ನನಗೆ ಅಂದುಕೊಂಡನು. ಅದಕ್ಕಾಗಿ ನಾನು ಹಾಗೆ ಅಂದುದು.

ಗಂಗಾಂಬಿಕೆ : ಸರಿ ಪತಿದೇವಾ ನೀವು ನಡಿಸುತ್ತಿರುವ ಜಂಗಮ ದಾಸೋಹವು ಚರ್ಚಾಸ್ಪದವಾದ ವಿಷಯವಾಗಿ ತೋರುತ್ತಿದೆ.

ಬಸವೇಶ : ದೇವಿ ಹೀಗೆಂದರೇನು ?

ಗಂಗಾಂಬಿಕೆ : ಮತ್ತೇನಿಲ್ಲ. ಆ ದಾನ ಸಮರ್ಪಿಸುವಲ್ಲಿ ಪರಿಮಿತಿ ಇರಬೇಕೆಂಬುದೇ ನನ್ನ ಮನಕ್ಕೆ ಹೊಳೆದದ್ದು.

ಬಸವೇಶ್ವರ : ಎಂದೂ ಇಲ್ಲದ ಇಂದೇಕೆ ಈತೆರ ಈ ಬಗೆಗೆ ಸ್ಫುರಣವಾಯಿತು ನಿನ್ನಲ್ಲಿ ?

ಗಂಗಾಂಬಿಕೆ : ಹೃದಯೇಶ್ವರಾ ? ಅಹರ್ನಿಶಿಯಲ್ಲಿಯೂ ಜಂಗಮ ದಾಸೋಹ ನಡೆದೇ ಆದೆ. ನಮ್ಮ ಸಂಪತ್ತೆಲ್ಲವು ಬಳಿದು ಹೋದ ಮೇಲೆ ಮುಂದೆ ?

ಬಸವೇಶ : ತಡೆ ತಡೆ ಆ ಮುಂದಿನ ವಿಚಾರವು ನಿನಗೆ ಬೇಡ. ನೀನು ಹುಚ್ಚಳಿರುವೆ. ಬಡವರಿಗೆ ದಾನ ಮಾಡುವದು ದೇವರಿಗೆ ಸಾಲ ಕೊಟ್ಟಂತೆ ಎಂಬುದನ್ನು ಲಕ್ಷದಲ್ಲಿಡು. ಕೊಡುವವನು ಸಂಗಂ. ಕೊಂಬುವವನು ಸಂಗಂ. ಆದುದರಿಂದ ಸಂಪತ್ತಿನ ಸದ್ವಿನಿಯೋಗವನ್ನು ಹೇಗೆ ಮಾಡಬೇಕೆಂಬುದನ್ನು ಮತ್ತು ಆ ವಿನಿಯೋಗಕ್ಕೆ ಸತ್ಪಾತ್ರವಾವುದೆಂಬುದನ್ನು ಕೇಳು.

ವಚನ : ರಾಗ : ಬಿಹಾರ, ತ್ರಿತಾಳ.

ಪಾಪಿಯ ಧನ ಪ್ರಾಯಶ್ಚಿತಕಲ್ಲದೆ ।
ಸತ್ಪಾತ್ರಕ್ಕೆ ಸಲ್ಲದಯ್ಯ .
ನಾಯಿಯ ಹಾಲು ನಾಯಿಗಲ್ಲದೆ ।
ಪಂಚಾಮೃತಕ್ಕೆ ಸಲ್ಲದಯ್ಯಾ ।
ನಮ್ಮ ಕೂಡಲಸಂಗನ ಶರಣರಿಗಲ್ಲದೆ ।
ಮಾಡುವ ಅರ್ಥವ್ಯರ್ಥ ಕಂಡಯ್ಯಾ ॥

ಗಂಗಾಂಬಿಕೆ ತಿಳಿಯಿತೆ ಈ ವಚನದ ಭಾವ ! ದಾನ ಮಹಿಮೆಯು ಇಂತಿರುವಾಗ ಅದಕ್ಕೆ ಮಿತಿ ಇರಬೇಕೆಂದು ಹೇಳುವ ನಿನ್ನದು ಮಹದಪರಾಧ ವಲ್ಲವೆ ? ದಾನ ಮಾಡುವಲ್ಲಿ ಸಕಲೇಶ ಮಾದರಸನು ತನ್ನ ನಿರಿಚ್ಛಾ ವೃತ್ತಿಯನ್ನು ಹೇಗೆ ವ್ಯಕ್ತ ಪಡಿಸಿದ್ದಾನೆ ನೋಡು. ದೇವಿ ಈ ವಚನವನ್ನು ಗಮನಿಸಿದರೆ ಏನೆಂದೆನಿಸುವದು ತಿಳಿಯಿತೇ.

ಗಂಗಾಂಬಿಕೆ : ತಿಳಿಯಿತು ಪತಿದೇವಾ. ದಾನ ಮಾಡುವ ಭಕ್ತಂಗೆ ಕೊಡುವ ದೇವನಿದ್ದಾನೆಂಬ ಭಾವದರಿವು ತಿಳಿಯಿತು. (ಇಷ್ಟರಲ್ಲಿ ಮಹಾದೇವ ಶೆಟ್ಟಿಯು ತೆರೆಮರೆಯಲ್ಲಿ ಸ್ತೋತ್ರ ಗೈಯುತ್ತಾ ಬರುವದು). (ಸ್ತೋತ್ರ ಧ್ವನಿ ಕೇಳಿ) ಪತಿದೇವಾ ? ಅದೋ ದೇವ ಸ್ತುತಿ ಮಾಡುವ ನಿನಾದವು ಕೇಳಿ ಬರುತ್ತಿದೆಯಲ್ಲವೆ ?

ಬಸವೇಶ : ಅಹುದು ಪ್ರಿಯಳೆ (ಬರುತ್ತಿರುವ ಶರಣರನ್ನು ಕಂಡು) ನರಜನ್ಮದೊಳು ಬಂದು ಹರಕಿಂಕರನಾಗಿ, ಗುರುಕರುಣಮಂ ಹೊತ್ತು, ಶರಣರ ಬರುವಂ ಪಡೆದಂ. (ಇಷ್ಟರಲ್ಲಿ ಶರಣರು ಬಂದ ಮೇಲೆ ಉಚಿತಾಸನದಲ್ಲಿ ಕೂಡಿಸುವದು).

ಮಹಾದೇವಶೆಟ್ಟಿ : ಬಸವೇಶ ನಮ್ಮೀ ಬರುವಿನಿಂದ ಎಷ್ಟೊಂದು ಆನಂದಿಸಿದೆಯಲ್ಲ! ನಮಗಿಷ್ಟು ಮಹತಿಯನ್ನು ಕೊಟ್ಟು ಗೌರವಿಸಲಿಕ್ಕೆ ನಮ್ಮಲ್ಲದಾವ ಹಿರಿಮೆಯನ್ನು ಕಂಡುಕೊಂಡೆ ?

ಬಸವೇಶ್ವರ : ಪೂಜ್ಯರೆ, ವರ್ಣಿಸಲಸದಳವಾದ ನಿಮ್ಮ ಶರಣರ ಮಹಿಮೆಯ ನಿಲವನ್ನಾನರಿಯನೆ ? ದೇವಾ ನಿಮ್ಮ ಕಂಡವನಾವಂ ಲೋಕಕ್ಕೆ ಕಣ್ಣಾಗ ! ನಿಮ್ಮಡಿಗಳ ಕೆರ್ಪಂ ಪಿಡಿದವನ ಚರಣವಾರ ಮುಕುಟದೊಳು ಬೀಳದು ? ದೇವಾ ನಿಮ್ಮನ್ನಾರಾಧಿಸಿದ ಮನುಜನ ಕೈ ಆರ ಕೈ ಕೀಳ ಮಾಡದು ? ದೇವ ನಿಮಗೆ ತೊತ್ತಾದಂಗೆ, ತೊತ್ತಾಗದ ಲಕ್ಷ್ಮಿಯಾವಳು?

ದೇವ ನಿಮ್ಮಂ ಸಿಂಗರಿಸಿದಂಗಾಳಾಗದ ಚೆಲುವಾವುದು? ಇಂತು ಮಹಿಮೆವೆತ್ತ ನಿಮ್ಮಂಪೊಗಳಲೆನ್ನಳವಲ್ಲಲೆ ದೇವ. ನಿಮ್ಮೊಳಂ ಸಂಗನೊಳ್ವಿಭೇದಂ ನಿಮ್ಮ ನೆನೆವುದೆ ಶಿವಚಿಂತೆ. ನೋಡುವದೆ ದ್ರುಶನಂ. ನೀವೆ ಗತಿ ನೀವೆ ಮತಿ ನೀವೆ ಪ್ರಾಣ. ಬಳಲಿ ಬಂದಿರುವಿರಿ ತುಸು ವಿಶ್ರಮಿಸಿಕೊಳ್ಳಿ. ಗಂಗಾಂಬಿಕೆ ನಡೆ ಶರಣರ ಲಿಂಗಾರ್ಚನೆಯ ಸಿದ್ಧತೆಯನ್ನು ಏರ್ಪಡಿಸೋಣ (ಎಂದು ಒಳಗೆ ಹೋಗುವದು).

ಮಹಾದೇವ ಶೆಟ್ಟಿ : ಧನ್ಯ ಧನ್ಯ ಬಸವೇಶ ನಿಜವಾಗಿಯೂ ನೀನು ಧನ್ಯ. ನಿನ್ನ ಗುರುಲಿಂಗ ಜಂಗಮ ಭಕ್ತಿ ಪ್ರಭಾವವು ಇಷ್ಟರಲ್ಲಿಯೇ ಗೊತ್ತಾಯಿತು. ಜಂಗಮ ಪ್ರಾಣಿಯಾದ ಮಹಿಮಾನ್ವಿತ. ನಿನ್ನನ್ನು ಪರೀಕ್ಷಿಸ ಬಂದದ್ದು ನನ್ನದೆಂಥ ಪ್ರಮಾದಕಾರ್ಯ ! ಇದಕ್ಕಾಗಿ ನನಗಾವ ಪ್ರಾಯಶ್ಚಿತ್ತ ಕಾಯ್ದು ಕುಳಿತಿದೆಯೋ ನಾಕಾಣೆ. ಹತ್ತೆತ್ತಿನ ಒಜ್ಜೆ ಮುತ್ತು ಮಾಣಿಕಗಳಂ ಬೇಡಿ ನಿನ್ನ ಮುಂದುಗ್ಗೆಡಿಸುವೆನೆಂದು ಕಲ್ಪಿಸಿಕೊಂಡಿದ್ದು ಎಂಥ ಕುಹಕ ವಿಚಾರ ! ಈ ಬಸವೇಶನಿಗೆ ಯಾವುದು ತಾನೆ ಅಸಾಧ್ಯಮುಂಟು ! ಈತನು ಇಚ್ಛಿಸಿದ ಮಾತ್ರದಲ್ಲಿ ಕಲ್ಲು ಕನಕವಾಗಬಹುದು. ಹುಲ್ಲು ರಾಜನ್ನವಾಗಬಹುದು. ಕಾಮಧೇನು ಕಲ್ಪವೃಕ್ಷಗಳೇ ವಶವರ್ತಿಯಾಗಿರುವ ಈ ಮಹಿಮನಲ್ಲಿ ಸತ್ವಪರೀಕ್ಷೆ ಮಾಡಬೇಕೆಂದು ನೆನೆದ ನನ್ನದು ಮೂರ್ಖತನವಲ್ಲವೆ ? ಈ ಬಸವನಿಗೆ ಅಸಾಧ್ಯವಾದುದು ಆವುದೂ ಇದ್ದಂತಿರುವದಿಲ್ಲ. ದೇವಲೋಕದ ಕಮಲ ಬೇಕೆಂದರೂ ಕೊಡಬಲ್ಲ ಕಾಮದಹನದ ವಿಭೂತಿ ಬೇಕೆಂದರೂ ಒದಗಿಸಬಲ್ಲ. ಈಗ ನಾನಿಷ್ಟೆ ಮಾಡಬೇಕು. ನಾನು ಹತ್ತೆತ್ತಿನ ಒಜ್ಜೆ ಮುತ್ತು ಮಾಣಿಕಗಳನ್ನು ಬೇಡಬೇಕೆಂದು ಬಯಸಿದ್ದರ ಬದಲು ಅಕ್ಕಿ, ತೊಗರಿ, ಜೋಳ ಮೊದಲಾದ ಧಾನ್ಯವನ್ನು ಬೇಡಿ ಹೊರಟು ಹೋಗೋಣ.

ಬಸವೇಶ : (ಒಳಗಿಂದ ಬಂದು) ಲಿಂಗಾರ್ಚನೆಯ ಸಿದ್ಧತೆಯಾಗಿದೆ ದಯಮಾಡಿಸಬೇಕು ಬುದ್ಧಿಯವರೆ.

ಮಹಾದೇವಶೆಟ್ಟಿ : ಆಗಲಿ ಬಸವೇಶಾ. ಇಂದು ನಿಮ್ಮ ಮನೆಗೆ ಬಂದುದು ದಾನ ಪಡೆದುಕೊಂಬುವದಕ್ಕಾಗಿ.

ಬಸವೇಶ್ವರ : ಆಗಬಹುದು. ಆ ಸಂಗಮೇಶ್ವರನ ದಯದಿಂದ ಅದಂ ಪೂರೈಸಲಾಗುವದು. ಪೂಜ್ಯರೇ ಏನದು ತಮ್ಮಿಚ್ಛೆ ?

ಮಹಾದೇವ ಶೆಟ್ಟಿ : ಬಸವೇಶ ಈಗ ನಮಗೆ ಹತ್ತೆತ್ತಿನ ಒಜ್ಜಿ ತೊಗರಿ ಅಕ್ಕಿ ಜೋಳ ಒದಗಿಸಿ ಕೊಡಬೇಕು ಕಂಡಿಯಾ !

ಬಸವೇಶ : ಶರಣರೇ ಭಯ ಬೇಡ. ಬೇಡಿ ಬೇಡಿ. ಕಳಿಂಗ ದೇಶದಿಂದ ಪೊರಮಡುವಾಗಳೆನ್ನ, ಬೇಡಬೇಕೆಂದುದ್ಯೋಗಿಸಿದ ಮಾರ್ಗದೊಳೆ ಬೇಡುವದು. ಕುಡುವವಂ ಸಂಗಂ. ಬೇಡುವವಂ ಸಂಗಮದೇವಂ. ಎನಗೊಂದು ಭಾರವಿಲ್ಲ. ಅಂಜಬೇಡಂಜಬೇಡ. ದೇವಾ ನೀವು ಮನದೊಳಗೆ ಸಂಕಲ್ಪಿಸಿ ಕೊಂಡದ್ದನ್ನೇ ಬೇಡಿ.

ಮಹಾದೇವಶೆಟ್ಟಿ : ಶರಣ ಬಸವೇಶಾ. ಶರಣ ಸಮಾಜ ಚಾತಕ ಸುಧಾವರುಷವಾಗಿರುವ ನಿನಗಸಾಧ್ಯವಾದುದಾವುದುಂಟು? ನಿನ್ನ ಪುಣ್ಯ ಕೀರ್ತಿಲತೆ ಪ್ರಪಂಚದಲ್ಲಷ್ಟೇ ಅಲ್ಲ ಉರಗೇಂದ್ರ ಲೋಕದೊಳ್ ಕೂಡ ಬೇರ್ವರಿಯಿತು. ನಿನ್ನ ಉಜ್ವಲವಾದ ಭಕ್ತಿ ಮಹಿಮೆಯು ವರ್ಣಿಸಲಸಾಧ್ಯ. ಲೋಕದೋಳ್ ನಿನ್ನ ನಿರ್ಮಲ ಕೀರ್ತಿಯೆ ಕೀರ್ತಿ. ನಿನ್ನಕಿಂಕರ ವೃತ್ತಿಯೇ ವೃತ್ತಿ. ನಿನ್ನ ನಿಷ್ಠೆಯೇ ನಿಷ್ಠೆ. ಎಲೆ ಬಸವ ಬಸವಣ್ಣ ಬಸವಿ ದೇವ ಬಸವರಸ ಕೇಳು. ನಿನ್ನ ನೇಮವಿದಾರಿಗುಂಟು? ಗುರು ಲಿಂಗಜಂಗಮದೋಳ್ಎರಡಿಲ್ಲದಿಪ್ಪ ನೀನು ಶರಣರ ಸಂಗನೆಂದೆ ಕಾಣ್ಬೆ ಬಂದ ಭಕ್ತರನತ್ಯಾದರಿಪೆ. ಬಪ್ಪ ಭಕ್ತರಂ ಹರ್ಷದೊಳಿದಿರ್ಗೊಂಬೆ. ಬೇಡಿದುದ ಶರಣರ್ಗಿಲ್ಲೆನ್ನದೀವೆ. ಜಾಗೃತ ಸ್ವಪ್ನ ಸುಷುಪ್ತಿಯಾವಸ್ಥಾತ್ರಯಂಗಳೊಳು, ಶರಣರಂ ಸಂಗನೆಂದಲ್ಲದೆ ಕಾಣೆ. ಜಂಗಮ ಪ್ರಾಣಿಯಾಗಿಪ್ಪೆ. ಪರಾಂಗನೆಯರಂ ಹೆತ್ತ ತಾಯ್ಗಳೆಂಬೆ. ಪರದ್ರವ್ಯಮಂ ಕಿಲ್ಬಿಷವೆಂದು ಮುಟ್ಟೆ. ನಡೆದು ತಪ್ಪೆ. ನುಡಿದು ಹುಸಿಯೆ. ನಿನಗೆ ಲೋಭದ ಗಾಳಿ ತೀಡದು. ಮೋಹಕ್ಕೆ ತೆರಹಿಲ್ಲ. ಮದದ ಸೊಗಡು ಹೊದ್ದದು. ಮತ್ಸರಕ್ಕಿಂಬಿಲ್ಲ ಬಸವರಾಜ. ನಿನ್ನ ಗುಣಗಳಂ ಬಣ್ಣಿಸಲೆಮ್ಮಳವಲ್ಲ. ನೀನೇನೊ ಈಶನ ಮೀಸಲಪ್ಪ ಭಕ್ತ. ನಿನಗೆಣೆಯಿಲ್ಲ. ಪಡೆಯಿಲ್ಲ ಪಾಸಟಿಯಾವಂ? ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು ಗಣಪರ್ವಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತು ಕಂಡಿಯಾ !

ಬಸವೇಶ : ಪೂಜ್ಯರೆ ನನ್ನನ್ನೇತಕಿಷ್ಟು ಹೊಗಳುವಿರಿ ? ನಾನೇನೋ ಶರಣರ ಬಂಟರ ಬಂಟ. ಶರಣರ ಕಿಂಕರರ ಕಿಂಕರ. (ಒಂದು ಪಕ್ಕಕ್ಕೆ ಹೊರಳಿನೋಡಿ) ಪಡಿಹಾರರೆ ಶರಣರಿಗಾಗಿ ಹತ್ತೆತ್ತಿನ ಒಜ್ಜೆ ಮುತ್ತು ಮಾಣಿಕ ರತ್ನಗಳನ್ನು ಹೇರಿ ಕಳಿಸುವ ವ್ಯವಸ್ಥೆ ಮಾಡಿರಿ.

ಗಂಗಾಂಬಿಕೆ : (ಒಳಗಿಂದ ಬಂದು) ಪೂಜ್ಯರೇ ಸ್ನಾನದ ಸಿದ್ಧತೆಯಾಗಿದೆ ಮಜ್ಜನ ಶಾಲೆಗೆ ಬಿಜಯಂಗೈಯ್ಯುವ ಕೃಪೆಯಾಗಬೇಕು.

ಮಹಾದೇವಶೆಟ್ಟಿ : ಆಗಲೆಮ್ಮ. ನಿನ್ನ ಪತಿಯೆಂದರೆ ಭಕ್ತಿ ಭಂಡಾರಿ ಬಸವಣ್ಣನೆಂಬುದನು ನಾವಿಂದರಿತುಕೊಂಡೆವು. ಶರಣರೆ ಈ ಬಸವೇಶನೆಂದರೆ

ಅಸಮ ಲಿಂಗಾಂಗೈಕ್ಯದ ಭಾವದ ।
ಬಸವನಂ ಬೇರೊಂದು ಭಾವದೊ ।
ಓಸೆದು ಕೀರ್ತಿಸಲಹುದೆ ಇದು ತಪ್ಪೆಂದು ನುಡಿಯದಿರಿ ॥
ಅಸಮನೇತ್ರನೆ ಬಸವ ರೂಪದಿ ।
ಎಸೆವಲ್ಲದೆ ಬಸವನಿಳೆಗುದ ।
ಯಿಸಿದ ಮಾತ್ರದೊಳವನ ನೀ ನರಜಾತನೆನಲಹುದೆ ॥ ೧ ॥

ಶರಣರೆಲ್ಲ : ಅಹುದು ಪೂಜ್ಯರೇ ಈ ಬಸವೇಶನು ತಾವು ಹೇಳಿದಂತೆ ಆ ಪರಮಾತ್ಮನ ಪರಾವತಾರಿಯೇ ನಿಜ ಧನ್ಯಧನ್ಯ ಬಸವೇಶ್ವರಾ। (ಇಲ್ಲಿ ರಸ್ತಾ ತೆರೆಯು ಬಿದ್ದು, ಅದರ ಮುಂದೆ ಒಳಗಿಂದ ಸ್ತೋತ್ರಗೈಯುತ್ತಾ ಮಹಾದೇವ ಶೆಟ್ಟಿಯು ಹಾಯ್ದು ಹೋಗುವದು).

===***===***===

(ಪ್ರವೇಶ ೧೦)

(ಸ್ಥಳ : ಬಿಜ್ಜಳನ ಒಡ್ಡೋಲಗ. ಮಂಚಣ್ಣ, ಭಟ್ಟರು, ಶೆಟ್ಟರು, ಮಧುವರಸ ಬಸವಣ್ಣನ ವಿಷಯ ಕೊಂಡೆಯ ನುಡಿಯಾಡುವ ಚರ್ಚೆ).

ಮಂಚಣ್ಣ : ಮಧುವರಸರೆ ಬಸವಣ್ಣನವರ ಸ್ವಚ್ಛಂದ ವೃತ್ತಿಗೆ ಮೇರೆಯೆ ಇಲ್ಲದಾಯಿತು. ಇದಕ್ಕೇನು ಮಾಡಬೇಕು?

ಭಟ್ಟರು : ಇಷ್ಟಾದರು ಮಹಾರಾಜರದು ಅವರ ಮೇಲೆಯೇ ಹೆಚ್ಚಿನ ಪ್ರೇಮ ಮಂಚಣ್ಣನವರೆ.

ಮಧುವರಸ : ನೋಡಿ ವಿಚಾರ ಮಾಡಿ. ವಸ್ತುಸ್ಥಿತಿಯು ಹೀಗಿರುವಾಗ ಈ ಬಗೆಗೆ ನಾವೆಲ್ಲರೂ ಆಳವಾಗಿಯೇ ವಿಚಾರ ಮಾಡಬೇಕು.

ಶೆಟ್ಟರು : ಅಹುದು ನನಗಾದರು ಹಾಗೆಯೇ ಅನಿಸುತ್ತಿದೆ. ವೃಥಾ ನಾವು ಮತ್ಸರ ಭಾವದಿಂದ ಬಸವಣ್ಣನವರ ಮೇಲೆ ದೋಷಾರೋಪಣೆ ಮಾಡಹೋಗಿ ನಮ್ಮ ಮುಖಕ್ಕೆ ಕಪ್ಪು ಬಳದೀತೆಂಬ ಹೆದರಿಕೆ ಭಟ್ಟರೆ.

ಭಟ್ಟರು : ಎಂಥ ಮಾತರೆಪ್ಪಾ ಬಸವಣ್ಣನವರು ಮಾಡಿದ ತಪ್ಪಿಗೆ ನಮ್ಮ ಮುಖಕ್ಕೆ ಕಪ್ಪು ಬರುತ್ತಿದೆ. ಅಂದರೆ ಎಷ್ಟು ಹುಚ್ಚತನ !

ಶೆಟ್ಟರು : ಅಹುದರೆಪ್ಪ ಅದೆಲ್ಲವೂ ನಿಜ. ನೀವೆಲ್ಲರೂ ನಿರ್ದೋಷಿಗಳಾಗಿ ಆ ಬಸವೇಶ್ವರರು ದೋಷಿಗಳೆಂದು ಸಿದ್ಧವಾದರೆ ಮಾತ್ರ ಮಹಾರಾಜರ ಮುಂದೆ ನೀವು ಹೇಳುವ ಚಾಡೀ ಮಾತಿನ ಸಫಲತೆಯಾದೀತು.

ಭಟ್ಟರು : ಯಾಕೆ ಶೆಟ್ಟರೆ ನಾವೇ ದೋಷಿಗಳೆಂಬುದಾಗಿರುವ ಅರ್ಥವನ್ನು ಎತ್ತಿ ತೋರಿಸುವಿರಿ. ಆದರೆ ನೀವು ?

ಶೆಟ್ಟರು : ನಾನಾದರೂ ದೋಷಿಯೆ ಭಟ್ಟರೆ. ಅದಕ್ಕಾಗಿ ನಾನು ಹೇಳುವದು ವಿಚಾರ ಮಾಡಿ ಅರಸನ ಮುಂದೆ ದೂರಿಕೊಳ್ಳಬೇಕೆಂದು.

ಮಂಚಣ್ಣ : ಸರಿ ಸರಿ ಎಲ್ಲರು ಶಾಂತರಾಗಿ ವಿಚಾರ ಮಾಡಿ. ನಮ್ಮೊಳಗೇನು ಕಲಹದ ಗಾಳಿ ತೀಡುವದು ಬೇಡ.

ಮಧುವರಸ : ಮಂಚಣ್ಣನವರೆ ಲಂಚದ ವಿಷಯದಲ್ಲಿ ನಾವೆಲ್ಲರೂ ದೋಷಿಗಳೇ. ಬಸವಣ್ಣನವರ ವಿಷಯಕ್ಕೆ ಚಾಡೀ ಹೇಳ ಹೊರಟಾಗ್ಗೆ ನಮ್ಮ ಲಂಚದ ದೋಷವು ಬೈಲಿಗೆ ಬಂದರೆ ?

ಭಟ್ಟರು : ಏನು ಹೇಳಬೇಕರೆಪ್ಪಾ ನಿಮಗೆ ? ಲಂಚ ತಿನ್ನುವುದು ಮುಷ್ಠಿಯೊಳಗಿನ ಮಾತು. ಅದು ಮುಷ್ಠಿಯಲ್ಲಿಯೇ ಇರತಕ್ಕದ್ದು. ಅದು ಬೈಲಿಗೆ ಹೇಗೆ ಬರತದರೆಪ್ಪಾ ? ನೀವೆಲ್ಲರೂ ಮರುಳರೇ ಕಾಣುತ್ತೆ.

ಮಂಚಣ್ಣ : ಅಹುದು ಆ ಲಂಚದ ಸಂಗತಿಯು ಬೈಲಿಗೆ ಬರಲು ಸಾಧ್ಯವಿಲ್ಲ. ಮಧುವರಸರೇ ಇಷ್ಟಾಗಿ ನಾವು ಲಂಚ ತಿಂದುದರಲ್ಲಿ ಮಹಾರಾಜರದೇನು ಹಾನಿಯದೆ ? ನಾವು ತಿಂದುದು ಪ್ರಜೆಗಳ ಸೊತ್ತು ಆ ವಿಷಯ ಬಸವಣ್ಣನವರಂತೆ ಬೈಲಿಗೆ ಬರುವ ಮಾತಂತೂ ದೂರೇ.

ಶೆಟ್ಟರು : ಸರಿ ನಾವೆಲ್ಲರೂ ಅಭಿಪ್ರಾಯ ಪಡುವಂತೆ ಆ ಬಸವಣ್ಣನವರು ದೋಷಿಗಳಾಗಬಹುದೊ ?

ಭಟ್ಟರು : ಅದಕ್ಕೆ ಸಂದೇಹವೇನರಿ ಶೆಟ್ಟರೆ. ಪ್ರತಿನಿತ್ಯ ಕಲ್ಯಾಣದ ತುಂಬಾ ಮೆರೆದು ಸಂಭಾವನೆ ಹೊಂದಿ ಹೋಗುತ್ತಿರುವ ಜಂಗಮರ ಮತ್ತು ಶರಣರ ತಂಡೋಪ ತಂಡವೇ ಆ ಮಾತಿಗೆ ನಿದರ್ಶನ.

ಮಂಚಣ್ಣ : ಅಹುದುಹುದು ಮಧುವರಸರೆ ಈ ಮಾತು ಶತಸಿದ್ಧ. ಬಸವಣ್ಣನವರು ಮಾಡುತ್ತಿರುವದಿದೊಂದು ಮಾದರಿಯ ಲೂಟಿಯೆ ಆಗಿದೆ.

ಭಟ್ಟರು : ಏನರೆಪ್ಪಾ ಇನ್ನೂ ನಿಮಗೆ ಸಂದೇಹವೆ ಬಸವಣ್ಣನವರು ಮಾಡುತ್ತಿರುವ ಈ ವ್ಯವಹಾರಕ್ಕೆ ಲೂಟಿಯೆನ್ನದೆ ಮತ್ತೇನು ಅ ಮಾಡುವಿರಿ ? ಈ ಕಾಲಾವಧಿಯಲ್ಲಿ ಬೊಕ್ಕಸ ಬರಿದಾಗಿರಬೇಕು ಬೊಕ್ಕಸ.

ಮಂಚಣ್ಣ : ಇರಲಿ ಭಟ್ಟರೇ ಈ ವಿಷಯವನ್ನು ಇಂದು ಮಹಾರಾಜನ ಗಮನಕ್ಕೆ ತಂದು ಬಸವೇಶ್ವರರು ಅಪರಾಧಿಗಳೆಂದು ಸಿದ್ಧಮಾಡಿ ಬಿಡೋಣ.

ಭಟ್ಟರು : ಮಂಚಣ್ಣನವರೆ ಮಹಾರಾಜರ ಮುಂದೆ ಹೇಳಲು ಈಗ ಸುಳ್ಳಿನ ಕಂತೆಯನ್ನೇನು ರಚಿಸಿರುವೆವಲ್ಲಾ ! ಅದರ ಜೊತೆಗೆ ಇನ್ನೊಂದು ಮಾತು ಜೋಡಿಸಿ ಬಿಡೋಣ. ಅಂದರೆ ಬಸವಣ್ಣನವರು ಮಹಾಪರಾಧಿಗಳೆಂದು ಪರಿಗಣಿಸಲ್ಪಡುವದೇ ನಿಶ್ಚಯ.

ಮಂಚಣ್ಣ : ಅದಾವ ಮಾತು ಭಟ್ಟರೇ.

ಭಟ್ಟರು : ಅಂದರೆ ನಮ್ಮ ಮಹಾರಾಜರಂತೂ ಹುಸಿ ಹಾದರ ಕಳವುತನದಿಂದ ಜೀವಿಸುವವರನ್ನು ಕಂಡರೆ ಕಿಡಿ ಕಿಡಿಯಾಗುವದು ಖಂಡಿತ.

ಮಧುವರಸ : ಮತ್ತವರನ್ನು ಆಮೂಲಾಗ್ರವಾಗಿ ನಾಶಮಾಡುವದು ನಿಶ್ಚಿತ. ಸರಿ ಆ ಬಗ್ಗೆ ಏನು ಹೇಳಬೇಕೆನ್ನುವದು ಭಟ್ಟರೆ.

ಭಟ್ಟರು : ಅಂದರೆ ಇಷ್ಟೇ. ಆ ಜಂಗಮರು ಬಸವಣ್ಣನವರಿಂದ ಭೋಗ್ಯ ವಸ್ತುಗಳನ್ನು ಪಡೆದುಕೊಂಡು ಹೋಗಿ ಮನಬಂದಂತೆ ವೇಶ್ಯಾಗೃಹಗಳಂ ಸೇರಿ ವಿಷಯ ಮಗ್ನರಾಗಿ ಲೋಲಾಡುತ್ತಿದ್ದಾರೆ. ಇಂಥ ಜಂಗಮರು ಕಲ್ಯಾಣ ಪುರದಲ್ಲೆಲ್ಲ ಕಡೆಗೂ ನೋಡ ಸಿಗುತ್ತಾರೆ. ಈ ತೆರ ಪಾಪ ಕಾರ್ಯನಡೆದರೆ ನಿನ್ನ ರಾಜ್ಯಕ್ಕೆ ಅಳಿಗಾಲವೆಂದು ಮುಂತಾಗಿ ಹೇಳಿ ಮಹಾರಾಜರ ತಲೆ ಕೆಡಿಸಿದರಾಯಿತು.

ಶೆಟ್ಟರು : ಅಹುದು ಇದು ಸೂಕ್ತ ವಿಚಾರ. ಈ ತೆರ ಹೇಳಿದ್ದಾದರೆ ಮಹಾರಾಜರು ಬಸವಣ್ಣನವರನ್ನು ಅಪರಾಧಿಗಳೆಂದು ನಿರ್ಣಯಿಸದಿರಲಾರರು. ಆ ಮೇಲೆ ಅವರ ಮಂತ್ರಿ ಪದಕ್ಕೆ ಅರ್ಧಚಂದ್ರ ಎಂತಲೇ ಹೇಳಬೇಕು.

ಭಟ್ಟರು : ಅನಂತರ ತಿಳಿಯುತ್ತದೆ ಜಂಗಮ ದಾಸೋಹ ನಡೆಸುವ ಬಸವಣ್ಣನವರ ಬಣ್ಣ.

ಮಂಚಣ್ಣ : ಇರಲಿ ಇದೋ ಕೇಳಿ ಈಗ ನಾವೆಲ್ಲರೂ ವಿಚಾರಿಸಿದಂತೆ ಮಹಾರಾಜರ ಮುಂದೆ ಚರ್ಚೆ ಮಾಡಿ, ಮೊದಲು ಖಜಾನೆಯ ಶಿಲುಕಿನ ವಿಷಯವನ್ನು ಚರ್ಚೆಗೆ ತಕ್ಕೊಂಡು ಬಸವಣ್ಣನವರನ್ನು ಕರೆಯಿಸುವ ಹಾಗೆ ಮಾಡೋಣ.

(ಇಲ್ಲಿ ಸ್ತುತಿ ಪಾಠಕರು ಘೋಷಿಸುತ್ತಿರುವಾಗ್ಗೆ ಬಿಜ್ಜಳ ಭೂಪನು ಬಂದು ಸಿಂಹಾಸನವನ್ನಲಂಕರಿಸುವದು).

ಬಿಜ್ಜಳ: ಸಭಿಕರೇ ಎಂದಿನಂತಲ್ಲದೆ, ಹರ್ಷಿತ ವದನರಾಗದೆ, ಉದ್ವೇಗಗೊಂಡಂತಿರುವ ಆವೇಶ ಪೂರ್ಣವಾದ ನಿಮ್ಮ ಭಾವವನ್ನು ನಿಮ್ಮ ನಿಮ್ಮ ಮುಖ ಮುದ್ರೆಗಳೇ ಚಿತ್ರಿಸುತ್ತಲಿವೆ. ಹೀಗಾಗಲು ಕಾರಣವೇನು ?

ಮಧುವರಸ : ನಿಜ ಮಹಾರಾಜರೆ. ತಮ್ಮ ಊಹೆಯಂತೆ ನಮಗಾರಿಗೂ ಯತ್ಕಿಂಚಿತವೂ ಸೊಗಸಿರುವದಿಲ್ಲ.

ಬಿಜ್ಜಳ : (ಕೌತುಕದಿಂದ) ಏನು ! ನಿಮಗೆಲ್ಲರಿಗೆ ಸೊಗಸಿರುವದಿಲ್ಲವೆ ? ಅಮರ ಲೋಕ ಸದೃಶವಾದ ಶಾಂತಿ ನೆಮ್ಮದಿಗಳಿಗೆ ನೆಲೆವೀಡಾಗಿರುವ ನನ್ನ

ರಾಜ್ಯದಲ್ಲಿರುವ ಪ್ರಜಾಜನರು, ಸೊಗಸಿಲ್ಲದಿರುವದು ಅಸಂಭವ. ಅದರಲ್ಲಿಯೂ ರಾಜ ಸೂತ್ರವಿಡಿದು ಆಡಳಿತ ನಡೆಸುವ ಮಂತ್ರಿ ವರ್ಗದಲ್ಲಿರುವ ನಿಮಗೆ ಸೊಗಸಿಲ್ಲವೆಂದರೆ ಈ ಮಾತು ನನಗೆ ವಿಸ್ಮಯವಾಗಿ ತೋರುತ್ತೆ.

ಮಂಚಣ್ಣ : ಮಧುವರಸರೇ, ಭಟ್ಟರೆ ನಾವು ಮಾಡಿದ ಯೋಜನೆಯು ಫಲಿಸುವದು ಸಾಧ್ಯವಿಲ್ಲ. ಮಹಾರಾಜರಿಗೆ ನಾವಾಡುವ ಮಾತುಗಳು ವಿಸ್ಮಯವಾಗಿ ತೋರುತ್ತವೆಂದ ಮೇಲೆ ಹೋಯಿತು. ನಮ್ಮ ವಿಚಾರಗಳು ಏನಿದ್ದು ಏನು ಮಾಡುವದದೆ ? ಪ್ರಾಮುಖ್ಯವಾಗಿ ಮಹಾರಾಜರ ವಿಶ್ವಾಸವೇ ನಮ್ಮ ಮೇಲಿಲ್ಲ.

ಬಿಜ್ಜಳ : ಅಲ್ಲಲ್ಲ ಮಂಚಣ್ಣನವರೇ ಹಾಗೆ ಮಾಡಬೇಡಿ. ನಿಮ್ಮಗಳ ಮೇಲೆ ನಮ್ಮ ವಿಶ್ವಾಸವಿಲ್ಲವಂತಲ್ಲ ಮಂಚಣ್ಣನವರೇ ನೀವು ಸೊಗಸಿಲ್ಲವೆಂದು ನುಡಿಯುವಿರಿ. ಹೀಗಾಗಲಿಕ್ಕೆ ನನ್ನ ರಾಜ್ಯದಲ್ಲಿ ಯಾವುದರ. ಕೊರತೆಯುಂಟು ! ಅಲ್ಲಿಗಲ್ಲಿಗೆ ನಿರ್ಮಿಸಿದ ಕೊಳಂಗಳಿಂ ಕೆರೆಗಳಿಂ ಅನುಕೂಲತೆಯಂ ಪಡೆದು ಫಲವತ್ತಾಗಿ ಬೆಳೆಯದ ಭೂಮಿಯಿಲ್ಲ. ಮತ್ತಂ ನನ್ನ ಪ್ರಜಾ ಜನರಲ್ಲಿ ಹುಸಿ ಕಳವು ಹಾದರ ಮೊದಲಾದ ದುರ್ನೀತಿ ದುಮಾರ್ಗಕ್ಕಿಂಬಿಲ್ಲ. ಜಾತಿ ವೈರಂಗಳಂ ಮರೆಯದ ಮೃಗಂಗಳಿಲ್ಲ. ಸುಖೋಪಭೋಗಿಗಳಿಗೆ ಸ್ವರ್ಗೀಯ ಸುಖವನ್ನೊದವಿಸುವ ಸುರಪುರೋದ್ಯಾನಮಂ ಜರೆಯದ ಬನಂಗಳಿಲ್ಲ. ಇಂತಪ್ಪ ಪವಿತ್ರತಮ ನನ್ನ ನಾಡಿನಲ್ಲಿರುವ ಪ್ರಜಾಜನರು ಸುಖಸಾಮ್ರಾಜ್ಯದಲ್ಲಿ ಲೋಲಾಡುತ್ತಿರುವಾಗ್ಗೆ ನಿಮಗೆ ಸೊಗಸಿಲ್ಲವೆಂದ ಮೇಲೆ ವಿಸ್ಮಯವಲ್ಲದೆ ಮತ್ತೇನು ?

ಮಂಚಣ್ಣ : ಅದೆಲ್ಲವೂ ನಿಜ ಆದರೆ ?

ಬಿಜ್ಜಳ : ಹೇಳಿ ಹೇಳಿ ಏನುದು ! ಆದರೆ ಎಂಬುವ ನಿಮ್ಮ ಸಂಶಯೋದ್ಗಾರ ?

ಭಟ್ಟರು: ಮಹರಾಜರೆ ಸಂಶಯವೆಂದರೆ ಇಷ್ಟೇ. ಮಂಚಣ್ಣನವರು ಅದನ್ನು ಹೇಳೀದರೆ ಅದು ತಮಗೆ ಚಾಡೀ ಮಾತೆಂದು ಅನಿಸಬಹುದಲ್ಲ ಎಂಬುದೇ ತುಸು ಸಂಕೋಚ.

ಬಿಜ್ಜಳ: ಅದೇಕೆ ? ಇದ್ದದ್ದನ್ನು ಇದ್ದಕ್ಕಿದ್ದ ಹಾಗೆ ಹೇಳಿದರೆ ತಪ್ಪೇನು ? ಹೇಳಿ ಹೇಳಿ ಅದಕ್ಕೆ ಸಂಕೋಚ ಪಡಬೇಡಿ.

ಮಧುವರಸ: ಮಂಚಣ್ಣನವರೇ ಮಹಾರಾಜರಿಗೆ ಅದೆಲ್ಲವನ್ನು ವಿಶದ ಪಡಿಸಿ ಬಿಡಿ

ಶೆಟ್ಟರು : ಹೇಳಿ ಹೇಳಿ ಮಂಚಣ್ಣನವರೆ ಹೆದರಿಕೆ ಏಕೆ ?

ಮಂಚಣ್ಣ : ಮಹಾಪ್ರಭೋ ರಾಜ್ಯಾಲಯದ ಹೊರತಾಗಿ ಮಿಕ್ಕೆಡೆಯೊಳೆಲ್ಲ ನಾಡಿನ ನಾಲ್ಕೂ ನಿಟ್ಟಿನಿಂದ ಬಂದಿರುವ ಜಂಗಮರು ತುಂಬಿಕೊಂಡಿದ್ದಾರೆ. ಕಲ್ಯಾಣದಲ್ಲೆಲ್ಲಿ ನೋಡಿದರೂ ಅವರ ಮಠ ಮನೆಗಳು, ಅವರ ಹಾವಳಿಯು ಘನವಾಗಿದೆ. ಪರದಾಟ ಪಿರಿದಾಗಿದೆ.

ಭಟ್ಟರು : ಮಹಾರಾಜರೇ ಆ ಜಂಗಮರ ವೈಭವದ ಹಿರಿಮೆಯನ್ನು ಎಷ್ಟೆಂದು ಹೇಳಬೇಕು ? ಅವರ ಸ್ವಚ್ಛಂದ ವೃತ್ತಿಯು ಪರಮಾವಧಿಗೆ ಮುಟ್ಟಿ ಹೋಗಿದೆ.

ಬಿಜ್ಜಳ : ಏನು ! ಶಿವಸ್ವರೂಪಿಗಳೆಂದು ಗಣಿಸಲ್ಪಡುತ್ತಿರುವ ಜಂಗಮರಿಗೆ ವೈಭವದಹೆಮ್ಮೆ ! ಮತ್ತು ಅವರದು ಸ್ವಚ್ಛಂದ ವೃತ್ತಿ ! ಇರಲಿ ಹೊರ ವಲಯದಿಂದ ಆಗಮಿಸಿರುವ ಆ ಜಂಗಮರಿಗೆ ಇಷ್ಟೊಂದು ವೈಭವವು ಪ್ರಾಪ್ತವಾದುದಾದರೂ ಹೇಗೆ ?

ಮಂಚಣ್ಣ : ಮಹಾರಾಜರೆ ಅದನ್ನೇನೆಂದುಸುರಲಿ ! ಪ್ರಧಾನಮಂತ್ರಿ ಪದಕ್ಕೇರಿದ ಬಸವೇಶ್ವರರೇ ಇದಕ್ಕೆ ಕಾರಣ.

ಬಿಜ್ಜಳ : ಅಂದರೆ !

ಶೆಟ್ಟರು : ಅಂದರೇನು ಮಹಾರಾಜರೇ, ಆ ಜಂಗಮರಿಗಾಗಿ ತಮ್ಮ ಬೊಕ್ಕಸದ ಹಣವು ಬರಿದಾಗುತ್ತಿದೆ.

ಬಿಜ್ಜಳ : (ಕೌತುಕದಿಂದ) ಬೊಕ್ಕಸದ ಹಣ ಬರಿದಾಗುತ್ತಿದೆ ! ಈ ಮಾತು ನಂಬಲರ್ಹವಾದುದೇ ?

ಮಂಚಣ್ಣ : ಅಷ್ಟೇ ಯಾಕೆ ಮಹಾರಾಜರೇ ಆ ಶಿವಭಕ್ತರ ಸಿರಿಯನೇನಂ ಭಿನ್ನವಿಪೆವು! ನಿನ್ನ ಭಂಡಾರದೊಳಗಿರುವ ನೀನಿಕ್ಕಲಮ್ಮದ ಪದಕಂ ಶರಣರ ಪೇರುರದೊಳು. ನೀಂ ಮುಟ್ಟಲಂಜುವ ತಾರಹಾರಂ ಶರಣರ ಕೊರಳ್ಗಳೊಳು ನೀಂ ಕೈಕೊಳಿಸಲಮ್ಮದ ವಜ್ರದ ಕಂಕಣಂ ಶರಣರ ಕರಗಳೊಳು. ನೀಂ ನೋಡಲಮ್ಮದ ರತ್ನ ಮುದ್ರಿಕೆಗಳು ಶರಣರ ಕೋಮಲಾಂಗುಲಿಯೊಳು. ನೀಂ ತೊಡಲಮ್ಮದ ದಿವ್ಯಾಭರಣಂ ಮೈಯೊಳು ನೀಂ ಉಡಲಮ್ಮದ ನವಸ್ತ್ರಮಂ ಶರಣರ ಅಂಗದೊಳು ಇದಕ್ಕೆಲ್ಲ ಬಸವೇಶ್ವರರೆ ಕಾರಣಂ. ಭಂಡಾರವೆಲ್ಲ ಸೂರೆಹೋದುದು.

ಮಧುವರಸ : ಮಹಾರಾಜರೆ ಈ ರೀತಿಯಲ್ಲಿ ರಾಜ್ಯದೆಲ್ಲರಂ ಭಕ್ತರಿಗೆ ಬರಿದಾಯಿತು. ಭಕ್ತರುರುವಣೆ ಪಿರಿದಾಯಿತು.

ಭಟ್ಟರು : ಅಲ್ಲದೆ ವಿಷ್ಣುವಂ ಬೈದಡೆಂದರೆ ವೈಷ್ಣವರಂ ಕಂಡರಾರು ? ಬ್ರಹ್ಮರಂ ಬಗೆಯರೆಂದರೆ ಬ್ರಾಹ್ಮಣರಂ ಬಲ್ಲರಾರು ! ಜಿನನಂ ಕಿತ್ತು ಬಿಸುಟುವರೆಂದರೆ ಜೈನರ ಸುದ್ದಿಯೆಲ್ಲಿಯದು! ಬೊಮ್ಮರಂ ಬೆಳ್ಮಾಡುವರೆಂದರೆ ಸ್ವಾಮಿಗಳಂ ಸರಕು ಮಾಡುವರಾರು ? ಇಂತು ಷಡ್ದರ್ಶನಂ ಕೀಳಾದವು. ಮೃಡದರುಶನಂ ಮೇಲಾದುದು.

ಮಂಚಣ್ಣ : ಮಹಾರಾಜರೆ ಆ ಜಂಗಮರ ಉರುವಣೆಯನ್ನು ಏನು ಹೇಳಬೇಕು? ಬಸವೇಶ್ವರರಿಂದ ಧನಕನಕ ವಸ್ತ್ರಾಲಂಕಾರಗಳನ್ನು ಪಡೆದುದರ ಫಲವಾಗಿ ಮದೋನ್ಮತ್ತರಾದ ಆ ಜಂಗಮರು ವಾಸಿಸುತ್ತಿರುವದು ವೇಶ್ಯಾಗೃಹಗಳಲ್ಲಿ.

ಬಿಜ್ಜಳ : ಜಂಗಮರು ವಾಸಿಸುತ್ತಿರುವದು ವೇಶ್ಯಾಗೃಹಗಳಲ್ಲಿ !

ಮಧುವರಸ : ಅಹುದು ಮಹಾರಾಜರೇ ಆ ಜಂಗಮರು ಬೊಕ್ಕಸದ ಹಣವನ್ನು ವೇಶ್ಯಾ ಸ್ತ್ರೀಯರಿಗಾಗಿಯೇ ಸೂರೆ ಮಾಡುತ್ತಿದ್ದಾರೆ. ಇದೆಲ್ಲವು ಬಸವೇಶ್ವರರ ಆಡಳಿತದ ಪ್ರಭಾವ.

ಬಿಜ್ಜಳ : ನಾನು ವಿಸಂಗತವಾದುದಿದನ್ನೇನು ಕೇಳುತ್ತಿರುವೆ ! ಇದೇನು ಕನಸೋ ನನಸೋ ನನಗರಿಯದಾಗಿದೆ. ಇವರು ಹೇಳುವ ತಾತ್ಪರ್ಯವೇನೆಂದರೆ ಜಂಗಮರಿಗಾಗಿ ಬೊಕ್ಕಸದ ಲೂಟಿ. ಮತ್ತು ಜಂಗಮರು ವಾಸಿಸುವದು ವೇಶ್ಯಾ ಗೃಹಗಳಲ್ಲಿ ಮತ್ತೆ ಇವೆಲ್ಲಕ್ಕೆ ಬಸವೇಶ್ವರರೇ ಕಾರಣೀಭೂತರು. (ವಿಚಾರಿಸಿಕೊಂಡು) ಬಸವೇಶ್ವರರೆಂದರೆ ನನ್ನ ದೃಷ್ಟಿಕೋನದಲ್ಲಿ ಬೃಹದ್ವ್ಯಕ್ತಿ. ಮಹಿಮಾಪುರುಷ. ಇಂತಿರುವಾಗ ಅವರ ಮೇಲೆ ಬಂದಿರುವ ಈ ದೋಷಾರೋಪಣೆಯ ಗ್ರಾಹ್ಯವಾದುದಿರಬಹುದೆಂದು ವಿಮರ್ಶಾತ್ಮಕ ವಿಚಾರವಿಲ್ಲದೆ ನಾನಿದನ್ನು ಹೇಗೆ ನಂಬಲಿ!

ಮಂಚಣ್ಣ : ಮಹಾರಾಜರೇ ಅದಕ್ಕೆ ಸಂದೇಹವೇಕೆ ? ಬಸವೇಶ್ವರರು ಬೊಕ್ಕಸದ ಹಣವನ್ನು ಸೂರೆ ಮಾಡುವರೆಂಬುದನ್ನು ನಿದರ್ಶನಕ್ಕೆ ತಂದು ಕೊಡಲು ಖಜಾನೆಯ ಶಿಲ್ಕು ಶೋಧಿಸುವದೇ ತಕ್ಕ ಉಪಾಯವಾಗಿದೆ. ಖಜಾನೆಯಲ್ಲಿ ಶಿಲ್ಕು ಸಧ್ಯ ಹದಿನೆಂಟು ಕೋಟಿ ದ್ರವ್ಯ ಸ್ಥಿತವಾಗಿರಬೇಕಾಗಿದೆ. ಈಗಲೇ ಬಸವೇಶ್ವರರನ್ನು ಕರೆಯಿಸಿಕೊಂಡು ಆ ಶಿಲ್ಕಿನ ನಿರ್ಣಯ ತಕ್ಕೊಂಡು ಬಿಡಿ ಅಂದರಾಯಿತು.

ಬಿಜ್ಜಳ : ಹೂಂ ಆಗಲಿ ನಿಮ್ಮ ವಿಚಾರದಂತೆ ಬಸವೇಶ್ವರರನ್ನು ಕರಿಸಿ ಆ ಮಾತಿನ ಸತ್ಯತೆಯನ್ನು ಕಂಡು ಬಿಡೋಣ. ಪಡಿಹಾರರೇ ದಂಡಾಧೀಶರಾದ ಬಸವೇಶ್ವರರನ್ನು ಕರೆದುಕೊಂಡು ಬನ್ನಿ.

ಚಾರವ : ಆಜ್ಞಾ ಮಹಾನ್.

ಬಿಜ್ಜಳ : (ಬಸವೇಶ್ವರರು ಬರುವದನ್ನು ಕಂಡು) ಬನ್ನಿ ಬಸವೇಶ್ವರರೇ ಕೂತುಕೊಳ್ಳಿ,

ಬಸವೇಶ್ವರ : (ಆಸನದ ಮೇಲೆ ಹೋಗಿ) ಮಹಾರಾಜರೇ ಆತುರದಿಂದ ನನ್ನಂ ಕರೆಯಿಸಿಕೊಂಡುದಕ್ಕೆ ಏನಾದರೊಂದು ವಿಚಾರ ವೈಶಿಷ್ಟ್ಯವಿರಬೇಕಲ್ಲವೆ?

ಬಿಜ್ಜಳ : ದಂಡಾಧೀಶರೆ ಏನೆಂದು ಹೇಳಲಿ ನನ್ನ ಚಿತ್ತವು.......

ಬಸವೇಶ್ವರ : ನಿಮ್ಮ ಭಾವವು ಎಂದಿನಂತಿಲ್ಲವೆಂಬುದನ್ನು ನಿಮ್ಮ ಮುಖ ಮುದ್ರೆಯೆ ವ್ಯಕ್ತಪಡಿಸುತ್ತಲಿದೆ. ಮಹಾರಾಜರೇ ಮುಚ್ಚುಮರೆ ಬೇಡ. ನಿಮಗಾದ ತಲ್ಲಣವೇನು ಹೇಳಿ.

ಬಿಜ್ಜಳ : ದಂಢಾಧೀಶರೇ ನಮ್ಮ ಪುರದಲ್ಲಿ ಅಸಂಖ್ಯಾತ ಜಂಗಮರು ಶರಣರು ಬಂದು ತುಂಬಿಕೊಂಡಿದ್ದಾರೆಂದು ಕೇಳಿಕೊಂಡಿದ್ದೇನೆ. ಇದು ಸತ್ಯ ಸಂಗತಿಯೆ ?

ಬಸವೇಶ್ವರ : ಅಹುದು ಮಹಾರಾಜರೆ ಇದು ಸತ್ಯ ಸಂಗತಿ.

ಬಿಜ್ಜಳ : ಮತ್ತೆ ಕೇಳಿ ಬಸವೇಶ್ವರರೇ ಎಲ್ಲಿ ನೋಡಿದರೂ ಆ ಜಂಗಮರ ಮಠ ಮನೆಗಳು ಸೂಳೆ ಬಂಟಿಕೆಯೇ ಆ ಜಂಗಮರ ವೃತ್ತಿ. ಇದಕ್ಕೆಲ್ಲ ನಮ್ಮ ಬೊಕ್ಕಸದ ಹಣ ಸೂರೆ !

ಬಸವೇಶ್ವರ : ಏನು ! ಜಂಗಮರು ಸೂಳೆಗಾರಿಕೆಯಲ್ಲಿರುವರೆ ? ಅದಕ್ಕಾಗಿ ನಿಮ್ಮ ಬೊಕ್ಕಸದ ಹಣ ಸೂರೆ !

ಬಿಜ್ಜಳ : ನೋಡಿ ಬಸವೇಶ್ವರರೇ ನಾನು ನಿಮ್ಮನ್ನೆ ನಂಬಿ ಪುರದ ಭಂಡಾರ ಬೊಕ್ಕಸ ಗಜ ಹಯಾವಳಿಯಂ ನಿಮ್ಮ ವಶವರ್ತಿ ಮಾಡಿದರೆ ನೀವು ಈತೆರ ಬೊಕ್ಕಸಮೆಲ್ಲಮಂ ಪಾಳ್ಗೈದಿರಿ ಎಂದು ನಮ್ಮೀ .....

ಬಸವೇಶ್ವರ : ಮಹಾರಾಜರೇ ವ್ಯಾಕುಲಗೊಳ್ಳಬೇಡಿ. ನಿಮ್ಮ ಖಜಾನೆಯ ಶಿಲ್ಕಿಗೆ ನಿರ್ಣಯವಂ ತಂದುಕೊಡುವೆ. ಸಾಕು ಈ ತೆರದ ಮಂತ್ರಿಪದ (ಎಂದು ಕಿರೀಟವನ್ನು ತೆಗೆಯುತ್ತಾ) ನಿಮ್ಮ ವಿಶ್ವಾಸವಿಲ್ಲದಿರುವಾಗ್ಯೆ ಈ ಮಂತ್ರಿ ಪದದ ಆಸೆ ನನಗೆ ಬೇಡ ಇದೋ ತೆಗೆದುಕೊಳ್ಳಿ (ಎಂದು ಕಿರೀಟವನ್ನು

ಕೊಡಹೋಗುವನು).

ಬಿಜ್ಜಳ : ಬೇಡಿ ಬೇಡಿ ದಂಡಾಧೀಶರೇ ಹೀಗೆ ಉದಾಸೀನರಾಗಬೇಡಿ. ಈಗ ನಾನಾಡಿದುದು ನನ್ನ ಹೃತ್ಪೂರ್ವಕವಾದುದಲ್ಲ. ನಿಮ್ಮ ಬಗ್ಗೆ ನನ್ನ ಪೂಜ್ಯ ಭಾವನೆಯಿದೆ. ಆದರವಿದೆ. ಭಕ್ತಿಯಿದೆ. ಈತೆರ ದೋಷಾರೋಪಣೆಯು ಬಂದದ್ದು ಈ ಮಂತ್ರಿ ವರ್ಗದವರಿಂದ ಈಗ್ಗೆ ನಿಮ್ಮ ಮೇಲೆ ಹದಿನೆಂಟು ಕೋಟಿ ದ್ರವ್ಯ ಸ್ಥಿತವಾಗಿರಬೇಕೆಂಬುದೇ ಇವರೆಲ್ಲರ ವಾದವಾಗಿದೆ. ದಣ್ಣಾಯಕರೇ ಹಾಗಾಗಬಹುದೆ.

ಬಸವೇಶ್ವರ: ಮಹಾರಾಜರೇ ಅದಕ್ಕೆ ಅನುಮಾನವೇಕೆ? ಖಜಾನೆಯನ್ನು ಶೋಧಿಸಿಕೊಂಡು ಬರಲು ಅಪ್ಪಣೆ ಮಾಡಿ.

ಬಿಜ್ಜಳ : ಪಡಿಹಾರರೇ ಗಣಕರ ಹತ್ತಿರ ಹೋಗಿ ಖಜಾನೆಯ ಶಿಲ್ಕು ಎಷ್ಟಿದೆಎಂಬುದನ್ನು ತಿಳಿದುಕೊಂಡು ಬನ್ನಿ.

ಚಾರವ : ಆಜ್ಞಾ ಮಹಾನ್.

ಬಸವೇಶ್ವರ: ಮಹಾರಾಜರೆ ಲಕ್ಷದಲ್ಲಿಡಿ. ಶರಣರ ಮೇಲೆ ಕಳವು ಹಾದರದ ಆರೋಪವನ್ನಿಟ್ಟಿರಿ. ಆದರೆ ನಮ್ಮ ಶಿವಬಕ್ತಿ ಸಂಕುಲಕ್ಕೆ ಕಳವು ಹಾದರಗಳು ಎಂದುಂ ಹೊದ್ದಲರಿಯವು. ಶರಣಸಂಕುಲವು ಈ ನೆಲದೊಳಿರ್ಪನ್ನೆಗಂ ಕಲಿಯು ಕೂಡಾ ಬಂದು ಹೊದ್ದಲರಿಯದು. ಹಲವು ಮಾತಿನಿಂದೇನು ಪ್ರಯೋಜನ? ಕೊಂಡೆಯ ನುಡಿ ಕೇಳಿದ್ದಕ್ಕೆ ಫಲವೇನೆಂಬುದನ್ನು ಈಗಲೇ ಕಂಡುಕೊಳ್ಳುವಿರಂತೆ.

ಚಾರವ : ಮಹಾರಾಜರೇ ಖಜಾನೆಯ ಹಣವನ್ನು ಎಣಿಕೆ ಮಾಡಿ ಮಾಡಿ ಗಣಕರು ಬೇಸತ್ತು ಹೋದರು. ದ್ರವ್ಯದೆಣಿಕೆಯು, ಹದಿನೆಂಟು ಕೋಟಿಗೆ ಬದಲಾಗಿ ಅದರ ಇಮ್ಮಡಿಯೋ ಮುಮ್ಮಡಿಯೋ ನೂರ್ಮಡಿಯೋ ಆಗಿ ವೃದ್ಧಿಯಾಗುತ್ತಿದ್ದುದು ಕಂಡು ಬರುತ್ತಿದೆ ಪ್ರಭೋ.

ಬಸವೇಶ್ವರ: ಕೇಳಿದಿರಾ ಪ್ರಭುಗಳೇ ! ಈಗಲಾದರೂ ಗೊತ್ತಾಯಿತೇ!

ಬಿಜ್ಜಳ: ಗೊತ್ತಾಯಿತು ದಣ್ಣಾಯಕರೆ ಗೊತ್ತಾಯಿತು. ಶರಣರ ಕೂಡ ಸರಸವಾಡುವದು ಕೆಂಡವ ಕೊಂಡು ಮಂಡೆಯ ಸಿಕ್ಕು ಬಿಡಿಸಿಕೊಂಡಂತೆಂಬುವ ಮಾತು ಗೊತ್ತಾಯಿತು. ಈ ಮಂಚಣ್ಣಾದಿಗಳ ಕೊಂಡೆಯ ನುಡಿ ಕೇಳಿ, ನಿಮ್ಮಂ ನಿರ್ಣಯಕ್ಕೆ ನಿಲ್ಲಿಸಿದ್ದು ನನ್ನದು ಸರ್ವಥಾ ತಪ್ಪಾಯಿತು.

ಬಸವೇಶ್ವರ: ವ್ಯಾಕುಲವೇಕೆ ಬಿಡಿ. ಪ್ರಭುಗಳೆ ಅದರಲ್ಲೇನು ತಪ್ಪುಂಟು ! ಶಿಲ್ಕಿನ ನಿರ್ಣಯವಂತೂ ಆಗಿ ಹೋಯಿತು. ಅವಿಶ್ವಾಸ ಉದ್ಭವಿಸುವಂಥ ಈ ಪರಿಸ್ಥಿತಿಯಲ್ಲಿ ನನಗೇನೂ ಈ ಮಂತ್ರಿ ಪದ...

ಬಿಜ್ಜಳ : ಬೇಡಿ ಬೇಡಿ. ಬಸವೇಶ್ವರರೇ ಮುಂದಿನ ಮಾತು ಉಚ್ಚರಿಸಬೇಡಿ ದಣ್ಣಾಯಕರೇ ಮಂತ್ರಿಪದ ಬೇಡೆಂದುಸುರಿ ನನ್ನ ಹೃದಯಕ್ಕೆ ವಜ್ರಾಘಾತ ಮಾಡಬೇಡಿ. ನನ್ನ ಬೇಡಿಕೆಯನ್ನಲ್ಲಗಳೆದು, ಮಂತ್ರಿ ಪದ ತೊರೆದು ನನ್ನ ರಾಜ್ಯವನ್ನು ಪೈಶಾಚಿಕ ರಾಜ್ಯವನ್ನು ಮಾಡಬೇಡಿ. ಕರಕಂಜಾತಮಂ ಮುಗಿದು ಬೇಡುವೆ. ದಂಡಾಧೀಶರೇ ನಿರಾಕರಿಸಬೇಡಿ. ನನ್ನ ರಾಜ್ಯವು ಸ್ವರ್ಗೀಯ ಸುಖದಲ್ಲಿ ಲೋಲಾಡುವಂತೆ ಆಡಳಿತ ನಡಿಸುವವರು ತಾವಲ್ಲದೆ, ಮತ್ತಾರಿರುವರು ಬಸವಣ್ಣನವರೆ ?

ಬಸವೇಶ್ವರ : ಇರುವರಲ್ಲ ! ಪ್ರಭುಗಳೇ ? ಮಂಚಣ್ಣಾದಿ ಈ ಮಂತ್ರಿಗಳು.

ಬಿಜ್ಜಳ : ದಣ್ಣಾಯಕರೆ ಈ ಪಂಡಿತರ ಮಾತಿಗೆ ಕಿವಿಗೊಟ್ಟು ಎಷ್ಟು ಬೇಕಷ್ಟು ನನ್ನ ಮಾನಭಂಗವಾಯಿತು. ಬಸವೇಶ್ವರರೆ ನನ್ನ ಬೇಡಿಕೆಯನ್ನು ನಿರಾಕರಿಸದೆ ನನ್ನಲ್ಲಿ ಮತ್ತೇನಾದರೂ ಗುಣದೋಷಗಳು ಕಂಡು ಬಂದಿದ್ದರೆ, ಅವನ್ನು ವ್ಯಕ್ತಪಡಿಸಿ ನನ್ನಂ ಉದ್ಧರಿಸಬೇಕೆಂದು ಬೇಡುವೆ.

ಬಸವೇಶ್ವರ: ಮಹಾರಾಜರೆ ಕೇಳಿ. ಔದಾರ್ಯ ಗುಣವುಳ್ಳವರೂ ದಯಾದೃಷ್ಟಿಯುಳ್ಳವರೂ ಸಕಲ ಸದ್ಗುಣಗಳ ತವರು ಮನೆಯೂ ಆಗಿರುವ ತಮ್ಮಲ್ಲಿ, ಚಂದ್ರನಲ್ಲಿ ಕಪ್ಪುಕಲೆಯಿದ್ದಂತೆ. ಒಂದೇ ಒಂದು ದೋಷ ಮಾತ್ರ ಮನೆ ಮಾಡಿಕೊಂಡಿದೆ ಪ್ರಭೋ.

ಬಿಜ್ಜಳ : ಹೇಳಿ ಹೇಳಿ ದಣ್ಣಾಯಕರೇ ಅದಾವ ದೋಷವದು ?

ಬಸವೇಶ್ವರ: ನಿಮ್ಮಲ್ಲಿಯ ಆ ದೋಷವೆಂದರೆ, ಈ ತೆರ ಕೊಂಡೆಯ ನುಡಿ ಕೇಳುವದೇ ಆಗಿದೆ.

ಬಿಜ್ಜಳ: ಅಹುದು ದಂಡಾಧೀಶರೇ, ಇಂದು ಆ ಬಗೆಗೆ ನನಗೆ ಸಾಕಷ್ಟು ಪ್ರಾಯಶ್ಚಿತ್ತ ಆಗಿ ಹೋಗಿದೆ. ಅಂತಃಪರ ಚಾಡೀ ಮಾತು ಬಿಟ್ಟು ಬಿಡುವೆ.

ಬಸವೇಶ್ವರ: ಮಹಾರಾಜರೇ ಅದಂ ಬಿಟ್ಟರೇನೆ ನಿಮ್ಮ ಕಲ್ಯಾಣ. ಮಂಜಿನ ಹನಿಗಳಿಂದ ಕಮಲಗಳೂ ಜಲಬಿಂದುವಿನಿಂದ ಜೇನುತುಪ್ಪವೂ ಹುಳಿಯಿಂದ ಹಾಲೂ ಕೋಪದಿಂದ ತಪಸ್ಸಿನ ಫಲವೂ ಕೆಡುವಂತೆ, ಪಿಸುಣರ

ಚಾಡಿ ಮಾತಿನಿಂದ ಅರಸಾಳ್ವ ಧರೆಯು ಕೆಡುವದು ನಿಶ್ಚಯ. ಅದರಿಂದ ಚಾಡಿ ಮಾತನ್ನು ಯಾವಾಗ್ಯೂ ಕೇಳಲಾಗದು. ಮತ್ತಂ ಖಳರ, ಮಾಯಾವಿಗಳ ದುರ್ವಿನೀತರ ದುರ್ಜನರ ನೀತಿಮಾರ್ಗ ವಿಪ್ಲವರ, ದುರ್ಬೋಧಕರ ದುರಾಚಾರ ಪರರ, ಕುಮಂತ್ರಾನ್ವಿತರ, ಶೃತಿಪಥವನುಳಿದು ನಡೆಯವರ ಕಂಡೊಡೆ ನಿರಾಕರಿಸುವದಿದು ನೆಲನಾಳ್ವ ಅರಸು ಮಕ್ಕಳ ನೀತಿ. ರಾಜ್ಯದೋಳ್ ಧರ್ಮಿಷ್ಠರುಳ್ಳವರಂ ಪಾಲಿಪುದು. ಮತ್ತಂ ವಿಮಲ ಧರ್ಮಕ್ಕೆಡರು ಬಂದೊಡೆ, ಆಲಸ್ಯಮಂ ಮಾಡದೆ ಅವರಂ ಪರಿಹರಿಪುದಿದು ನೃಪಧರ್ಮ ರಹಸ್ಯ. ಮತ್ತು ಪರರಿಗೆ ತಾ ಮಾಡಿದುಪಕಾರಗಳಂ ತನಗೆ ಪರರಿಂದೊದಗಿದ ಅಪಕಾರಂಗಳಂ ಪರರಕೂಡಾಡಿ ತೋರುವದು ಉತ್ತಮರ ಮತಕ್ಕೆ ಸಲ್ಲದು. ಪ್ರಭುಗಳೆ ಈ ತೆರ ರಾಜ ನೀತಿಯನರಿತು ಪ್ರಜಾಪಾಲನೆ ಮಾಡುವಲ್ಲಿ ತಾವು ಆ ಸಕ್ತರಾದ ಮಾತ್ರದಲ್ಲಿ ಪ್ರಜೆಗಳು ಸ್ವರ್ಗೀಯ ಸುಖದಲ್ಲಿ ಲೋಲಾಡುವರು ಕಂಡಿರಾ ಪ್ರಭುಗಳೇ.

ಬಿಜ್ಜಳ : ದಣ್ಣಾಯಕರೇ ನಿಮ್ಮದಾವ ಮಾತಿಗೂ ನಾನು ಪ್ರತಿಯಿಲ್ಲ ನಿಮ್ಮ ಪ್ರಬೋಧೆಯನ್ನು ಶಿರಸಾವಹಿಸಿ ಹಾಗೆಯೇ ಪರಿವರ್ತಿಸುವೆ. ದಯಾಘನಾ ಇಂಥ ಪವಿತ್ರತಮ ವ್ಯಕ್ತಿಯನ್ನು ಒದಗಿಸಿಕೊಟ್ಟ ನಿನ್ನ ಉಪಕಾರವನ್ನು ಎಷ್ಟೆಂದು ಸ್ಮರಿಸಲಿ

(ಅಂಕತೆರೆಯು ಬೀಳುವದು).

===***===***===

॥ ತೃತೀಯಾಂಕ ॥
(ಪ್ರವೇಶ ೧)

(**ಸ್ಥಳ** : ವಾರಂಗನೆಯ ಮನೆ. ವಿಟಪುರುಷನ ಬರುವಿಕೆ. ವಾರಂಗನೆಯು ಮನೆಯ ಪಡಸಾಲೆಯಲ್ಲಿ ಕೂತಿರುವದು. ಲಾಲೂ ಎಂಬ ನಪುಂಸಕನು ಕುಡಿಯಲು ಪಾನಕ ಕೊಡುವದು).

ಸುಂದರಾಸಾನಿ : ಲಾಲೂ ?

ಲಾಲೂ : ಆಯಾ ಬಹಣ (ಒಳಗಿಂದ ಬರುವದು).

ಸುಂದರಾಸಾನಿ : ಯಾಕೆ ಇನ್ನೂ ಪಾನಕ ತಯ್ಯಾರಿಸಲಿಲ್ಲೇ ?

ಲಾಲೂ : ತಯ್ಯಾರ ಹುವಾ ಬಹಣ. ಲಾಯಾ ಲಾಯಾ (ಎಂದು ಒಳಗೆ ಹೋಗಿ ತಂದು ಕೊಡುವದು).

ಸುಂದರಾಸಾನಿ : (ಪಾನಕವನ್ನು ಕುಡಿಯುತ್ತಾ) ಲಾಲೂ ಇಂದು ಯಾರೊಬ್ಬರೂ ಇಲ್ಲಿಗೆ ಆಗಮಿಸಲಿಲ್ಲವಲ್ಲಾ!

ಲಾಲೂ :– ಆಯಿಂಗೆ ಬಹಣ, ಆಯಿಂಗೆ. ಚಿಂತಾ ಮತ್ ಕರೋ.

ಸುಂದರಾಸಾನಿ :– ಲಾಲೂ ಅದೋ ನೋಡಿದಿಯಾ ? ವಿಟಪುರುಷರ ಬರವಿಲ್ಲದುದಕ್ಕೆ ಮೃಗಜಲದಂತೆ ನಿರಾಶೆಗೊಂಡ ನನ್ನ ಮನತಣಿಸಲು ಬರುತ್ತಿರುವ ಆ ಯುವಕನನ್ನು ನೋಡು. ನನ್ನ ಕಣ್ಮನಂಗಳಿಗೆ ರಸದೂಟವನ್ನೊದಗಿಸುತ್ತಿರುವ ಆತನು, ತನ್ನ ಕಮನೀಯವಾದ ಸೌಂದರ್ಯದಿಂದ ಎಷ್ಟು ಸೊಗಸು ಬೀರುತ್ತಿದ್ದಾನೆ!

ಲಾಲೂ :– ಜೀ ಹಾ. ಬಹಣ. ಉಸಕಾ ಸುಂದರ ರೂಪ ಮೇರಾ ಮನ್ ಕೋ ಬಹುತ್ ಮೀಠಾ ಲಗರಹೆ ಹೈ. ಕ್ಯಾಗೆ ಮಾ ಜಿತನಾ ಮೀಠಾ ! ಜಿತನಾ ಮೀಠಾ ! (ಎಂದು ಕೈ ಬೆರಳುಗಳನ್ನು ಮುದ್ದಿಸುವದು).

ಸುಂದರಾಸಾನಿ :– ಅಹುದು ಲಾಲೂ ನೀನೆಂದಂತೆ ಅವನ ಕಂಡಾಕ್ಷಣ ಆತನ ಆಲಿಂಗನ ಚುಂಬನಾದಿ ಸ್ಪರ್ಶಸುಖಕ್ಕಾಗಿ ನಾನವನಂ ಯಾವಾಗ್ಗೆ

ಹೊಂದುವೆನೋ ಎಂದು ನನ್ನ ಮನವು ಕಾತರಿಸಹತ್ತಿದೆ.

ಲಾಲೂ :– ನಕೋ ನಕೋ ಬಹಣ. ಐಸಾ ಆತುರ ಮತ್‌ಕರೋ. ವೋ ಇದರ್ ಆನೆ ಕೆ ಬಾದ, ಉಸಕಾ ಸಬ್ ಸಂಪತ್ ಹಮಾರಾ ಹಸ್ತಗತ ಹುವಾ. ಐಸಾ ಕಾತರಿ ಉಸಕೆ ವಚನ ಲೇಕರ್ ಉಸಕಾ ವಶ ಹೋನಾ ಅಚ್ಛಾ.

ಸುಂದರಾಸಾನಿ : ಸೈ ಸೈ ಲಾಲೂ ಇದೊಳ್ಳೆ ವಿಚಾರ. ನಾನವನಿಗೆ ಮನಸೋತಿದ್ದರೂ ಅವನಿಗದಂ ತಿಳಿಯಗೊಡದೆ ನನ್ನ ಮಾಯಾಜಾಲದಿಂದ ಕೆಲನಿಮಿಷ ಅವನಂ ತಿರಸ್ಕರಿಸಿದಂತೆ ನಟಿಸಿ ತೋರಿಸಿ, ಅವನಾತುರತೆಯ ಬೆಳಿಸಿ, ಅವನಿಂದ ವಚನ ತಕ್ಕೊಂಡೇ ತೀರುವೆ. ಅದೋ ಆತನು ಬಂದೇ ಬಿಟ್ಟ . ನಾನು ಒಳಗೆ ಹೋಗುವೆ ಅವನು ಬಂದ ನಂತರ ನೀನು ಅವನ. ತುಚ್ಛೀಕರಿಸಿ ನನ್ನ ಮೇಲೆ ಅವನ ಆತುರತೆಯು ಕೆರಳುವಂತೆ ನಟಿಸು ತಿಳಿಯಿತೇ (ಎಂದು ಒಳಗೆ ಹೋಗುವದು).

ವಿಟಪುರುಷ : (ಒಂದು ಪಕ್ಕದಲ್ಲಿ ಅಡ್ಡಾಡುತ್ತಿರುವ ಲಾಲೂನನ್ನು ಕರೆಯುವದು ಏ ತಮ್ಮಾ ತುಸು ಇತ್ತಾ ಕಡೆಗೆ ಬರುವಿಯಾ ?

ಲಾಲೂ : ಕ್ಯಾ ಕ್ಯಾ .

ವಿಟಪುರುಷ : ತುಸು ಇತ್ತಾ ಕಡೆಗೆ ಬಾರೋ ಅಂದೆ.

ಲಾಲೂ : ಅರೆ ಕೋನ ಹೈ ತೂ ? ಜಾ ಜಾ.

ವಿಟಪುರುಷ : ಎಲೋ ಇಷ್ಟೇಕೆ ಸಿಟ್ಟೋ. ನನ್ನ ಮಾತನಾದರೂ ತುಸುಕೇಳು.

ಲಾಲೂ : ನಹಿ ನಹಿ ಜಾ ಏ ವಕ್ತ ನಹಿ. ಬಹಣ ವಾಸ್ತೆ ಲೋಕ ಆನೇಕ ಹೈ. ಅಬ್ ಇದರ್ ಕೋ ನಹಿ ಮತ್ ಆನಾ.

ವಿಟಪುರುಷ : ಎಲೋ ಹುಚ್ಚಾ ! ನಾ ಬಂದದ್ದು ನಿಮ್ಮ ಅಕ್ಕನ ಸಲುವಾಗಿಯೇ.

ಲಾಲೂ : ಐಸಾ ಕ್ಯಾ? ಬಹುತ್ ಅಚ್ಛಾ.

ವಿಟಪುರುಷ : ಎಲೋ ನಿನ್ನ ಹೆಸರೇನು ?

ಲಾಲೂ : ಮೇರಾ ನಾಮ ಲಾಲೂ.

ವಿಟಪುರುಷ : ಪರವಿಲ್ಲ ಪರವಿಲ್ಲ ಹೆಸರು ಚನ್ನಾಗಿದೆ ಲಾಲೂ.

ಲಾಲೂ : ಕ್ಯಾ ಮಾಮಾ ?

ವಿಟಪುರುಷ : ನಿಮ್ಮ ಅಕ್ಕನ ಹೇಸರೇನು ?

ಲಾಲೂ : ಉಸಕಿ ನಾಮ ಸುಂದರಾಸಾನಿ

ವಿಟಪುರುಷ : ಸರಿ. ಲಾಲೂ ಅವಳನ್ನು ತುಸು ಹೊರಗೆ ಕರೆ ತರುವಿಯಾ ?

ಲಾಲೂ : ಜೀ ಹಾ. ಮಾಮಾ ಉಸಕು ಲೇಕರ್ ಆತಾ ಹುಂ. ತಬ್‌ತಕ್ ಏ ಕುರ್ಚಿ ಪರ್ ಬೈಠಿಯೆ (ಎಂದು ಒಳಗೆ ಹೋಗಿ ಅವಳ ಮುಂದೆ ಧೂಳ ಜಾಡಿಸುತ್ತಾ ಕರೆತರುವದು).

ವಿಟಪುರುಷ : (ಅವಳು ಬರುವದನ್ನು ಕಂಡು) ಬನ್ನಿ ಬನ್ನಿ ಸುಂದರಾಸಾನಿಯವರೇ (ಎಂದು ಎದ್ದು ನಿಲ್ಲುವದು).

ಸುಂದರಾಸಾನಿ : ಕೂತುಕೊಳ್ಳಿ ಕೂತುಕೊಳ್ಳಿ (ಎಂದು ತಾನು ಆತನ ಬಳಿ ಕುರ್ಚಿಯ ಮೇಲೆ ಕೂಡುವದು).

ವಿಟಪುರುಷ :– ಇದುವರೆಗೂ ನಾನು ತಮ್ಮನ್ನು ಕಂಡಿರಲಿಲ್ಲ. ಮಾತ್ರ ತಮ್ಮ ಹೊಗಳಿಕೆಯನ್ನು ಕೇಳಿ ಬಲ್ಲವನಾಗಿದ್ದೆ. ನಾಡಿನ ನಾಲ್ಕೂ ನಿಟ್ಟಿನಲ್ಲಿ ತಮ್ಮ ಹೆಸರೇ ಹೆಸರು.

ಸುಂದರಾಸಾನಿ : ಅದರಲ್ಲೇನಚ್ಚರಿ ! ಗುಲಾಬಿ ಮಲ್ಲಿಗೆಗಳು ತಮ್ಮಲ್ಲಿ ಮಕರಂದವಿದೆ ಎಂದು ಹೇಳಿಕೊಳ್ಳುವ ಅಗತ್ಯವೇ ಇಲ್ಲ. ಸ್ವಾಭಾವಿಕವಾಗಿಯೇ ಅವುಗಳ ಮಕರಂದವು ಪಸರಿಸುವದುಂಟು.

ವಿಟಪುರುಷ : ಅಹುದಹುದು. ಅದೇ ತೆರ ತಮ್ಮ ಚಲುವಿಕೆಯ ಕೀರ್ತಿಯೆಂಬ ಮಕರಂದವು ಪಸರಿಸಿದುದಕ್ಕೆ ನನ್ನ ಧನ್ಯವಾದಗಳು.

ಸುಂದರಾಸಾನಿ : ಈಗ್ಗೆ ತಾವಿಲ್ಲಿಗೆ ಬಂದ ಕಾರ್ಯ ವಿಶೇಷ !

ವಿಟಪುರುಷ : ಕುಸುಮಗಳಿದ್ದೆಡೆಗೆ ಭ್ರಮರಗಳು ಬರುವದೇತಕ್ಕೆಂದು ಬೇರೆ ಹೇಳಬೇಕೆ ?

ಸುಂದರಾಸಾನಿ : ಸರಿ, ಸರಿ ತಿಳಿಯಿತು ನಿಮ್ಮ ಮನೋಗತ. ಆದರೆ ವಿಟಪುರುಷರೇ ನೀವು ಬಯಸಿ ಬಂದ ಈ ಕುಸುಮ ಪರಿಮಳ ಹೀರಲಿಕ್ಕೆ ಸಾಮಾರ್ಥ್ಯ ಬೇಕು. ಅದು ಸಾಮಾನ್ಯರ ಮಾತಲ್ಲ.

ವಿಟಪುರುಷ : ಸುಂದರಾಸಾನಿಯವರೇ ನೀವು ಕೇಳುವ ಸಾಮಾರ್ಥ್ಯವು ನನ್ನಲ್ಲಿದೆ.

ಸುಂದರಾಸಾನಿ : ಊಹಂ ಇರಲಿಕ್ಕಿಲ್ಲ. ವಿಟಪುರುಷರೇ ಆ ಸಾಮರ್ಥ್ಯವಿದ್ದವರು

ತೀರಾ ವಿರಳ.

ವಿಟಪುರುಷ : ಸುಂದರಾಸಾನಿಯವರೇ ಆ ವಿಷಯದಲ್ಲಿ ಕೊಂಚಕೂಡ ಸಂಕೋಚ ಪಡಬೇಡಿ. ನಾನು ಆಗರ್ಭ ಶ್ರೀಮಂತನೆಂಬುದಕ್ಕೆ.........

ಸುಂದರಾಸಾನಿ: ಊಹುಂ ಅಲ್ಲಲ್ಲ. ನಾನಾಡಿದ್ದು ಶ್ರೀಮಂತಿಕೆಯ ಬಗೆಗಲ್ಲ ಕುಬೇರನಂಥ ಧನ ಸಂಗ್ರಹವೂ ನಿಮ್ಮಲ್ಲಿರಬಹುದು ಆದರೆ ನನಗದರ ಪ್ರಯೋಜವೇನು ?

ವಿಟಪುರುಷ : ಇಂದೆಂಥಾ ಮಾತು ಸುಂದರಾಸಾನಿಯವರೇ. ನಾನೇ ನಿಮಗೆ ಮನಸೋತಿರುವಾಗ್ಯೆ ನನ್ನ ಶ್ರೀಮಂತಿಕೆಯಿಂದ ಪ್ರಯೋಜನವಾಗಲಾರದೇ ನಿಮಗೆ ?

ಸುಂದರಾಸಾನಿ : ಆಗಲಾರದೆಂಬುದೇ ನನ್ನ ಅಭಿಮತ. ಬಹಳವಾದರೆ ನೀವೇನೋ ವಸ್ತ್ರ ಒಡವೆಗಳನ್ನು ಕೊಡಬಹುದು. ಅಕ್ಕಿ, ಬೇಳೆ ಬೆಲ್ಲ ಮುಂತಾದ ಆಹಾರ ಧಾನ್ಯಗಳನ್ನು ಒದಗಿಸಬಹುದು.

ವಿಟಪುರುಷ : ಹೂಂ ಇಷ್ಟಾದರಾಗಲಿಲ್ಲವೆ ? ಹಾಗಾದರೆ ನಿಮ್ಮ ಮನ ತೃಪ್ತಿಗೆ ಮತ್ತೇನು ?

ಸುಂದರಾಸಾನಿ: ಇದೋ ಕೇಳಿ. ನನ್ನಂ ವಶವರ್ತಿಯನ್ನಾಗಿ ಮಾಡಬಯಸುವ ಪುರುಷನು ತನ್ನ ಸರ್ವಸ್ವ ಪರಿತ್ಯಾಗಕ್ಕೆ ಸಿದ್ಧನಾಗಬೇಕು.

ವಿಟಪುರುಷ: ಸುಂದರಾಸಾನಿಯವರೇ, ಅದಕ್ಕೇಕೆ ಇಷ್ಟು ಸಂಕೋಚ ! ನೀವು ಹೇಳಿದುದಕ್ಕೆಲ್ಲ ನಾನು ಸಿದ್ಧನೆ.

ಸುಂದರಾಸಾನಿ: ನೋಡಿ ವಿಚಾರ ಮಾಡಿ. ಈಗ್ಗೆ ನಾನು ಹೇಳುವಂತೆ ನೀವು ನಡೆದುದಾದರೆ ಲೋಕ ನಿಂದೆಗೆ ಗುರಿಯಾಗುವ ಸಂಭವ.

ವಿಟಪುರುಷ: ಇಷ್ಟೇ ತಾನೆ ! ಸ್ವರ್ಗೀಯ ಸುಖವನ್ನುಂಟು ಮಾಡುವ ತಮ್ಮನ್ನು ದೊರಕಿಸಿಕೊಳ್ಳುವ ಸಂದರ್ಭದಲ್ಲಿ ಇಂಥ ಲೋಕಗೀತವನ್ನು ನಾನೇನೂ ಗಮನಿಸುವವನಲ್ಲ ಸುಂದರಾಸಾನಿಯವರೇ......

ಸುಂದರಾಸಾನಿ: ಈ ಮಾತು ನಿಜವೆ ?

ವಿಟಪುರುಷ: ನಿಜಕ್ಕೂ ನಿಜ. ಹೇಳಿ ಹೇಳಿ ಏನದು ತಮ್ಮಭೀಷ್ಟ ?

ಸುಂದರಾಸಾನಿ: ಇದೋ ಕೇಳಿ. ಯಾವನು ತನ್ನ ಮನಧನಗಳನ್ನು.

ನನಗರ್ಪಿಸುವನೋ ಆತನಿಗೆ ವಶಳಾಗಬೇಕೆಂಬುದು ನನ್ನ ಪ್ರತಿಜ್ಞೆ. ನೀವೀ ನನ್ನ ಪ್ರತಿಜ್ಞೆಯನ್ನು ಪೂರ್ೈಸುವಿರಾ ?

ವಿಟಪುರುಷ : ನಿಸ್ಸಂದೇಹವಾಗಿ ಸುಂದರಾಸಾನಿಯವರೇ.

ಸುಂದರಾಸಾನಿ : ಹಾಗಾದರೆ ಈ ಲೋಕ ಸಾಕ್ಷಿಯಾಗಿ ತಮ್ಮ ತನು ಮನ ಧನಗಳನ್ನು ನನಗೆ ಸಮರ್ಪಿಸಿರುವೆನೆಂದು ನುಡಿದು ಅಭಯ ವಚನವನ್ನು ನೀಡಿ ನೋಡೋಣ.

ವಿಟಪುರುಷ: ಸುಂದರಾಸಾನಿಯವರೇ ಈ ಲೋಕ ಸಾಕ್ಷಿಯಾಗಿ ಅಷ್ಟೆ ಅಲ್ಲ, ಈ ಪಂಚಭೂತಗಳ ಸಾಕ್ಷಿಯಾಗಿ ಇಂದು ನನ್ನ ತನು ಮನ ಧನಗಳನ್ನು ನಿನಗರ್ಪಿಸಿ ಬಿಟ್ಟಿರುವೆ. ಇದೊ ತೆಗೆದುಕೊಳ್ಳಿ ಅಭಯ ವಚನ (ಎಂದು ಕೈ ಮೇಲೆ ಕೈ ಹಾಕುವದು) ಆಯಿತೆ.

ಸುಂದರಾಸಾನಿ: ಆಯಿತು ಸುಂದರಾ ಮನ ತಣಿಯಿತು ಇಂದಿನಿಂದ ಈ ಸುಂದರಾ ಸಾನಿಯು ತಮ್ಮ ಚರಣದಾಸಿ, ಮತ್ತು ಈ ಮನೆಗೆ ತಾವೇ ಯಜಮಾನರು. ನಡೆಯಿರಿ ಫಲಾಹಾರಕ್ಕೆ ಹೋಗೋಣ.

ವಿಟಪುರುಷ: ಸುಂದರಾಸಾನಿಯವರೇ ತಮ್ಮ ಕೋಮಲ ಕಂಠದಿಂದ ಒಂದು ಮಧುರ ಗೀತೆಯಾಗಲಿ. ತದನಂತರ ಫಲಾಹಾರ ತಕ್ಕೊಳ್ಳೋಣವಂತೆ.

ಸುಂದರಾಸಾನಿ: ಆಗಲಿ ಪ್ರಿಯಾ ತಮ್ಮಿಚ್ಛೆ.

ಪದ : ರಾಗ :ಖಮಾಜ ತುಮರಿ–ತ್ರಿತಾಳ

ನಾನಾದೆ ತವ ಪ್ರೇಮಿಸು ನಲ್ಲೆ ।
ಮಮ ಪ್ರಿಯಾ ಚಂದ್ರಕಲಾ ॥ ಪಲ್ಲ ॥
ಪ್ರೇಮ ರಸದ್ಘೂಟ ಸಮರಸಕೂಟ ।
ಕಾಮಿತ ಫಲವಾ ಮೊಂದಿದೆ ॥ ೧ ॥
(ರಸ್ತಾ ತೆರೆಯು ಬೀಳುವದು).

===***===***===

(ಪ್ರವೇಶ ೨)

(ಸ್ಥಳ : ಬೀದಿ. ಶೆಟ್ಟರು, ಭಟ್ಟರು ಬಸವೇಶ್ವರರ ವಿಷಯಕ್ಕೆ ಚರ್ಚಿಸುತ್ತಾರೆ).

ಭಟ್ಟರು : ಶೆಟ್ಟರೇ ಏನಾದರೊಂದು ಪ್ರಯತ್ನ ಮಾಡಿ, ಬಸವಣ್ಣನ ಬಣ್ಣ ಕಡಿಮೆ ಮಾಡಿ. ಮಹಾರಾಜನ ಮನಸ್ಸು ತಿರುಗಿಸಬೇಕೆಂದರೆ ಅದಕ್ಕೆ ಬದಲಾಗಿ ನಮ್ಮದೇ ಅವಹೇಳನವಾಗಹತ್ತಿತಲ್ಲ !

ಶೆಟ್ಟರು: ಅದು ಸ್ವಾಭಾವಿಕ. ಎರಡನೆಯವರ ಮುಖಕ್ಕೆ ಮಸಿ ಬಳಿಯ ಹೋದರೆ ಮೊದಲು ತಮ್ಮ ಬೆರಳಿಗೇನೆ ಕಪ್ಪು ಹತ್ತಿದ್ಹಾಗೆ ಅದು ಸಾಧ್ಯವೆಂಬುದನ್ನು ನೀವು ಅರಿತಂತಿಲ್ಲ ಕಾಣುತ್ತೆ.

ಭಟ್ಟರು : ಅದು ಸರಿಯೇ ಶೆಟ್ಟರೇ ಆದರೆ ಇನ್ನೇನು ಮಾಡಬೇಕು ?

ಶೆಟ್ಟರು : ಇನ್ನು ನಾವೇನು ಮಾಡಬೇಕಾಗಿದೆ. ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾದವು. ಮೊನ್ನಿನ ಖಜಾನೆಯ ಶಿಲ್ಕಿನ ನಿರ್ಣಯದಲ್ಲಿ ಬಸವಣ್ಣನ ಪಾರುಪತ್ಯ ಆಗಿಯೇ ತೀರುತ್ತದೆಂದು ಬಗೆದುಕೊಂಡು ನಾವು ತದ್ವಿಪರೀತವಾಗಿ ಬಸವಣ್ಣನ ಮಹಿಮೆಯೇ ಪ್ರಕಟವಾದದ್ದನ್ನು ನೋಡಬೇಕಾಯಿತಲ್ಲ. ಇದಕ್ಕೇನೆನ್ನಬೇಕು ?

ಭಟ್ಟರು : ಅದಕ್ಕೇನೆನ್ನುವಿರಿ. ನಿಜವಾಗಿಯೂ ಅದು ಮಾಯಾಬಜಾರ. ಅಲ್ಲರೀ ಖಜಾನೆಯ ಹಣವು ಇದ್ದ ಶಿಲ್ಕಿಗಿಂತ ಇಮ್ಮಡಿಯೋ ಮುಮ್ಮಡಿಯೋ ನೂರ್ಮಡಿಯೋ ಆಗಿ ಗಣತಿ ಮಾಡುತ್ತಾ ಹೋದಂತೆ ಹೆಚ್ಚಾಗುತ್ತಾ ಹೋಯಿತೆಂದರೆ ಇದಕ್ಕೇನು ಮಾಯಾದಾಟವೆನ್ನುವಿರೋ ಏನನ್ನುವಿರಿ ನೀವೆ ಹೇಳಿರಲ್ಲ !

ಶೆಟ್ಟರು : ಅದು ಏನೇ ಇರಲಿ ಬಿಡಿ ಭಟ್ಟರೇ ಅದೋ ನೋಡಿ ಬಸವೇಶ್ವರರು ಇದೇ ದಾರಿಗುಂಟ ಬರುತ್ತಿದ್ದಾರೆ.

ಭಟ್ಟರು : ಅಲ್ಲವೆ ! ಹೂಂ ಬರಲಿ. ಇಲ್ಲೇನಾದರೂ ಅವರ ಪ್ರಮಾದ ಘಟಿಸುವದೋ ಹೇಗೆಂಬುದನ್ನು ನಾವು ತೆರೆಮರೆಯಾಗಿ ನಿಂತು ನಿರೀಕ್ಷಿಸೋಣ ನಡೆಯಿರಿ.

ಶೆಟ್ಟರು: ಭಟ್ಟರೇ ಇಲ್ಲೇನು ಅವರ ತಪ್ಪು ನಮಗೆ ಸಿಗಬೇಕಾಗಿದೆ ?

ಭಟ್ಟರು: ಅದೇ ಅದೋ ನೋಡಿ ಶೆಟ್ಟರೇ. ಈ ಪಕ್ಕದಲ್ಲಿರುವ ಅಸ್ಪೃಶ್ಯರ ಕೇರಿಯೊಳಗೆ, ಕಂಬಳಿನಾಗಿದೇವನೆಂಬವನೊಬ್ಬ ಶರಣನಿದ್ದಾನೆ. ಅವನ ಮೇಲೆ ಬಸವೇಶ್ವರರ ಪ್ರೇಮ ಅಪಾರವಂತೆ.

ಶೆಟ್ಟರು : ಅಹುದು ಭಟ್ಟರೇ. ಬಸವೇಶ್ವರರು ಅಸ್ಪೃಶ್ಯರ ಕೇರಿಗಳಲ್ಲಿಯೂ ಆಗಾಗ್ಗೆ ಸಂಚರಿಸುತ್ತಿರುವರೆಂದು ನಾನು ಕೇಳಿದ್ದೇನೆ.

ಭಟ್ಟರು : ಅದಕ್ಕಾಗಿಯೇ ಶೆಟ್ಟರೇ ನಾನು ಹೇಳಿದುದು.

ಶೆಟ್ಟರು : ಅಲ್ಲವೆ ! ಹಾಗಾದರೆ ಈಗ ನಾವು ತೆರೆ ಮರೆಯಾಗಿ ನಿಲ್ಲೋಣ ಮತ್ತು ಏನೇನು ವ್ಯವಹಾರ ಒದಗುವದೋ ನೋಡೋಣ. (ಎಂದು ಇಬ್ಬರು ತೆರೆ ಮರೆಯಾಗಿ ನಿಂತುಕೊಳ್ಳುವದು. ಆಮೇಲೆ ಬಸವೇಶ್ವರರು ಪ್ರವೇಶಿಸುವದು).

ಬಸವೇಶ್ವರ : (ಬಸವೇಶ್ವರರು ಬಂದ ಮೇಲೆ ತೆರೆಮರೆಯಲ್ಲಿ ಘಂಟೆನಾದ ಮತ್ತು ಸ್ತೋತ್ರ)

(ಸ್ತೋತ್ರ ಧ್ವನಿಯನ್ನು ಕೇಳಿ) ಎಂಥ ಪ್ರಶಾಂತ ಸಮಯವಿದು ! ಈ ಶುಭ ಮಹೂರ್ತದಲ್ಲಿ ಓಂಕಾರಕ್ಕೆ ಧ್ವನಿಗೂಡಿಸುವಂತೆ ಘಂಟಾನಾದವಂಗೈದು ಭಕ್ತಿರಸಮಂ ಹೊರಹೊಮ್ಮಿಸಿ ಪರಮಾತ್ಮನ ಆರಾಧನೆಯನ್ನು ಎಷ್ಟು ಕರ್ಣಮಧುರವಾಗಿ ಮಾಡುತ್ತಿದ್ದಾನೆ ! (ಇಲ್ಲಿ ತೆರೆ ಮರೆಯಲ್ಲಿ ಮತ್ತೆ ಸ್ತೋತ್ರವಾಗುವದು). ಸರಿ ಈ ಧ್ವನಿಯು ಶರಣರಾದ ಕಂಬಳಿನಾಗಿದೇವರದು. ಗುರುಲಿಂಗ ಜಂಗಮವನ್ನು ನಿಷ್ಠೆಯಿಂದಾರಾಧಿಸಿ ದಿವ್ಯಶಕ್ತಿಯನ್ನು ತನ್ನಲ್ಲಳವಡಿಸಿಕೊಂಡ, ಮಹಿಮನಾತ. ಅಂತೆಯೇ ಅವರ ಸ್ತೋತ್ರವು, ಶ್ರಾವಕರ ಮನವನ್ನು ಈ ತೆರ ಆಕರ್ಷಿಸಹತ್ತಿದೆ.

ನಾಗಿದೇವ: (ತೆರೆ ಮರೆಯಲ್ಲಿ) ಓಂ ಹರಹರ ಮಹದೇವ ! ಓಹಿಲಯ್ಯಂಗೆ ಹಿತಾರ್ಥ, ಉದ್ಭಟಯ್ಯಗೆ ಹಿತಾರ್ಥ, ಬಸವರಾಜಂಗೆ ಹಿತಾರ್ಥ, ಆರೋಗಿಸು.

ಬಸವೇಶ್ವರ : ಅಕ್ಕಟಾ ! ಈ ನಾಗಿದೇವರ ಭಕ್ತಿಯು ಎಂಥ ಅನುಪಮ ! ಶರಣ ಸಂಕುಲವೇ ಈ ಶರಣರ ಪಂಚಪ್ರಾಣ. ಅವರೀಗ ಲಿಂಗಾರ್ಚನೆಯಲ್ಲಿದ್ದು ಪ್ರಸಾದ ಸ್ವೀಕಾರಕ್ಕಾಗಿ ನಮ್ಮನ್ನು ನೆನೆಯುತ್ತಿದ್ದಾರೆ. ಆ ನಾಗಿದೇವರ ಇಚ್ಛೆಯಂತೆ ಅವರ ಗೃಹ ಪ್ರವೇಶಗೈದು, ಪ್ರಸಾದ ಸ್ವೀಕಾರ ಮಾಡುವ ಕುರಿತು, ನಾನೀಗಲೆ ತಳುವದೆ ಪೋಗುವೆ (ಎಂದು ಹೋಗುವದು).

ಭಟ್ಟರು : ಬನ್ನಿ ಬನ್ನಿ ಶೆಟ್ಟರೇ. ಈ ಸಲ ಮಾತ್ರ ಬೇಟೆಯು ನಿಸ್ಸಂದೇಹವಾಗಿ ಬಲೆಯಲ್ಲಿ ಬಿದ್ದಿತು.

ಶೆಟ್ಟರು : ಅಹುದು ಭಟ್ಟರೇ ಇನ್ನು ನಾವು ಚಿಂತಿಸುದೇ ಬೇಡ. ಹುಡುಕುವ ಬಳ್ಳಿ ಕಾಲಿಗೆ ತೊಡಕು ಬಿದ್ದಂತೆ, ಅನಾಯಾಸವಾಗಿ ಬಸವಣ್ಣನ ದೊಡ್ಡ ತಪ್ಪು ಸಿಕ್ಕು ಹೋಯಿತು.

ಭಟ್ಟರು : ಶೆಟ್ಟರೇ ಇದೇನು ಸಣ್ಣ ತಪ್ಪೆ ? ನಮ್ಮ ಸನಾತನ ಧರ್ಮವೆಂದರೇನು ? ಈ ಬಸವಣ್ಣನು ಹೊಲೆಗಲಿಸಿ ಬಿಡುವದೆಂದರೇನು ? ಮಹಾರಾಜರು ಇದರಲ್ಲಿ ಬಸವಣ್ಣನವರನ್ನು ಹೇಗೆ ಮನ್ನಿಸುವರೋ ನೋಡಿ ಬಿಡೋಣ.

ಶೆಟ್ಟರು : ಈ ತಪ್ಪಿಗಾಗಿ ಬಸವಣ್ಣನಿಗೆ ಶಿಕ್ಷೆಯಾಗಲಿಕ್ಕೆ ಬೇಕು ಭಟ್ಟರೇ.

ಭಟ್ಟರು : ಆಗದೇ ಏನರೀ. ಇದರಲ್ಲಿ ಮಹಾರಾಜರು ಹೇಗೆ ಬಿಡುತ್ತಾರೆ ? ಈ ಸಂದರ್ಭದಲ್ಲಿ ಬಸವಣ್ಣನ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ, ಕಲ್ಯಾಣ ಪುರವೆಲ್ಲ ಹೊಲಗೇರಿಯಾದೀತು ಹೋಲಗೇರಿ. ನಡೆಯಿರಿ ಇದೆಲ್ಲ ವಿವರವನ್ನು ಅವರ ಮುಂದೆ ಸಾದ್ಯಂತವಾಗಿ ವಿಶದಪಡಿಸೋಣ.

ಶೆಟ್ಟರು : ಒಳ್ಳೇದು ಒಡ್ಡೋಲಗ ಕುರಿತು ತೆರಳೋಣ ನಡೆಯಿರಿ.

===**====**===

(ಪ್ರವೇಶ ೩)

ಸ್ಥಳ : ಬಿಜ್ಜಳನ ಒಡ್ಡೋಲಗ. ಭಟ್ಟರು, ಶೆಟ್ಟರು, ಮಂಚಣ್ಣ, ಮಧುವರಸ ಮೊದಲಾದವರು).

ಬಿಜ್ಜಳ : ಮಂಚಣ್ಣಾದಿ ಮಂತ್ರಿಗಳೇ ನಿಮ್ಮೆಲ್ಲರ ಮುಖಮುದ್ರೆಗಳು ನಿಸ್ತೇಜವಾಗಿರಲು ಕಾರಣವೇನು ? ಮತ್ತೇನು ವಿಶೇಷ !

ಶೆಟ್ಟರು : ಮಹಾರಾಜರೇ ಆ ಭಕ್ತಿಭಂಡಾರಿ ಬಸವಣ್ಣನವರೇನಿದ್ದಾರಲ್ಲ ! ಅವರ ಸಂಗತಿಯೇ ವಿಶೇಷವಾಗಿದೆ.

ಬಿಜ್ಜಳ : ಹೀಗಿರುವದೇ ಏನದು ?

ಮಧುವರಸ : ಪ್ರಭೋ ಬಸವಣ್ಣನವರ ಈ ಸ್ವಚ್ಛಂದ ವೃತ್ತಿಗೆ ತಡೆಹಾಕದೆ ತಾವು ಉದಾಸೀನವಂ ತಾಳಿದ್ದಾದರೆ ಕ್ಷತ್ರಿಯ ಧರ್ಮಕ್ಕೇನೆ ಕುಂದು.

ಮಂಚಣ್ಣ : ಮಹಾಪ್ರಭೋ ಆ ಬಸವಣ್ಣನವರ ಉದ್ದಾಮ ವೃತ್ತಿಗೆ, ಸೀಮೆಯೇ ಇಲ್ಲದಾಗಿದೆ. ಅವರ ದೃಷ್ಟಿ ಹರಿದಿದ್ದೇ ಹಳ್ಳ ನಿಂತದ್ದೇ ತೀರ್ಥ. ಅವರು ಎಂಥ ತಪ್ಪು ಮಾಡಿದರೂ ಅವರಿಗೇನೆ ಪ್ರಾಧಾನ್ಯತೆ. ಮಹಾರಾಜರೇ ಇನ್ನು ಮೇಲೆ ಅವರ ತಪ್ಪುಗಳನ್ನು ತಾವು ಸೈರಿಸುವದಾದರೆ, ಈ ಎಡೆಯೊಳಿಮಗಿರಲ್ಬಾರದು. ನಲ್ಲೆಲ್ಲರಂ ಬೀಳ್ಕೊಟ್ಟು ನೀವುಂ ಬಸವನುಂ ಸುಖದೊಳಿಪ್ಪುದು.

ಬಿಜ್ಜಳ : ಮಂಚಣ್ಣಾದಿಗಳೇ ಇಷ್ಟೊಂದು ಅನುತಾಪವೇಕೆ ? ಹೇಳಿ ಹೇಳಿ ಏನದು ವಿಷಯ ! ತಾವೆಲ್ಲರೂ ಇಷ್ಟೊಂದು ವ್ಯಗ್ರ ಚಿತ್ತರಾಗುವಂತೆ ಅದಾವ ಅನುಚಿತ ಕಾರ್ಯವೆಸಗಿರುವರು ಆ ಬಸವೇಶ್ವರರು

ಮಂಚಣ್ಣ : ಭೋ ಬಿಜ್ಜಳ ಭೂಪ ಆ ಬಸವೇಶ್ವರರ ನಡವಳಿಕೆಯು ದಿನದಿನಕ್ಕೆ ವಿಪರೀತಮಾಗಿರ್ದಪುದು.

ಬಿಜ್ಜಳ : ಅಂದರೆ ಬಸವೇಶ್ವರರು ನೀತಿ ಮಾರ್ಗವಿಷ್ಟಲರಾಗುತ್ತಿದ್ದಾರೆಯೆ ?

ಮಧುವರಸ : ಅದನ್ನೇನು ಹೇಳಬೇಕು ಮಹಾರಾಜರೇ, ಹಿರಿಯ ಮಾಹೇಶ್ವರರೆಂದು ಅಸ್ಪೃಶ್ಯರಲ್ಲಿ ಬೆರೆತುಕೊಂಡು ಬಳಕೆ ಮಾಡುತ್ತಿದ್ದಾರೆ.

ಬಿಜ್ಜಳ : ಏನು ಈ ಮಾತು ನಿಜವಾದುದೇ !

ಮಂಚಣ್ಣ : ಮಹಾರಾಜರೇ ನಿಜವಷ್ಟೇ ಅಲ್ಲ. ಇಂದೀ ಘಳಿಗೆಯೊಳು ಬಸವೇಶ್ವರರು ಹೊಲಗೇರಿಯನ್ನು ಹೊಕ್ಕು, ಅಲ್ಲಿರುವ ನಾಗಿದೇವನೆಂಬ ಹೊಲೆಯರ ಮನೆಯಲ್ಲಿ, ಲಿಂಗಾರ್ಚನೆಯನ್ನು ನೆರವೇರಿಸಿದರಲ್ಲದೆ ಪ್ರಸಾದ ಕೂಡ ತಕ್ಕೊಳ್ಳುವದಾಯಿತು.

ಬಿಜ್ಜಳ : ಛೀ ಛೀ ಏನಿದು? ನಾನು ಕೇಳುತ್ತಿರುವದು ! ನಾನಿರುವದೀಗ ಜಾಗ್ರತಾವಸ್ಥೆಯೊಳಗೋ ಅಥವಾ ಸುಷುಪ್ತಿಯೊಳಗೋ! ಗುರುಲಿಂಗ ಜಂಗಮ ಶಿವಾ ಗುರುಧರರಾಗಿ ಜಗತ್ತಿಗೆ ಪವಿತ್ರಾಚರಣೆಯ ಬೆಳಕು ಬೀರಿದ ದಣ್ಣಾಯಕರಾದ ಬಸವೇಶ್ವರರದು ಹೊಲೆಯರ ಗೃಹ ವೇಷ! ಅಲ್ಲಿ ಲಿಂಗಾರ್ಚನೆ ! ಮತ್ತಂ ಅಲ್ಲಿಯ ಪ್ರಸಾದ ಸೇವನೆಯು ಕೂಡ.

ಮಂಚಣ್ಣ : ಮಹಾರಾಜರೇ ಅನುಮಾನ ಪಡುವದೇಕೆ ? ಇದಕ್ಕೆಂತಲೆ ಮಾತ್ರವೂ ವಿಲಂಬಿಸಬೇಡಿ. ಆ ಮಾತಿನ ಸತ್ಯಾಸತ್ಯತೆಯನ್ನು ಪರೀಕ್ಷಿಸಿಯೇ ಬಿಡಿ.

ಬಿಜ್ಜಳ : ಹೂಂ ಆಗಲಿ ಪಡಿಹಾರರೇ. ದಣ್ಣಾಯಕರಾದ ಬಸವೇಶ್ವರರನ್ನು ತಳುವದೆ ಬರಮಾಡಿಕೊಂಡು ಬನ್ನಿ.

ಪಡಿಹಾರರು : ಅಜ್ಞಾ ಮಹಾನ್.

ಬಿಜ್ಜಳ : (ಬಸವಣ್ಣನವರು ಬಂದ ನಂತರ) ಬನ್ನಿ ದಣ್ಣಾಯಕರೆ ಕೂತುಕೊಳ್ಳಿ.

ಬಸವೇಶ್ವರ : ಮಹಾರಾಜರೇ ಆತುರಗೊಂಡು ನನ್ನಂ ಬರಮಾಡಿಕೊಂಡುದೇಕೆ ? ಒಡ್ಡೋಲಗದ ಕಾರ್ಯಭಾರದ ವಿಷಯಕ್ಕೇನಾದರೂ ಚರ್ಚಿಸುವದುಂಟೆ ?

ಬಿಜ್ಜಳ : ಒಡ್ಡೋಲಗದ ವಿಷಯದಲ್ಲೇನೂ ಚರ್ಚಿಸುವದಿರುವದಿಲ್ಲ. ಆದರೆ ನಿಮ್ಮ ವಿಷಯದಲ್ಲಿಯೇ ವಿಶಿಷ್ಟವಾದ ಚರ್ಚೆಯನ್ನು ಮಾಡಬೇಕಾಗಿದೆ.

ಬಸವೇಶ್ವರ : ವಿಶಿಷ್ಟವಾದ ಚರ್ಚೆ ! ಅದೂ ನನ್ನ ವಿಷಯದಲ್ಲಿ ಪ್ರಭೋ ಏನದು ?

ಬಿಜ್ಜಳ : ದಣ್ಣಾಯಕರೇ ನೀವುಮಂತ್ರಿ ಪದ ಸ್ವೀಕಾರ ಮಾಡಿದಂದಿನಿಂದ ನಿಮ್ಮ ಪವಿತ್ರಾಚರಣೆಯ ಮೂಲಕ ರಾಜ್ಯದಲ್ಲಿ ಸುಖಶಾಂತಿಗಳು ನೆಲೆಸಿ ಪ್ರಜೆಗಳು ಸೌಖ್ಯದ ಬೆಳಗಂ ಕಾಣುವರೆಂದು ನಾನು ಹರ್ಷಚಿತ್ತಾನಾಗಿದ್ದೆ. ಆದರೆ ?

ಬಸವೇಶ್ವರ : ಆದರೇನು, ಪ್ರಭೋ ಈಗೇನಾಯಿತು !

ಬಿಜ್ಜಳ : ಇನ್ನೂ ಏನಾಗಬೇಕು ಬಸವೇಶ್ವರರೇ, ಸುವರ್ಣ ಕಮ್ಮಿತ್ತಾದಂತೆ, ವಿಪ್ರಕುಲಮನುಕೂಲಮಪ್ಪ ಶಿವಭಕ್ತಿ ಪೊಂದಿರ್ದು. ಸದಾಚಾರದಿಂ ಸುಖಿಯಾಗಿರ್ಪುದನೊಲ್ಲದೆ, ನೀವು ಅತಿಭಕ್ತಿ ತಲೆಗೇರಿ ಹಿರಿಯ ಮಾಹೇಶ್ವರರೆಂದು ಹೊಲೆಯರಂ ಪೊಲೆಗಲಿಸಿ, ಅವರ ಮನೆಯೊಳುಂ ಉಂಡುದಲ್ಲದೆ, ಇಲ್ಲಿ ನಮ್ಮನ್ನು ಕೂಡಾ ಗೋಜಾಗತ ಮಾಳ್ಪುದಿದು ಮಾರ್ಗವೇ ?

ಬಸವೇಶ್ವರ : ಪ್ರಭೋ ಶಾಂತ ಚಿತ್ತರಾಗಿರಿ. ಇಷ್ಟೊಂದು ವ್ಯಾಕುಲ ಪಡಬೇಡಿ ತಮಗೀ ಸಂದೇಶವನರುಹಿದವರಾರು ಪ್ರಭೋ ?

ಬಿಜ್ಜಳ : ಇದೋ ನೋಡಿ ನಾರಣಕ್ರಮಿತ, ಮುಕುಂದ ಭಟ್ಟ, ಸೌರಪೆದ್ದಿ, ದಾಮೋದರ ಬಟ್ಟಾದಿ, ಇವರೇ ಆ ಸಂದೇಶವ ತಂದವರು.

ಬಸವೇಶ್ವರ : ಮಹಾರಾಜರೇ ನಾನು ನಾರಣ ಕ್ರಮಿತರ ಕೇರಿಯಂ ಪೊಕ್ಕೆನೆ ! ಮುಕುಂದ ಭಟ್ಟರ ಮನೆಯೊಳುಂಡೆನೆ ! ದಾಮೋದರ ಭಟ್ಟರಂ ಪ್ರೇಮದಿಂದ ಸೋಂಕಿದನೆ ! ಪ್ರಭೋ ನಿಜವಾಗಿ ನಾನು ಹರನ ನರಿಯದ ಹೊಲೆಯರ ಮನೆಯಲ್ಲಿ ಹೊಕ್ಕುಂಡುದಿಲ್ಲ.

ಬಿಜ್ಜಳ : ಇಂತು ನುಡಿವರೇ ಭಂಡಾರಿ ಬಸವಾ ! ವೇದಶಾಸ್ತ್ರ ಪುರಾಣಾಗಮ ಯಜ್ಞವಿಧಿಯಿಂ ನಡೆವ ಉಚ್ಚವರ್ಣದವರನ್ನು ಹೊಲೆಯರೆಂದು, ಶಿವಭಕ್ತನಾದ ಹೊಲೆಯನಂ ಉತ್ತಮನೆಂದು ನುಡಿಯುವಿರಿ ಇದಕ್ಕೆ ಪ್ರಮಾಣವೇನು ? ವಿಪ್ರರ ಮೈಯಂ ಕೊಯ್ಯೆ ನೆತ್ತರ್ ಸುರಿದು, ಭಕ್ತರ ಮೈಯೊಳು ಪಾಲ್ಸುರಿದಪುದೆ !

ಬಸವೇಶ್ವರ : ಸತ್ಯವಾಗಿ ಪ್ರಭೋ ತಪ್ಪದು ತಪ್ಪದು ಹಾಗಾಗುವದು. ನೀವೆಂದಂತೆ ವಿಪ್ರರ ಮೈಯ್ಯೊಳ್ ನೆತ್ತರ್ ಭಕ್ತರ ಮೈಯೊಳ್ ಪಾಲ್ಸುರಿಯದಿರ್ದಡೆ ನಾನು ಸಂಗಗೆ ದೂರಂ ಶರಣರ್ಗೆ ದೂರಂ.

ಬಿಜ್ಜಳ : ಒಳ್ಳೆಯದಾಗಲಿ ಬಸವೇಶ್ವರರೇ ಆ ಮಾತಿನ ಸತ್ಯತೆಯನ್ನು ಕಂಡು ಕೊಂಡೇ ತೀರೋಣ. ಪಡಿಹಾರರೇ ಅಸ್ಪೃಶ್ಯರ ಕೇರಿಗೆ ಹೋಗಿ, ಕಂಬಳಿ ನಾಗಿದೇವನೆಂಬ ಶರಣರನ್ನು ಆದರದಿಂದ ಬರಮಾಡಿಕೊಂಡು ಬನ್ನಿ.

ಪಾಡಿಹಾರರು : ಆಜ್ಞಾ ಮಹಾನ್.

ಬಸವೇಶ್ವರ : ಪರಮಾತ್ಮಾ ನೀನೊಲಿದ ಭಕ್ತನಿಗೆ ಯಾವುದು ತಾನೆ ಅಸಾಧ್ಯ ! ಈಗಂತೂ ನಾಗಿದೇವರನ್ನು ಪಣಕ್ಕೆ ಹಚ್ಚಿದ್ದಾಯಿತು. ಆತನ ರಕ್ಷಣೆ ಮಾಡುವ ಹೊಣೆಗಾರನು ನೀನಲ್ಲದೆ ಮತ್ತಾರು !

ವಚನ : ರಾಗ : **ಯಮನ. ತ್ರಿತಾಳ.**

ನೀನೊಲಿದರೆ ಕೊರಡು ಕೊನರುವದಯ್ಯಾ ।
ನೀನೊಲಿದರೆ ಬರಡು ಹಯನಹುದಯ್ಯಾ ।
ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯಾ ।
ನೀನೊಲಿದಡೆ ಸಕಲ ಪಡಿಪದಾರ್ಥ ।
ಇದರಲ್ಲಿರ್ಪುವು ಕೂಡಲಸಂಗಮದೇವಾ. ॥ ೫ ॥

ಪಡಿಹಾರರು : ಮಹಾರಾಜರೇ ನಾಗಿದೇವರ ಆಗಮನವಾಯಿತು.

ಬಿಜ್ಜಳ : ಆಗಮಿಸಿದರೆ ? ಬನ್ನಿ ನಾಗಿದೇವರೇ ಕೂತುಕೊಳ್ಳಿ. ಈಗ ದಣ್ಣಾಯಕರಿಗೂ ನಮಗೂ ವಾದ ವಿವಾದವಾಗಿ, ವಿಪ್ರರ ಮೈಯ್ಯ ಕೊಯ್ಯೆ ನೆತ್ತರ್ ಶರಣರ ಮೈ ಕೊಯ್ಯೆ ಪಾಲ್ಸುರಿದಪುದೆಂದು ಬಸವೇಶ್ವರರ ವಾದವಾಗಿದೆ. ಆ ಮಾತಿನ ನಿದರ್ಶನವನ್ನು ತಮ್ಮ ಮೇಲಿಂದ ಕಂಡುಕೊಳ್ಳಬೇಕಾಗಿದೆ. ಅದನ್ನು ತಮ್ಮ ಮೇಲೆ ಪ್ರಯೋಗ ಮಾಡಿ ನೋಡಬಹುದೇ ?

ನಾಗಿದೇವ : ಪ್ರಭುಗಳ ಚಿತ್ತ

ಬಿಜ್ಜಳ : ಪಡಿಹಾರರೇ ನಾಗಿದೇವರ ಅಂಗುಷ್ಠಕ್ಕೆ ಶಸ್ತ್ರದಿಂದ ಪೆಟ್ಟುತಗಲಿಸಿರಿ ನೋಡೋಣ.

ಪಡಿಹಾರರು : ಆಜ್ಞಾ ಮಹಾನ್. (ಎಂದು ನಾಗಿದೇವರ ಅಂಗುಷ್ಠಕ್ಕೆ ಶಸ್ತ್ರದಿಂದ ಪೆಟ್ಟು ತಗಲಿಸುವದು. ಆಗ ಅಂಗುಷ್ಠದಿಂದ ಹಾಲು ಸುರಿಯುವದು.)

ಬಸವೇಶ್ವರ : ಪ್ರಭೋ ನೋಡಿಕೊಳ್ಳಿ. ನಾಗಿದೇವರ ಅಂಗುಷ್ಠದಿಂದ ಸುರಿಯುವ ಹಾಲನ್ನು ! ಎಲೇ ಧರಿತ್ರಾನಾಥ, ಸೂರ್ಯನ ಮೈಯೊಳು ಕಳಂಕವುಂಟೆ ! ಶಿವಭಕ್ತರ ಮೈಯೊಳು ಸುಧಾರಸವಲ್ಲದೆ ಮತ್ತೊಂದುಂಟೆ ? ಶರಣಕು ಲದುನ್ನತಿಯನರಿಯದೆ ನಿನ್ನಂ ವೇದ ಜಡರ ಮಾತು ಮೊರೆಗೆಡಿಸಿತ್ತು. ಇದ ಕಂಡಾದಡಂ ಶರಣರಂ ನಂಬುವದು ತಿಳಿಯಿತೇ.

ಬಿಜ್ಜಳ : ದಣ್ಣಾಯಕರೇ ನಾನೇನೊ ಮುಂದರಿಯದ ಮಹಾಮೂರ್ಖ. ಶರಣರನರಿಯದ ಸರ್ವಾಪರಾಧಿ ಬಸವೇಶ್ವರರೇ ತಮ್ಮ

ಸಂಗದಿಂದರಿತುಕೊಂಡೆ ನಾನಿದೆಲ್ಲವಂ ಶರಣರೊಲಿದು ಸೋಂಕಿದವನೇ ಭಕ್ತ. ಶರಣರ ಕರಮಂ ಕಂಡು ಕಲ್ಪತರುವಾಯಿತ್ತು. ಶರಣರ ಪದರಜದಿಂದ ಪರಷವದು ಹುಟ್ಟಿ, ಶರಣರ ಶೀಲಂ ಕಂಡು ಸುರಭಿ ಹಯನಾಯಿತ್ತು ಎಂಬ ಶರಣರ ಮಹಿಮಾಸ್ವಿತ ಶರಣರ ನಿಲುಮೆಯನ್ನರಿತುಕೊಂಡೆ. ದೇವ ಸದೃಶರಾದ ಶರಣ ನಾಗಿದೇವರನ್ನು ಪಣಕ್ಕೆ ಹಚ್ಚಿದ್ದು ನನ್ನದು ಸರ್ವಾಪರಾಧವಾಯಿತು. ಈ ನನ್ನ ಅಪರಾಧವನ್ನು ಕ್ಷಮಿಸಬೇಕು ಬಸವೇಶ್ವರರೇ.

ಬಸವೇಶ್ವರ : ಮಹಾರಾಜರೇ ಕ್ಷಮೆಯನ್ನೇಕೆಯಾಚಿಸುವಿರಿ? ನೀವು ಹೃತ್ಪೂರ್ವಕವಾಗಿ ತಪ್ಪು ಮಾಡಿದವರಲ್ಲ ಅದು ಸಂಭವಿಸಿದುದು. ಪಿಸುಣರ ಮಾತಿನಿಂದ ಮಹಾರಾಜರೇ ತಾವು ಇನ್ನು ಮೇಲಾದರೂ ಜಾಗೃತರಾಗಿರಬೇಕು.

===***=====***===

(ಪ್ರವೇಶ ೪)

(ಸ್ಥಳ : ವಾರಾಂಗನೆಯ ಮನೆ. ವಿಟಪುರುಷನು ಸಂಪತ್ತನ್ನೆಲ್ಲ ಕಳೆದುಕೊಂಡು ಹೀನ ಸ್ಥಿತಿಯಲ್ಲಿ ಪ್ರವೇಶಿಸುವದು).

ವಿಟಪುರುಷ : 'ಅಟ್ಟ ಮೇಲೆ ಒಲೆ ಉರಿಯಿತು, ಕೆಟ್ಟ ಮೇಲೆ ಬುದ್ಧಿ ಬಂದಿತು' ಎಂದು ಹೇಳುವದೊಂದು ಗಾದೆಯುಂಟು. ಈಗ ಆ ರೀತಿಯಲ್ಲಿ ನನಗೂ ಬುದ್ಧಿ ಬಂದಿದೆ. ಇವಳು ನನ್ನ ಸಂಪತ್ತನ್ನೆಲ್ಲ ಸೂರೆಗೊಳ್ಳುವವರೆಗೆ ಇವಳದು ನನ್ನ ಮೇಲದಷ್ಟು ಪ್ರೇಮ ! ನಾನಿವಳಿಗೆ ಪ್ರತ್ಯಕ್ಷ ಕಾಮದೇವನೆ ಆಗಿದ್ದೆ. ಪ್ರೇಮಾಲಾಪಗಳನ್ನು ಮಾಡುವ ವೇಳೆಯಲ್ಲಿ ಅಮೃತೋಪಮಾನವಾದ ರುಚಿಯುಳ್ಳ ತಿಂಡಿ ತಿನಸುಗಳನ್ನು ಕೊಡುವಾಗ್ಗೆ ಇವಳು ತೋರಿಸುತ್ತಿದ್ದ ಪ್ರೇಮವದೆಷ್ಟು ! ತಾನಾಗಿಯೇ ನನ್ನ ಬಾಯಲ್ಲಿ ತುತ್ತುಮಾಡಿ ತಿನಿಸುತ್ತಿದ್ದಳು. ಬಾಯಿಗೆ ಬಾಯಿ ಹಚ್ಚಿ ಚುಂಬಿಸುತ್ತಿದ್ದಳು. ಈ ತೆರ ಆದರಾತಿಥ್ಯ ಮಾಡುತ್ತಿರುವದಂ ಕಂಡು ನಾನೇ ಲೋಕೋತ್ತರವಾದ ಚಲುವ. ಅಂತೆಯೇ ಇವಳು ನನಗೆ ಮಾರುಹೋಗಿ ಇಷ್ಟೊಂದು ಪ್ರೇಮರಸವನ್ನು ಹೊರಸೂಸುತ್ತಿದ್ದಾಳೆ; ಎಂದು ನನ್ನಷ್ಟಕ್ಕೆ ನಾನೇ ಅಂದುಕೊಂಡು ಆಗ ನಾನೊಬ್ಬ ಪ್ರತಿ ಮನ್ಮಥನೇ ಆಗಿ ಬಿಟ್ಟಿದ್ದೆ ಆದರೆ ಈಗೆಲ್ಲಿದೆ ಆ ನನ್ನ ವೈಭವ ! ಅದೆಲ್ಲವೂ ಕನಸಿನ ಮಾತಾಗಿ ಹೋಗಿದೆ. ಇವಳು ನನ್ನ ಮೇಲೆ ತೋರಿದ್ದು ನಿಜವಾದ ಪ್ರೇಮವಲ್ಲ. ನನ್ನ ಸಂಪತ್ತನ್ನೆಲ್ಲ ಜಗ್ಗಿಕೊಳ್ಳಲು ಮೋಸದ ಕೃತಿಗೈದ ಕೃತ್ರಿಮ ಪ್ರೇಮ. ಈಗೇನು ಹೇಳಬೇಕು? ನನ್ನ ಸ್ಥಿತಿಯನ್ನು. ಅದನ್ನು ಕೇಳಿದವರು ಥೂ ಥೂ ಎಂದು ನನಗೆ ಉಗಳದಿರುವವರೇ ಪಾಪಿಗಳೆಂದು ಹೇಳಬೇಕು. ಬಹಳ ಹೇಳುವದೇನು ನಾನೀಗ ಇವಳ ದಾಸಾನುದಾಸ ಹಾಸಿಗೆ ಹಾಸಬೇಕು. ಕಸಗೂಡಿಬೇಕು. ಇಷ್ಟೇ ಅಲ್ಲ ಇವಳ ಪೀಕದಾನಿಯನ್ನು ಕೂಡ ಸ್ವಚ್ಛ ಮಾಡುವ ಕೆಲಸ ನನ್ನದೇ. ಇಂತಿದೆ ನನ್ನ ದಿನಚರಿ. ಸೂಳೆ ಬಂಟಿಕೆಯಲ್ಲಿರಬೇಕೆಂದು ಬಯಸುವವರಿಗೆ ನನ್ನದೊಂದು ಬಿನ್ನಹ. ಧರ್ಮಪತ್ನಿಯನ್ನುಳಿದು

ಸೂಳೆಯರ ಸಹವಾಸದಲ್ಲಿ ಕಾಲಹರಣ ಮಾಡುವದೆಂದರೆ ನಿಜವಾಗಿಯೂ ಅದು ನರಕವಾಸ ತಾನು ಎಂಥ ಜಾತಿಯವ ನಿರಲೊಲ್ಲನೇಕೆ, ಅವಳೊಡನೆ ಬೆರೆತು, ಅವಳ ಮೋಹಕ್ಕೆ ಬಿದ್ದು, ಅವಳ ಎಂಜಲವನ್ನು ಕೂಡ ತಿನ್ನುವದಕ್ಕೆ ಹೇಸುವದಿಲ್ಲ ಎಂಬುವದನ್ನು ನನ್ನ ಅನುಭವದ ಮೇಲಿಂದ ಹೇಳತೇನಿ. ನೋಡಿರಿ ವಿಚಾರ ಮಾಡಿರಿ. ಆಳವಾಗಿ ವಿಚಾರಿಸಿರಿ. ಮೊದಲು ನಾನು ಎಂತಿದ್ದೆ ! ಮತ್ತು ಈಗ ಎಂತಾಗಿರುವೆ! ಇದನ್ನು ವಿಮರ್ಶಾತ್ಮಕ ವಿಚಾರ ಮಾಡಿ, ಸೂಳೆಯರನ್ನು ಮಾಡಬೇಕೋ ಬಾರದೋ ಎಂಬುದನ್ನು ನೋಡಿಕೊಳ್ಳಿ, (ಗಾಬರಿಯಾಗಿ) ಅಯ್ಯೋ ತಪ್ಪು ಮಾಡಿದೆ. ಈ ಪುರಾಣ ಹೇಳುತ್ತಾ ಅವಳ ಆಜ್ಞೆಯನ್ನೇ ಮರೆತು ಬಿಟ್ಟೆ. ಈಗಿನ ನನ್ನ ಕೆಲಸ !

ಸುಂದರಾಸಾನಿ : (ಒಳಗಿನಿಂದ ಬಂದು ಕೋಪದಿಂದ) ಕಸಾ ಹೊಡೆಯುವದು ಇದು ಕೀಳು ಕೆಲಸವೆಂದು ಅನುಮಾನ ನಡೆದಿದೆಯಲ್ಲವೆ ?

ವಿಟಪುರುಷ : ಅದೇನಿಲ್ಲ ಸಾನಿಯವರೇ (ಎಂದು ಕಸಗೂಡಿಸುವದು).

ಸುಂದರಾಸಾನಿ : ಅದಿರಲಿ ಬಿಡು. (ಆಸನದಲ್ಲಿ ಕೂತು) ಬಾ ಇಲ್ಲಿ. ಇದೋ ಕೇಳು. ಇಂದಿನದು ನಮ್ಮದೊಂದು ವಿಶಿಷ್ಟವಾದ ಪರ್ವಕಾಲ.

ವಿಟಪುರುಷ : ಅಂದರೆ ?

ಸುಂದರಾಸಾನಿ: ವರ್ಷಕ್ಕೊಂದು ಸಲ ನಮ್ಮ ಕುಲದೇವತೆಗೆ ಬರಿ ಅರ್ಪಣ ಮಾಡಿ ಆ ದೇವತೆಯನ್ನು ತಣಿಸುವದು ನಮ್ಮ ವಂಶದಲ್ಲಿ ಬೆಳೆದು ಬಂದ ರೂಢಿಯುಂಟು.

ವಿಟಪುರುಷ : ಯಾವ ಬಲಿ ಅರ್ಪಿಸುವಿರಿ ? ಹಾಲಿನದೋ ತುಪ್ಪದ್ದೋ ?

ಸುಂದರಾಸಾನಿ : ಅಲ್ಲಲ್ಲ. ಹಾಲು ತುಪ್ಪದ ಬಲಿಕೊಡಲು ಉಚ್ಚಜಾತಿಯವರೆಂದು ಹೇಳಿಕೊಳ್ಳುವ, ನಿಮ್ಮಂಥ ಮರುಳರಲ್ಲ ನಾವು.

ವಿಟಪುರುಷ : ಹಾಗಾದರೆ ನೀವರ್ಪಿಸುವ ಬಲಿ ಅದಾವುದು ?

ಸುಂದರಾಸಾನಿ : ನಾವು ಕೊಡುವ ಬಲಿಯೆಂದರೆ ಪರಿಪಕ್ವವಾಗಿ ಕೊಬ್ಬಿ ಬೆಳೆದ ಕುರಿಯನ್ನು ತಂದು ನಮ್ಮ ದೇವತೆಯ ಮುಂದೆ ಕಡಿದು, ಸುರಿಯುವ ಅದರ ಬಿಸಿ ರಕ್ತದಿಂದ ದೇವತೆಯ ದಾಹವನ್ನು ಆರಿಸಿ ಸಂತೋಷಗೊಳಿಸುವದು. ನೀನೀಗ ಆ ಕಾರ್ಯಕ್ಕೆ ಉದ್ಯುಕ್ತನಾಗಬೇಕು.

ವಿಟಪುರುಷ : ಅಯ್ಯೊ ಪರಮಾತ್ಮ ! ನನ್ನ ದುರವಸ್ಥೆಯು ಇಷ್ಟಕ್ಕೆ ಸಾಲಲಿಲ್ಲವೆ ? ಇನ್ನು ನಾನು ಕುರಿಯನ್ನು ವಧಿಸುವ ಉದ್ಯೋಗಕ್ಕೆ ಹತ್ತಬೇಕೆ !

ಸುಂದರಾಸಾನಿ : ಹೂಂ ಯಾಕೆ ಅನುಮಾನಿಸುವ ! ಉಚ್ಚಜಾತಿಯವನೆಂಬ ಹೆಮ್ಮೆಯಲ್ಲವೆ ನಿನ್ನದು ?

ವಿಟಪುರುಷ : ಅದೇನಿಲ್ಲ ಸಾನಿಯವರೆ.

ಸುಂದರಾಸಾನಿ : ಹಾಗಾದರೆ ಅನುಮಾನವೇಕೆ ? ಈಗ ನೀನು ಬಲಿಕೊಡಲು ಪೇಟೆಗೆ ಹೋಗಿ ಕುರಿಯನ್ನು ತಕ್ಕೊಂಡು ಬರಬೇಕು.

ವಿಟಪುರುಷ : (ದೈನ್ಯದಿಂದ) ಸಾನಿಯವರೆ ದಯಮಾಡಿ ಈ ಕೆಲಸಕ್ಕೆ ಬೇರೆ ಯಾರನ್ನಾದರೂ ಕಳುಹಿಸಿಕೊಡಿ.

ಸುಂದರಾಸಾನಿ : ಅದೇಕೆ ? ನಿನಗೆ ಕುರಿಯನ್ನು ತರಲಿಕ್ಕೆ ನಾಚಿಕೆಯಲ್ಲವೆ ? (ತಿರಸ್ಕಾರದಿಂದ) ಹೂಂ ಉಚ್ಚ ಜಾತಿಯವ ! ಇಷ್ಟು ದಿವಸಗಳವರೆಗೆ ನನ್ನೊಡನೆ ತಿಂದುಣ್ಣುವಾಗ, ಎಲ್ಲಿ ಇತ್ತು ನಿನ್ನ ಜಾತಿ ? ಎಷ್ಟು ಕೊಟ್ಟರು ಕುಡಿಯಲು ನಿನಗೆ ಸಾಲುತ್ತಿರಲಿಲ್ಲ. ಆಗೆಲ್ಲಿ ಹೋಗಿತ್ತು? ನಿನ್ನ ಜಾತಿ ! ಧರ್ಮ ! ಲಕ್ಷ್ಯದಲ್ಲಿಡು ನೀನು ನಿನ್ನ ತನು–ಮನ–ಧನಗಳನ್ನು ನನಗೆ ಒಪ್ಪಿಸಿ ಬಿಟ್ಟಿರುವೆ. ಆದುದರಿಂದ ಈಗ ನೀನು ನನ್ನಾಣತಿಯಂತೆ ಪೇಟೆಗೆ ಹೋಗಿ ಕುರಿಯನ್ನು ತರಲೇಬೇಕು.

ವಿಟಪುರುಷ : ನಾನೇ ತರಬೇಕೇ ?

ಸುಂದರಾಸಾನಿ : ಅಹುದು ನೀನೇ ತರಬೇಕು ಅಷ್ಟೊಂದು ಅಭಿಮಾನವಿದ್ದರೆ ಬಿಟ್ಟು ಬಿಡು. ವಚನ ತಪ್ಪಿಸಿದ ತಪ್ಪಿಗಾಗಿ ನರಕದಲ್ಲಿ ಬಿದ್ದಿರಹೋಗು.

ವಿಟಪುರುಷ : ಅಯ್ಯೋ ಎಂಥ ಪೀಕಲಾಟ ! ವಚನ ಬದ್ಧನಾಗಿ ಸಂಕಟಕ್ಕೊಳಗಾದೆ. (ಯೋಚನೆ ಮಾಡಿ) ಸರಿ ಹೀಗೆ ಮಾಡುವದೇ ಉತ್ತಮ. ಹಿಂದೆ ರಾಮದೇವ ಮೊದಲಾದವರು ವಚನ ಪಾಲಿಸಿ ಅಜರಾಮರ ಕೀರ್ತಿ ಗಳಿಸಿದ್ದುಂಟು. ಇಲ್ಲಿಯವರೆಗೆ ಸೂಳೆಯ ವಶದಲ್ಲಿದ್ದು. ನಾನು ಬೇಕಾದಂಥ, ಹೇಯ ಕೆಲಸ ಮಾಡಿರಲೊಲ್ಲನೇಕೆ! ಈಗ ನಾನವಳಿಗೆ ತನು ಮನ ಧನ ಒಪ್ಪಿಸಿದ ಪ್ರಕಾರ ಇವಳಾಜ್ಞೆಯಂತೆ ಪೇಟೆಗೆ ಹೋಗಿ ಕುರಿಯನ್ನು ತಂದು ಇವಳ ಮನಸಿನಂತೆ ವಚನ ಪಾಲಿಸಿದ ಕೀರ್ತಿಯನ್ನಾದರೂ ನನ್ನ ಪಾಲಿಗೆ ತಂದುಕೊಳ್ಳುವೆ. ಹೂಂ ಸಾನಿಯವರೇ ತಮ್ಮಿಚ್ಚೆಯಂತೆ ನಾನೀಗಲೇ ಕುರಿಯನ್ನು ತರಲು ಹೋಗುವೆ ಆಯಿತೇ

ಸುಂದರಾಸಾನಿ : ಆಯಿತು ಇದೋ ತೆಗೆದುಕೋ ಈ ಹತ್ತುರೂಪಾಯಿಗಳನ್ನು. ಪರಿಪುಷ್ಟ ಶರೀರವುಳ್ಳ ಪ್ರಾಯಕ್ಕೆ ಬಂದ ಮಾಂಸದಿಂದ ಕೊಬ್ಬಿದ ಕುರಿಯನ್ನು ಕೊಂಡುಕೊಂಡು ತಳುವದೇ ಬರಬೇಕು ತಿಳಿಯಿತೇ.

ವಿಟಪುರುಷ : ಒಳ್ಳೇದು ಸಾನಿಯವರೇ ಹಾಗೇ ಮಾಡುವೆ.

(ರಸ್ತಾತೆರೆ ಬೀಳುವದು).

===***====***===

(ಪ್ರವೇಶ – ೫)

ಸ್ಥಳ : (ಬೀದಿ ಕಿನ್ನರಿ ಬ್ರಹ್ಮಯ್ಯನೆಂಬ ಶರಣನು ಪ್ರವೇಶಿಸುವದು).

ಕಿನ್ನರಿ ಬ್ರಹ್ಮಯ್ಯ : ಪರಸಮಯ ತಿಮಿರ ಕಮನೀಯ ಬಾಸ್ಕರನೆನಿಪ ಆ ಬಸವೇಶ್ವರರ ಭಕ್ತಿಯ ನಿಲುಮೆಯನ್ನರಿಯಲಾರಿಗೆ ಸಾಧ್ಯ ! ಆತನದೆಂಥ ಅನುಪಮ ಭಕ್ತಿ ! ಅವನು ಆ ಸಂಗಮದೇವನನ್ನು ಪೂಜಿಸುವ ಬೆಡಗನ್ನು ಎಷ್ಟು ಬಣ್ಣಿಸಬೇಕು ? ಪ್ರಭಾತ ಸಮಯಕ್ಕೆ ಮುನ್ನವೇ ಎದ್ದು ಭಸಿತೋದ್ಧೂಳನಂಗೈದು ಸಂಗಂಗೆ ಸಾಷ್ಟಾಂಗದಿಂದಲ್ಲಿ ಪೊಡಮಟ್ಟು ತಿಳಿಯಗ್ಘವಣಿಯಂ, ಅಳಿಯೆರಗದನಿಲನಲುಗದ, ರವಿಕರಂಪುಗದ, ಸುಳಿಗೊಂಡು ದಳವೇರಿ ಹಸುರಳಿದು ಬಿಳಪುಳಿದ, ಸುರಚಿರ ಮೆನಿಪ್ಪ ಇರವಂತಿಗೆ ಸಂಪಿಗೆ ಮಲ್ಲಿಕಾದಿ ಕುಟ್ಮಲಂಗಳಂ ಮತ್ತೆ ಮರುಗದೆಲೆ ಸುರಹೊನ್ನೆ ಜಾಜಿಯರಳಂ ಮಲ್ಲಿಗೆಗಳಂ ಕೊಂಡು ಒಲವಿನಿಂದ ನಡೆತಂದು ಶಿವನಾಲಯಂ ಪೊಕ್ಕು ಷೋಡಶೋಪಚಾರದಿಂದ ಪೂಜೆಯಂ ನೆರವೇರಿಸಿ ನವಮಧುರ ರಸವೊಸರ್ವ ಪಕ್ವಾನ್ನಮಂ ಬಡಿಸಿ, ದೇವ ಚನ್ನನ ನಿಧಿಯೆ ಆರೋಗಿಸು. ದೇವ ಚೋಳನ ನಿಧಿಯೆ ಆರೋಗಿಸು ಎಂದು ನೈವೇದ್ಯಮಂ ಮಾಡಿ, ಎನ್ನನತಿ ಕರುಣದಿಂ ನೋಡು ಕೂಡಲಸಂಗ ಎನ್ನ ಮನದಕ್ಕರೊಳು ಕೂಡು ಕೂಡಲಸಂಗ. ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ. ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ. ಎಂದು ಸ್ತೋತ್ರಗೈದು ಕುಣಿ ಕುಣಿದು ಮಣಿ ಮಣಿದು, ನಲಿದಾಡುವ ಬಸವೇಶ್ವರರ ಭಕ್ತಿಯ ಆಳವನ್ನರಿಯಲು ಆರಿಗೆ ಸಾದ್ಯವುಂಟು ! ಈ ತೆರ ಭಕ್ತಿ ಭಂಡಾರಿಯಾಗಿರುವ ಬಸವೇಶ್ವರರ ನಾಮಸ್ಮರಣೆಯಿಂದ ಬೇಕಾದಂಥ ವಾಂಛಿತಾರ್ಥಮಂ ಪೂರೈಸಿಕೊಳ್ಳಬಹುದು.

ಬಸವ ಶರಣನೆ ಪಾಪವಳಿವುಗು ।
ಬಸವ ಶರಣನೆ ತಾಪವಾರುಗು ।
ಬಸವ ಶರಣನೆ ಪರಮ ಪಾವನಭೂತಿ ಸಂಧಿಸುಗು ॥

ಬಸವ ಶರಣನೆ ಭಕ್ತಿ ದೊರಕುಗು ।
ಬಸವ ಶರಣನೆ ಸಾರ್ಗುಸುಸ್ಥಿತಿ ।
ಬಸವ ಶರಣನೆ ವಚನ ರಚನಾ ಸಿದ್ಧಿ ವರ್ಧಿಸುಗು ॥ ೧ ॥

ಬಸವ ಶರಣನೆ ಭವವಡಗುವದು ।
ಬಸವ ಶರಣನೆ ಕೀರ್ತಿ ಎಸೆವುದು ।
ಬಸವ ಶರಣನೆ ದುಃಸ್ಥಿತಿಗಳತ್ತತ್ತಲೋಡುವವು ॥
ಬಸವ ಶರಣನೆ ಸೌಖ್ಯ ಪೊಂದುಗು ।
ಬಸವ ಶರಣನೆ ಭಾಗ್ಯವಪ್ಪುದು ।
ಬಸವ ಶರಣನೆ ಕಾಮಿತ್ತೋನ್ನತ ಸಿದ್ಧಿಸಿದ್ಧಿಸುಗು ॥ ೨ ॥

ಇಂತಿರುವ ಬಸವಣ್ಣನನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ಸೈ. ನಾನಾದರೂ ಆ ಬಸವೇಶ್ವರರ ಮಾರ್ಗದೊಳೆ ಈ ತ್ರಿಪುರಾಂತಕೇಶ್ವರ ದೇವಾಲಯಮಂ ಪ್ರವೇಶಿಸಿ, ತ್ರಿಪುರಾಂತಕೇಶ್ವರನನ್ನು ಕಣ್ತೀವಿ ನೋಡಿ, ಮನತೀವಿ ನೆನೆದು ನುತಿಗೈಯ್ಯುವ ಎಂದು ಹೋಗುವದು).

===***=====***====

(ಪ್ರವೇಶ – ೬)

(ಸ್ಥಳ : ತ್ರಿಪುರಾಂತಕೇಶ್ವರ ದೇವಾಲಯ. ಕಿನ್ನರಿ ಬ್ರಹ್ಮಯ್ಯನು ಶಿವಲಿಂಗದ ಮುಂದೆ ಕೂತು ಸ್ತುತಿಸುತ್ತಿರುವದು).

ಪದ : **ರಾಗ : ತಿಲಿಂಗ. ಕವಾಲಿ.**

ಪಾಹಿ ಭೋ ಈಶ ಮಹೇಶ ।
ಸ್ಮರಿಸುವೆನು ಪಾಹಿ ಭೋ ಈಶ ಮಹೇಶಾ ॥ ಪಲ್ಲ ॥
ಶೃತಿಚ ಯಾಬೇಧ್ಯಾ ಶಾಂತ ಅಘನಾಶಕಾ ।
ಸುರಗುಣ ವಂದ್ಯಾ ಭಕ್ತ ಪ್ರಾಣಿ ॥ ೧ ॥

(ಇಷ್ಟರಲ್ಲಿ ವಿಟಪುರುಷನ ಕೈಯ್ಯೊಳಗಿಂದ ಕುರಿಯು ಜಾರಿಕೊಂಡು ಗುಡಿಯೊಳಗೆ ಬರುವುದು).

ಕಿನ್ನರಿ ಬ್ರಹ್ಮಯ್ಯ : (ಧಡಪಡಿಯ ಸಪ್ಪಳ ಕೇಳಿ) ಏನಿದು ಸಪ್ಪಳವು ! (ಓಡುತ್ತಾ ಬರುವ ಕುರಿಯನ್ನು ಕಂಡು) ಆ ಅದೋ ಕುರಿಯೊಂದು ಅಂಜುತ್ತೋಡುತ್ತಾ ಬರುತ್ತಲಿದೆ. ಪಾಪ ಅದು ಸಾಪಿನ ಅಂಜಿಕೆಯಿಂದಲೇ ಬರುತ್ತಲಿದೆ ಎಂದು ತೋರುತ್ತದೆ. (ಎಂದು ಹೋಗಿ ಆ ಕುರಿಯನ್ನು ಸಂತೈಸುವದು. ಇಷ್ಟರಲ್ಲಿ ಆ ವಿಟಪುರುಷನು ಬರುವದು).

ವಿಟಪುರುಷ : ಸ್ವಾಮಿ ಈ ಕುರಿಯು ನನ್ನದು. ನಾನಿದನ್ನು ಪೇಟೆಯಿಂದ ತರುವಾಗ ಇದರ ಕೊರಳ ನೇಣು ಹರಿದದ್ದರಿಂದ ಓಡುತ್ತಿಲ್ಲಿಗೆ ಬಂದಿದೆ. ಈ ಕುರಿಯ ಮೂಲಕ ತಮ್ಮ ಸ್ತೋತ್ರಕ್ಕೆ ಭಂಗ ಬಂದಿರಬಹುದು. ಅದಕ್ಕಾಗಿ ನನ್ನಂ ಕ್ಷಮಿಸಿ ನನ್ನ ಕುರಿಯನ್ನು ನನಗೆ ಒಪ್ಪಿಸಿ ಬಿಡಿ ಬುದ್ಧೀ.

ಕಿನ್ನರಿ ಬ್ರಹ್ಮಯ್ಯ : ಏನಯ್ಯ ನಿಜವಾಗಿ ಈ ಕುರಿ ನಿನ್ನದೋ ?

ವಿಟಪುರುಷ : ನಿಜವಾಗಿಯೂ ಈ ಕುರಿಯು ನನ್ನದು ಬುದ್ಧೀ. ಹೊತ್ತು ನನ್ನ ನಲ್ಲಳ ಕುಲದೇವತೆಯ ಪರ್ವಕಾಲ. ತನ್ಮೂಲಕ ಆ ದೇವತೆಗೆ ಈ ಕುರಿಯನ್ನು.........

ಕಿನ್ನರಿ ಬ್ರಹ್ಮಯ್ಯ : ಬಲಿ ಕೊಡುವಿರಾ !

ವಿಟಪುರುಷ : ಅಹುದು ಬುದ್ಧೀ. ಅದಕ್ಕಾಗಿಯೇ ಇದನ್ನು ಕೊಂಡುಕೊಂಡು ಬಂದಿರುವೆ.

ಕಿನ್ನರಿ ಬ್ರಹ್ಮಯ್ಯ : ಅಯ್ಯೋ ಪಾಪ ಈ ಬಡ ಪ್ರಾಣಿಯು ಅಂತೆಯೇ ಇಷ್ಟೊಂದು ಅಂಜಿಕೊಂಡು ನನ್ನೆಡೆಗೆ ಬಂದಿತು. ಅರ್ಥಾತ್ ಇದು ನನ್ನ ಮರೆ ಹೊಕ್ಕಂತೆಯೇ ಸರಿ. ಏನಯ್ಯ ಈ ಕುರಿಯು ನನ್ನ ಮರೆ ಹೊಕ್ಕಿದೆ ತನ್ಮೂಲಕ ಇದನ್ನು ರಕ್ಷಿಸುವದೇ ನನ್ನ ಕರ್ತವ್ಯ. ಈ ಕುರಿಯು ಇನ್ನು ನಿನ್ನ ಕೈ ಸೇರಲಾರದು ತಿಳಿಯಿತೇ.

ವಿಟಪುರುಷ : ಏನು ಸ್ವಾಮಿ ಹೀಗೆ ಹೇಳುವದಿದು ನಿಮಗೆ ನ್ಯಾಯವೆ ? ನಾನು ಹಣಕೊಟ್ಟು ತಂದ ನನ್ನ ಕುರಿಯನ್ನು ನನಗೆ ಕೊಡುವದಿಲ್ಲೆಂಬುದಿದೊಳ್ಳೆ ಲೆಕ್ಕಚಾರ ! ನಮ್ಮ ಹಣವು ಹಾಗೇ ಹೋಗಬೇಕೆ ?

ಕಿನ್ನರಿ ಬ್ರಹ್ಮಯ್ಯ : ಹಾಗಲ್ಲವಯ್ಯ, ನಿನ್ನ ಹಣಕ್ಕೇನು ಬಾಧೆಯಿಲ್ಲ. ಈ ಕುರಿಯ ಬೆಲೆಯನ್ನು ನೀನೆಷ್ಟು ಹೇಳಿದರೂ ನಾನು ಕೊಡಬಲ್ಲೆ. ಆದರೆ ಕುರಿಯನ್ನು ಮಾತ್ರ ಇಚ್ಛಿಸಬೇಡ.

ವಿಟಪುರುಷ : ಆ ನಾನು ಹೇಳಿದಷ್ಟು ಬೆಲೆ ಕೊಡುವಿರಾ!

ಕಿನ್ನರಿ ಬ್ರಹ್ಮಯ್ಯ : ಓಹೋ ಅದಕ್ಕೆ ಸಂದೇಹವೇ ಬೇಡ. ಹೇಳು ಅದರ ಬೆಲೆಯೆಷ್ಟೆಂಬುದನ್ನು.

ವಿಟಪುರುಷ : ಇದೊಳ್ಳೆ ಸಂಕಟ ಸಮಯ. ಈ ಶರಣನಂತೂ ಕುರಿಯನೊಪ್ಪಿಸಲು ಸಿದ್ಧನಿಲ್ಲ. ನಾನು ಕುರಿಯಿಲ್ಲದೆ ಹಾಗೆಯೇ ಮರಳಿ ಹೋದರೆ ನನ್ನ ಸಾನಿಯವರು ಹಸಿದ ಹುಲಿಯಂತೆ ನನ್ನ ಮೇಲದೆಷ್ಟು ರೇಗಿಕೊಳ್ಳುವರೋ ಬಲ್ಲವರಾರು ? ಆದರೆ ನಾನೀಗ ಏನು ಮಾಡಬೇಕು ? (ವಿಚಾರ ಮಾಡಿಕೊಂಡು). ಹಾಗೆ ಮಾಡುವದೇ ಉತ್ತಮ. ಮಿತಿಯಿಲ್ಲದೆ ಪರಮಾವಧಿ ಅದರ ಬೆಲೆಯನ್ನು ಹೆಚ್ಚಿಸಿ ಹೇಳಿದರೆ, ಈ ಶರಣನು ಎಲ್ಲಿಂದ ಕೊಡುತ್ತಾನೆ. ಅಹುದು ಹೀಗೆ ಮಾಡುವದೇ ಉತ್ತಮೋಪಾಯ. ಏನು ಸ್ವಾಮೀ ನಾನು ಹೇಳುವ ಬೆಲೆಯುನ್ನು ನಿಮ್ಮಿಂದ ಕೊಡುವದಾಗಲಿಕ್ಕಿಲ್ಲ ವೃಥಾ ರಸಕಸೆಯು ಬೇಡ. ಸುಮ್ಮನೆ ನನ್ನ ಕುರಿಯನ್ನು ನನಗೆ ಒಪ್ಪಿಸಿಬಿಡಿ.

ಕಿನ್ನರಿ ಬ್ರಹ್ಮಯ್ಯ : ಏನಯ್ಯ ಕುರಿಯು ನಿನಗೆ ಮರಳಿ ದೊರೆಯಲಾರದೆಂದೂ ಮತ್ತು ಅದರ ಬೆಲೆಯನ್ನು ಎಷ್ಟು ಹೇಳಿದರೂ ಕೊಡಬಲ್ಲೆನೆಂದೂ ಈ ಮೊದಲೇ ಹೇಳಲಿಲ್ಲವೆ ? ಅದಕೇಕೆ ಸಂದೇಹ ಪಡುವೆ ಹೇಳದರ ಬೆಲೆಯನ್ನು......

ವಿಟಪುರುಷ : ಹಾಗಾದರೆ ಕೇಳಿ ಶರಣರೆ. ನನ್ನ ಕುರಿಯ ಬೆಲೆಗಾಗಿ ನೀವು ಒಂದು ಸಾವಿರ ಹೊನ್ನು ಕೊಡಬೇಕು ಕಂಡಿರಾ !

ಕಿನ್ನರಿ ಬ್ರಹ್ಮಯ್ಯ : ಪರವಿಲ್ಲ ಪರವಿಲ್ಲ. ನಿನ್ನಿಚ್ಛೆಯಂತೆ ಸಾವಿರಹೊನ್ನನ್ನೆ ಒದಗಿಸಿ ಕೊಡುವೆ ತುಸು ತಡೆ. (ಎಂದು ಒಳಗೆ ಹೋಗುವದು).

ವಿಟಪುರುಷ : ಇವನೆಂಥ ಮರುಳ ! ಹತ್ತು ರೂಪಾಯಿ ಬೆಲೆ ಬಾಳುವ ಕುರಿಗೆ ಸಾವಿರ ಹೊನ್ನು ಕೊಡಲು ಸಮ್ಮತಿಸುತ್ತಾನೆಂದರೆ ನಿಜವಾಗಿ ಈತನು ಹುಚ್ಚನೇ ಇರಬೇಕು. ಇರಲೊಲ್ಲನೇಕೆ ಇದು ನನ್ನ ಉದಯ ಕಾಲ

ಕಿನ್ನರಿ ಬ್ರಹ್ಮಯ್ಯ : (ಒಳಗಿನಿಂದ ಹಣದ ಚೀಲ ತಂದು) ಇದೋ ತೆಗೆದುಕೋ ಸಾವಿರ ಹೊನ್ನಿನ ಚೀಲ ಆಯಿತೇ.....

ವಿಟಪುರುಷ :– ಆಯಿತು ಬುದ್ಧೀ.

ಕಿನ್ನರಿ ಬ್ರಹ್ಮಯ್ಯ : ಒಳ್ಳೆಯದು ಹೋಗು. ಇನ್ನು ಮೇಲೆ ಮತ್ತೇನಾದರೂ ವಿಚಾರದಿಂದ ನೀನು ಹುಸಿದೊಡೆ ನಾನೇನು ಹೋಗ ಬಿಡುವವನಲ್ಲ. ನಾನೀಗಲೆ ಇದಕ್ಕೆ ಲಿಂಗ ಮುದ್ರೆಯನ್ನೊತ್ತಿ ಬಿಡುವೆ.

(ರಸ್ತೆ ತೆರೆಯು ಬೀಳುವದು).

===****=====***===

(ಪ್ರವೇಶ ೬)

(ಸ್ಥಳ : ಬೀದಿ ವಿಟಪುರುಷನ ಪ್ರವೇಶ).

ವಿಟಪುರುಷ : ಇಂದಿಗೆ ನನ್ನ ದೈವದ ಬಾಗಿಲು ತೆರೆಯಿತು. ಅಂತೂ ದೇವರ ಕೃಪೆಯಿದೆ ನನ್ನ ಮೇಲೆ. ಯಾಕೆಂದರೆ ನನ್ನ ಸಂಪತ್ತೆಲ್ಲ ಸೂರೆಯಾಗುವವರೆಗೆ ನಾನೆಂದೂ ಮುಟ್ಟಿರದ ತಿಂಡಿ ತಿನಿಸುಗಳನ್ನು ಅಣಿಮಾಡಿಟ್ಟು, ನಾನು ಹೊರಗಿನಿಂದ ಬಂದೊಡನೆ ಎಷ್ಟು ಆದರದಿಂದ ತಿನ್ನಹಚ್ಚುತ್ತಿದ್ದಳು. ಎಂಥ ರುಚಿಕರವಾದ ಜೀನಸುಗಳವು ! ಮತ್ತೆ ಕುಡಿಯಲು ಪಾನಕವೆಂದು ಕೊಡುತ್ತಿದ್ದಳು. ಎಷ್ಟು ಬಣ್ಣಿಸಬೇಕು ಅದರ ರುಚಿಯನು ! ನಿಜವಾಗಿ ಅದು ಸುಧಾರಸವೆಂದೇ ಹೇಳಬೇಕು. ನಾನೆಂದೂ ಕಂಡಿರದ ಆ ರುಚಿಯಾದ ಜೀನಸುಗಳನ್ನು ತಿಂದು ಮೇಲೊಂದು ಬಟ್ಟಲು ಸುಧಾರಸವನ್ನು ಕುಡಿದೆನೆಂದರೆ ಏನು ಹೇಳಲಿ ಅದರ ಸುಖವನ್ನು ! ಅಮರಲೋಕ ನಿವಾಸಿಗಳಾದ ದೇವತೆಗಳು ಕೂಡ ಇಂಥ ಸುಖವನ್ನು ಕಂಡಿರುವರೋ ಇಲ್ಲವೋ ನನಗೆ ಸಂದೇಹ. ಇಂಥ ಸುಖದಲ್ಲಿ ಲೋಲಾಡುತ್ತಿದ್ದಾ ನಾನು ಈಗ ಕೆಲದಿನಗಳಿಂದ ಒಂದು ಮುಷ್ಟಿ ತಂಗೂಳು ಕಂಡರೆ, ಪಾವನಾಗಿದೆ. ಈಗ ನನ್ನ ಸಂಪತ್ತೆಲ್ಲ ಅಳಿದು ಹೋದದ್ದರಿಂದ ನಾನೀಗ ಒಬ್ಬ ತಿರುಪೆಯವನ ಮಟ್ಟಿಗೆ ಬಂದು ಬಿಟ್ಟಿದ್ದೇನೆ. ನನಗೀಗ ಇವಳಿಂದ ಯಾವ ಮನ್ನಣೆಯೂ ಇಲ್ಲ. ಈಗಿವಳು ಕೂಡ್ರೆಂದರೆ ಕೂಡಬೇಕು. ಏಳೆಂದರೆ ಏಳಬೇಕು. ನಾನು ಬಹಳ ಹೇಳುವದೇನು ನಾನೀಗ ಇವಳ ದಾಸಾನುದಾಸ. ಇಲ್ಲದಿದ್ದರೆ ಅಶನಕ್ಕೆ ವರ್ಜ್ಯ ಹೊಲಮನೆ ಧನವನ್ನೆಲ್ಲಾ ಇವಳಿಗಾಗಿ ಹಾಳು ಮಾಡಿಕೊಂಡಿರುವೆ. ನನಗೆ ಅನ್ಯಗತಿಯೇನಿದೆ? ಜನವು ನನಗೆ ಏನೇ ಅನ್ನುತ್ತಿರಲಿ ಅದನ್ನು ಲಕ್ಷಿಸಿದರೆ ನನ್ನ ಹೊಟ್ಟೆಯ ಪಾಡಿಗೇನು ? ಇವಳು ಕಾಲಿನಿಂದ ಹಾಕಿದರೂ ಕೈಯಿಂದ ತೆಗೆದುಕೊಂಡು ತಿನ್ನುವದೇ ಈಗಿನ ನನ್ನ ಜಾಣತನ. ಇದೋನೋಡಿ ವಿಚಾರ ಮಾಡಿ. ಈ ತೆರನಾಗಿದ್ದ ನನ್ನ ಉಚ್ಚ ಭಾವನೆಗೆ ಮೆಚ್ಚಿಕೊಂಡೆ ಆ ಪರಮಾತ್ಮನು ನನ್ನನ್ನು

ಅನುಗ್ರಹಿಸಿದನೆಂಬುದಕ್ಕೆ ಈ ಕುರಿಯ ವ್ಯವಹಾರವೇ ಸಾಕ್ಷಿ. ಎಂಟು ಹತ್ತು ರೂಪಾಯಿ ಬೆಲೆಬಾಳುವ ಕುರಿಗೆ ಆ ಶರಣನು ಸಾವಿರ ಹೊನ್ನು ಕೊಡುವಂತೆ ಆತನಿಗೆ ಆ ದಯಾಘನನು ಪ್ರೇರೇಪಿಸಿದ. ಅಂದ ಮೇಲೆ ನಾನು ಪುಣ್ಯಾತ್ಮನೋ ಪಾಪತ್ಮನೋ ಎಂಬುದನ್ನು ಪಂಡಿತರೇ ಊಹಿಸಬೇಕು. (ನಗುತ್ತಾ) ಈ ಹೊನ್ನಿನ ರಾಶಿಯನ್ನು ನನ್ನ ನಲ್ಲೆಯ ಮುಂದೆ ಚೆಲ್ಲಿ ಬಿಟ್ಟರೆ ತೀರಿತು ಮೊದಲಿನಂತೆಯೇ ಮತ್ತೆ ನನ್ನ ಆದರೋಪಚಾರಕ್ಕೆ ಪ್ರಾರಂಭವಾಗುವದು ಖಂಡಿತ. ಈಗವಳು ನನ್ನ ಮಾರ್ಗ ಪ್ರತೀಕ್ಷೆ ಮಾಡುತ್ತಿರಬಹುದು. ನಾನೀಗಲೇ ಅವಳಂ ಕೊಂಡುಕೊಳ್ಳುವೆ.

===***===***===

(ಪ್ರವೇಶ ೭.)

(ಸ್ಥಳ : ವಾರಂಗನೆಯ ಮನೆ).

ಸುಂದರಾಸಾನಿ : ಲಾಲು ಲಾಲು ಕುರಿಯನ್ನು ತರಲಿಕ್ಕೆ ಹೋದ ಆ ವಿಟನು ಇನ್ನೂ ಬರಲಿಲ್ಲವಲ್ಲ !

ಲಾಲೂ : ಬಹುಣ ದೇಖಿಯೆ ವೋ ಉದರಸೆ ಆರಹೆ ಹೈ.

ವಿಟಪುರುಷ : (ಹೊರಗಿನಿಂದ ಪ್ರವೇಶಿಸಿ ಉತ್ಸುಕತೆಯಿಂದ) ಸಾನಿಯವರೇ ನಮ್ಮಿಬ್ಬರ ದೈವದ ಬಾಗಿಲು ತೆರೆಯಿತು.

ಸುಂದರಾಸಾನಿ : (ಸಿಟ್ಟಿನಿಂದ) ಏನು ! ದೈವದ ಬಾಗಿಲು ತೆರೆಯಿತಂತೆ. ನಾನು ನಿನ್ನನ್ನು ಕಳುಹಿಸಿ ಕೊಟ್ಟಿದ್ದೇತಕ್ಕೆ, ತರಲಿಲ್ಲವೇ ಕುರಿಯನ್ನು !

ವಿಟಪುರುಷ : ಸಾನಿಯವರೇ ಕೋಪಿಸಿಕೊಳ್ಳುವದೇಕೆ? ಒಂದೇ ಕುರಿಯನ್ನೇಕೆ ಬೇಕಾದಷ್ಟು ಕುರಿಗಳನ್ನೂ ಬೇಕಾದಂತೆ ವಸ್ತುಗಳನ್ನೂ ಒದಗಿಸಿಕೊಳ್ಳಲು, ಹೊನ್ನಿನ ರಾಶಿಯನ್ನೇ ತಂದಿರುವೆ. ಇದೋ ತೆಗೆದುಕೊಳ್ಳಿ ಹಣದ ಚೀಲವನ್ನು.

ಸುಂದರಾಸಾನಿ : ಹಣದ ಚೀಲ ! ಎಲ್ಲಿಯ ಚೀಲವಿದು ? ಎಲ್ಲಾದರೂ ಕದ್ದುಕೊಂಡು ಬಂದೆಯಾ ?

ವಿಟಪುರುಷ : ಇಲ್ಲ ಸಾನಿಯವರೇ. ಅಂಥ ಹೀನ ಕೆಲಸ ಮಾಡುವಷ್ಟು ಕೀಳಾಗಿ ಕಂಡೆನೆ ನಾ ನಿಮಗೆ.

ಸುಂದರಾಸಾನಿ : ಹಾಗಾದರೆ ಈ ಹಣವನ್ನೆಲ್ಲಿಂದ ದೊರಕಿಸಿಕೊಂಡೆ ? ಮತ್ತು ಕುರಿಯನ್ನೇಕೆ ತರಲಿಲ್ಲ ? ನನಗೇನೊ ಸಂದೇಹ ಕಾಣುತ್ತೆ. (ತಿರಸ್ಕಾರದಿಂದ) ಉಚ್ಚ ಜಾತಿಯವ ಕುರಿಯನ್ನು ಹೇಗೆ ಹೊತ್ತುಕೊಂಡು ಬರಬೇಕೆಂದು ಬಿಟ್ಟು ಬಂದಿರಬೇಕು ಇಷ್ಟೇ.

ವಿಟಪುರುಷ : ಇಲ್ಲ ಇಲ್ಲ. ಸುಂದರಾಸಾನಿಯವರೇ ಹಾಗೆ ನುಡಿಯ ಬೇಡಿ.

ನಿಮ್ಮ ಆಜ್ಞೆಯೆಂದರೆ ನನಗೆ ಶಿರಸಾ ಮಾನ್ಯ.

ಸುಂದರಾಸಾನಿ : ಅಲ್ಲವೆ ! ಹೂಂ ಹಾಗಿದ್ದಲ್ಲಿ ಕುರಿಯನ್ನೇಕೆ ಬಿಟ್ಟು ಬಂದೆ?

ವಿಟಪುರುಷ : ಸಾನಿಯವರೇ ತಮ್ಮ ಅಪ್ಪಣೆಯಂತೆ ಪೇಟೆಯಿಂದ ಕುರಿಯನ್ನು ತರುವಾಗ ದಾರಿಯಲ್ಲಿ ಅದರ ಕೊರಳ ನೇಣು ಹರಿದದ್ದರಿಂದ ಅದು ಓಡುತ್ತಾ ಹೋಗಿ ಪಕ್ಕದಲ್ಲಿರುವ ತ್ರಿಪುರಾಂತಕೇಶ್ವರನ ದೇವಾಲಯವನ್ನು ಪ್ರವೇಶಿಸಿತು. ಆಗ ನಾನು ಅದರ ಬೆನ್ನಟ್ಟಿ ಹೋದೆ. ಅಷ್ಟರಲ್ಲಿ ಗುಡಿಯಲ್ಲಿರುವ ಕಿನ್ನರಿ ಬ್ರಹ್ಮಯ್ಯನೆಂಬ ಶರಣನು ಆ ಕುರಿಯನ್ನು ಹಿಡಿದುಕೊಂಡಿದ್ದ. ನಾನು ಅವನಿಗೆ ಇದು ನನ್ನ ಕುರಿ ಬಿಡು ಎಂದು ಹೇಳಿದೆ. ಅದಕ್ಕವನು ಒಪ್ಪದೆ ಇದು ನನ್ನ ಮರೆಹೊಕ್ಕಿದೆ ಇದನ್ನು ನಾನು ಬಿಡುವದಿಲ್ಲೆಂದೂ ಕುರಿಯ ಬೆಲೆಯನ್ನು ಎಷ್ಟು ಹೇಳಿದರೂ ಕೊಡಬಲ್ಲೆನೆಂದೂ ನಿರ್ಧಾರವಾಗಿ ಹೇಳಿಬಿಟ್ಟ.

ಸುಂದರಾಸಾನಿ : ಆಗ ನೀನೇನು ಮಾಡಿದೆ ?

ವಿಟಪುರುಷ : ಕುರಿಯ ಬೆಲೆಯನ್ನು ಪರಮಾವಧಿ ಹೆಚ್ಚಿಗೆ ಹೇಳಿದರೆ ಎಲ್ಲಿಯದು ಕೊಡುತ್ತಾನೆಂದು ಬಗೆದು, ಕುರಿಯ ಬೆಲೆಯನ್ನು ಒಂದು ಸಾವಿರ ಹೊನ್ನೆಂದು ಹೇಳಿ ಬಿಟ್ಟೆ. ಅದಕ್ಕವನು ಯತ್ಕಿಂಚಿತವೂ ಅನುಮಾನಿಸದೆ ಈ ಹೊನ್ನಿನ ಚೀಲವನ್ನು ತಂದುಕೊಟ್ಟ ತಿಳಿಯತೇ. ಸಾನಿಯವರೇ ಇದು ಭಾಗ್ಯದ ಲಕ್ಷ್ಮಿಯು ತಾನಾಗಿ ಬಂದಂತಾಗಲಿಲ್ಲವೆ ?

ಸುಂದರಾಸಾನಿ : ಥೂ ಅಧಮನೆ, ಭಾಗ್ಯದ ಲಕ್ಷ್ಮಿಯಂತೆ ಭಾಗ್ಯದ ಲಕ್ಷ್ಮಿ. ಹೂಂ (ಹಣದ ಚೀಲವನ್ನೊದೆದು) ತೆಗೆದುಕೋ ನಿನ ಭಾಗ್ಯದ ಲಕ್ಷ್ಮಿಯನ್ನು

ವಿಟಪುರುಷ : ಸಾನಿಯವರೆ ಇಷ್ಟೊಂದೇಕೆ ಕೋಪ ! ಬೇಕಾದಷ್ಟು ಹಣದ ಮೊತ್ತವೇ ಲಭ್ಯವಾಗಿರುವಾಗ ಕುರಿಗಳ ಹಿಂಡುಹಿಂಡನ್ನೇ ತಂದು ಉಬ್ಬುಬ್ಬಿ ಹಬ್ಬವ ಮಾಡಬಹುದು. ಇದಕ್ಕೆ ಚಿತ್ತದೋಳ್ ಚಿಂತಿಸುವದೇಕೆ? ಸಾನಿಯವರೇ.....

ಸುಂದರಾಸಾನಿ : ಥೂ ಭಂಡ ಮಾನವ ! ನಮ್ಮ ದೇವರ ಹೆಸರಿನಿಂದ ತಂದ ಕುರಿಯನ್ನು ಬಿಟ್ಟು ಮತ್ತೊಂದು ತಂದು ಹಬ್ಬವ ಮಾಡಲು ನಾನೇನು ಧರ್ಮ ಬಿಟ್ಟವಳಲ್ಲ ! ನೀತಿಗೆಟ್ಟವಳಲ್ಲ ! ಇನ್ನು ನಮ್ಮ ದೇವರ ಹೆಸರಿನಿಂದ ಬಲಿತುಕೊಂಡ ಕುರಿಯನ್ನು ತಂದು ಹಬ್ಬವ ಮಾಡದೆ ಹೋದರೆ ನಮ್ಮನ್ನು ದೈವವು ಎಲ್ಲಿ ಕೊಂದಪುದೋ ಎಂಬ ಅಂಜಿಕೆ

ನನಗಾಗಿದೆ. ತೊಲಗು ಇಲ್ಲಿಂದ. ನೀನೇತರ ಭುಜಂಗ ! ನನ್ನ ಹೊರೆಯಲಿ ನಿಂದಿರದಿರು. ರತಿಸದೃಶಳಾದ ನಾನು ನಿನಗೆ ವಶಳಾಗಿರುವಾಗ ನನ್ನಿಚ್ಛೆಯಂ ಈಡೇರಿಸಲು ಅಸಮರ್ಥನಾದ ನಿನ್ನ ವೃತ್ತಿಯಂ ಕಂಡು, ಸರಿಯ ವಿಟರು ನಗದಿರುವರೇ ನಿನಗೆ ! ನೀನು ಸೂಳೆ ಬಂಟಿಕೆಯಲ್ಲಿರುವ ಗಂಡನೆ ? ಪ್ರತ್ಯಕ್ಷ ಲಕ್ಷ್ಮಿ ಅತಾರವೆನಿಸುವ ನಿನ್ನ ಧನಗಿನವೆನಗೆ ಬಾರ್ತೆಯೆ? ನನ್ನ ಸೊಬಗಂ ನೋಡುವೆಯಾದೊಡೆ ಹೊನ್ನನೀಗಳೇ ಬೀದಿ ಬೀದಿಯಲಿ ಬಿತ್ತಿ ತೋರಿಸುವೆ.

ವಿಟಪುರುಷ :– ಸಾನಿಯವರೇ ಹಾಗಾದರೆ ನಾನೀಗ ಏನನ್ನು ಮಾಡುವದು ?

ಸುಂದರಾಸಾನಿ :– ಏನು ಮಾಡುವದೆಂದರೆ, ಈ ಹಣವನ್ನು ಮರಳಿತೆಗೆದುಕೊಂಡು ಹೋಗಿ ಆ ಶರಣನಿಗೆ ಒಪ್ಪಿಸುವದು. ಮತ್ತು ನಮ್ಮ ದೈವದ ಹೆಸರಿನಿಂದ ತಂದ ಕುರಿಯನ್ನೇ ತಕ್ಕೊಂಡು ಬರುವದು.

ವಿಟಪುರುಷ : ಒಳ್ಳೇದಾಗಲಿ ಸಾನಿಯವರೇ ನಾನೀಗಲೆ ತಳುವದೆ ಹೋಗಿ ನನ್ನ ಪ್ರಾಣ ತೆತ್ತಾದರೂ ಆ ಕುರಿಯನ್ನು ತಮ್ಮ ಮುಂದೆ ತಂದಿರಿಸುವೆ. (ರಸ್ತಾ ತೆರೆಯು ಬಿದ್ದು, ಅದರ ಮುಂದೆ ವಿಟಪುರುಷನು ಬಂದು) ಜಗತ್ತು ಇಂದು ನನ್ನ ನಡವಳಿಕೆಗಾಗಿ ಆಡಿಕೊಳ್ಳುತ್ತಿರಬಹುದು. ಉಚ್ಚಜಾತಿಯವ ! ಸೂಳೆಯರೊಡನೆ ಬೆರೆತು ತಿನ್ನಬಾರದುದನು ತಿಂದ. ಕುಡಿಯಬಾರದುದನು ಕುಡಿದ. ಧರ್ಮವನು ಕಾಲ್ಕೆಳಗೆ ಹಾಕಿ ತುಳಿದ. ಎಂದು ಮನ ಬಂದಂತೆ ತೆಗಳುತ್ತಿರಬಹುದು. ತೆಗಳಲಿ ಆ ತೆಗಳುವವರೆ ನನ್ನನ್ನು ಹೊಗಳುವಂತೆ ಆಚರಿಸಿ ತೋರಿಸುವೆ.

===***====***===

(ಪ್ರವೇಶ ೮)

(ಸ್ಥಳ : ತ್ರಿಪುರಾಂತಕೇಶ್ವರ ದೇವಾಲಯ ಕಿನ್ನರಿ ಬ್ರಹ್ಮಯ್ಯ ಧ್ಯಾನ ಮಗ್ನನಾಗಿದ್ದಾಗ್ಗೆ ವಿಟಪುರುಷನು ಸದ್ದಿಲ್ಲದೆ ಆ ಕುರಿಯನ್ನು ಹೊತ್ತುಕೊಂಡು ಹೋಗುವಾಗ ಅವನನ್ನು ತಡೆಯುವದು).

ಕಿನ್ನರಿಬ್ರಹ್ಮಯ್ಯ : ಎಲವೋ ನರಾಧಮಾ ಜೀವದಾಸೆಯಿಂದ ಬಂದು ಮರೆಹೊಕ್ಕ ಕುರಿಯ ಪ್ರಾಣ ಉಳಿಸುವದಕ್ಕಾಗಿಯೇ ನಿನಗೆ ಆಗ್ಗೆ ಸಾವಿರ ಹೊನ್ನು ಕೊಟ್ಟಿದ್ದು. ಮತ್ತೆ ನೀನೀಗ ಬಂದು ಕುರಿಯನ್ನು ಕದ್ದಕೊಂಡು ಹೋಗುತ್ತಿರುವೆಯಾ ? ಬಿಡು ಕುರಿಯನ್ನು. (ಎಂದು ಕುರಿಯನ್ನು ವಶಕ್ಕೆ ತಕ್ಕೊಳ್ಳುವದು ಮತ್ತು ವಿಟಪುರುಷನು ಕುರಿಯನ್ನು ಹಿಡಿಯಲಿಕ್ಕೆ ಬರುವದು). ದುರುಳನೆ ಇನ್ನು ಕುರಿಯಂ ಹಿಡಿಯದೆ ತೆರಳು ಇಲ್ಲಿಂದ. ಬಸವನಾಣೆಯಾಗಿ ಹೇಳುವೆ. ಮತ್ತೆ ನೀನೆ ಕುರಿಯಂ ಹಿಡಿದೆಯಾದೊಡೆ ನಿನ್ನ ತಲೆಯಂ ಹೊಡೆದು ಕೆಡಹುವದೇ ನಿಶ್ಚಯ. ಈಲಿಂಗ ಮುದ್ರೆಯಿಂದ ರಂಜಿಸುವ ಕುರಿಯೆಂದರೆ, ಅದು ನಿನಗೆ ನಂಜಾಗಿ ಪರಿಣಮಿಸುವದೆಂದೇ ತಿಳಿ.

ವಿಟಪುರುಷ : ಎಲವೋ ಶರಣಾ ? ಇಂಥ ಗದ್ದರಿಕೆಗೆ ನಾನೇನು ಹೆದರುವವನಲ್ಲ. ನೀನೇ ಇಷ್ಟೊಂದು ಹೋರಾಡಲು ಸಿದ್ಧನಾದರೆ ನನಗೇನು ಶಕ್ತಿಯಿಲ್ಲವೆ? ಬಾ ನಿನ್ನ ಮಸ್ತಕದ ಕಂಜನಾಳಕ್ಕೆ ಒಂದು ಏಟು ಕೊಟ್ಟು, ಕುರಿಯ ತಕ್ಕೊಂಡು ಹೋಗುವೆ.

ಕಿನ್ನರಿಬ್ರಹ್ಮಯ್ಯ : ನಿಲ್ಲು ಪಾತಕಿ. ನಿನ್ನ ಆಯುಷ್ಯ ರೇಖೆಯೇ ಮುಗಿದಿರುವಾಗ ನೀನಾದರೂ ಏನು ಮಾಡೀ! ಇದೋ ನಿನ್ನ ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತ (ಎಂದು ಹೊಡೆಯುವದು. ವಿಟಪುರುಷನು ಸತ್ತು ಬೀಳುವದು).

(ಅಂಕ ತೆರೆ ಬೀಳುವದು).

===***====***===

(ಚತುರ್ಥಾಂಕವು)
ಪ್ರವೇಶ ೧

(ಸ್ಥಳ : ಬಸವೇಶ್ವರರ ಮಹಾಮನೆ ಮಧುವರಸರು ಬಸವೇಶ್ವರರೊಂದಿಗೆ ಸಂಭಾಷಿಸುವದು).

ಮಧುವರಸ : ಮಹಾತ್ಮರೆ ಹರಳಯ್ಯನವರು ಅಳವಡಿಸಿಕೊಂಡ ದಿವ್ಯ ಶಕ್ತಿಯ ಪ್ರಭಾವವನ್ನೆಷ್ಟೆಂದು ವರ್ಣಿಸಬೇಕು!

ಬಸವೇಶ್ವರ : ನಿಮಗೀಗವರ ಶಕ್ತಿಯ ಆಳವು ಗೋಚರವಾಯಿತೆ ?

ಮಧುವರಸ : ಬಸವೇಶ್ವರರೆ ಗೋಚರವಾಯಿತಷ್ಟೇ ಅಲ್ಲ. ಅದು ಪ್ರತ್ಯಕ್ಷ ನನ್ನ ಅನುಭವಕ್ಕೆ ಬಂದು ಹೋಯಿತು. ತಮಗಾಗಿ ಆ ಹರಳಯ್ಯನವರು ತನ್ನ ಮತ್ತು ತನ್ನ ಹೆಂಡತಿಯ ತೊಡೆಗಳ ಚರ್ಮದಿಂದ ತಯಾರಿಸಿದ ಜೋಡುಗಳನ್ನು ತಕ್ಕೊಂಡು ಬರುವಾಗ್ಗೆ ತಾಮಸ ವೃತ್ತಿಯಲ್ಲಿದ್ದ ನಾನು ಅಹಂಭಾವದಿಂದ ಅವರಂ ಬಲಾತ್ಕರಿಸಿ. ಅವರ ಕೈಯಲ್ಲಿಯ ಜೋಡುಗಳನ್ನು ಮೆಟ್ಟಿದೆ. ತತ್‌ಕ್ಷಣವೇ ನನ್ನ ಸರ್ವಾಂಗದಲ್ಲಿಯೇ ಬೇಗೆ ಹತ್ತಿದಂತಾಗಿ ಅದರ ವೇದನೆಯನ್ನು ಸಹಿಸಲಾರದೆ ಅರಚುತ್ತಿದ್ದೆ, ಆ ವೇದನೆಯನ್ನು ಶಮನಗೊಳಿಸುವ ಉದ್ದೇಶದಿಂದ ನೀರುತರಲು ಹೋದ ಮಗಳಿಗೆ, ಆ ಹರಳಯ್ಯನವರ ಬಚ್ಚಲು ಗುಂಡಿಯಲ್ಲಿ ನೀರು ಕಾಣಲು, ಆ ನೀರನ್ನೇ ತುಂಬಿಕೊಂಡು ಬಂದು ನನ್ನ ಮೇಲೆ ಸುರುವಲು, ಉರಿಯುತ್ತಿರುವ ನನ್ನ ಬೇಗೆಯು ಒಮ್ಮಲೆ ಶಾಂತವಾಗಿ, ಪೂರ್ವವತ್ ಸೊಗಸು ಸ್ಫೂರ್ತಿಯುಳ್ಳವನಾದೆ. ಆಗಲೇ ಹರಳಯ್ಯನವರ ಮಹಿಮಾತಿಶಯದ ಬಗ್ಗೆ ನನಗೆ ಮನವರಿಕೆಯಾಯಿತು ಮಹಾತ್ಮರೆ.

ಬಸವೇಶ್ವರ : ಅಹುದು ಮಧುವರಸರೇ ಶರಣರ ಮಹಿಮೆಯನ್ನು ಅರಿಯುವದು ಸುಲಭಸಾಧ್ಯವಲ್ಲ. ಹರಳಯ್ಯನವರು ಮಹಿಮಾನ್ವಿತರಾದದ್ದು, ಅವರ ಸತ್ಯವಾದ ನಡವಳಿಕೆಯಿಂದ.

ಮಧುವರಸ : ಅಹುದು ಮಹಾತ್ಮರೆ, ಅವರ ವಿಮಲಾಚಾರದ ಬಗ್ಗೆ ನಾನೀಗಲೇ ಅರಿತುಕೊಂಡಿದ್ದೇನೆ. ಅವರು ಪಾರಮಾರ್ಥವೇತ್ತರೂ ಗುರುಲಿಂಗ ಜಂಗಮ ಭಕ್ತಿಯುತ ಚಿತ್ತರೂ ಶಿವಧರ್ಮ ಮಾರ್ಗಯತ ಪವಿತ್ರ ಚರಿತ್ರರೂ ಆಗಿ ಭಕ್ತಿಯ ಪ್ರಭೆಯನ್ನು ಬೀರಿದ್ದು, ನನಗೀಗಲೇ ಮನವರಿಕೆಯಾಗಿದೆ. ಅಂಥ ಮಹಿಮನನ್ನು ತುಚ್ಛೀಕರಿಸಿ ಮಹಾಪರಾಧ ಮಾಡಿಕೊಂಡಿದ್ದೇನೆ ಬಸವೇಶ್ವರರೆ.

ಬಸವೇಶ್ವರ : ಬೂದಿ ಮುಚ್ಚಿದ ಕೆಂಡದಂತೆ, ಅಸ್ಪೃಶ್ಯರಲ್ಲಿ ಜನ್ಮ ತಾಳಿದ ನಿಮಿತ್ಯದಿಂದ ಜನತೆಯ ಗಮನವು ಅವರ ಮಹಿಮೆಯ ಬಗೆಗೆ ಹರಿದು ಬಂದಿಲ್ಲ. ಅವರು ಹೊಲೆಯರಾದರೇನಾಯಿತು ! ಅವರ ಶಿವಜ್ಞಾನ ಶಿವಭಕ್ತಿ ಶಾಂತಿ ಗುಣಗಳು ವರ್ಣಿಸಲಸಾಧ್ಯ ಮಧುವರಸರೇ.

ಮಧುವರಸ: ನಿಜ ಮಹಾತ್ಮರೇ. ಅವರ ಲಿಂಗಾರ್ಚನೆಯು ವರ್ಣಿಸಲಸದಳವಾಗಿದೆಯಂತೆ. ನಯನದೋಳ್ ಪೂಜೆ ಬರೆದಂತೆ ನೋಡುತಂ, ಚಿತ್ತದೋಳ್ ಪೂಜೆಯಚ್ಚೊತ್ತಿದಂತರ್ಚಿಸುತ್ತಂ ಮತ್ತು ಚಿತ್ತದೋಳ್ ಪುಟ್ಟಿರ್ದಂತೆ ಲಿಂಗವ ನೋಡುತ್ತಾ ಅದರಲ್ಲಿಯೇ ತಾದಾತ್ಮ್ಯ ಹೊಂದಿ ಸುಖಿಸುತ್ತಿರುವರೆಂಬುದನ್ನು ನಾನು ಕೇಳಿಕೊಂಡಿದ್ದೇನೆ.

ಬಸವೇಶ್ವರ : ನೋಡಿ ಮಧುವರಸರೇ ಇಂತಿರುವ ಆ ಹರಳಯ್ಯನವರು ನೀತಿ ಬಲಿದುದೋ, ಶಾಂತಿ ಸದ್ಗುಣ ವ್ರತಮೇ ರೂಪಂದಳೆಯಿತೋ ಎಂಬಂತಿರುವ ಅವರ ಬಚ್ಚಲ ಗುಂಡಿಯು ನೀರೆಂದರೆ ಅಷ್ಟಾಷಷ್ಠಿತೀರ್ಥಂಗಳ ಜಲವೆಂದರೇನು ಅತಿಶಯೋಕ್ತಿಯಲ್ಲ.

ಮಧುವರಸ : ಅಹುದಹುದು ಮಹಾತ್ಮರೇ. ಅಂತೆಯೇ ಆ ನೀರಿನ ಸ್ನಾನವಾದೊಡನೆಯೇ ನನ್ನ ಮೈಯಲ್ಲಿಯ ಉರಿಯುವ ವೇದನೆಯಡಗಿ ನೆಮ್ಮದಿಯುಂಟಾಯಿತು. ಅನುಭಾವದಿಂದ ಹುಟ್ಟಿತ್ತು ಲಿಂಗ. ಅನುಭಾವದಿಂದ ಹುಟ್ಟಿತ್ತು ಪ್ರಸಾದ. ಅನುಭಾವದನುವಿನಲ್ಲಿ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿ ಎಂದು ಪ್ರಭುದೇವರು ಹೇಳಿದ ವಚನದ ತಿರುಳು ನನಗೀಗ ಸಂಪೂರ್ಣ ಗೊತ್ತಾಗಿದೆ.

ಬಸವೇಶ್ವರ : ಮಧುವರಸರೇ ಆ ವಚನದ ತಿರುಳು ನಿಮಗೆ ಗೊತ್ತಾಗಿದ್ದೇ ನಿಜವಾದರೆ ನಿಜವಾಗಿಯೂ ಅದು ನಿಮ್ಮ ಆತ್ಮ ಕಲ್ಯಾಣಕ್ಕೆ ಮಾರ್ಗ. ಶರಣರ ವಚನಗಳೆಂದರೆ ಸಂಸಾರವೆಂಬ ಘೋರಾಂಧಕಾರದಲ್ಲಿ ನಡೆಯುವ ಮಾನವನಿಗೆ ಕತ್ತಲೆಯ ದಾರಿದೀಪ.

ಮಧುವರಸ : ಅಹುದಹುದು ಬಸವೇಶ್ವರರೇ. ನನಗೀಗ ವಚನಗಳ ತಿರುಳು ತಿಳಿದಂದಿನಿಂದ ಕತ್ತಲೆಯಂ ತರುಣ ಸೂರ್ಯನು ಹೊಕ್ಕಂತಾಗಿ, ನನ್ನ ಹೃದಯವು ಪರಿವರ್ತನೆಯಾಗಿದೆ. ಅದರಿಂದ ಅರುಣ ಕಿರಣಗಳ ಮುಂದಣ ಮಂಜಿನ ಹನಿಗಳು ಮಾಯವಾಗುವಂತೆ, ನನ್ನಲ್ಲಿಯ ಅಜ್ಞತೆಯಳಿದು ಹೋಗಿ ಪಾರಮಾರ್ಥಕ್ಕೆ ನನ್ನ ಮನವು ಹಾತೊರೆಯ ಹತ್ತಿದೆ.

ಬಸವೇಶ್ವರ : ಪರವಿಲ್ಲ ಪರವಿಲ್ಲ. ಸಂತೋಷದ ಸಂಗತಿ ಮಧುವರಸರೇ.

ಮಧುವರಸ : ತನ್ಮೂಲಕ ಬಸವೇಶ್ವರರೇ, ಆ ಹರಳಯ್ಯನವರ ನಿಲುಮೆಯನ್ನರಿತಾಗಿನಿಂದ ಅವರ ಸಂಸರ್ಗದಲ್ಲಿಯೇ ಕಾಲಹರಣ ಮಾಡಬೇಕೆಂಬ ಮನಸ್ಸುಂಟಾಗಿದೆ.

ಬಸವೇಶ್ವರ : ಬಹಳೇ ಒಳಿತು. ಶರಣರೊಡನಾಡಿದ ಮಾನವನು ಮಾಯಾನಿರಸನನಾಗಿ ಆತ್ಮ ತೇಜಸ್ಸಿನಿಂದ ಬೆಳಗಬಲ್ಲ.

ಮಧುವರಸ : ಆದುದರಿಂದಲೇ ಮಹಾತ್ಮರೇ ಆ ಹರಳಯ್ಯನವರ ಮಗನಿಗೆ ನನ್ನ ಮಗಳನ್ನು ಕೊಟ್ಟು ಶರೀರ ಸಂಬಂಧ ಬೆಳೆಸಿ, ಅವರ ಅನುಭಾವದನುವಿನಲ್ಲಿ ಕಾಲಹರಣ ಮಾಡಬೇಕೆಂದು ಇಚ್ಛಿಸಿರುವೆ. ಅದಕ್ಕೆ ಶರಣರ ಒಪ್ಪಿಗೆಯನ್ನು ತಕ್ಕೊಳ್ಳಬೇಕು ಮಹಾತ್ಮರೇ.

ಬಸವೇಶ್ವರ : ಓಹೋ ಅಗತ್ಯವಾಗಿ ಹಾಗೆ ಮಾಡಬಹುದು. ಈಗಲೇ ನಡೆಯಿರಿ ಹೋಗೋಣ. ಅವರ ಒಪ್ಪಿಗೆಯು ದೊರೆತ ಮಾತ್ರದಲ್ಲಿ ವಿವಾಹ ಸಿದ್ಧತೆಯನ್ನೇ ಮಾಡಿ ಬಿಡೋಣ. ಬನ್ನಿ ಹೋಗೋಣ.

(ರಸ್ತಾ ತೆರೆ ಬೀಳುವದು).

===***=====***===

(ಪ್ರವೇಶ ೨)

(ಸ್ಥಳ : ಬೀದಿ. ಭಟ್ಟರು, ಶೆಟ್ಟರು ಹಾಗೂ ಮಂಚಣ್ಣ).

ಭಟ್ಟರು : ಇದೇನು ಬಂತರೆಪ್ಪ ಕಾಲ ! ಸನಾತನಿಗಳಾದ ನಮ್ಮ ಧರ್ಮದ ತಲೆ ಕೆಳಗಾಗಿ ಹೋಯಿತು.

ಶೆಟ್ಟರು : ಯಾಕೆ ಭಟ್ಟರೇ ಈಗೇನಾಯಿತು !

ಭಟ್ಟರು : ಇನ್ನೂ ಏನಾಗಬೇಕು ಶೆಟ್ಟರೇ, ನಮ್ಮ ಸನಾತನ ಧರ್ಮವೇ ಹೊಲಗೇರಿ ಕೂಡಿತು.

ಮಂಚಣ್ಣ : ಅಂದರೆ !

ಭಟ್ಟರು : ಅಂದರೇನು ಮಂಚಣ್ಣನವರೇ, ಬಸವೇಶ್ವರರು ಈಗಂತೂ ತೀರಾ ಹಾದಿ ಬಿಟ್ಟರು.

ಮಂಚಣ್ಣ : ಯಾಕೆ ಈಗೇನು ಸಂಘಟಿಸಿತು ಅವರಿಂದ !

ಭಟ್ಟರು : ಆ ಹೊಲೆಯರ ಹರಳಯ್ಯನೇನಿರುವನಲ್ಲ ! ಅವನ ಮಗನಿಗೆ ಮಧುವರಸರ ಮಗಳನ್ನು ವಿವಾಹ ಮಾಡಿಕೊ[illegible]ರಂತೆ.

ಶೆಟ್ಟರು :– ಛೀ ಛೀ ನಾವು ಏನು ನೋಡುವದು ಬಂದಿತು ಉಪ್ಪರಿಗೆಯು ತಿಪ್ಪೆಯೂ, ತಿಪ್ಪೆಯು ಉಪ್ಪರಿಗೆಯೂ, ಆಗುವ ಕಾಲ ಬಂದಿತು ಮಂಚಣ್ಣನವರೆ.

ಮಂಚಣ್ಣ : (ಚಕಿತನಾಗಿ) ಏನು ಚೋದ್ಯವಿದು ! ಬಸವೇಶ್ವರರು ಇಷ್ಟು ನೀತಿಗೆಟ್ಟು ನಡೆದಾರೆಂದು ನನಗನಿಸಿರಲಿಲ್ಲ. ದುಷ್ಟ ಪ್ರೇರಣೆ ಮಾಡಿ, ಸಮಾಜವನ್ನೇ ಹೊಲೆಗಲಿಸಲು ಹಿಂದೆ ಮುಂದೆ ಸಹ ನೋಡಲಿಲ್ಲವೆ ಅವರು ! ಅವರದು ಅದೆಷ್ಟು ಧೈರ್ಯ ! ಅವರೀ ಸ್ವಚ್ಛಂದ ವೃತ್ತಿಗೆ ನಮ್ಮ ಮಹಾರಾಜರು ಅವರ ತಪ್ಪುಗಳನ್ನು ಸಹಿಸಿಕೊಳ್ಳುತ್ತಾ ಬಂದದ್ದೇ ಕಾರಣ.

ಭಟ್ಟರು : ಅಹುದು ಮಂಚಣ್ಣನವರೇ ಅವರೆಸಗಿದ ತಪ್ಪುಗಳು ಒಂದೇ ಎರಡೇ ಹಲವಾರು. ಅವುಗಳನ್ನೆಲ್ಲ ನಮ್ಮ ಮಹಾರಾಜರು ಸಹಿಸುತ್ತಲೇ ಬಂದರು.

ಶೆಟ್ಟರು : ಅಷ್ಟೇಯಾಕೆ ಭಟ್ಟರೇ, ತಿರುಗಿ ತಾವೇ ಅವರಲ್ಲಿ ಕ್ಷಮೆಯನ್ನು ಕೂಡಾ ಬೇಡಿದರು.

ಮಂಚಣ್ಣ : ಈ ತೆರ ನಡೆಯು ಸಿಂಹಾಸನಕ್ಕೇನು ಗೌರವ !

ಭಟ್ಟರು : ಅಲ್ಲಾ ಕ್ಷಮೆಯನ್ನು ಬೇಡಲಿಕ್ಕೆ ಇವರೇನು ತಪ್ಪು ಮಾಡಿದ್ದರು?

ಶೆಟ್ಟರು : ಅವರೇನು ಮಾಡುತ್ತಾರೆ ತಪ್ಪು ! ನಾವು ಹೇಳಿದ ಚಾಡಿ ಮಾತುಗಳು ಸಿದ್ಧವಾಗದಿದ್ದಕ್ಕೆ ಅವರು ಕ್ಷಮೆಬೇಡಬೇಕಾಯಿತು ಪಾಪ.

ಮಂಚಣ್ಣ :– ಶೆಟ್ಟರೇ ಏನು ಹುಚ್ಚರಂತೆ ಮಾತಾಡುವಿರಿ. ನಾವು ಬಸವಣ್ಣನವರ ಮೇಲೆ ಹೇರಿದ ತಪ್ಪುಗಳು ಸಿದ್ಧವಾಗದಿದ್ದರೇನಾಯಿತು ? ನಾವು ಆರೋಪ ಹೇರಿದ್ದು ಸುಳ್ಳೇ.

ಭಟ್ಟರು :– ಛೇ ಛೇ ಅದೇನು ಸುಳ್ಳಲ್ಲ. ಅದರಲ್ಲೇನು ಸಂದೇಹವಿದೆ ಮಂಚಣ್ಣನವರೇ ? ಆ ಕಂಬಳಿ ನಾಗಿದೇವ ಹೊಲೆಯ. ಅವನಲ್ಲಿ ಬಸವೇಶ್ವರರು ಊಟ ಮಾಡಿದರು ಎಂದು ಆರೋಪಿಸಿದರೆ ಅವನು ಈಶನ ಮೀಸಲಪ್ಪ ಭಕ್ತ ಎಂದು ಹೇಳಿ, ಅವನಂ ಕರೆಸಿ ಅವನ ಮೈಯೊಳಗಿಂದ ಹಾಲು ತೆಗೆಯಿಸಿ ತೋರಿಸಿದರು. ಇದಕ್ಕೇನು ಅನ್ನಬೇಕು ಶೆಟ್ಟರೇ.

ಶೆಟ್ಟರು : ಅದು ಇಂದ್ರಜಾಲ ವಿದ್ಯೆಯಲ್ಲದೆ ಮತ್ತೊಂದೇನಿಲ್ಲ ಭಟ್ಟರೇ. ಮನುಷ್ಯರ ಮೈಯ್ಯೊಳು ಹಾಲು ಸುರಿಯುವದೆಂದರೆ, ಸೃಷ್ಟಿ ನಿಯಮದ ತಿರುವು ಮರುವಲ್ಲವೇ ಇದು ? ನಿಜವಾಗಿ ಬಸವಣ್ಣನವರು ಮಾಯಾವಿಗಳು.

ಮಂಚಣ್ಣ : ಅಹುದು ಇದೇ ಮಾತು ಸತ್ಯ. ಏನ್ರಿ ನಾವು ಯಾವ ತಪ್ಪು ಹೇರಿದರೂ ಎಲ್ಲದರಲ್ಲೂ ಸೋಲು ನಮಗೆ ಕಟ್ಟಿಟ್ಟದ್ದೇ.

ಭಟ್ಟರು : ಆಗಲಿ ಮಿಂಚಿ ಹೋದದ್ದನ್ನು ಚಿಂತಿಸಿ ಫಲವೇನು ? ಈಗಿನ ಅವರ ಅಪರಾಧದ ಬಗ್ಗೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡಿರಿ.

ಶೆಟ್ಟರು : ಇದರಲ್ಲಿಯೂ ಎಲ್ಲಿ ತಮ್ಮ ಮಾಯಾದಾಟ ರಚಿಸಿ ಆ ಬಸವಣ್ಣನವರು ದೋಷ ಮುಕ್ತರೆಂದು ಪರಿಗಣಿಸುವರೋ ಯಾರಿಗೆ ಗೊತ್ತು ?

ಮಂಚಣ್ಣ : ಛೇ ಛೇ ಅದು ಸಾಧ್ಯವಿಲ್ಲ. ಶೆಟ್ಟರೇ ಈಗವರಿಗೆ ನೂರು ವರುಷಗಳು ತುಂಬಿದವೆಂದೆ ಹೇಳಬೇಕು. ವರ್ಣ ಸಂಕರ ಮಾಡಿ, ಸಮಾಜವನ್ನೇ

ಹೊಲೆಗಲಿಸಿದ ಧರ್ಮದ್ರೋಹಿಯಾದ ಬಸವಣ್ಣನವರಿಗೆ ಈ ಸಲ ತಕ್ಕ ಶಾಸನ ಆಗಲೇಬೇಕು.

ಭಟ್ಟರು : ಏನಾಗುವದೋ ನೋಡೋಣ. ಇದೊಂದು ಸಲ ಮಹಾರಾಜರಿಗೆ ಸಾಧ್ಯಂತವಾಗಿ ಬಸವಣ್ಣನವರ ತಪ್ಪುಗಳನ್ನು ವಿಶದಪಡಿಸಿ ಅವರಿಗೆ ತಕ್ಕ ದಂಡನೆಯಾಗುವಂತೆ ಪ್ರಯತ್ನ ಮಾಡೋಣ.

ಶೆಟ್ಟರು : ಹಾಗಾದರೆ ನಡೆಯಿರಿ. ಮಹಾರಾಜರ ಸನ್ನಿಧಿಯನ್ನು ಕಂಡುಕೊಳ್ಳೋಣ.

===***===***===

(ಪ್ರವೇಶ ೩)

(ಸ್ಥಳ : ಬಿಜ್ಜಳನ ಒಡ್ಡೋಲಗ. ಬಿಜ್ಜಳ, ಮಂಚಣ್ಣ, ಭಟ್ಟರು, ಶೆಟ್ಟರು ಮೊದಲಾದ ಮಂತ್ರಿಮಂಡಲ).

ಬಿಜ್ಜಳ : ಮಂಚಣ್ಣಾದಿ ಮಂತ್ರಿಯವರೇ ನಮ್ಮ ದಂಡನಾಯಕರಾದ ಬಸವೇಶ್ವರರು ನಿಜವಾಗಿಯೂ ಮಹಾಪುರುಷರು ಅಲ್ಲವೆ !

ಭಟ್ಟರು : ಕೇಳಿದಿರಾ ಶೆಟ್ಟರೇ, ಮಂಚಣ್ಣನವರೆ ಪ್ರಭುವಿನ ಉದ್ಗಾರ !

ಶೆಟ್ಟರು : ಕೇಳಿದಿವಿ ಭಟ್ಟರೇ ನಾವು ನೀವೆಲ್ಲರೂ ತಂದ ಸಂದೇಶಕ್ಕೆ ಒಳ್ಳೆ ಮರ್ಯಾದೆ ದೊರೆಯುವಂತೆ ತೋರುತ್ತೆ.

ಮಂಚಣ್ಣ : ನಾನು ಈ ಮೊದಲೇ ಹೇಳಿದ್ದಿಲ್ಲವೆ ನಿಮಗೆ ? ನಮ್ಮ ಪಾಲಿಗೇ ಸೋಲು ಕಟ್ಟಿಟ್ಟದ್ದೆಂದು.

ಬಿಜ್ಜಳ : ಯಾಕೆ ? ಈ ತೆರ ವ್ಯಂಗ್ಯವಾಗಿ ನುಡಿಯುವ ನಿಮ್ಮಗಳ ಅಭಿಪ್ರಾಯವಾದರೂ ಏನು ?

ಶೆಟ್ಟರು : ಏನು ಹೇಳಬೇಕು ಪ್ರಭೊ ?

ಭಟ್ಟರು : ಮಹಾರಾಜರೇ ಆ ಬಸವೇಶ್ವರರನ್ನು ತಾವು ಹೊಗಳುವದು ಕಂಡು ನಮ್ಮೆಲ್ಲರಿಗೆ ಅಚ್ಚರಿಯಾಗಿದೆ.

ಬಿಜ್ಜಳ : ಹೀಗೋ !

ಮಂಚಣ್ಣ : ಅಚ್ಚರಿ ಅಷ್ಟೇ ಅಲ್ಲ ಮಹಾರಾಜರೇ ಆ ಬಸವೇಶ್ವರರ ವೃತ್ತಿಯಿಂದ ನಮ್ಮೆಲ್ಲರ ತಲೆ ಕೆಟ್ಟು ಹೋಗಿದೆ ಪ್ರಭೋ !

ಬಿಜ್ಜಳ : ತ್ರಿಪುರಾಂತಕೇಶ್ವರ ಗುಡಿಯಲ್ಲಿ ಒಬ್ಬ ವಿಟಪುರುಷನ ಮರಣವಾದುದಕ್ಕೆ ಆತನ ಕೊಲೆಯು ದೇವಾಲಯದಲ್ಲಿರುವ ಕಿನ್ನರಿಬ್ರಹ್ಮಯ್ಯನೆಂಬ ಶರಣನಿಂದಾಯಿತೆಂದು ಅಪವಾದ ಬಂದಿದ್ದು, ಅದರ ಬಗ್ಗೆ ನಿರ್ಣಯ ತಕ್ಕೊಳ್ಳುವ ವಿಚಾರ ಮಾಡುವ ಸಂದರ್ಭದಲ್ಲಿ ಆ ಕಿನ್ನರಿ ಬ್ರಹ್ಮಯ್ಯನು

ದೋಷಿಯಲ್ಲ ಎಂಬುವ ಬಗ್ಗೆ ಬಸವೇಶ್ವರರು ಲಿಂಗದ ಮುಖದಿಂದ ಒಂದು ತರದ ದಿವ್ಯವಾದ ಧ್ವನಿಯನ್ನುಂಟು ಮಾಡಿ ತೋರಿಸಿದರು. ಇದರ ಮೇಲಿಂದ ವಿಚಾರ ಮಾಡಲಾಗಿ ಆ ಬಸವೇಶ್ವರರು, ಮಹಿಮಾ ಪುರುಷರೆಂದೇ ವ್ಯಕ್ತವಾಗುವದಿಲ್ಲವೆ ?

ಶೆಟ್ಟರು : (ತಿರಸ್ಕಾರದಿಂದ) ಏನು ಮಹಿಮೆ ! ಏನು ಬಸವೇಶ್ವರರು ! ಮಹಾಪ್ರಭೋ ಇಷ್ಟೊಂದು ತಾವು ಮೋಸ ಹೋದಿರೆಂಬ ಕಲ್ಪನೆಯು ಕೂಡ ನಮಗಿದ್ದಿರಲಿಲ್ಲ.

ಬಿಜ್ಜಳ : ಮೋಸ ! ನಾನು ಮೋಸಕ್ಕೊಳಗಾಗಿರುವೆನೆ ?

ಭಟ್ಟರು : ಅಹುದು ಪ್ರಭೋ ನಿಜವಾಗಿಯೂ ತಾವು ಮೋಸಕ್ಕೊಳಗಾಗುವಿರಿ ಹಾಗೇ ಲಿಂಗದಿಂದ ಧ್ವನಿ ಬರುವಂತೆ ಮಾಡಿಟ್ಟ ಇಂದ್ರಜಾಲ ವಿದ್ಯೆ ಪ್ರಭೋ ಅದು.

ಬಿಜ್ಜಳ : ಹೀಗಿರುವದೇ ನಿಮ್ಮ ಅಭಿಪ್ರಾಯ ! ಹೂಂ ಆ ಮಾತು ಹಾಗಿರಲಿಬಿಡಿ. ಮಂಚಣ್ಣಾದಿಗಳೇ ಈಗ ನೀವು ಬಸವೇಶ್ವರರ ಮೇಲೆ ತಂದಿರುವ ಆರೋಪವಾದರೂ ಏನು ?

ಭಟ್ಟರು : ಅನುಮಾನವೇತಕೆ ಮಂಚಣ್ಣನವರೇ, ಬಸವಣ್ಣನವರ ಆ ಪ್ರಮಾದದ ಬಗ್ಗೆ ವಿವರವಾಗಿ ಸ್ಪಷ್ಟೀಕರಿಸಿ ಬಿಡಿ.

ಮಂಚಣ್ಣ : ಪ್ರಭುಗಳೇ ಶಾಂತಚಿತ್ತಾರಾಗಿ ಕೇಳಿ ಆ ಬಸವೇಶ್ವರರು ಹೊಲೆಯ ಹರಳಯ್ಯನವರ ಮಗ ಶೀಲವಂತನಿಗೆ ಮಧುವರಸನ ಮಗಳಾದ ನೀಲಳನ್ನು ಕೊಡಿಸಿ ವಿವಾಹ ಕಾರ್ಯವನ್ನು ಜರುಗಿಸಿ ಬಿಟ್ಟರು. ಈಗಲಾದರೂ ಇಂತೆಸಗಿದ ಅವರ ಕೃತಿಯು ತಪ್ಪೋ ಒಪ್ಪೋ ನೀವೆ ನೋಡಿಕೊಳ್ಳಿ.

ಭಟ್ಟರು : ನೋಡಿ ಮಹಾರಾಜರೇ ಸಮಾಜದಲ್ಲಿ ಪ್ರಕ್ಷುಬ್ಧ ವಾತಾವರಣ ಹುಟ್ಟುವಂತೆ ಈ ಅನುಚಿತ ಕಾರ್ಯವೆಸಗಲು ಆ ಬಸವೇಶ್ವರರು ಎನಿತೂ ಹಿಂದು ಮುಂದು ನೋಡಲಿಲ್ಲ ಪ್ರಭೋ.

ಶೆಟ್ಟರು : ಭಟ್ಟರೇ ಅವರಿಗಾವ ಭೀತಿಯಿದೆ ? ಈಗವರು ಏನು ಮಾಡಲೂ ಸಮರ್ಥರಾಗಿ ಬಿಟ್ಟಿದ್ದಾರೆ. ವಿಚಾರ ಮಾಡಿರಲ್ಲ ! ಸನಾತನ ಧರ್ಮವನ್ನು ಹೊಲೆಗಲಿಸಿ ಬಿಡುವ ವ್ಯವಹಾರ ಮಾಡುವಲ್ಲಿ ಅವರು ಯಾರನ್ನು ಲೆಕ್ಕಿಸಿದರು ! ಮಹಾರಾಜರನ್ನು ಕೂಡ ಲೆಕ್ಕಿಸಲಿಲ್ಲ.

ಬಿಜ್ಜಳ : ಮಂತ್ರಿವರ್ಗವೇ ಈ ವಿಷಯವೆಂದರೆ ಸಮಾಜದಲ್ಲಿ ಕೋಲಾಹಲವನ್ನುಂಟು ಮಾಡುವ ವಿಷಯ. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕೆಂಬ ನೀತಿಯಿರುವದರಿಂದ ಅದಕ್ಕನುಗುಣವಾಗಿ ಮತ್ತು ತಮ್ಮನ್ನು ಪ್ರಶ್ನಿಸುವೆ. ಈಗ್ಗೆ ತಾವು ಹೇಳಿದ ವಿಷಯ ನಿಜವಾದುದೆಂಬುದಕ್ಕೆ ಪ್ರಮಾಣವುಂಟೆ !

ಮಂಚಣ್ಣ : ಅದಕ್ಕೆ ಸಂದೇಹವೇಕೆ ಪ್ರಭುಗಳೇ. ಬಸವೇಶ್ವರರಂತೂ ಸತ್ಯವಾದಿಗಳೆಂಬ ನಂಬುಗೆ ತಮಗಿದ್ದೇ ಇದೆ. ಅವರನ್ನೇ ಕರಿಸಿ ವಿಚಾರ ಮಾಡಿದರೆ ಎಲ್ಲವೂ ವಿಧಿತವಾಗುವದಲ್ಲ ಪ್ರಭೋ.

ಬಿಜ್ಜಳ : ಸರಿ, ನೀವು ಅಭಿಪ್ರಾಯ ಪಡುವಂತೆ ಬಸವೇಶ್ವರರನ್ನೇ ಕರಿಸಿ ವಿಚಾರಿಸೋಣ ಯಾರಲ್ಲಿ !

ಚಾರವ : ಭೋ ಪ್ರಭೋ ?

ಬಿಜ್ಜಳ : ದಣ್ಣಾಯಕರಾದ ಬಸವೇಶ್ವರರನ್ನು ತಳುವದೆ ಇಲ್ಲಿಗೆ ಬರಮಾಡುವವನಾಗು.

ಚಾರವ: ಆಜ್ಞಾ ಮಹಾನ್.

ಬಿಜ್ಜಳ : (ಸಿಂಹಾಸನದಿಂದೆದ್ದು) ಮಂತ್ರಿ ಮಂಡಲವೇ ಒಂದು ಸಮಯ ವರ್ಣಸಂಕರಣ ಮಾಡಿದ ಈ ಲಗ್ನದ ಸಂಗತಿಯು ನಿಜವಾದುದೇ ಆದರೆ, ಕಲ್ಯಾಣದ ಭವಿಷ್ಯಚ್ಚಿತ್ರವು ಅಷ್ಟೊಂದು ಸಾಧುವಾಗಿಲ್ಲವೆಂದೇ ಹೇಳಬೇಕು. ಈಶ್ವರ ಇಚ್ಚೆಯಿದ್ದಂತಾಗಲಿ. ಈಗ್ಗೆ ನಾನು ನನ್ನ ಕರ್ತವ್ಯವನ್ನಾದರೂ ನಿರ್ವಹಿಸಬೇಕಲ್ಲವೆ!

ಪದ. ರಾಗ – ಬಿಹಾರ, ತ್ರಿತಾಳ

ತಾಳೆಯಮ ಶಾಂತಿಯೂ ಕದಡಿತು ।
ಖೂಳರ ಆ ವಿವಾಹದ ಮಾತು
ಧರ್ಮಕೆಡಿಸಿರಾ ಅಪರಾಧಿಗಳಾ
ಚರ್ಮವ ಸುಲಿಸುತ ಹೀರ್‍ಯಪ್ರಾಣಿಗಳಾ
ಪರಿಕಿಸಿ ವಿವರಾ ಆ ಅಪಾದಿತರಾ

ಚಾರವ : ಮಹಾರಾಜರೇ ಬಸವೇಶ್ವರರ ಆಗಮನವಾಯಿತು.

ಬಿಜ್ಜಳ : ಆಗಮಸಿದರೇ ಬಸವೇಶ್ವರರು? ಬನ್ನಿ ಬಸವೇಶ್ವರರೇ ಕೂತುಕೊಳ್ಳಿ

(ಎಂದು ಸಿಂಹಾಸನಾರೂಢನಾಗಿ) ದಣ್ಣಾಯಕರೇ ಈಗ್ಗೆ ಮಾತ್ರ ನನಗೆ ಶಾಂತಿಯಿಲ್ಲ. ನೆಮ್ಮದಿಯಿಲ್ಲ.

ಬಸವೇಶ್ವರ: ಅದೇಕೆ ಪ್ರಭೋ? ಇಷ್ಟೊಂದು ವ್ಯಾಕುಲಚಿತ್ತಾರಗಲು ಕಾರಣವೇನು?

ಬಿಜ್ಜಳ : ಏನು ಹೇಳಲಿ ಬಸವೇಶ್ವರರೇ ಈಗ್ಗೆ ಊರಲ್ಲಿ ಸಂಘಟಿಸಿದ ವ್ಯವಹಾರದ ಮೇಲಿಂದ , ನನ್ನ ಭವಿಷ್ಯಚ್ಚಿತ್ರವೂ ದುರಂತ ಸ್ಥಿತಿಯಲ್ಲಿಯೇ ಸಂಭವಿಸುವಂತೆ ತೋರುತ್ತದೆ ಬಸವೇಶ್ವರರೇ.

ಬಸವೇಶ್ವರ: ದುರಂತ ಸ್ಥಿತಿಯಲ್ಲಿ ನಿಮ್ಮ (ಭವಿಷ್ಯಚ್ಚಿತ್ರ)! ಹೀಗೇನು ನುಡಿಯುವಿರಿ ಪ್ರಭುಗಳೇ, ತಮ್ಮ ಆಢಳತೆಯಲ್ಲಿ ಪ್ರಜಾಜನರು ಅಮರ ಪುರವಾಸಿಗಳಂತೆ, ಹುಸಿ , ಕಳವು, ಪರಧನ, ಪರದರಾಭಿಲಾಷೆ ಗಳಿಗೆಡೆಗೊಡದೆ, ಪಾಪಭೀರುಗಳೂ ದಯಾರ್ದ್ರ ಹೃದಯಿಗಳೂ ಆಗಿ, ಸದಾಚಾರವೇ ಸ್ವರ್ಗ. ಅನಾಚಾರವೇ ನರಕ ಎಂಬ ತತ್ವವನ್ನರಿತು ಪವಿತ್ರಾಚರಣೆಯುಳ್ಳವರಾಗಿ, ನಡೆಯುತ್ತಿರುವದರಿಂದ ತಮ್ಮ ರಾಜ್ಯವು ಸ್ವರ್ಗೀಯ ಸುಖದಲ್ಲಿ ಲೋಲಾಡುತ್ತಿರುವಾಗ್ಗೆ ನಿಮ್ಮ ಭವಿಷ್ಯತ್ತಿನಲ್ಲಿ ದುರಂತಸ್ಥಿತಿಯೊದಗುವದೇ? ಅದು ಆವಕಾಲಕ್ಕೂ ಸಾಧ್ಯವಿಲ್ಲ.

ಬಿಜ್ಜಳ : ಅಹುದು ಬಸವೇಶ್ವರರೇ ನೀವೆಂದಂತೆ ಸದಾಚಾರವೇ ಸ್ವರ್ಗ ಅನಾಚಾರವೇ ನರಕ ಎಂಬ ತತ್ವವನ್ನನುಸರಿಸಿ ನಡೆದರಲ್ಲವೆ ಮಾತ್ರ ಹಾಗಾಗುವದು!

ಬಸವೇಶ್ವರ: ಅಹುದು ಪ್ರಭುಗಳೇ ಮಾನವನು ಸದಾಚಾರಿಯೂ ಧರ್ಮಾವಲಂಬಿಯೂ, ಆಗಿದ್ದರೇನೆ ಸ್ವರ್ಗೀಯ ಸುಖದಲ್ಲಿ ಲೋಲಾಡಬಲ್ಲ. ಅಂತೆಯೇ ಪ್ರಜಾಜನರ ಸ್ಥಿತಿಯಿರುವದು. ಹೀಗಿರುವಾಗ ನವನೀತ ಸುಕೋಮಲ ಹೃದಯಿಗಳಾದ ತಮ್ಮಚಿತ್ತವನ್ನೂ ಕದಡಿಸಲು ಕಾರಣರಾರು!

ಬಿಜ್ಜಳ: ಬಸವೇಶ್ವರರೇ ನೀವು ಬಗೆದಂತೆ ನನ್ನ ಚಿತ್ತವೂ ಕದಡಿಹೋಗಿದೆ. ಮತ್ತಂ ಅದಕ್ಕೆ ನೀವೇ ಕಾರಣರು.

ಬಸವೇಶ್ವರ: (ಚಕಿತರಾಗಿ) ಏನು ನಿಮ್ಮ ಚಿತ್ತಕದಡಲು ನಾನು ಕಾರಣನೆ? ಪ್ರಭುಗಳೇ ಏನದು ಹೇಳಿ ಹೇಳಿ. ನಿಮ್ಮ ಚಿತ್ತಕದಡುವಂಥ ಅದಾವ ಅಪರಾಧವಾಯಿತು ನನ್ನಿಂದ!

ಬಿಜ್ಜಳ: ಕೇಳಿ ದಣ್ಣಾಯಕರೇ ಆ ಅಸ್ಪೃಸ್ಯ ಹರಳಯ್ಯನ ಮಗನಿಗೂ, ಮತ್ತು

ಮಧುವರಸರ ಮಗಳಿಗೂ ಶರೀರಸಂಬಂಧ ಬೆಳಿಸಿ ವಿವಾಹವೆಸಗಿದಿರೆಂದು ಕೇಳಿದ್ದೇನೆ. ಈ ಮಾತು ನಿಜವಾದುದೇ?

ಬಸವೇಶ್ವರ: ನಿಜಕ್ಕೂ ನಿಜ. ಪ್ರಭುಗಳೇ

ಬಿಜ್ಜಳ: ಬಸವೇಶ್ವರರೇ ನನ್ನ ಪ್ರಜೆಗಳು ಪವಿತ್ರಾಚರಣೆಯಲ್ಲಿರುವರೆಂದು ಹೇಳುವ ನೀವೇ ಹೀಗೆ ವರ್ತಿಸಿದ ಮೇಲೆ ತೀರಿಹೋಯಿತು. ಇದೊಳ್ಳೆ ಪವಿತ್ರಚರಣೆ! ದಣ್ಣಾಯಕರೆ ವಿಚಾರ ಮಾಡಿ. ಈ ತೆರ ಅನ್ಯಾಯ ಅಧರ್ಮಾಚರಣೆಯಿಂದ, ಪಾಪಕರ್ಮಗಳಾಗಹತ್ತಿದರೆ, ನನ್ನ ರಾಜ್ಯಕ್ಕೆ ಅಳಿಗಾಲವೆಂದೇ ಊಹಿಸಬೇಕಲ್ಲದೆ. ಮತ್ತೇನು?

ಬಸವೇಶ್ವರ: ಸರಿ ಸರಿ ಪ್ರಭುಗಳೇ ಪಾಪಕಾರ್ಯವಾದಲ್ಲಿ ಅಳಿಗಾಲವಲ್ಲದೆ ಉಳಿಗಾಲವಿಲ್ಲ. ಈ ಮಾತನ್ನೂ ನಾನು ಒಪ್ಪುತ್ತೇನೆ. ಆದರೆ ಪ್ರಭೋ ತಮ್ಮ ಪ್ರಾಜಾಜನರಲ್ಲಿ ಪಾಪಕಾರ್ಯವೇನಾಗಿದೆ?

ಬಿಜ್ಜಳ: ಇನ್ನೂ ಏನಾಗಬೇಕು ದಣ್ಣಾಯಕರೇ, ನಿಮ್ಮನೇತೃತ್ವದಲ್ಲಿಯೇ ತ್ಯಾಜ್ಯ ಜಾತಿಯವನಾದ ಆ ಹೊಲೆಯರ ಹರಳಯ್ಯನಿಗೂ ಪೂಜ್ಯ ಜಾತಿಯವನದ ಮಧುಅರಸನಿಗೂ, ಬೀಗತನವಾಯಿತೆಂದರ, ಏನು ಹೇಳಬೇಕು! ಎಂಥ ನಂದ್ಯ ಕಾರ್ಯ! ಇದು ಪಾಪಚರಣೆಯಲ್ಲವೆ? ಹೊಲೆಯರಗೂಡ ಬೆಳಿತೆ! ಶರೀರ ಸಂಬಂಥ !

ಬಸವೇಶ್ವರ: ಪ್ರಭೋ ತುಸು ಶಾಂತಚಿತ್ತರಾಗಿರಿ. ಕುಲದ ವಿಷಯದಲ್ಲಿ ಉಚ್ಚನೀಚಭಾವನೆ ತಾಳುವದು ಉಚಿತವಲ್ಲ. ಪ್ರಭುಗಳೇ, ಜ್ಯಾತಿಗಳೇನು ಆ ಸೃಷ್ಟಿಕರ್ತನಿಂದ ನಿರ್ಮಾಣವಾಗಿ ಬಂದಿರುವದಿಲ್ಲ. ಉದ್ಯೋಗ ವ್ಯವಹಾರ ಶೀಲಗಳ ಮೇಲಿಂದಲೇ ಜ್ಯಾತಿಗಳುಂಟಾದವು. ಇದೋ ಕೇಳಿ "ಸಾಂಖ್ಯಶವಚ, ಅಗಸ್ತ ಕಬ್ಬಲಿಗ, ದುರ್ವಾಸಮುಚ್ಚಿಗ, ದಧೀಚ ಕೀಲಿಗ, ಕಶ್ಯವ ಕಮ್ಮಾರ, ರೋಮಜಕಂಚುಗಾರಮ ಕೌಂಡಲ್ಯ ಇಂತೀ ಸಪ್ತರ್ಷಿಗಳೆಲ್ಲರೂ ಹೀನಕುಲದಲ್ಲಿ ಜನ್ಮ ತಾಳಿದ್ದರೂ, ಜಗವರಿಯೆ ಸತ್ಯಾವನ್ನಾಶ್ರಯಿಸಿ, ಸದಾಚಾರಿಗಳಾಗಿಯೇ ಮುಕ್ತರಾಗಿ ಪುರಾಣಪುರೆನಿಸಲಿಲ್ಲವೆ? ವೇದಶಾಸ್ತ್ರಕ್ಕೆ ಗುರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾ ನೋಡುವಲ್ಲಿ ವೈಶ್ಯನಾಗಿ, ವ್ಯವಹಾರದೊಳಗಾಗಿ ಕೃಷಿ ಮಾಡುವದಕ್ಕೆ ಶೂದ್ರನಾಗಿ, ಇಂತೀ ಜಾತಿಗೋತ್ರದೊಳಗಾದ ಉಚ್ಚನೀಚವೆಂಬೆರಡು ಕುಲವಲ್ಲದೆ, ಹೊಲೆ ಹದಿನೆಂಡು ಜ್ಯಾತಿಯೆಂಬ ಕುಲವಿಲ್ಲ. "ಬ್ರಹ್ಮವನರಿದಲ್ಲಿ ಬ್ರಾಹ್ಮಣ.

ಸರ್ವಜೀವ ಹತಕ್ಕೊಳಗಾದಲ್ಲಿ ಸಮ್ಮಗಾರ" ಈ ಉಭಯವನರಿದು ಉಚ್ಚನೀಚವೆಂಬ ಭೇದವ ಕಂಡುಕೊಳ್ಳಬೇಕು. ಭೂಪತೀ.

ಬಿಜ್ಜಳ : ಬಸವೇಶ್ವರರೇ ಆ ಹೊಲೆಯ ಹರಳಯ್ಯನ್ನೂ ಗೌರವಿಸುವದಕ್ಕಾಗಿ ಇಷ್ಟೊಂದು ಉಪಮಾನೋಪಮೆಗಳನ್ನು ಕೊಡುತ್ತಿರುವದೇಕೇ?

ಬಸವೇಶ್ವರ: ಮಹಾರಾಜರೇ ಪೂಜ್ಯರಾದ ಆ ಹರಳಯ್ಯನವರನ್ನೂ ಹೊಲೆಯನೆಂದೇಕೆ ನುಡಿವಿರಿ? ಹೊಲೆಯರಲ್ಲಿ ಜನ್ಮತಾಳಿದರೇನಾಯಿತು? ಅವರು ತಮ್ಮ ಪವಿತ್ರಾಚರಣೆಯ ಮೂಲಕ, ತಮ್ಮಲ್ಲಿ ದಿವ್ಯ ಶಕ್ತಿಯನ್ನಳವಡಿಸಿಕೊಂಡು, ಲೋಕಮಾನ್ಯರೇ ಆಗಿದ್ದಾರೆ. ಹೊಲೆಯನೆಂದಾರಿಗನ್ನಬೇಕು? ಉಚ್ಚ ಜ್ಯಾತಿಯಲ್ಲಿ ಜನಿಸಿ ಧರ್ಮಕಟ್ಟಳೆಗಳನ್ನುಲ್ಲಂಘಿಸಿ, ನೀತಿಗೆಟ್ಟು ನಡೆಯುವವ ಹೊಲೆಯನಲ್ಲವೆ? ಸ್ವಾರ್ಥಲಾಲಸೆಯಿಂದ ಅಸತ್ಯವನುಡಿದು, ಸಮಾಜದಲ್ಲಿ ಕ್ರಾಂತಿಯನ್ನೆಬ್ಬಿಸಿ, ಅಶಾಂತಿಯನ್ನುಂಟು ಮಾಡುವವ ಹೊಲೆಯನಲ್ಲವೆ? ಮುಶಿ, ಕಳವು, ಪರನಾರಿ,ಪರದ್ರವ್ಯಾಭಿಲಾಷೆ ಮಾಡುವವ ಹೊಲೆಯನಲ್ಲವೇ. ಜ್ಯಾತಿಯಿಂದ ಹೊಲೆಯನಾದವನು ನೈತಿಕಾಚರಣೆಯಿಂದ ನಡೆಯುತ್ತಿದ್ದರೆ, ಅವನು ಹೊಲೆಯನಲ್ಲವೆಂಬುದು ನಿರ್ವಿವಾದವಾದ ಮಾತು.

ಬಿಜ್ಜಳ: ಅಂದರೆ ಈಗ್ಗೆ ಆ ಹರಳಯ್ಯನವರ ಕೂಡ, ಕೊಡುಕೊಂಬುವ ಹೀಗೂ ತಿಂಬುವ ವ್ಯವಹಾರ ಮಾಡಿದರೇನು ಅಧರ್ಮಾಚರಣೆಯಲ್ಲವೆ?

ಬಸವೇಶ್ವರ: ಪ್ರಭುಗಳೇ ವಿಮರ್ಶಾತ್ಮಕ ವಿಚಾರಮಾಡಿ ನೋಡಿ, ಮಾನವನ ಉಪಯೋಗಕ್ಕಾಗಿ, ನಿರ್ಮಾಣವಾದ ವಸ್ತುಗಳೆಲ್ಲವೂ ಸೃಷ್ಟಿಕರ್ತನಾದ ದೇವದತ್ತ ವಸ್ತುಗಳು. ಆ ವಸ್ತುಗಳ ಬಳಕೆಯನ್ನು ಎಲ್ಲಿ ಮಾಡಿದರೇನು? ಅದು ತಪ್ಪೆಂದು ತಿಳಿಯುವನು ಭ್ರಾಮಕ ಕಲ್ಪನೆ ಕೇಳಿ.

ವಚನ ॥ **ರಾಗ :– ಭಾವ ತ್ರಿತಾಳ**

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ ।
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ ಕೂಡಲಸಂಗಮದೇವಾ, ನಿಮ್ಮನರಿದವಂಗೆ. ॥

ಮಹಾರಾಜರೇ ಇಂತಿರಲು ಪರಮಾತ್ಮನ ಸನ್ನಿಧಿಯನ್ನೂ ಕಂಡುಕೊಳ್ಳುವವರಲ್ಲಿ, ಮೇಲು ಕೀಳೆಂಬ ಭಾವನೆಯನ್ನು ಆತನು ತಳೆಯುವಂತಿಲ್ಲ. ಯಾವಾತನು ಸದಾಚಾರಿಯಾಗಿ ಅಧ್ಯಾತ್ಮದ ತೇಜಸ್ಸಿನಿಂದ ಬೆಳಗಬಲ್ಲನೋ, ಆತನು ಪರಮಾತ್ಮನ ಸನ್ನಿಧಿಯನ್ನೂ ಕಂಡುಕೊಳ್ಳಲು ಅರ್ಹನಾಗಬಲ್ಲ. ಪ್ರಭುಗಳೇ ವಿಚಾರಮಾಡಿ, ಉಚ್ಚವರ್ಣದಲ್ಲಿ ಜನಿಸಿದವನು ಪಾಪಾಚರಣೆಯಿಂದ ನಡೆಯುತ್ತಿದ್ದರೆ, ಆತನಿಗೆ ಪರಮಾತ್ಮ ಕೃಪೆಯು ದೊರಕಬಹುದೇ? ಅದೇ ನೀಚಜ್ಯಾತಿಯಲ್ಲಿ ಜನಿಸಿದವನು ಪವಿತ್ರ ನಡೆವಳಿಕೆಯಲ್ಲಿದ್ದು, ಆಧ್ಯಾತ್ಮ ವಿದ್ಯೆಯನ್ನು ಸಂಪಾದಿಸಿಕೊಂಡರೆ ಆತನು ಜಗದ್ವಂದ್ಯನಾಗಲಾರನೇ? ಅವನಿಗೆ ಈಶ ಕೃಪೆಯು ದೊರಕಲಾರದೇ?

ಭಟ್ಟರು : ನೋಡಿ ನೋಡಿ ಪ್ರಭುಗಳೇ ಉಚ್ಚ ವರ್ಣದವರಿಗೆ ಪರಮಾತ್ಮನು ಒಲಿಯುವದಿಲ್ಲವಂತೆ. ಮತ್ತು ನೀಚ ವರ್ಣದವರಿಗೆ ಒಲಿಯುತ್ತಾನಂತೆ. ತುಂಬಿದ ಸಭೆಯಲ್ಲಿಯೇ ಉಚ್ಚವರ್ಣದ ಅವಹೇಳನ !

ಶೆಟ್ಟರು : ಎಂಥ ಧೈರ್ಯ ಭಟ್ಟರೆ, ಬಸವೇಶ್ವರರು ನಮ್ಮೆಲ್ಲರ ಅವಹೇಳನ ಮಾಡುವ ಉದ್ದೇಶದಿಂದಲೇ ಆ ಹೊಲೆಯರನ್ನು ಇಷ್ಟು ಎತ್ತಿ ಹಿಡಿಯುತ್ತಿದ್ದಾರೆ.

ಮಂಚಣ್ಣ : ಪ್ರಭುಗಳೇ ದೀರ್ಘಾಲೋಚನೆ ಮಾಡಿ ನೋಡಿ, ಇದು ಉಚ್ಚ ಜಾತಿ, ಇದು ನೀಚ ಜಾತಿ ಎಂದು ಧರ್ಮದ ವ್ಯವಸ್ಥೆ ಮಾಡಿ, ಹೊಲೆಯರನ್ನು ಮುಟ್ಟಕೂಡದೆಂದು ಕಟ್ಟುಪಾಡು ಮಾಡಿದ ನಮ್ಮ ಪೂರ್ವಜರು ಹುಚ್ಚರೇ ಇದ್ದಂತಾಯಿತಲ್ಲ ಪ್ರಭೋ ?

ಬಸವೇಶ್ವರ : ಮಂಚಣ್ಣನವರೇ ಆ ತೆರ ಹೊಲೆಯರನ್ನು ಮುಟ್ಟಕೂಡದೆಂದು ಮುಂತಾಗಿ ಕಟ್ಟು ಮಾಡಿದವರು ಹುಚ್ಚರೇಕೆ ? ಅವರು ಒಳ್ಳೆ ಜಾಣರೇ ಮಂಚಣ್ಣನವರೇ. ಅವರು ಸ್ವಾರ್ಥಲಾಲನೆಯಿಂದ ಆಚಂದ್ರಾರ್ಕವಾಗಿ ತಾವೇ ಶ್ರೇಷ್ಠರೆನಿಸಿಕೊಳ್ಳಬೇಕೆಂದೂ ಹೊಲೆಯರು ಕೀಳರಾಗಿಯೇ ಉಳಿದುಕೊಂಡು, ತಮ್ಮ ಸೇವೆಯಲ್ಲಿ ನಿರತರಾಗಿರಬೇಕೆಂದೂ ಆ ಜಾಣರು ಆಳವಾಗಿಯೇ ವಿಚಾರ ಮಾಡಿದ ಹಾಗೆ ವ್ಯವಸ್ಥೆಗೊಳಿಸಿದ್ದುಂಟು. ಇಂಥ ಮೇಧಾವಿಗಳಿಗೆ ಹುಚ್ಚರೆನ್ನಲಾದೀತೇ ಮಂಚಣ್ಣನವರೇ.

ಬಿಜ್ಜಳ : ನೋಡಿ ಬಸವೇಶ್ವರರೆ ಈ ತೆರವಾದವಿವಾದ ಬೆಳೆಸುವುದು ಬೇಡ. ಮತ್ತು ನೀವು ಹೇಳುವ ವಚನಗಳ ಬಗೆಗೆ ವಿಚಾರ ಮಾಡಲು

ಇದೇನು ಆಧ್ಯಾತ್ಮ ವಿದ್ಯಾಲಯವಲ್ಲ. ಹಾಗೂ ಈ ಬಗೆಗೆ ಚರ್ಚಿಸಲು ಈ ನನ್ನ ಸನ್ಮತಿಯೂ ಇಲ್ಲ. ಬಸವೇಶ್ವರರೇ ಈಗ ಬಿಜ್ಜಳನೆಂಬ ನಾಮಾಂಕಿತವಷ್ಟೇ ಅಲ್ಲ ನಾನು ಚಾಲುಕ್ಯ ರಾಜ್ಯದ ಸಾಮ್ರಾಟಾಧಿಪತಿ ಮತ್ತು ನಾನಿರುವದೀಗ ನ್ಯಾಯಾಲಯದಲ್ಲಿ. ಸಜ್ಜನರನ್ನು ರಕ್ಷಿಸುವದೂ ದುರ್ಜನರನ್ನು ಶಿಕ್ಷಿಸುವದೂ ನಾನು ಮಾಡಬೇಕಾದ ಕರ್ತವ್ಯ.

ಬಸವೇಶ್ವರ : ಅಹುದು ಪ್ರಭೋ ಅದು ನಿಜವಾದ ಮಾತೇ.

ಬಿಜ್ಜಳ : ಹಾಗಾದರೆ ನಾನೀಗ ಆ ಮಧುವರಸ ಹರಳಯ್ಯನನ್ನು ಕರೆಸಿ ವಿಚಾರ ವಿನಿಮಯ ಮಾಡುವೆ.

ಬಸವೇಶ್ವರ : ಪ್ರಭುಗಳ ಚಿತ್ತ.

ಬಿಜ್ಜಳ : ಯಾರಲ್ಲಿ .

ಚಾರವ : ಮಹಾಪ್ರಭೋ.

ಬಿಜ್ಜಳ : ಕ್ಷಿಪ್ರವಾಗಿ ಆ ಹರಳಯ್ಯ ಮಧುವರಸರನ್ನು ಇಲ್ಲಿಗೆ ಬರಮಾಡಿಕೊಂಡು ಬನ್ನಿ.

ಚಾರವ : ಆಜ್ಞಾ ಮಹಾನ್.

ಬಿಜ್ಜಳ : (ಹರಳಯ್ಯ ಮಧುವರಸರು ಬಂದ ಮೇಲೆ) ಮಧುವರಸರೇ ನೀವು ಹರಳಯ್ಯನ ಮಗನಿಗೆ ನಿಮ್ಮ ಮಗಳನ್ನು ವಿವಾಹ ಮಾಡಿ ಕೊಟ್ಟ ಸಂಗತಿ ನಿಜವಾದುದೇ ?

ಮಧುವರಸ : ನಿಜ ಮಹಾರಾಜರೇ.

ಬಿಜ್ಜಳ : ಈ ತೆರ ಧರ್ಮ ದ್ರೋಹ ಮಾಡಿದರೆ ಮುಂದೆ ಎಂಥ ದುರಂತ ಸ್ಥಿತಿ ಬಂದೀತೆಂಬುದನ್ನು ತುಸುವಾದರೂ ಗಮನಿಸಿದಿರಾ ?

ಮಧುವರಸ : ಪ್ರಭುಗಳೇ ನಾವೇನು ಧರ್ಮದ್ರೋಹ ಮಾಡಿಲ್ಲ. ಪವಿತ್ರಾಚರಣೆಯ ದೃಷ್ಟಿಯಲ್ಲಿ ಹರಳಯ್ಯನವರು ನನ್ನಕ್ಕಿಂತಲೂ ಮೇಲ್ಮಟ್ಟಿನವರು.

ಬಿಜ್ಜಳ : ಬಾಯಿ ಮುಚ್ಚು ಅಧಮನೆ ಉಚ್ಚವರ್ಣವೆನಿಸುವ ಬ್ರಾಹ್ಮಣ ಕುಲಜನಾದ ನೀನು ನನ್ನೆದುರಿನಲ್ಲಿಯೇ ಆ ಹೊಲೆಯನ ವರ್ಣನೆ ಮಾಡುವೆಯಾ ?

ಪದ :   ರಾಗ : ದೇಸ. ತ್ರಿತಾಳ.

ಭಲೆ ಬಲಮಾನವಾ ಪಲವಂದದಿ ನಿಮ್ಮ ಗೋಳಾಟಗೈವೆ ॥ ಪಲ್ಲ ॥
ಜಾತಿ ವಿಜಾತಿಯ ಭೇದನೆಣಿಸದೆ ! ಮತಿ ವಿಹೀನನೆ ಅನೀತಿಯಲಿ ನೀ ।
ಮತಾಂತರದಿ ಸ । ನಾತವನಳಿದೆ ॥

ಬಸವೇಶ್ವರ : ಶಾಂತಚಿತ್ತಾರಾಗಿರಿ. ಪ್ರಭುಗಳೇ ಮತ್ತೇಕೆ ಮೇಲು ಕೀಳೆಂಬ ಭಾವನೆ ತಾಳುವಿರಿ ?

ಬಿಜ್ಜಳ : ಬಸವೇಶ್ವರರೇ ನಾನೀಗ ದೇಶ ಕಾಲ ಪರಿಸ್ಥಿತಿಗನುಸರಿಸಿ ನಡೆಯುವದು ನನ್ನ ಕರ್ತವ್ಯ. ಸಮಾಜದಲ್ಲಿ ಪ್ರಕ್ಷುಬ್ಧ ವಾತಾವರಣ ಉದ್ಭವಿಸುವಂಥ ಕಾರ್ಯವೆಸಗಿದ ಈ ಅಪರಾಧಿಗಳಿಗೆ ತಕ್ಕ ದಂಡನೆಯಾಗಲೇಬೇಕು.

ಬಸವೇಶ್ವರ : ಬೇಡಿ ಬೇಡಿ ಹಾಗೆ ಮಾಡಬೇಡಿ ಪ್ರಭುಗಳೇ. ದಂಡನೆಗೆ ಗುರಿಪಡಿಸುವಂಥ ಅಪರಾಧವನ್ನೇನು ಅವರು ಮಾಡಿರುವದಿಲ್ಲ ಪ್ರಭೋ.

ಬಿಜ್ಜಳ : ಏನು ಹೇಳುವಿರಿ ಬಸವೇಶ್ವರರೇ, ಇನ್ನು ನಾನೊಂದು ಮಾತು ತಮಗೆ ಬಿನ್ನವಿಸುವೆ. ಸಮಾಜದಲ್ಲಿ ಅಶಾಂತಿಯನ್ನು ಹುಟ್ಟಿಸುವದು ಬೇಡ. ಈಗಾದ ತಪ್ಪನ್ನು ಇವರು ಒಪ್ಪಿಕೊಂಡು ವಿವಾಹವನ್ನು ರದ್ದುಗೊಳಿಸಲಿ. ಅಂದರೆ ಒಂದು ಸಮಯ ಇವರನ್ನು ಕ್ಷಮಿಸಬಹುದು. ಹೂಂ ಮಧುವರಸ ಹರಳಯ್ಯಗಳೇ ನಿಮಗೆ ಜೀವದಾನ ಬೇಕಾಗಿದ್ದ ಮಾತ್ರದಲ್ಲಿ ನಾನೀಗೊರೆದಂತೆ ಒಪ್ಪಿಕೊಂಡು ಕ್ಷಮೆ ಕೋರಬೇಕು, ಕಂಡಿರಾ.

ಹರಳಯ್ಯ ಮಧುವರಸ : ಮಹಾರಾಜರೇ ನಾವು ತಪ್ಪು ಮಾಡಿದ್ದರಲ್ಲವೆ ಕ್ಷಮೆ ಕೋರುವದು?

ಬಿಜ್ಜಳ : ಸರಿ, ಸರಿ ನಿಮ್ಮಿಂದ ತಪ್ಪಾಗಿಲ್ಲವಲ್ಲವೆ? ಅಧಮಾಧಮರೆ ನೀವೀಗ ನಿರ್ದಾಕ್ಷಿಣ್ಯವಾಗಿ ಯಾರ ಮುಂದೆ ನುಡಿಯುತ್ತಿರುವಿರಿ ಲಕ್ಷ್ಯದಲ್ಲಿಡಿ. ನೀವೀಗ ನಿಂತುಕೊಂಡಿರುವದು ಬಿಜ್ಜಳನ ಮುಂದೆಯಲ್ಲ ಚಾಲುಕ್ಯ ರಾಜ್ಯದ ಸಾಮ್ರಾಟನೆದುರಿಗೆ. ನಾನೀಗ ಹೇಳಿದಂತೆ ಕ್ಷಮೆಬೇಡಲೊಪ್ಪುವದಿಲ್ಲವೆ !

ಹರಳಯ್ಯ ಮಧುವರಸ : ಇಲ್ಲ ಪ್ರಭುಗಳೇ ನಿಜವಾಗಿಯೂ ಒಪ್ಪುವದಿಲ್ಲ.

ಬಿಜ್ಜಳ : ಹೂಂ ನಿವೇಕೆ ಒಪ್ಪೀರಿ! ನರಾಧಮರೇ ಅಕ್ಷಮ್ಯ ಅಪರಾಧವೆಸಗಿದ ನಿಮ್ಮಂಥ ಪಾಪಿಗಳಿಗೆ ದೇಹಾಂತ ಶಿಕ್ಷೆಯೇ ತಕ್ಕುದಾಗಿದೆ.

ಬಸವೇಶ್ವರ : ಕೇಳೆನು ಕೇಳೆನು ಹಾಯ್ ಹಾಯ್ ಶಿವದ್ರೋಹವಾಗುವಂಥ

ಕರ್ಣಕಠೋರವಾದ ಈ ಸಿಡಿಲ್ದನಿಯ ಶಬ್ದಗಳನ್ನು ಕೇಳೆನು.

ಬಿಜ್ಜಳ : ಬಸವೇಶ್ವರರೇ ನಿಮಗೇಕಿಷ್ಟೊಂದು ಅನುತಾಪ !

ಬಸವೇಶ್ವರ : ಶರಣರ ಹಿಂಸೆಯಾಗುವಂಥ ಈ ನುಡಿಗಳನ್ನು ಎಂತು ಸಹಿಸಲಿ ಪ್ರಭುಗಳೇ. ಈ ತೆರ ಆಡಳಿತ ನಡೆದುದಾದರೆ ನನಗೇನು ಈ ಮಂತ್ರಿ ಪದಬೇಡ. (ಎಂದು ಸಿಂಹಾಸನದಿಂದೆದ್ದು ಕಿರೀಟವ ನೀಡುವದು).

ಬಿಜ್ಜಳ : ದಣ್ಣಾಯಕರೇ ಬೇಡಿ ಬೇಡಿ. ಮಂತ್ರಿ ಪದ ತೊರೆಯಬೇಡಿ. ತೊರೆದು ನನ್ನ ರಾಜ್ಯವನ್ನು, ಪೈಶಾಚಿಕ ರಾಜ್ಯವನ್ನಾಗಿ ಮಾಡಬೇಡಿ.

ಬಸವೇಶ್ವರ : ಮಹಾರಾಜರೆ ಪೈಶಾಚಿಕ ರಾಜ್ಯವನ್ನು ನಾನು ಮಾಡುತ್ತಿರುವದಿಲ್ಲ.

ಬಿಜ್ಜಳ : ಅಂದರೆ ನಾನೇ ಮಾಡುತ್ತಿರುವೆನೆ ?

ಬಸವೇಶ್ವರ : ಪ್ರಭೋ ತಾವೇ ವಿಚಾರಿಸಿ ನೋಡಿ.

ಬಿಜ್ಜಳ : ಬಸವೇಶ್ವರರೇ ಈಗ್ಗೆ ನಾನಿರುವದು ನ್ಯಾಯಾಸನದ ಮೇಲೆ. ನ್ಯಾಯನಿರ್ಣಯ ಗೈದು, ಆಪಾದಿತರನ್ನು ಶಿಕ್ಷಿಸುವದೇ ನನ್ನ ಕರ್ತವ್ಯ.

ಬಸವೇಶ್ವರ : ಪ್ರಭೋ ಸಮುದ್ರದ ನೀರೇ ಬಿಸಿಯಾದರೆ, ಬೆಂಕಿಗೆ ನೀರೆಲ್ಲಿಂದ ತರುವದು ಸಾಧ್ಯ ! ತಾವು ಏನೂ ಮಾಡಲು ಸಮರ್ಥರು. ತಮ್ಮನ್ನು ತಡೆಯುವರಾರು? ನಾನು ಅನ್ಯಾಯವಾಗಿ ಶರಣರ ಕೊಲೆಯಾಗುವದನ್ನು ಮಾತ್ರ ಸಹಿಸಲಾರೆ. ಇಂಥ ಆಡಳಿತದಲ್ಲಿ ನಾನು ಮಂತ್ರಿಪದದಲ್ಲಿದ್ದು, ನಾನೂ ದೋಷಕ್ಕೆ ಗುರಿಯಾಗಲೇ ಪ್ರಭೋ. ಸಾಕು ಸಾಕು ಇನ್ನು ಈ ಮಂತ್ರಿ ಪದ. ಇನ್ನು ನನ್ನ ತಡೆಯಬೇಡಿ ಪ್ರಭೋ.

ಬಿಜ್ಜಳ : ದಣ್ಣಾಯಕರೇ ಬಸವೇಶ್ವರರೇ ಹೋಗಬೇಡಿ ಹೋಗಬೇಡಿ. ಬಸವೇಶ್ವರರೆ, ಬಸವೇಶ್ವರರೇ. (ಬಸವೇಶ್ವರರು ಹೋಗಿ ಬಿಡುವದು).

ಮಂಚಣ್ಣ : ಮಹಾರಾಜರೇ ಇನ್ನು ಅನುಮಾನವೇಕೆ ? ಈ ಅಪರಾಧಿಗಳಿಗೆ ತೀರ್ಪು ಹೇಳಿಯೇ ಬಿಡಿ.

ಬಿಜ್ಜಳ :– ಹೂಂ ಆಗಲಿ, ಸಮಾಜದಲ್ಲಿ ಅಲ್ಲೋಲ್ಲ ಕಲ್ಲೋಲ್ಲವಾಗುವಂತೆ ಕೃತಿಗೈದ, ಈ ಅಕ್ಷಮ್ಯ ಅಪರಾಧಿಗಳಿಗೆ ದೇಹಾಂತ ಶಿಕ್ಷೆ ವಿಧಿಸಿರುವೆ. ಇವರೀರ್ವರ ಕಣ್ಣು ಕೀಳಿಸಿ ಶೂಲಕ್ಕೇರಿಸಿ ಬಿಡಿ

(ಅರಣ್ಯ ರಸ್ತಾ ತೆರೆಯು ಬೀಳುವದು).

===***===***===

(ಪ್ರವೇಶ ೪)

(ಸ್ಥಳ : ಅರಣ್ಯ ಬೀದಿ. ಹೋಗುತ್ತಿರುವ ಬಸವೇಶ್ವರರನ್ನು ಯುವರಾಜ ಬಿಜ್ಜಳನು ಚನ್ನಬಸವೇಶ್ವರರು ಕರೆದು ತಡೆಯುವದು).

ಯುವರಾಜ ಬಿಜ್ಜಳ, ಚೆನ್ನಬಸವೇಶ್ವರ : ಪೂಜ್ಯರೇ ಪೂಜ್ಯರೇ !

ಬಸವೇಶ್ವರ :– (ಹೋಗುತ್ತಿದ್ದವನು ಹಿಂತಿರುಗಿ) ಯಾರು ಚನ್ನಬಸವಣ್ಣ, ಅದೋ ಯುವರಾಜ ಬಿಜ್ಜಳ ಕೂಡ ! ಇದೇನು ? ಕಾಡು ಮೇಡುಗಳಲ್ಲಲೆಯುತ್ತಾ ಇವರೇಕೆ ಇತ್ತ ಕಡೆ ಬರುತ್ತಿರಬಹುದು? ಕಲ್ಯಾಣ ಪುರವನ್ನು ತ್ಯಜಿಸಿ ನಾನು ಬಂದುದಕ್ಕೆ ಅಲ್ಲೇನಾದರೂ ಪ್ರಕ್ಷುಬ್ಧ ವಾತಾವರಣ ಉದ್ಭವಿಸಿಗಿವಿಸಿತೋ ಯಾರಿಗೆ ಗೊತ್ತು ! (ಇಷ್ಟರಲ್ಲಿ ಅವರಿಬ್ಬರು ಬರುವದು).

ಚನ್ನಬಸವೇಶ : ಹಿರಿಯರ ಚರಣ ಸರೋಜಕ್ಕೆ ವಂದನೆಗಳು.

ಯುವರಾಜ ಬಿಜ್ಜಳ : ಪೂಜ್ಯರೆ ತಬ್ಬಲಿಯಾದ ಈ ಯುವರಾಜ ಬಿಜ್ಜಳನ ಅನಂತ ದೀರ್ಘದಂಡ ಪ್ರಣಾಮಗಳು.

ಬಸವೇಶ್ವರ : ತಬ್ಬಲಿ! ಯುವರಾಜ ? ತಬ್ಬಲಿಯೆಂದೇಕೆ ನುಡಿಯುವಿರಿ ?ಸಕಲ ಸಂಪತ್ತಿನಿಂದಾವರಿಸಲ್ಪಟ್ಟ ನೀವು ತಬ್ಬಲಿಗಳೇ ?

ಯುವರಾಜ : ಮಹಾತ್ಮರೇ ನಿಜಕ್ಕೂ ನಾನು ತಬ್ಬಲಿ. ಅಹರ್ನಿಶಿಯಲ್ಲಿಯೂ ನನ್ನ ಲಾಲನೆ ಪಾಲನೆಯಲ್ಲಿ ಕಾಲಹರಣ ಮಾಡಿದ ಆ ಪ್ರೇಮದ ಮುದ್ದೆಯಾದ, ತಂದೆಯನ್ನೆ ಕಳೆದುಕೊಂಡ ಮೇಲೆ ಪೂಜ್ಯರೆ, ನಾನು ತಬ್ಬಲಿಯಲ್ಲದೇ ಮತ್ತೇನು ?

ಬಸವೇಶ್ವರ : (ಗಾಬರಿಯಾಗಿ) ತಂದೆಯನ್ನು ಕಳೆದುಕೊಂಡಿರಾ ! ಅಂದರೆ ?

ಚನ್ನಬಸವೇಶ : ಪೂಜ್ಯರೇ ನೀವು ಕಲ್ಯಾಣ ಪುರವಂ ತ್ಯಜಿಸಿ ಬಂದ ಮೇಲೆ, ಕಲ್ಯಾಣದಲ್ಲಿ ಕ್ರಾಂತಿಯಾಯಿತು.

ಬಸವೇಶ್ವರ : ಕ್ರಾಂತಿಯಾಗೇ ತೀರಿತೇ ?

ಚನ್ನಬಸವೇಶ : ಅಹುದು ಪೂಜ್ಯರೇ ಆ ಕ್ರಾಂತಿಯ ಫಲವಾಗಿ, ಜಗದೇವ ಮಲ್ಲಿಬೊಮ್ಮರಿಂದ ಸಾಮ್ರಾಟ ಬಿಜ್ಜಳ ಭೂಪನ ಕೊಲೆಯಾಯಿತು.

ಬಸವೇಶ : ಹಾಯ್‌ಹಾಯ್ ಕೇಳೆ ಕೇಳೆನು. ಪರಮಾತ್ಮಾ ಪ್ರಜೆಗಳನ್ನು ಪುತ್ರವತ್ಸರಿ ಪಾಲಿಸಿದ, ದೀನ ದರಿದ್ರರಿಗೆ ಕಲ್ಪತರುವಿನಂತಿದ್ದ, ಔದರ್ಯದಲ್ಲಿ ಕರ್ಣನನ್ನೇ ಹೋಲುತ್ತಿದ್ದ, ಆ ನನ್ನ ಪಂಚಪ್ರಾಣನಾದ ಬಿಜ್ಜಳ ಮಹಾರಾಜರಿಗೆ ಇಂಥ ದುರವಸ್ಥೆಯ ! ಅಯ್ಯೋ ಆ ಮಹಾರಾಜನು ನನ್ನ ಮೇಲೆ ತೋರಿಸುತ್ತಿದ್ದ ಪ್ರೇಮವದೆಷ್ಟು ! ಆ ಪ್ರೇಮದುರಿಯೇ ನನ್ನಂ ದಹಿಸಹತ್ತಿದ್ದರುಂಟಾದ ಈ ನನ್ನ ತಾಪವನ್ನು ಎಂತು ಸಹಿಸಲಿ!

ಪದ : ರಾಗ : ಬೈರವಿ. ತಾಳ: ಕವಾಲಿ.

ನಿನ್ನಯ ಮರಣಕೆ ನಾ ಹೊಣೆಯಾದೆ ।
ಚನ್ನಿಗ ಮಂಗಲ ಪುರವನು ತೊರೆದೆ ॥ ಪಲ್ಲ ॥

ದೇಹಕಂಟಿತು ಆ ದುಃಖದ ಬೇಗೆ ।
ಸಹಿಸೆನು ತಾಪಾ ತಡೆವುದು ಹೇಗೆ ।
ಮೋಹ ಮಮತೆಯನು ಅಳಿದಿಯೋ ಈಗೆ ॥ ೧ ॥

ಮರೆಯಲೆಂತಕಟಾ ಸದ್ಗುಣ ಭರಿತಾ ।
ಪರಮ ಉದಾರಿ ನರಪತಿ ಖ್ಯಾತಾ ।
ಕರುಣದಿ ಪೊರೆದಿಯೋ ಪ್ರಜೆಗಳ ನಿರತಾ ॥ ೨ ॥

ನಿನ್ನಯ ಮರಣಕೆ ನಾ ಹೊಣೆಯಾದೆ ।
ಚೆನ್ನಿಗಮಂಗಲ ಪರವನು ತೊರೆದೆ ॥ ಪಲ್ಲ ॥

ದೇಹಕಂಟಿತು ಆ ದುಃಖದ ಬೇಗೆ ।
ಸಹಿಸೆನು ತಾಪಾ ತಡೆವುದು ಹೇಗೆ ।
ಮೋಹ ಮಮತೆಯನು ಅಳಿದಿಯೋ ಈಗೆ ॥ ೧ ॥

ಮರೆಯಂತಿಂತಕಟಾ ಸದ್ಗುಣ ಭರಿತಾ ।
ಪರಮ ಉದಾರಿ ನರಪತಿಖ್ಯಾತಾ ।
ಕರುಣದಿ ಪೊರೆದಿಯೊ ಪ್ರಜೆಗಳ ನಿರತಾ ॥ ೨ ॥

ದೀನ ದಯಾಳುವಾದ ಬಿಜ್ಜಳ ಭೂಪನೇ? ನಿನ್ನ ಮರಣಕ್ಕೆ ನಾನೇ ಕಾರಣನಾದೆನಲ್ಲವೆ?

ಯು. ಬಿಜ್ಜಳ: ಇಲ್ಲ ಮಹಾತ್ಮರೇ ತಂದೆಯ ಮರಣಕ್ಕೆ ನೀವು ಕಾರಣರಲ್ಲ. ಮಂಚಣ್ಣಾದಿ ಮಂತ್ರಿಗಳ ಕೊಂಡೆಯನುಡಿಗಳೇ ಆತನ ಮರಣಕ್ಕೆ ಕಾರಣ. ಪೂಜ್ಯರೆ ಅದಕ್ಕಾಗಿ ವ್ರಥಾ ನೀವೇಕೆ ತಾಪ ಪಡುವಿರಿ !

ಬಸವೇಶ್ವರ : ನನ್ನ ಚಿಕ್ಕ ದೊರೆಯೇ, ನನ್ನ ತಪ್ಪಿಗಾಗಿ ನಾನು ತಪಿಸುತ್ತಿರುವೆ.

ಯು. ಬಿಜ್ಜಳ : ಪೂಜ್ಯರೇ ಆ ತಪ್ಪು ನಿಮ್ಮದಲ್ಲ. ಅದು ಅಪ್ಪನದೇ.

ಬಸವೇಶ್ವರ : ಅಲ್ಲಲ್ಲ ನನ್ನ ಚಿಕ್ಕ ದೊರೆಯೇ ನಿಜವಾಗಿ ಆ ತಪ್ಪು ನನ್ನದು. ನಾನು ಕಲ್ಯಾಣ ಪುರವಂ ತ್ಯಜಿಸದಿದ್ದಿದ್ದರೆ, ಕಲ್ಯಾಣದಲ್ಲಿ ಕ್ರಾಂತಿಯಾಗುತ್ತಿರಲಿಲ್ಲ. ನನ್ನ ದೊರೆಯೇ, ದಯಾಳು ಭೂಪತಿ? ನನ್ನ ಮೇಲೆ ಅಪಾರ ಪ್ರೇಮ ತೋರಿದ, ನಿನ್ನಂ ಹೇಗೆ ಮರೆಯಲಿ !

ಯು. ಬಿಜ್ಜಳ: ಪೂಜ್ಯರೇ ನೀವೆಂದಂತೆ, ನಿಮ್ಮ ಮೇಲೆ ಅಪ್ಪನ ಪ್ರೇಮ ಬಹಳ. ಅಪ್ಪನು ಜೀವ ಬಿಡುವಾಗ್ಗೆ, ದಣ್ಣಾಯಕರೇ ಬಸವೇಶ್ವರರೇ, ನಿಮ್ಮಂ ಅಂತರಿಸಿಕೊಂಡು ನಾನು ಕಲ್ಯಾಣಮಂ ಪಾಳ್ಗೈದೆ. ಮತ್ತಂ ಈ ದುರ್ಮರಣಮಂ ತಂದುಕೊಂಡೆನೆಂದು ಉಸುರ್ಗರೆದು ಪ್ರಾಣ ತೊರೆದನಯ್ಯಾ ಪೂಜ್ಯರೇ....

ಬಸವೇಶ್ವರ: ಹಾಯ್ ಹಾಯ್ ಯುವರಾಜರೇ ಈ ನಿಮ್ಮ ನುಡಿಗಳು ಬೆಂಗಿಡಿಗಳಾಗಿ ನನ್ನ ಒಡಲದುರಿಯನ್ನು ಪ್ರಜ್ವಲಿಸಿದವು. ನನಗಾಗುಪೀ ಅನುತಾಪವನೆಂತು ಸಹಿಸಲಿ ! ಕರುಣಾಳುವೇ, ಬಿಜ್ಜಳ ಮಹಾಪ್ರಭುವೇ, ನಿನ್ನ ಅವಸಾನಕಾಲದಲ್ಲಿಯೂ ಕೂಡ, ನನ್ನಂ ಕರೆದೆಯೊ, ಮುಂದ ಪೊರದೆಯೋ ಹೇ ಪರಮಾತ್ಮಾ !

ಚೆನ್ನಬಸವೇಶ್ವರ : ಮಹಾತ್ಮರೇ ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು ? ಶೋಕಸಾಗರದಲ್ಲಾಳ್ದ ಯುವರಾಜರಂ ಸಂತೈಸಿ ಅವರಿಚ್ಛೆಯಂತೆ ಅಭಯವಚನವಂ ನೀಡಿ.

ಬಸವೇಶ್ವರ : ಚೆನ್ನಬಸವೇಶಾ ? ಯುವರಾಜನಿಗೆ ನಾನೇನು ಅಭಯ ವಚನ ನೀಡಬೇಕಾಗಿದೆ ?

ಯು . ಬಿಜ್ಜಳ : ಪೂಜ್ಯರೇ ಅದಿನ್ನು ಆಗಿ ಹೋಯಿತು. ಕೋಲಾಹಲವೆದ್ದಿರುವ ಆ ರಾಜ್ಯದಲ್ಲಿ, ಶಾಂತಿನೆಮ್ಮದಿಗಳನ್ನುಂಟು ಮಾಡಿ, ಆಢಳಿತ ನಡಿಸುವವರು ತಬ್ಬಲಿಯಾದ ನನಗೆ ತಾವೇ ಗತಿಯಲ್ಲದೆ ಮತ್ತಾರು?

ಬಸವೇಶ್ವರ: ನನ್ನ ಚಿಕ್ಕ ದೊರೆಯೇ ? ನಾನು ವಹಿಸಬೇಕೆಂದು ಬಯಿಸುವಿರಾ ?

ಯು.ಬಿಜ್ಜಳ: ಅಹುದು ಪೂಜ್ಯರೇ, ನೀವೇ ಮರಳಿ ಬಂದು ಈ ಕಿರೀಟಮಂ ಧಾರಣ ಮಾಡಿ, ಆಢಳತೆ ನಡೆಸಬೆಕೆಂದು ತಮ್ಮನ್ನೂ ಬೇಡುವೆ.

ಬಸವೇಶ್ವರ : ನನ್ನ ಚಿಕ್ಕ ದೊರೆಯೇ, ಇನ್ನೂ ನಾನು ಮರಳಿ ಬರಲಾರೆ. ರಾಜ್ಯ ದಾಢಳಿತೆಯನ್ನೂ ಸರಿಯಾಗಿ ಸಡಿಸುವ ಹಾಗೆ ಈ ಚೆನ್ನಬಸವೇಶನಿಗೆ ನಿವೇದಿಸುವೆ.

ಯು. ಬಿಜ್ಜಳ : ಮಹಾತ್ಮರೇ ತಾವು ಬರುವದಿಲ್ಲವೆ ?

ಬಸವೇಶ್ವರ: ಇಲ್ಲ ನನ್ನ ಚಿಕ್ಕ ದೊರೆಯೇ. ಇರಲಿ ನನ್ನಂ ಆಗ್ರಹಪಡಿಸಬೇಡಿ. ಶಿವದ್ರೋಹವಾಗುಂತೆ ಕೃತಿಗೈದ ಮಂಚಣ್ಣನಂಥವರ ನೆರವಿಯಲ್ಲಿ ನಾನಿರಲಾರೆ. ರಾಜ್ಯಸೂತ್ರ ಹಿಡಿದು ಆಢಳಿತೆ ನಿರ್ವಹಿಸಲು, ಈ ಚೆನ್ನ ಬಸವನಿಗೆ ಆಜ್ಞಾಪಿಸುವೆ. ನೀವು ಕಿರೀಟಧಾರಣ ಮಾಡಿ ಸಿಂಹಾಸನಾರೂಢರಾಗಿರಿ. ಚೆನ್ನಬಸವೇಶಾ, ಈ ನನ್ನ ಚಿಕ್ಕ ದೊರೆಯು ತಂದೆಯಾದ ಬಿಜ್ಜಳ ಮಹಾರಾಜರಂತೆಯೇ, ವಿಶಾಲಭಾವನೆಯುಳ್ಳವರು. ಇವರು ದೀನ ದರಿದ್ರರನ್ನೂ ಪೊರೆಯುವಂಥ ದಯಾಳುಗಳು. ಇವರು ಪ್ರೌಢ ವಯಸ್ಸಿಗೆ ಬರುವವರೆಗೆ, ನೀನು ರಾಜಸೂತ್ರ ಹಿಡಿದು ಆಢಳಿತ ಸಾಗಿಸು. ಇನ್ನೂ ನಾನು ಎಲ್ಲಿಂದ ಬಂದಿದ್ದೆನೋ ಅಲ್ಲಿಗೆ ಗಮಿಸಿ ನನ್ನ ಜೀವನ ಯಾತ್ರೆ ಮುಗಿಸುವೆ. ನನ್ನ ಚಿಕ್ಕ ದೊರೆಯೇ, ಇನ್ನೂ ತಾವು ಕಲ್ಯಾಣದತ್ತ ಮಾರ್ಗಸ್ಥರಾಗುವದಾಗಬೇಕು.

ಯು. ಬಿಜ್ಜಳ : ಪೂಜ್ಯರೇ ತಮ್ಮ ಚಿತ್ತ. ಇನ್ನು ನಾವು ಬರೋಣವೇ ?

ಬಸವೇಶ್ವರ : ಹಳಹಳಿಸಬೇಡಿ. ಆದದ್ದೂ ಆಗಿಹೋಯಿತು. ಈಗೊದಗಿದ ಗತಪ್ರಪಂಚವನ್ನೆಲ್ಲ ಮರೆತು, ಪ್ರಜಾಪಾಲನೆಯಲ್ಲಿ ನಿರತರಾಗಿ. ಹೂಂ ಚೆನ್ನಬಸವ, ಇನ್ನು ತಳುವದೆ ಯುವರಾಜರೊಡಗೂಡಿ ಕಲ್ಯಾಣದತ್ತಾಭಿಮುಖನಾಗಿ ಬಿಡು, ಕಂಡೆಯಾ ?

ಚೆನ್ನಬಸವೇಶ : ಆಗಲಿ ಪೂಜ್ಯರೇ (ಎಂದು ನಮಿಸುವನು).

ಯು. ಬಿಜ್ಜಳ : ಮಹಾಶಯರೇ ಕೃಪೆಯಿರಲಿ, ಬರುವೆವು. (ಎಂದು ಇಬ್ಬರೂ ಹೋಗುವರು).

===****====****===

(ಪ್ರವೇಶ ೫)

(ಸ್ಥಳ : ಕಪ್ಪಡಿ ಸಂಗಮನಾಥನ ದೇವಾಲಯ. ಬಸವೇಶ್ವರ ಪ್ರವೇಶ).

ವಚನ ॥ ರಾಗ, ಭೈರವಿ ತ್ರಿತಾಳ.

ನರಕೂರಂಬಿನಲೆಚ್ಚಅವಂಗೊಲಿದೆಯಯ್ಯಾ ।
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ ॥ ಪಲ್ಲ ॥
ಹಗಲಿರುಳೆನ್ನದೆ ಪ್ರಾಣ ಘಾತಕವ ಮಾಡಿದ ।
ಬೇಡನ ಕೈಲಾಸಕೊಯ್ದೆಯಯ್ಯಾ ।
ಎನ್ನನೇತಕೊಲ್ಲೆ ಕೂಡಲಸಂಗಮದೇವಾ ॥ ೧ ॥

ಪರಮಾತ್ಮಾ ದಯೆದೋರು, ಈ ಭವದ ಬೇಗೆಯಂ ಸಹಿಸೆ. ಭಕ್ತ ಬಂಧುವೇ, ಕರುಣಾಭಾವದಿಂ ನಿನ್ನೊಡಲೋಳ್ ಎನ್ನನಪ್ಪಿಕೋ ದೇವಾ ? ಇನ್ನು ಈ ಜಗದ ಜಂಜಡ ಸಾಕು.

ಪದ. ರಾಗ : ತೋಡಿ, ತಾಳ: ಕೇರವಾ

ಕರುಣಿ ಸಾಕಿದು ಜೀವನಯಾತ್ರಾ
ಚರಣಗಳಿಗಾನು ತಿತ್ರತ್ರಿನೇತ್ರಾ
ಉಡುಪತಿಧಾರಾ ಮೃಢ ಅಹಿಹಾರಾ ।
ಗಡಸ್ವೀಕರಿಸೈ ಕೂಡುವೆ ನಿನ್ನೊಳು ನಾ ॥ ೧ ॥

(ಇಲ್ಲಿ ಲಿಂಗದ ಹಿಂದೆ ಪರಮಾತ್ಮನು ಮೈದೋರಿ ಬಸವೇಶ್ವರನನ್ನು ಅಪ್ಪಿಕೊಳುವದು).

ರಾಗ, ಕಾಲಿಂಗಡಾ ತಾಳ, ತ್ರಿತಾಳ.

ಪುರ ಅಥಣಿಯಶಿವಯೋಗಿ ಗುರುವರಾ ।
ಚಾರುಭಜಕರಾ ನಿಜ ಸೌಖ್ಯಕರಾ ।
ಭೂರಿ ಮಂಗಲವ ಗೆಯ್ಯೆ ಶುಭಕರಾ

ತ್ಯಾಗಿ ಸತ್ಯವನು ಶೋಧಿಸಿ ವಿಜಯಾ ।
ಜಗದಿ ಪೊಂದಿದಿ ಪ್ರಭೆಯ ನಿಚಯಾ ।
ಅಘವಿದೂರ ಮೊರೆ ನೀಡುತಾಭಯ ।
॥ ಶುಭಂ ॥

===***====***===

ಸಿದ್ಧರಾಮೇಶ್ವರ

ಶ್ರೀಗುರು ಪ್ರಸನ್ನ

ಪ್ರಥಮಾಂಕ

ಶ್ರೀನೃಪ ಶಾಲಿವಾಹನಶಕ ೧೮೪೬ ರಕ್ತಾಕ್ಷಿನಾಮ ಸಂವತ್ಸರೆ ಸೋಮವಾರ ದಿವಸ ಶ್ರೀ ಸಿದ್ಧರಾಮೇಶ್ವರ ನಾಟಕ ಕಥಾ ಬರೆಯುವದಕ್ಕೆ ರಟ್ಟಕಲ್ಲು ಮಠಪತಿ ಬಸವಯ್ಯನವರ ಮಗ ರುದ್ರಯ್ಯನು ಸ್ವತಃ ದಸ್ತುರದಿಂದ ಬರೆಯುವುದಕ್ಕೆ ಶುಭಮಸ್ತು ಆಯುರಾರೋಗ್ಯ ಮಸ್ತು

ಸಾಮಾಜಿಕರ ಪದ

(ಪರಮಾತ್ಮನ ಸಭಾ)

ಶಿವಹರ ಕರುಣಾಕರ । ಸುಮತಿ ವರದಕರಾ
ಭವಭಾರಿ ಹರಾ । ಗೌರಿ ಹೃದ್ವಾರಿಜ ಭಾಸ್ಕರಾ
ತ್ರಿಶೂಲ ಢಮರುಧರಾ । ಹರಿಣಾಕ್ಷ ಪುರಹರಾ ಸ್ಮರಹರಾ
ಅಂಧಕಾಸುರ ಹರಾ । ಹರಕರುಣಾಕರ ಸುಮತೇ ॥ ೧ ॥

ಅಹಿಮಾಲಾ ಗಣಲೋಲಾ । ಯಮಪಾಲಾ ಹತಕಾಲಾ ।
ಶಿರ ಕಲಾಲ ದಯಾಲಯಾಲಯ
ಸಾಂಶೀಲಲೋಲಾ । ಸುವಿಶಾಲ ಸುಖಕರಾ ॥ ೨ ॥

ಶಂಕರ ಕಿಂಕರ ರಂಕಾರ ಹ್ರೀಂಕಾರ ಬಿಂಕಾರ
ಹಂಕೂರ ವೆಶಮನಾ ಮದದಮನಾ ಪದ ನಮಿನಾಸದಯಮುನಾ
ಮದದ ಮನಾಪದನ ಮಿನಾಸದಯಾ ಸುಮನಾ ನುರುತರ ಹರಾ॥ ೩ ॥

ಭೋದಯಾ ಸಾಗರನೆ ತಮ್ಮ ಪಾದಕ್ಕೆ ಬಿನ್ನಪಂ ಗೈಯುತ್ತೇವೆ. ಆಶೀರ್ವಾದ ಮಾಡಿ.

ಈಶ್ವರ ಪದ

ಅಮರ ಗಣ ಗುಣ ಶೌರಿ । ಸುಖವಿದಾರಿ ಸೋಮನ ಸಂವದನಾ ॥ ಪ ॥
ಸಹಜ ಪಾಲಕರಾ । ಸಹಜ ಲೋಲಕರಾ

ಸಹಜ ಭವಹರಾ । ಸಹಜ ಶಿರಹರಾ ।
ವಿಮಲ ಲೋಚನಾ । ಧರ ಹಸಿತ ಮುಖ ॥ ೧ ॥

ಭೋಪ್ರಮಥಗಣವರ್ಯರೆ ತಮ್ಮ ತಮ್ಮಗಳ ತಪೋವ್ರತದಲ್ಲಿ ಚೆನ್ನಾಗಿ ಆಚರಿಸಿ ಜಗತ್ತಿನಲ್ಲಿ ವರ್ತಿಸುತ್ತ ಪಶು ಪಕ್ಷಿ ಕ್ರಿಮಿ ಕೀಟಕಾದಿಗಳಿಗೆ ಆಶೀರ್ವಾದವನ್ನು ಮೇಲೆ ಮೇಲೆ ಗೈಯುತ್ತಿರುವೆವು. ಇದನ್ನು ನಿಶ್ಚಯಗೊಳಿಸುವೆವು ಹೇಳಿರಿ.

ಪ್ರಮಥರು : ಭೋಪರಾ ಜಗದೋದ್ಧಾರಾ ನಮ್ಮ ತಪೋ ಸುಕೃತದಿಂದೆ ಮತ್ತು ತಪದ ಅನುಗ್ರಹದಿಂಚೆ ಸೂರ್ಯ ಚಂದ್ರರಿಗೆ ತಾಳಿನಂದದಿ ಬಾರಿಸಿ ಮನಕೋಣೆನೆ ಕೋಡುಗಳ ಕಿತ್ತಿ ಬಿಸುಟುವೆವು. ವಿಶ್ವವ್ಯಾಪಕಾ ಸಕಲ ಪರ್ವತಗಳನ್ನು ಚೂರ್ಣ ಮಾಡಿ, ಸಪ್ತಸಮುದ್ರಗಳನ್ನು ಸ್ವೀಕರಿಸಿ, ನಕ್ಷತ್ರ ಮಾಲಿಕೆಯನ್ನು ಧರಿಸಿ, ಪಾತಾಳಲೋಕದ ಮಹಾಶೇಷನನ್ನು ಪುಷ್ಪ ಮಾಲಿಕೆಯನ್ನು ಶಿರಸ್ಸಿನಲ್ಲಿ ಧರಿಸತಕ್ಕ ಸಾಮರ್ಥ್ಯವು ತಮ್ಮ ಚರಣ ಸ್ತವನ ಸಾಧ್ಯದಿಂದೆ ಈ ಸಾಧುಗಳಿಗೆ ಒದಗಿರುತ್ತದೆ. ಅರ್ಥಾತ್ ಜಗತ್ತಿನಲ್ಲಿ ಇರತಕ್ಕ ಪಶು ಪಕ್ಷಿ, ಕ್ರಿಮಿ ಕೀಟಕಾದಿ ಮಾನವ ಮೊದಲಾದ ಪ್ರಾಣಿಗಳಿಗೆ ಯಾವತ್ಕಾಲದಲ್ಲಿ ಈಶ್ವರನು ಯಾವತ್ತೂ ಸೌಖ್ಯದಿಂದ ಇಡಲು ಇಚ್ಛೇ ಇರುವನು. ನಮ್ಮ ಕರ್ತವ್ಯವಾದರೂ ಏನು ? ಪರಂತು ನಿಮಗಾದರೂ ಇದೆ ಚಿಂತೆ ಇರುತ್ತದೆ.

ಈಶ್ವರ :– ಒಳ್ಳೆಯದು ಪ್ರಮಥರೆ ನೀವು ಸುಖಿವಾಗಿ ಇರ್ರಿ; ಮತ್ತು ಇವತ್ತಿನ ದಿವಸದಲ್ಲಿ ಭೃಂಗಿಯು ನಾಟ್ಯಕ್ಕೆ ಆಲಸ್ಯ ಮಾಡಿದನು. ಕಾರಣವೇನು ? ಬೇಗನೆ ಕರಿಸಿರಿ.

ಪ್ರಮಥರು :– ತಮ್ಮ ಅಪ್ಪಣೆ

ಭೃಂಗಿ : (ನಾಟ್ಯ ಮಾಡುತ್ತ)

ಪದ

ದೇವಾ ನಿಮ್ಮಯ ಸ್ತುತಿಯನ್ನು । ನೀ ಕೇಳುವುದಿನ್ನು
ಈಶ್ವರ ಶಂಕರ । ಸರ್ವಗುಣಶ್ಚರಿತ
ಅಪೂರ್ವ ಭವ ಶರ್ವ । ಅಪಾರ ಪ್ರೇಮದಿ
ಪೇಳುವೆ ನಾನು । ನೀ ಕೇಳುವುದಿನ್ನು ॥ ೧ ॥

ನಾಟ್ಯವಗೈಯ್ಯುವೆ । ಹಾಸ್ಯವ ಮಾಡುವೆ
ದೋಷ ವಿನಾಶನ । ಈಶ ಶ್ರೀಗುರುವಿನಾ
ದಾಸನಾಗಿರುವೆನು । ನೀ ಕೇಳುವುದಿನ್ನು ॥ ೨ ॥

ಈಶ್ವರನೆ ವಂದನೆಗೈಯುತ್ತೇನೆ.

ಈಶ್ವರ : ನಾಟ್ಯವನ್ನು ಆರಂಭಗೊಳಿಸು.

ಭೃಂಗಿ : (ಮಹದಾಜ್ಞಾಯೆಂದು ಕುಣಿಯುತ್ತ)

ಪದ

ಪಾಲಿಸೆನ್ನನು
ಅಖಿಲ ಕೌತಸಿ ಲೋಚಯಾಧಾಮ
ನಮಿತ ನಿಜ ಪ್ರೇಮನಿ । ಅಖಿಲ ಭಕ್ತಭವ ನಿಮ್ಮ
ಅಖಿಲವನಬುಧ ನುತನಾಮ ॥ ೧ ॥

ಪೊಗಿಸು ನಿಖಿಳ ಸ್ತುತಿ । ನತಚರಿತ ವೃಷಪತ
ಸ್ತುತಿ ಗತಿ ಹಿತ । ಯಮಗೆ ಜನ ಪ್ರೇಮಾದಿತ
ಪ್ರಮುದಿತ । ಶಂಕರಾ ॥ ೨ ॥

ಭೋ ಉಮಾಪತೆ ಮತ್ತೇನಾಗ್ನಾ

೧ನೇ ಗಂಧರ್ವ : ಓಹೊ ಭೃಂಗೀಶ್ವರನ ನಾಂಟ್ಯ ವಿನೋದವನ್ನು ನೋಡಿದಿಯಾ. ಹ್ಯಾಗಿರುವುದು ?

೨ನೇಗಂಧರ್ವ : ಓಹೋ ಅದ್ರಿ ಸಿರ ಗಂಧರ್ವನೆ ನಾಂಟ್ಯ ನೋಡಿ ನನಗೆ ಚಿತ್ತಾನಂದವಾಗಲು (ಅಂಗ ನೋಡಿ) ನೋಡಿದೆಯಾ ಭೃಂಗಿಯಾ ದಂತಗಳು ಹ್ಯಾಗೆ ಪಸರಿಸಿರುವವು ನೋಡಿರಿ.

೩ನೇ ಗಂಧರ್ವ : ಪಾದ ಕರ ಚರಣಗಳು ಮುರಿದವೆಂಬುವಂತೆ ಸದವಾಗಿ ತೋರುವಾ.

೪ನೇ ಗಂಧರ್ವ : ಎಲ್ಲೈ ಸಮಾಜಿಕರೆ ಅಲ್ಲಿ ನೋಡಿರಿ. ಈತನಿಗೆ ಸೃಷ್ಟಿಸಿದ ಪಿತನು ಯಾರು ಆಗಿರಬಹುದು ? ಅಸಾಧ್ಯ ಅವಲಕ್ಷಣ ಅರಸಿಕನಂತೆ ಮಾಡುವಾ. ದೇವಾ ಇಂಥ ವಿಪರೀತಕ್ಕೆ ಯಾರು ನಗಲಾರರು ?

ಭೃಂಗಿ : **ಪದ**

ನೀಂ ದೂರ ದೂರ ದೂರ ದೂರ । ಸುಮನಸಾ ಮಮ
ಕೃತಿಯನ್ನು । ಅರಿಯದಲ್ಲೆ । ಕುಮನಸಾ
ಅದ್ರಿ ಐಶ್ವರ್ಯ ಸಿರಿ ಗಂಧರ್ವ ನಿವ ಕ್ಷುದ್ರ ಕಾರ್ಯ ಮಾಡುವನೀಗೆ ॥ ೧ ॥

ಯತಿ ಗಂಧರ್ವರೆ ನಮ್ಮ ಭಗವತ್ ಚರಣ ಸೇವೆಯಲ್ಲಿ ತತ್ಪರಿಸಿದಾಗ್ಯೆಯೂ ನನ್ನ ಕಂಡು ನೀವು ಧಿಕ್ಕರಿಸಿದ್ದರಿಂದೆ ನಿಮಗೆ ಅಜ್ಞಾನ ರೂಪವಾದ ನರಜನ್ಮವಾಗಲಿ ಎಂದು, ಇದೊ ಶಾಪಿಸುತ್ತೇನೆ ಗ್ರಹಿಸತಕ್ಕದ್ದು (ಎಂದು ಶಾಪಿಸಬೇಕು).

೧ನೇ ಗಂಧರ್ವ : **ಪದ**

ಛೀ ನಡಿ ನಡಿಯೊ । ನೀ ಕ್ರೂರ ಅಧಮಾ
ಶಾಪವ ಕೊಡುವಿಯಾ । ವ್ಯರ್ಥ ಕೊಟ್ಟಿ ಅಧಮಾ
ಕಾಗಿ ಶಾಪವ ಕೊಡಲು । ಕೋಗಿಲಕೆ ಬಾಧವೆ
ಗೂಗಿ ಶಾಪವ ಕೊಡಲು । ರವಿಯು ಅಂಜುವನೇ ।

ಭೃಂಗಿ : **ಪದ**

ಛೀ ಸರಿ ಸರಿ ಈಗ ಪಾಪಿ ಅಧಮಾ
ಛಲವೆ ಈ ಭೃಂಗಿಗೆ ಕೊಟ್ಟಿ ಪರಮಾ
ಮೂರು ಲೋಕದಿ ನಿಮಗೆ ಸಾರಥಿಯುವಾದರೇ
ಧೀರ ಬಸವಲಿಂಗ ನೋಡುವಾ ನಿಮ್ಮ ॥ ೧ ॥

೨ನೇ ಗಂಧರ್ವ : ಬಿಡು ಬಿಡು ನಿನ್ನಂಥ ಕಡುಮೂರ್ಖನು ಶಾಪಿಸಿದರೆ ಏನಾಗುವುದು ? ನಾವು ಒಳಗಾಗುವೆವೆ ? ಛೀ ನಡಿ ನಡಿ ಕಾಮಧೇನು ಸಮೀಪದಲ್ಲಿರಲು ನಿಮ್ಮ ಶಾಪವೇನು ಮಾಡುವುದು ? ಭೀತಿಯುಂಟೆ ? ಛೀ ನಡೆ.

ಭೃಂಗಿ : ಅದೆಲ್ಲಿ ಭೀತಿಯುಂಟು ? ಶಿವಶರಣರ ವಾಕ್ಯವು ದಿಟವೆ ಸಟೆಯಲ್ಲ.

೧ನೇ ಗಂಧರ್ವ : ಎಲೊ, ಗರುಡ ಸಾನಿಧ್ಯವ ವಹಿಸಲು ಸರ್ವದಾ ಭೀತಿಯುಂಟೆ? ತದ್ವತ್ ಈ ದೃಷ್ಟನು ಶಾಪಿಸಿದರೆ ನಮಗೆ ಕೊರತೆಯುಂಟೆ? ರೂಪದಲ್ಲಿ ಧನದಲ್ಲಿ ಯವ್ವನದಲ್ಲಿ ಮಾನದಲ್ಲಿಯು ವಿದ್ಯದಲ್ಲಿಯು ಭೋಗದಲ್ಲಿಯು ಇರತಕ್ಕ ಉಭಯಗಂಧರ್ವರ ಚಾಲುಕ್ಯನು ಉಚಿತ ಈ ಮೂಢ ಭೃಂಗಿಯು ಸರಿಯಾಗಬಲ್ಲನೆ ? ಕಾಗಿ ಶಾಪದಿಂದ ಕೋಗಿಲಿಗೆ ಭಾದೆಯುಂಟೆ ? ಇಲ್ಲ ಇಲ್ಲ.

೨ನೇ ಗಂಧರ್ವ : ಹೌದ್ಹೌದು ಗೂಗಿಯಾ ಶಾಪಕೆ ಸೂರ್ಯನು ಕುಂದುವನೆ ? ಚೋರರಾ ಶಾಪಕೆ ಚಂದ್ರನು ಕುಂದುವನೆ ? ನದಿಯ ಶಾಪಕೆ

ಅಮೃತಪಿರುವ ಆ ಸುರಲೋಕ ಕುಂದುವುದೆ ? ತದ್ವತ್ ಈ ತ್ರಿಕಾಲನ ಭಾಷೆಯು ನಮಗೇನು ಕಾರಣವಿಲ್ಲಾ.

ಭೃಂಗಿ : ಅಹಾ ಕರಿಯು ಅಂಕುಶಕೆ, ಗಿರಿಯು ವಜ್ರಕೆ ಕತ್ತಲೆಯು ದೀಪಕೆ ಅಂಜುವವೆ ? ನಿಶ್ಚಯ ನಿಮ್ಮ ಮಾತು. ನೀವು ಶಿವಶರಣರಿಗೆ ಅಂಜುವದಿಲ್ಲವೆ? ಶಹಭಾಶ್ ನಿಮ್ಮೀರ್ವರಿಗೆ ಸ್ವರ್ಗ ಮರ್ತ್ಯ ಪಾತಾಳದಲ್ಲಿ ಸುರನರಾದಿಗಳು ಸ್ವತಂತ್ರರಾದರೆ ಅವರಿಗೆ ಧರ್ಮ ರೂಪಿಯಾದ ಬಸವೇಶ್ವರನಾಣೆ ಅದೆ.

ಗಂಧರ್ವರ ಪದ :

ಪರಮಾತ್ಮ ಪೊರಿಯೊ ದಯಾ ಸದನಾ ।
ಪರಿಭೃಂಗಿ ಮಾಡಿದ ಬಲುಹಿನಾ ॥ ಪ ॥
ನರಜನ್ಮವನ್ನು ಕೊಂದು ಇರೆಂದು ।
ವಂದಿಸಿ ಕಳುಹಿದ ಖಲನು ಇಂದು
ನೀನೆಮಗೆ ಪಾಲಿಸು ದಯವನು ॥ ೧ ॥

ಭೋ ದಯಾಸಾಗರಾ ಜಗದೀಶಾ ದೇವದರ್ಶನಕೆ ಹೋದರೆ ದೇಗುಲವು ಮೈಮೇಲೆ ಬಿದ್ದಂತೆ ಆಯಿತಲ್ಲವೆ ? ಮಾಡಲಿಕ್ಕಿದಕೇನುಪಾಯವಿಲ್ಲ ನೀನೇ ರಕ್ಷಿಸು

ಈಶ್ವರ ಪದ

ಪ್ರೇಮಭಾವ ಎಮ್ಮನಗಲಿ ಕಾರ್‍ಯವು । ಅಘಟಿತವೇನಿಹುದು ।
ಉಭಯರ । ಮುಖದೊಳು ಸೊಬಗದು । ಕಾಣದು ।
ಬಗಿಯೆನಹುದು ಪೇಳುವದು ಈಗಳ್ । ಅಘಟಿತವೇನಹುದೋ ॥ ೧ ॥
ಚಂದಿರ ಮುಖವು ಕುಂದುದುದ್ಯಾತಕೆ ?
ಗಂಧರ್ವರೆ ತ್ವರಾದಿಂದ ಪೇಳುವಡಿಗಳ್ ॥ ೨ ॥

ಭೋ ಗಂಧರ್ವರೆ ಮುಖವು ಬಾಡಿರುವುದ್ಯಾತಕೆ ? ಸ್ವಲ್ಪ ಸಮಾಧಾನದಿಂದ ತಿಳಿಸಿರಿ.

೨ನೇ ಗಂಧರ್ವ : ಭೋ ಅಷ್ಟಮೂರ್ತಿಯೆ ತಾವು ಯೋಗಾಲಯದಲ್ಲಿದ್ದಿರೇನು? ಕೇಳಿರಿ ಇಗೋ ನಮಗೆ ಶಾಪ ತಗಲಿರುವುದು.

ಈಶ್ವರ : ಓಹೋ ! ಏನು ನಿಮಗೆ ಶಾಪ ಆಗಿರುವದೋ ಶಿವ ಶಿವಾ ಯಾರಿಂದ ಆಗಿರುವುದು ?

೧ನೇ ಗಂಧರ್ವ : ಜಗನ್ನಾಥಾ ಭೃಂಗಿಯಿಂದ.

ಈಶ್ವರ : ಏನು ಕಾರಣ ?

೨ನೇ ಗಂಧರ್ವ : ಆ ಭೃಂಗಿಯು ತಮ್ಮ ಪಾದದಲ್ಲಿ ನರ್ತನ ಮಾಡುತ್ತಿರುವಾಗ ಅಲ್ಲಿ ಆತನ ನೋಡಿ ನಾವು ನಕ್ಕದ್ದರಿಂದ.

ಈಶ್ವರ : ಇರಲಿ, ಏನೆಂದು ಶಾಪಿಸಿದನು ?

೧ನೇ ಗಂಧರ್ವ : ನಮ್ಮೀರ್ವರಿಗೆ ನರಜನ್ಮವಾಗಲೆಂದು.

ಈಶ್ವರ : ಮೇಲೆ ನಿಶ್ಯಾಪವಂ ಮಾಡಿರುವನೆ ?

೧ನೇ ಗಂಧರ್ವ : ಇಲ್ಲ ಇಲ್ಲಾ ಜಗದೀಶಾ, ಸುರಾಸುರ ನರಾದಿಗಳಲ್ಲಿ ಸಾಧ್ಯವಾದರೆ ಅವರಿಗೆ ಧರ್ಮ ಸ್ವರೂಪಿ ಜಗತ್ಪಾಲಕನಾದ ಬಸವೇಶ್ವರನಾಣೆ ಅದೆ ಎಂದು ಶಾಪಿಸಿದನು. ನಿಶ್ಯಾಪ ಮಾಡಲಿಲ್ಲಾ.

ಈಶ್ವರ : ಅಹಾ ! ಧನ್ಯ ಧನ್ಯ ಜಗತ್ತಿನಲ್ಲಿ ಸರ್ವಭಕ್ತ ಪ್ರಾಣಿಗಳಿಗೂ ಅನ್ನವನ್ನು ಕೊಡುವುದಕ್ಕೆ ಸಿದ್ಧನಾಗಿರುವ ಆ ಸಾಕ್ಷಾತ್ ಆ ದ್ವಿತೀಯ ಶಂಭುವಾಗಿ ನಂದಿರೂಪದಿಂದ ದುಡಿದು ಭೂಲೋಕದ ಪುತ್ರರಿಗೆ ಸಲಹುವನು. ತನ್ನ ಮೈಚರ್ಮವು ಮೊಟ್ಟೆ ಬಾಣ ಬಾರಕೋಲು ಹಾಗೂ ಮಕ್ಕಳ ಪಾದರಕ್ಷೆ ಸಹವಾಗಿ ಪೂರೈಸುವ ಆ ಬಸವನಾಣೆಯ ಮುಂದೆ ನನ್ನ ಕರ್ತವ್ಯವು ನಡಿಯದು. ನೀವು ಆ ಭೃಂಗಿಯ ಹತ್ತಿರವೆ ಕ್ಷಮೆಯನ್ನು ಬೇಡತಕ್ಕದು.

೧ನೇ ಗಂಧರ್ವ : ಆಹಾ ಶಂಭುವೆ ಆತನು ಉಪಮಾತೀತನೆ ಅಲ್ಲದೆ ಸಮುದ್ರಕ್ಕೆ ಪ್ರತಿ ಉಪಮೆ ಉಂಟೆ ? ಆಕಾಶಕೆ ಆಕಾಶವು ಉಪಮವೆ ? ಹೇಳಿರಿ ಭೋ ಜಯಪ್ರದನೆ ನೀನು ದಯಾಸಾಗರನು ನಿನ್ನ ಹೊರ್ತು ನಮಗೆ ತ್ರೈಲೋಕದಲ್ಲಿ ರಕ್ಷಿಸುವರು ಆರೂ ಕಾಣುವದಿಲ್ಲ. ತಮಗೆ ಮೀರಿದ ಶಾಪ ವಿಮೋಚನೆ ಯಾರು ಮಾಡತಕ್ಕವರು? ತಾವೇ ಹೇಳಿರಿ.

ಈಶ್ವರ : ನೀವು ಆತನಲ್ಲಿಗೆ ಯಾಕೆ ಹೋಗಬಾರದು ? ಹೋದರೆ ಕನಿಕರದಿಂದ ತಾನೆ ನಿಶ್ಯಾಪ ಕೋಡುವನು.

೨ನೇ ಗಂಧರ್ವ : ಭೋ ಧನ್ಯನಾದೆ ಈಶನೆ ನಾವು ಸರ್ವ ಅಪರಾಧಿಯರು,

ಪಾಪಿಷ್ಠರು, ಚಾಂಡಾಲರು, ನಮ್ಮ ದುರ್ಗುಣವನ್ನು ನೋಡಲಾಗದೆ ಕಾಪಾಡಿರಿ. ದೇವಾ ಇಲ್ಲಿದದ್ದರೆ ತಮ್ಮ ಚರಣದಲ್ಲಿ ಪ್ರಾಣತ್ಯಾಗ ಮಾಡುತ್ತೇವೆ.

ಈಶ್ವರ : ಗಂಧರ್ವರೆ ಇಲ್ಲಿ ಕೇಳಿರಿ ಕಾಲು ಜಾರಿದಲ್ಲೆ ಕಾಲು ಊರಬೇಕಲ್ಲದೆ ಆಕಾಶಕೆ ನೆಗೆದರೆ ನಡಿಯದು. ತಸ್ಮಾತ್ ತಾವೀರ್ವರೂ ಭೃಂಗಿಯ ಹತ್ತರವೆ ಹೋಗತಕ್ಕದ್ದು.

ಭೃಂಗಿ : ಎಲ್ಲಾ ಗಂಧರ್ವರೆ ಇನ್ನು ಮೇಲೆ ಆ ನುಡಿಯು ನಮ್ಮ ಕರ್ತವ್ಯವಲ್ಲ. ಹುಟ್ಟಿಸುವುದು ಪವಿತ್ರ ಮಾಡುವುದು ಈಶ್ವರನ ಆಜ್ಞೆಯು. ಛೆ ! ಇನ್ನು ಆತನಲ್ಲಿಗೆ ಹೋಗಿ ಕೇಳಿಕೊಳ್ಳಿರಿ (ಎಂದು ಬಾಗಿಲ ಮುಚ್ಚಿಕೊಳ್ಳುವನು. ಈಶ್ವರ ಸಭಾ)

ಎರಡನೇ ಗಂಧರ್ವ : **ಪದ**

ಹೇ ದೇವಾ ತವಪದ ಸರೋಜ ಸೇವಾ
ಈಶನೆ ನಿನ್ನಯಾ ಕ್ಲೇಷವು ನಮ್ಮಯಾ ರಕ್ಷಿಪರಾರೊ ?
ಈ ಜಗದಿ ಮಮಜೀಯಾ ॥ ೧ ॥
ವಿನೋದರಾ ಸಂಕಟಸುರಾ
ಕರುಣಿಸೋ ಬೇಗ ಹರಿಹರಾ ಶಂಕರಾ ॥ ೨ ॥

ಹೇ ದಯಾಘನನಾದ ಪರಮೇಶ್ವರನೆ ತಾವು ದಯಪಾಲಿಸಬೇಕು.

ಈ ದಾಸರ ವಂದನೆಯನ್ನು ಈಶನೇ ಕರುಣಿಸಬೇಕು.

ಈಶ್ವರ : ನಿಮಗೆ ಕಲ್ಯಾಣವಾಗಲಿ ಭೋ ಗಂಧರ್ವರೆ ನಿಮಗೆ ಭೃಂಗಿಯು ನಿಶ್ಯಾಪವಂ ಕೊಟ್ಟನೆ ?

೧ನೇ ಗಂಧರ್ವ : ಭೋ ದೇವಾ ಕೊಟ್ಟರು.

ಈಶ್ವರ : ಏನೆಂದು ? ಎಂದಿಗೆ ? ಏನಾಗುವಿರೆಂದು ಕೊಟ್ಟನು ? ಬೇಗನೆ ತಿಳಿಸಿರಿ.

೨ನೇ ಗಂಧರ್ವ : ಜಗನ್ನಾಥಾ ಕೇಳಿರಿ ಶೀತೋಷ್ಣ ಮೃದು ಕಠಿಣ ಹಸಿವು ತೃಷೆಯು ನಿದ್ರೆ ಆಲಸ್ಯ ಇಲ್ಲದ ಕುಮಾರನು ನಿಮ್ಮ ಉದರದಲ್ಲಿ ಆದಂದಿಗೆ ಎಂದು ನಿಶ್ಯಾಪಗೈದರು.

ಈಶ್ವರ : ಆಮೇಲೆ ?

೧ನೇ ಗಂಧರ್ವ : ಅಯ್ಯೋ ! ಜಗಚ್ಚಾಲಕ ಇಂಥಾ ಶಿವಯೋಗಿಯು ನಮ್ಮಂಥ ಪಾಪಿಗಳ ಉದರದಿಂದ ಜನಿಸುವದರಿಂದ ನಮ್ಮ ಜನ್ಮ ಪವಿತ್ರವಾಗುವುದೆಂದು ತಮ್ಮ ಚರಣ ಸಾನ್ನಿಧ್ಯ ಹೊಂದುವುದು ಉತ್ತಮ.

ಈಶ್ವರ : ಇದ್ದೇ ಇರುವಿರಲ್ಲಾ ನನ್ನ ಹತ್ತಿರಾ.

೧ನೇ ಗಂಧರ್ವ : ಭೋ ಗಿರಿಜಾರಮಣನೆ ನಮಗೆ ನರಜನ್ಮವಾದ ಬಳಿಕ ಅಜ್ಞಾನ ಸಂಭವಿಸಿ, ಕಲಿಯುಗ ಪ್ರತಾಪದಿಂದೆ ಬುದ್ಧಿಯು ಭ್ರಷ್ಟವಾಗಿ, ಸತ್ಯಾಸತ್ಯ ವಿಚಾರ ತಪ್ಪಿ, ನಾವು ಮರ್ತ್ಯಲೋಕದಲ್ಲಿ ಜನ್ಮ ಪಡೆಯುವ ಕಾರಣವೇನು ? ಮರ್ತ್ಯಲೋಕದಲ್ಲಿ ಈ ನಿನ್ನ ಜ್ಞಾನ ಧ್ಯಾನದಲ್ಲಿ ಮನಸ್ಸಿಡಲಾರದೆ ಯಾವತ್ಕಾಲದಲ್ಲಿ ಪರಸ್ತ್ರೀಯರಲ್ಲಿ, ಪರಧನ ಪರಭೂಮಿಯಲ್ಲಿ ಮನ ವ್ಯಾಪಿಸಿ, ಮನ ಮಲಿನ ಹೊಂದಿ ತಮ್ಮ ಚರಣಗಳು ಕಾಣದ ಹಾಗೆ ಕುಂದು ಬರುವುದು. ಆದ್ದರಿಂದ ತ್ರಿಶಂಭು ಆನಂದದಿ ಮಧ್ಯದಲ್ಲಿರುವರು. ಲೋಕದವರು ಬಡಿದಾಡಿ ಸಾಯುವರು. ಅದಕ್ಕಿಂತಲೂ ಇಲ್ಲೆ ಪ್ರಾಣ ಬಿಡುವುದು ಉತ್ತಮವಲ್ಲವೆ ? ನೋಡು ದಯಾಸಾಗರನೆ, ದಯಾಘನನಾಗಿರುವಿಯಾ. ಇಗೋ ನೋಡು ಈ ಶಸ್ತ್ರದಿಂದ ಮಸ್ತಕ ಹಾರಿಸಿಕೊಳ್ಳುತ್ತೇನೆ.

(ಎಂದು ಹೊಡಿದುಕೊಳ್ಳುವದಕ್ಕೆ ಹೋಗುವರು).

ಈಶ್ವರ : (ಶಸ್ತ್ರ ಹಿಡಿದು) ಹೋ ಹೋ ಸ್ವಲ್ಪ ಸಮಾಧಾನ. ತಾಳಿರಿ ಹೀಗ್ಯಾಕೆ ? ನಾನೆ ನಿಮ್ಮ ಉದರದಿಂದ ಹುಟ್ಟಿ ನಿಮ್ಮ ಸಂಕಟವನ್ನು ಪರಿಹರಿಸುವೆನು. ನೀವೀರ್ವರೂ ಭೂಲೋಕದಲ್ಲಿ ಹುಟ್ಟಿ ಹೋಗಿರಿ.

೨ನೇ ಗಂಧರ್ವ : ಆವ ಊರು ? ಆವ ದೇಶದಲ್ಲಿ ?

ಈಶ್ವರ : ಕರ್ನಾಟಕ ದೇಶ ಸೊನ್ನಲಾಪುರದಲ್ಲಿ.

೧ನೇ ಗಂಧರ್ವ : ಆರ ಮನಿಯಲ್ಲಿ ?

ಈಶ್ವರ : ಕುಡ ಒಕ್ಕಲಿಗರ ಮನೆಯಲ್ಲಿ.

೨ನೇ ಗಂಧರ್ವ : ಏನಾಗಿ ?

ಈಶ್ವರ : ಸತಿ ಪತಿಗಳಾಗಿ.

೧ನೇ ಗಂಧರ್ವ : ಅಲ್ಲಿಗೆ ತಾವು ಬರ್ತೀರಾ ?

ಈಶ್ವರ : ಬರುವೆವು.

೨ನೇ ಗಂಧರ್ವ : ಎಂದಿಗೆ ?

ಈಶ್ವರ : ನಿಮಗೆ ವೃದ್ಧಾಪ್ಯ ಅಳವಟ್ಟು, ಇಂದ್ರಿಯಂಗಳ ಹಂಗು ತೊರೆದು ನನ್ನ ಧ್ಯಾಸ ಮಾಡಿದಾಗೆ.

೧ನೇ ಗಂಧರ್ವ : ಸತ್ಯ ಸತ್ಯವೆ.

ಈಶ್ವರ : ಸತ್ಯವು.

ಪದ

ಮನ್ನಿಸುವಿರಿ । ಮಾನ್ಯ ಸುಮನಸ
ಧನ್ಯರಾಗಿರಿ । ಲೋಕದೊಳು
ಸನ್ನುತಾಮಳ । ಸುಬಾಧರೆ
ಚೆನ್ನಾಗಿ ಪುಟ್ಟುವೆ ॥ ೧ ॥

ಮೀರಿದರವತ್ತು । ವರುಷವಾಗಲು
ಪುರಗರ್ವದಿ । ಉದಿಸುವೆ
ಸಾರಿ ಪೇಳುವೆ । ವಚನ ಕೇಳಿರಿ ।
ಧೀರ ಬಸವನಾಣತಿಯೆಮಗೆ ॥ ೨ ॥

ನಿಮಗೆ ಆ ನರಜನ್ಮದಲ್ಲಿ ಅರವತ್ತು ವರುಷ ಆದ ನಂತರ ನಾನು ನಿಮ್ಮ ಉದರದಿಂದ ಜನಿಸಿದಾಗೆ, ನನ್ನ ಲೀಲೆಯ ನೋಡಿ. ಗಂಧರ್ವರೆ ಇಗೊ ಅಭಯವನ್ನು ತೆಗೆದುಕೊಳ್ಳಿರಿ (ಎಂದು ಕೈ ಮುಟ್ಟಬೇಕು).

ಗಂಧರ್ವರು : ಶಿವಾ ಧನ್ಯರಾದೆವು (ಎಂದು ನಮಿಸುವರು ರಸ್ತಾ ಪರದಾ ಬಿಡಬೇಕು ಮುಂದೆ ಭಟ್ಟರ ಪ್ರವೇಶ).

ರಾಮಭಟ್ಟ : ನಮಸ್ಕಾರ ನಮಸ್ಕಾರ ಕಾಂಚನ ಭಟ್ಟರೆ ಎಲ್ಲಾ (ಸರ್ವಸ್ವ) ಸಕಲ ಸಾಲು ಕ್ಷೇಮವೆ ?

ಕಾಂಚನಭಟ್ಟ : ಸರ್ವಸ್ಯ ಕ್ಷೇಮವು ಎನ್ನಿ ರಾಮಭಟ್ಟರೆ. ತಮಗೆ ಹನ್ನೊಂದನೆಯ ಸ್ಥಾನಕ್ಕೆ ಗುರು ಬಂದಂತೆ ತೋರುತ್ತದೆ.

ರಾಮಭಟ್ಟ : ಅದ್ಯಾಕೆ ವಿಶೇಷ ? ಏನು ವರ್ತಮಾನ ? ಏನು ಶುಭ ಚಿಹ್ನೆ ? ಏನು ಹಾಸ್ಯ ಮುಖ ಕಾಣುತ್ತದೆ.

ಕಾಂಚನಭಟ್ಟ : ನಾಳೆ ವೈಶಾಖ ಮಾಸದಲ್ಲಿ ಆ ನಮ್ಮ ಮುದ್ದುಗೌಡರ ಲಗ್ನವೆಂದು ಕೇಳಿದೆನು.

ರಾಮಭಟ್ಟ : ಕನ್ನೆಯು ದಾವ ಊರಲ್ಲಿ ? ದಾರ ಮನಿಯಲ್ಲಿ ? ದಾವ ಸೂತ್ರ ? ದಾವ ಗೋತ್ರ ? ದಾವ ಶಾಖಾ ? ದಾವ ಪೂರ್ವರು ? ದಾವ ವೇದಾ ? ದಾವ ಸಾಂಪ್ರದಾಯಕರಲ್ಲಿ ನೇಮಿಸಿದ್ದಾರೆ ?

ಕಾಂಚನಭಟ್ಟ : ಆ ನಮ್ಮ ಕುಡಒಕ್ಕಲಿಗರ ಚ್ಯಾಮಣ್ಣನ ಮಗಳು ಸುಗಲಾದೇವಿಯರನ್ನು ನೇಮಿಸಿದ್ದಾರೆ.

ರಾಮಭಟ್ಟ : ಓಹೋ ! ಅಂದ ಮೇಲೆ ನಮ್ಮ ಶಿಷ್ಯ ಸಿನ್ಯಾ ನಾಣ್ಯಾ ವೈದಿಕ ಅಭ್ಯಾಸಕ್ಕೆ ಉಪಾಧ್ಯ ದೀಕ್ಷಕರಲ್ಲಿ ಹೋಗಿದ್ದಾರೆ. ಕರಿಸಬೇಕು.

ಕಾಂಚನಭಟ್ಟ : ಊಟ ಏನು ಮಾಡುವುದದೆ ? ತಿನ್ನಲಿಕ್ಕೆ ಬೋಂದೆ, ಹೋಳಿಗೆ ಹಾಲು ಹುಗ್ಗಿ ಆಗುವಂತೆ ಕಂಡು ಬರುತ್ತದೆ. ಯಥೇಚ್ಛವಾಗಿ ಹೊಡಿಯೋಣ ನಡಿಯಿರಿ.

ರಾಮಭಟ್ಟ : ನನ್ನಾಣೆಯೆ.

ಕಾಂಚನಭಟ್ಟ : ನಮ್ಮಾಣೆ ನಿಮ್ಮಾಣೆ ಗಾಯತ್ರಿ ಸಾಕ್ಷಿ, ಪೃಥ್ವಿ ಸಾಕ್ಷಿ, ನಿಮ್ಮ ಚರಣದ ಸಾಕ್ಷಿಯಾಗಿ ಹೇಳುತ್ತೇನೆ. ನಾನು ನಮ್ಮ ಶಾರದಾ ಸರ್ವಮಂಗಲಾ ಇವರಿಗಾದರೂ ಕರಿಸುತ್ತೇನೆ.

೧ನೇ ಭಟ್ಟ : ಆಗಲಿ ಅವಶ್ಯವಾಗಲಿ. ನಿಮ್ಮ ಯುವ ಮಿತ್ರರಿಗೆ ಕರಿಸಿರಿ. ನಾವು ತವಿಯಿಲ್ಲದೆ ತಿಂದು ನಮ್ಮ ಹೊಟ್ಟಿ ಕರಳುಗಳು ಒಣಗಿ ಹೋಗಿದ್ದಾವೆ.

೨ನೇಭಟ್ಟ : ಹೌದರಿ ನನಗೂ ಸಹಾ ಹಾಗೆ ಆಗಿರುವುದು. ಶೌಚೋಪದ್ರವವಂತೂ ಬಹಳೆ ಆಗಿರುವುದು. ನಮ್ಮ ಮುದ್ದುಗೌಡನ ಮನೆಯಲ್ಲಿ ಸಾಧಾರಣ ನಲ್ಕಾರು ದಿವಸಗಳಲ್ಲಿ ಒಂದು ಮಣ ತುಪ್ಪ ನಮ್ಮಿಬ್ಬರ ಪಾಲಿಗೆ ಬಿದ್ದರೆ ಆವಾಗೆ ಉದರ ಶಾಂತಿ ಪೊಂದುತ್ತದೆ. ಯಥೇಚ್ಛ, ತಿಂಬೋಣ ನಡಿಯಿರಿ.

೧ನೇಭಟ್ಟ : ನಾನು ಇವತ್ತಿನ ಹಿಡಿದು ಉಪವಾಸ ಶುರು ಮಾಡುತ್ತೇನೆ. ದಿನಾಲೂ ಒಮ್ಮೆ ಅಥವಾ ನಾಲ್ಕು ದಿವಸಕ್ಕೊಮ್ಮೆ ಊಟ ಮಾಡುತ್ತೇನೆ.

೨ನೇಭಟ್ಟ : ಆಗಲಿ ನಡೆಯಿರಿ ಇನ್ನು ವ್ಯಾಳ್ಯವಾಗುವುದು. ಬೇಗನೇ ಹೋಗುವಾ. (ಎಂದು ನಕಲಿ ಮಾಡುತ್ತ)

ಪದ

ಭೋಜನಕ್ಕೀಗಳು । ಸೋಜಿಗದಿಂದಲಿ
ವಾಜಿಯಿಂ ಪೋಪೆವೊ । ಮಾಜದೆ ಈಗಲು ॥ ೧ ॥
ತುಪ್ಪದಿ ಕರದಿಹ । ಹಪ್ಪಳ ಸಂಡಿಗೆ
ದಪ್ಪ ದಪ್ಪ ಲಾಡುಗಳ ನಾವು ।
ಉಪ್ಪಿನಕಾಯಿ ಚಪ್ಪರಿಸಿ । ಎಷ್ಟೊತ್ತಾದರೂ ನುಂಗುವೆವು ॥ ೨ ॥
ಬಾಲಲ್ಲು ಪೆದಲ್ಲು । ಅಮ್ಮಲು ಆಕಲ್ಲ
ಮೆಲುಗ ಪೊದ್ದುಕು । ತಪಕನೆ ಆಲಯಾ
ಮಾರ್ಜಾಲ ಮಾ ತೊಲಿಲತೊ ವಸಿಮಿಮೆ ಮಂತ ॥ ೩ ॥

೧ನೇ ಭಟ್ಟ : (ಸೀನ್ ಮುದ್ದುಗೌಡನ ಮನೆ ಲಗ್ನ ಮಂಟಪದಲ್ಲಿ) ಏನ್ರಿ ಇನ್ನೂ ಸಾಮಗ್ರಿಗಳು ಸಿದ್ಧ ಕಾಣುವುದಿಲ್ಲ. ನಮ್ಮ ಪಾಲಿಗೆ ಏಕಾದಶಿ ಬಂದಂತೆ ತೋರುವುದು.

೨ನೇ ಭಟ್ಟ ; ಓಹೋ ! ಇದ್ಯಾವ ದೊಡ್ಡ ಚಮತ್ಕಾರದ ಮಾತು ಹೇಳಿದಿರಿ ? ಅರ್ಥಾತ ಏಕಾದಶಿ ಒಂದು ವ್ಯಾಳ್ಯದಲ್ಲಿ ಉಣಬಾರದು ಎಂದು ಕ್ರಿಯಾ ಶಾಸ್ತ್ರದಲ್ಲಿ ಹೇಳಿಲ್ಲವೆ ? ಹೀಗ್ಯಾಕೆ ಸ್ವಾಮಿ ?

೧ನೇ ಭಟ್ಟ: ಏನ್ರಿ ? ತಂಗಳ ಭಕ್ಕರಿಗೆ ದಸಮಿಯೆಂದು ಹೆಸರಿಟ್ಟು ತಿಂದರೆ ದೋಷವಿಲ್ಲೆಂದು ಹತ್ತೊಂಬತ್ತನೇ ಪಾರಾಯಣದಲ್ಲಿ ಹೇಳಿರುತ್ತದೆ. ತಾವು ಕೇಳಿಲ್ಲವೆ ?

೨ನೇ ಭಟ್ಟ : ಹೌದು ಉಳ್ಳಾಗಡ್ಡಿ ಸಂಗಾತ ತಿಂದರೆ ದೋಷ ನಿವಾರಣೆ ಆಗುವುದೆಂದು ಪಂಚವಿಂಶತಿಯಲ್ಲಿ ಹೇಳಿರುವುದು.

೧ನೇ ಭಟ್ಟ : ಅಯ್ಯೊ ರಾಮ ರಾಮಾ ಇಂಥಾ ಅನ್ಯಾಯ ಅವಾಚ್ಯಶಬ್ದಗಳು ನನ್ನ ಕರ್ಣದಿಂದೆ ಕೇಳಲಾರೆ (ಎಂದು ಕಿವಿ ಮುಚ್ಚುವನು.)

೨ನೇ ಭಟ್ಟ : ಹೌದರಿ ಸ್ನಾನ ಮಾಡದೆ ಪಾತ್ರದವರ ಮನೆಯಲ್ಲಿ ಅನ್ನ, ಅವರ ಜೊಲ್ಲು ಸಹವಾಗಿ ತಿನ್ನುವುದು ಇದ್ಯಾವ ನ್ಯಾಯವು ?

೧ನೇ ಭಟ್ಟ : ಇರಲಿ ಸಾಕು ಮಾಡಿರಿ....... ನಾವು ಬೇಗನೆ ಅಕ್ಷತಿ ಹಾಕಿ, ದಕ್ಷಿಣಾ ತಗೆದುಕೊಂಡು ಹೋಗುವಾ ನಡಿಯಿರಿ.

೨ನೇ ಭಟ್ಟ : ನಮ್ಮ ಕಡಿದೇನಾಲಸ್ಯವು ? ನಮಗೆ ಹನ್ನೆರಡು ಗಂಡು ಹೆಣ್ಣು ಮಕ್ಕಳು ಇರುವರು. ಮೇಲೆ ಹದಿಮೂರನೇ ಗರ್ಭ ತಯಾರ, ನಮ್ಮ ಕುಟುಂಬ ಸಹವಾಗಿ ಹದಿನೈದು ಹುಲಿಕಣ್ಣು ಸಿಗುತ್ತವೆ. ಇದರಂತೆ ಆದರೆ ಒಂದು ತಿಂಗಳಿಗೆ ಐದು ನೂರು ರೂಪಾಯಿ ಲೆಕ್ಕ ತೋರುತ್ತವೆ.

ದೈವದವರು : ಎಲಾ ಭಟ್ಟರೆ ಇನ್ನು ವ್ಯಾಳ್ಯಾವಾಗುವುದು. ಮಂಗಳಾಷ್ಟಕ ಹಾಡಿ ಅಕ್ಷತಿ ಹಾಕಿರಿ.

ಭಟ್ಟರು : (ಮುದ್ದುಗೌಡನ ಹೆಂಡತಿಯನ್ನು ಸಹ ಹಸೆಕಟ್ಟೆಯಲ್ಲಿ ಕೂಡಿಸಿ)

ಮಂಗಳಾಷ್ಟಕ

ಗಂಗಾ ಸಿಂಧು ಸರಸ್ವತೀ ಚ ಯಮುನಾ ।
ಗೋದಾವರಿ ನರ್ಮದಾ ಕಾವೇರಿ
ಶರ ಮಯೂರ ಮಹಿಂದ್ರ
ತನಿಯಾ ಚಾರ್ಮಣ್ಯತಿ ವೇದಿಕಾ
ಕ್ಷಿಪ್ರಯಾತ್ರಾವತಿ ಮಹಾ ಸುರನದಿ
ಖ್ಯಾತಾಚಯಾ ಗಂಡ ಕಿಂ ಪೂರ್ಣ ಪೂರ್ಣ
ಜಲ ಸಮಾನ ಸಮುದ್ರ ಸಹಿತಾ ಕರೆತ್ಸ
ದಾಮಂಗಲಂ ಸುಮೂರ್ತೆ ಸಾವಧಾನಾವಧಾ ॥ ೧ ॥

(ಎಂದು ಅಕ್ಷತಿ ಹಾಕಿ ದಕ್ಷಿಣ ತೆಗೆದುಕೊಂಡು ಬ್ರಾಹ್ಮಣರು ಹೋಗುವರು).

ಶ್ರೀ ರೇವಣಸಿದ್ಧೇಶ್ವರ :

ಪದ

(ಶಿಷ್ಯರೊಡನೆ ಪ್ರವೇಶ ಭಜನೆ ಮಾಡುತ್ತ)

ವಾಗಿ ಹೋಗಿ ಹೋಗಿ ಹೋಗಿ । ಜನ್ಮಸಾಧ್ಯ
ವಾಗಿ ವಿಶ್ವಂಭರಾ । ಪಾಲಿಸೆಮ್ಮಾ ನೋಡುವಿಯೆಷ್ಟು ?
ನಿದ್ರದ ಮಹಿಮಾ । ಆಂತಲು ಕಾಡಿಕಾಡಿ
ಖೋಡಿ ವಿಷಜನ್ಮ ಸಾಧ್ಯವಾಗಿ । ವಿಶ್ವಂಭರಾ ಪಾಲಿಸೆಮ್ಮ ॥ ೧ ॥
ಬಿಡು ಬಿಡು ರೋಷವನು ।
ಸುಡು ಸುಡು ಈ ಮಾಯವನು ।
ದಾಸಾಂಕಿತನ ದೀನ । ಮುನ್ನ ಸಾಧ್ಯವಾಗಿ
ವಿಶ್ವಂಭರಾ ಪಾಲಿಸೆಮ್ಮಾ ॥ ೨ ॥

ಶಿವಾ ಶಿವಾ ನಾನು ಧನ್ಯನಾದೆನು. ನನ್ನ ಸುಕೃತವು ಫಲಿಸಿತು. ಮಹಾರಾಜನಿಗೆ ವಂದನೆ ಇರಲಿ (ಎಂದು ಕೈ ಜೋಡಿಸಿ, ಮೆಲ್ಲಗೆ ಸ್ವಲ್ಪ ನಡಿವನು).

ಶಿಷ್ಯ : (ಒಗಟಾಗಿ) ಶ್ರೀ ಗುರುವೆ ಈ ಹಳ್ಳಿಯಲ್ಲಿ ಶಿವಾಲಯವಿಲ್ಲ. ಶೀವಕ್ಷೇತ್ರವಿಲ್ಲ. ಕರುಣವುಳ್ಳ ಭಕ್ತರಿಲ್ಲಾ. ಇಂಥಾ ಭವಿಪ್ರದೇಶದಲ್ಲಿ ತಾವು ವಿಶ್ವ ಸಂತೋಷದಲ್ಲಿ ಸಾಷ್ಟಾಂಗ ನಮಸ್ಕಾರ ಯಾರಿಗೆ ಮಾಡಿದಿರಿ ? ಶಿಷ್ಯನಿಗೆ ತಿಳಿಸಿ ಸಂತೋಷಪಡಿಸಬೇಕು.

ರೇವಣಸಿದ್ಧೇಶ್ವರ : ಶಿಷ್ಯರುಗಳಿರಾ ಈ ಪುರದೊಳಗೆ ಮಹಾ ಸಿದ್ಧನಾದ ಶಿವಯೋಗಿಯೋರ್ವನು ಅವತರಿಸುವನು. ಆತನಿಂದ ಈ ದೇಶವು ಲಿಂಗಾಭಿವೃದ್ಧಿಯಾಗಿ ಮುಕ್ತಿ ಕ್ಷೇತ್ರವಾಗುವುದು. ಆತನು ಧರ್ಮಧಾರಿಯಾಗಿ ಧರೆಯೊಳು ಈ ಗ್ರಾಮ ಮೇಲಾಗಿ ತೋರುವುದು. ಇವಾಗ್ಗೆ ಇನ್ನು ಒಂದು ವರ್ಷದೊಳಗಾಗಿ ಆತನು ಈ ವರ ಮುದ್ದುಗೌಡನ ಪತ್ನಿ ಸುಗ್ಗಲದೇವಿಯ ಗರ್ಭದಲ್ಲಿ ಉದಿಸಿ, ಆ ಮೂರ್ತಿಯೆ ಬರುತ್ತಾನೆ.

ಶಿಷ್ಯ : ಅವರೆಲ್ಲಿ ಹುಟ್ಟುವರು ತೋರಿಸಿ ಸಂತೋಷಪಡಿಸಿರಿ.

ರೇವಣ ಸಿದ್ಧೇಶ್ವರ : ಇದೆ ಸೊನ್ನಲಗಿ ಎಂಬೊ ಹಳ್ಳಿಯಲ್ಲಿ ಮುದ್ದುಗೌಡನ ಮನೆಯಲ್ಲಿ ತೋರಿಸುವೆನು ಸಂಶಯ ಬಿಡು (ಎಂದು ಹೋಗುವರು).

ಪದ

(ಸೀನ್ ಮುದ್ದುಗೌಡರ ಮನೆ).

ಆನಂದದಿಂದೆ ಬಂದೆ ಈಗಲೆ । ಛಂದ ಭಜನಿಯ ಮಾಡುತ ।
ಸಾಧು ಮಹೇಶ್ವರರು ಕೂಡುತ । ಮಂದರಾದ್ರಿಯ ವಾಸಗೆ ।
ನಾವಾನಂದದಲಿ ॥ ೧ ॥

ರಕ್ಷಪಾಲ ಜಗಕೆ ಕಮಲಧರ । ದಕ್ಷಯಾಗವನು ಶಿಕ್ಷಿಪಾ ।
ಅಕ್ಷಿ ತ್ರಯನೆ । ಮೋಕ್ಷದಾಯಕನೆ । ಪಕ್ಷಪಾತಯಮ್ಮಯ
ಒಳಗೆ । ನೀವಾನಂದದಲ್ಲಿ ॥ ೨ ॥

(ಎಂಬುವದರಲ್ಲಿ ಸುಗ್ಗಲದೇವಿ ಸಖಿಯರೊಡನೆ ಮಲಗಿರಬೇಕು.)

ಅಹಾ ನಮ್ಮ ಧರ್ಮ ಜನನಿಯಾದ ಸುಗ್ಗಲದೇವಿಯು ಇಲ್ಲಿ ನಿದ್ರೆಯಿಂದಿರುವಳಲ್ಲಾ. ಒಳ್ಳೆಯದು (ಎಂದು ಗರ್ಭ ಮುಟ್ಟಿ ನಮಿಸುವನು)

೧ನೇ ಸಖಿ : ಅವ್ವಾ ಈತನ್ಯಾರು ? ಇದೇನು ಸಾಧುರೆ ? ತಾವು ಹೆಣ್ಣು ಮಕ್ಕಳ ಸಮೀಪವಾಗಿ ಬರುವುದು ಯೋಗ್ಯವಲ್ಲ. ದೂರ ನಿಂತು ಮಾತಾಡ ತಕ್ಕದ್ದು, ಇರಲಿ ಪ್ರಾಜ್ಞರು ಮಹಾ ಅನುಭಾವಿಗಳು ಮುಟ್ಟಿ ನಮಸ್ಕರಿಸಿದರೆ ಭಯವೇನು ? ನಮ್ಮ ಕಂಟಕವೆ ಬಯಲಾಯಿತು. ಇರಲಿ ಸ್ವಾಮಿ ತಾವು ಹೀಗ್ಯಾಕೆ ನಮಸ್ಕರಿಸಿದಿರಿ ?

೨ನೇ ಸಖಿ : ಹೌದು ಸ್ವಾಮಿ ಇದನ್ನು ನಿಸ್ಸಂದೇಹದಿಂ' ಹೇಳಿರಿ

ರೇವಣಸಿದ್ಧೇಶ್ವರ : ಮಾತೋಶ್ರೀಯರೆ ಇಹ ಪರದಲ್ಲಿ ಸಾಕ್ಷಾತ್ ಶಿವಯೋಗಿ ಸಿದ್ಧರಾಮನಾಗಿ ಪುಟ್ಟುವನು.

ಸುಗ್ಗಲದೇವಿ : (ಎದ್ದು) ಅಯ್ಯೋ ಶಿವ ಶಿವಾ. ಅವ್ವಾ ಸಖಿಯರೆ ನನ್ನ ಪ್ರಾಯವೆಲ್ಲಾ ಹೊರಟು ಹೋಗಿದೆ. ಮುದಿತನದ ಚಿನ್ಹವು ತೋರುತ್ತಿರುವುದು. ಪುರುಷರನ್ನು ಬಯಸುವಂತೆ ಇಲ್ಲ. ರಕ್ತವು ಒಣಗಿರುವುದು. ಲವಣ ವರ್ಜ್ಯವಾಗಿ ಹತ್ತೆಂಟು ವರ್ಷಗಳಾದವು. ಮೈ ಚರ್ಮವು ಮುದುಡಿರುವುದು. ಕೇಶ ಶುಭ್ರವಾಗಿವೆ ನಡೆಯಲು ಕಟ್ಟಿಗೆ ಬೇಕು ಇನ್ನು ಮೇಲೆ ನಾನೆತ್ತ ? ಮಗನಂ ಪಡೆಯುವುದೆತ್ತ? ಆ ಶಿವಯೋಗಿಯು ನನ್ನ ಉದರದಲ್ಲಿ ಉದಿಸುವುದೆತ್ತ ? ಸುಮ್ಮನೆ

ಯಾತಕೆ ಮಾತನಾಡುವಿರಿ ? ಜನರು ಹಾಸ್ಯ ಮಾಡ್ಯಾರು ಸ್ವಾಮಿ ಹಾಗೆ ಹೇಳಬಾರದು ತಮ್ಮ ಇಚ್ಛೆ ಇದ್ದಿದ್ದು ಕೇಳಿಕೊಂಡು ತೆರಳಿರಿ.

ರೇವಣಸಿದ್ಧೇಶ್ವರ : ತಾಯಿ ಆತನು ರಕ್ತರೇತುಗಳಿಂದ ಹುಟ್ಟುವವನಲ್ಲಾ. ಸಾಕ್ಷಾತ್ ನಿರ್ವಿಕಾರವಾದ ಶಂಭುವು ಈತನು. ವಿಕಾರವಾದ ದೇಹದಿಂದೆ ಹುಟ್ಟುವನೆ ? ಸದಾಶಿವನಿಗೆ ತಂದೆ ತಾಯಿಗಳುಂಟೆ ? ಆತನಿಗೆ ಅಭ್ಯಾಸ ಮಾಡಿಸಿದವರ್‍ಯಾರು ? ಆತನಿಗೆ ಹೆಸರಿಟ್ಟ ಮುತ್ತೈದೆಯರಾರು ? ಆತನು ಗುರ್ತಿನ ಪುರುಷನೆ ? ಆತನು ಉಪಮಾತೀತನು ತಾವು ನಿಶ್ಚಿಂತರಾಗಿರ್ರಿ.

೧ನೇ ಸಖಿ : ಒಳ್ಳೆಯದು ಸಾಧು ಮಹಾರಾಯರೆ ಆತನು ಎಂದು ಹುಟ್ಟುವನು ಹೇಳಿರಿ.

ರೇವಣಸಿದ್ಧೇಶ್ವರ : ಅಮ್ಮಗಳಿರಾ ಇನ್ನು ಒಂದು ವರ್ಷದೊಳಗಾಗಿ ಹುಟ್ಟುವನು. ಆತನು ಲೌಕಿಕರ ಮಾತು ಕೇಳಿ ಕಿವುಡನು. ನೋಡಿ ಕುರುಡನು. ಮಾತಾಡಿ ಮೂಕನಂತೆಯೂ ಇರುವನು. ಅಂಥಾ ಮಹಾತ್ಮನನ್ನು ಕಂಡು ನೀವು ಇದೇನೆಂದು ಧೈರ್ಯಗೆಡದೆ ಹೇಳಿ ಹೇಳಿಸದೆ ಇರತಕ್ಕದ್ದು. ತಾಯಿಯೆ ಆತನಿಗೆ ಸಿದ್ಧರಾಮನೆಂದು ಮರೆಯದೆ ಹೆಸರಿಡತಕ್ಕದ್ದು. ಆತನು ದಿವ್ಯ ಜ್ಞಾನಿಯಾಗಿ ಯೋಗಿ ಸಿದ್ಧರಾಮನೆಂದು ಪ್ರಸಿದ್ಧಿಸಿ, ಗೋರಕ್ಷ ರೇಣುಕ ನಾಗಾರ್ಜುನ ಮೊದಲಾದವರಕ್ಕಿಂತಲೂ ಶ್ರೇಷ್ಠವಾಗಿ ಬಸವೇಶ್ವರ ಮೊದಲಾದ ಪ್ರಮಥರಿಗೆ ಪ್ರೀತ್ಯಾಸ್ಪದನಾಗಿ, ಅಲ್ಲಮಪ್ರಭುವಿಗೆ ಆತ್ಮನೆನಿಸಿ, ಅನೇಕ ಮಹಿಮೆಗಳನ್ನು ತೋರುವನು. ಆತನ ಜನ್ಮದಿಂದ ನೀವು ದಂಪತಿಗಳು ಧನ್ಯರಾಗುವಿರಿ. ನಿನ್ನ ಬಸರುತನದ ಯೋಗಕ್ಷೇಮವಂ ವಿಚಾರಿಸಿಕೊಳ್ಳುವೆವು. ಈ ಚಾಮಲದೇವಿಯರು ಸುಖದಿಂದರತಕ್ಕದ್ದು.

೨ನೇ ಸಖಿ : ಅಮ್ಮಾ ಚಾಮಲದೇವಿಯರೆ ನಡೆಯಿರಿ ಈತನಿಗೆ ಏಳುನೂರು ವರ್ಷಗಳಾಗಿದ್ದವಂತೆ. ಈತನಿಗೆ ಅರವತ್ತು ವರುಷದ ಹಿಡಿದು ಅರುಮರು ಹಿಡಿದಿದೆ. ಆದ್ದರಿಂದೆ ಹೀಗೆ ಬಡಬಡಿಸುವಾ. ಹುಟ್ಟುವುದಿದ್ದರೆ ಹಿಂದೆ ಹುಟ್ಟುತ್ತಿದ್ದನು. ಈ ಜಂಗಮರ ಸ್ವಭಾವವೆ ಹೀಗೆ ಇರುವುದು. ಯಾರ ಮನಿಗೆ ಹೋದರೆ ಅವರಂತೆ ಮಾತನಾಡುವರು.

೨ನೇ ಚಾಮಲಾದೇವಿ : ಛೇ ಛೇ ಹಾಗೆ ನೀನು ಮಾತಾಡತಕ್ಕದ್ದಲ್ಲ. ಮಹಾಜ್ಞಾನಿಗಳು

ಕೊಟ್ಟ ವಚನವು ಸುಳ್ಳಾಗುವುದಿಲ್ಲ. ಇರಲಿ ಸ್ವಾಮಿ ಆಮೇಲೆ ?

ರೇವಣಸಿದ್ಧೇಶ್ವರ : ಅಮ್ಮಾ ತಾಯಿಗಳಿರಾ ನೀವು ಹ್ಯಾಗಾದರೂ ತಿಳಿಯಿರಿ. ಆತನು ಹಸಿವು ತೃಷೆಗಳ ಬಾಧೆ, ಆಲಸ್ಯದ ಬಾಧೆ ಶೀತೋಷ್ಣದ ಬಾಧೆ ಮೃದು ಕರುಣದ ಬಾಧೆ, ಭಯ ಶೋಕದ ಬಾಧೆ, ಸುಖ ಸಂತೋಷದ ಬಾಧೆಗೆ ಒಳಗಾಗದೆ ಇರುವನು. ಇನ್ನು ಮೇಲೆ ನಾನು ಹೋಗುವೆನು. ಅಮ್ಮ ಚ್ಯಾಮಲದೇವಿ, ಅಮ್ಮಾ ಸಖಿ ಮಹನೀಯಳೆ, ಸುಗ್ಗಲಮ್ಮಾ ನಿಮಗೆ ಕಲ್ಯಾಣವಾಗಲಿ, ಆತನ ನಾಮ ಮಾತ್ರ ಸಿದ್ಧರಾಮನೆಂದು ಮರೆಯದೆ ಇಡಿರಿ.

ಎಲ್ಲರೂ : ಮಹನೀಯಾ ತಮ್ಮ ಆಜ್ಞಾನುಸಾರ ನಡೆಯುವೆವು. ಹೋಗಿ ಬನ್ನಿರಿ (ಎಂದು ನಮಿಸುವರು).

ರೇವಣಸಿದ್ಧೇಶ್ವರ : ಸೌಭಾಗ್ಯವತಿಭವ (ಎಂದು ಆಶೀರ್ವದಿಸಿ).ಶೀಷ್ಯೋತ್ತಮಾ ನಡೆ ಹೋಗುವಾ.

ಶಿಷ್ಯ : ಅಪ್ಪಣೆ (ಎಂದು ಪದ ಅನ್ನುತ್ತ ಹೋಗುವರು).

೧ನೇ ಸಖಿ : ಅಕ್ಕಾ ಚಾಮಲದೇವಿಯರೆ ಕೇಳಿದಿರಾ ಅವರು ಅಂದ ಮಾತು ಒಣಗಿದ ಮರವು ಚಿಗಿಯುತ್ತದೆಂಬಂತೆ ಹೇಳಿ ಹೋದನಲ್ಲಾ.

೨ನೇ ಚಾಮಲಾದೇವಿ : ಅವ್ವಾ ಆ ಮಾತು ನಮಗೇನು ಗುರ್ತು ? ಪಕ್ವ ಫಲವು ಉದುರುವಾಗ್ಗೆ ಪಿತ್ತ ಫಲವು ನಗುವಂತೆ ಮಾತನಾಡುವಿರಿ. ಪಶ್ಚಿಮ ದಿಕ್ಕಿಗೆ ಸೂರ್ಯನು ಉದ್ಯೆಸುವನೆಂದುದಿಲ್ಲಾ. ಪರ್ವತಗಳು ನಡಿಯುವುದಿಲ್ಲಾ. ಅಗ್ನಿ ಹತ್ತಿರ ಕಮಲಗಳು ಅರಳುವುದಿಲ್ಲಾ. ಇಂಥಾ ವಿಷಯಗಳು ಪಲ್ಲಟವಾದವು. ಸತ್ಪುರುಷರು ಕೃಪೆಗೊಂಡು ಕೊಟ್ಟ ವಚನವು ಪಲ್ಲಟವಾಗುವುದುಂಟೆ ? ಇಂದೆಂದಿಗೂ ಸುಳ್ಳೆನ್ನತಕ್ಕದ್ದಲ್ಲಾ.

೧ನೇ ಸಖಿ : ಅಮ್ಮಾ ನಡಿಯಿರಿ ಹೋಗುವಾ. ಹುಟ್ಟಿದಂದಿಗೆ ನೋಡುವಾ. ನಮ್ಮ ರಾಯರು ರೋಷಗೊಂಡಾರು. ನಾವೆಲ್ಲರೂ ಕೂತು ಬಹಳ ಹೊತ್ತಾಯಿತು. ಸುಗ್ಗಲದೇವಿ ಹೋಗಿ ಬರುತ್ತೇವೆ.

ಸುಗ್ಗಲದೇವಿ : ಅಮ್ಮಾ ಬಹಳ ಹೊತ್ತಾಯಿತು. ಹೋಗಿ ಬನ್ನಿರಿ.

ಸಖಿಯರು : ಅಮ್ಮಾ ನಿಮ್ಮಾಜ್ಞೆ (ಎಂದು ಹೋಗುವರು. ಮುದ್ದುಗೌಡ ಕೋಲು ಊರುತ್ತ ಬಂದು ನೋಡಿ).

ಮುದ್ದುಗೌಡ : **ಪದ**

ಯಾಕೆ ಚಿಂತೆ ವ್ಯಾಕುಲವು । ಏನಿದು ಕಾಂತೆ ।
ಯಾರೇನೆಂದರು । ಆವದು ಕೊರತೆ । ಸಾರೆಲೆ ಬೇಗಸ ।
ಸರಸನೇತ್ರೆ ದೂರಗೈ ವನಿತೆ । ವ್ಯಾಕುಲವ ಏನಿದು ? ॥ ೧ ॥

ಸುಗ್ಗಲದೇವಿ .... ತನಯರಿಲ್ಲದೆ ಆಗದೀ ದುಃಖ ದೂರ. ಹರಿಸುರ ಬ್ರಹ್ಮೇಂದ್ರಾದಿಗಳಿಗೆ ದುಃಖ ದೂರಾ

ಮುದ್ದುಗೌಡ : ಗುರುಮುಖ ಮಂತ್ರದಿಂದಾಗದೆ ದುಃಖ ದೂರಾ, ಕುವರನು ಹುಟ್ಟಿ ತಾ ಮಾಡನೆ ದುಃಖ ದೂರಾ.

ಸುಗ್ಗಲದೇವಿ : ವರ ತನುಜಾತರಿಲ್ಲದೆ ನಾ ಪರಿ ಪರಿ ಸಂಭ್ರಮ ಅರಿಯೆನು. ಪ್ರಿಯಾ ಸ್ಥಿರವಿಲ್ಲದ ಕಾಯಾ ಹೋಗುವುದು ವ್ಯರ್ಥ ಮಹಾರಾಯ. ಪ್ರಿಯಾ ಇದರ ಹೊರ್ತು ಮತ್ತೇನು ?

ಮುದ್ದುಗೌಡ : ಇರಲಿ ಸಖಿಯೆ ನೀವು ಮೌನವ್ಯಾಕೆ ಧರಿಸಿರುವಿರಿ ? ನಿಸ್ಸಂಶಯವಾಗಿ ಹೇಳಿರಿ.

ಸುಗ್ಗಲದೇವಿ : ಛೇ ಛೇ ಪ್ರಿಯಾ ಹಾಗೇನಿಲ್ಲವು. ಸ್ವಲ್ಪ ಶಯನ ಬಹಳವಾಗಿ ವಿಶ್ರಾಂತಿ ಪಟ್ಟಿದ್ದೆ. ಅಷ್ಟರಲ್ಲಿ ತಾವು ಬಂದಿರುವಿರಿ. ನನಗೆ ಇವತ್ತು ಬಹಳೆ ಆನಂದ ಹೊರ್ತು ವ್ಯಸನವಿಲ್ಲಾ.

ಮುದ್ದುಗೌಡ : ಸಂತೋಷವೇನು ?

ಸುಗ್ಗಲದೇವಿ : ಇವತ್ತು ಪ್ರಾತಃಕಾಲದಲ್ಲಿ ಓರ್ವ ರೇವಣಸಿದ್ಧೇಶ್ವರನೆಂಬು ಗಣಾಧೀಶನು ಶಿಷ್ಯರೊಡನೆ ಬಂದಿದ್ದನು. ಆತನು ನನ್ನ ಈ ಉದರಕ್ಕೆ ಮುಟ್ಟಿ ನಮಿಸಿದನು.

ಮುದ್ದುಗೌಡ : ಏನು ಕಾರಣ ?

ಸುಗ್ಗಲದೇವಿ : ನಮ್ಮ ಉದರದಿಂದೆ ಶಿವಯೋಗಿ ಹುಟ್ಟುವನಂತೆ. ಆತನಿಂದೆ ನಾವು ಧನ್ಯರಾಗುವೆವಂತೆ ಹೇಳಿ ಆಶೀರ್ವಾದ ಮಾಡಿ ಹೋದನು. ಆತನಿಗೆ ನಾಮ ಮಾತ್ರ ಸಿದ್ಧರಾಮನೆಂದು ಇಡಬೇಕೆಂದು ನಿಶ್ಚಯ ಹೇಳಿ ಹೋದರು.

ಮುದ್ದುಗೌಡ : ಪದ

ಮಮ ರಮಣಿ ಬಿಡು ಬಿಡು ಚಿಂತಿಯಾ ।
ಹರುಷಾಬ್ಧಿಯೊಳು ಮುಳುಗೆ । ಕಾಣು ಬೇಗೆ ।
ಪ್ರಿಯೆ ಕುವರನ ಚಿಂತೆ ಬಿಡು ಸಂಶಯಾ ॥ ೧ ॥
ಶ್ರಮವಿಲ್ಲಗೆ ಪರಿಹರಿಪುದು ಸಾರುತೆ ನೋಡುತೆ
ಶಿವ ಅನುರಾಗವಾ ಮಮರಮಣಿಯೆ ॥ ೨ ॥

ಪ್ರಿಯೆ ಇವತ್ತು ನನ್ನ ಉಮೇದವು ಎಷ್ಟೆಂದು ವರ್ಣಿಸಲು ಅಸಾಧ್ಯವಾಗಿರುವುದು.

ಸುಗ್ಗಲದೇವಿ : ಪ್ರಿಯಾ ನಿಮಗೆ ಸಂತೋಷದ ಚಿನ್ಹವು ಈಗೇನು ತೋರಿತು ? ಇನ್ನು ಸ್ವಲ್ಪು ಆಲಿಸಿ ಕೇಳಿರಿ. ಪ್ರಿಯಾ ಗಣಂಗಳ ವಾಕ್ಯಾವು ದಿಟವೆ ಆದರೆ ನಾವು ಕಣ್ಣಾರೆ ನೋಡಿದಾಗಲೆ ಹರುಷವಲ್ಲವೆ ?

ಮುದ್ದುಗೌಡ : ಅಹಾ ಪ್ರಿಯೆ ! ಈಗಲೇ ಹರುಷವೆಂದೇ ತಿಳಿಯಬೇಕು. ಯಾಕೆಂದರೆ ಆ ಸದ್ಗುರವಾದ ರೇವಣಾರ್ಯರ ಆಶೀರ್ವಾದೋಕ್ತಿಗಳು ಕೇಳಿದಾಗಲೇ ಏಕೆ ಎಲ್ಲಾ ನಮ್ಮ ಕಂಟಕಗಳು ನಿವೃತ್ತಿಯಾಗಿ ಹೋಗಿ, ಅವರ ನುಡಿಯೆ ನಿಶ್ಚಯವಾಗುವುದು. ಆಮೇಲೆ ನಮಗೆ ಆನಂದವೆ ಸರಿ. ಆದರೆ ಗಣಾರಾಧನೆಯೇನಾದರೂ ಹೇಳಿರುವರೇನು?

ಸುಗ್ಗಲಾದೇವಿ :ಪ್ರಿಯಾ ಅದೇನೂ ಹೇಳಲಿಲ್ಲಾ. ಇಷ್ಟೇ ಆಶೀರ್ವಾದ ಮಾಡಿ ಹೋದರು.

ಮುದ್ದುಗೌಡ :ಪ್ರಿಯೆ ಅವರು ಹೇಳದಿದ್ದರೂ ಇಲ್ಲ. ನಮ್ಮ ಯೋಗ್ಯತಾನುಸಾರವಾಗಿ ಗಣಾರಾಧನೆ ಮಾಡುತ್ತಾ ಶಿವಧ್ಯಾನ ತತ್ಪರರಾಗಿರುವಾ ನಡೆ.

ಸುಗ್ಗಲಾದೇವಿ : ಆಜ್ಞೆ (ಎಂದು ಪದ ಅನ್ನುತ್ತಾ ಹೋಗುವರು).

ಪ್ರಥಮಾಂಕ ಸಮಾಪ್ತವಾದುದು.

===***=====***===

ದ್ವಿತೀಯಾಂಕ ಪ್ರಾರಂಭವಾಗುವುದು.

ಈಶ್ವರ : (ಸೀನ್ ಪರಮೇಶ್ವರನ ಸಭಾ)

ಪದ

ಯಾಕೆ ಮಾತುಗಳಾಡದಿರುವಿ । ಲೋಕಮಾತೆಯೆ
ಸಾಧ್ವಿ ಮಣಿಯೆ ॥ ಪ ॥
ಶ್ರೀಕರಿ ನಿನಗ್ಯಾಕೆ ಚಿಂತೆಯು ।
ಪಾಕ ಮಾನಸದಿಂದಿರ್ಪುದು ।
ಎಂದಿಗೂ ಇಲ್ಲದೆ ಗಾಂಧರ್ವರೀರ್ವರು ।
ಛಂದ ಛಂದದಿ ಆನಂದದಿ ಮಾಳ್ಪರು ।
ಸುಂದರಾಂಗಿಯೆ ಮುದವಾಗಿ ನಿಂದು ।
ಅರಿಯೆ ಪೇಳು ನೀ ಬೇಗನೆ ॥ ೧ ॥

ಅಹಾ ಪಾರ್ವತಿಯೆ ಆ ಈರ್ವರು ಗಂಧರ್ವರ ಭೂಲೋಕಕೆ ಕಳುಹಿಸಿ ಬಹಳ ದಿವಸವಾದವು. ಅವರು ಈಗ ನನ್ನ ಧ್ಯಾನಾಸಕ್ತ ಸ್ತವನಾದಿಗಳಂ ಮಾಡುತ್ತ ಹತ್ತಿರದಲ್ಲೆ ಇರುವರು. ಆದರೆ ಮುಂದೆ ಏನು ಆಲೋಚನೆ ತಿಳಿಯದು ಹೇಳು. ಸುಮ್ಮನೆ ಯಾತಕ್ಕೆ ಆಲೋಚನೆ ?

ಪಾರ್ವತಿ : ಪ್ರಿಯಾ ಕೇಳರಿ.

ಪದ

ನರರತಿಶಯಾ ಪ್ರಬಲಾ ॥ ಪ ॥
ನೀಚ ಕೃತ್ಯದಿ ಲಾಂಛನಗೊಂಡು ।
ಭೇದಿಪರೊ ಸ್ವ ಕುಲಾ ॥ ೧ ॥
ಬ್ಯಾಡೊ ಬ್ಯಾಡೊ ಈ ರೂಢಿಯೊಳಗೆ
ಕೇಡು ಬಹಿಪೆಪೆನೀಗಾ ॥ ೨ ॥

ಆಹಾ ಜಗತ್ಪಾಲಕನಾದ ಶಂಭುವೆ ಯಾವತ್ಕಾಲದಲ್ಲಿ ನಿನ್ನ ಜನ್ಮವು ಇದರಲ್ಲಿಯೆ ಹೋಯಿತು. ಮೇಲೆ ಮೇಲೆ ನಿಮಿಷ ನಿಮಿಷದಲ್ಲಿಯೆ

ಭಕ್ತರು ಭಕ್ತರು ಎಂದು ಹೀಗೆ ನೆನಪು ಮಾಡುವಿರಿ. ಭಕ್ತರು ನಿನಗೇನು ಕೊಡುವರು ? ಸರ್ವಕಾಲದಲ್ಲಿ ತಮ್ಮ ತಮ್ಮ ಸತಿ ಪುತ್ರರು ಚೆನ್ನಾಗಿರಲೆಂದು ಪೀಡಿತರಾಗಬಾರದೆಂದು ತಾವು ಸದಾ ಸೌರಕ್ಷಕರು ಆಗಿರಬೇಕೆಂದು ನಿನ್ನ ಸ್ತವನ ಮಾತ್ರ ಮಾಡುವರು. ಅಷ್ಟಕ್ಕೆ ನೀವು ಬೆರಗಾಗಿ ಭಕ್ತರೆನ್ನುವಿರಿ. ಮೇಲೆ ಕಷ್ಟಪಡುವಿರಿ. ಅವರು ನಿಮಗೆ ಕೊಡುವುದೇನು ಭಕ್ತಿಯಿಂದ ಹೇಳಿರಿ ? ಮೇಲೆ ಬಿದ್ದು ಮಾತ್ರ ಹೊಡಿವರು ಅಲ್ಲವೆ ? ಆ ರಾಕ್ಷಸ ಸ್ವರೂಪಿಯಾದ ಅರ್ಜುನನು ನಿಮಗೆ ಬಿಲ್ಲಿನಿಂದ ಹೊಡಿದು ಅಂಗವೆಲ್ಲ ತೂತು ಮಾಡಿದನು.ಆ ಬ್ಯಾಡನಾದ ಕಣ್ಣಪ್ಪನು ಪಾದರಕ್ಷೆಯಿಂದ ಒದ್ದನು. ಶಂಕಿ ತೊಂಡಿಯು ಕಲ್ಲುಗಳಿಂದ ಹೊಡಿದರು. ಸೌಂದರನೆಂಬುವನು ಕುಂಟಣಿತನಕ್ಕೆ ಹಚ್ಚಿದನು. ಜೂಜಿ ಮಚುತನು ಜೂಜಿನಲ್ಲಿ ಸೋಲಿಸಿ ಗಿಡಕ್ಕೆ ಕಟ್ಟಿ ಬಡಿದನು. ಆವಾಗ್ಗೆ ಯಾವನಾದರೂ ಒಬ್ಬ ಭಕ್ತನು ಬಂದು ನಿಮ್ಮ ಸಂಕಟವನ್ನು ದೂರ ಮಾಡಿದನೆ ? ಸುಮ್ಮನೆ ನಿಮಗೆ ಯಾತಕ್ಕೆ ಭಕ್ತರ ಭಾಂತಿಯು? ಭಕ್ತರ ಭ್ರಾಂತಿ ಹಿಡಿದು ವ್ಯರ್ಥ ಪುಣ್ಯಾವ ಕಡಿಮೆ ಮಾಡಿಕೊಳ್ಳಬೇಡಿರಿ. ಇಷ್ಟಾದರೂ ನಿಮಗೆ ಸ್ವಲ್ಪದರೂ ಚಿಂತೆ ಕಾಣುವದಿಲ್ಲವಲ್ಲಾ ! ಛೇ ಬಿಡಿ ಬಿಡಿರಿ ಯಾತಕೆ ನಗುವಿರಿ ? (ಎಂದು ಮೂಗು ಮುರಿವಳು).

ಈಶ್ವರ : ಛೇ ಛೇ ಭುವನ ಸುಂದರಿಯಾದ ಪಾರ್ವತಿಯೆ ನಮ್ಮ ವಾ ಕ್ಯವು ಹೀಗಿರುವುದು ಕೇಳು. ನಾವು ಸುಳ್ಳಾಡುವುದಕ್ಕೆ ಬರುವದಿಲ್ಲಾ. ಯಾಕೆಂದರೆ ಷಣ್ಮುಖನಿಗೆ, ವೀರಭದ್ರನಿಗೆ, ಗಜಾನನನಿಗೆ ಮೊದಲಾದ ನಿನ್ನ ಮಕ್ಕಳ ಮೇಲೆ ಸಂಕಷ್ಟ ಬಂದರೆ ಸ್ಮುಮ್ಮನೆ ಕೂಡುವಿಯಾ ಹ್ಯಾಗೆ ಹೇಳು ? ಯಾಕೆ ಗಪ್ಪಾದಿಯೆ ? ನಿನ್ನ ಮಕ್ಕಳ ಮೇಲೆ ನೀನು ಹ್ಯಾಗೆ ಪ್ರೇಮವಾಗಿರುವಿಯೊ ಹಾಗೆ ನನ್ನ ಮಕ್ಕಳ ಮೇಲೆ ನಾನು ಪ್ರೇಮವಾಗಿರುವೆನು. ಹಾಗೆ ಯೋಗದಿಂದೆ ಧರ್ಮದಿಂದೆ ತಪಶ್ಚರ್ಯದಿಂದೆ, ವಿದ್ಯೆಯಿಂದೆ ನಾನು ಸಾಧ್ಯವಾಗುವವನಲ್ಲಾ. ನನಗೆ ಭಕ್ತಿಯೆ ಶ್ರೇಷ್ಠವಾದುದು. ಭಕ್ತಿಯೆ ನನಗೆ ಆಶ್ರಯಸ್ಥಾನವು. ಭಕ್ತರೆಂದರೆ ದಾನ ಧರ್ಮ ಪರೋಪಕಾರ ಇತ್ಯಾದಿ ಮೊದಲಾದ ಇಂಥಾ ಕಾರ್ಯಗಳನ್ನು ಮಾಡುತ್ತಾ, ನಿಸ್ಸಂಶಯರಾಗಿರುವ ನಿಜ ಭಕ್ತರ ಅಂಗಳವೆ ನನ್ನ ಕೈಲಾಸ ಸ್ಥಾನವು. ಅಂಥ ಭಕ್ತರ ಭಾಷಣಗಳೆ ನನಗೆ ಪಂಚಾಕ್ಷರಿ ಮಂತ್ರವು. ಅಂಥಾ ಭಕ್ತನು ನನಗೆ ಶಿವನು ಆತನಿಗೆ ನಾನು ಶಿವನು. ಹೀಗಿದ್ದ ನನ್ನ ವಾಕ್ಯಕೆ ಎಂದಿಗೂ ಭಂಗ ತಂದುಕೊಳ್ಳಲಾರೆನು. ನೀನು ಸುಮ್ಮನೆ ವಾದ ವಿವಾದವನ್ನು ಬೆಳೆಸಬೇಡ.

ಪದ

ಸಖಿಯೆ ಹಸಿತ ಮುಖಕರಿ
ಶಾಂತಿ ಸುಸುಂದರಿ ।
ಸಖಿಯೆ ಹಸಿತ ಸುಂದರಿ

ಪಾರ್ವತಿ : ಇವೇನುವನ್ನೂ ಅಂತರದಿ ಪ್ರಕಟವನ್ನು ಅರಿಯೆ. ನೀ ಸಖನೆ ಹಸಿತ.

ಈಶ್ವರ : ವ್ಯರ್ಥವ್ಯಾಕೆ ಕೋಪ ತೋರ್ವಿ ? ಭ್ರಾಂತಿ ಇದು ನೀ ಅರಿ ಸಖಿಯೆ.

ಪಾರ್ವತಿ : ಸಾಕು ಸಾಕು ಭಕ್ತಿಯ ದಾರಿ.

ಈಶ್ವರ : ಬೇಕು ಬೇಕು ಭಕ್ತಿಯ ದಾರಿ. ಪತಿ ವಿಹಾರಿ.

ಪಾರ್ವತಿ : ಆಗಲೂ ಪೂರಾ.

ಈಶ್ವರ : ನಿಮ್ಮಾತ್ಮರಾ.

ಪಾರ್ವತಿ : ನಡಿ ಹಿಡಿದು ಸರ ಸರ ಸುಮಾರ್ಗ ಬಹುಸುಖದೋರಿ! ಬಹುಸುಖದೋರಿ.

ಈಶ್ವರ : ಎನ್ನ ಸಖಿಯೆ ಹಸಿತ ಮುಖಕರಿ ಶಾಂತಿ ಸುಸುಂದರಿಯೆ, ಎನ್ನ ಮಡದಿ ರತ್ನವೆ ಭಕ್ತಸ್ಥಲವು ಈ ಪರಿಯಾಗಿರುವುದು ಕೇಳಿದೆಯಾ ?

ಪಾರ್ವತಿ : ಭಕ್ತವತ್ಸಲಾ ನಿನಗೆ ಅವರು ಶಿವನಾದರೆ ಅಂಥ ಭಕ್ತನು ವಿಶ್ವ ಕರ್ತನೆ ಅವರು ಸೌರಕ್ಷಣಾಧಿಪತಿಗಳೆ. ಬ್ರಹ್ಮ ವಿಷ್ಣು ಆದಿ ದೇವತೆಗಳಿಗಿಂತಲೂ ಅವರು ನಿನಗೆ ಪ್ರೀತಿ ಪಾತ್ರರೆ ? ನೀವು ಮೂವರೂ ಒಂದೇ ವರ್ಗದಲ್ಲಿದ್ದು, ಹಾಗೆ ಅವರ ಪ್ರೀತಿ ನಿಮ್ಮ ಮೇಲೆ ಇಲ್ಲಾ. ಯಾರ ಭಕ್ತರು ? ಯಾರ ಶಿವನು ? ಸಂಕಟ ಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯವಾಗಲರಿಯರು. ಅಗಸ್ತ್ಯ ಮಹಾ ಮುನಿಯು ಸಪ್ತಸಮುದ್ರಗಳ ಆಪೋಶನ ಮಾಡುವಾಗ್ಗೆ ಮಗನಾದ ಚಂದ್ರನು ತಾನು ಸಮುದ್ರಾಧಿಪತಿಯಾಗಿ ಆತನ ಸಂಕಟವನ್ನು ನಿವಾರಿಸಿದನೆ ? ಮತ್ತು ಆ ಚಂದ್ರನಿಗೆ ರಾಹು ಹಿಡಿದು ದುಡಕುವಾಗೆ ಯಾರಾದರೂ ರಕ್ಷಿಸಿದರೆ ? ಹೇಳಿರಿ. ಒಬ್ಬರಿಗೊಬ್ಬರು ಇಲ್ಲಿ ನೀವು ಇಂಥಾ ಸತ್ಯ ವಚನದ ವರ

ನೀತಿಯು ಹೀಗಿದ್ದ ಮೇಲೆ, ಭೂಲೋಕದ ಮಾನವರು ಸಾಯುವಾಗ ಅವರು ಗಳಿಸಿದ ಧನವು ಮನಿಯಲ್ಲಿ ಅವರ ಹೆಂಡಿರು ಗಂಡನಿಗೆ. ನಿಕ್ಷೇಪ ಕಾಲಕ್ಕೆ ಅವರು ಮನೆ ಹೊರಗೆ ಬರಲಾರರು. ಸಾಧ್ಯವಾದ ದನಗಳು ಕೊಟ್ಟಿಗೆಯಲ್ಲಿ, ಮಿತ್ರರು ರುದ್ರಭೂಮಿತನಕಲು ಮಾತ್ರ ಬರುವರು. ಯಾರು ಒಬ್ಬರಿಗೊಬ್ಬರು ಸಾಧ್ಯವಿಲ್ಲಾ. ನಮಗ್ಯಾರು ಸಹಾಯವಾಗುವರು ? ವ್ಯರ್ಥ ಭಕ್ತರಾಸೆಯ ಬಿಟ್ಟುಬಿಡಿರಿ.

ಈಶ್ವರ : ಪಾರ್ವತಿಯೆ ನಮಗೆ ಆಶ್ರಯವಾದ ಗಿಡವನ್ನು ನಮಗೆ ಕಡಿಯುವುದಕ್ಕೆ ಬರುವುದೆ ? ನೀನು ಎಂಥಾ ಹುಚ್ಚಿ ಈ ಬ್ರಹ್ಮಾಂಡಲೀಲಾ ಮಾಡಿದವರು ನಾವೆಹೊರ್ತು ನಮಗೆ ಕೆಡಿಸುವುದಾದೀತೇ? ಎಂದಿಗೂ ಆಗದು. ಪತಿಯೆ ಪರದೈವವೆಂದು ತಿಳಿದ ನಿನಗೆ ನಾನು ಗುರು ಸ್ವರೂಪವೆಂಬುವ ಮರ್ಮ ಮರೆತು ಮಾತಾಡುವಿಯಾ ? ಉಪಾಯವಿಲ್ಲಾ. ದೇವ– ಭಕ್ತರು ಒಂದೆ ಸ್ವರೂಪವು. ನೀನು ಭೇದ ಮಾಡುವುದು ಯುಕ್ತವಲ್ಲಾ.

ಪಾರ್ವತಿ : (ಶಾಂತಿಯಿಂದ) ತಥಾಸ್ತು ಪ್ರಾಣರತ್ನಾ ತಪ್ಪಾಯಿತು. ನೀನು ಭಕ್ತವತ್ಸಲನು. ಆದ್ದರಿಂದ ನನ್ನ ತಪ್ಪುಗಳನ್ನು ಕ್ಷಮಿಸಿ ಆ ಗಂಧರ್ವರಿಗೆ ಕೊಟ್ಟಿರುವ ವಚನವನ್ನು ಸಾರ್ಥಕ ಮಾಡಿ, ಪೂರ್ಣಗೊಳಿಸಿ, ಭಕ್ತವತ್ಸಲನೆಂಬ ನಿಮ್ಮ ಬಿರಿದು ಸಾರ್ಥಕ ಮಾಡಿಕೊಳ್ಳಿರಿ.

ಈಶ್ವರ : ಪಾರ್ವತಿಯೆ ಹಾಗಾದರೆ ಇಲ್ಲಿ ಕೇಳು ನಾನು ನನ್ನಲ್ಲಿರುವ ಉತ್ತಮವಾಗಿರುವ ಗುಣಗಳನ್ನೆಲ್ಲ ತೆಗೆದು ಒಂದು ಗೊಂಬಿ ಮಾಡಿ ಅದಕ್ಕೆ ನನ್ನ ಸಾಮರ್ಥ್ಯವನ್ನು ನೀಡಿ ಸಜೀವ ಮಾಡಿ ಆ ಸೊಲ್ಲಿಗೆಯೆಂಬೊ ಹಳ್ಳಿಯಲ್ಲಿ ಮುದ್ದುಗೌಡ ಸುಗ್ಗಲಿಯೆಂಬೊ ನಾಮ ತಾಳಿದಾ ಆ ಗಂಧರ್ವರ ಮಗ್ಗುಲಲ್ಲಿ ಆ ಬೊಂಬೆ ಇಟ್ಟು ಆಶೀರ್ವಾದ ಮಾಡಿ ಬಂದಿರುವೆನು. ನೀನು ಹೋಗಿ ಸ್ತನಪಾನ ಮಾಡಿಸಿ ಅವರರಿಯದಂತೆ ಬಾ. ಹೋಗಿ ಬಾ.

ಪಾರ್ವತಿ : ತಮ್ಮಾಜ್ಞೆ (ಎಂದು ಹೋಗುವ ಸೀನ್. ಸುಗ್ಗಲದೇವಿಯ ಮನೆ. ಕೂಸು ಆಡುತ್ತ ಮಲಗಿರಬೇಕು.)

ಜೋಗುಳ ಪದ

(ಲಕ್ಷ್ಮಿ ಪಾರ್ವತಿ ಕೈ ತೊಟ್ಟಿಲ ಮಾಡಿ)

ಶಿವಸಿದ್ಧರಾಮ ರಾಮನು ಈತಾ।
ವಿಶ್ವಮಾತಾ ಪಿಶ್ವ ಪಿತಾ ॥ ಪ ॥
ದುರಿತ ವಿನೋದವನುಧಿರವು ಪಾರನು
ಸ್ಮರಿಸಲು ಈತನು । ಪರಿಪರಿ ಕಾವನು
ಪುರಹರ ಮುಕ್ತಿಯ ಕಾಂತಾ ಜೋ ॥ ೧ ॥
ದಾನವಿನೋದನು । ಶಿವ ಮತೋದ್ಧಾರನು
ಭವಸಾಗರವನು । ದಾಂಟಿಸಿ ಬಿಡುವನು
ಗುರುವರ ಮುಕ್ತಿಯ ಕಾಂತಾ ಶಿವ ಜೋ ॥ ೨ ॥

ತಂಗಿ ಲಕ್ಷ್ಮಿಯೆ ಸ್ತನಪಾನ ಮಾಡಿಸಲ್ಯಾ ಹ್ಯಾಗೆ ?

ಲಕ್ಷ್ಮಿ : ಅಕ್ಕಾ ಪಾರ್ವತಿ ಈ ತೇಜಃಪುಂಜನಾಗಿದ್ದ ಧರ್ಮ ಪುತ್ಥಳಿ, ಅನ್ನಪೂರ್ಣ ಮೌಕ್ತಿಕದಂಬುವ ಗುಚ್ಛದಂತೆ ಮೀರಿ ಶೋಭಿಸುವಾ ಈ ಶಿಶುವಿಗೆ ಕೈತೊಟ್ಟಿಲ ಮಾಡಿ ಹಾಡಿದೆವು. ನೀನು ಇನ್ನು ಸಿದ್ಧರಾಮನೆಂದು ಹೆಸರಿಟ್ಟು ಸುಭೋದವನ್ನು ಭೋದಿಸಿ ಬರತಕ್ಕದ್ದು. ನಾವಿನ್ನು ತೆರಳುತ್ತೇವೆ.

ಪಾರ್ವತಿ : ಹಾಗೇ ಆಗಲಿ ದೇವಗನ್ನಕಿಯರೇ ನೀವು ತೆರಳಿರಿ. ಆಮೇಲೆ ನಾನು ಬರುವೆನು.

ಲಕ್ಷ್ಮಿ : ಆಜ್ಞಾ (ಎಂದು ನಾಲ್ವರೂ ಹೋಗುವರು).

ಪಾರ್ವತಿ : ಅಹಾ ಮಗನೆ ನನ್ನ ಪುರುಷನ ಸಾಮರ್ಥ್ಯವು ನಿನಗುಂಟಾಗಿದೆಯಲ್ಲಾ. ಇರಲಿ ಸ್ತನಪಾನ ಮಾಡು. ನಿತ್ಯ ತೃಪ್ತನೆ ನಿನಗೆ ನಾನು ಅಮೃತಪಾನ ಮಾಡಿಸುವೆನು. ಸಿದ್ಧರಾಮ ಶಿವಸಿದ್ಧರಾಮಾ ಇಕೊ ಸುಗ್ಗಲಿದೇವಿಯೆ ಈ ಬಾಲಕನಿಗೆ ನೀವಾದರೂ ಸಿದ್ಧರಾಮನೆಂದು ಹೆಸರಿಡಿರಿ. ಶಿಸುವು ಲೌಕಿಕ ಮಾನವರಂತೆ ಅಲ್ಲ. ಈತನು ನಗನು, ಅಳನು ನಿದ್ರಿಸನು, ಆಕಳಿಸನು, ಯಾವುದೊಂದು ವಿಕಾರವೆ ಇಲ್ಲಾ. ಕೇಳಿದಿಯಾ, ನೋಡು ಬಲು ಎಚ್ಚರದಿಂದ ತಿಳಿ. ಈ ನಿತ್ಯ ತೃಪ್ತನಿಗೆ ಸಿದ್ಧರಾಮಾ ಶಿವಸಿದ್ಧರಾಮ ಎಂದು ಮರಿಯದೆ ಹೆಸರಿಡಿರಿ. ನಾನಿನ್ನು ತೆರಳುತ್ತೇನೆ (ಎಂದು ಹೋಗುವಳು. ಕೂಸು ಆಡುತ್ತ ಮಲಗುವುದು. ಸುಗ್ಗಲದೇವಿ ಎಚ್ಚರವಾಗುವಳು).

ಸುಗ್ಗಲದೇವಿ : ಹಾ ! ಶಿವ ಶಿವಾ ! ಗುರು ಸಮರ್ಥನೆ, ಅವ್ವಾ ಇದು ಎಂಥಾ ಚಮತ್ಕಾರವು ಆಯಾಸ ಕೊಡದೆ ನನ್ನ ಮಗ್ಗುಲಲ್ಲಿ ಈ ತೇಜಃಪುಂಜನಾದ ಶಿಸುವೆ ಕಾಣುವುದಲ್ಲಾ. ಅಹಾ ! ಬಾಲಕನೆ ನನ್ನ ಜನ್ಮ ಸಾರ್ಥಕಗೊಳಿಸಿದೆಯಾ. ನಮ್ಮ ಕುಲ ಪವಿತ್ರ ಮಾಡಿದೆಯಾ. ನನ್ನ ರಾಜ ಹಂಸವೆ ನನ್ನ ಕುಲದೀಪವೆ ನನ್ನ ತನುವೆಂಬ ಕಾಸಾರಕೆ ನೀನು ಶಿಸುವಾದಿಯಾ. ಮಗುವೆ ನಿನ್ನಿಂದ ನಾವು ದರಿದ್ರರ್‍ಹೋಗಿ ಧನ್ಯರಾದೆವು. ಮಗುವೆ ಒಂದು ಮುದ್ದು ಕೊಡು. ಅಮ್ಮಾ ಸಖಿಯರೆ ಏಳಿರಿ ಎಲ್ಯೆ ನಾಗಭೂಷಣನೆ ನೀನು ಹೋಗಿ ಚ್ಯಾಮಲದೇವಿಯನ್ನು ಕರೆದುಕೊಂಡು ಬಾ.

ನಾಗಭೂಷಣ : ತಾಯಿ ಬಾಯಿ ಸಾಹೇಬಳೆ ಹಾಗೆ ಆಗಲಿ (ಎಂದು ಹೋಗುವನು. ಸಖಿಯರೆದ್ದು ಕೂಡುವರು)

೨ನೇ ಚ್ಯಾಮಲದೇವಿ : ಅಮ್ಮಾ ಸುಗ್ಗಲಮ್ಮ ಯಾಕೆ ಕರೆಯುವಿರಿ. ತಾಯಿ ಸುಮ್ಮನೆ ಏನು ಕೆಲಸವಿರುವುದು?

ಸುಗ್ಗಲದೇವಿ : ಅಮ್ಮಾ ಇಕೊ ನೋಡಿದಿಯಾ ಮಗ್ಗಲದಲ್ಲಿ ಕಂದನು ಮಲಗಿರುವನು (ಎಂದು ತೋರಿಸುವಳು).

ಚ್ಯಾಮಲದೇವಿ : ಏನು! ಏನು ಕಂದನಾಗಿದ್ದಾನೆಯೆ ?

ಸುಗ್ಗಲದೇವಿ : ಹೌದ್ಹೌದಮ್ಮಾ.

ಚ್ಯಾಮಲದೇವಿ : ಹ್ಯೆ ಅಕಾಯನೇನಾಯಿತು ? ಬೇನೆ ಸಂಕಟವಾದಾಗ್ಯೆ ನನ್ನನ್ನು ಕರಿಸಲಿಕ್ಕಿಲ್ಲವೆ ?

ಸುಗ್ಗಲದೇವಿ : ಛೇ ತಾಯಿ ಬೇನೆ ಇಲ್ಲಾ. ಬೇಸರಿಕೆ ಇಲ್ಲಾ. ದುಃಖವಿಲ್ಲ. ದುರ್ಗಂಧವಿಲ್ಲಾ. ಏನೂ ಇಲ್ಲದೆ ಬಸುರು ಭಾರವು ಕಡಿಮೆಯಾಗಿರುವುದು ಮಗನೆ ಜನಿಸಿರುವನು ನೋಡಿರಿ.

೧ನೇ ಸಖಿ : (ಕೂಸಿನ ತೆಕ್ಕೊಂಡು) ಅಯ್ಯೊ ನಿರ್ಜೀವವಾಗಿದೆ.

೨ನೇ ಚ್ಯಾಮಲದೇವಿ : ಹೌದು ಜೀವವೆ ಇಲ್ಲ.

ಚ್ಯಾಮಲದೇವಿ : ಸಖಿಯರೆ ಹೊಟ್ಟೆ ಮೇಲೆ ಮೂಗಿನ ಮೇಲೆ ಕ್ಯೆ ಇಟ್ಟು ನೋಡಿರಿ, ಉಸಿರಾಡುವನೇನು?

೧ನೇ ಸಖಿ : ಅಕ್ಕಾ ಉಸಿರಾಡುವುದಿಲ್ಲಾ.

೨ನೇ ಚ್ಯಾಮಲದೇವಿ : ಕಣ್ಣುರೆಪ್ಪೆಗಳಾದರೂ ಬಡಿಯುವನೇನು ?

೧ನೇ ಸಖಿ : ಇಲ್ಲಿಲ್ಲಾ ಅನುಮಿಷ ದೃಷ್ಟಿ ಮಾತ್ರವಿರುವುದು.

೨ನೇ ಚ್ಯಾಮಲದೇವಿ : ಕೈಕಾಲಾದರೂ ಚ್ಯಾಚ್ಯಾಡುವನೆ ?

೧ನೇ ಸಖಿ : ಇಲ್ಲಿಲ್ಲಾ ಈತನು ನಿರ್ಜೀವನೆ ಸರಿ.

೨ನೇ ಚ್ಯಾಮಲದೇವಿ : ಛೀ ಛೀ ಈತನು ಕಂದನಲ್ಲಾ ಕಾಪ್ಯದ ಗೊಂಬಿಯಂತೆ ತಿಳಿಯತಕ್ಕದ್ದು.

೧ನೇ ಸಖಿ : ಛೀ ಛೀ ಹಾಗಲ್ಲ ಮೌಕ್ತಿಕದ ಗುಚ್ಛದ ರೂಪವು.

೨ನೇ ಚ್ಯಾಮಲದೇವಿ : ಛೇ ಛೇ ಈ ಶಿಸುವಿನಾ ಮಹತ್ವವೆ ಬೇರೆ (ಮುಖನೋಡಿ). ಸಖಿಯರೆ ಮುಟ್ಟಿನೋಡಲು ಮೃದುವಾಗಿದೆ. ಅಮ್ಮಗಳಿರಾ ಈತನು ಧರ್ಮ ಸ್ವರೂಪಿಯಾದವನು. ಆದ್ದರಿಂದೆ ಇಷ್ಟೆ ತೇಜಃಪುಂಜನಾಗಿದ್ದಾನೆ. ಆ ಸಾಧು ರೇವಣಾರ್ಯರು ಹೇಳಿದ ನುಡಿಯನ್ನು ನಿಜ ಮಾಡಲು ನಿನ್ನ ಸ್ವಪ್ನದ ವಿಚಾರ ಹ್ಯಾಗ್ಯಾಗೆ ಬಿದ್ದಿರುವುದು.

ಸುಗ್ಗಲದೇವಿ : ತಾಯೆ ನಾನೇನು ಹೇಳಲಿ ? ರಾತ್ರಿ ನನ್ನ ಕನಸಿನಲ್ಲಿ ಪಾರ್ವತಿ, ಲಕ್ಷ್ಮಿಯು ಕೆಲವು ದೇವಕನ್ನೆಯರು ಬಂದು ಈ ಶಿಸುವಿಗೆ ಕೈತೊಟ್ಟಿಲ ಮಾಡಿ, ಜೋಗುಳ ಹಾಡಿ, ಸಿದ್ಧರಾಮನೆಂದು ಹೆಸರಿಡಿರಿ, ಈತನು ಮಹಾ ಶಿವಯೋಗಿಯಾಗುತ್ತಾನೆಂದು ಹೇಳಿ, ಈ ಶಿಸುವಿಗೆ ಸ್ತನಪಾನ ಮಾಡಿಸಿ, ಪುಷ್ಪವೃಷ್ಟಿ ಸುರಿಸಿ, ಭಸ್ಮ ಧಾರಣ ಮಾಡಿ ಹೊರಟು ಹೋದರು. ಇಷ್ಟರಲ್ಲಿ ನಾನು ಎಚ್ಚರಿಸಿದೆನು.

೨ನೇ ಚ್ಯಾಮಲದೇವಿ : ಒಳ್ಳೆಯದು ಮುದ್ದುಗೌಡರನ್ನು ಕರಿಸಬೇಕು, (ಎಂಬುವದರಲ್ಲಿ ಆತುರದಿಂದ ಬರುವನು.)

ಮುದ್ದುಗೌಡ : ಏನದು ? ಏನು ಸಮಾಚಾರವು ?

೧ನೇ ಸಖಿ : ಅಪ್ಪಾ ಸಾಹೇಬರೆ ನಿಮಗೆ ಪುತ್ರಪ್ರಾಪ್ತನಾಗಿದ್ದಾನೆ.

ಮುದ್ದುಗೌಡ : ಏನು ? ಏನು ? ಪುತ್ರನು ಜನಿಸಿದನೆ ? ಅವ್ವಾ ಮೋಹ ಸಖಿಯರೆ ನೀವಿನ್ನು ಬಾಗಿಣ ಸಂಭ್ರಮವನ್ನು ನಡಿಸಿರಿ.

ಎಲ್ಲರೂ : ಅಪ್ಪಣೆ (ಎಂದು ಮುದ್ದುಗೌಡನ ಕೂಸಿನ ನೋಡುತ್ತ).

ಮುದ್ದುಗೌಡ : ಅಹಾ ! ಸಾಧುವರ್ಯರೆ, ರೇವಣಾರ್ಯರೆ ನಿಮ್ಮ ವಾಕ್ಯ ಅಮೃತ ಸೇವೆ ಇಂದಲೇ ನಮಗೆ ಪುತ್ರವೆಂಬ ರತ್ನವು ಸಿಕ್ಕಿತಲ್ಲವೆ ? ಇನ್ನು ಜಗತ್ತಿನಲ್ಲಿ ಧನ್ಯನಾದೆನು. ನಮ್ಮ ವಂಶ ವೃದ್ಧಿಯಾಯಿತು. ನಮ್ಮ ಕುಲವು ಪ್ರದೀಪಕವಾಯಿತು. ದೇವಾ ನಮ್ಮ ಜನ್ಮಾ ಸಾರ್ಥಕಗೊಳಿಸಿದಿರಿ. ಸಂಸಾರವೆಂಬುವಾ ಭೂಮಿಕೆಯಲ್ಲಿ ಮನೋ ಪ್ರಾಣಿಗಳೆಂಬ ಬಳ್ಳಿಗೆ ಮಕ್ಕಳೆಂಬ ಫಲ ನೀಡಿದಿರಿ. ಸ್ವರ್ಗದ ಬಾಗಿಲು ತಗೆಸಿಬಿಟ್ಟಿರಿ. ರೇವಣಾರ್ಯರೆ ಈ ಬಡ ಮಾನವನಿಗೆ ಹುಡಕುತ್ತ ಬಂದು ಶಿಸುವು ಜನಿಸುವಂತೆ ಆಶೀರ್ವದಿಸಿದಿರಿ. ಎಲ್ಲಾ ನಿಮ್ಮ ಲೀಲೆಯು ವಿಚಿತ್ರವಾದುದು. ಇಲ್ಲಿ ನಿಮ್ಮ ಸ್ತೋತ್ರ ಮಾಡುವುದಕ್ಕೆ ದ್ವಿಸಹಸ್ರ ರಸನೆಯುಳ್ಳ ಮಹಾಶೇಷನಿಗೆ ಅಸಾಧ್ಯವು ಎಂದು ರಸನೆಯುಳ್ಳವನಿಗೆ ತೀರದು. ಇಲ್ಲಿ ಯಾವತ್ಕಾಲದಲ್ಲಿ ನನ್ನ ಬೆನ್ನಿಗೆ ಇದ್ದು, ನನ್ನನ್ನು ರಕ್ಷಿಸಿ ಉದ್ಧಾರ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಇದು ನಿನಗೆ ಜ್ಞಾಪಕವಿರಲಿ. ಸ್ವಲ್ಪ ನಿನ್ನ ಧ್ಯಾನದಲ್ಲಿ ತತ್ಪರನಾಗಿ ಯೋಗ್ಯಾನುಸಾರ ಭಕ್ತಿರೂಪವಾಗಿ ಸಾಧುರನ್ನು ವಂದಿಸುತ್ತೇನೆ.

ಪದ

ಕನಕಾಂಗಿ ವನಿತಾ । ಮನದ ದುಗುಡವನು
ಬಿಡುವದೆನಗೀಗಲೆ ॥ ಪ ॥

ಕ್ಷಿಮಿಸಿದನು ಮಮ ಸಿದ್ದೇಶಾ ।
ವಿಪರೀತವು ಅರಿದು ತಾ ಗೈದಾ ।
ಪ್ರೇಮಾಸ್ಪದ ಏಗೆ ವಿನೋದಾ ॥ ೧ ॥

ಮಮಸುಖ ಶಾಂತಿಯಾಗುವದೀಗಲೆ ।
ತೋರಿಪನು ಮಮಬಾಲ ಗುಣಶೀಲ ॥ ೨ ॥

ನಾಗವೇಣಿಯೆ ಸಖಿಯರು ಬಂದ ನಂತರ ಈ ಗ್ರಾಮದಲ್ಲಿ ಇರತಕ್ಕ ಸಭ್ಯ ಸ್ತ್ರೀಯುರನ್ನು ಕರಿಸಿ ತೊಟ್ಟಿಲ ಕಟ್ಟಿ, ಜೋಗುಳ ಹಾಡುವಾ ಪ್ರಯತ್ನ ಮಾಡಿರಿ. ನಾನು ಬೇಗ ಬರುತ್ತೇನೆ (ಎಂದು ಹೋಗುವುದು).

೧ನೇ ಸಖಿ : (ರಸ್ತಾ ಪಡದಾದ ಮುಂದೆ) ಅಕ್ಕಾ ಚಾಮಲದೇವಿ ಜೋಗುಳ ಹಾಡುವುದಕ್ಕೆ ಯಾರ್‍ಯಾರನ್ನು ಕರಿಯಬೇಕು ?

೨ನೇ ಚ್ಯಾಮಲದೇವಿ : ಯಾರ್‍ಯಾರಿಗೆಂದರೇನೆ ? ಆ ಪೌರಾಣಿಕ ಗಿರಿಜಾಬಾಯಿ ಅವರಿಗೆ, ಶಾಸ್ತ್ರಿಯರಲ್ಲಿ ಅಪರ್ಣಾಬಾಯಿ ಅವರಿಗೆ, ಪುರೋಹಿತರಲ್ಲಿ ಪಾರ್ವತಿಬಾಯಿ ಅವರಿಗೆ ಮತ್ತು ಆ ಕಟ್ಟಿಮನಿ ಶಾಂತವೀರಮ್ಮನವರಿಗೆ ಗ್ರಾಮದಲ್ಲಿ ಸಭ್ಯ ಸ್ತ್ರೀಯರಿಗೆ ಕರೆದುಕೊಂಡು ನಡೆ ಬೇಗನೆ ಪೋಗುವಾ.

೧ನೇ ಸಖಿ : ಒಳ್ಳೆದು ನಾನಿವರೆಲ್ಲರನ್ನು ಕರೆದುಕೊಂಡು ಬರುತ್ತೇನೆ. ನೀನು ಬೇಗನೆ ನಡೆ (ಎಂದು ಹೋಗುವುದರಲ್ಲಿ ತೊಟ್ಟಿಲ ಸೀನ್).

ಗಿರಿಜಾಬಾಯಿ : ಅಮ್ಮಾ ಅಪರ್ಣಾಬಾಯಿಯವರೆ ಬೇಗನೆ ಬನ್ನಿರಿ. ಶಾಂತ್ವೀರಮ್ಮನವರೆ ಯಾಕೆ ಆಲಸ್ಯವು?

ಶಾಂತ್ವೀರಮ್ಮ : ನನ್ನ ಕಡಿದೇನಾಲಸ್ಯವು. ಹಾಡಿರಿನ್ನು ಜೋಗುಳವಾ (ಎಂದು ಎಲ್ಲರೂ ತೊಟ್ಟಿಲ ಹಿಡಿದು).

ಪದ

ಜೋ ಜೋ ಮಲಗಯ್ಯ ಮಹಾಲಿಂಗವೇ ।

೧ನೇ ಸಖಿ : ಅಪ್ಪಾ ಮುದ್ದುಗೌಡರೆ ಈತನಿಗೆ ನಾಮ ಏನಂತಿಡಬೇಕು ?

ಮುದ್ದುಗೌಡ : ಅಮ್ಮಾ ಮಹನೀಯರೆ ಈತನ ಹೆಸರು ಧೂಳಿಮಹಾಕಾಳನೆಂದು ಇಡತಕ್ಕದ್ದು, ಯಾಕೆಂದರೆ ಆತನು ನಮ್ಮ ಮನಿ ದೈವತನು. ಆತನ ಕೃಪವು ನಮ್ಮ ಮೇಲಿರಲು ಬಹು ಕಾಲಕ್ಕೆ ನಮಗೆ ಪುತ್ರನು ಜನಿಸಿದ್ದಾನೆ. ಆದ್ದರಿಂದ ಅದೇ ನಾಮವು ನಿಜವು.

೧ನೇ ಸಖಿ : ಅಪರ್ಣಾ (ಎಂದು ತಿರುಗಿ) ಅಮ್ಮಾ ಧೂಳಿಮಹಾಂಕಾಳನಂತೆ ಇಡಿರಿ.

ಎಲ್ಲರು : ಅಪರ್ಣ ಧೂಳಿಮಹಾಕಾಳ ಧೂಳಿಮಹಾಕಾಳ ಕುರ್ರೆ ಕುರ್ರೆ (ಎಂದು ಹೆಸರಿಡುವರು. ಗಂಡನ್ಹೆಸರು ಕೇಳಿ ಗುಗ್ಗರಿ ತೆಗೆದುಕೊಂಡು ಹೋಗುವರು. ರಸ್ತಾ ಪಡದಾ ಬೀಳುವುದು).

೨ನೇ ಚ್ಯಾಮಲದೇವಿ : ಅಮ್ಮಾ ಈ ಕೂಸಿಗೆ ರೇವಣಾರ್‍ಯರು ಶಿವ ಸಿದ್ಧರಾಮನೆಂದು ಹೆಸರಿಡಿರೆಂದು ಹೇಳಿ ಆಶೀರ್ವಾದ ಮಾಡಿದ್ದರು. ಏನು ಇವರು ಧೂಳಿ ಮಹಾಕಾಳನೆಂದು ಹೆಸರಿಟ್ಟರಲ್ಲಾ.

೧ನೇ ಸಖಿ : ಅಮ್ಮಾ ನಮಗೇನು ಗುರ್ತು ಅವರ ಮನಸ್ಸಿನ ಭಯ ? ನಾವು ಇರುವವರು ಸುಮ್ಮನೆ ಇದ್ದರಾಯಿತು. ಅದು ಆಗುವ ಭವಿಷತ್ಫಲವು ಆಗುತ್ತದೆ.

೨ನೇಚ್ಯಾಮಲದೇವಿ : ನಿಜ ನಿಜವು (ಎಂದು ಹೋಗುವರು. ಮುದ್ದುಗೌಡನ ಮನೆಯ ಪಡಸಾಲೆಯ ಸೀನ್).

ಮುದ್ದುಗೌಡ : (ಮನೆಯಲ್ಲಿ ದಂಪತಿಗಳು ಕೂತು) ಪ್ರಿಯೆ ಇಂದು ನಾವು ಧನ್ಯರಾದೆವು. ನಮ್ಮ ವಂಶ ಉದ್ಧಾರ ಆಯಿತಲ್ಲವೆ ?

ಸುಗ್ಗಲದೇವಿ : ಪ್ರಿಯಾ ನಿಜವೆ ಸರಿ. ಇನ್ನು ನಮ್ಮ ಧೂಳಿಮಹಾಕಾಳನು ಸಾಲಿಯಿಂದ ಬರುವ ವ್ಯಾಳ್ಯಾವಾಯಿತಲ್ಲವೊ, ಮಗನು ಹಸಿದನು. ಬೇಗನೆ ಕರೆದುಕೊಂಡು ಬರುತ್ತೇನೆ (ಎಂದು ಹೋಗುವರು ಸಾಲಿ ಸೀನ್).

ಸಾಲಿ ಮಾಸ್ತರ್ : ಸರ್ವ ವಿದ್ಯಾರ್ಥಿಗಳೆ ಊಟಕ್ಕೆ ಹೋಗಿ ಬನ್ನಿರಿ.

೧ನೇ ಹುಡುಗ : ಮಹನೀಯರೆ ಈ ಧೂಳಿಮಹಾಕಾಳನು ನಮ್ಮ ಕೂಡ ಮಾತನಾಡುವುದಿಲ್ಲ.

೨ನೇ ಹುಡುಗ : ಹೌದ್ವಾದರಿ ಧಣೇರ

೩ ನೇ ಪಂತೋಜಿ : ಎಲೊ ಅವನ ಮಾತಿನ ಗೊಡವೆ ನಿಮಗ್ಯಾತಕೆ ? ನೀವೊಂದು ಬೇಗನೆ ಹೋಗಿಬಂದರಾಯಿತು.

೪ನೇ ಮುನಿಮ : ಎಲೊ ಧೂಳಿಮಹಾಕಾಳ ಬೇಗನೆ ನಡೆಯೊ, ಮನೆಗೆ ಹೋಗುವಾ.

ಧೂಳಿಮಹಾಕಾಳ : ಹೂಂ ಹೂಂ (ಎಂದು ಮನಿಗೆ ಹೋಗುವುದರಲ್ಲಿ ಸೀನ್ ಮುದ್ದುಗೌಡ ಸುಗ್ಗಲದೇವಿ ಮಗನ ಹತ್ತರ ಕೂಡಿಸಿಕೊಂಡು),

ಸುಗ್ಗಲದೇವಿ : **ಪದ**

ಇನ್ನೇನು ಮಾಡಲಿ ? । ಹೀನರಾದೆವೊ ದೇವಾ ।
ಚಿನ್ನಾ ಧೂಳಿಮಹಾಕಾಳನು । ಎನ್ನಗವಿಸನು
ಹಸಿದ್ಹಸಿದು ಬಳಲಿತಾ । ತೃಷೆಯಾಗಿ ಕಾಣುತಿರ್ಪ
ಹಸುಮುಖವು ಕಾಣ್ವದೀಗಾ ।ಈಶನಂದದಿ ಕೂಡುವಾ ॥ ೧ ॥
ಘೋರ ಕರ್ಮ ಒದಗಿತೆ ।
ಕ್ರೂರವಾದ ನಡತಿಗೆ ।

ಬಾರೆಂದು ಕರಿದರೆ ।
ಮೀರಿ ತಾ ಪೋಗುವಾ ॥ ೨ ॥

ಪ್ರಾಣ ಏನು ಮಾಡಬೇಕು ? (ವ್ಯಸನದಿಂದ) ನಮ್ಮ ಕುಮಾರನಾದ ಧೂಳಿ ಮಹಾಕಾಳನು ಅನ್ನೋದಕಗಳ ತೆಗೆದುಕೊಳ್ಳುವದಿಲ್ಲ. ಕೂತರೆ ದೇವರ ಹಾಗೆ ಕೂಡುವನು. ನೋಡಿದಿರಾ ಇಂಥಾ ಅರಹುಚ್ಚ ಮಗನು ನಮ್ಮ ಹೊಟ್ಟೆಯಲ್ಲಿ ಹುಟ್ಟಿದನು.

ಮುದ್ದುಗೌಡ : ಪ್ರಿಯೆ ಏನು ಮಾಡಬೇಕು ? ಇಗೊ ನಾವು ಬಡವರು. ಹೀಗಾದ ಮೇಲೆ ಈತನು ಸಾಲಿ ಬರಿಯುವದಿಲ್ಲ. ನಾಳೆ ಕೆಲವು ಒಕ್ಕಲ ಹುಡುಗರ ಕೂಡ ಗಾಳಿ ಬಿಸಿಲಿಗೆ ಕಳಿಸಿದ ಮೇಲೆ ಹಸಿವು ತೃಷೆಯು ಹ್ಯಾಗೆ ಇರುವದಿಲ್ಲವೊ ನೋಡೋಣ. ಎಲೊ ಧೂಳಿಮಹಾಕಾಳ ಹೊಲಕ್ಕೆ ಹೋಗುವಿಯೊ ?

ಧೂಳಿಮಹಾಕಾಳ : (ಮೂಕನಾಗಿ) ಹೂಂ ಹೂಂ (ಎಂದು ಗೋಣು ಅಲ್ಲಾಡಿಸುವನು).

ಸುಗ್ಗಲದೇವಿ : ಪ್ರಿಯಾ ನೋಡಿದಿರಾ ಮೂಕನಾಗಿರುವಾ ಈ ಮಗನಿಗೆ ಹ್ಯಾಗೆ ಮಾಡಬೇಕು ? ನೀವು ಹೇಳಿದ ಯುಕ್ತಿ ಚೆನ್ನಾಗಿರುವುದು. ರೊಟ್ಟಿಕಟ್ಟಿ ಒಕ್ಕಲು ಮಕ್ಕಳ ಕೂಡ ಕಳಿಸಿರಿ.

ಮುದ್ದುಗೌಡ : ಪ್ರಿಯೆ ಹಾಗೆಯೇ ಮಾಡುತ್ತೇನೆ (ಎಂದು ತೆರೆಯ ಕಡೆ ನೋಡಿ) ಎಲೊ ವಿಶ್ವದರ್ಶನಾ ವಿಷ್ಣುದರ್ಶನಾ ಚಕ್ರಪಾಣಿ ಮುಕುಂದಾ ಬೇಗನೆ ಬನ್ನಿರಿ.

ಹುಡುಗರು : (ಒಕ್ಕಲು ವೇಷದಿಂದ ಪ್ರವೇಶ).

೧ನೇವ : ಯಾಕ್ರಪಾ ಮುದ್ದುಗೌಡರೆ ನಮಗೆ ಯಾಕೆ ಕರಿದಿರಿ ಹೇಳಿರಿ ನಾವು ಕೃಷಿ ಕೆಲಸಕ್ಕೆ ಹೋಗುವುದದೆ.

೨ನೇವ : ಹೌದಪ್ಪ ನನಗೆ ಗೋವು ಬಿಡಲು ವ್ಯಾಳ್ಯಾವಾಗುವುದು ಬೇಗ ಹೇಳಿರಿ.

೩ನೇವ : ಎಲೊ ಏನು ಹೇಳುವೆ ? ಸುಮ್ಮನೆ ಬಾ ಅಂದಿರುವರು. ನಿನಗೆ ತಿಳಿದಿಲ್ಲವೆ ?

೪ನೇವ : ತಿಳಿಯಲಿಕ್ಕೇನು ಧೂಳಿಮಹಾಕಾಳನ ಜೊತೆಯ ಹುಡುಗ ಇವರಲ್ಲಿದ್ದಾನೆ. ಆತನು ಜಗಳ ತಗೆದನೇನೋ ಎಂದು ತಿಳಿದೆನು.

ಮುದ್ದುಗೌಡ : ಹೌದ್ಹೌದು ಬಾಲಕರೆ ನಮ್ಮ ಕರುವನ್ನು ಸಂರಕ್ಷಿಸುವದಕ್ಕೋಸ್ಕರ ನಮ್ಮ ಈ ಹುಚ್ಚನಾದ ಧೂಳಿ ಮಹಾಕಾಳನನ್ನು ನಿಮ್ಮ ಜತೆಯಲ್ಲಿ ಕರೆದುಕೊಂಡು ಹೋಗುವಿರೇನೋ ಎಂದು ಒದರಿದೆನು. ಮಗನು ಕೇವಲ ಮುಗ್ಧನಾಗಿದ್ದಾನೆ. ಯಾರ ಕೂಡಾ ಮಾತನಾಡುವುದಿಲ್ಲಾ. ನಗುವುದಿಲ್ಲ. ಅಳುವುದಿಲ್ಲ ಯಾವೊಂದು ಕಾರ್ಯವನ್ನು ಮಾಡುವುದಿಲ್ಲ ಹೀಗಾದ ಮೇಲೆ ನಮ್ಮ ಬಡತನ ಪ್ರಪಂಚವು ಹ್ಯಾಗೆ ಸಾಗಬೇಕು ? ಅದಕ್ಕೆ ನಿಮ್ಮ ಜತೆಯಲ್ಲಿ ಗೋವು ರಕ್ಷಣಕ್ಕಾಗಿ ಕರೆದುಕೊಂಡು ಹೋಗಿ ಜೋಕೆಯಾಗಿ ಬನ್ನಿರೆಂದು ಕೇಳಿದೆನು.

೧ನೇವ : ಯಾಕಾಗುವಲ್ಲದಪಾ ನಮಗೇನು ಮಾಡುವನು ? ಕರೆದುಕೊಂಡು ಹೋಗುವೆವು.

ಮುದ್ದುಗೌಡ : ಮಕ್ಕಳೆ ನೋಡಿರಿ ನಮ್ಮ ಕುಮಾರನ ಕೂಡಾ ಜಗಳಾಡಬೇಡಿರಿ ಹೊಡಿಯಬೇಡಿರಿ ಪರಿಹಾಸ್ಯ ಮಾಡಬೇಡಿರಿ. ಈ ಈ ಎಂಬುವಾ ಹುಚ್ಚು ಮಗನಿದ್ದಾನೆ. ಜೋಕೆಯಾಗಿ ಹೋಗಿ ಬನ್ನಿರಿ. ಇಕೊ ಮಗುವೆ ಈ ಬುತ್ತಿಗಂಟು ಕೊಟ್ಟವರ ಕೂಡ ಹೋಗು. ಯಾಕೆ ಬಾಲಕರೆ ಏನೆಂದಿರಿ.

೨ನೇ ಹುಡುಗ : ಏನೆಂಬುವೆವಪ್ಪಾ ಕರೆದುಕೊಂಡು ಹೋಗುವೆವು. ಮತ್ತೇನು ಹೇಳಬೇಕು ?

೩ನೇ ಹುಡುಗ : ಅಪ್ಪಾ ಇವನಿಗೆ ನಾವು ಹೊಡಿಯುವುದಿಲ್ಲಾ, ಬಡಿಯುವುದಿಲ್ಲಾ ಜೋಕೆಯಾಗಿ ಕರೆದುಕೊಂಡು ಬರುತ್ತೇವೆ. ಈತನ ಕುದೆ ಬಿಟ್ಟಿರ್ರಿ, ಎಲೊ ವಿಶ್ವದರ್ಶನಾ ನಡೆ ಹೋಗುವಾ.

೪ನೇ ಹುಡುಗ : ಎಲೊ ಶಿವದರ್ಶನಾ ? ಯಾರು ಬೇಡೆಂಬುವರು ನಡೆ. ಎಲ್ಲೊ ಚಕ್ರಪಾಣಿ, ಮುಕುಂದಾ? ಈ ಧೂಳಿಮಹಾಕಾಳನನ್ನು ಕರೆದುಕೊಂಡು ಅರಣ್ಯದಲ್ಲಿ ಮೇಯಿಸುವುದಕ್ಕೆ ಬೇಗನೆ ಆಕಳುಗಳ ಹೊಡೆದುಕೊಂಡು ನಡೆಯಿರಿ.

೫ನೇ ಹುಡಗ : ಅಪ್ಪಣೆ (ಎಂದು ಮೇಲಿನ ಪಲ್ಲವಿ ಹಾಡುತ್ತ ಹೋಗಿ, ಧೂಳಿ ಮಹಾಕಾಳನನ್ನು ಹತ್ತರ ರಸ್ತಾ ಪಡದಾದ ಮುಂದೆ).

೬ನೇವ : ಎಲೋ ಗೋವು ಅರಣ್ಯಕ್ಕೆ ಅಟ್ಟಿ ನಾವು ಇಲ್ಲಿ ಆಡಲಿಕ್ಕೆ ಕೂತೆವು ನಡೆಯಿರಿ.

ತೆರೆಯಲ್ಲಿ : ಅಪ್ಪಾ ಶಿವಸಿದ್ಧರಾಮಾ.

ಧೂಳಿಮಹಾಕಾಳ : ಅಪ್ಪಾ ಮಹನೀಯರಾದ ಬಾಲಕರೆ ನನ್ನನ್ನು ಯಾರೊ ಶಿವಸಿದ್ಧರಾಮನೆಂದು ಒದರುವರು. ನನ್ನ ಪಡಿದ ತಾಯಿ ಚ್ಯಾಮಲದೇವಿ ಆಗಿರಬಹುದು. ಹೋಗಿ ಬರುತ್ತೇನೆ.

೨ನೇವ : ಎಲೊ ಧೂಳಿಮಹಾಕಾಳ ಪಡಿದವರ ಹತ್ತರವಾದರೂ ಹೋಗು ಹಡೆದ ಸುಗ್ಗಲಮ್ಮನ ಬದಿಯಲ್ಲಾದರೂ ಹೋಗು ಬೇಗ ಬಾ. ನಾವು ಅರಣ್ಯ ದೇವತೆ ಹತ್ತಿರವಿರುವೆವು.

ಧೂಳಿಮಹಾಕಾಳ : ಆಜ್ಞೆ (ಎಂದು ಎಲ್ಲರೂ ಹೋಗುವರು. ಚ್ಯಾಮಲದೇವಿ ಅಲ್ಲೇಬರುವಳು).

ಚ್ಯಾಮಲದೇವಿ : ಸಿದ್ಧರಾಮ ಇಲ್ಲೆ ಇರುವಿಯಾ.

ಧೂಳಿ ಮಹಾಕಾಳ : ಅಮ್ಮಾ ನೀನೆ ಕರೆಯಲಿಲ್ಲವೆ ? ಏನು ಕೆಲಸ ಇರುವುದು ಹೇಳು.

ಚ್ಯಾಮಲದೇವಿ : ಶಿವಸಿದ್ಧರಾಮ ಹೇಳುವೆನು ಸ್ವಲ್ಪ ನಿಲ್ಲು (ಎಂದು ಪ್ರೀತಿ ಮಾಡುತ್ತಾ). ಅಪ್ಪಾ ಈ ಲೋಕವು ಎಷ್ಟು ಮರವಿನಿಂದ ಮುಸುಕಿರುವುದು. ಮೊನ್ನೆಯಾದರೂ ರೇವಣಾರ್ಯರು ಇದೇ ಸೊನ್ನಲಾಪುರದಲ್ಲಿ ಈ ಬಾಲಕನು ಉದರದಲ್ಲಿ ಇರುವಾಗೆ ನಮ್ಮ ಸುಗ್ಗಲದೇವಿಯ ಉದರಕ್ಕೆ ಮುಟ್ಟಿ ನಮಸ್ಕರಿಸಿ, ತಾಯೆ ನಿನ್ನ ಉದರದಲ್ಲಿ ಶಿವಯೋಗಿಯು ಜನಿಸುವನೆಂದು ಹೇಳಿ, ಆತನಿಗೆ ವಿಕಾರಗಳೆ ಇಲ್ಲಾ. ಅವನು ಅಳನು ನಗನು ಎಂದು ತಿಳಿಸಿ, ಸಿದ್ಧರಾಮನೆಂದು ಹೆಸರಿಡಿರಿರೆಂದು ಹೇಳಿ ಆಶೀರ್ವದಿಸಿ ಹೋಗಿರುವರು. ಆದಾಗ್ಯೂ ಅವುಗಳನ್ನೆಲ್ಲಾ ಮರೆತು ಮನೆದೇವರನಾದಂಥಾ ಧೂಳಿಮಹಾಕಾಳನೆಂದು ಹೆಸರಿಟ್ಟು ಕರೆದರೆ ಈತನ ಮಾತುಗಳೆ ಬಂದಾಗಿರುವುವು. ಇಂಥಾ ಹುಡುಗನು ಮಾತನಾಡುವುದನ್ನು ನೋಡಿದಿರ್ಯಾ. ಎಷ್ಟು ಮನಸ್ಸಿಗೆ ಹರುಷವಾಗಿ ತೋರುವುದು. ನಾನು ಎಷ್ಟು ಪರಿಯಿಂದ ಸಿದ್ಧರಾಮನೆಂದು ಹೆಸರಿಡಿರೆಂದರೆ ಕೇಳದೆ ಆ ಮೂರ್ಖ ದಂಪತಿಗಳು ತಿಳಿಯದೆ ತಮ್ಮ ಮಾತೆ ಮಾಡಿದರು. ಈ ಸಂಸಾರ ಸಾಗರದಲ್ಲಿ ಮನುಷ್ಯರು ಒಮ್ಮೆ ಮುಳುಗಿದರೆ ಪುನಃ ಎದ್ದು ಪಾರಗಾಣುವುದು ಬಹಳ ದುರ್ಲಭವು. ಮರವೆಯೆಂಬ ಕವಚವು ಜಪತಪಗಳನ್ನು ಆಚರಿಸತಕ್ಕ

ಯೋಗಿಗಳಿಗೂ ಬಿಟ್ಟಿಲ್ಲ. ಅಂದಮೇಲೆ ಇಂಥ ಅಜ್ಞಾನ ವಶಾತ್ ಈ ಮುದ್ದುಗೌಡರ ಪಾಡೇನು ? ಇರಲಿ ಸಿದ್ಧರಾಮನೆಂದು ಒದರಿದರೆ ಮಾತನಾಡುವನೋ ಇಲ್ಲವೋ ಎಂಬುವ ಸಂಶಯದಿಂದ ಬೇಗ ಹಿಂದೆ ಬಂದು ಒದರಿದೆನು. ಈ ಹುಡುಗನು ಮಾತನಾಡಿದನು. ಸಾಕು, ಇಷ್ಟು ಹರುಷ. ಅಪ್ಪಾ ಸಿದ್ಧರಾಮ ನಮ್ಮ ಮನೆಗೆ ಬೆಣ್ಣೆ ಕಜ್ಜಾಯ ತಿನ್ನಲು ಬರುವಿಯಾ ?

ಧೂಳಿಮಹಾಕಾಳ : ಅಮ್ಮಾ ಜತೆ ಹುಡುಗರು ಗೋವು ಕಾಯಲು ಹೋದರು. ಮಾತೋಶ್ರೀಯೆ ನಿತ್ಯತೃಪ್ತನಿಗೆ ಹಸುವುಂಟೆ ? ಅನುಮಿಷಾ ದೃಷ್ಟಿಯವನಿಗೆ ನಿದ್ರೆಯುಂಟೆ ? ಶ್ರೇಷ್ಠವಾದ ಜ್ಞಾನಾಮೃತವನ್ನು ಸೇವಿಸತಕ್ಕವನಿಗೆ ಈ ಬೆಳೆಸಿರಿನಲ್ಲಿ ಸಂಗವುಂಟೆ ? ಪಂಚಾಕ್ಷರಿ ಎಂಬುವ ಪಂಚಅಮೃತವೆ ಬೆಣ್ಣೆ. ಬಿಟ್ಟು, ಈ ಕ್ರೋಧಬದ್ಧವಾದ ಬೆಣ್ಣೆ ನನಗ್ಯಾತಕ್ಕೆ ತಾಯೆ ಮತ್ತೇನಾದರೂ ಹೇಳಿದರೆ ಕೇಳುತ್ತೇನೆ.

ಚ್ಯಾಮಲದೇವಿ : ಅಯ್ಯೋ ಈ ಜ್ಞಾನ ಸುಕುಮಾರನಿಗೆ ಈ ಹೆಸರು ಸಾರ್ಥಕವಾಗುವುದೆ? ಜಗಚಕ್ಷುಕೆ ಖದ್ಯೋತ ಹುಳವು ಸರಿಯಾಗಬಲ್ಲುದೆ ? ಕರಿಗೆ ಸೂಕರವ ಹೋಲಿಸಿದರೆ ಆನೆಯಾಗಬಲ್ಲುದೆ ? ಸಾಯಿಗೆ ಕಂಟಿರಿವೆಯನು ಹೋಲಿಸಿದರೆ ಸಿಂಹನಾಗಬಲ್ಲುದೆ ? ನಕ್ಷತ್ರಗಳಿಗೆ ಚಂದ್ರನ ಪ್ರಕಾಶ ಬರುವುದೆ ? ಈ ಜ್ಞಾನ ಘನವಾದ ಸಿದ್ಧರಾಮನಿಗೆ ಮನೆದೈವತವು ಸರಿಯಾಗಬಲ್ಲುದೆ ? ಇರಲಿ ಬಾಲಕಾ ನಿನ್ನ ಜತೆ ಹುಡುಗರಿಗೆ ಸಿದ್ಧರಾಮನೆಂದು ಕರೆಯಿರೆಂದು ಹೇಳಿರುವೆನು. ನೀನು ಬೇಗನೆ ಹೋಗಿ ಬಾ.

ಸಿದ್ಧರಾಮ : ತಾಯೆ ನಿನ್ನಾಜ್ಞಾ (ಎಂದು ಹೋಗುವರು. ಅರಣ್ಯದಲ್ಲಿ ದನ ಹೊಡೆಯುವ ಸೀನ್).

೪ನೇವ : ಎಲೊ ಸಿದ್ಧರಾಮಾ ಎಷ್ಟೊತ್ತಪಾ ನೀನು ಬರುವುದು ? ಹಾದಿನೋಡಿ ಸಾಕಾಯಿತು.

ಸಿದ್ಧರಾಮ : ಅಪ್ಪಾ ಆವಾಗಲೆ ಬಂದಿರುವೆನಲ್ಲಾ ಮಹನೀಯರೆ ಅಗೋ ಅಲ್ಲಿ ಕಾಣುತ್ತಿರುವಾ ದೇವಾಲಯಕ್ಕೆ ಹೋಗುವಾ ದನ ಕರುಗಳನ್ನು ಒತ್ತಟಿಗೆ ನೆರಳಿಗೆ ನಿಲ್ಲಿಸಿ ಮನೋಹರವಾಗಿರುವಾ ದೇವಾಲಯದಲ್ಲಿ ಶ್ರೀ ಶಂಕರನ ಭಜನೆ ಮಾಡುವಾ ನಡಿಯಿರಿ.

೪ನೇವ : ನಾವು ವಲ್ಲೆವಪಾ ಆ ಚ್ಯಾಮಣನ ಹೊಲದೊಳಗೆ ದನಗಳು

ಹೊಕ್ಕರೆ ಹ್ಯಾಗೆ ? ನಮ್ಮವ್ವ ನನಗೆ ದನಗಳು ಯಾವ ಕಡಿಗೆ ಬಿಡಬೇಡವೆಂದು ಹೇಳಿ ನಿಬಂಧನೆ ಮಾಡಿ ಕಳಿಸ್ಯಾಳೆ.

೫ನೇವ : ಹೌದ್ಹೌದು. ನಮ್ಮಪ್ಪನಾದರೂ ನನಗೆ ಹಾಗೇ ಹೇಳಿದ್ದಾನೆ.

ಸಿದ್ಧಾರಾಮ : ಹೌದು ಅದೆಲ್ಲಾ ಸರಿ. ನಿಮ್ಮ ಸರ್ವ ಗೋವುಗಳಿಗೆ ಮತ್ತು ಕರುಗಳಿಗೆ ನನ್ನ ಕಡಿಂದ ಯಾರಿಗಾದರೂ ಕಾಯಿಲಿಕ್ಕೆ ಹಚ್ಚಿದರೆ ನನ್ನ ಜತೆಗೆ ಭಜನಿ ಮಾಡಲು ಬರುವಿರಾ ?

೩ನೇ ಹುಡುಗ : ಹೋ ಹೋ ಹಾಗಾದರೆ ಬೇಕಾದಂಗ ಬರುತ್ತೇವೆ.

೨ನೇವ : ಸಿದ್ಧರಾಮಾ ಆತನೆಲ್ಲಿರುವನು ?

ಸಿದ್ಧರಾಮ: ನನ್ನ ಹತ್ತರವೆ ಇರುವನು ಇದೊ ಕರಿವೆನು ಧೂಳಿಮಹಾಕಾಳಾ ಬಾಬಾ (ಎಂದು ಕರಿವಲ್ಲಿ ಮಾಯದಿಂದ ಬಂದಂತಾಗಬೇಕು).

ಮಾಯದ್ಹುಡುಗ : ಅಪ್ಪಾ ಯಾಕೆ ಕರಿದಿರಿ ? ಕೆಲಸವೇನು ? ಅಪ್ಪಾ ನಮಸ್ಕಾರ ಮಾಡುತ್ತೇನೆ (ಎಂದು ನಡಗುತ್ತ ನಿಲ್ಲುವನು).

ಸಿದ್ಧರಾಮ : ಬಾಲಕರೆ, ಬಾಲಕರೆ ಈ ಹುಡುಗನು ಆ ಮುದ್ದುಗೌಡನ ಮನೆದೇವತನೆ. ನನಗಿಟ್ಟಿದ್ದ ಹೆಸರಿನಿಂದ ಒಳ್ಳಿದರೆ, ಈ ಲೌಕಿಕರಿಗೆ ತಿಳಿಯಲು ಆ ಸಾಂಬ ಮೂರ್ತಿಯು ಕಳುಹಿಸಿರುವನು. ಯೋ ಯೋ ಧೂಳ್ಯಾ ಇಲ್ಲಿ ಕಾಣುವ ಗೋವು ದನ ಕರುಗಳನ್ನು ಎಚ್ಚರದಿಂದ ಕಾದಿರು ನೋಡು. ಇವುಗಳೊಳಗೆ ಒಂದು ಕಳದಿ ಅಂದರೆ ನಿನ್ನ ಬೆನ್ನ ಚರ್ಮ ತೆಗೆವೆನು. ಎಚ್ಚರದಿಂದ ಕಾದಿರು.

ಮಾಯದ್ಹುಡುಗ : ತಂದೆಯೆ ಕಾಯುತ್ತೇನೆ. ಕೋಪಿಸಬೇಡಿ ಬೇಡಿಕೊಳ್ಳುತ್ತೇನೆ. ಹೋರೇ ಹೋ ಬಾಬಾದಾದಾ ಪಾರ್ರ್ಯಾ (ಎಂದು ಹೊಡಿದು ಕೊಂಬುವನು).

ಸಿದ್ಧರಾಮ : ಅಯ್ಯಾ ಗೆಳೆಯರೆ ಇನ್ನು ದೇವಾಲಯಕ್ಕೆ ನಡೆಯಿರಿ . ಭಜನೆ ಮಾಡುವಾ.

ಹುಡುಗರು : ಆಜ್ಞಾ (ಎಂದು ಎಲ್ಲರು ಸೀನ್ ರಸ್ತಾದ ಮುಂದೆ).

ಈಶ್ವರ : ಆಹಾ ! ನನ್ನನ್ನು ಸಿದ್ಧರಾಮನು ಮರೆತಿರುವನೊ ? ನೆನಪಿ ಗಿಟ್ಟಿರುವನೊ ? ನೋಡುವಾ. ಇದನ್ನು ಪರೀಕ್ಷಿಸುವಗೋಸ್ಕರ ಆತನು ಕರಕಾಯುವಲ್ಲಿ ಗಿಡಲತಾದಿಗಳಿಂದ ಪುಷ್ಪವಾಟಿಗಳಿಂದ

ಮತ್ತು ಉದಕಾರಾಮಗಳಿಂದ ರಚಿಸಿ, ನಾನು ಲಿಂಗ ಸ್ವರೂಪನಾಗಿ ಆದಿಯಲ್ಲಿ ರಚಿಸಿದ ದೇವಾಲಯದಲ್ಲಿ ಕೂತು ಸತ್ಯದಿಂದ ಕೂತು ನೀತಿಬೋಧವನ್ನು ಆತನಿಗೆ ಬೋದಿಸುವೆನು ಆತನಾದರೂ ನನ್ನ ಧ್ಯಾನದಿಂದ ಅಲ್ಲಿಗೆ ಹೊರಟಂತೆ ತೋರುವುದು. ಬೇಗನೆ ಹೋಗುವಾ (ಎಂದು ಹಾಡುತ್ತ ಹೋಗುವನು).

ದ್ವಿತಿಯಾಂಕ ಸಮಾಪ್ತ

===**=====***===

ತೃತೀಯ ಅಂಕ ಪ್ರಾರಂಭ

(ಸೀನ್ ಅರಣ್ಯದಲ್ಲಿ ದೇವಾಲಯಕ್ಕೆ ಸಿದ್ಧರಾಮ, ಹುಡುಗರು ಭಜನೆ ಮಾಡುತ್ತ ಬರುವರು).

ಸಿದ್ಧರಾಮ : **ಪದ**

ಶ್ರೀ ಉಮೇಶನೆ । ಪದಾಂಬುಜಕೆ ವಂದಿಪೆವೈ
ಮೀರಿದ ಭವ ಭಯ ಸಂಹರನೆ ॥ ಪ ॥
ಕರಿಚರ್ಮಾಂಬರ ಹರನೆ ।
ಪುರಹರದೇವ ಸಂಪನ್ನನೆ ।
ಹರುಷದಿ ನಿನ್ನನು ಪ್ರಾರ್ಥಿಪೆನೈ ॥ ೧ ॥
ಬೇಡಿದ ವರವಾ । ಕುಡುಹುವನೆ ।
ವರ ಬೇಡುವೆ ನಿನ್ನಾಶ್ರಯನೆ ।
ಕಾಡಿನೊಳು ಸದಾ ವಾಸಿಪನೆ ।
ಹರುಷದಿ ನಿನ್ನನು ಪ್ರಾರ್ಥಿಪೆನೈ ॥ ೨ ॥

ಭೋ ಶಂಭುವೆ ನಿನಗೆ ತ್ರಿಕರಣ ಪೂರ್ವಕವಾಗಿ ನಮಸ್ಕಾರ ಮಾಡುತ್ತೇನೆ. ಬಾಲಕರೆ ನೀವಾದರೂ ಆಶೀರ್ವಾದ ಪಡೆದುಕೊಳ್ಳಿರಿ.

೧ನೇ ಹುಡುಗ : ಅಯ್ಯೋ ನಮ್ಮಪ್ಪಾ ಆಶೀರ್ವಾದ ಪಡಿದುಕೊಂಬುವದಂತೂ ಒತ್ತಟ್ಟಿಗಿರಲಿ, ಆ ಧೂಳ್ಯಾ ಎಂಬುವ ಹೆಡ್ಡನು ದನಗಳನ್ನು ಯಾವ ಕಡಿಗೆ ಹೊಡಿದೊಯ್ದನೊ ? ಇಲ್ಲಿ ಕಾಣುವುದಿಲ್ಲ. ನೀನು ಭಜನವ ಮಾಡುತ್ತ ಇಲ್ಲೇ ಕೂಡು. ನೀನು ಮಾಯದಿಂದ ಒಬ್ಬ ಹುಡುಗನನ್ನು ಹುಟ್ಟಿಸಿದಿ. ಅದೇ ಮಾತು ನಮ್ಮಲಿಂದಾದೀತೆ ? ನೀನು ಮಹತ್ವಿಕ. ಶಿವಸಿದ್ಧರಾಮನೆಂಬ ಹೆಸರು ನಿನಗೆ ಸಲ್ಲುವುದು. ನಿನಗೆ ದೇವರ ಒಲುಮೆ ಇರುವುದು. ನಮಗೆ ನಮ್ಮ ಮನೆಯಲ್ಲಿ ಬೈದು ಹೊಡಿವರು. ನಾವು ಹೋಗುತ್ತೇವೆ. ನೀನು ಭಜನೆ ಮಾಡಿ ಹಿಂದಿಂದೆ ಬಾ.

ಎಲಾ ಮರುಳರೆ ನಡೆಯಿರಿ. ದನಗಳನ್ನು ಹುಡುಕಿಕೊಂಡು ಮನಿಗೆ ಹೋಗುವಾ. ತಾಯಿ ತಂದೆಗಳು ಬೈಯುವದಿಲ್ಲವೆ ?

ಶಿನೇ ವ : ಹೌದಪಾ ಹೌದು. ಹೋಗುವಾ ನಡೆ ನೀನಾದರೂ ಸಿದ್ಧರಾಮಾ ಭಜನೆ ಮಾಡಿ ಬೇಗನೆ ಬಾ .

ಸಿದ್ಧರಾಮ : ಮಹನೀಯರೆ ನೀವು ನಡೆಯಿರಿ. ಆಮೇಲೆ ನಾನು ಬರುತ್ತೇನೆ.

ಹುಡುಗರು : ಆಜ್ಞೆ (ಎಂದು ಆಟ ಆಡುತ್ತ ಹೋಗುವರು).

ಪದ

ಪುಂಡ ಹುಡುಗರೆಲ್ಲ ಬನ್ನಿ । ಚೆಂಡನಾಡುವಾ ।
ಹರಿವಾಗೆಷ್ಟು ದೂರ ಸಾರಿ ಮುನ್ನ ।
ದೂರ ಹೋಗಿ । ಹಾರಿ ಒಗಿಯಿರಿ ॥ ೧ ॥
ಘೋರ ಬಡಿಯು ಧೀರಗೋರ ಬಡಿವ ।
ಕಾರಬಾರಿ ಮುಳ್ಳುಗಳನು । ಮುರಿಯುತ್ತಿರುವವು
ಪುಂಡರಾದ ಬಾಲರೆಲ್ಲ ಬನ್ನಿ ಚೆಂಡನಾಡುವಾ ॥ ೨ ॥

(ಎನ್ನುತ್ತ ಎಲ್ಲರೂ ಹೋಗುವರು. ಸೀನ್ – ರಸ್ತಾ ಪಡದೆ ಮುಂದೆ).

ಮುದ್ದುಗೌಡ : (ಬೊಗ್ಗಿ ನಡಿಯುತ್ತ) ಸುಂದರಿ ಎಂದೂ ಮಂದಿರದ ಹೊರಗೆ ಕಾಲುಗಳು ಇಡಲಾರದ ಮಗನ ಸ್ಥಿತಿಯು ಏನಾಗಿರುವುದೊ ? ತಿಳಿಯದಲ್ಲಾ ಇನ್ನು ಸ್ವಲ್ಪ ಮುಂದಕ್ಕೆ ಹೋಗೋಣ ನಡಿ. ಯಾವ ಬಾಲಕರಾದರೂ ಬಂದಿರುವರೇನೊ ಕೇಳುವಾ.

ಸುಗ್ಗಲದೇವಿ : ಆರ್ಯರೆ ತಮ್ಮ ಇಷ್ಟವು ನಡಿಯಿರಿ ಹೋಗುವಾ. ಸುಂದರಾಂಗಾ ತಾವು ಬಹಿರ್ಭಾಗದಲ್ಲಿ ಹೋಗಿ, ನಮ್ಮ ಧೂಳಿಮಹಾಕಾಳನು ಹೊಂಟಿದ್ದರೆ ಜೋಕೆಯಿಂದ ಹೆಗಲ ಮೇಲೆ ಕೂಡಿಸಿಕೊಂಡು ಬರುವ ನಡಿಯಿರಿ.

ಮುದ್ದುಗೌಡ : ಅಕೊ ಅಲ್ಲಿ ನೋಡಿದ್ಯಾ ? ಹೊರಟಿರುವನು (ಎಂದು ತೆರೆ ಕಡೆ ತೋರಿಸುವನು. ಸಿದ್ಧರಾಮ ಮೂಕನಂತೆ ಬರುವನು).

ಸುಗ್ಗಲದೇವಿ: ಹೌದ್ಹೌದು ನಿಶ್ಚಯಾ .

ಮುದ್ದುಗೌಡ : ಮಗನೇ ಹಡದಪ್ಪನೆ ದೈವ ಶಿಖಾಣಿಯೆ ನೀನು ನಂದಿಕೇಶ್ವರನು.

ನಾನು ನಂದಿಯು. ನೀನು ಬ್ರಹ್ಮನು. ನಾನು ಹಂಸ ಪಕ್ಷಿಯು. ನೀನು ನಾರಾಯಣನು. ನಾನು ನಿನ್ನ ಬೈಸತಕ್ಕ ಗರುಡನು. ನೀನು ಸದಾಶಿವನು. ನಾನು ವೃಷಭೇಶನು. ನನ್ನ ಮೇಲೆ ಕೂಡುವುದಕ್ಕೆ ನೀನೇನು ಭಾರವೆ ? ಬಾ ಎತ್ತಿಕೊಳ್ಳುವೆನು (ಎಂದು ಎತ್ತಿಕೊಳ್ಳುವನು).

ಸುಗ್ಗಲದೇವಿ : ಮಗುವೆ ಧೂಳಿಮಹಾಕಾಳಾ ನಿನ್ನ ಕಾಲುಗಳು ನೊಂದವೊ ? ಗಾಳಿ ಬಹಳವಾಗಿ ಹತ್ತಿತೆ ? ಬಿಸಿಲು ಬಹಳವಾಗಿರುವುದೊ ? ಏನು ಮುಳ್ಳುಗಳು ಬಹಳ ನಟ್ಟಿರುವವೊ ? ಎಲ್ಲಾ ವಿಷದವಾಗಿ ಹೇಳು. ಯಾಕೆ ಮಾತನಾಡದಿರುವಿ ? ಅಡವಿಗೆ ಕಳುಹಿರುವರೆಂದು ನಮ್ಮ ಮೇಲೆ ಮುನಿದಿರುವಿಯಾ ? ಯಾಕೆ ಗಪ್ಪಾಗಿರುವಿ ? ಸ್ವಲ್ಪ ಮಾತನಾಡು.

ಮುದ್ದುಗೌಡ : ಪ್ರಿಯೆ ದಾರಿಯಲ್ಲಿ ಏನು ಮಾತನಾಡುವನು ? ಮನೆಗೆ ಹೋಗಿ ಉಪಚರಿಸಿ ಕೇಳೋಣ ನಡೆ.

ಸುಗ್ಗಲದೇವಿ : ಆಜ್ಞಾ (ಎಂದು ಎಲ್ಲರೂ ಹೋಗುವರು. ಈಶ್ವರ ಬರುತ್ತಾನೆ).

ಈಶ್ವರ : ಅಹಾ ಸಿದ್ಧರಾಮನು ಮರೆಯೊಳಗಿರುವಾ ದೀಪದಂತೆ ಹಾಲಿನೊಳಗಿರುವಾ ತುಪ್ಪದಂತೆ, ಮಾತಿನೊಳಗಿರುವ ಸತ್ಯದಂತೆ, ಈ ದೇಹದೊಳಗಿನ ಆತ್ಮನಂತೆ, ಗೋಪಾಲಕರೋಳ್ ಧೂಳಿಮಹಾಕಾಳನೆಂಬ ತನ್ನ ಹೆಸರಿನಲ್ಲಿ ಬೇರೆ ಮತ್ತೊಂದು ದೇಹವು ಬಾಲಕರಿಗೆ ತೋರಿದನು. ಆತನಿಂದ ದನ ಕಾಯುವಂತೆ ಮಾಡಿದನು. ಎಂಥಾ ಮಹಿಮಾಶಾಲಿಯು ? ಈ ಮಹಿಮೆಯು ಈ ಮಳ್ಳಾದ ದಂಪತಿಗಳಿಗೇನು ಗೊತ್ತು ? ಮತ್ತೂ ಧೂಳಿ ಮಹಾಕಾಳನೆಂದೆ ಒದರುವವು. ಈ ಮಹಿಮನು ತನ್ನ ಮಹತ್ಮವ ಲೋಕಕ್ಕೆ ತೋರಿಸಬಾರದೆಂದು ಗುಪ್ತದಿಂದಿರುವನು. ಮೇಲೆ ಶಿವಪೂಜಾ ವಿನೋದದೇ ಶಿವಾಚಾರವ ಲೋಕಕ್ಕೆ ಬೋಧಿಸುವ ಹಾಗೆ ಬೆಳೆಯುವನು. ಆತನು ಅಡಿ ಇಟ್ಟದ್ದೆ ಮಹಾಕ್ಷೇತ್ರವು. ನುಡಿದುದೆ ಚತುರ್ವೇದವು. ಮೈತೊಳಿಯುವುದೆ ಮಹಾತೀರ್ಥವು. ಇರಲಿ ಆ ಮಹಾತ್ಮನಾದ ಮಗುವಿನ ಲೀಲೆಯು ಜಗತ್ ಲೀಲೆಯು. ಜಗತ್ಪ್ರಸಿದ್ಧವಾಗಿ ತೋರ್ಪಡಿಸಲು ಬೇರೆ ಜಂಗಮ ವೇಷ ನಾನು ಧರಿಸಿ, ಆತನು ಈಗ ನವಣಿ ಹೊಲಕ್ಕೆ ಬರುವಂತೆ ಬೋಧಿಸಿರುವೆನು. ಅಲ್ಲಿಗೆ ಬಂದ ನಂತರ ಸುಲೀಲೆ ಆಚರಿಸುವಂತೆ

ಮಾಡಿ, ನಮ್ಮ ಪುರಕ್ಕೆ ಬರುವಂತೆ ಮಾಡುವಾ (ಎಂದು ಹೋಗುವುದರಲ್ಲಿ ಸೀನ್ ಮುದ್ದುಗೌಡನ ಮನೆ).

ಮುದ್ದುಗೌಡ : (ವ್ಯಸನದಿಂದ) ಪ್ರಿಯೆ ದಿನಾಲೂ ಈ ಸಿದ್ಧರಾಮನಿಗೆ ಗೋಪಾಲಕರೊಂದಿಗೆ ಹೋಗಿ ಹೋಗಿ ಬ್ಯಾಸರಾಗಿರಬಹುದು. ಇವತ್ತು ನಮ್ಮ ನವಣೆಯ ಹೊಲಕ್ಕೆ ಹೋಗಿ ಕಳುಹಿಸಿ, ಈತನ ಮನಾನಂದವನ್ನು ತಿಳಿದುಕೊಳ್ಳುವೆನು.

ಸುಗ್ಗಲದೇವಿ : ಈ ಧೂಳಿಮಹಾಕಾಳನು ಎತ್ತ ಹೋದರೂ ಮೂಕನಾಗಿದ್ದರೂ ಇರಲಿ, ಇಷ್ಟ ಪ್ರಸಾದ ಸೇವನೆ, ಜಲ ಸೇವನೆಗೈದರೆ ನನಗೆ ಸಂತೋಷವು. ಇಷ್ಟೆ ಪರಮೇಶನಲ್ಲಿ ಪ್ರಾರ್ಥಿಸುತ್ತೇನೆ. ಬೇಗನೆ ಕಳುಹಿಸಿ ಬನ್ನಿರಿ.

ಮುದ್ದುಗೌಡ : ಆಜ್ಞಾ (ರಸ್ತಾದ ಮುಂದೆ) ಇದೋ (ಎಂದು ಹೊಲ ತೋರಿಸಿ ಕೂಡಿಸಿ) ಮಗುವೆ ಹೊಲವನ್ನು ಕಾದುಕೊಂಡಿರು. ಚೋರೋಪದ್ರವವಾದೀತು ! ಯಾರಿಗೂ ಬರಗೊಡದೆ ಪಕ್ಷಿಗಳಿಗೆ ಸೇರಗೊಡದೆ ಒಳ್ಳೆ ಬಲವಾದ ಕಾವಲವನ್ನು ಇಡು. ನೋಡು ಧೂಳಿಮಹಾಕಾಳಾ ಎಲ್ಲಾ ಜೋಕೆ. ನಾನು ಹೋಗುತ್ತೇನೆ (ಎಂದು ಹೋಗುವನು).

ಸಿದ್ಧರಾಮ : (ಪಕ್ಷಿಗಳ ಕರೆಯುತ್ತಾ).

ಪದ

ಚಿನ್ನದ ಪಕ್ಷಿಗಳೆ ನೀವೆಲ್ಲರು ।
ಎನ್ನಯ ಹೊಲಕೆ ಬನ್ನಿ ತಿನ್ನಲು
ಮನ್ನಿಸಿ ಕಾಳುಗಳು ॥ ಪ ॥
ಛೇ ಛೇ ಹೆದರುವಿರ್ಯಾಕೆ
ಕವಣಿ ಇಲ್ಲ ಕೈಯೊಳು
ನಿಮ್ಮನು ನೋಡಿ ಆನಂದಿಪೆ ಮನದೊಳು
ವನದೊಳು ಬನ್ನಿ
ಹಗಲು ಇರುಳು ನೀವೆಲ್ಲರು
ಎನ್ನಯ ಹೊಲಕೆ ॥ ೧ ॥

ಆಹಾ ಪಕ್ಷಿಗಳಿರಾ ಇದೊ ನೀರು ತಂದಿರಿಸಿರುವೆನು ಕುಡಿಯಿರಿ. ಮತ್ತು ಈ

ಹಸಿ ಕಾಳಿನ ತೆನೆಗಳ ಮೇಲೆ ಕೂತು ಆತ್ಮಶಾಂತಿಯನ್ನು ಮಾಡಿಕೊಳ್ಳಿರಿ. ನಾನು ಬೆದರಿಸುವವನಲ್ಲಾ. ಬನ್ನಿರಿ ಬೇಗ ಬನ್ನಿರಿ (ಎಂದು ಕರಿಯುವಲ್ಲಿ ಈಶ್ವರಾ ಜಂಗಮ ರೂಪದಿಂದ ಬರುವನು).

ಈಶ್ವರ : ಪದ

ಆರು ದೂರಿಪರು । ಈ ಭವ ಸಾಗರಾ
ಮೀರಿ ಹೋಗುವವರು । ಯಮನಗರಾ ॥ ಪ ॥
ಮಾಡಲಾರದ ಪಾಪವ ಮಾಡಿ ।
ಕೂಡಲಾರದ ಕಾಮಿನಿಯರ ಕೂಡಿ
ಕೊಂಡು ಬಯಿಪರೋ ಈ ಜಗದಿ ॥ ೧ ॥
ಮಾಯ ಮೋಹದ ಮಾತನೆ ಹೊಂದಿ ।
ಕರಗಿ ಮರಗುವರೊ । ದೇಹ ವಿಕಾರದಿ ।
ಸಾಧ್ಯವಾಗುವರಾರೀ ಜಗದಿ ॥ ೨ ॥

ಜೈ ಶಂಕರ ಜೈ ಶಂಕರ ಸಚ್ಚಿದಾನಂದ (ಎಂದು ಬರುವುದನ್ನು ಗಾಬರಿಯಿಂದ ನೋಡಿ).

ಸಿದ್ಧರಾಮ : ಮಹಾಸ್ವಾಮಿ ತಮ್ಮ ಪಾದಪಂಕಜಗಳಿಗೆ ಬಾಲಕ ನಮಿಸುವೆನು.

ಈಶ್ವರ : ಬಾಲಕಾ ನಿನಗೆ ಜಯವಾಗಲಿ.

ಸಿದ್ಧರಾಮ : ಅಹಾ ಪ್ರಭು ! ಆಕಾರವಾದ ಜಂಗಮರೆ ತಾವು ಆವ ದೇಶದಿಂದ ಬಂದಿರುವಿರಿ ?

ಈಶ್ವರ : ಆ ! ಶಿಷ್ಯನೆ ನಾನು ಬಹು ಪ್ರಯಾಸದಿಂದ ತಿರುಗುತ್ತ ಇಲ್ಲಿಗೆ ಬಂದಿರುವೆನು.

ಸಿದ್ಧರಾಮ : ಮಹೇಶ್ವರರೆ ತಮ್ಮ ಸ್ಥಳವಾವುದು ?

ಈಶ್ವರ : ಭಕ್ತನೆ ನಾನು ಶ್ರೀಶೈಲದಲ್ಲಿರುವೆನು.

ಸಿದ್ಧರಾಮ : ನಿಮ್ಮ ಹೆಸರೇನು ?

ಈಶ್ವರ : ಮಲ್ಲಿಕಾರ್ಜುನನು .

ಸಿದ್ಧರಾಮ : ಒಳ್ಳೆಯದು ಆದರೆ ಇಲ್ಲಿಗೆ ಯಾಕೆ ಆಗಮಿಸಿರುವಿರಿ ?

ಈಶ್ವರ : ಭಕ್ತಾ ನನಗೆ ಹಸಿವೆ ಬಾಧೆ ಬಹಳವಾಗಿ ಈ ನವಣಿ ಸೀತನಿಗೆ ಆಶೆಗೊಂಡು ಇವನ್ನು ತಿನ್ನಲು ಇಲ್ಲಿಗೆ ಬಂದಿರುವೆನು. ಬಾಲಕಾ ನನಗೆ ಈ ಸೀತನಿಗಳ ಕೊಡುವಿಯಾ ?

ಸಿದ್ಧರಾಮ : ಓಹೊ ಆಲಸ್ಯ ಮಾಡದೆ ಕೊಡುವೆನು. ತಾವು ಉಚಿತಾಸನದಲ್ಲಿ ಕೂಡ್ರಬಹುದು. ನಾನು ತೆನೆ ತಂದು ಸೀತನಿ ತಿನಿಸುವೆನು.

ಈಶ್ವರ : ಒಳ್ಳೆಯದು (ಎಂದು ಕೂಡುವನು).

ಸಿದ್ಧರಾಮ : (ತೆನೆ ಮುರಿಯುತ್ತ) ಆಹಾ ಎಂಥಾ ಸಂತೋಷವು. ನಾನು ಇವತ್ತು ಧನ್ಯನಾದೆ. ನನ್ನ ನೇತ್ರಗಳು ಫಲಿಸಿದವು. ನನ್ನ ಕರ್ಣಗಳು ಈ ಮಲ್ಲಿನಾಥನಾ ವಾಕ್ಯಗಳಿಂದ ಕೃತ್ಯವಾದವು. ನನ್ನ ಸರ್ವಾಂಗವೆಲ್ಲವು ಈತನ ದರ್ಶನದಿಂದ ಪವಿತ್ರವಾಯಿತು. ಇರಲಿ ಈಗಲೇ ಈ ಭೂರುದ್ರನಿಗೆ ಸೀತನಿ ತಿನಿಸುವೆನು. ಮಹನೀಯರೆ ಸ್ನಾನ ಮಾಡಿರುವಿರಾ ?

ಈಶ್ವರ : ಭಕ್ತನಿಧಿಯೆ ನಾನು ಸ್ನಾನ ಮಾಡಿ, ಆಹಾರ ಹುಡುಕುತ್ತ, ಕಷಾಯ ವಸ್ತುಗಳ ಧರಿಸಿ ಮಡಿಯಿಂದ ನಿನ್ನ ಹತ್ತಿರ ಬಂದಿರುವೆನು.

ಸಿದ್ಧರಾಮ : (ತೆನೆಸುಟ್ಟು ಮುಂದಿಕ್ಕಿ)ಮಹನೀಯರೆ ನಾನಾದರೂ ಮನಿಯಿಂದೆ ಸ್ನಾನ ಮಾಡಿ ಬಂದಿರುವೆ. ಇನ್ನು ಸೀತನಿ ತಿನ್ನಿರಿ.

ಈಶ್ವರ : ಬಾಲಕಾ ಅವಶ್ಯವಾಗಲಿ. ಆನಂದ ಪರಮಾನಂದ (ಎಂದು ಒಲೆಯ ಮುಂದೆ ಕೂಡ್ರುವ).

ಸಿದ್ಧರಾಮ : (ಸೀತನಿ ಸುಡುತ್ತ).

ಪದ

ಕಂದನ ಉಪವನದೋಳ್ । ಹೊಂದಿಹ ಸೀತನಿಗಳ್ ।
ಇಂದಿವರನಾರಾಧಿಸಲ್ । ಇಂದವರು ಆನಂದಿಸಿ
ಸುಂದರ ಮಹೇಶ್ವರ । ಇಂದುಧರನಾಗುವೆ ॥ ೧ ॥

(ಎಂದು ಸೀತನಿ ಕೈಯಲ್ಲಿ ಕೊಡುವನು).

ಈಶ್ವರ : (ತೆಗೆದುಕೊಂಡು ತಿನ್ನುತ್ತ) ಸುಂದರ ಉಪವನದೊಳು ತಂದಿದ್ದ

ಸೀತನಿಗಳ್ ಇಂದಿವನ ನೋಡಲು ಮಂದಹಾಸ ಉದ್ಭವಿಸೆ, ಚಂದಿರ ಪುತ್ರನೆ ಹೊಂದಿದೆ ಬಹು ಭಾಗ್ಯವನಾ.

ಸಿದ್ಧರಾಮ : ಹಸಿಯುಳ್ಳ ಸೀತನೇ । ಬಿಸಿಯುಳ್ಳ ಸೀತನೇ । ಹಸರವುಳ್ಳ ಸೀತನೆ। ಕಸವುಳ್ಳ ಸೀತನೇ । ಸೇವಿಪುದೋ ನೀ

ಈಶ್ವರ : ಹಸಿವು ನೀಗಿದೆ ಬಿಸಿಯುಳ್ಳ ಸೀತನಿಗೇ. ಐಶ್ವರ್ಯವಾಗಲಿ ಶಿವ ಕೂಸೆ ನಿನ್ನ ಪೊಲದೋಳ್. ಧನ್ಯನೊ ಸಿದ್ಧರಾಮು ಧನ್ಯನೊ ಆನಂದನಾದೆನೆನಿಸಿ ಹಸಿವಾ ಸಿದ್ಧರಾಮಾ. ಆನಂದನಾದೆನೊ.

ಸಿದ್ಧರಾಮ : ಇದೊ ಸ್ವಾಮಿ ಹಸರು ತೆನೆ ಸೀತನಿ. ಕೊಬ್ಬಿದ ತೆನೆ ಸೀತನಿ. ನಸು ಗೆಂಪಿನ ಸೀತನಿ. ಬಾಗಿದ ತೆನಿಗಳ ಸೀತನಿ. ಹಸಿಹಾಲು ತುಂಬಿದ ಸೀತನಿ ಸೇವಿಸಿ ಈ ದಾಸನಿಗೆ ಸುನೀತಿ ಬೋಧಿಸಿ ಕೃತಕೃತ್ಯನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ (ಎಂದು ಸಾಷ್ಟಾಂಗ ನಮಸ್ಕಾರ ಬೀಳುವನು).

ಈಶ್ವರ : ಅಹಾಬಾಲಕಾ ಒಳ್ಳೆ ಆನಂದವಾಯಿತು. ನಿನ್ನ ಪರಮಾನಂದ ಭಕ್ತಿಗೆ ಮೆಚ್ಚಿದೆನು. ಯಾವತ್ಕಾಲದಲ್ಲಿ ನಿನ್ನ ಲೀಲೆಯು ಹೀಗೆ ಬೆಳೆಯುತ್ತಿರಲಿ. ದೇವರು ನಿನಗೆ ಕಲ್ಯಾಣ ಮಾಡಲಿ. (ಸ್ವಗತ) ಅಹಾ ! ಈ ಸಿದ್ಧರಾಮನ ಭಕ್ತಿಯು, ಸಾಹಸವು, ಧೈರ್ಯವು, ವಿಶ್ವಾಸವು, ಈ ಆಚರಣೆಯು ನೋಡಿ ನಾನು ಕಪಟೆಯುಂತಿರುವನಾದೆ. ರೇವಣಾರ್ಯರಿಗೆ ಸಹವಾಗಿ ಮೀರಿಆಚರಿಸುವನಲ್ಲಾ. ಇರಲಿ ಈತನಿಗೆ ನನ್ನ ನಿಜರೂಪ ತೋರಿ ಮಾಯವಾಗುವೆನು. ಆಮೇಲೆ ಹ್ಯಾಗಾಗುವದೊ ನನ್ನ ಹಿಂದೆ ಬರುವನೊ ಇಲ್ಲವೊ ನೋಡುವಾ (ಪ್ರಕಾಶ), ಬಾಲಕಾ ನಿನಗೆ ಆಶೀರ್ವಾದ ಮಾಡಿದೆನು. ಏಳು ಏಳು (ಎಂದು ಎಬ್ಬಿಸುವನು).

ಪದ

ನೋಡು ನೀನು ಮಮ ಶಿರದಾ ಶಿವನು ನೀ
ಬಾಲನೆ ನಿನ್ನಯ । ಲೀಲಾ ಸುಭಕ್ತಿಯಾ
ಲೀಲೆಯು ನೋಡಿ । ನಾ ತೋರಿಪೆನ್ನೈ
ಶೈಲಿಯ ರೂಪವು ಒಪ್ಪುವುದೊ । ಮಮ ಶಿರದ ॥ ೧ ॥

ಚಂದ ಸರ್ಪವು । ಬಂಧುರ
ಚಂದಿರ । ಸುಂದರ । ಕಕ್ಷದಿ । ಮಾಲೆಯು
ಹೊಂದಿದ ಭಸ್ಮ ಲೇಪನವೊ ॥ ೨ ॥

(ನಿಜರೂಪ ತೋರಿ) ಬಾಲನೆ ನೀನಿನ್ನು ಧನ್ಯನಾಗುವಿ (ಎಂದು ಕಮಂಡಲದ ಉದಕ । ಬೆತ್ತ ಚರ್ಮ ಶ್ಯೆಲಿ ಗುಪ್ತದಿಂದಿರುವುವುಗಳನ್ನು ತೆಗೆದು ತೋರಿಸುವನು.

ಸಿದ್ಧರಾಮ : ಅಹಾ ಶ್ರೀಶೈಲಾಧಿಪತಿಯೆ ನಿಮ್ಮ ಮಹತ್ತರವಾದ ರೂಪವು ಮಹತ್ವವ ನೋಡಿ ನಾನು ಧನ್ಯನಾದೆನು.

ಪದ

ಧನ್ಯನಾದೆನೋ ದೇವಾ । ಧನ್ಯನಾದೆನೋ ॥ ಪ ॥

ಸಿರದಿ ನದಿಯು । ಕರದಿ ಪಾತ್ರೆಯು
ಉರಿವ ನೇತ್ರವು । ಹೊರುವಾ ಚರ್ಮವು
ಮೆರಿವಾಹಿ ಕುಂಡಲವನು ನೋಡಿ ॥ ೧ ॥

ಸರ್ವಾಭರಣ ಧರಿಸಿ । ಹರಿಣ ಕಪ್ಪುಗೊರಳ ।
ಮುಪ್ಪರೀಶನ । ಜಪಮಾಲಿಕೆಯ ನೋಡಿ ॥ ೨ ॥

ವೊಹೋ ದೇವಾ ನಿನ್ನ ಜಡೆಯ ಮುಕುಟದ ಶಶಿಯು ಸುರನದಿಯು ಅಹಿಕುಂಡಲವು ಸರ್ವಾಭರಣವು, ಭಸಿತ ಲೇಪನವು, ರುಂಡಮಾಲಿಕೆಯು ಹೊಸ ವ್ಯಾಗ್ರಾಂಬರವು, ಹಿಡಿದ ತ್ರಿಶೂಲಾಯುಧವು, ನೋಡಿ ಧನ್ಯನಾದೆನು.

ಈಶ್ವರ : (ಸ್ವಗತ) ಹಾ ! ಈ ಸಿದ್ಧರಾಮನಿಗೆ ನನ್ನ ಪರ್ವತಕ್ಕೆ ಕರೆದುಕೊಂಡು ಹೋಗುವಾ ಯೋಚನೆ ಮಾಡುತ್ತೇನೆ. ಅಲ್ಲಾ ಹೀಗೇ ಮಾಡುತ್ತೇನೆ. (ತಿರುಗಿ) ಸಿದ್ಧರಾಮಾ ನನಗೆ ಹುಳಿಬೋನ ಮೊಸರು ಉಣಿಸು. ಇಂಗು ಯಾಲಕ್ಕಿ ಮೆಣಸು ಜಾಜಿ ಮಿಶ್ರವಾದ ತಾಂಬೂಲವನ್ನು ನನಗೆ ತಂದು ಕೊಡುವಿಯಾ? ನನಗೆ ಉಷ್ಣವಾದ ಸೀತನಿಯು ಸ್ವೀಕರಿಸಿ, ಅಂಗವು ತಪ್ತವಾಗಿರುವುದು. ಜಾಗ್ರತೆಯಾಗಿ ತಂದು ಕೊಟ್ಟರೆ ಶರೀರವು ತಂಪಾಗುವುದು.

ಸಿದ್ಧರಾಮ : (ಬರಬರುತ್ತ) ಅಹಾ ಮುತ್ತಯ್ಯನೆ ಅವಶ್ಯವಾಗಿ ತರಲು ಮನೆಗೆ ಹೋಗುವೆ. ಬೇಗನೆ ಬರುವೆ. ಆದರೆ ನಾನು ಇದೊ ಈ ವೃಕ್ಷದ ಕೆಳಗೆ ಆಸನ ಹಾಕಿರುವೆನು ಇಲ್ಲಿ ಕೂಡಿರಿ. ಅತ್ತಿತ್ತ ನೋಡಬೇಡಿರಿ.

ಚೋರರುಪದ್ರವ ಬಹಳವಾಗಿರುವುದು. ಮತ್ತು ಕರಡಿ ಹುಲಿ ಸರ್ವ ಪಿಶಾಚಿಗಳುಂಟು. ಯಾವ ಕಡಿಗೆ ಹೋಗಬೇಡಿರಿ. ಇದೊ ನಾನು ಮಂಡಲ ಬರೆಯುತ್ತೇನೆ. ದಾಂಟ ಹೋಗತಕ್ಕವರಿಗೆ ಜಯವಾಗುವುದಿಲ್ಲ. ಮೈಯಲ್ಲಿ ಪಿಶಾಚಿ ಸರ್ಪಗಳು ಸುತ್ತುತ್ತವೆ. ಹಾಂ ಜೋಕೆ ಮಲ್ಲಿನಾಥಾ ಜೋಕೆ. ನಾನು ಹೋಗುತ್ತೇನೆ(ಎಂದು ಹೋಗುತ್ತಾನೆ.)

ಈಶ್ವರ : (ರಸ್ತಾ ಮುಂದೆ ಹೋಗುತ್ತಾನೆ). ಓಹೊ ಸಿದ್ಧರಾಮನು ತನ್ನ ತಾಯಿ ತಂದೆಗಳ ಹತ್ತಿರ ಹೋಗಿ ಹುಳಿಬೋನ ಮೊಸರು ತರುವುದರಲ್ಲಿ ಮಾಯವಾಗಿ ಹೋಗಿ ಮತ್ತೊಂದು ಸ್ಥಳದಲ್ಲಿ ವಾಸಿಪೆನು (ಎಂದು ಹೋಗುವುದರಲ್ಲಿ ಸೀನ್ ಮುದ್ದುಗೌಡನ ಮನೆಯಲ್ಲಿ ಕೂಡುವರು).

ಸಿದ್ಧರಾಮು : (ಆತುರದಿಂದ ಬಂದು) ಅಹಾ ! ತಾಯಿಂಯೆ ನನಗೆ ಹಸಿವೆಯಾಗಿರುವುದು. ಹೊಲದಲ್ಲಿ ಯಾರೂ ಇಲ್ಲವು. ಬೇಗ ಹೋಗುತ್ತೇನೆ. ನನಗೆ ಹುಳಿಬೋನ ಮೊಸರು ಬೇಗನೆ ಕೊಡು. ತೀವ್ರದಿಂದೆ ಕೊಡು. ಜವದಿಂದೆ ಕೊಡು.

ಸುಗ್ಗಲದೇವಿ : **ಪದ**

ಸುಕುಮಾರಾ ಈಗೆ । ಹರುಷವು ಒದಗಿರಲು
ತೆಜಿಸಿ ಮನ ಕೋಪಾ । ತಡಿಯುವುದು ಈ ಸುಖ ಸಾರಾ ॥ ಪ ॥

ಕುಮತಿಯ ಅರಿಯದೇ । ಗೈ ಪ್ರೇಮಾಸ್ಪದ
ಗಳಿಗೆ ವಿನೋದಾ ॥ ೧ ॥

ಸಮಸುಖ ಶಾಂತಿಯು । ಕಾಣುವುದೀಗಳು ।
ಹಾಸ್ಯಾಸ್ಪದವು । ನೀ ಮಮ ಬಾಲಾ।
ಗುಣಶೀಲ । ಸುಕುಮಾರ ಈಗೆ ॥ ೨ ॥

ಬಾಲಕನೆ ಇಷ್ಟೇಕವಸರವು ?

ಸಿದ್ಧರಾಮು : ಮಾತೆಯೆ ಅದೇನು ಇಲ್ಲಾ. ಮುಂದೆ ತಿಳಿಯುವುದು.

ಸುಗ್ಗಲದೇವಿ : ಅಹಾ ಧೂಳಿಮಹಾಕಾಳಾ ನಿನ್ನ ಮುಖದಿಂದೆ ಮೌಕ್ತಿಕಗಳು ಕಂಡೆ ನಲ್ಲಾ. ಮಗುವೆ ನಿನ್ನ ವಾಕ್ಯ ರತ್ನಗಳು ಬಾಯಿಂದ ಬೀಳುತ್ತಿರುವವಲ್ಲಾ.

ನಿನಗೆ ಹಡದುದು ಇಂದೆ ಸಾರ್ಥಕವಾಯಿತು. ಜಗತ್ತಿನಲ್ಲಿ ಸಪ್ತ ವರುಷ ನೆರವಿಸಿದರೆ ಕೀರ್ತಿ ಪಸರಿಸಿಕುಂ ಪವಿತ್ರವಾಗಲು ವಂಶವೃದ್ಧಿಯಾಗಲು ಆನಂದವಾಗಲು ಸುಖವು ತೋರುತ್ತದೆ. ಆಗಲಿ ಸಂತೋಷದ ವಾಕ್ಯಗಳ ತಿಳಿದೆವು. ಬಾಲಾ ನಿನ್ನ ಮಾತಾ ಪಿತರು ಧನ್ಯರಾದೆವು. ಬುತ್ತಿ ಮೊಸರು ತಂದುಕೊಡುವೆನು. ಬೇಗನೆ ಹೋಗಿ ಬಾ (ಎಂದು ತಂದು ಕೊಡುವಳು). (ಮಗನು ಹೋದ ಮೇಲೆ) ಅಹಾ ಪ್ರಾಣಪ್ರಿಯಾ ಇವತ್ತು ನಮ್ಮ ಹೆತ್ತ ಕುಮಾರನಾದ ಧೂಳಿಮಹಾಕಾಳನು ಮಾತನಾಡಿದನಲ್ಲವೆ. ನಮಗೆ ಬಹಳ ಆನಂದವಾಯಿತು. ದರಿದ್ರನಿಗೆ ದ್ರವ್ಯ ದೊರಕಿದಂತೆ ಆಯಿತು ಬಂಜೆಯರಿಗೆ ಮಕ್ಕಳಾದಂತೆ, ಕುರುಡರಿಗೆ ಕಣ್ಣು ಬಂದಂತೆ ನಮಗೆ ಅತ್ಯಾನಂದವಾಯಿತು.

ಮುದ್ದುಗೌಡ : **ಪದ**

ಪ್ರಿಯೆ ನಿಶ್ಚಯಾ ಇವಾಗೆ ನಮ್ಮ
ಜನ್ಮವು ಆನಂದಮಯವಾದುದು ।
ಒಳ್ಳೆ ದೃಷ್ಟಿ ಇರಲು । ಅಂಧನಿಗೆ ಸುಪುತ್ರನಾಗೆ ।
ಅಂಧಳಿಗೆ ಆರೇವಾಸಿ ಮಾಡಲು । ಖಾಸನಾಗೆ
ವೀ ಪಸರ್ವ ವಿಲಾಸ ವಿಷದವರೆ । ಅರಿತದಿರೆ
ಶ್ರಮ ದೂರಿಸಿ । ಕೃಪಗೊಳಿಸಿ । ಇಬ್ಬರೆ

ಪ್ರಿಯಳೆ ಇವಾಗೆ ನಮ್ಮ ಸಂತೋಷವೆಂಬ ಕಡಲು ಉಕ್ಕೇರಿ ಪಸರಿಸಿತು. ಜನ್ಮ ಸಫಲವಾಯಿತು. ನಮ್ಮ ಜನ್ಮ ಸಾರ್ಥಕಗೊಳಿಸಿದ ದೇವ ಧನ್ಯನಾದ. ಆ ಮೂಢ ಮಗನು ಈಗೆ ಬಂದಾನು. ಆತನಿಗೆ ದೇಹ ಶಮನಾರ್ಥವಾಗಿ ಉದರ ಆನಂದವಾಗಲು ಸಾಯಂಕಾಲಕೆ ಆತನಿಗೆ ಬಿಸಿನೀರಿನಿಂದ ಸ್ನಾನ ಮಾಡಿಸಿ ಪಂಚಾಮೃತ ಭೋಜನಗೈಸೋಣ ನಡೆ (ಎಂದು ಹೋಗುವರು. ರಸ್ತಾದ ಮುಂದೆ).

ಸಿದ್ಧರಾಮ : (ನೆತ್ತಿ ಮೇಲೆ ಬುತ್ತಿ ಹೊತ್ತುಕೊಂಡು) ವೋಹೋ ನಮ್ಮ ತಂದೆಯಗೋಸ್ಕರ ಇವರ ಬುತ್ತಿಯನ್ನು ಒಯ್ಯುತ್ತೇನೆ.

ಪದ

ಸ್ಥೂಲವಿಶಾಲವಗಲದನ್ನ । ಶೈಲಾಧಿಪತಿಗೆ
ನಾ ಸೇವಿಸುವೆನೋ । ॥ ಪ ॥

ಮಂಗಲಾಕಾರನು । ಜಂಗಮರೂಪನು
ಅಂಗದನಾರಿಯು । ನೋಡುತಿರೆ ॥ ೧ ॥

ಘೋರ ವ್ಯಾಳ್ಯನ । ತೋರುವ ಈಗದಳಾ ।
ಮಾರಲಿದಾರಯ । ಕೋಪಿಸುವಾ ॥ ೨ ॥

ಅಹಾ ನಮ್ಮ ಸುಗ್ಗಲದೇವಿಯು ಕೊಟ್ಟಿರುವ ಈ ಬುತ್ತಿಯು ಬೇಗನೆ ನಮ್ಮ ಶೈಲಾಧಿಪತಿಗೆ ಸಲ್ಲಿಸಿ ನಾನು ಭಜನಾದಿಗಳನ್ನು ಮಾಡಿ ಆತನಿಗೆ ಆನಂದಗೊಳಿಸುವೆನು. ಬೇಗನೆ ಹೋಗುತ್ತೇನೆ. ನಿಲ್ಲಲು ಇದು ಸಮಯವಲ್ಲ. ಇಲ್ಲೇ ಸಮೀಪದಲ್ಲಿ ಒಂಟಿಣಿಯಾದ ಹುಲ್ಲು ಕಾಣುತ್ತಿದೆ. ನಮ್ಮ ಮುತ್ತಯ್ಯನಾದ ಮಲ್ಲಿಕಾರ್ಜುನನು ಅಲ್ಲೆ ಕೂತಿರಬಹುದು. ಮತ್ತು ನನ್ನ ದಾರಿಯು ನೋಡುತ್ತಿರಬಹುದು. ಬಹಳ ಹಸುವೆಗೊಂಡಿರಬಹುದು. ಆದ್ದರಿಂದ ತೀವ್ರವಾಗಿ ಗಮಿಸುತ್ತೇನೆ (ಎಂದು ಹೊಲಕ್ಕೆ ಬರುವನು).

ಈಶ್ವರ : ಓಹೊ ಸಿದ್ಧರಾಮ ಇಲ್ಲಿಗಾದರೂ ಹೊರಟಿದ್ದಾನೆ. ಇಲ್ಲಿಂದಾದರೂ ಸ್ವಲ್ಪ ಮರೆಯಾಗುತ್ತೇನೆ (ಎಂದು ಮಾಯವಾಗುವನು. ಸಿದ್ಧರಾಮನು ಬರುವನು).

ಸಿದ್ಧರಾಮ : ಅಹಾ ಮಲ್ಲಿಕಾರ್ಜುನ ಎಲ್ಲಿರುವಿ ? ಯಾವ ಕಡೆಗೆ ಹೋಗಿರುವಿರಿ? ಅಪ್ಪಾ ನನಗೆ ದಾರಿಯು ತಪ್ಪಿತೇನು ? ಇಲ್ಲಿಲ್ಲಾ (ಆ ಎಂದು ನೋಡಿ) ಇದೊ ಇಲ್ಲಿ ನಟಿಸಿದ ಹೆಜ್ಜೆ ಹಾಗೆ ಹಾವುಗೆಗಳ ಬಿಟ್ಟು ಎತ್ತಲಿ ಹೋಗಿರುವಿ ? ಇದೊ ಇಲ್ಲಿ ಕುಳಿತು ಸೀತನಿ ಕಾಳು ಬಿದ್ದಿರುವವಲ್ಲವೆ ? ಮಲ್ಲಿನಾಥನೆ ಎಲ್ಲಾದರೂ ಅಡಗಿ ನನಗೆ ಘಾಸಿ ಮಾಡಬೇಕೆಂದಿರುವೆಯಾ ? ಇಲ್ಲಿಲ್ಲಾ ಕಾಸಾರದಲ್ಲಿಯೂ ಇಲ್ಲಾ ಪುಷ್ಪದ ಗುಂಪುಗಳಲ್ಲಾದರೂ ಇಲ್ಲ. ಎಲ್ಲಿ ಹೋದನು ? ದೇವಾಲಯದಲ್ಲಾದರೂ ಇಲ್ಲ. ಹಾಂ ದೇವಾ ಮೋಸ ಮಾಡಿದೆಯಾ ? ಹಾಂ ಮಲ್ಲಿನಾಥಾ ನಿನ್ನ ಸುಂದರ ಮುಖವು ಎರವು ಮಾಡಿದೆಯಾ ? (ಎಂದು ವ್ಯಸನದಿಂದ).

ಪದ

ಚೆನ್ನಯ್ಯ ಬಾ । ಮಲ್ಲಯ್ಯ ಬಾ ।ಚೆನ್ನಮಲ್ಲಯ್ಯ ಬಾ ।
ಶೈಲಾಧಿಪತಿಯೆ ಬಾ । ಜಂಗಮ ಜ್ಯೋತಿಯೆ ಬಾ ॥ ಪ ॥

ಮಮ ತಂದೆಯೆ ಬಾ । ಎಲ್ಲಿರುವಿ ಬೇಗನೆ ಬಂದು
ಮುಖ ತೋರು । ಈ ವೇಷಧಾರಿಯು । ನೀ ನನಗೆ
ಮೋಸ ಮಾಡಿದೆಯಲ್ಲಾ ಹಾಯಾ ॥ ೧ ॥

ಹಾ ಮಲ್ಲಯ್ಯ ಮಲ್ಲಿಕಾರ್ಜುನಾ ಎಲ್ಲಿರುವಿ ? ಎಲ್ಲಿರುವಿ ? ಅಪ್ಪಾ ಎಲ್ಲಿರುವಿ? ಆತನ ಸುಳಿವೆ ಎಲ್ಲಿ ಇಲ್ಲ.

ಪದ

ಘಾತ ಮಾಡಿದೆಯಾ ನೀ ಮಲ್ಲಿಕಾರ್ಜುನಾ ।
ಈವರೆಗೆಯೂ ಆರಿಗೂ ತೋರಿಲ್ಲಾ ।
ಆ ರೂಪ ತೋರಿಪರೊ ॥ ಪ ॥

ಚಂದ್ರಕ್ಕಿ ಮೊಸರು ಸುಂದರ ಮೆಣಸು
ಇಂದು ಯಾಲಕ್ಕಿಗಳು ತಂದಿಹೆನಾ ॥ ೧ ॥

ಹಾ ಮಲ್ಲಯ್ಯ ಮಲ್ಲಿಕಾರ್ಜುನಾ (ಎಂದು ಬೀಳುವನು ಪರ್ವತ ಜಂಗಮರು ಬರುವರು).

ಜಂಗಮರು : **ಪದ**

ಶ್ರೀ ಶಿವನನ್ನು ಸತತ ಭಜಿಪೆವು ನಾವು ।
ಸತತ ಭಜಿಪೆವು । ಸತತ ಭಜಿಪೆವು ।
ಅರಾಧಿಸುವೆ ಮಾತೆ ಮಾವನ್ನ ॥ ೧ ॥
ಭಕ್ತೋದ್ಧಾರಾ ದೈತ್ಯಪಹಾರಾ ಮಾಯವಿದೂರ ನಿಜವನ್ನ ॥ ೨ ॥

(ಗಾಡಿಯಿಂದಿಳಿದ ಹಾಗೆ ನಟಸಿ) ಬನ್ನಿರೊ ಏನ್ನಿರಿ ಜಲ್ದಿ ಹೊತ್ತು ಹೋಗುವುದು ಜಲ್ದಿ ನಡೆಯಿರಿ).

೨ನೇ ಜಂಗಮ : (ಮುದುವ) ನಿಂದರ್‍ರಿ ಎಲೊ ಮೊಮ್ಮಕ್ಕಳಿರಾ ನಾನೂ ಬರ್ತೀನಿ ಈ ಮುದುಕನನ್ನು ಬಿಟ್ಟು ಹೋಗಬೇಡಿರಿ.

೧ನೇ ಜಂಗಮ : ಎಲೊ ಇದೇನೊ ನಮಗೆ ಯಮ ಗಂಟು ಬಿದ್ದಿತು. ಅಂಥವನು ಯಾಕೆ ಪರಸಿ ಸಂಗಟ ಹೊರಡಬೇಕೊ ? ನಡಿರೊ ನಡಿರಿ. ಹಾಗೆ ತೇಗುತ್ತಾ ಆ ಮಗ ತಾನೆ ಬರುವನು. ಆ ಮಗನ ಕೆಲಸವೇನಿರುವುದು ?

೨ನೇವ : ಎಲೊ ಇಲ್ಲಿ ಕೆಟ್ಟ ಮಲಿಮಂಜಾನ ಇರುವುದು ಬೇಗ ನಡಿಯಿರೊ (ಎಂದು ಕುಚೇಷ್ಟೆ ಮಾಡುತ್ತಾ).

ಸಿದ್ಧರಾಮ : ಆಹಾ ಮಲ್ಲಯ್ಯ ಮಲ್ಲಿನಾಥಾ (ಎಂದು ಅಳುತ್ತಿರಬೇಕು).

೧ನೇವ : ಎಲೊ ಇಲ್ಲಿ ಯಾರೊ ಅಳುತ್ತಿರುವರಲ್ಲಾ.

೨ನೇವ : ಎಲೊ ಎಲ್ಲಿ ನೋಡೋಣ ನಡಿಯಿರೊ.

೩ನೇವ : ಎಲೊ ಸುಮ್ಮನೆ ಯಾಕೆ ಹುಡುಕುವಿರಿ ಇಲ್ಲಿ ಬಿದ್ದಿರುವವನು. ನೋಡಿರಿ (ಎಂದು ತೋರಿಸಬೇಕು).

೧ನೇವ : (ನೋಡಿ). ಎಲೊ ತಮ್ಮ ನೀನು ಯಾರು ? ನಿನ್ನ ಪುರ ಯಾವುದು ? ನಿನ್ನ ಹೆಸರೇನು ?

ಸಿದ್ಧರಾಮ : ನನ್ನ ಗ್ರಾಮವು ಸೊನ್ನಲಾಪುರವು ನನ್ನ ಹೆಸರು ಸಿದ್ಧರಾಮನು ತಿಳಿದಿರಾ.

೨ನೇವ : ನಿನ್ನ ತಾಯಿ ತಂದೆಗಳಿರುವರೆ ?

ಸಿದ್ಧರಾಮ : ಹೌದು ಇದ್ದಿರುವರು.

೩ನೇವ : ಅಯ್ಯೊ ನಮಾಪನೆ ಇಂಥಾ ನಟ್ಟಡವಿ ದಾರಿಯಲ್ಲಿ ಈ ಪರಿಯಾಕೆ ಗಾಳ್ಯಾಗ, ಇಂಥಾ ಮಣ್ಣಾಗ ಬಿದ್ದು ಯಾಕೆ ಹೊರಳಾಡುತ್ತಿರುವಿ ? ಯಾವ ಕಷ್ಟ ಬಂದಿರುವದು ಖರೆ ಖರೆ ಹೇಳು. ಈ ಕಲ್ಲು ಮುಳ್ಳಾಗ ಬಿದ್ದು ನೀರಡಿಸಿ ಹಸ್ತು ಅವಸರವಾಗಿ ಯಾಕೆ ಅಳುತ್ತಿರುವಿ ಹೇಳು ?

ಸಿದ್ಧರಾಮ : ಭೂರುದ್ರರೆ ನಾನೇನು ಹೇಳಲಿ ? (ಎದ್ದು ಕೂತು) ನಮ್ಮ ಮಲ್ಲಯ್ಯನಿಗೆ ನೋಡಿರುವಿರಾ ?

೪ನೇವ : ಯಾವ ಮಲ್ಲಯ್ಯನು ? ಯಾವ ವಿಶ್ವರಾಧ್ಯರೊ ? ಯಾವ ರೇವಣಾರ್ಯರೊ ? ಯಾವ ಮರುಳಾರಾಧ್ಯರೊ ? ಯಾವ ರುದ್ರಾರಾಧ್ಯರೊ ? ಯಾವ ಮಲ್ಲಿನಾಥರೊ ತಮ್ಮಾ ಯಾರು ಅವರು ? ಯಾವ ಸ್ಥಳದಲ್ಲಿರುವರು ಹೇಳು.

ಸಿದ್ಧರಾಮ : ಅವರು ಪರ್ವತದಲ್ಲಿರುವರು. ಅವರ ಹೆಸರು ಶ್ರೀ ಮಲ್ಲಿನಾಥರು. ಮಲ್ಲಿಕಾರ್ಜುನರು.

೧ನೇವ : ವೋಹೋ ಆ ಮಲ್ಲಿನಾಥರಾದರೆ ಯಾಕೆ ಅಳುವಿ ? ನಾವು

ಬೇಕೆಂದರೆ ಅಲ್ಲಿಗೆ ಹೋಗುತ್ತಿದ್ದೇವೆ. ನಡೆ ನಮ್ಮ ಸಂಗಡ ಅಲ್ಲಿಗೆ ಕರಿದುಕೊಂಡು ಹೋಗುವೆವು.

ಸಿದ್ಧರಾಮ : ಮಹನೀಯರೆ ಆ ಮಲ್ಲಿನಾಥನ ದರ್ಶನಕಾದರೆ ಬರುವೆನು ನಡಿಯಿರಿ.

೨ನೇವ : ನಿಶ್ಚಯ ಅಲ್ಲಿಗೆ ಹೋಗುತ್ತೇವೆ ನಡಿ (ಎಂದು ಪದ ಹಾಡುತ್ತ ಭಜನಿ ಮಾಡುತ್ತ ನಡೆಯುವುದು).

ಸುಗ್ಗಲದೇವಿ : ಹಾ ದೇವಾ ಪ್ರಾಣಪ್ರಿಯರೆ ಯಾವ ನವಣಿ ಹೊಲ ಕಾಯಲು ಹೋದ ಬಾಲಕನು ಇನ್ನೂ ಯಾಕೆ ಬರಲಿಲ್ಲಾ ?

ಮುದ್ದುಗೌಡ : ಲಲಿತಾಂಗಿಯೆ ನನಗಾದರೂ ಏನು ಗೊತ್ತು ? ಇವಾಗೆ ಹೊತ್ತು ಮುಳುಗಿತು. ಇನ್ನು ಸ್ವಲ್ಪ ಹೊತ್ತು ಹುಡುಕೋಣ ನಡೆ (ಎಂಬುವದರಲ್ಲಿ ಹುಡುಗರು ರಸ್ತಾದ ಮುಂದೆ ಬರಬೇಕು). ಎಲೊ ಬಾಲಕರೆ ನಮ್ಮ ಧೂಳಿಮಹಾಕಾಳನಿಗೆ ನೋಡಿದಿರಾ ?

೧ನೇ ಹುಡುಗ : ಇಲ್ಲಿಲ್ಲ ತಾಯಿಯೆ ನಾವು ನೋಡಲಿಲ್ಲ. ಧೂಳಿಮಹಾಕಾಳ ಸಿದ್ಧರಾಮನನ್ನು ನಾವು ನೋಡಲಿಲ್ಲ.

೨ನೇ ಹುಡುಗ : ಹೌದು ತಾಯಿ ಸಿದ್ಧರಾಮನು ನಿತ್ಯ ನಮ್ಮ ಕೂಡ ಬರುತ್ತಿದ್ದನು. ಎರಡು ಮೂರು ದಿವಸ ಆಯಿತು ನಮ್ಮ ಜತಿಯಲಿಲ್ಲಾ. ಆತನು ಮತ್ತೊಬ್ಬ ಧೂಳಿಮಹಾಕಾಳನೆಂದು ಮಾಯದ ಬೊಂಬೆ ಮಾಡಿದ್ದನು. ಆತನು ದನ ಕಾಯುತ್ತಿದ್ದನು. ನಾವೆಲ್ಲರೂ ಸಿದ್ಧರಾಮನೊಂದಿಗೆ ಭಜನೆ ಮಾಡುತ್ತಿದ್ದೆವು ಆತನು ಆ ಚಿಕ್ಕ ಗುಡ್ಯಾಗ ದೇವರ ಪೂಜೆ ಮಾಡಿ ಭಜನೆ ಮಾಡಿ ಬೇಕಾದ ಪದಾರ್ಥ ಉಣ ನೀಡುತ್ತಿದ್ದನು. ನಾವು ಜೊಗ್ಗಿ ಹೊಡಿಯುತ್ತಿದ್ದೆವು. ತಾಯಿ ಇವತ್ತೆ ಬಂದಿಲ್ಲಾ ನಮಗೂ ಚಿಂತಿ ಆಗ್ಯಾದೆ. ಏನು ಮಾಡಬೇಕು ?

ಸುಗ್ಗಲದೇವಿ : ಹಾಂ ಪ್ರಾಣಪ್ರಿಯಾ ಹ್ಯಾಗೆ ಮಾಡಲಿ ? ಮಗನಿಗೆ ಹುಲಿ ಕರಡಿ ತಿಂದವೊ ? ನರಿ ನಾಯಿಗಳು ಹರಿದವೊ ? ಅಲ್ಲದೆ ಕಾರೆ ಬೋರೆ ಮುಳ್ಳು ನಟ್ಟವೊ ? ಹಾ ಸಿದ್ಧರಾಮ ಹೀಗೆ ಕರಿಯಲಿಲ್ಲವೆಂದು ಎಲ್ಲ್ಯಾದರೂ ಮುನಿಸಗೊಟ್ಟು ಮರೆಯಾಗಿರುವಿಯಾ ? ನಿನ್ನ ಮುದ್ದು ಮುಖವು ಇನ್ನೆಂದು ನೋಡಲಿ ? (ಎಂದು ಬೀಳುವಳು).

ಮುದ್ದುಗೌಡ : ಹಾ ಪ್ರಿಯೆ ಯಾಕೆ ರೋದಿಸುವಿ ? ಆ ನಮ್ಮ ನವಣಿ ಹೊಲದ ಹತ್ತರ ಆಜು ಬಾಜು ಹುಡುಕುತ್ತ ಹೋಗುವ ನಡೆ. ಬಾಲಕರೆ ನೀವಿನ್ನು ಹೋಗಿರಿ

ಪದ

ಹತಭಾಗ್ಯರಾದೆವು । ಬಿಟ್ಟು ನೀ ಯರವಾದಿಯಾ ।
ಹೋದೆಯಾ ಕುಮಾರನೆ । ಮಾಯವ ತೋರಿಸಿ
ವಾಯು ಚಕ್ರದಿ ನೀ ಸಿಲ್ಕಿದೆಯಾ ? ॥ ೧ ॥

ಕಂದನೆ । ಸುಂದರ । ಚಂದಿರ । ರೂಪನೆ
ಇಂದು ನೀ ಯನಗೆ ಮರೆಯಾದಿಯೊ ॥ ೨ ॥

ಹಾಂ ಮಗುವೆ ಈ ನಾಡ ನರಕಿಗಳ ಸಂಗವ್ಯಾತಕೆಂದು ಮಾಯವಾಗಿರುವಿಯಾ? ಪ್ರಿಯೆ ಇನ್ನು ಎಷ್ಟು ದುಃಖಿಸಿದರೂ ಮಗನು ದೊರಿಯುವನೊ ? ಇಲ್ಲೊ ? ಇನ್ನು ಸ್ವಲ್ಪ ಆ ಕಾಸಾರದಲ್ಲಿ ನೋಡುವಾ ನಡೆ (ಎನ್ನುವನು).

ಸುಗ್ಗಲದೇವಿ : ಪ್ರಿಯಾ ನಡಿಯಿರಿ (ಎಂದು ಮೇಲಿನ ಪಲ್ಲವಿ ಹಾಡುತ್ತಾ ಅರಣ್ಯ ಸೀನ್‌ನಲ್ಲಿ ಪ್ರವೇಶ).

ಪದ

ಮೃದು ಮಧುರವಾದ ಮಾತುಗಳು ಎನ್ನ ।
ಧ್ಯಾನದಿಂದೆ ಮನ ಮೋಹಿಸಿದೆ ॥ ಪ ॥

ಚಿತ್ರ ವಿಚಿತ್ರ ಲೀಲೆಯ । ತೋರಿ
ಪುತ್ರ ನೀ ಯರವಾದಿಯಾ ? ॥ ೧ ॥

ಕಡುಪಾಪಿಗಳು । ಸುಡು ಈ ಜನ್ಮ ।
ಹಡಗವು ಮುಳುಗಿಸಿದ್ಯಾ ॥ ೨ ॥

ಹಾ ಪ್ರಿಯಾ ಏನು ಮಾಡುವುದದೆ ? ನನ್ನ ಹೃದಯದಲ್ಲಿ ಕಸಿವಿಸಿ ಆಗುತ್ತಿರುವುದು. ತಂದೆ ತಾಯಿಗಳೆಂದು ನಮಗೆ ಒಮ್ಮೆಯಾದರೂ ಕರೆಯಲಿಲ್ಲವಲ್ಲಾ. ಮಾತುಗಳಾದರೂ ನಮ್ಮ ಕೂಡ ಆಡಲಿಲ್ಲ. ನಾವು ಗಾಡಿಯ ಮೇಲೆ ಕೂಡಿಸಿ ಆಟ ಪಾಠಾದಿಗಳ ಲೀಲೆಯ ನೋಡಲಿಲ್ಲಾ. ಸಕ್ಕರಿ ಬಾದಾಮ ತಿನ್ನಲಿಕ್ಕೆ ಕೊಡಲಿಲ್ಲಾ. ಎಲೆ ಪಾಪಿ ಹಸ್ತಗಳಿರಾ ನೀವು ಎಂಥಾ ಹತಭಾಗ್ಯರು ? ಎಲೆ ನೇತ್ರಗಳಿರಾ ನೀವು

ಸುಮ್ಮನೆ ಅಂಧಕರಾಗಿದ್ದರೆ ನೆಟ್ಟಗಿತ್ತು. ಮಗನ ನೋಡಿ ಎತ್ತಿ ನೀವು ಸಂತೋಷಿಸಲಿಲ್ಲಾ. ನಾವು ಜಗದಲ್ಲಿ ಮರನಾದೆವಲ್ಲಾ ಅಪಹಾಸ್ಯಕೆ ಕಾರಣರಾದೆವು. ಮಗುವೆ ಯಾವ ಕಡಿಗೆ ಹೋದಿ ? ಬೇಗನೆ ಮುಖ ತೋರಿಸು (ಎಂದು ನೆಲಕ್ಕೆ ಬೀಳುವಳು).

ಮುದ್ದುಗೌಡ : ಹಾ ಹಡದಪ್ಪಾ ಸಿದ್ಧರಾಮಾ (ಎಂದು ಆತನು ಬೀಳುವುದರಲ್ಲಿ ಈಶ್ವರ ಕೈಹಿಡಿದೆಬ್ಬಿಸಿ).

ಈಶ್ವರ : ಹಾ ತಾಯಿ ತಂದೆಗಳಿರಾ ಅಳಬೇಡಿರಿ (ಎಂದು ಆಶೀರ್ವದಿಸಿ) ಜನನಿ ಜನಕರೆ ಈ ಘೋರವಾದ ಕಾಂತಾರ ಮಾರ್ಗದಲ್ಲಿ ಯಾಕೆ ಹೊರಟು ಬಂದು ಕಷ್ಟ ಪಡುವಿರಿ ? ಹೀಗ್ಯಾಕೆ ಹೊರಳಾಡುವಿರಿ? ನೀವ್ಯಾರು ? ನಿಮ್ಮ ಹೆಸರೇನು ? ನೀವಿರತಕ್ಕ ಸ್ಥಳವಾವುದು ? ಜಂಗಮನಿಗೆ ಸ್ವಲ್ಪ ಹೇಳಿರಿ.

ಸುಗ್ಗಲದೇವಿ : ಅಪ್ಪಾ ನಾವು ಪಿಶಾಚಿಗಳು. ನಾವು ರಾಕ್ಷಸರು. ಶಾಕಿನಿ ಡಾಕಿನಿಯರೆಂಬ ಭಾಗ್ಯ ಹೀನರಾದ ದಂಪತಿಗಳು. ಏನು ಕೇಳುವಿ? ನಮ್ಮ ಕೂಡೆ ಏನು ಮಾತು ? ನಿಮ್ಮದು ನಮಗೆ ನೋಡಿದರೆ ನಿಮಗೆ ಪಾಪ ಸಂಭವಿಸುವದು. ಮಹನೀಯರೆ ಸುಮ್ಮನೆ ಮುಂದು ನೋಡಿ ಹೊರಟು ಹೋಗಿರಿ.

ಈಶ್ವರ : ಛೇ ಛೇ ಹಾಗೇಕೆ ? ನಿಮ್ಮ ತಾಪದಿಂದ ನನಗೆ ತಿರಸ್ಕಾರ ಮಾಡುವಿರಿ. ನಾನು ಅನಾಥ ರಕ್ಷಕನು. ನಿಮ್ಮ ದುಃಖ ನೋಡಿ ಹಾಗೇ ಹೋಗಬಾರದೆಂದು ಬಂದಿರುವೆನು. ಯಾಕೆ ಅಳುವಿರಿ ? ಎಲ್ಲಾ ವಿಷದವಾಗಿ ಹೇಳಿರಿ.

ಮುದ್ದಗೌಡ : ಮಹನೀಯರೆ ಇಲ್ಲಿ ಕೇಳಿರಿ, ನಾವು ಸೊನ್ನಲಾಪುರದವರು. ನಾವು ಪಾಪಿ ದಂಪತಿಗಳು. ಮುದ್ದುಗೌಡ ಸುಗ್ಗಲಿಯೆಂದು ನಮ್ಮೀರ್ವರ ಹೆಸರು. ನಮ್ಮ ಮಗನು ಹೊಲ ಕಾಯುವೆನೆಂದು ಹೇಳಿ ಅರಣ್ಯ ವಾಸಿಯಾಗಿದ್ದಾನೆ. ಎಲ್ಲಿ ಹುಡುಕಿದರೂ ಸಿಗವಲ್ಲನು. ಆತನ ಹೆಸರು ಧೂಳಿಮಹಾಕಾಳನು. ಮತ್ತು ಸಿದ್ಧರಾಮನೆಂದು ಕರೆಯುತ್ತೇವೆ.

ಈಶ್ವರ : ತಾಯಿ ತಂದೆಗಳಿರಾ ಅಳಬೇಡಿರಿ. ನಿಮ್ಮ ಮಗನಿಗೆ ನಾನು ನೋಡಿರುವೆನು.

ಸುಗ್ಗಲದೇವಿ : ಅಪ್ಪಗಳೆ ಹ್ಯಾಗಿರುವನು? ಎಲ್ಲಿ ನೋಡಿರುವಿರಿ? ಚೆನ್ನಾಗಿ ಹೇಳಿರಿ.

ಈಶ್ವರ : ಅಮ್ಮಾ ಕೆಂಚನಿರುವನು. ಅರಹುಚ್ಚನು. ಹದಿನಾರು, ಹದಿನೇಳು ವರ್ಷ ವಯಸ್ಸುಳ್ಳವನು. ಒಳ್ಳೆ ದಪ್ಪವಾಗಿರುವಾ ಸಿರಸ್ಸು ಇರುವವನು. ಆತನೇ ಅಲ್ಲವೇ ?

ಸುಗ್ಗಲದೇವಿ : ಹೌದು ಮಹನೀಯಾ. ಆತನೀಗ ಯೆಲ್ಲಿರುವನು? ಶೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಬೇಗನೆ ತೋರಿಸು.

ಈಶ್ವರ : ತಾಯಿಯೆ ಆತನು ಪರ್ವತ ಮಲ್ಲಿಕಾರ್ಜುನನ ದರುಶನಕ್ಕೆ ಕೆಲ ಜಂಗಮರೊಡನೆ ಹೋದದ್ದನ್ನು ಕಂಡೆನು. ಸುಮ್ಮನೆ ನೀವು ದುಃಖಿಸಬೇಡಿರಿ. ನೋಡಿ ಮಾತಾಡಬೇಕಾದರೆ ಆತನು ಶ್ರೀಶೈಲದಲ್ಲಿರುವನು ಬೇಕಾದರೆ ಹೋಗಿರಿ.

ಮುದ್ದುಗೌಡ : ಮಹನೀಯರೆ ಹಾಗೇ ಮಾಡುತ್ತೇವೆ (ಎಂದು ಹೇಳಿ ಭಜನಿ ಮಾಡುತ್ತ ಹೋಗುವರು).

ಬೊಮ್ಮಣ : (ದುಃಖದಿಂದ) **ಪದ**

ಹಾ ಪ್ರಿಯಕರಾ । ಅಗ್ರಜಾ ಪೋದಿಯಾ
ಅತಿಹಿತ ಪೂತು । ಬಾಲಾ । ಜತಿ ಅಮ್ಮನಗಲಿದಿಯಾ
ದಾರಿ ಒಳಗೆ ನಿನ್ನ
ಕ್ರೂರ ಮೃಗಂಗಳು । ತಟ್ಟಿರ್ದವೊ ಧೂಳಯಾ
ಆಳದ ಮೇಳಾದೊಳ್ ಸಿಲ್ಕಿದ್ಯಾ ಹಾ ॥ ೧ ॥

ಹಾಲು ಸಕ್ಕರಿ ಬೆಣ್ಣಿ ಪಾಲುವಾದಿ ನೀ ।
ಉಣ್ಣದೆ ಪೋದಿಯಾ । ಅಣ್ಣನವರೆ ।
ಬಾಲನೆ ಗುಣಶೀಲನೆ । ಯಾವ ಕಡೆ ಹೋದಿಯೊ ॥ ೨ ॥

ಅಹಾ ಅಗ್ರಜ ಸಿದ್ಧರಾಮನು ಎತ್ತ ಹೋದೆನೊ? ನಮ್ಮ ತಾಯಿ ತಂದೆಗಳು ಹುಡುಕುತ್ತ ಎತ್ತ ಹೋದರೊ? ಹಾ ಅಗ್ರಜ ಆರ್ಯರಾದ ರೇವಣಾರಾಧ್ಯರು ಹೇಳಿದಂತೆ ಇವರು ನಡಿಯಲಿಲ್ಲವೆಂದು ಹೀಗೆ ತಿಳಿದು ಎತ್ತಲಾದರೂ ಹೋದಿಯಾ? ಅಗ್ರಜ ಬಾ ನಿನ್ನ ಮುದ್ದು ಮುಖವನ್ನು ತೋರಿಸು ಎಲ್ಲಿರುವಿ? ಎಲ್ಲಿರುವಿ? ನನ್ನ ಜತೆಗೆ ಬಂದು ಆನಂದಗೊಳಿಸು ಎಲ್ಲಿರುವಿ ಸಿದ್ಧರಾಮಾ (ಎಂದು ಮೂರ್ಛಿಸುವನು).

ಸುಗ್ಗಲದೇವಿ : (ಆತುರದಿಂದ ಬಂದು) ಅಹಾ ಮಗುವೆ ಸಿದ್ಧರಾಮನು ಆವ ಕಡಿಗೆ ಹೋಗಿರುವೆನೊ ತಿಳಿಯದು. ನಮ್ಮ ಹಡಗವೆ ಮುಳುಗಿತು. ಬಡವರಾದ ನಮಗೂ ಸಹ ಭಾವಿಯಲ್ಲಿ ನೂಕಿ ಹೋದನು.

ಆತನು ಪರ್ವತ ಮಲ್ಲಯ್ಯನ ಹತ್ತರ ಹೋದನಂತೆ ಎಂದು ವೃದ್ಧ ಜಂಗಮನು ಹೇಳಿ ಹೋದನು. ಮಗುವೆ ಬೊಮ್ಮಣಾ ನಿನ್ನ ಅಗ್ರಜನನ್ನು ತಂದು ತೋರಿಸು ಇಲ್ಲವಾದರೆ ನಾನು ಪ್ರಾಣತ್ಯಾಗ ಮಾಡುವೆನು.

ಬೊಮ್ಮಣ : ಹಾ ತಾಯಿಯೆ ನೀನು ಆತನ ಚಿಂತೆಯನ್ನು ಬಿಡು. ಬಿಡು ನಾನು ಹೋಗಿ ಆತನೆಲ್ಲಿದ್ದರೂ ಕರೆದುಕೊಂಡು ಬರುವೆ.

ಸುಗ್ಗಲದೇವಿ : ಹಾ ಮಗುವೆ ಬೇಗನೆ ಹೋಗು. ತಡಮಾಡಬೇಡ. ಎಲ್ಲಿದ್ದರೂ ಹುಡುಕಿಕೊಂಡು ಬಾ. ನಾನು ಆರ್ಯರು ಹಾಗೆ ಹಿಂದ್ಹಿಂದೆ ಮೆಲ್ಲಗೆ ಬರುತ್ತೇವೆ.

ಬೊಮ್ಮಣ : ಆಜ್ಞಾ (ಎಂದು ಹಾಡುತ್ತ ಹೋಗುವುದರಲ್ಲಿ ಸೀನ್ ದೇವಾಲಯ, ಮಲ್ಲಿನಾಥ ಲಿಂಗವು).

ಜಂಗಮರು : (ಭಜನಿ ಮಾಡುತ್ತ)

ಪದ

ತ್ರಿಪುರಹರಾ । ತ್ರಿಪುರ ಹರಾ । ತ್ರಿಪುರಹರನೆ ಶ್ರೀ ।
ಘೋರ ಮಾರಹರ । ದೂರ ವಿನಯ । ವಿಭವನೆ ।
ಸುಜನ । ಸುಮನ । ವಿತರಣದೊಳು ।
ಭಜನಿಯಗೊಳುವಾ । ವೈಭವದಿ ॥ ಪ ॥

ವೈರಿಗಳ ನಿವಾರಿಸುತಲಿ । ಪ್ರಭುವರಾ ।
ಧರೆಯನು ಪೊರೆಯುವ । ಕರುಣ ಹಿಮಕರಾ ।
ಶೇಷ ವಿಭೂಷಣ । ಮಾಸ ವಿಭೂಷಣ । ॥ ೧ ॥
ವಿಚಿತ್ರ ಪವಿತ್ರ ಚರಿತ್ರನೆ

ಭುವನ ಪಾಲಯದಾತನೆ ।
ತುಂಗ ಮಂಗಲೆತ್ತಲು ನಮಗೆ
ಸರ್ವರಾ । ಸರ್ವದಾ ॥ ೨ ॥

ಬಾಲಕಾ ಸಿದ್ಧರಾಮಾ ಇತ್ತ ಬಾಬಾ. ಇಕೊ ಈ ಲಿಂಗ ಮೂರ್ತಿಯಲ್ಲಿ ಬೇಡಿಕೊಳುವುದು ಬೇಡಿಕೋ. ನಿನ್ನ ಮಲ್ಲಯ್ಯನು ಈತನೆ ನೋಡು.

ಸಿದ್ಧರಾಮ : (ಲಿಂಗವನ್ನು ನೋಡಿ) ಜಂಗಮಾ ಮೂರ್ತಿಗಳೆ ಈತನು ನಮ್ಮ ಮಲ್ಲಿಕಾರ್ಜುನನಲ್ಲಾ. ಆತನು ಬೇರೆ ಇರುವವನು.

೨ನೇ ಜಂಗಮ : ನಿಮ್ಮ ಮಲ್ಲಯ್ಯನು ಹ್ಯಾಗಿರುವವನು ?

ಸಿದ್ಧರಾಮ : ನಮ್ಮ ಮಲ್ಲಯ್ಯನ ಸಿರದ ಮೇಲೆ ಗಂಗಿಯು. ಹಣೆಯಲ್ಲಿ ಅಗ್ನಿಯು ಜಡಿಗೆ ಅರ್ಧಚಂದ್ರನುಂಟು. ಸರ್ಪಾಭರಣವುಂಟು ಕಿವಿಯಲ್ಲಿ ಅಹಿಕುಂಡಲ ಮತ್ತು ತ್ರಿಶೂಲಧರನು. ಇಂಥವನಾದರೆ ನಿಜವಾಗುತಿತ್ತು. ಈ ಕಲಿಕಾಲ ಮಲ್ಲಯ್ಯನಿಂದ ಏನು ಪ್ರಯೋಜನವು?

೩ನೇ ಜಂಗಮ : ಅಪ್ಪಪ್ಪಾ ಅಂಥ ಮಲ್ಲಯ್ಯನು ನಮಗೆ ಗೊತ್ತಿಲ್ಲಪಾ. ಎಲ್ಲಿದ್ದರೂ ಇಂಥಾ ಮಲ್ಲಯ್ಯನನ್ನ ನಾವು ನೋಡಿಲ್ಲ. ಈ ಕಲಿಯುಗದಲ್ಲಿ ನಾವೆಲ್ಲರು ಇಂಥಾ ಮಲ್ಲಯ್ಯನನ್ನು ಕಂಡು ಪೂಜಿಸಬೇಕಾದ್ದು ಎಂದು ಬೇಡಿಕೊಳ್ಳುತ್ತೇನೆ. ವರ ಕೊಟ್ಟರೆ ಅವನಿಚ್ಛೆ ಇಲ್ಲದಿದ್ದರೆ ನಮ್ಮಿಚ್ಛೆ. ನೀನು ಬಹಳ ಕಾಲದ ಮನುಷ್ಯನಂತೆ ಮಾತಾಡುವಿ ಹೋಗು ನಿನ್ನ ಆ ಮಲ್ಲಯ್ಯನ ಹುಡುಕುತ್ತ ಆ ಹಾಳು ಬಾವಿ ಬೀಳು ಹೋಗು (ಎಂದು ನೂಕುವರು) .

ಸಿದ್ಧರಾಮ : ಮಹನೀಯರೆ ಹಾಗ್ಯಾಕೆ ನೂಕುವಿರಿ ಸ್ವಲ್ಪ ನಿಲ್ಲಿರಿ (ಎಂದು ಕರ್ಪೂರ ಬೆಳಗುತ್ತ)

ಪದ

ಸಕಲ ಸ್ಮರಣ ಹರ ಶಂಕರ ॥ ಪ ॥

ಸ್ವರಗಿ ಆದೆನು ಕ್ಷೀಣ ಶರೀರ ।
ತೋರು ಶಾಂತಾ ಪ್ರಿಯ ಮಮತಾ ॥ ೧ ॥

ಅಯ್ಯಾ ಶಿವನೆ ನನಗೆ ಮೋಸ ಮಾಡಿದಿಯಾ. ಹಾಯ್ ಹಾಯ್ ಮಲ್ಲಯ್ಯ, ಎತ್ತ ಅಡಗಿರುವಿ ? ಎಲೆ ವೃಕ್ಷಗಳಿರಾ ಲತೆಗಳಿರಾ ಮೃಗಗಳಿರಾ, ಕ್ರಿಮಿಕೀಟಕಂಗಳಿರಾ ನಮ್ಮ ಮಲ್ಲಯ್ಯನಿಗೆ ತೋರಿಸಿರಿ. ಮಲ್ಲಿನಾಥ ಗಿಡದೊಳಗಿರುವಿಯಾ ? ಏನು ಮಡುವಿನೊಳಗೆ ಬಿದ್ದಿರುವೆಯಾ? ಕಾಡಿನೋಳ್ ಐಕ್ಯವಾಗಿರುವಿಯಾ ? ಮಲ್ಲಯ್ಯ ಮಲ್ಲಿನಾಥ ಬೇಗನೆ ಬಂದು ಮುಖ ತೋರಿಸು. ಇಲ್ಲದಿದ್ದರೆ ಇಕೊ ಈ ಕಾಡುಗಲ್ಲಿನ ಮೇಲೆ ನಿಂತು ನಿನ್ನ ಧ್ಯಾನಿಸಿ ಇಕೊ ಪಾತಾಳದಲ್ಲಿನ ಕಮರಿಯಲ್ಲಿ ಬಿದ್ದು ಪ್ರಾಣ

ನೀಗುವೆನು. ಇಕೊ ಈ ದೇಹವು ನಿನಗೆ ಸಮರ್ಪಿಸುವೆನು (ಎಂದು ಹಾರುವುದರಲ್ಲಿ)

ಈಶ್ವರ : ಹಾಯ್ ಹಾಯ್ ಮಗುವೆ ಸ್ವಲ್ಪು ಸಮಾಧಾನ. ತಾಳು ತಾಳು (ಎಂದು ಎತ್ತಿಕೊಳ್ಳುತ್ತಾನೆ).

ಪದ

ಸಾರುವ ನೃಪತಿ । ಜನಕ ಜಯಾ
ಸಿದ್ಧರಾಮ ಮಮತನಯ ।
ಶೈಲದಲ್ಲಿ ಅಂಜಿದೆಯಾ । ನೋಡಿ ಕಾಡವಾ ॥ ೧ ॥
ಬಿದರು ಹೆದರಿ ಪೊಕ್ಕಿದೆಯಾ ।
ಚೆದುರಾ ನೀನು ಸಿಲ್ಕಿದೆಯಾ
ಒದಗಿತೆ ನಿನಗೆ ಭಯಾ । ನೋಡಿ ಮೃಗಗಳಾ ॥ ೨ ॥

ಮಗುವೆ ನಡೆ ದೇವಾಲಯದಲ್ಲಿ ಕೂತು ನಿನಗೆ ಸುನೀತಿ ಬೋಧಿಸಿ ನಿನ್ನ ಪುರಕೆ ಕಳಿಸುತ್ತೇನೆ (ಎಂದು ದೇವಾಲಯಕ್ಕೆ ಕರೆದುಕೊಂಡು ಹೋಗುವನು).

೪ನೇ ಜಂಗಮ : ಅಹಾ ಆ ಸಿದ್ಧರಾಮ ನಿನ್ನ ದೃಡವು ಎಂಥಾದ್ದು ? ಕಲ್ಲಿನಲ್ಲಿ ಈಶ್ವರ ಮೂರ್ತಿಯನ್ನು ಕಾಣಿಸಿಕೊಂಡೆಯಲ್ಲವೆ. ಧನ್ಯ ಧನ್ಯ ಧನ್ಯ. ಮಗುವಾದರೂ ಆತನಿಂದ ದರುಶನವಾಗಿದೆ. ಆತನ ಪುಣ್ಯವೆ ಹೊರ್ತು ನಮಗೆ ಆ ಮೂರ್ತಿಯು ಕಾಣುತ್ತಿರಲಿಲ್ಲಾ.

೧ನೇ ಜಂಗಮ: ಸೈ ಸೈ ನಮಗ್ಯಾತಕೆ ಆ ಮೂರ್ತಿಯು ಇದೊ (ಎಂದು ಒಳಗಿನ ಲಿಂಗ ತೋರಿಸಿ)_ ಗುಡಿಯಲ್ಲಿರುವಾ ಖರೆ ಲಿಂಗ ಮೂರ್ತಿಯು ಈ ಕೆಂಪು ಕಾಸಾಯ ವಸ್ತ್ರಗಳು ಸುಳ್ಳು. ಮಾತುಗಳು ನಮಗೆ ಇಷ್ಟು ಸಾಕಲ್ಲವೆ ? ಕಾಯಿ ಇಲ್ಲ. ಪರ್ಕುರ ಇಲ್ಲಾ. ಬೇಡಿದ್ದು ಕೊಡು ದೇವರೆಂದರೆ ವರವು ಇಲ್ಲಾ. ಶ್ರಾಪವೂ ಇಲ್ಲಾಯೆಂದು ನಡೆ ಅತ್ತ ಎನ್ನುವಾ. ಈ ಖರೆಲಿಂಗವಿದ್ದರೆ ಸಾಕು ನಡೆ ಬೇಗನೆ (ಎಂದು ಹೋಗುವರು).

ತ್ರಿತಿಯಾಂಕ ಸಮಾಪ್ತವಾದುದು.

===***====***===

ಚತುರ್ಥಾಂಕ ಪ್ರಾರಂಭವಾಗುವುದು.

(ಸೀನ್ ಪರ್ವತ ಮಲ್ಲಯ್ಯನು ಗುಡಿಯಲ್ಲಿ ಸ್ವಚ್ಛದಿಂದ ಕೂತು, ಸಿದ್ಧರಾಮನಿಗೆ ಪ್ರಸಂಗ ನಡಿಸುವುದು).

ಸಿದ್ಧರಾಮ : **ಪದ**

ಆನಂದವನು ಹೊಂದಿದೆ ಈಗಲೆ
ನಂದಿವಾಹನ ರೂಪಕೆ ॥ ಪ ॥

ಪತ್ರವಾಹನ । ಮಿತ್ರ ಶತ ಮುಖ
ಪತ್ರವಿತ್ತನೆ । ಗೋತ್ರಜ ವರಶಿವ
ಚಿತ್ರ ಮಹಿಮನೆ । ಸಾರ್ಥಕವಾಯಿತು ಜನ್ಮವಾ ॥ ೧ ॥

ದೇವಾ ನಿನ್ನ ಪಾದಾರವಿಂದಗಳನ್ನು ನೋಡಿ ನಾನು ಧನ್ಯನಾದೆನು (ಎಂದು ಸಾಷ್ಟಾಂಗ ಹಾಕುವನು).

ಈಶ್ವರ : ಸಿದ್ಧರಾಮ ಏಳು ಏಳು. ನಿನ್ನ ಕೋರಿಕೆಯು ಮತ್ತೇನಿರುವುದು? ಹೇಳು ನಿನಗೆ ಈ ಶ್ರೀಶೈಲದಲ್ಲಿರುವಾ ಐಶ್ವರ್ಯವನೆಲ್ಲಾ ತೋರಿಸಿದೆನು. ಇನ್ನು ನಿನ್ನ ಗ್ರಾಮಕೆ ಹೋಗಬಹುದು ಆಶೀರ್ವಾದ ಮಾಡುತ್ತೇನೆ.

ಸಿದ್ಧರಾಮ : ದೇವಾ ಸಕಲ ಚರಾಚರ ಭರಿತವಾದ ಜಗದೀಶನೆ ನೀನೆ ಇದ್ದು ಎಳ್ಳು ಮೊನೆಯಲ್ಲಿ, ಮುಳ್ಳು ಕೊನೆಯಲ್ಲಿ, ಅಣುರೇಣು ತೃಣ ಕಾಷ್ಟಾದಿಗಳಲ್ಲಿ ವ್ಯಾಪಿಸಿದ ನಿನ್ನ ಬಿಟ್ಟು ಮತ್ತೆಲ್ಲಿಗೆ ಹೋಗಲಿ ? ಎಲ್ಲ್ಯಾದರೂ ನೀನೆ ಇರುವಿ. ನಾನು ನಿನ್ನ ಹತ್ತರವೆ ಇರುವೆನು.

ಈಶ್ವರ : ಇದೊ ನಿನ್ನ ಕರ್ಣದಲ್ಲಿ ಕುಂಡಲವನ್ನು ಧರಿಸಿಕೊ ಸೊನ್ನಲಾ ಪುರದಲ್ಲಿ ಹೋಗಿ ಸುಖದಿಂದಿರು. ನಿನ್ನ ತಾಯಿ ತಂದೆಗಳು ಹುಡುಕುತ್ತಿರುವರು. ಅವರಿಗೆ ಶ್ರಮವನ್ನು ಕೊಡಬೇಡಾ. ನಾನು ಹೇಳುವ ಮಾತನ್ನು ಕೇಳಿ ಬೇಗನೇ ಹೋಗು. ಆ ಮೇಲೆ ನಾನು ಬರುವೆನು.

ಸಿದ್ಧರಾಮ : ಗುರುವೆ ಈ ಕರ್ಣ ಕಠೋರವಾದ ವಾಕ್ಯಗಳು ನನ್ನ ಕಿವಿಯಲ್ಲಿ ಕ್ರೂರ ಅಲಗಿನಿಂದೆ ಚುಚ್ಚಿದಂತೆ ಆಗುವುದು. ನಿಮ್ಮನಗಲಿ ನಾನೆಂದಿಗೂ ಹೋಗಲಾರೆನು. ಇದು ನಿಜವು.

ಈಶ್ವರ : ಛೆ ಛೆ ಹಾಗೇಣಿಸಕೂಡದು. ನಿನ್ನ ಹಿಂದಿಂದೆ ನಾನು ಬರುವೆನು. ನೀನು ಮಾಡಿದ ಕೆಲಸಕ್ಕೆ ಆತಂಕವಿಲ್ಲದೆ ನೆರವೇರಿಸುವೆನು. ಅಂಜಬೇಡಾ. ಸೊನ್ನಲಿಗೆಯಲ್ಲಿ ನಿನ್ನ ಕೈಯಿಂದ ಕೆರೆ ಬಾವಿ ಆಗುವುದದೆ. ಒಂದು ದೇವಾಲಯ ನಿರ್ಮಿಸುವಿ. ನಿನ್ನೊಂದಿಗೆ ನಾನು ಇರಲಿಕ್ಕೆ ನಮ್ಮ ಗಜಾನನನಿಗೆ, ನಂದಿಗೆ ಶಿವಗಂಗಿಯರಿಗೆ ಯಮುನಾ ಸರಸ್ವತಿ ಮೊದಲಾದ ನದಿಗಳಿಗೂ ನಿನ್ನ ಕೆರೆಯಲ್ಲಿ ಇರುವಂತೆ ಹೇಳುವೆನು. ಮತ್ತು ಲಕ್ಷ್ಮಿ ಸಹವಾಗಿ ನಿನ್ನ ಬಿಡುಗಡೆ ಇಲ್ಲದಂತೆ ಹೇಳುವೆನು. ಮೇಲೆ ಕುಬೇರನಿಗೆ ಭೈರವನಿಗೂ ನಿನ್ನ ಸೊನ್ನಲಾಪುರಕ್ಕೆ ಕಾಯಲಿಕ್ಕೋಸ್ಕರ ಕೊಟ್ಟು ಕಳಿಸುತ್ತೇನೆ ಮತ್ತು ಆ ಪುರದಲ್ಲಿ ನಿನ್ನ ಭಜನವು ನನ್ನ ಸ್ತೋತ್ರವು ಯಾವತ್ಕಾಲದಲ್ಲಿಯೂ ಯಾರು ಮಾಡುವರೊ ಅವರಿಗೆ ರೋಗಾದಿಗಳು, ಇತರ ಕಂಟಕವು ದೇಹದ ಕರ್ಮಗಳು ಅವರಿಗೆ ತಗಲಲಾರದಂತೆ ಮಾಡುವೆನು. ಇದು ನಿಶ್ಚಯ. ನೀನು ಬೇಗನೆ ತೆರಳು.

ಸಿದ್ಧರಾಮ : ಮಹಾ ಪ್ರಭುವೆ ಈ ವಚನವು ನಿಶ್ಚಯವಿದ್ದಲ್ಲಿ ನಿನ್ನ ಪರ್ವತದಲ್ಲಿರುವಾ ಸಾಮರ್ಥ್ಯ ಐಶ್ವರ್ಯವು ಆ ಸೊನ್ನಲಾಪುರದಲ್ಲಿಡುವೆನೆಂದು ವಚನ ಕೊಡತಕ್ಕದ್ದು.

ಈಶ್ವರ : ಸಿದ್ಧರಾಮ ಈ ಶ್ರೀಶೈಲದಲ್ಲಿ ಐಶ್ವರ್ಯವು ಮತ್ತು ಇಲ್ಲಿರತಕ್ಕ ಲಿಂಗಗಳನ್ನು ಸ್ಥಾಪಿಸಿ ನಿತ್ಯ ಹೋಮಾದಿ ಕರ್ಮಗಳನ್ನು ಆಚರಿಸಿ ಇರತಕ್ಕದ್ದು. ಕಪಿಲ ಸಂರಕ್ಷಿಸು. ಪುಷ್ಪರಾಮವಾಟಿಕೆಯನ್ನು ರಚಿಸು. ಸುಖದಿಂದೆ ಕೀರ್ತಿಯನ್ನು ಪಸರಿಸು. ಶಿವಭಕ್ತಿಯನ್ನು ಪ್ರಸಾರಗೊಳಿಸಿ ನಂಬಿದವರಿಗೆ ಪುತ್ರ ಪೌತ್ರ ಧನಧ್ಯಾನ ಮೊದಲಾದ ಸಕಲ ಸಂಪದಾದಿಗಳನಿತ್ತು ಅವರಿಗೆ ಸುಖಪಡಿಸು. ನೀನು ಸುಖದಿಂದಿರು. ಗತಪ್ರಾಣವಾದವರಿಗೆ ಪ್ರಾಣ ಪ್ರತಿಷ್ಠಿಸು. ಇದೊ ವಚನ ತಗೆದುಕೊ ಬೇಗನೆ ತೆರಳು (ಎಂದು ಕೈಮೇಲೆ ಕೈ ಹೊಡಿವನು).

ಸಿದ್ಧರಾಮ : ಒಳ್ಳೆಯದು ಗುರುಗಳೆ ಹೋಗಿ ಬರುತ್ತೇನೆ (ಎಂದು ನಮಿಸಿದ ಕೂಡಲೆ ಮಾಯವಾಗುವನು).

ಪದ

ಮಾರ್ಗವು ಬಹುತರಾ ಕಾಣುವುದೊ ।
ಅತಿ ಹಿತ ಪಥವದು । ಹಿತಕರವಾಗುವದೊ ।
ಬಹುತರಾ ಮಾರ್ಗವು ಬಹುತರಾ ॥ ಪ ॥

ಕರ ಕಂಟಕಯುತ । ತೋರಿಸಿಲ್ಲ ಸಾರದು ಸಾರದು ।
ಪರಿಯುತನೆ । ಗೌರವ । ಶೌರ್‍ಯವ ।
ತೋರುವಾ । ಸಾರುವಾ । ಮಾರ್ಗವು ॥ ೧ ॥

ಕಾಡು ಮೃಗಂಗಳು । ಕೋಡುಗಲ್ಲುಗಳು
ಓಡುವ ನರಿಗಳು । ತೋರ್ವವು । ದೋಷವಿನಾಶನ ।
ಈಶನ ಅರಿಯುವಾ ॥ ೨ ॥

ಅಹಾ ನಾನು ಪರಮೇಶ್ವರನು ಹೇಳಿದಂತೆ ಆ ಸೊನ್ನಲಾಪುರಕ್ಕೆ ಹೋಗುವಾ.

ಬೊಮ್ಮಣ್ಣ : (ರಸ್ತಾದ ಮುಂದೆ) ಅಹಾ ನನ್ನದು ಎಂಥಾ ಸುದೈವವು. ನಾನು ಸಿದ್ಧರಾಮನನ್ನು ಹುಡುಕಲು ಆತನೆ ಎದುರಾಗಿ ನಿಂತು ಬಿಟ್ಟನು. ಇರಲಿ ತಮ್ಮ ಸಿದ್ಧರಾಮ ನಿನಗಾಗಿ ನಮ್ಮ ತಾಯಿ ತಂದೆಗಳು ಬಹಳವಾಗಿ ಹುಡುಕುತ್ತ ಶ್ರಮ ಪಡುವರು. ಮನಿಗೆ ಬೇಗನೆ ನಡೆ. ನಾನು ನಿನ್ನನ್ನು ಹುಡುಕುತ್ತಲೆ ಹೊರಟಿರುವೆನು.

ಸಿದ್ಧರಾಮ : ಒಳ್ಳೇದು ನಡೆ ಅಣ್ಣಾ ಹೋಗುವಾ ನಡೆ (ಎಂದು ಮೇಲಿನ ಪಲ್ಲವಿಯನ್ನು ಹಾಡುತ್ತಾ ಹೋಗುವುದರಲ್ಲಿ ಸೀನ್ ಮುದ್ದುಗೌಡನ ಮನೆ).

ಮುದ್ದಗೌಡ : ಪ್ರಿಯೆ ಬಾಲಕನ ಶೋಧನಾರ್ಥವಾಗಿ ತೆರಳಿದ ಬೊಮ್ಮಣ್ಣನು ಇನ್ನೂ ಬರಲಿಲ್ಲವಲ್ಲಾ ಏನು ಮಾಡುವುದು.

ಸುಗ್ಗಲದೇವಿ : ಪ್ರಿಯಾ ಮಾಡುವುದೇನಿದೆ ? ಎಂಬುದು ಕಷ್ಟವು. ಅನುಭವಿಸಲಿಕ್ಕೆ ಬೇಕಲ್ಲವೆ ? ಆತನ ವ್ಯಸನವ ಮರಿಯಬೇಕಾಗಿರುವುದು.

ಬೊಮ್ಮಣ್ಣ : ಅಮ್ಮಾ ಸಿದ್ಧರಾಮನು ಬಂದನು. ನಾನೇ ಕರೆದುಕೊಂಡು ಬಂದೆನು. ಮಾರ್ಗದಲ್ಲಿ ಹುಲಿ ಕರಡಿ ಉಪದ್ರವ ನನಗೆ ಬಹಳವಾದ ಕೂಡಲೆ ಸಿದ್ಧರಾಮ ಎಂದು ಚೀರಿದ ಕೂಡಲೇ ಅವು ಮಾಯವಾಗಿ ಹೋದವು. ಆತನು ಬಂದೇಬಿಟ್ಟನು. ಅಮ್ಮಾ ಈತನು ಮಹತ್ವಿಕನು.

ಸುಗ್ಗಲದೇವಿ : ಅಹಾ ಪ್ರಾಣಪ್ರಿಯಾ ನಮಗೆ ಭಾಗ್ಯನಿಧಿಯು ಇವಾಗ್ಯೆ

ದೊರಕಿದಂತಾಯಿತು. ಮಗುವು ಹೋಗಿ ಬಹಳ ದಿವಸವಾಯಿತು. ನಮ್ಮದೇವರ ಆರಾಧನೆಯೆ ಈ ವ್ಯಸನದಲ್ಲಿ ಮರತೆಬಿಟ್ಟಿರುವೆವು. ನಡಿಯಿರಿ ನಮ್ಮ ಜಗ್ಗಯ್ಯನ ಧ್ಯಾನಿಸಿ ಆತನ ಹೆಸರಿನಲ್ಲಿ ಆರಾಧನೆ ಮಾಡುವಾ ಬೇಗನೆ ನಡಿಯಿರಿ.

ಮುದ್ದುಗೌಡ : ಪ್ರಿಯೆ ಹಾಗೆ ಆಗಲಿ. ಮಗುವೆ ಭಾಗ್ಯನಿಧಿಯೆ ರಾಜಹಂಸವೆ ರಾಜ ಪುತ್ಥಳಿಯೆ, ನನ್ನ ವೇದ ಭಂಡಾರಿಯೆ, ನನ್ನ ಪ್ರೇಮ ಸಾಗರವೆ ನಡೆ, ಮನಿಗೆ ಸ್ನಾನ ಮಾಡಲು ನಡೆ.

ಸಿದ್ಧರಾಮ : ತಂದಿಯೆ ನೀವು ಸ್ನಾನ ಮಾಡಿರಿ. ನಾನು ಚಿಕ್ಕಮ್ಮನಾದ ಚ್ಯಾಮಲಿ ದೇವಿಯ ಮನಿಗೆ ಹೋಗಿ ಆಮೇಲೆ ಬರುವೆನು.

ಸುಗ್ಗಲದೇವಿ : ಅಜ್ಞಾ (ಎಂದು ಇಬ್ಬರು ಹೋಗುವರು).

ಸಿದ್ಧರಾಮ : ಅಯ್ಯೊ ಅಜ್ಞಾನವೆ ಇವರು ಸಂಸಾರ ಸುಖ ಸಾಗರದಲ್ಲಿ ಮಳುಗುತ್ತಿರುವಾಗೆ, ಬೇನೆ ಅವಸರ ಬಂದ ವ್ಯಾಳ್ಯದಲ್ಲಿ ಕ್ಷುದ್ರ ದೇವತೆಗಳಿಗೆ ಬೇಡಿಕೊಳ್ಳುವುದು ಏನಾಶ್ಚರ್ಯವಿದು ? ಕಲ್ಪವೃಕ್ಷವು ಸಮೀಪಿಸಿರಲು ಬೊಬ್ಬಲಿಗಿಡವು ಅಪೇಕ್ಷಿಸುವಾ ಈ ಮಾನವರು ಎಂಥಾ ಮೂಢರು ? ಮಾಯಾ ಕಲ್ಪಿತವಾದ ದೇವತೆಗಳಿಗೆ ಭಜಿಸಿದರೆ ಅವುಗಳೇನು ಕೊಡುವವು ? ಇನ್ನು ನಾನು ಇವರ ಮನಿಯಲ್ಲಿರುವುದು ಉತ್ತಮವಲ್ಲ ಚ್ಯಾಮಲದೇವಿಯರ ಹಣತೆಗೆದುಕೊಂಡು ಬೇರೆ ಮತ್ತೊಂದು ಸ್ಥಾನವನ್ನು ನೋಡಿಕೊಂಡು ಸುಖದಿಂದಿರುವಾ.

ಈಶ್ವರ : (ರಸ್ತಾದ ಮುಂದೆ) ನಾನು ಚ್ಯಾಮಲಿದೇವಿಯ ಸ್ವಪ್ನದಲ್ಲಿ ನೀತಿ ಹೇಳಲು ಹೋಗುವಾ.

ಚ್ಯಾಮಲದೇವಿ :(ಮಂಚದ ಮೇಲೆ ಕೂತು) ಅಹಾ ಈ ಅಜ್ಞಾನಿ ದಂಪತಿಗಳ ಸಂಗದಲ್ಲಿ ನಮ್ಮ ಸಿದ್ಧರಾಮನು ಇರಲಾರನು. ಆ ಮಹತ್ವಿಕರಾದ ರೇವಣಾರ್ಯರ ನುಡಿಯ ಮರತೇಬಿಟ್ಟರು. ಈ ಮುದ್ದುಗೌಡರು ಸುಗ್ಗಲದೇವಿಯರು ಎಂಥಾ ಹೀನರು. ಇರಲಿ ಅದು ಆಗದಂತೆ ನಾನು ನೋಡುತ್ತಲೆ ಹೋಗುವಾ. ನಿದ್ರಿಯು ಬಹಳವಾಗಿ ಬಂದಿರುವುದು. ಸ್ವಲ್ಪ ಮಲಗುವಾ (ಎಂದು ಮಲಗುವಳು).

ಈಶ್ವರ : (ಹಾಡುತ್ತಾ ಬಂದ) ಅಮ್ಮಾ ಚ್ಯಾಮಲದೇವಿ ನೀನು ಸಿದ್ಧರಾಮನಿಗೆ

ಎರಡು ಕೋಶ ಭೂಮಿಯನ್ನು ದಾನವಾಗಿ ಕೊಡು. ಯಾಕಂದರೆ ಆತನು ಅದರಲ್ಲಿ ಶಿವಾಲಯವನ್ನು ಅಷ್ಟಶಷ್ಠಿ ತೀರ್ಥಯೋಗ ಸಮಾಧಿಯು ನಿರ್ಮಿಸಿ ಈ ಸೊನ್ನಲಾಪುರವು ಲಿಂಗಪಿಂಡವಾಗಿ ಪುಣ್ಯ ಸ್ಥಳವೆಂದು ಐಶ್ವರ್ಯವುಳ್ಳದ್ದೆಂದು ಕಲಿಯುಗದ ಮಾನವರಿಗೆ ತಿಳಿಯಲು ತೋರ್ಪಡಿಸಬೇಕಾಗಿರುತ್ತದೆ. ನಾನು ಶ್ರೀಶೈಲ ಮಲ್ಲಿಕಾರ್ಜುನನು. ನನ್ನ ನುಡಿಯನ್ನು ಮರೆಯಬೇಡ. ನಿಶ್ಚಯವಾಗಿ ಕೊಡು. ನಾನು ಹೋಗುತ್ತೇನೆ (ಎಂದು ಮಾಯವಾಗುವನು).

ಚ್ಯಾಮಲದೇವಿ (ಗಾಬರಿಯಿಂದ ಎದ್ದು) ಏನಾಶ್ಚರ್ಯವಿದು ? ಸದಾಶಿವನು ನನ್ನ ಸ್ವಪ್ನದಲ್ಲಿ ಬಂದು ನಿನ್ನಲ್ಲಿಗೆ ಸಿದ್ಧರಾಮನು ಬರುವನು. ಆತನಿಗೆ ನೀನು ಎರಡು ಕೋಶ ಭೂಮಿಯನ್ನು ದಾನವಾಗಿ ಕೊಡೆಂದು ಹೇಳಿ ಹೋದನಲ್ಲಾ ಒಳ್ಳೆಯದು. ಆತನ ವಚನವ್ಯಾಕೆ ಸುಳ್ಳುಮಾಡಲಿ. ಆತನೆ ಕೊಟ್ಟಿದ್ದ ಪುಷ್ಕಳ ಭೂಮಿ ಇರುವುದು. ಸಿದ್ಧರಾಮನು ಬಂದ ನಂತರ ನಾಳೆ ಪ್ರಾತಃಕಾಲದಲ್ಲಿ ಅವರ ಆಜ್ಞೆ ಪ್ರಕಾರ ಭೂಮಿಯನ್ನು ದಾನವಾಗಿ ಕೊಡುವೆನು.

ಸಿದ್ಧರಾಮ : (ಬೊಮ್ಮಣ್ಣ ಸಹವಾಗಿ ಬಂದು) ಅಮ್ಮಾ ಚ್ಯಾಮಲದೇವಿಯೆ ನಿಮಗೆ ಸುಖಾಗಮನವ ಹೇಳಿ ಹರುಷ ತಾಳಿರಿ.

ಚ್ಯಾಮಲದೇವಿ : ಅಯ್ಯಾ ಸಿದ್ಧರಾಮ ಬೊಮ್ಮಣ್ಣನವರೆ ಬನ್ನಿರಿ ಇಲ್ಲಿ ಕೂಡಿರಿ. ಸಿದ್ಧರಾಮ ನಿನಗೆ ಎಷ್ಟು ಬೇಕು ಅಷ್ಟು ಭೂಮಿಯನ್ನು ಆ ನಮ್ಮ ಚ್ಯಾಕಿಯಲ್ಲಿ ಹುಲ್ಲಚಪ್ಪರವಿಲ್ಲವೆ ? ಅದು ನಡು ಮಾಡಿಕೊಂಡು ಅದರ ಸುತ್ತಲು ನಿನಗೆ ಬೇಕಾದಷ್ಟು ಭೂಮಿಕೆ ತಗೆದುಕೊಂಡು ಬೇರೆ ಸ್ಥಾನ ಕಟ್ಟಿಸಿಕೊಂಡು ಇರು. ನಿಮ್ಮ ತಾಯಿ ತಂದೆಗಳಿಗೆ ನಿಮಗೆ ಕಲಿಯುವದಿಲ್ಲ. ಈ ನುಡಿಯು ನಿಶ್ಚಯ.

ಸಿದ್ಧರಾಮ : ಅಹಾ ಮಾತೋಶ್ರೀಯೆ ತಥಾಸ್ತು. ಅಹಾ ಏನಾಶ್ಚರ್ಯವಿದು ? ಈ ತಾಯಿಯು ನನಗೆ ಭೂಮಿ ಕೊಡಲು ಕಾರಣವೆ ಇದು. ಮಹಾಗುರು ಕೃಪವು ಇರಲಿ, ಬೊಮ್ಮಣ್ಣಾ ನಡೆ ಗೃಹ ನಿರ್ಮಾಣ ಮಾಡಲು.

ಬೊಮ್ಮಣ್ಣ : ಆಜ್ಞಾ (ಎಂದು ಹೋಗಿ ರಸ್ತಾದ ಮುಂದೆ) ನಾನು ಹೋಗಿ ಸಿದ್ಧರಾಮನ ಹತ್ತರವೆ ಇರುವಾ. ಅಂದರೆ ಈ ಬೊಮ್ಮಣ್ಣನೆಂಬುವಾ ನುಡಿಯು ಸಾರ್ಥಕವಾಗುವುದು (ಎಂದು ಹೋಗುವುದರಲ್ಲಿ ಹುಲ್ಲ ಚಪ್ಪರದಲ್ಲಿ ಕುಳಿತು).

ಸಿದ್ಧರಾಮ : ಅಣ್ಣ ಬೊಮ್ಮಣ್ಣಾ ಹೀಗೆ ಬಾ ಮತ್ತೋಶ್ರೀಯು ನನಗೆ ಕೊಟ್ಟಿರುವಾ ಈ ಭೂಮಿಕೆಯಲ್ಲಿ ಅಗಿದು ದೇವಾಲಯವನ್ನು ನಿರ್ಮಿಸುವಾ. ನೀನು ಆ ಮನಿಗೆ ಹೋಗು. ಗುದ್ದಲಿಯನ್ನು ತಗೆದುಕೊಂಡು ಬಾ.

ಬೊಮ್ಮಣ್ಣಾ : ಆಜ್ಞಾ (ಎಂದು ಹೋಗುವನು).

ಲಕ್ಷ್ಮಿ : (ಶೃಂಗಾರದಿಂದೆ ಬಂದು) ಸಿದ್ಧರಾಮಾ ನಿನಗೆ ಜಯವಾಗಲಿ

ಸಿದ್ಧರಾಮ : ತಾಯಿಯೆ ನೀಸ್ಯಾರು ?

ಲಕ್ಷ್ಮಿ : ನಾನು ಲಕ್ಷ್ಮಿಯು ನನಗೆ ಇರಲಿಕ್ಕೆ ಸ್ಥಾನ ಕೊಡು.

ಸಿದ್ಧರಾಮ : ನೀನು ಹಿತ ಪಿತ ಪುತ್ರ ಮಿತ್ರ ವ್ಯಾಜ್ಯಾಯ ನಿಮಿತ್ತ ಚಂಚಲಕೃತ್ಯ ಕಿವಬರ ಮನಿಯಲ್ಲಿ ನಿಜವಾಗಿ ನಿಲ್ಲುವದಿಲ್ಲ. ಮತ್ತು ಶ್ರೀಮಂತರಿಗೆ ದರಿದ್ರರನ್ನಾಗಿ ಮಾಡಲು ಹಿಂಜರಿಯುವದಿಲ್ಲ. ದರಿದ್ರರಿಗೆ ದೈವಶಾಲಿ ಎನಿಸುವುದು ತಡವಿಲ್ಲ. ಆದ್ದರಿಂದ ವಚನ ಭ್ರಷ್ಟರಿಗೆ ನಾನು ನಂಬುವದಿಲ್ಲ.

ಲಕ್ಷ್ಮಿ : ಇಲ್ಲಿಲ್ಲ ಮಹನೀಯಾ. ನಾನು ನಾರಾಯಣನ ಸಾಕ್ಷಿ ಹೇಳುತ್ತೇನೆ. ಯಾವಾಗ್ಯೂ ಇದೇ ಸೊನ್ನಲಾಪುರದಲ್ಲಿ ಸದಾವಕಾಲದಲ್ಲಾದರೂ ಇರುವೆನು.

ಸಿದ್ಧರಾಮ : ಒಳ್ಳೆಯದು ಅಲ್ಲಿ ಇರು ಹೋಗು.

ಲಕ್ಷ್ಮಿ : ಆಜ್ಞಾ (ಎಂದು ಮಾಯವಾಗುವಲ್ಲಿ ಬೊಮ್ಮಣ್ಣ ಬಂದು ಒತ್ತಟ್ಟಗೆ ಅಗಳುತ್ತ ನಿಂತಿರಬೇಕು).

ಬೊಮ್ಮಣ್ಣ : ತಮ್ಮಾ ಸಿದ್ಧರಾಮಾ ಇದೊ (ಎಂದು ತೋರಿಸಿ) ಇಲ್ಲಿ ಒಂದು ತಪೇಲಿಯು ಹತ್ತಿರುವುದು (ಎಂದು ತೆಗೆವನು). (ಅಗಳುತ್ತಾ). ತಮ್ಮಾ ನೋಡಿದೆಯಾ.

ಸಿದ್ಧರಾಮ : ಅಹಾ ಅಣ್ಣಾ ಬಹಳೆ ಆಶ್ಚರ್ಯವಿದು. ಈ ತಪೇಲಿಯು ಮಲ್ಲಿಕಾರ್ಜುನನೆ ಕೊಟ್ಟಿರುವನು. ದೇವಾ ಭಕ್ತಿನಿಧಿಯೆಂಬುವಾ ಬಿರಿದು ನಿನಗೆ ಸಾರ್ಥಕ ಆದುದು. ಶಂಭೊ ನೀನೊಲಿಯಲು ಕಲ್ಲೆಲ್ಲಾ ಕನಕವಾಗುವದೆಂಬ ನುಡಿಯು ನಿಶ್ಚಯಾ. ಇರಲಿ ಅಣ್ಣಾ ನಮಗೆ ದ್ರವ್ಯದ ಬಲವಾಯಿತು ಇನ್ನು ಆಲಸ್ಯವ್ಯಾಕೆ ? ಕೆರೆ ಅಗುಳಿಸಲು

ಮನೆ ಕಟ್ಟಲು ಆ ಎಕ್ಕೆ ಮಿಂಡರನ್ನು ಬರಹೇಳು ನಾನು ಸ್ನಾನ ಮಾಡಿ ಬರುತ್ತೇನೆ.

ಬೊಮ್ಮಣ್ಣ : ಆಜ್ಞೆ.(ಎಂದು ಹೋಗುವಾ ಎಕ್ಕೆ ಮಿಂಡರು ಆರು ಮಂದಿ ಕಲ್ಲು ತಗೆಯುವಂತೆ ಅಗುಳುತ್ತಾ ಹಾರಿನಡಿಸುತ್ತ).

೧ನೇವ : ಎಲೊ ಇನ್ನು ಊಟದ ವ್ಯಾಳ್ಯಾವಾಯಿತು. ಬೇಗನೆ ಹೋಗಿ ಮತ್ತೆ ಬರುವಾ ನಡೆ.

೨ನೇವ : ಎಲೊ ಹೌದಪಾ ಸಿದ್ಧರಾಮ ಬೊಮ್ಮಣ್ಣನವರು ಬರುವುದರೊಳಗೆ ಈ ಕಲ್ಲು ತಗಿಯುವ ಕೆಲಸ ಮುಗಿಸಬೇಕು ನಡೀರೊ (ಎಂದು ಎಲ್ಲರೂ ಹೋಗಬೇಕು).

ಈಶ್ವರ : ಅಹಾ ಸಿದ್ಧರಾಮನು ಸೊನ್ನಲಾಪುರದಲ್ಲಿ ಶೃಂಗಾರವಾದ ದೇವಾಲಯವನ್ನು ನಿರ್ಮಿಸಿ ನನ್ನ ಶ್ರೀಶೈಲಕ್ಕಿಂತಲೂ ಹೆಚ್ಚಾಗಿ ಶೋಭಿಸುವಂತೆ ಮಾಡಿಸಿದ್ದೆಲ್ಲಾ ಆಯಿತು. ಆತನ ಪುಣ್ಯವು ಮಹತ್ತರವಾದುದು. ನಾನು ಹೇಳಿದಂತೆ ಅಷ್ಟೈಶ್ವರ್ಯವಗೈದಿರುವನು. ಇರಲಿ ನಾನು ಈತನ ಮನಸ್ಸು ಪರೀಕ್ಷಿಸಲು ರಂಭೆಯನ್ನು ಕಳಿಸುತ್ತೇನೆ. ಮೋಹ ಪಾಶದೊಳಗಾಗುವನೊ ನೋಡುವಾ (ಎಂದು ಹೋಗುವುದರೊಳಗೆ ಸೀನ್ ಸಿದ್ಧನಾಲಯ ಸಂಭ್ರಮದಿಂದ ತಯ್ಯಾರಗೊಳಿಸಬೇಕು).

ಸಿದ್ಧರಾಮ : **ಪದ**

(ಆನಂದದಿಂದ)

ಕೋಮಲವನವನಲತಿಕಾ । ನೋಡಿ ಸುಖಪಿಕಾ
ಸುಂದರ ಉಪವನದ ಶೋಭವ್ಯೆ ॥ ಪ ॥

ಬಂಧುರ ಸುಮ ವಿಕಸಿತಮಾಗೆ
ಕುಂದ ಜಾಜಿ ಸಂಪಿಗೆ । ಛಂದವಿರುವವು ॥ ೧ ॥

ಶೂರ ಪಾರಿವಾಳ ಪಕ್ಷಿಯು । ಧೀರನವಿಲು ನರ್ತನೆಯೊ ।
ವಾರಿಜಾಭವ । ಸಿರವ ತೂಗೆ ಚ್ಯಾರು ರಾಜಿಪಾ ॥ ೨ ॥

ಆಹಾ ಈ ಆನಂದ ಸೌಂದರ್ಯವು ಎಷ್ಟೆಂದು ವರ್ಣಿಸಲಿ ? ವೃಕ್ಷಗಳಿಂದ ಮಲ್ಲಿಕಾಲತೆ ಮಂಟಪಗಳಿಂದ ಗಿಳಿ ಕೋಗಿಲೆಗಳಿಂದ ಅತಿ ರಮಣೀಯವಾಗಿ

ತೋರುವುದು. ಆದರೆ ಈ ಪುಷ್ಪ ಮಂಟಪದೊಳಗೆ ಕೂಡ ಸ್ವಲ್ಪ ಯೋಗವನ್ನು ಆಚರಿಸುತ್ತೇನೆ (ಎಂದು ಕಣ್ಣು ಮುಚ್ಚಿಕೂಡುವನು).

ರಂಭಾ : (ನಾಟ್ಯಮಾಡುತ್ತ) **ಪದ**

ಹಾವಾರೆ ಸಂಯಾ । ಶೃಂಗಾರ ಸಿಯಾ । ಸಾರಿಯಾ ಸಖಿ
ಹರುವಾರಿಯಾ । ಮಿಲಾಕರನಾರಿಯಾ । ಹಾ ಹಾವರೆ ॥ ಪ ॥

ಅಹಾ ತೇಜಃಪುಂಜನು ಸುಕುಮಾರ ಪುತ್ಥಳಿಯು, ಜಿತೇಂದ್ರಿಯ ಶೌರ್ಯನು ಉದಾರನು, ಗಾಂಭೀರ್ಯ ಗುಣವುಳ್ಳವನು, ಆದರೆ ಇಂಥಾ ಮಹತ್ವಿಕನಿಗೆ ಸೋಲಿಸಬೇಕಾದರೆ ನನ್ನ ಪೂರ್ವ ಪುಣ್ಯವು. ಇರಲಿ ಈತನನ್ನು ಸೋಲಿಸದಿದ್ದರೆ, ಮಾತನಾಡಿಸದಿದ್ದರೆ ನನ್ನ ಹೊತ್ತಿರುವಾನಿಲಿಯು ಸಾರ್ಥಕವೆ ? ಹ್ಯಗಾದರೂ ಮಾಡಿ ಮಾತನಾಡಿಸುವೆನು (ನಾಟ್ಯದಿಂದ) ಮಹನೀಯರೆ ಸ್ವಲ್ಪ ಕಣ್ಣು ತೆರೆದು ನೋಡಿರಿ. ಮಾತನ್ನಾಡಿರಿ. ಈ ಐಶ್ವರ್ಯವು ಹ್ಯಾಗೆ ಕಾಣುವುದು ?

ಸಿದ್ಧರಾಮ : (ಕಣ್ಣುತೆರೆದು) ಅಹಾ ಇದೇನಾಶ್ಚರ್ಯವು ? ಈ ಕರ್ಣದಲ್ಲಿ ಮಂಜುಳ ಸ್ವರದಿಂದ ಗಾನ ಕೇಳಿಬರುವುದು. ಯಾರಾಗಿರಬಹುದು ? (ಎಂದು ಎದ್ದು, ತಿರುಗಿ ನೋಡಿ) ಅಹಾ ತಾಯಿಯೆ ಈ ನಮ್ಮ ಆನಂದಕರವಾದ ಯೋಗ ಮಂಟಪದಲ್ಲಿ ಯೋಗಾಭ್ಯಾಸ ಮಾಡಲು ಬಂದಿರುವಿರ್ಯಾ. ಬನ್ನಿರಿ ಕೂಡಿರಿ ನಿಮ್ಮ ಆಗಮನ ತಿಳಿಸಿರಿ.

ರಂಭಾ : ಆಹಾ ದಾನಶೀಲನೆ ತಾಯಿ ಅನ್ನಬೇಡಾ. ನಾನು ಯೋಗಾಭ್ಯಾಸಕಳಲ್ಲಾ ಕಾಮಲೀಲಾಭ್ಯಾಸಕಳು. ನನ್ನೊಡನೆ ಕಾಮಲೀಲಾಗೈಯ್ಯಲು ಕರಿಯ ಬಂದಿರುತ್ತೇನೆ. ಸಿದ್ಧರಾಮ ಕೇಳು ಮಾವಿನ ಮರದ ಮೇಲೆ ಕೂತು ಕೂಗುವಾ ಕೋಗಿಲ ಧ್ವನಿಯು ಕರ್ಣಾನಂದ. ಆಮೇಲೆ ನೇತ್ರಾನಂದ ಆಮೇಲೆ ಚಿತ್ತಾನಂದ. ತದ ನಂತರ ದೇಹಾನಂದವಲ್ಲವೆ ? ತಿಳಿ ತಿಳಿ.

ಸಿದ್ಧರಾಮ : ಅದು ಅಂಥಾ ತಿಳಿವಳಿಕೆಯ ಆಸೆಯಿಂದ ಘಾಸಿಯುಂಟಾಗುವದು. ಮಾವಿನ ಫಲಗಳಿಂದೇನು ಪ್ರಯೋಜನ ?

ರಂಭಾ : **ಪದ**

ಸುಮಶರ ವ್ಯಸನವು । ಪರಿಯುತಿರೆ
ಮಂಜುಲತಿಗೆ । ಬಾರೊ ಬಾರೊಬಾರೊ ।
ಕುಜನ ವಿದೂರನೆ । ನಯಗುಣ ಶೂರನೆ
ನೂತನ ಶೃಂಗಾರಾ ॥ ೧ ॥

ಸಿದ್ಧರಾಮ : ಪಟುತರ ಸುಕೃತಿಯು ಜರಿಯುತಿದೆ ।
ನಿನ್ನ ಕೃತಿಯು ನೋಡೆನೋಡೆ । ಸುಗುಣ ಸುಮತಿಯೆ ।
ಮದನ ವಿದೂತಿಯೆ । ಅರಿಯದೆ ಕರಿಯುವರೆ ॥ ೧ ॥

ರಂಭಾ : ಮೂಢರೀ ಜನರುಗಳನು । ಒಡಗೂಡಿದರೆ
ಕೆಡಕು ನೀಗುವರು । ವೃದ್ಧಿಪೆ ಮಮತಾ
ನೂತನ ಶಿವಸಿದ್ಧಾ ॥ ೨ ॥

ಸಿದ್ಧರಾಮ : ಕೋಟಿ ಜಪದ ಫಲಾ । ಕೋಟಿ ತಪದ ಫಲಾ ।
ಕೋಟಿ ಯಜ್ಞದ ಫಲಾ । ಕೋಟಿ ಪೂಜದ ಫಲಾ ।
ನಶಿಸಿ ಹೋಗುವುದೆ ? ॥ ೩ ॥

ಮಾತೋಶ್ರಿಯೆ ನೀನು ಹೇಳುವುದು ಸಂಸಾರಿಗಳಿಗೆ ಸುಖವು. ನಾನು ಸಂಸಾರಿ ಅಲ್ಲ. ನನಗೆ ಬೇಕಾದ ಪದಾರ್ಥವು ಬೇರೆ ಇರುವುದು. ಮಾರ್ಗ ಮಾರ್ಗದಲ್ಲಿ ನೂತನ ಸಾಧು ಸಂಗವು. ಆಮೇಲೆ ಶಂಭುವಿನ ಕೀರ್ತನವು. ಆಮೇಲೆ ತತ್ತ್ವಾನುವಾದವು. ಆಮೇಲೆ ಸಚ್ಚಿದಾನಂದ ವೃತ್ತಿಯು. ಹೀಗೆ ಏರ್ಪಾಟವಿರುವುದು ಅವುಗಳ ಕಲಿಯಬೇಕಾದರೆ ಬರಬಹುದು. ಸ್ವಯಂಭುವಾದ ಪರಮಾತ್ಮ ಲೀಲೆಯನ್ನು ನೋಡಿ ಹೊಂದಬೇಕು. ಅನ್ಯರಲ್ಲಿ ಹೊಂದುವದು ನಮ್ಮ ಧರ್ಮವಲ್ಲಾ ತಿಳಿಯಿತೆ? ಬೇಗ ಹೋಗು.

ರಂಭಾ : ಸ್ವಾಮಿ ಸ್ವಯಂಭು ಎಂದರೇನು ?

ಸಿದ್ಧರಾಮ : ಮಾತೆಯೆ ತನ್ನಿಂದ ತಾನೆ ಹುಟ್ಟಿದ ಪರಮಾತ್ಮನು ಲಿಂಗಾಕಾರವಾಗಿ ಜನರಿಗೆ ಮೋಕ್ಷ ಮಾರ್ಗ ಕೊಡುವದು.

ರಂಭಾ : ಒಳ್ಳೆಯದು ನನ್ನ ಹೃದಯದಲ್ಲಿ ತನ್ನಿಂದ ತಾನೆ ಹುಟ್ಟಿದ ಲಿಂಗಮೂರ್ತಿಗಳೀರ್ವರು ಆ ಲಿಂಗಕೆ ಪೂಜಿಸಿದ ಅನೇಕ ಶಿವ ಶರಣರು ಮೋಕ್ಷಹೊಂದಿಲ್ಲವೆ? ಪರಮೇಶ್ವರನಲ್ಲಿ ಪ್ರಯಸು ಇರುವುದು. ನನ್ನ ಹೃದಯದ ಮೇಲೆ ಪ್ರಾಯಸು ಇರುವದು ಆತನು ಕಪ್ಪುಗೊರಳನು. ನನ್ನ ಲಿಂಗದಲ್ಲಾದರೂ ಕಪ್ಪು ಉಂಟು ಅಂದ ಮೇಲೆ ಸಿದ್ಧರಾಮ ಏನು ಸಂಶಯವು ? ಮೇಲೆ ಸರ್ವವೆಲ್ಲ ವಿಚಾರಿಸಿ ನೋಡಿರಿ. ಸೌಂದರ ನಂಬೆಣ್ಣನು ಇದೆ ಲಿಂಗದಲ್ಲಿ ಪರಮೇಶ್ವರನಿಗೆ ಪ್ರತ್ಯಕ್ಷ ಮಾಡಿ ನೋಡಿ ಮೋಕ್ಷ ಮಾರ್ಗ ಪಡೆಯಲಿಲ್ಲವೆ ? ಸುಮ್ಮನೆ ಬಾಬಾ.

ಪದ

ನೋಡೋ ನೋಡೊ ನೋಡೊ
ಶಿವಸಮ ಕುಚವನ್ನು
"ಲಿಂಗವನ್ನು" ನೀ ಆತುರದಿ

ಸಿದ್ಧರಾಮ : **ಪದ**

ತೊರೆ ತೊರೆ ಶಿವ ಸಮ ಕುಚವನ್ನು । ಲಿಂಗವನ್ನು
ಆಹಾ ಸುಂದರಿಯೆ । ನಿನಗಿದು ತರವೆ ?
ನಡಿ ನಡಿ ನೀ ತೊರೆ ತೊರೆ

ರಂಭಾ : ಅಹಾ ಪ್ರಿಯನೇ । ಮಮ ಸುಖ ಸುಂದರನೇ
ಬಾಬಾ ಮಮಸುಖ । ಪ್ರಿಯನೆ । ನೋಡೋನೋಡೊ ॥

ಸಿದ್ಧರಾಮ : ಸುಂದರಿ ಸರಿಯೆ । ಬಂಧುರಾ ಗುಣಿಯೆ ।
ಸಖಿಯೆ ಕಮಲಮುಖಿಯೆ ।
ಸಹ ಬರೆ ನಾನು ಪೇಳುವೆ । ತೊರೆ ತೊರೆ ।

ರಂಭಾ : ಸುಂದರ ಬಾರೊ । ಅಧರವ ತೋರೊ
ಚೆದುರ । ಬೆದರಿ । ಹೆದರಿ । ಪದರ
ಹಾಸಿ ಬೇಡುವೆ ನೀಡೊ ನೀ ॥ ೨ ॥

ಪ್ರಿಯಾ ಮಮ ಸಖನೆ ಆದರದಿಂದೆ ಆ ಲಿಂಗಗಳಿಗೆ ಪೂಜಿಸಿ, ನಖಛಾಯವೆಂಬುವಾ ಚಂದ್ರನನ್ನು ಧರಿಸಿ ನಿನ್ನ ಬೆವರೋದಕದಿಂದಾ ಅಭಿಷೇಕಿಸಿ, ಅತ್ತರ್ ಅರಗುಜವಾದಿಗಳ ಗಂಧದಿಂದೆ ಪೂಜಿಸಿ, ತ್ರಿಕೂಟವೆಂಬ ಬಿಲ್ವ ಧರಿಸಿ, ಸ್ವಾಸಧೂಪವ ಅರ್ಪಿಸಿ, ಉಷ್ಣದ ಕರ್ಪೂರವ ಬೆಳಗಿ, ಅಧರಾಮೃತ ನೈವೇಧ್ಯವಂ ತೋರಿ, ಚುಂಬನವೆಂಬೊ ತಾಂಬೂಲವನ್ನು, ಮೆದು ಬಂಧನವೆಂಬೊ ಗಾಢಾಲಿಂಗವನ್ನು ಕೊಟ್ಟು ಸುಖದಿಂದಿರೆ ತಾವೆ ಸ್ವಯಂಭು ಎನಿಸುವರು ಬಾಬಾ.

ಸಿದ್ಧರಾಮ : ಅಹಾ ಜನನಿಯೆ ಈ ಲಿಂಗವು ಮಾಯಾ ವಿರಚನೆಯುಳ್ಳಲಿಂಗವು. ಇದರಲ್ಲಿ ರಕ್ತ ಮಾಂಸದ ಕರಣಿ ಇರುವುದು. ಈ ಹೇಯವಾದ ಲಿಂಗಪೂಜೆ ಇಂದೆ ಯಮ ನಗರ ಸೇರಿ, ಆತನ ಶಸ್ತ್ರಾಸ್ತ್ರ ಮೊಂಡಗೊಳಿಸಿ, ನರಕ ಕೂಪವಂ ಮತ್ತೊಂದು ರಚಿಸಿ, ಅದರಲ್ಲಿ ಸ್ನಾನ ಮಾಡಬೇಕಾಗಿರುತ್ತದೆ. ಅದರಲ್ಲಿ ಈಸ್ಯಾಡೋಣ. ಅದರಲ್ಲೇನೂ ಫಲವಿಲ್ಲ. ನೋಡು ಈ ನಿರ್ವಿಕಾರ ನಿರಾಮಯ

ನಿರ್ವೇದ್ಯ ನಿರೂಪಂ ಕೋಟಿ ಸೂರ್ಯಪ್ರಕಾಶವನ್ನು ಮೀರಿ ಸರ್ವ ಚರಾಚರದಲ್ಲಿ ವ್ಯಾಪಿಸಿದ ಶಿವನನ್ನು ಕರಿಯಬೇಡಾ ಹೊರಟುಹೋಗು.

ರಂಭಾ : ಸಿದ್ಧರಾಮ ನಾನಾದರೂ ಸರ್ವ ಚರಾಚರದಲ್ಲಿಯೆ ಇರುವೆನು. ಬಹಳೆ ವಿಚಾರದಿಂದ ತಿಳಿದು ನೋಡು.

ಸಿದ್ಧರಾಮ : ಮಾತೆಯೆ ನಿಶ್ಚಯ. ನೀನಾದರೂ ಸರ್ವ ಚರಾಚರದಲ್ಲಿಯೆ ಇರುವಿ. ಅದೂ ಪರಮಾತ್ಮನು ಅದರಲ್ಲಿದ್ದು ಮಾಯಾ ವಿರಹಿತನಾಗಿದ್ದಾನೆ. ಕೊಚ್ಚಬೇಡಾ ಹೊರಟು ಹೋಗು.

ರಂಭಾ : ಸಿದ್ಧರಾಮಾ ಮಾಯಾ ಸಂಸಿದ್ಧವಾದ ದೇಹವು ನಿನ್ನದಲ್ಲವೆ ? ಸರ್ವರಂತೆ ನರ ಮಾಂಸ ಅಸ್ತಿ ರೋಮಗಳಿಂದ ಕೂಡಿಲ್ಲವೆ ? ನರಮಾಂಸ ಯುಕ್ತವಾದ ಸ್ತನವು ನನಗಾದರೂ ಉಂಟು ಅಂದ ಮೇಲೆ ಏನು ಸಂಶಯ ? ಕಾಮ ಸುಖಕೆ ಯಾಕೆ ಒಲ್ಲೆ ಎನ್ನುವಿ?

ಸಿದ್ಧರಾಮ : ತಾಯೆ ನಿನ್ನ ಮಾತುಗಳೆಲ್ಲವು ನಿಜವು. ಆದರೆ ನಾನು ಯಾರಿಂದ ಹುಟ್ಟಿರುವೆನು ಗೊತ್ತಿರುವುದೆ ?

ರಂಭಾ : ನೀನು ನಮ್ಮಂತೆ ಜನನಿ ಉದರದಿಂದ ಹುಟ್ಟಿರುವಿಯೇನು ? ರೇವಣಾರ್ಯರಂತೆ ಲಿಂಗದಲ್ಲಿ ಹುಟ್ಟಿರುವಿಯಾ ಹ್ಯಾಗೆ ನೀನೆ ಹೇಳು?

ಸಿದ್ಧರಾಮ : ಅಮ್ಮಾ ಆ ಮಾಯವು ನನಗೆ ಹಡಿಯಲಿಕ್ಕೆ ಜನನಿಯಾಗಿ, ಕಾಮಶಾಂತಿ ಸಲಿಕೆ ಪ್ರಾಯದಲ್ಲಿ ಸ್ತ್ರೀಯಾಗಿ, ಮುಪ್ಪಿನ ಕಾಲಕ್ಕೆ ಮಗಳಾಗಿ ಹುಟ್ಟಿ, ಈ ಸಂಸಾರ ಪ್ರಾಣಿಗಳಿಗೆ ಸುತ್ತಿಕೊಂಡಿರುವುದು. ಅಂದ ಮೇಲೆ ನಾನು ಜನನಿ ಸಹವಾಸ ಮಾಡಿದರೆ ಯಾವ ನರಕವಾಗಬೇಕು ? ಸ್ವಲ್ಪ ತಿಳಿದು ಹೇಳು. ನೀನು ತಾಯಿಯೆ ನಿಜವು. ನಾನು ಮಗನೆ ನಿಜವು. ನನ್ನನ್ನು ಮುಟ್ಟಬೇಡಾ ದೂರ ಇರು.

ರಂಭಾ :

ಪದ

ಬಿಡು ಬಿಡು ಬ್ಯಾಡೊ ಕೋಪವನ್ನು ।
ಬಿಡು ಕೋಪವನ್ನು ಬಿಡು
ಬ್ಯಾಡೊ ಕೋಪವನ್ನು

ಸಿದ್ಧರಾಮ : **ಪದ**

ತಡಿಯಲು ಅಸಾಧ್ಯವು ನನ್ನ ।
ನಡೆ ನಡೆ ಮಾತೆ । ಈಗೆ ಮುನ್ನ
ಈಗೆ ನೀ ಮುನ್ನ

ರಂಭಾ : ಸುಗುಣಾ ಪ್ರೇಮದ ದಾನ ವಿನೋದಾ
ಭರಣಾ ಗಣಾಧಿಪಾ । ಅರ್ಚಿತ ಪಾದಾ

ಸಿದ್ಧರಾಮ : ದೂರದೂರ ದೂರ ಸರಿ । ದುರ್ವ್ಯಸನವನ್ನು
ಬಿಡು ಬಿಡು ಮಾತೆಯೆ । ನೀ ಮುನ್ನಾ

ರಂಭಾ : ಬ್ಯಾಡೊ ಬ್ಯಾಡೊ ಬ್ಯಾಡೊ ಕೋಪವನ್ನಾ
ಸಹಿಸಲು ಅಸಾಧ್ಯವು ನನ್ನಾ

ಸಿದ್ಧರಾಮ : ನಡೆ ನಡೆ ಸರ್ವಜನ ತ್ರೇಯಿ ।
ಪರಮ ಸುಗಾತ್ರೆ । ವ್ಯಾಲ ಚರಿತ್ರೆ ।
ಸ್ವಕುಮ ವಿತ್ರೆ । ದೂರ ದೂರ ದೂರ ಸರೆ ।

ಮಾತೆಯೆ ಇನ್ನು ಮೇಲೆ ನನಗೆ ಕಠಿಣೋಕ್ತಿಗಳಿಂದ ಹಿಯಾಳಿಸಬೇಡ ದೂರ ಪೋಗು.

ರಂಭಾ : ಸಿದ್ಧರಾಮ ಮಮಪ್ರಿಯ ಚಂದ್ರಮುಖಿಯಾಗಿ, ನೇತ್ರಗಳು ಕಮಲದಂತೆ, ಸಂಪಿಗೆ ತೆನೆಯಂತೆ ನಾಸಿಕವು, ಕನಕ ಕಲಶೋಪಮಾನ ಕುಚವು, ಕರಿಶಿರದಂತೆ ಜಘನವು ಇದ್ದ ಸ್ತ್ರೀಯರ ಪುರುಷರು ನೋಡಿದರೆ ಸುಮ್ಮನೆ ಬಿಟ್ಟಾರೆ ? ನೀನು ಪುರುಷನಲ್ಲಲ್ಲಾ ನೀನು ನಪುಂಸಕನು ಷಂಡನು.

ಸಿದ್ಧರಾಮ : ಮಾತೆಯೆ ಚಂದ್ರಮುಖಿವೆಲ್ಲ ಲಾಲಯುಕ್ತವಾದದ್ದು. ಕನಕ ಕಲಶವೆಲ್ಲಾ ಕರುವಿನ ಗಂಟು ಕಣ್ಣಗಳಲ್ಲಿ ದುರ್ಗಂಧದ ಕುಪ್ಪೆ, ನಾಸಿಕವೆಲ್ಲಾ ಸುಂಬಳದ ಕುಪ್ಪೆಯು. ಜಘನವೆಲ್ಲಾ ಅಮೇಧ್ಯದ ಬಾಂಡಾರ ವಿಚ್ಯಾರಿಸಿ ನೋಡು. ಯಾವುದರಲ್ಲಿ ಏನೇನು ಇಲ್ಲ. ಆಸುಗಂಧವೆ ಇಲ್ಲಾ. ಅಂಥಾದ್ದರಲ್ಲಿ ಈ ನನ್ನ ಸಂದಿಗ್ಧವಾದ ದೇಹವು ಹ್ಯಾಗೆ ಬಿದ್ದಿತು ? ಅಭಿಮಾನ ಕಳೆದುಕೊಳ್ಳಬೇಡ. ಮತ್ತ್ಯಾವನನ್ನಾದರೂ ನೊಡಿಕೊ ಹೋಗು.

ರಂಭಾ : ಅಹಾ ಧನ್ಯ ಧನ್ಯ. ಈ ಶಿವಯೋಗಿಗೆ ಇನ್ನು ಮೇಲೆ

ಕೆಣಕಬಾರದು. ಕೆಣಕಿದರೆ ಅನರ್ಥವಾಗುವುದು. ನೋಡಿರಿ ತ್ರಿಲೋಕದಲ್ಲಿ ದೇವದಾನವರಾದರೂ ಸ್ತ್ರೀಸಂಗ ಬಿಟ್ಟಿಲ್ಲಾ. ಶಂಕರನು ಜಡಿಯಲ್ಲಿ ಇಟ್ಟುಕೊಂಡಿದ್ದಾನೆ. ಬ್ರಹ್ಮನು ಮುಖದಲ್ಲಿ ಇಟ್ಟುಕೊಂಡಿದ್ದಾನೆ. ನಾರಾಯಣನು ಹೃದಯದಲ್ಲಿ ಇಟ್ಟುಕೊಂಡಿದ್ದಾನೆ ಇಂದ್ರನು ಮೈಯೆಲ್ಲಾ ಯೋನಿ ಮಾಡಿಕೊಂಡಿದ್ದಾನೆ. ಚಂದ್ರನು ಗುರುಪತ್ನಿಗೆ ಗಮನ ಮಾಡಿದನು. ಇವರೆಲ್ಲಾ ಮಾಯಾಧೀನರು. ಈ ಶಿವಯೋಗಿ ಸಿದ್ಧರಾಮನು ನಿರ್ಮಾಯನೆ ಸರಿ. ಸಿದ್ಧರಾಮಾ ನಾನು ಸೋತೆನು. ನೀನು ಗೆದ್ದಿ ಮಹನೀಯಾ. ಆದರೆ ಇಷ್ಟು ತನು ಕಲ್ಲು, ನಿನ್ನ ಮನಸ್ಸು ಪರೀಕ್ಷಿಸಲು ಆಡಿದ ವಾಕ್ಯಗಳಲ್ಲಿ ನಿಷ್ಠುರವಿದ್ದಲ್ಲಿ, ಮನ್ನಿಸಿ ಕ್ಷಮಿಸಿ ಕಾಪಾಡಬೇಕೆಂದು ಬೇಡಿಕೊಳ್ಳುತ್ತೇನೆ. ಇನ್ನು ಮೇಲೆ ನನಗೆ ಆಜ್ಞೆ ಮಾಡು ಹೋಗಿ ಬರುತ್ತೇನೆ.

ಸಿದ್ಧರಾಮ : ತಾಯೆ ನೀನೇನು ಮಾಡುವಿ ? ಇದು ಪರಮೇಶ್ವರನ ಲೀಲೆಯು ಹೋಗಿ ಬಾ. ಇನ್ನು ಮೇಲೆ ಶಿವಯೋಗಿಗಳ ಮೇಲೆ ಹೋದಿ ಎಂದರೆ ಈ ನನ್ನ ಅಗ್ನಿ ನೇತ್ರದಿಂದ ದಹಿಸಿಬಿಡುತ್ತೇನೆ. ನೋಡು ಎಚ್ಚರದಿಂದ ಇರು ಹೋಗಿ ಬಾ.

ರಂಭಾ : ಇಲ್ಲಿಲ್ಲ ಮಾರಾಯಾ ಸತ್ಯವಾಗಿ ಶಿವಯೋಗಿಗಳ ಮೇಲೆ ಹೋಗುವದಿಲ್ಲಾ. ಹೋಗಿ ಬರುತ್ತೇನೆ (ಎಂದು ನಮಿಸಿ ಹೋಗುವಳು).

ಸಿದ್ಧರಾಮ : ಅಹಾ ಪರಮೇಶ್ವರಾ ನಿನ್ನ ಲೀಲೆಯು ಎಂಥಾದ್ದು ? ಇನ್ನೂ ಏನೇನು ಚಮತ್ಕಾರ ಚರಿಸಿ ನೋಡುವಿ. ಇಂಥಾ ಸಂಸಾರ ಕಷ್ಟವು ಎಷ್ಟಂತ ಕೊಡುವಿ ? ದಯಾಕರಾ ಇಂಥಾ ಅಘಟಿತ ಪ್ರಸಂಗವ ಮೇಲೆ ಮೇಲೆ ತರಬೇಡಾ. ಇನ್ನು ಮೇಲೆ ನಾನು ಮಾಡುವಾ ಕಾರ್ಯಗಳಿಗೆ ಯಶಸ್ಸು ಕೊಡತಕ್ಕದ್ದು. ಇನ್ನು ಮೇಲೆ ಅನ್ನ ಕ್ಷೇತ್ರ ನಡೆಸುವೆನು. ಮಲ್ಲಿಕಾರ್ಜುನನ ಸೇವೆಗೈಯ್ಯುವೆನು. ಆ ಕಾರಣ ಆಣ್ಣಾ ಇತ್ತ ಕಡೆ ಬಾ. ಈ ಊರಲ್ಲಿರುವ ಸಭ್ಯ ಸ್ತ್ರೀಯರ ಮನಿಗೆ ಹೋಗಿ ಅವರವರ ಯೋಗ್ಯತಾನುಸಾರ ಗೋದಿ ಕುಟ್ಟಲು ಹಾಕಿ ಬಾ. ಆ ಪುಣ್ಯವನ್ನು ಅವರಿಗೆ ಕೊಡುತ್ತೇನೆ. ಬೇಗನೆ ಕುಟ್ಟಲಿಕ್ಕೆ ಹಾಕಿ ಬಾ. ದಾಸೋಗ ನಡೆಸುವಾ.

ಬೊಮ್ಮಣ್ಣ : ಒಳ್ಳೆಯದು ಹೋಗುತ್ತೇನೆ (ಎಂದು ಹೋಗುವರು ಸೀನ್ ಶಾಂತಾದೇವಿ ಗೃಹ ತಯ್ಯಾರಾಗಬೇಕು) (ತಾಯಿ ಮಗಳು ಕುಟ್ಟಬೇಕು).

ಶಾಂತಾದೇವಿ **ಪದ**

ಪಶುಪತಿ ಪಾಹಿ । ಸೂರ್‍ಯನಯನ
ಮತೋಲ ಲೋಲಕರ । ಶೂಲವಿರಾಜಿತ
ಶೈಲಜೆ ಕಾಂತಾ । ಸುಮನ ವಿಕಸಿತಾ
ಕಾಲ ಕಾಲ ಹೈ ಪಶುಪತಿ ॥ ೧ ॥

ಮೌನ ಜನಾಶ್ರಿತ ಶಂಕರ ತಾತ
ಸಾಮಜ ಗಾನಾಲಕರ ಪೂರಿತ ।
ವರ ಪಾಹಿ ಪಶುಪತಿ । ಪಾಹಿ ಪಾಹಿ ॥ ೨ ॥

ಶಿವಾ ಶಿವಾ ನೈಷ್ಠಿಕ ಜನರಿಗೆ ಸುಖವನ್ನುಂಟು ಮಾಡಿ ಫಲ ಕೊಡತಕ್ಕದ್ದು.

ಬೊಮ್ಮಣ್ಣ : ತಾಯೆ ಶಾಂತಾದೇವಿ ಸ್ವಲ್ಪ ಹೊರಗೆ ಬರತಕ್ಕದ್ದು.

ಶಾಂತದೇವಿ : ನೀನು ಯಾರು ?

ಬೊಮ್ಮಣ್ಣ : ತಾಯಿ ನಾನು ಸಿದ್ಧರಾಮನ ಅಣ್ಣನಾದ ಬೊಮ್ಮಣ್ಣನು. ಮಾತೆ ಹೀಗ್ಯಾಕೆ ಕೇಳುವಿ ?

ಶಾಂತಾದೇವಿ : ನೀನು ಇಲ್ಲಿಗ್ಯಾಕೆ ಬಂದಿರುವೆ ?

ಬೊಮ್ಮಣ್ಣ : ಸಿದ್ಧರಾಮನು ಗೋದಿಯನ್ನು ಕುಟ್ಟಿ ಕುಡಲಿಕ್ಕೆ ಹೇಳಿರುವನು. ಮಲ್ಲಿಕಾರ್ಜುನನ ನೈವೇದ್ಯ ಮಾಡಿ, ಸರ್ವ ಅನಾಥರಿಗೆ ತೃಪ್ತಿಪಡಿಸುವನಂತೆ ಆ ಕಾರಣ ಇದೊ (ಬುಟ್ಟಿ ತೋರಿಸಿ) ಗೋದಿಯನ್ನು ಕುಟ್ಟಿಕೊಡು.

ಶಾಂತಾದೇವಿ : ಅಣ್ಣಾ ಬೊಮ್ಮಣ್ಣಾ ನಾನು ಗುರುಲಿಂಗ ಜಂಗಮರ ಸೇವೆಯಲ್ಲಿರುವೆ ಅನ್ಯರ ಸೇವೆಗೈಯ್ಯುವಳಲ್ಲಾ. ಗೋದಿ ಕುಟ್ಟುವದಂತೂ ಒತ್ತಟ್ಟಿರಲಿ ಲಿಂಗವಿಲ್ಲದವರ ಮುಖವನ್ನೂ ನೋಡುವುದಿಲ್ಲ ಹೋಗಿರಿ.

ಬೊಮ್ಮಣ್ಣ : ತಾಯಿ ಶಾಂತಾದೇವಿ ಸಿದ್ಧರಾಮನು ಲಿಂಗ ಹೀನನೆ ? ನಿತ್ಯ ತ್ರಿಕಾಲದಲ್ಲಿ ಸ್ವರ್ಗಕ್ಕೆ ಹೋಗಿ ಬರುತ್ತಾನೆ. ಮೇಲೆ ಶಿವದರುಶನ

ಮಾಡಿಕೊಳ್ಳುತ್ತಾನೆ. ಮತ್ತು ಸಕಲ ಪ್ರಾಣಿಗಳಿಗೆ ಅನ್ನದಾನ ಪ್ರಾಣ ಪ್ರತಿಷ್ಠೆಗೈಯುವನು. ಇಂಥವನಿಗೆ ನಿಂದಿಸಬಾರದು.

ಶಾಂತಾದೇವಿ : ಅಣ್ಣಾ ಬೊಮ್ಮಣ್ಣಾ ಸಿದ್ಧರಾಮನು ಎಲ್ಲಿಗ್ಹೋದರೂ ಲಿಂಗವೆಲ್ಲಿ ಉಂಟು ? ತೋರಿಸು.

ಬೊಮ್ಮಣ್ಣ : ಏನು ಲಿಂಗವಿಲ್ಲಾ, ಗೋದಿ ಕುಟ್ಟುವುದಿಲ್ಲವೆ ? ಒಳ್ಳೆಯದು ನೋಡೋಣ ಹ್ಯಾಗೆ ಕಟ್ಟುವುದಿಲ್ಲವೊ ? ಈ ಗೋದಿಯನ್ನು ನಿಮ್ಮ ಮನಿಯಲ್ಲಿಟ್ಟು ಹೋಗುವೆನು. ತಿರುಗಿ ಇನ್ನೊಮ್ಮೆ ಬರುವುದರಲ್ಲಿ ಅಕ್ಕಿ ತಯ್ಯಾರಾದರೆ ಉತ್ತಮ. ಇಲ್ಲದಿದ್ದರೆ ನಿನ್ನ ಪರಿಣಾಮ ನೆಟ್ಟಗಿಲ್ಲಾ (ಎಂದು ಸ್ವಲ್ಪ ಮರೆಯಾಗಿ ನೋಡಿ).

ಶಾಂತಾದೇವಿ : ತಂಗಿ ಸುಶೀಲಾ ಇನ್ನೊಮ್ಮೆ ಸ್ನಾನ ಮಾಡಿದರೂ ಚಿಂತೆ ಇಲ್ಲಾ. ಈ ಗೋದಿಯ ಬುಟ್ಟಿ ಒಯ್ದು ತಿಪ್ಪೆಯ ಮೇಲೆ ಒಗಿದು ಬಾ.

ಸುಶೀಲಾ : ಒಳ್ಳೆಯದಮ್ಮಾ ಚೆಲ್ಲುತ್ತೇನೆ (ಎಂದು ಬುಟ್ಟಿ ಒಯ್ಯುವಳು ರಸ್ತಾ ಪಡದಾ ಬೀಳುತ್ತದೆ?

ಬೊಮ್ಮಣ್ಣ : (ಸಿಟ್ಟಿನಿಂದ) ಓಹೊ ಇವಳ ಸೊಕ್ಕು ಎಂಥಾದ್ದು ? ನಾನು ಹೇಳಿ ಮರೆಯಾಗುವುದರಲ್ಲಿ ನಮ್ಮ ಗೋಧಿಯನ್ನು ಮಗಳ ಕೈಲಿಂದ ತಿಪ್ಪಿಯ ಮೇಲೆ ಚೆಲ್ಲಿಸಿದಳು. ಇಷ್ಟು ವರ್ತಮಾನವೆಲ್ಲಾ ನಮ್ಮ ಸಿದ್ಧರಾಮನಿಗೆ ತಿಳಿಸಿ, ಈಕೆಯನ್ನು ನೆಟ್ಟಗೆ ಮಾಡಿಸುವೆನು. (ಎಂದು ಹಲ್ಲು ಕಚ್ಚುತ್ತ ಹೋಗುವನು).

ಬೊಮ್ಮಣ್ಣ : ತಮ್ಮ ಸಿದ್ಧರಾಮಾ ನಾನು ಊರಲ್ಲಿರುವಾ ಸಭ್ಯಸ್ತ್ರೀಯರಿಗೆ ಗೋದಿಕೊಡುತ್ತಾ ಆ ಶಾಂತಾದೇವಿಯ ಗೃಹಕ್ಕೆ ಹೋಗಿ ಗೋದಿ ಇಡಲು, ಆಕೆಯು ಗುರುಲಿಂಗ ಜಂಗಮಮರ ಸೇವೆಯ ವಿನಾ ಅನ್ಯರ ಸೇವೆ ಮಾಡುವುದಿಲ್ಲವೆಂದಳು. ನಾನು ನಿನ್ನ ಮಹತ್ವ ಹೇಳಲು ಆಕೆ ಹ್ಯಾಗೂ ಆಗುವುದಿಲ್ಲವೆಂದಳು. ಸಿದ್ಧರಾಮನು ಭವಿ ಇರುವನೆಂದು ನಮ್ಮ ಗೋದಿ ಬುಟ್ಟಿಯನ್ನು ತಿಪ್ಪಿ ಮೇಲೆ ಮಗಳಿಂದ ಒಗಿಸಿದಳು. ಇಷ್ಟು ನಾನು ಕಣ್ಣಾರೆ ನೋಡಿ ಬಂದೆನು. ಇದಕ್ಕೆ ಮಲ್ಲಿಕಾರ್ಜುನನೆ ಸಾಕ್ಷಿಯು.

ಸಿದ್ಧರಾಮ : ಓಹೊ ಆ ಶಾಂತಾದೇವಿಯ ಧೈರ್ಯ ಎಂಥಾದ್ದು ? ಧನ್ಯ; ನಾನು ಜಗತ್ಯದಲ್ಲಿ ಮಹತ್ವಿಕನಿರಲು ಇಂಥಾ ಹೋಮ ನೇಮಾದಿ ಇತರ

ಪ್ರಾಣ ಪ್ರತಿಷ್ಠೆ ಇವುಗಳನ್ನೆಲ್ಲ ತಿಳಿಯದೆ ಯಕ್ಕಶ್ಚಿತ ಆ ಬಲಹೀನಳಾದ ಸ್ತ್ರೀಯು ಈ ಪ್ರಕಾರ ಮಾತನಾಡಿದಳೆ ? ಒಳ್ಳೆಯದು ಇರಲಿ. ಆಕೆಯ ಅಹಂಕಾರಕ್ಕೆ ತಕ್ಕ ಫಲವನ್ನು ಕೊಡದಿದ್ದರೆ ನಾನು ಸಿದ್ಧರಾಮನೆ ಅಲ್ಲಾ. ಅಣ್ಣಾ ನಡೆ ಬೇಗನೆ ಆ ದುರುಳಿಯನ್ನು ದಹಿಸಿ ಬರುವಾ ನಡೆ.

ಬೊಮ್ಮಣ್ಣ : ನಿಶ್ಚಯ ನಿನ್ನ ಅಗ್ನಿ ನೇತ್ರದಿಂದೆ ಆ ನೀಚಳ ಗೃಹವನ್ನು ದಹಿಸಿ ಬರುವುದೆ ಯೋಗ್ಯವು ನಡೆಯಿರಿ (ಎಂದು ಹೋಗಿ ರಸ್ತಾದ ಮುಂದೆ).

ಸಿದ್ಧರಾಮ : (ಶಾಂತಾದೇವಿ ಗೃಹಕ್ಕೆ ಹೋಗಿ)

ತಾಯೆ ಶಾಂತಾದೇವಿಯೆ ಬಾಗಿಲ ತೆರೆ.

ಶಾಂತಾದೇವಿ : ಯಾರು ಕರಿಯುವವರು ?

ಸಿದ್ಧರಾಮ : ನಾನು ಸಿದ್ಧರಾಮನು.

ಶಾಂತಾದೇವಿ : ಸಿದ್ಧರಾಮನಾದರೆ ನೆಟ್ಟಗಾಯಿತು. ಲಿಂಗವಿಲ್ಲದ ಭವಿಗಳಿಗೆ ಒಳಗೆ ಬರಗುಡುವದಿಲ್ಲ.

ಸಿದ್ಧರಾಮ : ತಾಯೆ ಮಲ್ಲಿಕಾರ್ಜುನನು ಲಿಂಗಮೂರ್ತಿಯಲ್ಲವೆ ? ಆತನೆ ನನ್ನ ಲಿಂಗ ಮೂರ್ತಿಯು. ನನಗ್ಯೇಕೆ ಲಿಂಗವಿಲ್ಲಾ

ಶಾಂತಾದೇವಿ : ಅಂದರೆ ಏನು ? ಆತನಿಗೆ ಸ್ಥಾವರಲಿಂಗವೆಂದು ನಮ್ಮ ಅಭಿದಾನವುಂಟು. ಮೇಲೆ ಆತನು ಗುಡಿಯಲ್ಲಿ ನೀನು ನಮ್ಮ ಮನಿಯಲ್ಲಿ ಏನು ಕೆಲಸಕ್ಕೋಸ್ಕರ ಬಂದಿರುವಿ ? ಆತನೆ ನಿನ್ನ ಲಿಂಗವಾದರೆ ಆತನಿಗೆ ಬಿಟ್ಟ್ಯಾಕೆ ಬಂದಿರುವಿ ? ಲಿಂಗವು ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲ್ಯಾದರು ಬಿಡಲುತಕ್ಕುದಲ್ಲವೆಂದು ಧರ್ಮ ಶಾಸ್ತ್ರ ಹೇಳುವುದು ನಿನಗೆ ಗೊತ್ತಿಲ್ಲವೆ ?

ಸಿದ್ಧರಾಮ : ಮಾತೆ ಆತ್ಮಲಿಂಗ ಲೀಲೆ ಚೆನ್ನಾಗಿ ತಿಳಿದ ಮೇಲೆ ಇಷ್ಟಲಿಂಗದ ಪ್ರಯೋಜವೇನು ಹೇಳು ?

ಶಾಂತಾದೇವಿ : **ಪದ**

ಮತಿಹೀನನೆ ಇಷ್ಟಲಿಂಗವ ಬಿಡುವರೆ ?
ನಷ್ಟನಾಗಿ ಚರಿಸುವರೇನೋ ?

ಬಿಟ್ಟಿ ದ್ರವ್ಯವಲ್ಲಿ ಸಿಗಲೊಟ್ಟುಗೂಡಿ
ಬರುವದೇನೊ ? ॥ ೧ ॥

ಸಿದ್ಧರಾಮ:ದುರ್ದೈವ ದಿನನಲ್ಲೆನೆ । ದುರ್ಮತಿಹಳಾದೆ ।
ಇಷ್ಟಲಿಂಗ ಸಲ್ಲದೆ ನಾರಿಯೆ !
ಕುಟಿಲ ಮಾತುಗಳಾಡುವರೆ ?
ಸಿಟ್ಟು ಬರುವುದೀಗ । ಭ್ರಷ್ಟ ಸಿದ್ಧನೆಂದು ನುಡಿಯುವಿಯಾ ?॥ ೧ ॥

ಶಾಂತಾದೇವಿ : ಧರಿಸಿ ಲಿಂಗವನಿವ । ಭಕ್ತರು ಮರಳಿ ಮರಳಿ
ಬರುವ ಜನ್ಮ ಕರಗಿ ಕರಗಿ । ಹೋಗುವುದು ।
ನೀರೊಳಗೆ । ಎರಿಹೆಂಟಿ ಸಮಾನವೆಂದರಿವುದ ॥ ೨ ॥

ಸಿದ್ಧರಾಮ : ಸ್ಫುರಿಸಿ ಧ್ಯಾನ । ಜಪವೊ । ತಪವೋ
ಅರಿ ನೀನು ಪೂಜ್ಯ ಫಲವಾ । ಮೇಣ್
ಸ್ಫುರಿಸಿ ಆಗಿದೆ ಧನ್ಯ ಮಾನ್ಯ
ಎನಗಿದು ದೃಢವು ॥ ೨ ॥

ತಾಯೆ ಸಿದ್ಧರಾಮನೆಂದರೆ ಸ್ವಲ್ಪ ವಿಚಾರಿಸಿ ನೋಡು.

ಶಾಂತಾದೇವಿ : ಇಷ್ಟಲಿಂಗವಿಲ್ಲದೆ ತಿರುಗ್ಯಾಡುವರ ಮಾತನಾಡುವರ ಮುಖವನ್ನು ನೋಡಬಾರದೆಂದು ಅನಂತ ಶಾಸ್ತ್ರವಿಲ್ಲವೆ ? ನೋಡಿಕೊ. ಸ್ನಾನವಾದರೂ ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲೂ ಲಿಂಗವನ್ನು ಬಿಡಕೂಡದು

ಸಿದ್ಧರಾಮ : ಶಾಂತಾದೇವಿಯೆ ಅವೆಲ್ಲ ಸರಿ. ಪರಂತು ನಮಗೂ ನಿಮಗೂ ಆಡಬೇಕಾದರೆ ಬೇಧಗಳೇ ಸೇರಿದವಲ್ಲಾ.

ಶಾಂತಾದೇವಿ : ಇರಲಿ ಸಿದ್ಧರಾಮ ನೀನು ಲಿಂಗಪೂಜಾ ಮಾಡಿ ಸರ್ವಪಾಕ ಸಿದ್ಧಗೊಳಿಸಿ, ಲಿಂಗಾರ್ಪಣ ಜಂಗಮಾರ್ಪಣವಿಲ್ಲದೆ ಭೋಜನ ಮಾಡುವಿಯಾ ಹ್ಯಾಗೆ ?

ಸಿದ್ಧರಾಮ : ಇಲ್ಲಿಲ್ಲ. ಮಲ್ಲಿಕಾರ್ಜುನನ ದೇವಾಲಯಕ್ಕೆ ಹೋಗಿ ನೈವೇದ್ಯ ಅರ್ಪಿಸಿ ಆಮೇಲೆ ಭೋಜನ ಮಾಡುವೆನು.

ಶಾತಾದೇವಿ : ಕಲ್ಲು ದೇವರಿಗೆ ಕೈ ಚಾಚಿದರೆ ಏನು ಪ್ರಯೋಜನವು ? ಛೀ ನಿನ್ನ ನುಡಿಯು ಅಸಹ್ಯವಾದುದು.

ಪದ

ಛೀ ನೀಚರಂದದಿ । ತೋಚದೆ ಆಡುವಿ
ಗೋಚರಿಪುದೆ । ಶೀವಾಧಮಾ ನುಡಿಯ ।
ಅವಾಚ್ಯವು । ಸ್ಥಬ್ಧಗಳು ಚರಿಸಿದರೆ
ತವೆ ನಾಚಿಸಿ ಬಿಡುವನು ।
ಶಿವಧರ್ಮವ । ಕೇಳು ಶಿವಧರ್ಮವಾ ॥ ೧ ॥

ಸಿದ್ಧರಾಮ : ಶ್ರೀ ಪಂಕಜಾಕ್ಷ ವರ । ಕೆಂಪುಮಹಳಿ ಶಂಕರ
ಸುಖಿಸ್ಪದ ಪ್ರಿಯಕರಿರ । ಕಂಜನ ಮನದ
ಬಿಂಕವೊಂದುರಿಸಿ । ಮಂಕುಬುದ್ಧಿ ತೋರುವರೆ ನೀ ॥ ೧ ॥

ಶಾಂತಾದೇವಿ : ಸರಿ ಸರಿಯೊ । ನೀ ಭ್ರಷ್ಟ । ಮನಿ ಹೊರಗೆ
ಹೋಗು ಹೋಗು ನೀ ಸ್ವಲ್ಪ । ಸದರು ಮಾತುಗಳು ।
ಹೆದರದೆ ಆಡುವಿ । ಬೆದರಿಸುವುದು । ಮರ್ಯಾದೆಯೆ ?

ಸಿದ್ಧರಾಮ : ಲಿಂಗದ ಮೇಲೆ ಗುಣ ಹೀನ । ಅನುವರೆ
ವಾಕ್ಯ ಕಟು ಬಿರುಸು । ಮೋಹಿನೆ
ಸದಾ ಭ್ರಷ್ಟೆಯೆ ನೀ ।

ಶಾಂತಾದೇವಿ ಇನ್ನು ಮೇಲೆ ನನಗೆ ಹಿಯಾಳಿಸಬೇಡ ಸಿಟ್ಟು ಬರುವುದು.

ಶಾಂತದೇವಿ : ಅಂಗದ ಮೇಲಿನ ಲಿಂಗಕ್ಕೂ ಗುಡಿಯಲ್ಲಿರುವಾ ಲಿಂಗಕ್ಕೂ ಇಷ್ಟವಾದ ಭೋಜನಕೆ ಐದು ಘಂಟೆ ಆಗಲಿ ಐದು ನಿಮಿಷವಾದರೂ ಭೇದವುಂಟು ತಿಳಿದಿಯಾ ?

ಸಿದ್ಧರಾಮ : ಛೀ ಹಿಂತಿರುಗಿ ನುಡಿಯುವುದ್ಯಾಕೆ ? ನಾನೇನು ಅಬಲಿಯರಂತೆ ಬಲಹೀನನೆ ? ನಾನು ಹಿಂತಿರುಗುವನಲ್ಲಾ.

ಶಾಂತಾದೇವಿ : **ಪದ**

ಭವಿಯ ಸಮವೇ । ಕವಿ ವರದ ದೇವನಿಗೆ
ನಿಂದಿಸುವರೆ ಭವಿಯೆ । ಮಾಡು ಮಾಡು ಸ್ತೋತ್ರ ।
ಬ್ಯಾಡೊ ಧರ್ಮ ಹತ್ಯ । ಖಿಡು ಕೆಟ್ಟ ಕೃತ್ಯ
ಚಿತ್ತನಾ ಭವಹರ ಉತ್ತಮ ಸೇವೆಯ ।
ಮಾಡು ಹೋಗು ಭವಿಯೆ ॥ ೧ ॥

ಕೀರ್ತಿಯಿಂದೆ ಕೆಡುವಿ ವ್ಯರ್ಥ
ಜನ ಕೇಳಿ ನಿನ್ನ ಮರಿತು । ಮತ್ತೆ ಸಾಯುವಿ ।
ಶರ್ತದಿ ಪೇಳುವೆ । ಪೂರ್ತಿ ತಿಳಿದು ।
ಸತ್ಯಲಿಂಗವನು ಧರಿಸು ಮುಮುಕ್ಷು. ॥ ೨ ॥

ಎಲೋ ಅಲಿಂಗಿಯಾದ ಪಾಮರ ಭವಿಯೆ ನಿನ್ನ ಬಲವನ್ನು ತೋರು ನೋಡುವಾ.

ಸಿದ್ಧರಾಮ : ಈ ನನ್ನ ಅಗ್ನಿನೇತ್ರದಿಂದೆ ನಿನ್ನ ಗೃಹವನ್ನು ಸುಟ್ಟುಬಿಡುವೆನು. ಒಂದು ನಿಮಿಷದಲ್ಲಿ ನೀನು ಸುಟ್ಟುಹೋಗುವಿ. ನನಗೆ ಮರ್ಯಾದೆ ಹೀನ ಮಾಡಿದ್ದು ದೂರ ಹೋಗುವುದೆಂದು ತಿಳಿದಿರುವೆಯಾ ? ನೋಡು ನೋಡು ಎನ್ನ ಸಾಮರ್ಥ್ಯವ. ಎಲೈ ಅಗ್ನಿ ನೇತ್ರವೆ ಈಕೆಯ ಗೃಹವನ್ನು ಈಕೆಯನ್ನು ಬೇಗನೆ ಸುಡು, ಬೇಗನೆ ಸುಡು.

ಪದ

ಸುಡು ಸುಡು ಈಗ । ಈ ಸದನವಾ ।
ಗಡನೆ ಹೋಗಿ ಫಾಲನೇತ್ರವೆ । ಸರರರಾ ॥

ಶಾಂತಾದೇವಿ : **ಪದ**

ನಾನೀಗ ಶಾಂತಿಸದೆ । ಇರಹುವೆನೇ
ಹೀನನೆ ಸರಿ ನೀನು । ಸರರರರಾ ॥
ನಾನೀಗ ಶಾಂತಿಸದೆ ಇರಹುವೆನೆ ॥

ಸಿದ್ಧರಾಮ : ನಾನೀಗ ಶಿವಯೋಗಿ । ನಿನಗೀಗೆ ಸೋಲಿಸುವೆ
ಅನ್ನುವದೇನಿದೆ । ಜಡಮತಿಯಳೆ ನೀ

ಶಾಂತಾದೇವಿ : ನೀನೀಗ ಶಿವಯೋಗಿ । ನಿನ್ನ ಸೋಲಿಸದಿರೆ ।
ಮಾನಿನಿ ನಾ ವ್ಯರ್ಥ । ನಡೆ ಥೂ ಥೂ ಥೂ ಥೂ

ಎಲೆ ಮಗುವೆ ಸುಶೀಲಾ ಜಂಗಮ ಪಾದೋದಕವನ್ನು ತಂದು ಈ ಅಗ್ನಿಯ ಮೇಲೆ ಸಿಂಪಡಿಸು.

ಸುಶೀಲಾ : ಒಳ್ಳೆಯದು ಮಾತೆಯೆ ಸಿಂಪಡಿಸುತ್ತೇನೆ (ಎಂದು ಹೋಗಿ ಛಳಿ ಹೊಡಿಯುವಳು).

ಶಾಂತಾದೇವಿ : ಎಲೊ ಸಿದ್ಧರಾಮ ಈ ಪಾದೋದಕದಿಂದ ಅಗ್ನಿಯು ಶಾಂತ ಹೊಂದದಿದ್ದರೆ ನಾನು ಈ ಇಷ್ಟಲಿಂಗವನ್ನು ತ್ಯಜಿಸುವೆನು.

ಸಿದ್ಧರಾಮ : ನೀ ಈ ಅಗ್ನಿಯನ್ನು ಶಾಂತಿಸಿದರೆ ನಿಶ್ಚಯವಾಗಿ ನಾನು ಇಷ್ಟಲಿಂಗವನ್ನು ಧರಿಸುವೆನು.

ಶಾಂತಾದೇವಿ : ಸುಶೀಲಾ ಧೂಳೋದಕವನ್ನು ಎಲ್ಲ ಕಡಿಗೆ ಚೆಲ್ಲು ಬೇಗನೆ ಚೆಲ್ಲು ಈತನ ಸತ್ವ ನೋಡುವಾ.

ಸುಶೀಲಾ : ಆಜ್ಞಾ (ಎಂದು ಎಲ್ಲ ಕಡಿಗೆ ಚಲ್ಲುವಳು. ಅಗ್ನಿ ಶಾಂತವಾಗುವುದು).

ಸಿದ್ಧರಾಮ : ಅಹಾ ಎಂಥಾ ಆಶ್ಚರ್ಯವಾಯಿತು ? ಈಕೆಗೆ ಸೋತೆನಲ್ಲವೆ ? ಹ ಶಿವ ಶಿವಾ. ಈ ಶಾಂತಾದೇವಿಗೆ ಮೋರೆ ತೋರುವುದಕ್ಕಿಂತಲೂ ಕೈಲಾಸಕ್ಕೆ ಹೋಗಿ ಈಶ್ವರನ ಅಗ್ನಿನೇತ್ರವನ್ನು ತಂದು ಈಕೆಯನ್ನು ದಹಿಸಿ ಬಿಡುತ್ತೇನೆ. ಈಗಲೆ ಜಾಗ್ರತೆಯಾಗಿ ಹೋಗುವಾ (ಎಂದು ಹೋಗಬೇಕು).

ಶಾಂತಾದೇವಿ : ಎಲ್ಲೊ ವೇದಾಂತಿ ಮದೋನ್ಮತ್ತನೆ ಗುರುಲಿಂಗ ಜಂಗಮರನ್ನು ನಿಂದಿಸಿದ ನೀನು ಎಲ್ಲಿಗೆ ಹೋದರೂ ಯಾರೂ ನಿನ್ನನ್ನು ನಂಬಬಾರದು (ಎಂದು ಶಾಪಿಸುವಳು). ಅಮ್ಮಾ ಮಗುವೆ ಸುಶೀಲಾ ಇನ್ನು ಮೇಲೆ ಜಂಗಮಾರ್ಚನೆಗೂ ಲಿಂಗಪೂಜೆಗೂ ವ್ಯಾಳೆ ಆಗುವುದು. ಆದ್ದರಿಂದ ನಡೆ ಬೇಗನೆ ಸ್ನಾನ ಪಾಕಾದಿಗಳನ್ನು ಮಾಡಲು.

ಸುಶೀಲಾ : (ಆಜ್ಞಾ ಎಂದು ಇಬ್ಬರೂ ಹೋಗುವರು) ಅಮ್ಮಾ ನಡೆ ಮತ್ತೆ ಆತನು ಬಂದಾಗ್ಗೆ ನೋಡೋಣ.

ಚತುರ್ಥಾಂಕ ಸಮಾಪ್ತವಾದುದು.

===***=====***===

ಪಂಚಮಾಂಕ ಪ್ರಾರಂಭವು

(ಸೀನ್ ಈಶ್ವರ ಲೀಲಾದಲ್ಲಿ ಕೂತು ಬಾಕಲಲ್ಲಿ ಪ್ರಮಥಗಣರು ನಿಲ್ಲುವರು).

ಸಿದ್ಧರಾಮ : ಭೋ ಮಹೇಶಾ ಕರುಣಿಸು (ಎಂದು ವಿನಯಾಸ್ಪದದಿಂದೆ). ಭೋ ಬಹುಳ ಮೂರ್ತಿಯೆ ಈ ದಿನ ನನ್ನ ತಪ್ಪನ್ನು ಆ ಶಾಂತಾದೇವಿಯ ತಪ್ಪನ್ನು ವಿಚಾರಿಸಿರಿ.

ಪ್ರಮಥ : ಎಲೊ ಯಾರು ನೀನು ಬರತಕ್ಕವನು ?

ಸಿದ್ಧರಾಮ : ನಾನು ಶಿವಸಿದ್ಧರಾಮನು.

ಪ್ರಮಥ : ಎಲೊ ಲಿಂಗವಿಲ್ಲದವರಿಗೆ ಒಳಗೆ ಬರಕೂಡದೆಂದು ಪರಮೇಶ್ವರ ಆಜ್ಞೆ ಆಗಿರುವುದು ನಡೆ ಹೊರಗೆ.

ಸಿದ್ಧರಾಮ : ಭೋ ಶಂಭೋ ನನ್ನ ಮೇಲೆ ನೀನು ಮುನಿದಿಯಾ ?

ಪದ

(ದುಃಖದಿಂದೆ)

ಕ್ಷಮಿಸು । ಕ್ಷಮಿಸು । ಮಮತಾತ । ಸಂಪ್ರೀತಾ ।
ಕ್ಷಮಿಸೆನ್ನ ತಾತಾ ॥ ಪ ॥

ರಾಗವಿದೂರಾ । ಪಾವನಾಕಾರಾ । ಕರುಣಿಸುದೆನ್ನ
ಗುಣ ಶಂಕರಾ ॥ ೧ ॥

ವೀರವು । ತಾರದು । ವಾರಿಧಿ । ಚಂದ್ರಾ । ಸರಸಿಜ
ಕಾಂತಾ ಮಾರವಿದೂರಾ ॥ ೨ ॥

ಗಿರಿಜಾ ರಮಣನೆ ನೀನು ಮುನಿದ ಮೇಲೆ ನಾನೆಲ್ಲಿಗೆ ಹೋಗಲಿ ? ಎನ್ನನ್ನು ಕರುಣಿಸಿ ಕಾಪಾಡು.

ಪ್ರಮಥ ೧ : ಎಲೋ ಕೈಲಾಸಾಧಿಪತಿಗಳು ನಿನ್ನ ಕೂಡ ಮಾತುಗಳನ್ನಾಡುವದಿಲ್ಲ ಸುಮ್ಮನೆ ಹೊರಟು ಹೋಗು.

ಸಿದ್ಧರಾಮ : ಅದು ಏನು ಕಾರಣ ಪ್ರಮಥ ಗಣಕೆ ಎಲ್ಲಾ ವಿಷದವಾಗಿ ಹೇಳಿರಿ.

ಪ್ರಮಥ ೨ : ನೀನು ಆ ಮಹಾ ಶಿವಭಕ್ತಳಾದ ಶಾಂತಾದೇವಿಗೆ ತ್ರಾಸುಗೊಳಿಸಿದ್ದರಿಂದ ನೀನು ಅಪರಾಧಿಯಾಗಿರುವಿ.

ಸಿದ್ಧರಾಮ : ಭೋ ಶಂಭೋ ಕರುಣಿಸು (ಎಂದು ದುಃಖ ಉದ್ರೇಕದಿಂದ). ಭೋ ದೇವಾ ತಾಯಿತಂದೆಗಳು ಮಕ್ಕಳ ತಪ್ಪಿಗೆ ಮಮಕಾರ ಬಿಡುವದಿಲ್ಲವೆ? ನಿನ್ನ ಆಶ್ರಯದಿಂದ ನಾನು ಈಶಾಡುವವನು. ನೀನು ನನಗೆ ನೆನಸಿದಾಗೆ ಸಹಾಯ ಮಾಡುತ್ತೇನೆಂದು ಹೇಳಿಲ್ಲವೆ? ಎನ್ನನ್ನು ಮನ್ನಿಸು.

ಈಶ್ವರ :

ಛೀ ನಡೆ ನಡೆ ಶಿವಭಕ್ತ ದ್ರೋಹಿ ನೀನು ।
ಕೆಡಕು ಗುಣಗಳ ತೋರಿ ಮಾನಿನಿಗಿ ।

ಗುರುಲಿಂಗ ಜಂಗಮಾ । ಸೇವಾ ತತ್ಪರಳಾದ
ಧರೆ ಶಾಂತಾದೇವಿಗೆ ಶರಣು ಮಾಡು . ॥ ೧ ॥

ಮೂರ್ಖ ಸಿದ್ಧರಾಮ ಈ ಹೆಸರು ನಿನಗೆ ಸಾರ್ಥಕವಾದುದಲ್ಲ. ನೀನು ಆ ಶಾಂತಾದೇವಿಗೆ ಪ್ರಾರ್ಥಿಸದ ವಿನಾ ಅವಳ ಮೇಲೆ ನನ್ನ ಸಾಮಾರ್ಥ್ಯ ಸಹ ನಡಿಯುವದಿಲ್ಲ. ನಡೆ ಅತ್ತ. ಎಲಾ ಪ್ರಮಥರೆ ಈ ಸಿದ್ಧರಾಮನಿಗೆ ಶಿವಸಭೆಯಿಂದ ಆಚೆಗೆ ಬೇಗನೆ ತಳ್ಳಿಬಿಡಿರಿ. ಇವನ ಮುಖವನ್ನು ನೋಡಲಾಗದು.

ಪ್ರಮಥರು : ಎಲೊ ಸಿದ್ಧರಾಮಾ ನಿನಗೆ ಉಗುಳಿದರೆ ಮೋರೆ ತೊಳೆಯುವರು ಎನ್ನುವಿ. ಈ ಸಭೆಯಲ್ಲಿ ಅರ್ಧ ನಿಮಿಷನಾದರೂ ನಿಲ್ಲಬಾರದು ನಡೆ. (ಅತ್ತನೋಡಿ) ಕೇಳಿದೆಯಾ ಗುರುಲಿಂಗ ಜಂಗಮರ ಮಹಿಮೆಯು. ಸುಮ್ಮನೆ ಲಿಂಗ ಧರಿಸಿ ಇಲ್ಲಿಗೆ ಬಾ. ಹೋಗು ಬೇಗನೆ ನಿಲ್ಲಬೇಡಾ (ಎಂದು ದಬ್ಬುವರು).

ಸಿದ್ಧರಾಮ : (ರಸ್ತಾ ಪಡದಾ ಮುಂದೆ ದುಃಖದಿಂದೆ) ಇನ್ನೇನು ಮಾಡುವುದದೆ? ಆ ಶಾಂತಾದೇವಿಯ ಹತ್ತರ ಹೋಗಿ ಶರಣು ಹೋಗುತ್ತೇನೆ (ಸೀನ್ ಶಾಂತಾದೇವಿಯ ಗೃಹ ತಯಾರ. ಗೃಹದಲ್ಲಿ).

ಪದ

ದೇವಿ ಪಾಲಿಸೆನ್ನ ಗೌರವಾ । ದೈವಹೀನನಾದೆನು ನಾ ।
ಶಾಂತಿ ಸಾಗರಳೆ ನಿನ್ನ । ಅಂತರಂಗದ ಮಹಿಮೆ

ಎಂತು ಹೇಳಲಿ ? । ಇಂತು ಅಧಮನಿಗೆ ।
ಭ್ರಾಂತನಾಗಿ ನಿಂತಿದಿನೆ ನಾ ।   ॥ ೧ ॥

ಕರುಣ ಸಾಗರಳೆ ನಿನ್ನ । ಬಿರಿದನ್ನು ಸಾರುವೆನು ।
ಕರುಣಿಸೆನಗೆ । ದೇವಿ ಶಾಂತಾ । ಭರದಿ ಬಾಲನಂದದಿ ॥ ೨ ॥

ಅಮ್ಮಾ ಮಾತೋಶ್ರೀಯಾದ ಶಾಂತಾದೇವಿಯೆ ಕರುವಿನ ಗುಣವ ಗೋವು ಎಣಿಸುವುದೆ ? ಶಿಶುವಿನ ಗುಣವ ತಾಯಿ ಎಣಿಸುವಳೆ ? ತಾಯಿಯು ಪೋಷಿಸಿದಂತೆ ಪೋಷಿಸು. ಮೇಲೆ ಎನಗೆ ಧನ್ಯನೆನಿಸು. ಮಾತೆಯೆ ನಿನಗೆ ನಾನು ನಮಸ್ಕಾರ ಮಾಡುತ್ತೇನೆ (ಎಂದು ನಮಿಸುವನು).

ಶಾಂತಾದೇವಿ : ಯಾಕೆ ಸಿದ್ಧರಾಮ ತೋರಿಸಲಿಲ್ಲವೆ ? ನಿನ್ನ ಸಾಮರ್ಥ್ಯವು ಎತ್ತ ಹೋಯಿತು ?

ಸಿದ್ಧರಾಮ : ತಾಯಿಯೆ ನನ್ನ ಕಡಿಗೆ ಅಪರಾಧ ಆಯಿತು. ಇನ್ನು ಮೇಲೆ ನಿನ್ನ ನಿಬಂಧನೆಯಂತೆ ನನಗೆ ಇಷ್ಟಲಿಂಗವನ್ನು ಕೊಟ್ಟು ಉದ್ಧರಿಸಿ ಪವಿತ್ರ ಮಾಡೆಂದು ಬೇಡಿಕೊಳ್ಳುತ್ತೇನೆ.

ಶಾಂತಾದೇವಿ : ಸಿದ್ಧರಾಮಾ ನೀನು ಕೆಲವು ಕಾಲ ಇದೆ ಸೊನ್ನಲಗಿ ಪುರದಲ್ಲಿದ್ದು ಆಮೇಲೆ ಭೂಕೈಲಾಸವೆನಿಸುವಾ ಕಲ್ಯಾಣ ಪಟ್ಟಣಕ್ಕೆ ಶ್ರೀ ಚೆನ್ನಬಸವೇಶ್ವರನ ಕೈಲಿಂದ ಲಿಂಗಧಾರಣವಾಗಿ ಮೋಕ್ಷವನ್ನು ಪಡಿದುಕೊ ಹೋಗು.

ಸಿದ್ಧರಾಮ: ತಾಯಿಯೆ ಇನ್ನು ಅಂತರವ್ಯಾಕೆ ?

ಶಾಂತಾದೇವಿ: ಅಣ್ಣಾ ಸಿದ್ಧರಾಮ ನೀನು ಇನ್ನೂ ಕ್ರೋಧ ಬಿಟ್ಟಿಲ್ಲ. ಆದ ಕಾರಣ ಅಲ್ಲೇ ಕ್ರೋಧ ಬಿಡುವುದು ಲಿಂಗಧಾರಣವಾಗುವುದು.

ಸಿದ್ಧರಾಮ : ಒಳ್ಳೆಯದು ಅವ್ವಾ ನಿನ್ನಿಷ್ಟವೆ ಸರಿಯು. ಜನನಿಯೆ ಹೋಗಿಬರುವೆನು. ಕೃಪೆ ಇರಲಿ.

ಶಾಂತಾದೇವಿ : ನೀನು ನಿಶ್ಚಿಂತನಾಗು. ಹೋಗಿ ಬಾ (ಎಂಬುವಳು ಹೋಗಿ ಸಿದ್ಧರಾಮ ರಸ್ತಾದ ಮುಂದೆ).

ಸಿದ್ಧರಾಮ : ಅಹಾ ನಾನು ಧನ್ಯನಾದೆನು ಈ ಶಾಂತಾದೇವಿಯ ಮರ್ಮವನ್ನು ತಿಳಿಯದೆ ನಾನು ಭವಸಾಗರದ ಶೆಳವಿಗೆ ಬಿದ್ದೆನು ಈಕೆಯು ಪಾರ್ವತಿ ಅವತಾರಿಕಳು. ಆ ಮಾತೋಶ್ರೀಯ ವರ್ಣನೆಯು

ಎಷ್ಟು ಮಾಡಿದರೂ ತೀರದು. ಇರಲಿ ಈಕೆಯ ಲಿಂಗನಿಷ್ಠೆ ಜಂಗಮ ನಿಷ್ಠೆ ಗುರುನಿಷ್ಠೆಯ ಮೇಲೆ ಧೂಳೋದಕ ನಿಷ್ಠೆಯಂತು ಬೇರೆ ಹೇಳಲಿಕ್ಕೆ ಅಸಾಧ್ಯವು. ಇರಲಿ ಇನ್ನು ಮೇಲೆ ಈ ಭೂಕೈಲಾಸವೆನಿಸುವಾ ಕಲ್ಯಾಣ ನಗರಕ್ಕೆ ಹೋಗಿ ಆ ಶಿವಶರಣರ ಸಾಮರ್ಥ್ಯವನ್ನು ಪರೀಕ್ಷಿಸಿ ನೋಡುವಾ ಬೇಗನೆ ಕಲ್ಯಾಣಕ್ಕೆ ಹೋಗುವಾ (ಎಂದು ಹೋಗುವುದರಲ್ಲಿ ಪ್ರಭುದೇವರ ಸಭಾ ತಯ್ಯಾರ).

ಪ್ರಭುದೇವರು : (ಕೆಲವು ಶಿವಶರಣರು ಕೂತು).

ಪದ

ಎಷ್ಟು ವರ್ಣಿಸಲಿ । ಶ್ರೇಷ್ಠ ಬಸವನ ಮನೆ ।
ಅಮರ ಗಣಾರಾಧ್ಯರ । ವಿಮಲ ಸುಪೂಜೆಯ ।
ಕ್ರಮದಿ ನಡಿಪರು । ಸುಮನಸಯುಕ್ತರು ।
ಭ್ರಮರಾಂಬಿಕೆವರ । ಪ್ರೇಮದಿ ಭಜಿಪರು ।
ಸ್ವಾಮಿ ಸಂಗಯ್ಯನ । ನೇಮದಿ ನಡಿದಿರೇ ॥ ೧ ॥

ಜಂಗಮ ದಾಸೋಗ । ಹಿಂಗಿಸಿ ಬಿಡುವರು ।
ಉತ್ತುಂಗ ಶರಣರು । ಸಂಗದಿರ್ಪರು ।
ಗಂಗೆ ಯಮುನೆಯ । ಸಂಗಮದೊಳು ಮಿಂದು ।
ಶೃಂಗಾರದ ಪರಿ । ರಂಗ ಮಂಟಪದೊಳು ॥ ೨॥

ಅಹಾ ಬಸವಾಶ್ರಮವು ಜಂಗಮರ ಸಂದಣಿಯಿಂದೆ ಅಮರ ಗಣಾರ್ಯರಿಂದೆ, ಸಾಧು ಸತ್ಪುರುಷರಿಂದೆ ಲಿಂಗ ಸ್ಥಾಪನೆಯಿಂದೆ ಲಿಂಗ ಪ್ರಸಾದ ಸೇವನೆಯಿಂದ ಎಷ್ಟು ಆನಂದಕರವಾಗಿದೆ. ಈ ಸಂಸಾರಿ ಪ್ರಾಣಿಗಳಿಗೆ ಮುಕ್ತಿಮಾರ್ಗದರ್ಶಕವಾದ ಭೂಕೈಲಾಸವು ಇದೆ. ಕಲ್ಯಾಣ ನಗರ ಎಂಬುವದು ನಿಜವು. ಇದೊ ಅಮರಗಣಾಧೀಶರು. ದೇವ ಗಣಾದಿಗಳು. ಇಲ್ಲಿ ಇರತಕ್ಕ ಚೆನ್ನಬಸವೇಶ್ವರನೆ ಕಾರ್ತಿಕನಾದ ಷಣ್ಮುಖನು. ವೀರಘಂಟೆ ಮಡಿವಾಳಯ್ಯನು ವೀರಭದ್ರನ ಅವತಾರನು. ನಾರದರೆ ಕೊಂಡಿ ಮಂಚಣ್ಣನು ಆಗಿರುವನು. ಅಂದಾಗ್ಗೆ ಈ ಬಸವರಸನು ತನ್ನ ಬಿಂಕವನ್ನು ಬಿಡದೆ ಭವಸಾಗರ ಘಣಿಗಳಿಗೆ ಭವ ದಾಟುವುದಕ್ಕೆ ಹಡಗ ಸ್ವರೂಪನಾಗಿರುವನು. ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ಆನಂದವಾಗಿರುವುದು.

ಬಸವೇಶ್ವರ : (ಬಂದು) ಪ್ರಭುವೆ ತಮ್ಮ ಕೃಪಾಕಟಾಕ್ಷದ ಬಲವೆ ಹೊರ್ರು ನಮ್ಮದಲ್ಲಾ.

ಪ್ರಭುದೇವರು : ಇರಲಿ ಬಸವಾ ಈ ಉಚಿತಾಸನದಲ್ಲಿ ವಿಶ್ರಮಿಸು. ದೇವಭಕ್ತರ ಆನಂದಾಸ್ಪದವೆ ಹಾಗೆ.

ದ್ವಾರಪಾಲಕ: ಮಹಾಪ್ರಭುವೆ ಸೊನ್ನಲಾಪುರ ವಾಸಸ್ಥನಾದ ಸಿದ್ಧರಾಮದೇವರು ಬಂದಿದ್ದಾರೆ.

ಪ್ರಭುದೇವರು : ಬಂದರೆ ಒಳಿತಾಯಿತು. ಅತ್ಯಾನಂದದಿಂದ ಒಳಗೆ ಬಿಡತಕ್ಕದ್ದು.

ವೀರಘಂಟೆ ಮಡಿವಾಳಯ್ಯ : ದ್ವಾರಪಾಲಕಾ ಆ ಸಿದ್ಧರಾಮನಿಗೆ ಲಿಂಗವಿದ್ದರೆ ಬರಹೇಳು ಇಲ್ಲದಿದ್ದರೆ ಬರಕೂಡದು.

ಪ್ರಭುದೇವ : ಅದು ಏನು ಕಾರಣ ಬರಕೂಡದು ?

ವೀರಘಂಟೆ ಮಡಿವಾಳಯ್ಯ : ಈ ಶಿವಶರಣರು ಲಿಂಗವಿಲ್ಲದವರ ದರುಶನ ತಗೆದುಕೊಳ್ಳುವದಿಲ್ಲ. ಆತನಿಗೆ ಪ್ರತಿಬಂಧಕವಿರುವುದು ಬರಬೇಡೆನ್ನಿರಿ.

ಪ್ರಭುದೇವರು : ಇರಲಿ ವೀರಘಂಟೆಮಡಿವಾಳಯ್ಯನೆ ನಿನ್ನ ನುಡಿಯು ನಿಶ್ಚಯ. ಆದರೆ ಆತನಿಗೆ ಕಡೆಯಲ್ಲಿರತಕ್ಕ ಸ್ಥಾನವನ್ನು ಕೊಡತಕ್ಕದ್ದು. ನಾನಿರುವತನಕಲು ನಿಮಗೆ ತಗಲಿದ ದೋಷಕ್ಕೆ ನಾನೆ ಪಾತ್ರನಾಗುತ್ತೇನೆ.

ವೀರಘಂಟೆ ಮಡಿವಾಳಯ್ಯ : ಇಷ್ಟರ ಮೇಲೆ ನಿಮ್ಮಿಚ್ಛೆಯು (ಎಂದು ಮೇಲೆ ಬಂದು).

ಸಿದ್ಧರಾಮ : (ವಿನೋದದಿಂದ) ಪ್ರಭುವೆ ಈ ದಾಸನು ತಮಗೆ ನಮಸ್ಕಾರ ಮಾಡುತ್ತಾನೆ ಕೈಕೊಳ್ಳಿರಿ.

ಪ್ರಭುದೇವರು : ಸಿದ್ಧರಾಮಾ ಬಾ. ಈ ಪರ್ಯಂಕದಲ್ಲಿ ಮಂಡಿಸು. ನಿತ್ಯದಲ್ಲಿ ಮಾಡತಕ್ಕ ಹೋಮ ನೇಮಾದಿಗಳು, ಕ್ಷೇತ್ರ ಪ್ರದಕ್ಷಿಣೆಯು, ಮಲ್ಲಿಕಾರ್ಜುನನ ಪೂಜೆಯು, ಕೆರೆ ಕೆಲಸದಲ್ಲಿ ನಾಲ್ವತ್ತೆಂಟು ಗುಡ್ಡರುಗಳು ಕೆಲಸ ನಡಿಸುವರೆ? ಗೋವುಗಳು ಸುರಕ್ಷಿತ ಇರುವವೆ ? ಪುಷ್ಪವಾಟಿಕೆಗಳು ಸಕಲ ಭಕ್ತಿಯುಳ್ಳವರಿಗೆ ಬರತಕ್ಕ ರೋಗಗಳ ನಿವಾರಿಸುವಿ? ಗತಪ್ರಾಣಗಳಿಗೆ ಪ್ರಾಣಪ್ರತಿಷ್ಠೆ ಮಾಡಿ, ಆನಂದದಿಂದ ಇರುವಿಯಾ? ಎಲ್ಲಾ ವಿಷದವಾಗಿ ಹೇಳು.

ಸಿದ್ಧರಾಮ : ದೇವಾ ತಮ್ಮ ಪಾದಕೂ ಶೇಷ ಜಂಗಿಯಾಗಿ ಸಂದಿಗ್ಧವನ್ನು

ಬೀರುತ್ತೆ. ಆದ ಮಟ್ಟಿಗೆ ಸೌಖ್ಯದಿಂದಲೆ ನಡಿಯುತ್ತಿರುವದು. ಯಾವದು ಕೊರತೆ ಇಲ್ಲಾ.

ವೀರಘಂಟಿ ಮಡಿವಾಳಯ್ಯ : ಓಹೊ ಪ್ರಭುವೆ ಇಂಥ ಹೋಮ ಹವನಾದಿಗಳ ಮಾಡತಕ್ಕ ಈ ಸಿದ್ಧರಾಮನ ಮಾತುಗಳು ಈ ಕಿವಿಯಿಂದೆ ಕೇಳಲಾಗದು. (ಎಂದು ಕಿವಿ ಮುಚ್ಚಿ ಎಲ್ಲರು) ಶಿವ ಶಿವಾ (ಎನ್ನುವರು).

ಪ್ರಮಥರು : ತ್ರಾಹಿ ತ್ರಾಹಿ ಧನ್ಯ ಧನ್ಯ ಬಸವೇಶಾ ಕೇಳಿದೆಯಾ

ಬಸವೇಶ : ಕೇಳಿದೆನು ಏನು ಮಾಡಬೇಕು ?

ಪ್ರಭುದೇವರು : ಬಸವೇಶಾ ಯಾಕೆ ಕೇಳಬಾರದು ?

ಶಿವಶರಣರು : ಯಾಕೆಂದರೆ ಶಿವಶರಣರು ಆದವರು ಇಂಥಾ ಕೃತ್ಯವ ಮಾಡಬಾರದು. ಮಾಡುವುದಂತೂ ಇರಲಿ ದೂರ ಶಿವಶರಣರು ಅವರ ಮುಖ ನೋಡಬಾರದು.

ವೀರಘಂಟಿ ಮಡಿವಾಳಯ್ಯ : ಮುಖ ನೋಡುವುದಂತೂ ಒತ್ತಟ್ಟಿಗಿರಲಿ, ಕಿವಿಗಳಿಂದ ಅವರ ಮಾತುಗಳು ಸಹ ಕೇಳಬಾರದು.

ಚೆನ್ನಯ್ಯ : ಶ್ರವಣ ಒತ್ತಟ್ಟಿಗಿರಲಿ, ಇಂಥವರಿಗೆ ಸಭೆಯಲ್ಲಿ ಬರಗೊಡಬಾರದು.

ಶರಣರು : ಬರಕುಡುವದಂತೂ ಬೇರೆ ಇರಲಿ, ಬರುವರು ತಾವೆ ತಿಳಿದು ಬರಬಾರದು. ಬಂದರೆ ನಾವು ಮಾತನಾಡಬಾರದು. ಇರಲಿ ಸ್ನಾನದ ವ್ಯಾಳ್ಯಾ ಆಯಿತು ಬೇಗ ನಡಿಯಿರಿ.

ಸಿದ್ಧರಾಮ : ದೇವಾ ಪ್ರಭುರಾಯಾ ಬಿಸಿಲಿನ ತಾಪದಿಂದ ನೆರಳಿಗೆ ಕೂತರೆ ಗಿಡಮುರಿದು ಮೇಲೆ ಬಿದ್ದಂತಾಯಿತಲ್ಲಾ. ನಾನು ನಿನ್ನ ಹತ್ತರ ಬಂದರೆ ಇದೇನಾಪ್ಪಾ ಮೌನವು ? ಈ ಲಿಂಗಧಾರಕರಾದ ಶಿವಶರಣರು ಈ ಪರಿ ನನಗೆ ಮಾತಾಡುವುದ್ಯಾಕೆ ? ನಾನೇನು ಬಹಳೆ ಸಾಮಾನ್ಯನೆ ? ಇವರಲ್ಲಿ. ಸೂರ್ಯನಷ್ಟು ತೇಜಸ್ವಿ ಇದ್ದರೆ ನನ್ನಲ್ಲಿ ದೀಪದಷ್ಟು ಇರುವದು. ರುದ್ರವೀಣೆಯು ತಂಬೂರಿ ತಂತಿನಾದವು ನನ್ನಲ್ಲಿ ಇರುವುದು. ಚಂದ್ರನ ತೇಜಸ್ಸು ಮಹತ್ತರವಾಗಿದ್ದರೂ ನಕ್ಷತ್ರಗಳ ತೇಜಸ್ಸು ಸ್ವಲ್ಪಾದರೂ ಇರುವುದು. ಆನೆಯಲ್ಲಿ ವಿಶೇಷ ಶಕ್ತಿ ಇದ್ದರೆ ಕೋಣನಲ್ಲಿ ಸ್ವಲ್ಪಾದರೂ ಇರುವುದು ಸಹಜವು. ಆರ ಮನಿಯಲಾದರೂ ದೀಪದ ಪ್ರಕಾಶವು ಒಂದೆ

ಇರುವುದು. ಶಿವಶರಣ ದೀಪವು ಬೆಳ್ಳಗೆ, ನಮ್ಮ ದೀಪವು ಕರ್‍ರಗಿರುವುದೇನು ಹೇಳಿರಿ ? ಮತ್ತು ಕರಿಗೋವುಗಳಲ್ಲಾಗಲಿ, ಕೆಂಪು ಗೋವುಗಳಲ್ಲಾಗಲಿ ಅವುಗಳ ಮೊಲೆಯಲ್ಲಿರತಕ್ಕ ಹಾಲೇನಾದರೂ ಬೇರೆ ಬೇರೆ ವರ್ಣದ್ದಾಗಿರುತ್ತವೆಯೊ ಹೇಗೆ ಹೇಳಿರಿ ? ನನ್ನಲ್ಲಿ ಶಿವಶರಣರಲ್ಲಿ ಇರತಕ್ಕ ಶಿವಾಂಶವು ಒಂದೇ ಸ್ವರೂಪವು. ಅಂದ ಬಳಿಕ ಮಹಾದೇವ ಕೊಟ್ಟಿರುವಾ ಆತ್ಮಲಿಂಗವಿರಲು ಮೇಲೆ ಈ ತರ ಮಾನವರು ಮಾಡಿಕೊಂಡ ಲಿಂಗವ್ಯಾತಕ್ಕೆ ಧರಿಸಬೇಕು ?

ಚೆನ್ನಯ್ಯ : ಅಪ್ಪ ಸಿದ್ಧರಾಮ ಮಲಗಿದ ಹುಲಿಗೆ ಎಬ್ಬಿಸಿ, ಮೀಸೆ ಹಿಡಿದು ಜಗ್ಗಿದಂತೆ ಆಯಿತು. ಇರಲಿ, ಮುಂದೆ ಆ ಹುಲಿಯು ಕ್ರೂರಗೊಂಡರೆ ಹ್ಯಾಗಾಗುವುದು ಹೇಳು. ಮಾತುಗಳು ಸುಮ್ಮನೆ ಹ್ಯಾಗೆ ಇರುವುದು?

ಸಿದ್ಧರಾಮ : ಚೆನ್ನಬಸವದೇವರೆ ಆ ತ್ರಾಣವಿಲ್ಲದೆ ಆ ಹುಲಿಯ ಮೀಸೆಯ ಯಾರೂ ಹಿಡಿದು ಜಗ್ಗಲಾರರು.

ಶರಣರು : ಓಹೋ ಮಲಗಿದ ಹುಲಿಗೆ ಎಬ್ಬಿಸಿದರೆ ಸುಮ್ಮನಿರುವುದೆ ?

ಸಿದ್ಧರಾಮ : ಓಹೋ ಶಿವಶರಣರೆ ಆ ಸರಪಳಿಯು, ಹಗ್ಗವು ನನ್ನ ಹತ್ತರವೆ ಇರುವುದು.

ವೀರಘಂಟೆ ಮಡಿವಾಳಯ್ಯ : ಓಹೋ ಹಸಿದ ಸಿಂಹನ ಮೇಲೆ ಆನೆಯು ಸೊಂಡಿಲ ಚಾಚಿದಂತೆ ಆಯಿತು. ಆಗ್ಗೆ ಸಿಂಹವು ಸುಮ್ಮನಿದ್ದೀತೆ?

ಸಿದ್ಧರಾಮ : ಮಡಿವಾಳಯ್ಯನವರೆ ಸಿಂಹವು ಅಶಕ್ತನಾದರೆ ಇದ್ದೇ ಇರುವುದು ಏನು ಮಾಡುವುದು ?

ಚೆನ್ನಬಸವ : ಸಿದ್ಧರಾಮ ತ್ರಾಣವಿದ್ದರೂ ಮಾಡಬಹುದು, ಇಲ್ಲದಿದ್ದರೂ ಸಿಂಹವೆ ಸರಿ ಹುಚ್ಚು ಹಿಡಿದ ಸ್ವಾನವು ಎಲ್ಲರಿಗೆ ಕಚ್ಚಿದಂತೆ ಸಿಂಹದ ಮೇಲೆ ಹೋದರೆ ತಕ್ಷಣವೆ ಪ್ರಾಣ ನೀಗುವರು ನೋಡು. ನಾನು ಯೋಗಿಯು. ರಂಭೆಯನ್ನು ಜಯಿಸಿರುವೆ. ನಾನು ಪ್ರಾಣ ಪ್ರತಿಷ್ಠೆ ಮಾಡತಕ್ಕವನೆಂದು ಹುಚ್ಚು ತಲಿಗೇರಿ ಬೊಗಳಿದರೆ, ಆ ಲೋಕದ ಜನರು, ಸಂಸಾರಿಗಳು ಅಂಜುವರಲ್ಲದೆ ಶಿವಶರಣರು ಅಂಜುವರೆ? ಇಲ್ಲಿಲ್ಲ ಎಂದಿಗೂ ಅಂಜಲಾರರು. ಇಂಥಾ ಮರುಳ ಮಾತನಾಡಬೇಡಾ ಬಾಯಿಮುಚ್ಚು (ಎಂದು ಬೆದರಿಸಲು ಸಿದ್ಧರಾಮ ಗಪ್ಪಾಗುವನು).

ಪ್ರಭುದೇವ : ಶಿವ ಶಿವಾ ಶಿವನೆ ಸಿದ್ಧರಾಮನಾಗಿ ಬಂದನು. ಸುರರುಗುಡ್ಡರಾದರು. ರುದ್ರಕನ್ನಿಕೆಯರು ಜಾರ್‍ಯರಾದರೂ ಜ್ಞಾನವೆ ಪ್ರಾಣಲಿಂಗವಾಗಿ, ಶಿವನ ರೂಪವೆ ಕ್ರಿಯವಾಗಿ, ಗುಹೇಶ್ವರ ಲಿಂಗದಲ್ಲಿ ತಾನೆ ತಾನಾದ ಈ ಶಿವಸಿದ್ಧರಾಮನಿಗೆ ಇವರು ಈ ಪರಿಯಾಗಿ ಜರಿದು ಅಪಮಾನ ಮಾಡಿದರಲ್ಲಾ ಏನು ಮಾಡಬೇಕು ?

ಚೆನ್ನಬಸವ : ಏನು ಏನು ಪ್ರಭುರಾಯಾ ಏನು ಮಾತಾಡುವಿರಿ ? ನಿನ್ನದಲ್ಲ ಅವರದ್ಯಾತರ ಮಾತುಯೆಂಬಂತೆ ಹೇಳಬೇಕಾದರೆ ಚೆನ್ನಾಗಿ ಹೇಳಬೇಕು. ಶಿವನೆ ಸಿದ್ಧರಾಮನೆಂದ ಮೇಲೆ ಗುಡ್ಡದಲ್ಲಿ ಆ ಶ್ರೀಶೈಲದಲ್ಲಿ ಇರುವಾ ಮಲ್ಲಿನಾಥನಿಗಾಗಿ ತಪ್ಪಿಸಿಕೊಂಡು ಪಶುಗಳು ಅಂಬಾ ಅಂಬಾ ಎಂದು ತಿರುಗುವಂತೆ ಮಲ್ಲಯ್ಯ ಮಲ್ಲಿನಾಥಾ ಚನ್ನಯ ಬಾ ಎಂದು ಹಳ್ಳ ಕೊಳ್ಳ ಕೆರೆ ಬಾವಿಗಳಲ್ಲಿ ಅರಣ್ಯದಲ್ಲಿ ತಿರುಗ್ಯಾಡುತಿದ್ದ ಶಿವನೆ ಸಿದ್ಧರಾಮನಾದರೆ, ಪರ್ವತದಲ್ಲಿನ ಲಿಂಗ ತಂದು ಯಾಕೆ ಸೊನ್ನಲಿಗೆಯಲ್ಲಿ ಸ್ಥಾಪಿಸಿದನು? ಹೇಳಿರಿ. ನೀವು ಪರ್ವ ತ್ರಿಪುರಾಂತಕ ಗ್ರಾಮಕ್ಕೆ ದಿನಂಪ್ರತಿಯಲ್ಲಿ ಪ್ರದಕ್ಷಿಣಿ ಹಾಕಬೇಕು. ಶಿವನೆ ಸಿದ್ಧರಾಮನಲ್ಲಾ ಅಲ್ಲಮ ಪ್ರಭುವೆಂದು ನಿರ್ಮಿಸಿದವಂದು ಕ್ಷುದ್ರ ಪ್ರಾಣಿ ಕೇಳಿದಿಯಾ ಪ್ರಭುವೆ.

ಪ್ರಭುದೇವ : ಚನ್ನಬಸವಣ್ಣ ಈ ಸಿದ್ಧರಾಮನು ಶಿವನೆಂದರೆ ಸತ್ತ ಪ್ರಾಣಿಗಳಿಗೆ ಪ್ರಾಣದಾನ ಹ್ಯಾಗೆ ಮಾಡುವನು ?

ಚೆನ್ನಬಸವ : ಪ್ರಭುವೆ ಬ್ರಹ್ಮನು ನಿತ್ಯ ಕೋಟಿ ಪ್ರಾಣಿಗಳಿಗೆ ಹುಟ್ಟಿಸುವದಿಲ್ಲವೆ ? ನಿತ್ಯದಲ್ಲಿ ಇವನು ಚಿಕ್ಕ ಬ್ರಹ್ಮನು.

ಪ್ರಭುದೇವ: ಹಾಗಾದರೆ ಇವನು ಮಹತ್ವಿಕನಲ್ಲದಿದ್ದರೆ ಕಾಳರಕ್ಕಸಿಯನ್ನು ನುಂಗುತ್ತಿದ್ದನೆ ?

ಚೆನ್ನಬಸವ : ಶ್ಲೋಚನೆಯನ್ನು ಹನುಮಂತನು ನುಂಗಲಿಲ್ಲವೆ ? ಅವರೆಲ್ಲರು ಶಿವರೆ ಶ್ವಾನರು.

ಪ್ರಭುದೇವ : ಓಹೊ ಚನ್ನಬಸವಾ ಈ ಸಿದ್ಧರಾಮನು ಶ್ವಾನರೂಪದಿಂದೆ ಬಂದವ ಮಹಾಕಾಳನಿಗೆ ಉದ್ಧರಿಸಲಿಲ್ಲವೆ ? ಸ್ವಾನರೂಪನು ಗಂಧರ್ವನಾಗಲಿಲ್ಲವೆ ?

ಚೆನ್ನಬಸವ : ಪ್ರಭುವೆ ಹಾಗಾದರೆ ರಾಮಚಂದ್ರನು ಅರಣ್ಯದಲ್ಲಿ ಶಿಲಾರೂಪವಾಗಿ

ಬಿದ್ದಿರುವಾ ಅಹಲ್ಯೆ, ಈಕೆಗೆ ಶಿಲಾರೂಪ ನೀಗಿಸಿ ಅಹಲ್ಯೆ ರೂಪಕೊಡಲಿಲ್ಲವೆ ? ಅಂದರೆ ಈತನಿಗೆ ಚಿಕ್ಕರಾಮಚಂದ್ರನೆಂದು ತಿಳಿಯಬೇಕಾಯಿತು.

ಶರಣರು : ರಾಮಚಂದ್ರನನ್ನಿರಿ ಬ್ರಹ್ಮನನ್ನಿರಿ ಹೊರ್‍ತು ಶಿವನನ್ನುವುದಕ್ಕೆ ಬಾರದು (ಎಂದು ನಗುವರು).

ಸಿದ್ಧರಾಮ : (ಲಜ್ಜೆಯಿಂದ) ಶಿವಶರಣರೆ ಶಿವಸಾಮರ್ಥ್ಯವು ಎಲ್ಲಿಹದು ಹೇಳಿರಿ.

ಶರಣರು : ನೀವು ಶಿವ ಶಬ್ದವ ಕೇಳಿಲ್ಲವೊ ?

ಸಿದ್ಧರಾಮ : ಅದು ಹ್ಯಾಗೆ ಕೇಳತಕ್ಕದ್ದು ಶಿವ ಸಿದ್ಧರಾಮನಲ್ಲ ನಾನು.

ಶರಣರು : ಓಹೋ ನಿನ್ಯಾಕೆ ಸಿಟ್ಟಿಗೆ ಬರುವಿ ? ನರಿಗಾದರೂ ಶಿವ ಶಬ್ದ ಉಂಟು. ನೀನು ನರಿಯೆ ಸರಿಯು.

ಬಸವಣ್ಣ : ಛೇ ಛೇ ಸಿದ್ಧರಾಮನು ಮೋರೆ ಕೆಳಗೆ ಮಾಡಿದನು. ಮಹನೀಯರೆ ಇನ್ನು ಮೇಲೆ ಹಿಯಾಳಿಸಬೇಡಿರಿ.

ಪ್ರಭುದೇವ : (ನೀತಿಯಿಂದ) ಛೇ ಛೇ ಚೆನ್ನಬಸವಾ ಶಿವನೆ ಸಿದ್ಧರಾಮನಲ್ಲ ಎಂದೊಡೆ ನರಕದಲ್ಲಿ ಬಿದ್ದು ಗೋಳ್ಯಾಡುವಾ ಆ ಬಿಲ್ಲೇಶ ಬೊಮ್ಮಯ್ಯನಿಗೆ ತೆಗೆದು ಉದ್ಧರಿಸುವದಿಲ್ಲವೆ ? ಆತನಿಂದ ಅನೇಕ ಪ್ರಾಣಗಳಿಗೆ ನರಕ ಹಬ್ಬುತ್ತಿರಲಾಗಿ ಅವರಿಗೆ ಉದ್ಧರಿಸಿ, ಒಂದರ ಹಿಂದೆ ಮತ್ತೊಂದು ಬಂದು ಈತನ ಪಾದಸೇವೆ ಮಾಡುವದಕ್ಕೋಸ್ಕರ ಹಬುಗಳಾಗಿ ಹುಟ್ಟಲಿಲ್ಲವೆ ? ಅವರಿಗೆ ಈತನು ಸಂರಕ್ಷಿಸುವದಿಲ್ಲವೆ ? ನೀವೇ ಹೇಳಿರಿ.

ಚೆನ್ನಬಸವ : ದೇವಾ ಕೋಪದಿಂದ ಕೆಡುವಿರಿ ಒಳ್ಳೇದು. ಆನಂದ ಗಣಾಧೀಶನು ಯಮನಗರವನ್ನು ಸುಟ್ಟು ನರಕದೊಳಗಿನ ಪ್ರಾಣಿಗಳಿಗೆ ಉದ್ಧರಿಸಲಿಲ್ಲವೆ ?

ಸಿದ್ಧರಾಮ : (ವ್ಯಸನದಿಂದ) ಅಂಯ್ಯಾ ಪ್ರಭುವೆ ನನ್ನನ್ನು ಎಷ್ಟು ಹಿಯ್ಯಾಳಿಸುವರಲ್ಲಾ. ಈ ಶಿವಶರಣರ ಮೇಲೆ ನನ್ನ ಆಟವು ನಡೆಯುವ ಹಾಗೆ ತೋರುವದಿಲ್ಲವಲ್ಲಾ.

ಏನು ಮಾಡಬೇಕು ? ಪ್ರಭುವೆ ನೀನೆ ಗತಿ.

ಶರಣರು : ಇಲ್ಲಿಲ್ಲ ಸಿದ್ಧರಾಮ ನೀನು ಚಿಕ್ಕ ಸಾನಂದನೆ ನಿಜವು. ಯಾಕೆ

ಚೆನ್ನಬಸವಾ ಹೌದೊ ಅಲ್ಲೊ ?

ವೀರಘಂಟೆ ಮಡಿವಾಳಯ್ಯಾ : ಮಹನೀಯರೆ ಹೌದು ಹೌದು ನಿಜವು.

ಪ್ರಭುದೇವರು : ಒಳ್ಳೆಯದು ಚೆನ್ನಬಸವಾ, ಬ್ರಹ್ಮನಲ್ಲಿಯ ಶಕ್ತಿ, ಹನುಮಂತನಲ್ಲಿಯ ಭಕ್ತಿ, ರಾಮನಲ್ಲಿರತಕ್ಕ ಏಕ ಪತ್ನಿವ್ರತ, ಸಾನಂದ ಗಣೇಶ್ವರನಲ್ಲಿರತಕ್ಕ ಪರಮ ವೈರಾಗ್ಯವು ಶಿವನ ಕೃಪೆಯಿಂದಲ್ಲದೆ ಮತ್ತ್ಯಾರದು ? ನೀವೇ ಹೇಳಿರಿ.

ಚೆನ್ನಬಸವ : (ಸಿಟ್ಟಿನಿಂದ ಎದ್ದು) ಪ್ರಭುವೆ ಬ್ರಹ್ಮನು ಶಿವನು. ಆದರೆ ಆ ಶಿವನು ಬ್ರಹ್ಮರಂತಲ್ಲವೆಂದು ಭೇದಿಸಿ ಅದರಲ್ಲಿ ಒಂದು ಕಡಿಮೆ ಮಾಡಿ ಬಿಟ್ಟನು. ಬ್ರಹ್ಮನ ಆ ಅಂಥಾ ಶೂರನಾದ ರೈತನ ಮಗನ ಆಯುಷ್ಯ ಬರೆಯಲಿಕ್ಕೆ ಯಾಕೆ ಬರಲಿಲ್ಲಾ ? ಹನುಮಂತನಲ್ಲಿ ಭಕ್ತಿ ಘನವಾದರೆ ವೀರಭದ್ರನ ಕಡಿಂದ ಲಿಂಗಧಾರಣ ಯಾತಕ್ಕೆ ಮಾಡಿಸಿಕೊಂಡನು. ರಾಮಚಂದ್ರನಲ್ಲಿ ಏಕಪತ್ನಿವ್ರತವಿದ್ದರೆ ತನ್ನ ಪತ್ನಿಯಾದ ಸೀತೆಗೋಸ್ಕರ ಅರಣ್ಯದಲ್ಲಿ ರೋಧನ ಮಾಡುತ್ತ ಯಾತಕ್ಕೆ ತಿರಿಗ್ಯಾಡಿದನು ? ಚೆನ್ನಾಗಿ ಹೇಳಿರಿ.

ಪ್ರಭುದೇವ : ಓಹೊ ಹಾಗಾದರೆ ನಿಮ್ಮ ನುಡಿಯ ಮೇಲೆ ಈ ಸಿದ್ಧರಾಮನು ಲಿಂಗಧಾರಣ ಮಾಡಿಕೊಳ್ಳಬೇಕಾಯಿತು.

ಎಲ್ಲರೂ : ಓಹೊ ಹೌದು ಹೌದು (ಎಂದು ಟಾಳಿ ಹೊಡಿವರು).

ಸಿದ್ಧರಾಮ : ಓಹೊ ದೇವಾ ಸರ್ವ ಜಗತ್ತು ಲಿಂಗಮಯವಾಗಿ ತೋರುವಾ ಜ್ಞಾನಿಗೆ ಕಾಯವೆ ಕೈಲಾಸವಾಗಿ, ಮನವೆ ಮಹಾಲಿಂಗವಾಗಿ, ಭಾವನೆ ಅವಿರಳ ಜ್ಞಾನದೊಳಗೆ ಬೆಳಗಿನೊಳಗೆ ಸುಳಿಯುವ ಮಹಾಜ್ಞಾನಿಗೆ ಇಷ್ಟಲಿಂಗವು ಕಾರಣವಿಲ್ಲ, ಇಷ್ಟಲಿಂಗವು ನೀತಿಯಾಗಿ ಕಲ್ಪಿತ ಎನಿಸುವದಿಲ್ಲವೆ ?

ಚೆನ್ನಬಸವ : (ಸಿಟ್ಟಿನಿಂದ)

ಪದ

ಏನಿದು ನಿನ್ನಯಾ । ಮೂರ್ಖತನ ।
ಜರಾ ನಾಚಿಕಿಲ್ಲವೊ ನಿನಗೆ।
ಪ್ರೇತ ತಿನ್ನುವಾ । ಭೂತದ ಹಾಗೆ ।
ಮಾತನಾಡುವಿರೇನೊ ? । ಭೂತನಲ್ಲಾ ಇವ ।

ಪ್ರೇತವಿಜಾತನು । ಇಷ್ಟು ತಿಳಿಯದೇನೊ ।
ಖುಲ್ಲ ಚ್ಯಾರನೆ । ಖಟುದಾರನೆ ।
ಈಕ್ಷಿಸು ನೀ । ತಾಡಿಸು ನೀ ಅರಿಯವಾ'ವರೆ ।
ವಾದವ ಮೋಜ ಮಾಡಿದನು ।

ಎಲೋ ಸಿದ್ಧರಾಮ ಇಷ್ಟಲಿಂಗವು ಕಲ್ಪಿತವಾದ ಬಳಿಕ ನಿನ್ನ ಶರೀರವು ಕಲ್ಪಿತವಲ್ಲವೆ ? ನರ ಶರೀರವು ಅಸ್ತಿ, ಮಾಂಸ ಮಜ್ಜ ಶುಕ್ಲ ಶ್ರೋಣಿತ ಷಡ್ಧಾಥೆಗಳು, ಕಲ್ಪಿತ ತತ್ತ್ವದಿಂದ ಉದ್ಭವಿಸಲಿಲ್ಲವೆ ? ನೀನು ನಿರಾಕಾರನೆ, ನಿರಾಕಾರನೆಂದರೆ ಪೃಥ್ವಿ ಅಪ್ಪು ತೇಜ ವಾಯು ಆಕಾಶ ತತ್ತ್ವ ಬಿಟ್ಟು ಎಲ್ಲಿ ನಿಲ್ಲುವಿ ನೀನು ? ಎಲ್ಲಿ ಮಾತಾಡುವಿ ಹೇಳು. ನಿನಗೆ ಕಾಮಕ್ರೋಧಗಳ ಬಾಧೆ ಯಾಕೆ ? ಮಾನಾಭಿಮಾನದ ಹಂಗ್ಯಾಕೆ ? ಸಂತೋಷದ ವಿಷದ ಬನಿಯಾಕೆ ? ನಿನಗೆ ಸರ್ವ ಜಗತ್ತ್ಯವು ಲಿಂಗರೂಪವಾದ ಮೇಲೆ ನಿನ್ನ ಇಷ್ಟಲಿಂಗ ಶಿಲೆಯಾಯಿತೆ ಹ್ಯಾಗೆ? ಆದರೂ ಕೂಡ ಕೋಟಿ ಸೂರ್ಯರ ತೇಜ ಒಳಗೊಂಡು ವೇದಾದಿಗಳಿಗೆ ನಿಲುಕಡೆ ಇರುವ ಲಿಂಗವು ಕಂದಮೂಲಾದಿಗಳು ಭಕ್ಷಣ ಮಾಡಿ, ವಾಯುಗಳ ಬಂಧಗೊಳಿಸಿ, ಪಂಚಾಗ್ನಿಯಲ್ಲಿ ನಿಂತು ನೋಡುವ ಮನು ಮುನಿಗಳು ದೇವದಾನವಾದಿಗಳಿಗೆ ದುರ್ಲಭವಾದ ಲಿಂಗವು ಗುರು ಕೃಪೆಯಿಂದೆ ದೀಕ್ಷೆ ಪಡಕೊಂಡು ಧರಿಸುವ ಲಿಂಗವು ಮುಕ್ತಿ ಕೊಡುವುದಲ್ಲದೆ ಶಿಲೆಯಾಗುವುದೆ ? ಇದು ನುಡಿಯುವುದು ಎಂಥಾ ವಾಚಾಳಕತನವು ? ಈ ಅಭಿಮಾನವು ನಿನ್ನಲ್ಲಿ. ಲಿಂಗ ಕಟ್ಟುವುದಿಲ್ಲ ಎಂದಿರುವೆನು ಹ್ಯಾಗೆ ಕಟ್ಟಲಿ ಎಂದು ನಿನಗೆ ಬಹಳೆ ಅಪಮಾನವಾಗುತ್ತಿರುವಲ್ಲಿ ಬಂದ ದಾರಿ ಹಿಡಿದು ಹೋಗತಕ್ಕದ್ದು ಇದೋ ಲಿಂಗ ಧರಿಸು ನಿನಗೆ ಮೋಕ್ಷ ದೊರೆಯುವುದು. ಇಲ್ಲದಿದ್ದರೆ ಇಲ್ಲ. ಗರತಿಯರಿಗೆ ಗಂಡನೆ ಭೂಷಣ. ಶಕ್ತಿ ಆಡಿದರೆ ಜಯಪ್ರದ ಬಂದರೆ ಭೂಷಣ. ವರ್ತಿಗೆ ಉದಕವೆ ಭೂಷಣ. ಸಿದ್ಧರಾಮ ನೀನು ಇಷ್ಟು ಮಹತ್ವಿಕನಿರಲು ನಿನಗೆ ಲಿಂಗವೆ ಭೂಷಣ. ಇದು ತಿಳಿದು ನೀನು ಲಿಂಗಧಾರಣ ಮಾಡುವುದೆ ಯೋಗ್ಯವು.

ಪ್ರಭುದೇವ : ಆಹಾ ! ದಿಟವೆ ದಿಟವು. ಈ ಶಿವಶರಣರ ಮಹತ್ವವೆ ಬೇರೆ ಇರುವುದು. ಸಿದ್ಧರಾಮ ಇವರ ಧೈರ್ಯ ಸ್ಥೈರ್ಯ ಶೌರ್ಯ ಗಾಂಭೀರ್ಯವಾದ ಭಕ್ತಿಯು, ಸತ್ಯ ನುಡಿಯು ವರ್ಣಿಸಬೇಕಾದರೆ ನನ್ನಿಂದಾಗದು. ಈವಾಗ್ಗೆ ವಾದವೆಂಬ ಆನೆಗೆ ಈ ಶಿವಶರಣರು ಸಿಂಹ ನಂತಾಗುವರು. ಸಿದ್ಧರಾಮ ಇವರು ಯಾರಿಗೂ ಅಂಜುವರಲ್ಲ. ನಿನ್ನ ಪುರದಲ್ಲಿ ನೀನು ಮಾಡುವ ಮಹತ್ವವು ಇವರಿಗೆ ಗಾರುಡಿಗರ ವಿದ್ಯೆಯಂತೆ ತೋರುವುದು. ಇವರು ನಿನಗೆ ಸೋಲಿಸಿ ಲಿಂಗಧರಿಸದೆ

ಬಿಡರು. ನೀನು ಸುಮ್ಮನೆ ಅವರ ನುಡಿಗೆ ಒಡಂಬಡು. ಲಿಂಗವು ಧರಿಸದ ವಿನಃ ನಿನಗೆ ಮೋಕ್ಷವು ದೊರೆಯುವದಿಲ್ಲಾ ಇದು ನಿಜವು. ಆದ್ದರಿಂದ ನೀನು ದೀಕ್ಷಾಬದ್ಧನಾಗಿ ತನುಶುದ್ಧ ಮಾಡಿಕೊಂಡು ಇಷ್ಟಲಿಂಗವ ಧರಿಸಿ, ಗುರು ಉಪದೇಶವ ಬೇಗನೆ ಪಡೆದುಕೊಳ್ಳಬಹುದು. ಇದಕ್ಕೆ ನೀನೇನೆನ್ನುವಿ ಹೇಳು.

ಸಿದ್ಧರಾಮ : (ಕೈಜೋಡಿಸಿ) ಪ್ರಭುವೆ ನಿಮ್ಮ ಇಷ್ಟದಂತೆ ಆಗಲಿ. ಈ ಬಡವನಾದ ಸಿದ್ಧರಾಮನಿಗೆ ಲಿಂಗಧರಿಸಿ, ದೀಕ್ಷೆ ಮಾಡಿ, ಗುರು ಉಪದೇಶವನ್ನು ಕೊಟ್ಟು ಕಾಪಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಪ್ರಭುದೇವ : ಓಹೊ ಚೆನ್ನಬಸವಾ ಇನ್ನು ಆಲಸ್ಯವ್ಯಾಕೆ ? ಈ ಶಿವ ಸಿದ್ಧರಾಮನಿಗೆ ಲಿಂಗಧಾರಣ ಹಾಗೂ ದೀಕ್ಷಾ ಮಾಡಿ. ಮೋಕ್ಷ ಸಾಧನ ನಿನ್ನಿಂದಾಗಬೇಕಾಗಿದೆ. ಬೇಗನೆ ಇವುಗಳ ಸಾಮಾನುಗಳು ಸಿದ್ಧಗೊಳಿಸಿ, ಚರಸಂತೃಪ್ತಿಗೈಸಿ, ಬೋಧ ಕೊಟ್ಟು, ಆತನ ಪುರಕ್ಕೆ ಕಳುಹಿಸಿರಿ.

ಚೆನ್ನಬಸವ : ಮಹಾದೇವನೆ ನಿನ್ನಾಜ್ಞೆಯಂತೆ ಆಗಲಿ. ಸಿದ್ಧರಾಮನೆ ದೀಕ್ಷಾ ಬೋಧಾಮಂಟಪಕ್ಕೆ ಎಲ್ಲರೂ ನಡಿಯತಕ್ಕದ್ದು.

ಸಿದ್ಧರಾಮ : ಆಜ್ಞಾ (ಎಂದು ಎಲ್ಲರೂ ಹೋಗುವರು).

ವೀರಘಂಟೆ ಮಡಿವಾಳಯ್ಯ : (ರಸ್ತಾದ ಮುಂದೆ) ಓಹೊ ಹಾರಿದ ಬಸವನು ಮೂಗಳದ ಗೋಣಿ ಹುರವನೆಂಬ ಗಾದೆಯ ಮಾತು ನಿಜವಾದದ್ದು. ಈ ಸಿದ್ಧರಾಮನು ನಮ್ಮನುಡಿಗೆ ಒಡಂಬಟ್ಟನು. ಇರಲಿ ಶಿವಶರಣರ ಮತ್ತು ಈ ಮಡಿವಾಳ ಮಹಾದೇವರೆಂಬುವರ ಈ ಕಾಯಕವು ಇತರ ಮಹತ್ವಿಕ ಸತ್ಯವಚನವನ್ನಾಡುವ ಈ ಜಂಗಮರ ನುಡಿಯು ಕಲಿಯುಗದಲ್ಲಿ ನಡಿಯಲಿಕ್ಕೆ ಬೇಕಾಗಿದೆ. ಏನು ಜಂಗಮರು ? ಏನು ಈ ಕಾಯಕವು ? ಏನು ಮಹತ್ವವು ? ಅವರೇನು ಇವರೇನು ಎನ್ನುವಾ ಮೂಳ ಮಾನವರಿಗೆ ಎಂದೆಂದಿಗೂ ಅಪಜಯ ತಪ್ಪಲಕ್ಕಿಲ್ಲಾ. ಮತ್ತು ಈ ಶಿವಶರಣರ ವೈಭವವೆ ಶ್ರೇಷ್ಠವೆಂತೆಂಬುವಾ ಮಹನೀಯರಿಗೆ ಸುಖಾಸ್ಪದವಾದ ಜಯಪ್ರದ ಪದವಿಯು ಆಗದೆ ಇರಲಿಕ್ಕಿಲ್ಲಾ ಎಂಬುವಾ ಈ ವೀರ ಘಂಟಿಮಡಿವಾಳ ಮಹಾದೇವರ ನುಡಿಯು ದಿಟವಾಗಿ ಈ ಕಲಿಕಾಲ ಸಮಾಪ್ತಿಯಾಗುವವರಿಗೂ ನಡಿಯದೆ ಇರಲಿಕ್ಕಿಲ್ಲಾ, ಇದೆ ನಿಶ್ಚಯ. ಇರಲಿ, ಈ ಸಿದ್ಧರಾಮನಿಗೆ

ಚನ್ನಬಸವನಿಂದ ಲಿಂಗಧರಿಸಿ ಪ್ರಭುದೇವರಿಂದ ದೀಕ್ಷಾ ಸುಬೋಧಾ ಕೊಡಿಸಿ, ಆತನ ಸೊನ್ನಲಾಪುರಕ್ಕೆ ಕಳಿಸಿಬಿಡುತ್ತೇನೆ. ಮತ್ತು ಆತನಿಗೆ ಚರ ಸಂತೃಪ್ತಿ ದುರಂಧರನಾಗೆಂದು ನೆಟ್ಟಗೆ ಬೋಧಿಸಿರೆಂದು ಹೇಳಲು ಜಾಗ್ರತೆ ತೆರುಳುವಾ (ಎಂದು, ಪ್ರಭುದೇವ ಮಹಾರಾಜಕೀ ಜೈ ಹೊಡಿಯುತ್ತ ಹೋಗುವುದರಲ್ಲಿ ಸೀನ್ ದೀಕ್ಷಾ ಮಂಟಪದಲ್ಲಿ ಕೂತು ಒಳಗೆ ಲಿಂಗ ಧರಿಸಿಕೊಂಡು ಬಂದು).

ಪ್ರಭುದೇವ : ಸಿದ್ಧರಾಮಾ ಈ ಶಿವಾ ಚಿನ್ಹಾಂಕಿತವಾದ ಕಳೆಯೆ ಬೇರಾಗುವುದು ನೋಡು. ಇವಾಗೆ ನೀನೆಷ್ಟು ತೇಜಸ್ವಿಯಾಗಿ ಕಾಣುವಿ.

ಸಿದ್ಧರಾಮ : ಹೌದು ಮಹಾಪ್ರಭುವೆ ಇಂದು ಧನ್ಯನೆ ಸರಿ. ಈ ಪ್ರಾಣ ಸಜೀವ ಮೂರ್ತಿಯು. ಲಿಂಗವ ಧರಿಸಿದ ಮೇಲೆ ನನಗೆ ಯಾವ ಕೊರತೆಯೊ? (ಲಿಂಗಧರಿಸಿದ ಮೇಲೆ) ಓಹೋ ದೇವಾ ನಾನು ಲಿಂಗಧಾರಣ ಮಾಡಿಕೊಂಡು ದೀಕ್ಷಾಬದ್ಧನಾಗಿ ಧನ್ಯನಾದೆನು. ದೇವಾ ಇದರಂತೆ ನಮ್ಮ ಮಾನವರಿಗೆ ಬೋಧೆಗೈಯ್ಯುತ್ತೇನೆ. ಎಲೆ ಪ್ರಾಣಿಗಳಿರಾ ಲೋಕದಲ್ಲಿ ಶಿವಭಕ್ತರ ವಂಶದಲ್ಲಿ ಷಟ್‌ಲಿಂಗವಂತರೆನಿಸಿಕೊಂಡು ಲಿಂಗಧಾರಣ ಮಾಡಿಕೊಳ್ಳದೆ ತಿರುಗ್ಯಾಡಿ ಯಾಕೆ ಯಮ ನಗರವ ಸಮೀಪ ಮಾಡಿಕೊಳ್ಳುವಿರಿ? ನೋಡಿದಿರಾ ನನ್ನವಸ್ಥೆ ಹ್ಯಾಗಾಯಿತು ? ಈ ಲಿಂಗವ ರಟ್ಟೆಯಲ್ಲಾಗಲಿ ಶಿರದಲ್ಲಿ ಹೃದಯದಲ್ಲಿ ಧರಿಸುವದು ಬಿಟ್ಟು ಹೊಂಕಳ ಕೆಳಗೆ ಧರಿಸುವುದು ಯೋಗ್ಯವಲ್ಲಾ. ಅದು ನರಕದ ಭಾಂಡ ಎನಿಸುವುದು. ಲಿಂಗಧರಿಸಿ ಪಾತಕದ ಮಾರ್ಗವನ್ನು ತೆಗೆದರೆ ಲಿಂಗಧಾರಣ ಮಾಡಿದ್ದು ಸಾರ್ಥಕವೇನು ? ಬಹಳ ಹೇಳುವುದರಲ್ಲಿ ಪ್ರಯೋಜನವೇನು ? ನೋಡಿರಿ ಇದೆ ಒಂದು ನುಡಿಯು ನಿಶ್ಚಯವಾಗಿ ನನ್ನ ವಾಕ್ಯವನ್ನು ಬಿಡದೆ ಸರ್ವರೂ ಲಿಂಗ ಬಿಡುಗಡೆ ಇಲ್ಲದೆ ತಿರುಗಾಡಬೇಕೆಂದು ನಮ್ಮ ಸರ್ವ ಶಿವಭಕ್ತ ಪ್ರಾಣಿಗಳಿಗೆ ವಿನಂತಿ ಪೂರ್ವಕವಾಗಿ ಬೇಡಿಕೊಳ್ಳುವಾ. ಈ ಬಡವನಾದ ಸಿದ್ಧರಾಮನಿಗೆ ಮನ್ನಿಸಿರೆಂದು ಪ್ರಾರ್ಥಿಸುತ್ತೇನೆ. ಸರ್ವರು ವಚನ ಕೊಟ್ಟ ಟಾಳಿ ಹೊಡಿಯಿರಿ. ಇನ್ನು ಗ್ರಾಮಕ್ಕೆ ಹೋಗಲು ವ್ಯಾಳ್ಯವಾಗುವದು ಮಹನೀಯರೆ ಹೋಗಿ ಬರುತ್ತೇನೆ.

ಚೆನ್ನಬಸವ : (ಸುನೀತಿಯಿಂದ) ಅಹಾ ಸಿದ್ಧರಾಮ ಇಲ್ಲಿ ಕೇಳು ಇನ್ನು ಮೇಲೆ ಈ ನಮ್ಮ ಭೂಕೈಲಾಸವೆನಿಸುವ ಈ ಕಲ್ಯಾಣ ನಗರದಲ್ಲಿ ಇರತಕ್ಕ

ಐಶ್ವರ್ಯವು ಭಕ್ತಿಯು ಶಿವಾಚಾರವು ಜಂಗಮ ದಾಸೋಹವು ನಾವು ಮಾಡತಕ್ಕ ದಾನ ಧರ್ಮಗಳು, ಶಿವಭಕ್ತ ಸಮಾಜವು ಇವುಗಳೆಲ್ಲ ನಿನ್ನ ಸೊನ್ನಲಾಪುರದಲ್ಲಿ ಇರಲಿ. ಈ ನಮ್ಮ ಸಕಲ ಐಶ್ವರ್ಯಕ್ಕೆ ನೀನೇ ಕರ್ತನು. ಈ ಶಿವಸಾಮ್ರಾಜ್ಯಕ್ಕೆ ನೀನೆ ಒಡೆಯನು. ನೀನು ಚಿರಕಾಲವಾಗಿರುವಿ. ಆದರೆ ಇನ್ನೊಂದು ಮಾತುಂಟು.

ಸಿದ್ಧರಾಮ : ಮಹನೀಯರೆ ಆವ ಮಾತು ?

ಚೆನ್ನಬಸವ : ಇದೊ ನೆಟ್ಟಗೆ ಕೇಳು. ಸತ್ಯಾತ್ಮಕರಾದ ಗುರುಲಿಂಗ ಜಂಗಮರಲ್ಲಿ ವಿಶ್ವಾಸವಿಟ್ಟು, ಅಷ್ಟಾವರಣದಲ್ಲಿ ಮಗ್ನನಾಗಿ ಜಂಗಮ ದಾಸೋಹದಲ್ಲಿ ತತ್ಪರಿಸಿದವರಿಗೆ ದುರ್ಮರಣ ದುರ್ಜಾಡ್ಯಗಳು ಬರಕೂಡದು. ಮತ್ತು ಅವರಿಗೆ ಭಯವಿರಲಾಗದು. ಇದನ್ನು ನಿನಗೆ ಹೇಳುತ್ತೇನೆ.

ಸಿದ್ಧರಾಮ : ಮಹನೀಯರೆ ಅಂಥವರನ್ನು ನಾನು ಕಾಪಾಡಿಕೊಳ್ಳುತ್ತೇನೆ. ನಿಮ್ಮ ಕೃಪೆಯೊಂದು ನನ್ನ ಮೇಲಿರಲಿ. ಶ್ರೀ ಮಲ್ಲಿಕಾರ್ಜುನನ ಸ್ತವನ ಮಾಡಿದವರಿಗೆ ಎಂದೆಂದಿಗೂ ಇಂಥವುಗಳ ಬಾಧೆ ಇರಲಿಕ್ಕೆಲ್ಲವೆಂಬುವಂತೆ ಮಾಡುತ್ತೇನೆ. ದೇವಾ ಇನ್ನು ಮೇಲೆ ನನಗೆ ಆಶೀರ್ವದಿಸಿ ಕಳುಹಿಸಿರಿ.

ಪ್ರಭುದೇವ : ಒಳ್ಳೆಯದು ಸಿದ್ಧರಾಮ ಜಯಪ್ರದನಾಗು ಹೋಗಿ ಬಾ (ಎಮದು ಆಶೀರ್ವಾದ ಮಾಡಬೇಕು).

ಸಿದ್ಧರಾಮ : ಶಂಭೋ ತಮ್ಮಾಜ್ಞೆ.ಭೊ. ಸರ್ವ ಶಿವಶರಣರೆ ತಮಗೆ ಈ ಬಡವನಾದ ಸಿದ್ಧರಾಮನು ವಂದನೆಗೈದು ಹೋಗಿಬರುತ್ತೇನೆ (ಎಂದು ಕೈ ಜೋಡಿಸುವನು).

ಎಲ್ಲರೂ : ಭೋ ಶಿವಸಿದ್ಧರಾಮಾ ಹೋಗಿ ಬಾ ಜಯಪ್ರದನಾಗು (ಎನ್ನುವರು. ಸಿದ್ಧರಾಮ ಹೋಗುವನು).

ಸಿದ್ಧರಾಮ : (ಬರುತ್ತಾ ರಸ್ತಾದ ಮುಂದೆ) ಓಹೊ ನಾನು ಶಂಕರ ದರ್ಶನಾರ್ಥ ಹೋಗಿ ಲಿಂಗಧರಿಸಿ, ದೀಕ್ಷಾಬದ್ಧನಾಗಿ, ಮೋಕ್ಷಸಾಧಕವಾಗುವಾ ಬೀಜ ಮಂತ್ರವನ್ನು ಪಡೆದುಕೊಂಡು ಬಂದೆನಲ್ಲವೆ ? ಇನ್ನು ನನ್ನ ಕಾರ್ಯ ಸಧನವಾಗಿ ತೆರಳುವಾ. (ಎಂದು ಹೋಗುವಲ್ಲಿ ಸೀನ್ ಸಿದ್ಧರಾಮನ ಗೃಹದಲ್ಲಿ ಅಣ್ಣನು ಕೂಡ್ರಬೇಕು).

ಬೊಮ್ಮಣ್ಣ : ಓಹೊ ನಮ್ಮ ತಮ್ಮನಾದ ಸಿದ್ಧರಾಮನು ವಿಶ್ವದರ್ಶನಕ್ಕೆ ಹೋದವನು ಇನ್ನೂ ಬರಲೇ ಇಲ್ಲವಲ್ಲಾ.

ಸಿದ್ಧರಾಮ : ಅಣ್ಣಾ ಬಂದೆ ಬಂದೆ. ನಮ್ಮ ಕೆರೆಯ ಕೆಲಸವು ಹ್ಯಾಗೆ ನಡೆದಿರುವುದು? ಕೇಳುವಾ. ಆ ಎಕ್ಕೆಮಿಂಡರನ್ನು ನಾಳೆ ಉದಯಕ್ಕೆ ಬರಹೇಳು.

ಬೊಮ್ಮಣ್ಣ : ಒಳ್ಳೆಯದು ಹೇಳಿ ಬರುತ್ತೇನೆ (ಎಂದು ಹೋಗುತ್ತಾರೆ. ಸೀನ್ ರಸ್ತಾದ ಮುಂದೆ ಎಕ್ಕೆಮಿಂಡರು ಹಾರಿಗಳ ತಗೆದುಕೊಂಡು ಬರುತ್ತಾರೆ).

೧ನೇವ : ಎಲೊ ಬಹದ್ದೂರಗಳಿರಾ ಕೆರೆಯ ಕೆಲಸಕ್ಕೆ ಬೇಗನೆ ನಡಿಯಿರಿ. ಬೊಮ್ಮಣ್ಣನವರು ಕರೆದು ಹೋಗಿದ್ದಾರೆ.

೨ನೇವ : ಎಲೊ ಹೌದು ಬೇಗ ನಡಿಯಿರಿ. ಆವತ್ತಿನ ಕಲ್ಲು ಬಹಳ ದೊಡ್ಡದಾಗಿರುವದು. ಈ ಸುತ್ತಿಗೆಯಿಂದ ಒಡೆಯೋಣ.

೩ನೇವ : ಎಲೊ ಸುತ್ತಿಗೆಗೆ ಹಣಿಯುವದಿಲ್ಲ. ಹಾರಿಯಿಂದ ಸೊನ್ನೆ ಹಾಕುವಾ ನಡೆಯಿರಿ.

೪ನೇವ : ಎಲೊ ಹಾರಿ ಪೀರಿ ಯಾಕೆ ? ಸುರಂಗ ಹಾಕುವಾ ನಡಿಯಿರೊ ಬೇಗನೆ ಹೋಗುವಾ.

೫ನೇವ : ಎಲೊ ಇಲ್ಲೇ ಮಾತಾಡುವಿರಾ ? ಈ ಹರಟೆಯು ಸಿದ್ಧರಾಮನಿಗೆ ಹೇಳಲೊ ಹ್ಯಾಗೆ ?

೬ನೇವ : ಎಲೊ ಹಾಗ್ಯಾಕೆ ? ಎಲ್ಲರೂ ಬೇಗನೆ ಹೋದರಾಯಿತು. ನಡೆ ಹೋಗುವಾ (ಎಂದು ಹೋಗುವಲ್ಲಿ ಸೀನ್ ಕೆರೆಯಂತೆ ಮಾಡಬೇಕು. ಎಕ್ಕೆಮಿಂಡರು ಸುರಂಗ ಹಾಕುತ್ತ).

ಸಿದ್ಧರಾಮ : (ಬಂದು ನೋಡುತ್ತ) ಅಹಾ ಈ ಕೆರೆಯಲ್ಲಿ ಅಷ್ಟಾಷಷ್ಟಿ ತೀರ್ಥಗಳು ನಿಲ್ಲುವ ಹಾಗಾಗಿದೆ. ಗಂಗಾ ಯಮುನಾ ತುಂಗಭದ್ರಾ ಕಾವೇರಿ ಮಲಪ್ರಭಾ ಕಪಿಲ ಗಂಡಕಿ ಕೃಷ್ಣಾ ಮೊದಲಾದ ಜಲದೇವತೆಗಳು ಬಂದು ಈಗಲೆ ಇಲ್ಲಿ ನಿಂತಿರುವರಲ್ಲಾ. ಇವರ ಉಪಕಾರ ಎಷ್ಟೆಂದು ವರ್ಣಿಸಲಿ ? ಅಕ್ಷಯ ಈ ಸೊನ್ನಲಾಪುರದಲ್ಲಿ. ಜಲದಿಂದೆ ಕೀರ್ತಿಯಿಂದೆ ಭಕ್ತಿಯಿಂದೆ ಮಲ್ಲಿಕಾರ್ಜುನನ ಸ್ತೋತ್ರದಿಂದೆ ಇಷ್ಟಲಿಂಗ ಪೂಜೆಯಿಂದೆ ಭಕ್ತರು ಎಷ್ಟು ವಿಜೃಂಭಣೆಗೈಸುತ್ತಲಿದ್ದಾರೆ

ಇದರಿಂದ ನನಗೆ ಸ್ವರ್ಗಸುಖವಾದರೂ ಇಲ್ಲೆ ತೋರುತ್ತಿದೆ. ಇರಲಿ ಸ್ವಲ್ಪ ಹೋಗುವೆನು (ಎಂದು ಹೋಗಬೇಕು).

ಪ್ರಭುದೇವ : ಎಲೆ ಎಕ್ಕೆಮಿಂಡರಾದ ವಡ್ಡರುಗಳಿರಾ ಇತ್ತ ಬನ್ನಿರಿ.

ಎಕ್ಕೆಮಿಂಡರು : ನಮಸ್ಕಾರ ತಂದೆ ಬರ್‍ರಿ ಬರ್‍ರಿ (ಎಂದು ಸಾಷ್ಟಾಂಗ ಹಾಕುವರು).

ಪ್ರಭುದೇವ : ನಿಮ್ಮ ಹಿರಿ ಒಡ್ಡ ಸಿಧ್ಧರಾಮನೆಲ್ಲಿರುವನು ?

ಓನೇವ : ಮಹನೀಯರೆ ಇಲ್ಲೇ ಆ ಕಡಿಗೆ ಇದ್ದಾರೆ. (ಕೆರೆ ಕಡೆ ನೋಡಿ) ಅಪ್ಪಾ ಸಿದ್ಧರಾಮ ಯಾರೊ ಒಬ್ಬ ಯೋಗೀಶ್ವರರು ಬಂದಿದ್ದಾರೆ ಬನ್ನಿರಿ (ಎಂದು ಕರೆಯುವನು).

ಸಿದ್ಧರಾಮ : ಬಂದೆ ಬಂದೆ (ಎಂದು ಬಂದು) ಭೋ ರುದ್ರನೆ ವಂದಿಸುತ್ತೇನೆ. ತಾವು ಆಶೀರ್ವಾದ ಮಾಡಿರಿ.

ಪ್ರಭುದೇವ : ಎಲೊ ಹಿರಿ ಒಡ್ಡಾ ನಿನಗೆ ಕೂಲಿ ಇನ್ನೂ ಸಕಾಗಿಲ್ಲವೆ ? ಇಷ್ಟು ಪರಿ ನೀನು ಕಷ್ಟ ಒದಗಿಸಲು ಸತಿ ಪುತ್ರರಿದ್ದಾರೆಯೆ ? ಅವರೇನು ಸಂತೋಷ ಹೊಂದುವರೆ ? ಹೀಗ್ಯಾಕೆ ವಿಶೇಷ ಭ್ರಾಂತಿಷ್ಠನಾಗಿರುವಿ?

ಸಿದ್ಧರಾಮ : ಭೋ ಪ್ರಭುರಾಯ ಜಗತ್ಯದಲ್ಲಿ ಮಹಾನುಭಾವಿಗಳು ಪರೋಪಕಾರಣಾರ್ಥವಾಗಿ ತಮ್ಮ ಶರೀರ ಕ್ಷೀಣಗೊಳಿಸುವದಿಲ್ಲವೆ? (ಪರೋಪಕಾರ ಮಿದಂ ಪುಣ್ಯಂ ಪರೋಪಕಾರಾರ್ಥಾಯಮಿದಂ ಶರೀರಂ) ಎಂಬ ವಾಕ್ಯವು ನಿಜವೊ ಸುಳ್ಳೊ ಹೇಳಿರಿ.

ಪ್ರಭುದೇವ : (ಅನುಭವ) ಸಿದ್ಧರಾಮ ಲೋಹ ಸಂಗದಲ್ಲಿ ಅಗ್ನಿಯು ಬಡಿಸಿಕೊಳ್ಳುವುದು. ದೇಹ ಸಂಗದಲ್ಲಿ ಆತ್ಮನು ಬಡಿಸಿಕೊಳ್ಳುತ್ತಾನೆ. ಇಂಥಾ ಅಜ್ಞಾನದಿಂದ ಆತ್ಮನು ದುಃಖ ಪಡಿಯುವನು. ಅದರಂತೆ ನೀನು ನೆರೆಮನೆಯಲ್ಲಿ ಸತ್ತರೆ ಅತ್ತು ಕಣ್ಣು ಬಾಯಿಸಿಕೊಳ್ಳುವಿ. ಇದು ಎಂಥಾ ಹುಚ್ಚುತನವೊ ? ನೀನು ಜಡ ಮನುಜರ ಸಂಗದಲ್ಲಿ ಇನ್ನು ಎಷ್ಟು ದಿವಸ ಇರಬೇಕೆಂದಿರುವಿ ಹೇಳು.

ಸಿದ್ಧರಾಮ : ದೇವಾ ಉತ್ಕಷ್ಟವಾದ ಗಾಳಿಯು ಹುಡಿ ಹಿಡಿಯಬಹುದೆ ? ನೇತ್ರಗಳು ಅಂಜನವನೊಳಕೊಳ್ಳುವುದೆ ? ತದ್ವತ್ ನಾನು ನಿಸ್ಸಂಗನು. ನಿರ್ಲಿಪ್ತನು. ನನಗೆ ತಕ್ಕ ಲಿಪ್ತ ಹೊಂದಿಸುವಿ ? ನನಗೆ ಯಾತರ ಆಶೆಯಿಲ್ಲಾ. ಪರಂತು ಪರೋಪಕಾರದ ಆಶೆಯು ಇರುವುದು.

ಪ್ರಭುದೇವ : ಸಿದ್ಧರಾಮಾ ಲೋಕವೆಲ್ಲಾ ಬದುಕಲೆಂದು ನಾಗಾರ್ಜುನಾ ರತ್ನ ಪರುಷ ಕೊರಾಂಟಕ ಮೊದಲಾದವರು ಮಾಡಿದ ಪರೋಪಕಾರಕ್ಕೆ ಅವರ ಪರಿಣಾಮ ಏನಾಗಿರುವುದು ಬಲ್ಲೆಯಾ ?

ಸಿದ್ಧರಾಮ : ಸ್ವಾಮಿ ಅದನ್ನು ಬಲ್ಲೆನು. ಅವರು ಇಷ್ಟಲಿಂಗವನ್ನು ನಂಬದ ಕಾರಣ ದುಃಖಪಟ್ಟಿರುತ್ತಾರೆ. ಮತ್ತು ಇಷ್ಟಲಿಂಗ ಪೂಜಿಸಲಾಗದೆ ದೇಹವೆ ಲಿಂಗ ರೂಪಾಗಿ ಸಮಸ್ತ ಚರಾಚರವೆ ಲಿಂಗರೂಪವಿದ್ದ ಬಳಿಕ ಆಯಾ ಸುಖ ದುಃಖ ಭಯ ಬಾಧೆ ಯಾರಿಗಾಗುವವು? ನೀವೇ ಹೇಳಿರಿ.

ಪ್ರಭುದೇವ: ಅದೀಗ ಸರಿಯು. ಸಿದ್ಧರಾಮ ಕಲಿಯುಗವು ಬಲಗಾಲಿನುಂಗುಷ್ಟ ಊರಿರಲು ಅದಕ್ಕಂಜಿ ಯೋಗಿಗಳಾದರೂ ಸಹ ಕದಳಿಯ ಬನವನ್ನು ಸೇರಿರುವರು. ಭೋಗಿಗಳು ಕುಲ ಸರ್ವಲೋಕಕ್ಕೆ ದೇವತರು. ಸ್ವರ್ಗ ವೈಕುಂಠಾದಿಗಳಲ್ಲಿ ಸೇರಿ ಮೇರು ಮಂದಿರ ಎಲ್ಲಿಹುದೊ ಎಂದು ಹುಡುಕುತ್ತಲಿರುವರು. ಅಂದ ಮೇಲೆ ಆ ಕಲಿರಾಜನಿಗೆ ನಿನ್ನ ಪರ್ವಾ ಇರುವುದೆ ? ವಿಚಾರಿಸಿ ನೋಡು. ರಾಕ್ಷಸರು ಸಹವಾಗಿ ಸಮುದ್ರ ಕಟ್ಟಿ ಒಡಿದಿರುತ್ತಾರೆ. ಆದ್ದರಿಂದ ನೀನು ಯೋಗವನ್ನು ಅಂತರಂಗದಲ್ಲಿ ಆಚರಿಸು. ಬಹಿರಂಗದಲ್ಲಿ ನಿನ್ನ ಮಹತ್ವವು ಚಿರಕಾಲವು ವಹಿಸಿ ಸೌಖ್ಯದಿಂದ ಇರು. ಈ ಕಲಿಯುಗದಲ್ಲಿ ದೇವತಾದಿಗಳು ಸಹ ಈ ಮಾನವರಲ್ಲಿ ವಿಶ್ವಾಸವಿರುವುದಿಲ್ಲ (ಅತಿ ಪರಿಚಯ ಮಾನಹಾನಿ) ಎಂಬುವ ಗಾದೆ ಮಾತು ನಿಜವೆ ಸರಿ. ಈ ನನ್ನ ಸವಿನುಡಿ ಕೇಳಿ ಗಪ್ಪಾಗಬೇಡಾ ಗುಪ್ತಯೋಗವನ್ನು ಆಚರಿಸು ನಡೆ. ಆಲಸ್ಯಬೇಡಾ ಇಕೊ ನನ್ನ ಸ್ವರೂಪವನ್ನು ನೋಡು (ಎಂದು ನಿಜರೂಪ ತೋರಿಸಿ) ನಾನು ಹೋಗಿ ಬರುವೆನು. ನೀನು ಚಿರಕಾಲದವರಿಗೂ ಸುಖದಿಂದಿರು. ನಂಬಿದವರಿಗೆ ಬೇಡಿದ ವರಗಳನ್ನು ಕೊಡು ಹೋಗಿ ಬರುತ್ತೇನೆ (ಎಂದು ಮಾಯವಾಗುವನು).

ಸಿದ್ಧರಾಮ : ಶಂಭೋ ತಮ್ಮಾಜ್ಞಾ (ಎಂದು ನಮಿಸಿ ತಿರುಗಿ). ಎಲ್ಲಾ ಹಬುಗಳೆ ನಾನು ಯೋಗಮಂಟಪದಲ್ಲಿ ಕೂಡುವೆನು. ಈ ವರ್ತಮಾನವು ಗ್ರಾಮದಲ್ಲಿಯ ಸರ್ವ ಅಬಾಲ ವೃದ್ಧರಿಗೆ ಬರಹೇಳಿರಿ. ಸರ್ವದೇಶಕ್ಕೆ ಪ್ರಸಿದ್ಧ ಪತ್ರಿಕೆಯನ್ನು ಕೊಡಿಸಿರಿ.

ಎಕ್ಕಿ ಮಿಂಡರು : ದೇವಾ ಸಿದ್ಧರಾಮಾ ತಮ್ಮಾಜ್ಞೆ.(ಎಂದು ಹೋಗುವರು ಸಿದ್ಧರಾಮ

ನೋ ಹೋಗುವನು). (ಸಿದ್ಧರಾಮನು ಪದ ಹಾಡುತ್ತ ಹೋಗುವನು. ಆಶ್ಚರ್ಯದಿಂದ).

ನಾರದ : (ಸೀನ್ ರಸ್ತಾದ ಮುಂದೆ ಪ್ರವೇಶ). ಆಹಾ ನನ್ನ ಬೀಜವು ಹತ್ತರವಾದುದು. ಯಾಕೆಂದರೆ ಏರಿ ಜಲ ಹಾಕಿ ಬಿಟ್ಟರಾಯಿತು. ಅದು ತಾನೆ ಸಸಿ ಆಗಿ ಮೀರಿದ ಮರವಾಗಿ ಜನರಿಗೆ ತೋರುವುದು. ನೋಡು ಈ ಸಿದ್ಧರಾಮನ ಚರಿತ್ರವು ನನ್ನ ಬೀಜವೆ ಮೊದಲು. ಶಿವಸಭೆಯಲ್ಲಿ ಪ್ರಮಥರಿಗೂ ಭೃಂಗಿಯರಿಗೂ ಕಲಹ ಹಚ್ಚಿದ್ದರಿಂದವೆ ಆ ಪ್ರಮಥರು ಈ ಭೂಲೋಕದಲ್ಲಿ ದಂಪತಿಗಳಾಗಿ ಹುಟ್ಟಿ, ಈ ಶಿವ ಸಿದ್ಧರಾಮನ್ನು ಪಡೆದುದರಿಂದಲ್ಲವೆ ಇಷ್ಟು ಮಹತ್ವವು ನಿಮಗೆ ಕಂಡುಬರುವದಿಲ್ಲವೆ ? ಇರಲಿ ಬಹಳ ಕಲಹ ಹಚ್ಚುವದರಿಂದ ಪ್ರಯೋಜವೇನು ? ಸಿದ್ಧರಾಮನ ದರ್ಶನ ತಗೆದುಕೊಂಡು ಮತ್ತೆ ಸಂಚಾರಕ್ಕೆ ತೆರಳುವಾ (ಎಂದು ಹೋಗುವುದರಲ್ಲಿ ಸೀನ್ ಯೋಗಮಂಟಪದಲ್ಲಿ ಕುಳಿತು ಭಕ್ತರಿಗೆ ಬೋಧ, ಭಕ್ತಿಯ ಹೇಳುತ್ತ).

ಸಿದ್ಧರಾಮ : ಭೋ ಶಿವ ಶಿವಾ ನಿನ್ನ ಲೀಲೆಯು ಆಶ್ಚರ್ಯವಾದುದು ಶಂಬೋ ಈ ದಿನ ಎನ್ನ ನುಡಿಗೆ ಚೆನ್ನಾಗಿ ಮನ್ನಿಸು.

ಸರ್ವ ಭಕ್ತರು: ಶಂಕರ ಸಿದ್ಧರಾಮ, (ಎಂದು ಬರುತ್ತ). ಭೋ ಜಗದೀಶನಾದ ಸಿದ್ಧರಾಮನೆ ಸರ್ವರ ವಂದನೆ ಇರಲಿ.

ಸಿದ್ಧರಾಮ : ಭೋ ಭಕ್ತರುಗಳೆ ನಿಮಗೆ ಜಯವಾಗಲಿ. ನಾನು ಯೋಗದಲ್ಲಿ ಕೂಡುವೆನು. (ತತ್ತ್ವ ಬೋಧಿಸುತ್ತ). ಇದರಂತೆ ನೀವು ಎಚ್ಚರದಿಂದ ನಡಿಯಿರಿ. ನಿಮಗೆ ಬಹಳ ಹೇಳುವದೇನಿದೆ?

೧ನೇಭಕ್ತ : ದೇವಾ ತಮಗೆ ನೋಡಿದ ಕಣ್ಣುಗಳು ಇನ್ನಾರಿಗೆ ನೋಡಬೇಕು? ತಮಗೆ ಕೀರ್ತಿಸಿದ ಈ ನಾಲಿಗೆಯು ಇನ್ನಾರಿಗೆ ಕೀರ್ತಿಸಬೇಕು? ಮತ್ತು ತಮ್ಮ ಸ್ತೋತ್ರ ಸ್ತವನ ಮಾಡಿದ ಈ ಬಾಯಿಯು ಇನ್ನಾರ ಸ್ತೋತ್ರ ಮಾಡಬೇಕು? ನಿನ್ನ ಪೂಜಿಸದ ಈ ಕರಗಳು ಇನ್ನಾರಿಗೆ ಪೂಜಿಸಬೇಕು? ದೇವಾ ಈ ಅನಾಥರಿಗೆ ಆರ ಕೈಲಿ ಕೊಟ್ಟು ಹೋಗುವಿರಿ? ಇಂಥಾ ಭವ ಸಾಗರದಲ್ಲಿ ನಮಗೆ ಮುಳುಗಿಸಿ ಹೋಗುವಿರಾ (ಎಂದು ರೋದಿಸುವನು).

ಸಿದ್ಧರಾಮ: ಭೋ ಮಹನೀಯರೆ ನನಗೆ ಸಾಕ್ಷಾತ್ ಗುರುಮೂರ್ತಿಯರಾದ ಚೆನ್ನಬಸವ ಪ್ರಭುದೇವ ಮಲ್ಲಿಕಾರ್ಜುನರಾಜ್ಞೆ ಆಗಿರುವುದು. ನೀವು

ರೋದಿಸ ಬೇಡಿರಿ. ಸಂತೋಷದಿಂದೆ ಆಜ್ಞೆ ಮಾಡಿರಿ. ಮಹನೀಯರೆ ತಿಳಿಯಿತೆ? ಇನ್ಯಾಕೆ ಆಲಸ್ಯವು? ಕೇಳಿಕೊಳ್ಳುವವರಿದ್ದರೆ ಏನಾದರೂ ಕೇಳಿರಿ.

೨ನೇಯ ಭಕ್ತ: ದೇವಾ ನಾವು ಈ ಸಂಸಾರ ಸುಖದಲ್ಲಿ ವ್ಯಸನಪಟ್ಟು ದುಃಖಪಡಿಯುವುದು ನಿಮಗೆ ಯೋಗ್ಯ ಕಂಡು ಬರುವುದೇನು? ಸಂಸಾರಿಗಳು ದುಃಖ ಮಾಡಿದರೆ ನಿಮಗೆ ಕಲಂಕ ಹತ್ತುವದು. ಇದು ಯಾವ ನ್ಯಾಯವು?

ಸಿದ್ಧರಾಮ: ಮಹನೀಯರೆ ನಾನು ಭವವಾಲೆಗೋಸ್ಕರ ನಿಮಗೆ ಬೋಧಿಸುವದಿಲ್ಲವು. ಇಲ್ಲಿ ಕೇಳಿರಿ. ಭೋ ಮಹನೀಯರೆ ಇನ್ನು ಮುಂದೆ ಕಲಿಯುಗವು ಬರುವ ರೀತಿಯು ಬೇರೆ ಇರುವದು. ಆ ಕಾರಣ ನಿಮಗೆ ಸುನೀತಿ ಬೋಧಿಸಿ ನಾನು ಯೋಗದಲ್ಲಿ ಕೂಡುತ್ತೇನೆ.

೩ನೇಭಕ್ತ: ಸ್ವಾಮಿ ಆ ಕಲಿಯುಗ ದಾಟುವುದು ಹ್ಯಾಗ್ಯಾಗೆ? ಯಾವ ಯಾವ ರೀತಿ ಇರುವದು? ನಮಗೆ ಎಲ್ಲಾ ವಿಷಯವಾಗಿ ತಿಳಿಸಿರಿ.

ಸಿದ್ಧರಾಮ: ಮಹನೀಯರೆ ಕೇಳಿರಿ. ಸಚ್ಚಿದಾನಂದ ಪರಮಾತ್ಮನ ಧ್ಯಾನವನ್ನು ಬಿಟ್ಟು, ಕಿರುಕುಳ ದೈವತವನ್ನು ಭಜಿಸುವರು. ಸಾಧು ಸತ್ಪುರುಷರ ಮಾನವನ್ನು ಕಳಿವರು. ಮತಾಂಧತ್ವದಿಂದೆ ತಮ್ಮ ಧರ್ಮವನ್ನು ತ್ಯಜಿಸಿ ಪರಧರ್ಮವನ್ನು ಆಚರಿಸುವರು. ಮತ್ತು ದ್ರವ್ಯಲೋಭದಿಂದ ತಮಗೆ ಜನಿಸಿದ ಹೆಣ್ಣು ಮಕ್ಕಳನ್ನು ಮಾರಿ ಕಟುಕರಂದದಿ ತಿನ್ನುವರು. ಮೇಲೆ ತಮ್ಮ ಧರ್ಮ ಪತ್ನಿಯರಿಗೆ ಮಾನಭಂಗಿಸುವರು. ವಿಟರನ್ನು ಹುಡುಕುಫಾಗೈಯ್ಯಾಳಿಯರಿಗೆ ಮೆಚ್ಚುವರು. ಆದ್ದರಿಂದ ಇನ್ನು ಮೇಲೆ ಇಂಥಾ ದುರ್ಜನರನ್ನು ಹಿಂಸೆಗೊಳಿಸಲು ಮಹಾ ದುರ್ಗಿಯರು ಮಲ್ಲಿಕಾರ್ಜುನನ ಆಜ್ಞೆಯಿಂದೆ ಬರುವರು.

೪ನೇಭಕ್ತ: ಮಹನೀಯ ಅವರೆಂಥವರು ಹೇಳಿರಿ.

ಸಿದ್ಧರಾಮ:

ಪದ

ಸಪ್ತ ದುರ್ಗಿಗಳು। ಗುಪ್ತದಿ ಬಂದು ಇವರೆತ್ತಿ
ಹೊಡಿಯುವರೊ ದುರ್ಜನರ । ಸೋತು ಶಿವನೊಳಿೀವ।
ರಾಪ್ತರಾದರೆ। ಓತು ಶಿವನಂಬುವನವರಿಗೆ ॥ ೧ ॥

ಓಹೋ ಇಂಥಾ ಪಾಪಿಷ್ಟರ ವಧೆಗಾಗಿ ಸಪ್ತ ದುರ್ಗಿಗಳು ಬರುವರು. ಮಲ್ಲಿಕಾರ್ಜುನನ ಆಜ್ಞೆ ಇಂದೆ ಸರ್ವ ಜಗತ್ಯದಲ್ಲಿ ಒಂದೆ ಮಾಸದಲ್ಲಿ ಪೂರ್ವದಿಂದ ಹಿಡಿದು ಪಶ್ಚಿಮತನ ಕಾಲು ನಾಲಿಗೆ ಚಾಚಿ, ಮತ್ತೊಬ್ಬಳು ಉತ್ತರ ದಕ್ಷಿಣಕ್ಕೆ ಚ್ಯಾಚಿ ಕರ್ಮಿಷ್ಟ ಪಾಪಿಗಳಾದವರ ರಕ್ತ ಮಾಂಸ ರಕ್ತವನ್ನು ಹೀರಿ ನಿಶ್ಚಿತಗೊಳಿಸಿ, ತಲೆದೂಡಿ ಒಡಿವಂತೆ ನಾನಾ ವಿಕಾರ ಸಂಕಟದಿಂದ ನರಕದೊಳಗೆ ಹೊರಳಾಡಿಸಿ ಪ್ರಾಣಗಳ ತಗೆದುಕೊಂಡು ಯಮನ ಸ್ವಾಧೀನ ಮಾಡುವರು. ಆದ್ದರಿಂದ ಅಂಥಾ ಮಾನವನ ಸಂಕಷ್ಟ ಹ್ಯಾಗಾಗುವದಲ್ಲಾ! ಏನು ಮಾಡಬೇಕೆಂದು ನಾನು ದುಃಖದಿಂದೆ ಇರುವೆನು. ನೀವು ಮಾತ್ರ ಇತರರಿಗೆ ಸುನೀತಿ ಬೋಧಿಸುತ್ತ ನೀವು ಹ್ಯಾಗೆ ನಡಿಯುತ್ತ ಜಾಗ್ರತೆ ಭಾವದಿಂದ ಇರ್ರಿ.

ಜನೇಭಕ್ತ: ದೇವಾ ಅಂಥಾ ಸಮಯದಲ್ಲಿ ಹ್ಯಾಗ್ಯಾಗೆ ನಡಿದರೆ ಈ ನರಜನ್ಮಗಳು ಸುಖವಾಗಿರಬೇಕು ಹೇಳಿ ನಮ್ಮ ದುಃಖ ದೂರಮಾಡಿ ಪಾವನ ಮಾಡಿರಿ.

ಸಿದ್ಧರಾಮ: ಸರ್ವಭಕ್ತ ಮಂಡಳಿಗಳೆ ನೀರಡಿಸಿ ಬಾವಿ ನೋಡಿದರೆ ನೀರಡಿಕೆ ಹೋಗಲಾರದು. ಮೊದಲೆ ತಿಳಿದು, ಶಿವ ಕೀರ್ತನೆಗಳು, ಅಷ್ಟಾವರಣ, ಕರಣಶುದ್ಧದಿಂದೆ ನಡಿಯುವಾ ಮಹನೀಯರಿಗೆ ಅಂಥಾ ದುರ್ಗಿಗಳ ಬಾಧೆ ಆಗುವದಿಲ್ಲ. ದೃಢಭಕ್ತಿಯು ಪೂರ್ಣ ಇದ್ದರೆ ಈಶ್ವರನಾದ ಮಲ್ಲಿಕಾರ್ಜುನನ ಸಾಕ್ಷಿಯಾಗಿ ಹೇಳುತ್ತೇನೆ. ಇದು ಯಾರು ಸುಳ್ಳೆಂಬುವರೊ ಅವರಿಗೆ ಕಾಳಿ ಕ್ಷೇತ್ರದಲ್ಲಿ ವಿಶ್ವೇಶ್ವರನ ಶಿವರಾತ್ರಿ ಶಿವಪೂಜೆ ದಿವಸವು ಮಾಡಿದ ಪೂಜೆಯು, ಹೇಸದೆ ಮೆಟ್ಟುಗಾಲಿನಿಂದ ಒದ್ದ ಅಧಮನಿಗೆ ಯಾವ ಯಾವ ಕುಂಬೀ ಪಾಕನಾಯಕ ನರಕವಾಗುವುದೊ ಅಂಥಾ ನರಕಕ್ಕೆ ನಾನೆ ಪಾತ್ರನಾಗುತ್ತೇನೆ. ಇದು ನಿಶ್ಚಯ. ನಾನು ಹೋಗಿ ಬರುತ್ತೇನೆ. ಅಭಯ ಕೊಡಿರಿ.

ದೇವಗಣಂಗಳು: ದೇವಾ ಸಿದ್ಧರಾಮು ನಮ್ಮದೇನು ಗತಿ? ಸಿದ್ಧರಾಮು ಘಾತಮಾಡಿದಿರಿ. ಹೋಗಲಾಗದು, ಜಗದೀಶಾ ಜಗದೊಡೆಯಾ ಈ ಜಗದ ಮೇಲೆ ಇರ್ರಿ, ಎಂದಿಗೂ ಬಿಡಲಾರೆವು. ನಮಗೆ ಕರೆದುಕೊಂದಡು ಹೋಗಿರಿ. ನಡುಹೊಳಿಯ ನೀರಿನಲ್ಲಿ ಕೈಬಿಡುವಿರಾ? ಜಗನ್ನಾಥಾ ಈ ಬಡವ ಜಂಗಮರು ಹ್ಯಾಗೆ

ಬದುಕುವರು? ನಮಗೆ ಬದಕುವ ಯತ್ನ ಮಾಡುವ ಆಶೀರ್ವಾದವು ತಮ್ಮದಲ್ಲವೆ? ನಮಗೆ ಕೃಪಾ ದೃಷ್ಟಿಯಿಂದ ನೋಡು.

ಸಿದ್ಧರಾಮ: ಓಹೋ ಮಹನೀಯರೆ. ಹೋಗುವೆನೆ ? ಇಲ್ಲಿಲ್ಲ. ಭಯಪಡಬೇಡಿರಿ. ನಿಮಗೆ ಯಾವುದಕ್ಕೆ ಏನೇನೂ ಕೊರತೆ ಇಲ್ಲದ ಹಾಗೆ ನಡಿಸುವೆನು. ನಾನು ಯೋಗ ಮಂಟಪದಲ್ಲಿ ಗುಪ್ತವಾಗಿದ್ದು ಮುಂದೆ ಸಮಯೋಚಿತ ಬರುವೆನು.

ಶಿವಗಣಗಳು: ದೇವಾ ಯಾವಾಗ್ಗೆ ಬರುವಿರಿ? ಅದನ್ನು ಈ ದಾಸರ ಮೇಲೆ ಕೃಪೆ ಇಟ್ಟು ಹೇಳಬೇಕು ಎಂದು ಬೇಡಿಕೊಳ್ಳುವಾ. ಹೇಳಿ ನಮಗೆ ಕರುಣದಿಂದೆ ಕಾಪಾಡು.

ಸಿದ್ಧರಾಮ: **ಪದ**

ತೆರಳುವಾ ಕರು ಪರಿ ಪೇಳುವೆನ್ನೈ
ನರರಿಗೆ ಅರಿವು ಎಂದಿಗೆ। ಕೆರೆಯೊಳು
ಕರಿಯು ಪುಟ್ಟುವುದೊ
ತ್ವರಿದಿಂದ್ಯಾವನು ಕಟ್ಟುವನೊ ॥ ೧ ॥
ಕಂದಾ ಜಲವು ನಿಲ್ಲದೆ । ಹಲಬುತ್ತಿಹರು।
ನೀಲಕಂಠನೊಳು ಮನವು ಇಡದೆ ।
ಕಾಲಕಳಿವರು । ಲೋಕದವರು । ಮಲವನ್ನು ಬಿಟ್ಟು ॥ ೨ ॥

ಪ್ರಮಥರೆ ಈ ಸೃಷ್ಟಿಯೊಳು ಮೂರು ದಿವಸ ನೀರಿಲ್ಲದೆ ಲೋಕವೆಲ್ಲಾ ತಲ್ಲಣಕ್ಕೊಳಗಾಗುವುದು. ಆವಾಗ್ಗೆ ನನ್ನ ಕೆರೆಯಲ್ಲಿ ಮನಿಯನ್ನು ರಚಿಸುವರು. ಕೆರೆಯು ಹಾಳು ಮಾಡುವರು. ಆವಾಗ್ಗೆ ನೀರಡಿಸಿ ಸಾಯುವರು. ಅದು ನೋಡಿ ಬೇಸರಿಸಿ ಮೋಡವಾಗಿ ಮಳೆ ಕುಟ್ಟಿ ಸರ್ವ ಜಗವೆಲ್ಲಾ ಜಲಮಯವಾಗಿ ನಮ್ಮ ಕೆರೆಯು ತುಂಬುವುದು. ಅದರಲ್ಲೆ ಬಿಳಿ ಆನೆ ಹುಟ್ಟುವುದು. ಆವಾಗ್ಗೆ ನಾನು ಬಂದು ಆ ಆನೆಗೆ ಹಿಡಿದು ಕಟ್ಟುವೆನು. ಅಂದಿಗೆ ಸಿದ್ಧಾರಾಮನು ಶಿವಸಿದ್ಧರಾಮನು ಬಂದನೆಂದು ತಿಳಿದುಕೊಳ್ಳಿರಿ. ಹೋಗಿಬರುತ್ತೇನೆ. ಸರ್ವ ಜಂಗಮ ಮೂರ್ತಿಗಳೆ ನಮಸ್ಕಾರ ನಮಸ್ಕಾರವು. ಭಕ್ತ ಮಂಡಳಿಯವರೆ ನಿಮ್ಮೆಲ್ಲರ ದಯವು ನಮ್ಮ ಮೇಲಿರಲಿ. ಜಂಗಮಾ ಮೂರ್ತಿಗಳೆ ಪ್ರಭು ಸಂಪ್ರದಾಯುಕತೆ ಇತರ ಮಹತ್ವಿಕ ಮಹನೀಯರೆ ನಮಸ್ಕಾರ. ಸರ್ವರ ಅಂತಃಕರಣವು ಎನ್ನ

ಮೇಲಿರಲಿ. ನಾನು ಯೋಗಮಂಟಪದಲ್ಲಿ ಕೂಡ್ರುತ್ತೇನೆ. ಅಪ್ಪಣೆಯನ್ನು ಕೊಡತಕ್ಕದ್ದು ಕೇಳಿರಿ. ಸರ್ವರಿಗೆ ಹೇಳುತ್ತೇನೆ. ನನ್ನಲ್ಲಿ ಭಕ್ತಿ ವಿಶ್ವಾಸ ನಂಬಿಗೆ ಇಟ್ಟವರಿಗೆ ಶಂಭುಲಿಂಗವಾಗಿ ಬಡತನ ನೀಗಿಸುವೆನು. ಮತ್ತು ಎಲ್ಲಾ ಕಷ್ಟ ನೀಗಿಸಿ ಅಷ್ಟೈಶ್ವರ್ಯ ಕೊಟ್ಟು, ಅವರ ಮನ ಸಂತೋಷ ಸಾಗರದಲ್ಲಿ ಈಸಾಡುವಂತೆ ಮಾಡುವೆನು. ಇದು ನಿಜವು. ಇದು ನಿಜವು. ಹೋಗಿ ಬರುತ್ತೇನೆ. ದಯವಿರಲಿ ಜಯ ಶಂಕರ (ಎನ್ನುವುದರಲ್ಲಿ ಮಲ್ಲಿಕಾರ್ಜುನನ ರೂಪ ಕಂಡು ಇಬ್ಬರೂ ಮಾಯವಾಗಬೇಕು. ಶಿವಯೋಗ ಮಂಟಪದ ಮುಂದೆ ಎಲ್ಲರೂ ಭಜನೆ ಮಾಡುತ್ತ ಇರಬೇಕು).

ಎಲ್ಲರೂ: ಜಯ ಶಂಕರ ಶಿವ ಸಿದ್ಧರಾಮ ಜಯಶಂಕರ.

ಪಂಚಮಾಂಕ ಸಮಾಪ್ತವಾದುದು. ಮಂಗಲ ಮಹಾಶ್ರೀ (ಲೋಕ ಚರ ಜನರ ಕಡೆ ಕೈ ಮುಗಿದು ಹೇಳಬೇಕು).

===***===***===

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ "ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಳೆಯ ನಾಟಕಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಕನ್ನಡದ ನವೋದಯ ಸಂದರ್ಭದಲ್ಲಿ ಅದೂ ಗ್ರಾಮಾಂತರ ಪ್ರದೇಶದಲ್ಲಿ ಜನಪದ ಹಾಡುಗಳ ಜೊತೆಗೆ ಬಯಲಾಟಗಳೂ ನಾಟಕಗಳೂ ಹುಟ್ಟಲು ಪ್ರಾರಂಭಿಸಿದ ಹೆಜ್ಜೆಗಳನ್ನು ಇಲ್ಲಿ ಗುರುತಿಸಲು ಸಾಧ್ಯವಾಗುತ್ತದೆ

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.೫೮೫೧೦೬